START

START

START

START

START

MICRO FILMED
BY

KARNATAKA STATE
ARCHIVES

1991

MICRO FILMED
BY

KARNATAKA STATE
ARCHIVES

1991

ARS 38 APP 90-91

"ಪೆಯಂತೆ ಮಾಸಿಕ ಪತ್ರಿಕೆ
ಫೆಬ್ರುವರಿ 1943 ರಿಂದ
403 ರಿಂದ ಮುಂದುವರಿಸಲಾಗಿದೆ.

ARS 38 APP 90-91

"ಪ್ರಯುಂಕೆ ಮಾಸಪತ್ರಿಕೆ
ಫೆಬ್ರುವರಿ 1943 ರಿಂದ
403 ರಿಂದ ಮುಂದುವರಿಸಲಾಗಿದೆ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ನಿಮ್ಮ ನೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಹಿತಾಸಕ್ತಿಗೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ಸಂಬಿಗೂ ತಕ್ಕುದಾಗಿದೆ.

★ ಕರ್ನಾಟಕದ ವಿಳ್ಗಿಗಾಗಿ ಪಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಸ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

"ಕಾಸ್ಫೊ" ಹಲವು ತರದ ಆತ್ಯುತ್ತಮ ಔಷಧಿಗಳಿಂದ ಕೂಡಿದ್ದು, ವಾಸನೆದಂತಿರುವ ಈ ಮದ್ದು ಕೆಮ್ಮಿನ ಮೂಲವನ್ನು ಕಿತ್ತೊಗೆದು, ಕಫವನ್ನು ಕಡಿಮೆ ಮಾಡಿ, ಶೀತ ರೋಗಕ್ಕೆ ಸಂಬಂಧಿಸಿದ ಎಲ್ಲಾ ಕಷ್ಟಲವನ್ನು ತೆಗೆದು, ಮುಂದಕ್ಕೆ ಅಂತಹ ರೋಗಗಳು ಬಾರದಂತೆ ಹೃದಯ ಮತ್ತು ಶ್ವಾಸಕೋಶಗಳನ್ನು ಕ್ರಮವಾಗಿ ಇಡುವುದು. ಅದು ಅತಿ ಶಕ್ತಿಯುಳ್ಳದ್ದಾಗಿ, ಬಿಲ್ಲೆಯ ರೂಪದಲ್ಲಿ ರುಚಿಕರವಾಗಿ ದೊರೆಯುತ್ತದೆ. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ.

ಗುಣವಾಗುವತನಕ ಐದೆರಡು ಗಂಟೆಗಳ ಅಂತರದಲ್ಲಿ ಒಂದೊಂದು ಬಿಲ್ಲೆಯನ್ನು ಸೇವಿಸಬೇಕು.

ಎಲ್ಲಾ ಔಷಧಾಲಯಗಳಲ್ಲಿ ದೊರಕುವುದು.

Kaspho

ಆಶ್ಚರ್ಯಕರವಾದ ಕೆಮ್ಮು-ನಾಶಕರ ಬಿಲ್ಲೆಗಳು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಲಹಮ್ಮದ್‌ನಗರ.

ಕರ್ನಾಟಕ ಶಾಖೆ:— ಸ್ಟೇಶನ್ ರೋಡ, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors, Jayanti Publications, by M. V. Mallegatti at the Jayanti Office, Dharwar.

ಚಿತ್ರಾಂಗದ



ಕರ್ನಾಟಕದ
ನಿರ್ಮಾಣಕ್ಕಾಗಿ
ಹೋರಾಡುವ
ಮಾಸಪತ್ರಿಕೆಯು

ಫೆಬ್ರುವರಿ
೧೯೪೩

ಪ್ರೊ. ಜಾಗಿರದಾರ
ಎಲ್. ಜಿ. ಬೇಂದ್ರೆ
ವೀರಭದ್ರ ಶರ್ಮ
ದೇವಾಂಗನಾ ರಾಷ್ಟ್ರ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಯಚ್ಚು ಸೇರಿ ೩—೮—೦ ..... ವ್ಹಿ. ಪಿ. ಯಿಂದ ೩-೧೧-೦ ..... ಬಿಡಿಸಂಚಿಕೆಗೆ ೫ ಆಣೆ

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಫೆಬ್ರುವರಿ ೧೯೪೩	೯ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ರಣತಾಂಡವ (ಕವನ)	ಶ್ರೀ. ಎಸ್. ಬಿ. ಪಾವೆಕಲ್, ಕುಂಬಳಿ	೪೦೩
ಸಂಪಾದಕೀಯ (ಸಮಾಜದ ಶಾಂತತೆ)	ಸಂಪಾದಕರು	೪೦೪
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೪೦೫
ರಾಮಾಯಣ ಮತ್ತು ಮಹಾಭಾರತ (ರೇಡಿಯೊಭಾಷಣ)....	ಪ್ರೊ. ಆರ್. ವಿ. ಜಾಗಿರದಾರ್, ಎಂ. ಎ. (ಲಂಡನ್)	೪೦೬
ಮಾರಿಗೆಯ ಮನೆ (ಏಕಾಂಕ ಪೃಶ್ಯ)	ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ	೪೧೧
ಬ್ರಹ್ಮಸೂತ್ರಭಾಷ್ಯಗಳು (ಪರಿಚಯಾತ್ಮಕ)....	ಪಂಡಿತ ಚಿ. ವೀರಭದ್ರಶಾಸ್ತ್ರಿ, ವೇದ-ಕಾವ್ಯ-ಸ್ಮೃತಿತೀರ್ಥ	೪೧೫
ಸಿಡಿಲು (ಕವಿತೆ)	ಶ್ರೀ. ನರಸಿಂಗ ಕೃಷ್ಣ ಕುಲಕರ್ಣಿ, ಧಾರವಾಡ	೪೨೩
ತೇಲಿಹೋಗು ! (ಕವನ)	ಶ್ರೀಮತಿ ಎಲ್. ವಿ. ಕಾವೇರಮ್ಮ ಭದ್ರಾವತಿ	೪೨೩
ಘೋಕ್ರಾ, ಏ ! (ಸಣ್ಣಕತೆ)	ಶ್ರೀ. ಕುಳಕುಂದ ಶಿವರಾಯರು, ನುಂಗಳೂರು	೪೨೪
ವಾರಗಳ ಉತ್ಪತ್ತಿ (ಜ್ಯೋತಿಷವಿಚಾರ)	ಜ್ಯೋತಿರ್ವಿದ್ವಾನ್ ಶ್ರೀ.ಎಸ್.ಎಸ್. ಹಿರೇಮಠ, ಹೆಂಗರಿಕಿ	೪೨೮
ವೀರಕರಜರಿತಂ ' (ಲಘುಪ್ರಬಂಧ)	ಶ್ರೀ. ಮೊರಬ ರಘುನಾಥ ಬಿ. ಎ. (ಆನರ್ಸ್) ಸಿರಪಟ್ಟಿ	೪೩೩
ನಾಲ್ಕುನೂರು (ಸಣ್ಣಕತೆ)	ಕುಮಾರಿ ದೇವಾಂಗನಾ ಶಾಸ್ತ್ರಿ, ಗೋಕರ್ಣ	೪೩೫
ಪುಸ್ತಕವಿಮರ್ಶ	ಬಿ. ಪಿ. ಎಸ್. ರಾವ್ ಮತ್ತು ' ಕುಂಜವಿಹಾರಿ '	೪೪೦
ಸಾದರ ಸ್ವೀಕಾರ	....	೪೪೧
ನಗೀಗೆ ನೇವಿದ್ಯ	' ನಕಲೀ ನಾರಾಯಣಾಚಾರ್ರು '	೪೪೩
ರೂಪಾಯಿ ? ? (ವಾಸ್ತವಚಿತ್ರ)	ಶ್ರೀ. ಡಿ. ಬಿ. ಟಂಕಸಾಲಿ, ಎಲ್ಎಲ್. ಬಿ. ಮುಧೋಳ	೪೪೩
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೪೪೪

ಜಯಂತಿಯ ಮುಂಬೈ ಶಾಖಾ ಕಚೇರಿ

ಮುಂಬಯಿ ಕನ್ನಡಿಗರ ಅನುಕೂಲತೆಗಾಗಿ ಜಯಂತಿಯ ಶಾಖಾ ಕಚೇರಿಯನ್ನು ತೆರೆಯಲಾಗಿದೆ.

' ನಂ. ೫೯, ಮೂರನೆಯ ಮಾಳಿಗೆ, ಗೋಗಾರಸ್ತೆ, ಮುಂಬೈ ' ಎಂಬ ವಿಳಾಸದೊಂದಿಗೆ ಅಲ್ಲಿ ವ್ಯವಹಾರ ನಡೆಯಿಸಬೇಕು.

ಮ್ಯಾ. ಜಯಂತಿ

ನಮ್ಮ ಬೆಂಗಳೂರ ಏಜಂಟರು

ಆರ್. ಎನ್. ನ್ಯೂಜ್ ಏಜನ್ಸಿ,
೬೬೫ ಚಿಕ್ಕಪೇಟೆ, ಬೆಂಗಳೂರು ನಗರ.

ನಮ್ಮ ಬಂಕಾಪುರದ ಏಜಂಟರು

ಶ್ರೀ. ಎ. ಕೆ. ಗಲಗಲಿ, ಟೇಲರ್ ಮತ್ತು ನ್ಯೂಜ್ ಏಜಂಟ್, ಬಂಕಾಪುರ



ಸಂಪುಟ ೫ | ೧ನೆಯ ಫೆಬ್ರುವರಿ ೧೯೪೩ | ಸಂಚಿಕೆ ೯

ರಣತಾಂಡವ

ಶ್ರೀ. ಎಸ್. ಬಿ. ಪಾಟೆಕಲ್, ಕುಂಬಳಿ

ಅರರೇ! ದಿಟ್ಟಿಯ ನೆಟ್ಟಾದೆಸೆಗೆ—
ಪಡುವಣ ಬಡಗಣ ನಡುವಣ ದೆಸೆಗೆ—
ಮುತ್ತಲ್ಲಿಂದಲೆ ಮೂಡಣ ದೆಸೆಗೆ—
ಸುತ್ತಲು ಎಲ್ಲೆತ್ತಲು ಒಳಹೊರಗೆ
ಕ್ರೂರ ಕಠೋರ ಭಯಂಕರ ದೃಶ್ಯಂ,
ತೋರುತಲಿರುತಿಹುದನವಶ್ಯಂ!
ನರಮೇಧಂ!— ಪುರಮೇಧಂ!—
ರಣಭೀಷಣ ಮಾರಣ ಮೇಧಂ! ೧

ಸಗ್ಗಕೆ ನೆಗೆದಾ ಕರ್ಬೊಗೆಯಿಂದಂ
ಹಿಗ್ಗಳಿದಾ ಸುರಪತಿ ನೊಂದಂ!
ಹೆಗ್ಗಳಿಕೆಯ ಅನಿಮಿಷ ವೃಂದಂ
ಕುಗ್ಗಿತು ಕಂಗಾಣದರಿಂದಂ—
ಸುಡು-ಸುಡುತ್ತೆತಹ ಸಿವಿಮುದ್ದಿಂ
ಜಡಿ-ಜಡಿದೈತರುತಿಪ ಗುದ್ದಿಂ
ನೋಯುತ್ತುಂ— ಬೇಯುತ್ತುಂ—
ನವೆಯುತಲಿಹವೈ ಸಾಯುತ್ತುಂ! ೨

ರಕ್ತಬೀಜ ಸಂಹಾರಿಣಿ ನೋಡಾ
ರಕ್ತದ ಬಯಕೆಯೊಳಿಪಳು ಗಡಾ!
ಜೋಲ್ಮಾಲಗೆಯದೊ! ನಿಡುವಲ್ಲಳದೋ!
ಜನನಿಕರವ ಪಿಡಿದಗಿವಳದೋ!
ಕರನಾಳನು ಝಳಝಳಿಪುತೋಡುತ
ಬಂದಳದೋ ಹಾ! ನಿಂದಳದೋ ಹಾ!
ವಿಶ್ವವನೆತ್ತಿ— ಬಾಯಿಗೆ ತುತ್ತಿ—
ಅರ್ಘಟಿಸುವಳಿದೊ ಬೆಂಬತ್ತಿ! ೩

ಮಣಿದೆಂದೆನು ನಾನಾಕೆಯ ಪದಕೆ:
'ತಣಿಯದಿಹುದೆ ಪಸಿವಾಸರು? ಬಯಕೆ
ಇನಿತಳಿಯದೆ? ನಿನಗಿನ್ನಿ ಬೇಕೇ
ಮನುಜರ ಬಿಸಿನೆತ್ತರು? ಸಾಕೇ!
ನಲಿನಲಿದಾಡುತ ನೀ ಬಾರಾ!
ಒಲಿದಾ ನಗೆವಿಂಚನು ಬೀರಾ!
ಬಡವರ ಕೊಲ್ಲು— ಕಡಿಯುತೆ ಸೆಲ್ಲು—
ಪಡಗರವನು ತೋರೆಲ್ಲೆಲ್ಲೂ....! ೪

ಹರುಷವೆನಿಪುದೇ ನಿನಗಿದರಿಂದ....?
ಪಿರಿತನಿ, ಕೆನ್ನೆತ್ತರ ಸುಧೆಯಿಂದ
ನರಮಾಂಸದ ನರಭೋಜನದಿಂದ
ಕರುಣಾಕ್ರಂದನ ಗಾಯನದಿಂದ
ಪ್ರಳಯದ ನಾಟ್ಯವ ತೋರುತಿಹೆ,
ಇಳೆಯನು ಮುರಿದಿದಾಡುತಿಹೆ!
ಹೇಳುವರಿಲ್ಲ— ಕೇಳುವರಿಲ್ಲ—
ಕಾಳಿ, ನಿನಗೆ ಇರುತಿಹುದೆಲ್ಲ! ೫

ಕಡ್ಡಾಲಿಗಳುರಿ ಕಾರುತ ತಿರುಗೆ—
ಚಿಣ್ಣನೆ ರೌದ್ರಾವೇಶವು ತುರುಗೆ—
ತನ್ನನು ತಾನೇ ಮರೆವಳು! ತಿರೆಗೆ
ಬನ್ನವನೊದಗಿಪ ಲೀಲೆಯು ಮೆರೆಗೆ!
ವಿಕಟಸ್ವರ ಹೈತಾಚಿಕ ನಟನೆ,
ಅಕಟಕಟಾ ಭೀಕರ ಘಟನೆ!
ಅಳಿವುದಿದೆಲ್ಲಾ— ಉಳಿಯುವುದಿಲ್ಲಾ!—
ಕಳೆದುದನಳಿವೊಡೆ ಅಳವಲ್ಲ! ೬

ಬಹುಜನಸಮಾಜದ ಅಶಾಂತಿ

ಪ್ರಾಣಿವರ್ಗದಲ್ಲೆಲ್ಲ ಮನುಷ್ಯ ಒಂದು ವೈಶಿಷ್ಟ್ಯವನ್ನು ಪಡೆದವ. ಆ ವೈಶಿಷ್ಟ್ಯವನ್ನು ಉಂಟುಮಾಡಿಕೊಟ್ಟುವುಗಳೆಂದರೆ ಅತನ ಬುದ್ಧಿ-ಭಾವನೆಗಳು. ಇವೇ ಅತನಿಗೆ ಹಿಂದು-ಇಂದು-ಮುಂದುಗಳ ವಿಚಾರವನ್ನು ಪಾದಿಹಚ್ಚುವುವು. ಪ್ರತಿಜೀವಸಹಜವಾದ ಬಹುಕಾಲ ಬದುಕಬೇಕೆಂಬ ಇಚ್ಛೆ ಮನುಷ್ಯನಿಗೂ ಇರುವುದು. ಈ ಇಚ್ಛೆಯನ್ನು ಅತನ ಬುದ್ಧಿ-ಭಾವನೆಗಳು ಚೆನ್ನಾಗಿ ಪರಿಪೋಷಿಸುವುವು. ಬಹುಕಾಲ ಬದುಕುವ ಬಗೆ ಹೇಗೆಂಬುದನ್ನೇ ಅವು ನಿರಂತರ ವಿಚಾರಿಸುತ್ತಿದ್ದು, ಕಂಡ ದರ್ಶನಗಳನ್ನು ಹಲವು ವಾಹಕಗಳ ಮೂಲಕ ಹೊರಕ್ಕೆ ಹಾಕುತ್ತಿರುವವು. ಈ ವಿಚಾರಗಳಿಗಾಗಿ ಸೃಷ್ಟಿಯ ಭೂತ ಜೀವನವನ್ನು ಮತ್ತೆ ಮತ್ತೆ ನೆಲುಕು ಹಾಕುತ್ತಿರುವುವು, ಭವಿಷ್ಯದ ಕಣಸುಗಳನ್ನು ಕಟ್ಟುತ್ತಿರುವುವು, ಆ ಕಣಸುಗಳತ್ತ ಸಾಗಲು ಮಾನವನ ಪರ್ತಮಾನ ಜೀವನವನ್ನು ಒತ್ತಾಯಗೊಳಿಸುತ್ತಿರುವುವು. ಈ ಬುದ್ಧಿ-ಭಾವನೆಗಳೇ ಮಾನವನ ವೈಯಕ್ತಿಕ ಆತ್ಮವಿಕಾಸಕ್ಕೂ ಸಾಮುದಾಯಿಕ ಆತ್ಮವಿಕಾಸಕ್ಕೂ ಕಾರಣವಾಗಿ, ಜನಾಂಗಗಳ ಪೆಸರನ್ನು ಇತಿಹಾಸದಲ್ಲಿ ಕೊಳಗಿಸುವುವು.

ಬದುಕಬೇಕೆನ್ನುವ ಮನುಷ್ಯ, ಮಿಕ್ಕಪ್ರಾಣಿಗಳಂತೆ ಹೇಗಾದರೂ ಬದುಕಬೇಕೆಂದು ಅಪೇಕ್ಷಿಸುವುದಿಲ್ಲ. ಶಾಂತಿ-ಪುಷ್ಟಿ-ತುಷ್ಟಿಗಳೀಂದ ಅಚ್ಚುಕಟ್ಟಾಗಿ ಬದುಕಬೇಕೆನ್ನುವನು. ತಾನು ಶಾಂತಿಯಿಂದ ಬದುಕಬೇಕೆಂದರೆ ನೆರೆ-ಹೊರೆಯವನ್ನೂ ಶಾಂತವಾಗಿರಿಸಬೇಕಾಗುವುದು. ತಾನು ಪುಷ್ಟಿ-ತುಷ್ಟಿಗಳನ್ನು ಪಡೆದಿರಬೇಕೆಂದರೆ ಸುತ್ತ-ಮುತ್ತಣ ಜೀವಗಳೂ ಪುಷ್ಟಿ-ತುಷ್ಟಿಗಳಲ್ಲಿರುವಂತೆ ಲಕ್ಷ್ಯಕೊಡಬೇಕಾಗುವುದು. ಸಾಗರದ ನೀರಿನ ಪ್ರತಿಯೊಂದು ಹನಿಯೂ ಶಾಂತವಾಗಿದ್ದರೆಯೆ ಸಾಗರವು ಶಾಂತವಾಗಿರುವುದು. ಒಂದೆ ಹನಿ ಕೆರಳಿ ಕ್ಷೋಭವನ್ನು ಪಡೆದು ಹೊರಬರೂ, ಸಾಗರ ಕ್ಷೋಭಗೊಂಡಂತೆನ್ನಿಸಿ ಪ್ರಕ್ಷುಬ್ಧಗೊಳಿಸಬಲ್ಲದು. ಮಾನವಸಮಾಜಕ್ಕೆ ಸಾಗರದ ಉಪಮೆಯೆ ಚೆನ್ನಾಗಿ ಹೊಂದುವುದು. ಒಂದೊಂದು ಜೀವಿಯೂ ಶಾಂತವಾಗಿದ್ದರೆ ಸಮಾಜವೆಲ್ಲವೂ ಶಾಂತಿಯ ಸಿರಿಮನೆಯಾಗಿರುವುದು. ಬಂದೆ ಒಂದು ಜೀವ ಕಾರಣಾಂತರದಿಂದ ಕೆರಳಿ ನಿಂತರೂ ಸಮಾಜದಲ್ಲಿಯು ಪ್ರಳಯದಂಥ ಪೋಡಗಳನ್ನು ಕರೆಯಬಲ್ಲದು. ಮಾನವನ ಬುದ್ಧಿ-ಭಾವನೆಗಳು ಸಮಾಜದ ಬಗೆಗೆ ವಿಧಾಯಕವಿಚಾರಗಳನ್ನು ಮಾಡುತ್ತಲಿದ್ದರೆ ಲೋಕದಲ್ಲಿ ಶಾಂತಿ-ಪುಷ್ಟಿ-ತುಷ್ಟಿಗಳೆರಬಲ್ಲವು; ಇದು ಹೋಗಿ, ಅತಿ-ಪ್ರಲೋಭನಗಳ ಮೂಲಕ ವ್ಯಕ್ತಿಯು ಪುಷ್ಟಿ-ತುಷ್ಟಿಯನ್ನೇ ಕುರಿತು ವಿಚಾರಮಾಡುವೊಡಗಿದರೆ, ಸಮಾಜದ ಪುಷ್ಟಿ-ತುಷ್ಟಿಗೆ ಭಂಗ ಬಂದು, ಅಶಾಂತತೆಗೆ ಅವಕಾಶವಪ್ಪಂಟಾಗುವುದು.

ನಮ್ಮ ಭಾರತೀಯ ಸಂಸ್ಕೃತಿಪರಂಪರೆಯ ವೈಶಿಷ್ಟ್ಯವೆಂದರೆ 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ವಿಚಾರ. ಅದುದರಿಂದಲೆ ತ್ಯಾಗಪ್ರಧಾನ ಜೀವನ ನಮ್ಮದು. ಅದರ ಪ್ರತೀಕವಾಗಿಯೇ ಯಜ್ಞಸಂಸ್ಥೆ ನಮ್ಮಲ್ಲಿ ಬಳೆದು ಬಂದಿತು. ಸಮಾಜಕಲ್ಯಾಣಕ್ಕಾಗಿ ವ್ಯಕ್ತಿ ತನ್ನ ಸ್ವಾರ್ಥವನ್ನು ಬಲಿಯಾಗಿ ಕೊಡುವುದೇ ಯಜ್ಞಗಳ ಉದ್ದೇಶ. ಈ ಉದ್ದೇಶಸಿದ್ಧಿಯನ್ನು ಭಾರತೀಯರ ಪುರಾತನ—ಮಧ್ಯಕಾಲದ—ಇತಿಹಾಸದಲ್ಲಿ ಸಾಕಷ್ಟು ಕಾಣುವೆವು. ಆದರೆ ಭಾರತೀಯ ಸಮಾಜದ ಶಾಂತಸಾಗರವನ್ನು, ಪಶ್ಚಿಮದಿಂದ ಒಂದೊಂದಾಗಿಯೆ ನುಗ್ಗಿಬಂದ ಕೆರಳಿದ ಆಶಾಜೀವಗಳು ಕದಡಿ ಕಲಕು-ಮಲಕುಗೊಳಿಸಿದುವು. ಸಮಾಜದಲ್ಲಿ ತುಂಬ ಪ್ರಕ್ಷೋಭವನ್ನುಂಟುಮಾಡಿದುವು. ಈ ಪ್ರಕ್ಷೋಭಕ್ಕೆ ಮೂಲವಾದ ಕಾರಣವನ್ನು ಕಂಡುಹಿಡಿಯಲು—ಅಂದಿನ ಪರಿಸ್ಥಿತಿಯ ಮೂಲಕ—ಅಂದು ನಮ್ಮ ಜನಕ್ಕೆ ಸಾಧ್ಯವಾಗಲಿಲ್ಲ. ಅನೇಕರು ವೈಯಕ್ತಿಕ ದೃಷ್ಟಿಯಿಂದಲೆ ವಿಚಾರಮಾಡಿವಾದಿ, ಸಮಾಜದ ಪ್ರಕ್ಷುಬ್ಧತೆಯನ್ನು ಹೆಚ್ಚಿಸುತ್ತ ಬಂದರೇ ಹೊರತು, ಕಡಿನೆಮಾಡುವುದಕ್ಕೆ ಯಾರ ವಿಚಾರವೂ ಸಮರ್ಥವಾಗಲಿಲ್ಲ.

ಈಗಲೂ ನಾವು ಪಶ್ಚಿಮದಿಂದ ಬಂದಿರುವ ಒಂದು ಪ್ರಬಲ ಪ್ರಲೋಭನ ಶಕ್ತಿಯ ಬಲೆಯಲ್ಲಿಯೆ ಸಿಕ್ಕಿಬಿದ್ದಿರುವೆವು. ಈ ಜೇಡ, ಭಾರತೀಯರನ್ನು ತನ್ನ ಜಾಲದಿಂದ ಬಿಗಿದು ಬಿಗಿದು ಅವರ ಬಲವನ್ನೆಲ್ಲ ಬಕ್ಕರಿಸುತ್ತಲಿದೆ; ಆದಕ್ಕಾಗಿಯೆ ಅವರ ಜೀವಗಳು ಅಶಾಂತಿಯಿಂದ — ಅತೃಪ್ತಿಯಿಂದ — ತಳಮಳಿಸುತ್ತಲಿವೆ. ಈ ತಳಮಳವನ್ನು ಕಳೆದುಕೊಳ್ಳಲು ಎಲ್ಲರೂ ವೈಯಕ್ತಿಕಸುಖದ ವಿಚಾರದಿಂದ ಹೆಣಗುತ್ತಲಿರುವರೇ ಹೊರತು, ಸಾಮೂಹಿಕ ಸುಖದ ವಿಚಾರದಿಂದ ಹೆಣಗುವವರು ತೀರ ಕಡಿಮೆಜನರು. ವ್ಯಕ್ತಿಸುಖದ ಹೆಣಗಾಟದ ಮೂಲಕವೇ ನಮ್ಮ ಸಮಾಜದ ಅಶಾಂತತೆ ದಿನದಿನಕ್ಕೆ ಹೆಚ್ಚುತ್ತಿದೆ. ಹೀಗೆಯೆ ಇದು ಮುಂದುವರಿದರೆ, ಭಾರತೀಯ ಸಮಾಜಕ್ಕೂ ಅದರ ದಿವ್ಯಪರಂಪರೆಗೂ ಉಳಿಗಾಲವಿಲ್ಲವೆಂದು ನಮಗೆ ಎನಿಸುವುದು.

ಪ್ರಪಂಚದ ಮಹಾಯುದ್ಧದ ಮೂಲಕಾರಣವಾಗಿಯೂ ಭಾರತೀಯರ ಪಾರತಂತ್ರ್ಯಜೀವನದ ಮೂಲಕವಾಗಿಯೂ ನಮ್ಮಲ್ಲಿಯ ಬಹುಸಂಖ್ಯಾತರನ್ನು ಇಂದು ಆರ್ಥಿಕ ಆಪತ್ತಿ ಹಿಂದಿ ಹಿಪ್ಪೆ ಮಾಡುತ್ತಲಿದೆ. ಸರಕಾರದ ಅಧಿಕಾರದಲ್ಲಿರುವ ಕೆಲವರೂ, ಶ್ರೀಮಂತ ಜಮೀನಾದಾರರು ಕೆಲವರೂ, ದೊಡ್ಡ ದೊಡ್ಡ ಉದ್ಯಮಗಾರರು ಕೆಲವರೂ ಈ ಆಪತ್ತಿಯಿಂದ ಹೊರತಾಗಿ ಇರಬಹುದು. ಆದರೆ ಇವರಲ್ಲಿಯ ಬಹುಜನರ ಆದರ್ಶ, ಸ್ವಂತದ ಸುಖವಲ್ಲದೆ ಸಮಾಜದ ಸುಖವಲ್ಲ. ಸರಕಾರಿ ಅಧಿಕಾರಿಗಳಂತೂ ಸರಕಾರ ಯಂತ್ರದ ಅವಯವಗಳು; ಸರಕಾರದ ಸೂತ್ರಧಾರರ ಸುಖದ ಆದರ್ಶಕ್ಕಾಗಿ ತಿರುಗುತ್ತಲಿರುವುದೇ ಅವರ ಕೆಲಸ. ಸಮಾಜವೆಂಬುದು ಅವರ ಕಣ್ಣಿಗೆ ಕಾಣುವುದೇ ಇಲ್ಲ. ಇನ್ನು ಜಮೀನಾದಾರರು. ಸ್ವಂತದ ಭೋಗವಿಲಾಸಕ್ಕಾಗಿ ಅವರಿಗೆ

(೪೦೬ ನೆಯ ಪುಟ ನೋಡಿರಿ)



ದಕ್ಷಿಣೆಯಲ್ಲಿ ಅಣೆ !

ಶ್ರೀ. ಅಣೆ ಮಾಫೋಜಿಯವರ ಬಗ್ಗೆ ಅನೇಕ ವಾಚಕರು ಮಂಗರಾಯನಿಗೆ ಕಾಗದಗಳನ್ನು ಬರೆಯುತ್ತಲಿದ್ದಾರೆ. ಆದರೆ ಈ ಎಲ್ಲ ವಾಚಕರು ಅಣೆ ಸಾಹೇಬರಿಗಾಗಿ ಹೊಟ್ಟೆಕಿಚ್ಚನ್ನು ತಾಳಿದ್ದಾರೆ ಎಂದೇ ಮಂಗರಾಯನ ಸಂದೇಹ. ಇಲ್ಲವಾದರೆ ಅವರು ತಿರುಪತಿಗೆ ಹೋಗುವದರ ಬಗ್ಗೆ ಎಲ್ಲರೂ ಅದೇ ಮಾತನ್ನು ಬರೆಯುವುದೇಕೆ ? ಅದು ಏನು, ಅಣೆ ರಾಜಮಾನ್ಯರು ರಾಮೇಶ್ವರಕ್ಕೆ ಹೋಗಿದ್ದರು; ಹೊನ್ನೆ ನೊನ್ನೆ ತಿರುಪತಿಗೆ ಹೋದರು, ಆದೂ ನಿಜ; ಇಂದಿಲ್ಲ ನಾಳೆ ಪರಿವ್ವಾರಕ್ಕೆ ಹೋಗುವರು, ಖಂಡಿತ; ಗಯಾಪಲ್ಲೂ ಪಾದಧೂಳಿಯನ್ನಿಡುವರು. ಆದರೆ ತಪ್ಪೇನು ? ವೈಸ್‌ರಾಯರ ಕೌನ್ಸಿಲ್ ಮೆಂಬರರಾದರೆ ತೀರ್ಥಯಾತ್ರೆಯನ್ನು ಮಾಡಬಾರದೇಕೆ ? ಕೌನ್ಸಿಲರರಿಗೂ ಕಾಶೀಯಾತ್ರೆಗೂ ವಿರೋಧವಿಲ್ಲವಲ್ಲ ! ಇದಲ್ಲದೆ ತೀರ್ಥಯಾತ್ರೆಯಿಂದ ಮೆಂಬರಿಕೆಯ ಪಾತಕವನ್ನು ಶುದ್ಧ—ಆಲ್ಲ-ಆ ಂ ದರೆ—ಒಟ್ಟು ಯಾಕೆ ಹೋಗಬಾರದು ಎಂದು ಮಂಗರಾಯನ ಮರುಸವಾಲು. ಇದೂ ಅಲ್ಲದೆ ಇವೆಲ್ಲ ಸ್ಥಳಗಳನ್ನು ಅಣೆಸಾಹೇಬರು 'ತೀರ್ಥಯಾತ್ರೆ' ಎಂದು ಸಂದರ್ಶಿಸಿಲ್ಲ ಎಂದು ಮಂಗರಾಯನ ಅಭಿಪ್ರಾಯ. ಯಾ ಕೆಂ ದರೆ ತೀರ್ಥಕ್ಷೇತ್ರಗಳಿಗೂ ಅಣೆಗೂ ಸಂಬಂಧವಿಲ್ಲ; ವಾಡಿಕೆಯಲ್ಲಿ ಸಂಬಂಧ ವಿದ್ದುದು ತೀರ್ಥಕ್ಷೇತ್ರಗಳಿಗೆ ಮತ್ತು **ಎರಡು ಅಣೆಗಳಿಗೆ..** ಹೀಗಿರುವಾಗ ಒಂದು—ಆಲ್ಲ. ಒಬ್ಬೊಂಟಿಗ ಅಣೆ ಪ್ರಭೃತಿಗಳ ಮೇಲೆ ಅಂತಪ ಸಂದೇಹವಾದರೂ ಯಾಕೆ ? ಧರ್ಮರಾಯನ ಸಹವಾಸವಲ್ಲಿದ್ದ ದ್ರೌಪದಿಯನ್ನು ನೋಡಿದ್ದಕ್ಕೆ ಅರ್ಜುನನು ತೀರ್ಥಯಾತ್ರೆಯನ್ನು ಬೆಳೆಸಲಿಲ್ಲವೆ? ಇನ್ನು ಚಿಮೂರಿನ ನೂರಾರು ದ್ರೌಪದಿಗಳನ್ನು—ವಾಚಕರ ಕ್ಷಮೆ ಇರಲಿ, ಎಂದರೆ ಸಂಪಾದಕರ ಕ್ಷಮೆ ಮಿಂಚಬಸುದಾಗಿದೆ—ಅವಕಾಗಿ ಮಂಗರಾಯನ ಕಲ್ಪನಾಶಕ್ತಿಯು ಆಜ್ಞಾತವಾಸವನ್ನು ಕೈಕೊಳ್ಳುವುದು.

ರಾಮೇಶ್ವರದಲಿ ಒಂದಾಣೆ, ತಿರುಪತಿಯಲಿ
ಇನ್ನೊಂದಾಣೆ !
ದಿಕ್ಷೀವಲ್ಲಭ ಮೇಟಿಯ ಮೇಲೆ
ಕೂದಿ ಕುಣಿಯುತಿವೆ ಎರಡಾಣೆ ॥

ಸಂಗ್ರಹಾಯೆಸ್ವಾಹಾ !

'ಎಲ್ಲರನ್ನೂ ಜೇಬಿನಲ್ಲಿ ತೊದಕಿಸುತ್ತಿರುವ ಮಂಗರಾಯನೆ ಇಂದು ಜೇಬಿನಲ್ಲಿ ಸಿಕ್ಕಬೇಕಾಗಿದೆಯಲ್ಲ' ಎಂದು ಅನೇಕ ವಾಚಕರು ಉಬ್ಬುಬ್ಬಿ ಆಣಕಿಸಿ ಕಾಗದಗಳನ್ನು ಬರೆದಿದ್ದಾರೆ. ನೋಡಿರಿ ಒಂದು ಮಾದರಿ :— 'ವಾನರ ತುಂಟಾ, ಒಸಡಿ-ಗಂಟಾ, ಸಿಕ್ಕಷ್ಟನ್ನು ತಿಂದು ಮಂಗನಂತೆ ಮಂದಮತಿ ಮಾನವ ನಾನಲ್ಲ, ಆದಕಾಗಿ ನನಗೆ ಬರಗಾಲದ ಭೀತಿ ಇಲ್ಲ ಎಂದು ಬಾಯಿಯನ್ನು ಚೆಪ್ಪರಿಸುತ್ತಿದ್ದೆಯಲ್ಲವೇ ? ಈಗ ಮಾಡುವೆ ಏನು ? ಅನ್ನ-ಸಂಗ್ರಹ ಮಾಡಿದವರು ಶಿಕ್ಷೆಗೆ ಗುರಿಯಾಗುವರು ಎಂದು ಸರಕಾರದ ಆಜ್ಞೆ ಹೊರಟಿದೆ.. ತಪ್ಪಾದಿ ತಂದು ಗಲ್ಲ ಗಲ್ಲ ಬಡೆದುಕೊಂಡು ಬಾಯಿಯಲ್ಲಿದ್ದುದನ್ನು ಉಗುಳುವೆಯಲ್ಲವೆ ? ಹ ಹ !'.. ಈ ವಾಚಕಪ್ರಾಣಿಗೆ ಆಗುತ್ತಿದ್ದ ಕಾಲ್ಪನಿಕ ಆನಂದವನ್ನು ಕೆ ಡಿ ಸ ಲು ಮಂಗರಾಯನಿಗೆ ತುಂಬಾ ವ್ಯಥೆಯಾಗುತ್ತಿದೆ. ಆದರೇನು ? ಸತ್ಯವು ಕಹಿಯಾದುದು—ಅದಕಾಗಿಯೆ ಅವನ್ನು ಬಾಯಿಯಿಂದ ಹೊರಚೆಲ್ಲುವುದು ಆಗತ್ಯ.....ಸತ್ಯದ ಮುಂದೆ ಸರಕಾರವೂ ಸುಮ್ಮನಾಗುವುದು..... ಅದಕಾಗಿಯೆ ಸರಕಾರದ ಆಜ್ಞೆ ಮಂಗರಾಯನಿಗೆ ಅನ್ವಯಿಸುವುದಿಲ್ಲ.....ಯಾಕೆನ್ನುವಿರಾ ?..... ಮಂಗರಾಯನ ದವಡೀಭೂತ ಧಾನ್ಯಕ್ಕೆ ಸಂಗ್ರಹ ವೆಂಬ ಹೆಸರಿಲ್ಲ.....ಹೊರಗೆ ಕೂಡಿಸಿಟ್ಟುವು ಸಂಗ್ರಹ, ಒಳಗೆ ಹಾಕಿಕೊಂಡುದು ಸಂಗ್ರಹವಲ್ಲ. ಈ ವಿಷಯವಾಗಿ ಯಾರಿಗೂ ಸಂಶಯ ಬರಬಾರದೆಂದು ಸರಕಾರವು ಕೆಲವು ಅಧಿಕಾರಿಗಳಿಗೆ ಈ ಮಾತನ್ನು ಅಜರಾಣಿಯಲ್ಲಿ ತರಬೇಳಿಸಿ. ಎಂದು, ಆಂಗಡಿಯಲ್ಲಿದ್ದು ಸಂಗ್ರಹಿಸಿಕೊಳ್ಳಬಹುದಾದುದನ್ನು, ಆಂಗಡಿಯಲ್ಲಿದ್ದು ಅನ್ಯರಿಗೆ ಸಂಗ್ರಹಕ್ಕಾಗಿ ಪೋಹಿಸಬಹುದಾದುದನ್ನು ಈ ಅಧಿಕಾರಿಗಳು ಅತ್ಮೀಕರಿಸಿ—ಎಂದರೆ ಅಂಗೀಕರಿಸಿ—ಅಂದರೆ ಅಂಗಿಯ ಕಿಸೆಯಲ್ಲಿ—ಆಲ್ಲ—ಅಂದರೆ - ಅಂಗಿಯಲ್ಲಿ ಕಾಣುವ್ಹದಕ್ಕೆ ಅನ್ಯರ ಸಾಕ್ಷ್ಯವೇಕೆ? ಹಣಬರೆದಕೆ ಕಾಗದ ಬರೆಹವೇಕೆ? ಆದಕಾಗಿ—ಇದೋ, ಕೇಳಿರಿ :

ಒಸಡಿಯಲಿದೆ ಪ್ರಪಂಚ
ಯಾರಾದರೂ ಅಂದರೆ ಲಂಚ
ಕಾಯ್ದುದು ದಿಫೆನ್ಸ್ ಎಂಬಾ ಪಂಜು ॥

ಬರಗಾಲದ ಮಂಗಳನ

ವಾನುನನಿಗೆ ಮೂರು ಕಾಲ್ಗಳಿದ್ದುವಂತೆ, ಕೇಳಮನಿಜಾ ಕತೆಯನ್ನು ? ಒಂದು ಎಡಗಾಲ, ಒಂದು ಬಲಗಾಲ, ಮೂರನೆಯದು ಬರಗಾಲ ! ಭೋ, ವಾಚಕಮಹಾಶಯಾ ! ಈ ಮಾತನ್ನು ಕೇಳಿ ಹಲ್ಲುಕಿರಿದು ಮಂಗೀಕರಿಸಿ ನೂಡಬೇಡ!


ಹಾರ್ಮೋನಿಯಂ ಶಿಕ್ಷಕ
ಈ ಪುಸ್ತಕದ ಸಹಾಯದಿಂದ ಫಿರಲೆ, ಸತಾರ, ಕೊಳ್ಳು, ಬಲುಬಾ, ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ಸಕಾರ್ತುವಾಗಿ ಶಿಕ್ಷಕರಲ್ಲದೆ -ಕಲಿಯಲು ಉಪಯುಕ್ತವಾದರ್ತು- - ಸುಮಾರು ೨೦೦ — ಒಂದುನ್ಹಾನಿ ಚಿತ್ರ. ಗ್ರಾಮೊಫೋನ ರಿಕಾರ್ಡಿನಲ್ಲಿಯ ಪದಗಳ ನೋಡಿ- — ಶನಗಳಲಿಯವು.
BY PT. TAK FOR SURE

ಸೋಲ್ ಎಜಂಟರು.
ವಾಗ್ವಿಲಾಸ ಬುಕ್‌ಡಿಪೊ, ಹುಬ್ಬಳ್ಳಿ

ಯೂ ಕೆಂದರೆ ಇದು ಪುರಾಣದ ಕತೆಯಲ್ಲ, 'ಪ್ರಸ್ತುತದೊಳು ಮುಂಬೆಳಗನೊಗೆವ' ಕತೆ— ಎಂದರೆ ಇಂದಿನ ಮಾತು ಅಂತೆ. ಅದು ಹೇಗೆಂತೆಂತನೆ— ಶ್ರೀಯುತ ವಾಮನನೆಂಬವನು ಒಂದುದಿನ ವಿಚಾರ ಹಾಕಿದನಂತೆ. . .ಇಂದಿನ ದಿನಗಳಲ್ಲಿ ಎರಡೂ ಕಾಲ್ಗಳಿಂದ ಒಂದೇ ಕಡೆ ನಡೆಯುವುದು ಸರಿಯಲ್ಲ ಎಂದು. .ಅದಕ್ಕಾಗಿ ಎಡಗಾಲಿನಿಂದ ನಡೆದು ಹೋದನು ಅಗ್ಗದರದ ಅಂಗಡಿಗೆ; ಬಲಗಾಲಿನಿಂದ ನಡೆದನು ಅದೇ ಕಾಲಕ್ಕೆ ಚಿಲ್ಲರೆಯ ವಿಜಯ ಯಾತ್ರೆಗೆ....ಅಗ್ಗದರದ ಅಂಗಡಿಯ ಮುಂದೆ ಕಾಯು ನಾಗ 'ಬಲಗಾಲನ್ನೂ ಇಲ್ಲಿಯೆ ತಂದಿದ್ದರೆ ಒಳ್ಳೆತಾಗುತ್ತಿತ್ತು, ತಲೆಹೊತ್ತು ಆ ಕಾಲಿನ ಮೇಲೆ ನಿಲ್ಲುಬಹುದಾಗಿತ್ತು' ಎಂದನಂತೆ.... ಚಿಲ್ಲರೆಯ ಯಾತ್ರೆಯಲ್ಲಿ 'ಎಡಗಾಲನ್ನೂ ಇಲ್ಲಿಯೆ ತಂದಿದ್ದರೆ ಒಳ್ಳೆತಾಗುತ್ತಿತ್ತು, ರೂಪಾಯಿ ಚಿಲ್ಲರೆಯ ಕಮೀಶನಿನ ಕಿಮ್ಮತ್ತೆಂದು ವ್ಯಾಪಾರಿಗೆ ಕೊಡಬಹುದಾಗಿತ್ತು' ಎಂದನಂತೆ.. ಆದರೇನು? ನಿಂತ ಕಾಲು ನಿಂತಲ್ಲಿಯೆ ನಿಂತಿತು; ಬೆವರಿನ ಮಳೆ ಬಿದ್ದು ಬೇರೂರಿತು; ಕೊನೆಗೆ ಅಗ್ಗದರಕ್ಕೆ ಅದನ್ನೇ ಬಿಟ್ಟು ಬರಬೇಕಾಯಿತು. ಬಿಟ್ಟುದೂ ಆಯಿತು, ಬಂದುದೂ ಆಯಿತು ಮನೆಗೆ. ಆಗ ಹೆಂಡತಿ ಕೇಳಿದಳು 'ಕಾಲ್ಗಳೆಲ್ಲಿ?' ಎಂದು. ತಪ್ಪಿನೆ ಬರಿಗೈಯನ್ನೆತ್ತಿ 'ಇನೋ, ಮೂರನೆಯದಾದ ಬರಗಾಲನ್ನೇ ತಂದಿದ್ದೇನೆ' ಎಂದನು.. 'ಹಾಗಾದರೆ ಅದನ್ನು ನನ್ನ ತಲೆಯ ಮೇಲಿಡಿರಿ' ಎಂದಳು ಸಾಧ್ವಿ, ಇಟ್ಟನು ವಾಮನ, ಮುಗಿಯಿತು ಕತೆ..ಈಗಲಾದರೂ 'ಪುರಾಣ' ಎಂದು ಜಲ್ಲುಕಿಯುವಿರೊ, ಇಲ್ಲವೆ ಕಾಲು ಚಿತ್ರವು. ಕೊಂಡು ನಿಮ್ಮದೆ ಕತೆಯಾಗಿರಲಿಕ್ಕಿಲ್ಲ ಎಂಬುದನ್ನು ಖಾತ್ರಿಮಾಡಿಕೊಳ್ಳುವಿರೊ? ಬೇಗನೆ ಕಾಲು ಚಿತ್ರಿಸಿಕೊಳ್ಳಿರಿ; ಇಲ್ಲವಾದರೆ ಇನ್ನೊಂದು ಆರ್ಡಿನನ್ಸ್‌ನಿಂದ ಅದಕ್ಕೂ ತಡೆಬಂದೀತು!

ಪರಲೋಕನಾಯಕ ಪಂತೋಜಿ*

ಚಿಮೂರ ಪ್ರಕರಣದಲ್ಲಿ 'ಅನ್ಯಾಯ' ದ ವಿಚಾರಣೆಯಾಗಬೇಕೆಂಬ ಹಟದಿಂದ ಭನ್ಸಾಲಿಯವರು ಉಪವಾಸ ಕೈಕೊಂಡುದಕ್ಕೆ ಅನೇಕ ನಾಚಕರು ಮಾಧವಭಟ್ಟ ಅಣಿಯವರ ಮೇಲೆ ಕನಲಿ, ಮಂಗರಾಯನಲ್ಲಿ ಶಿಷ್ಟಮಂಡಳವನ್ನು ತರಬಯಸಿದ್ದಾರೆ. ಇಂದಿನ ರೈಲುಪ್ರವಾಸದ ಅನನುಕೂಲತೆಯಲ್ಲಿ ಯಾರೂ ಮಂಗರಾಯನತ್ತ ಬರಬಾರದೆಂದು ವಿನಂತಿ ಅಥವಾ ಆಜ್ಞೆ ಎಂದು ತಿಳಿಯಿರಿ. ಇದಲ್ಲದೆ ಶಿಷ್ಟಮಂಡಳದ ಬೇಡಿಕೆಯಲ್ಲಿ ಹುರುಳೇ ಇಲ್ಲ ಎಂದು ಮಂಗರಾಯನ ಅಭಿಪ್ರಾಯ. ಭನ್ಸಾಲಿಯವರ ಉಪವಾಸಕ್ಕೆ ಅಣಿಯವರದೇನು ಸಂಬಂಧ? ಅನಿಸಾಹೇಬರಿಗೆ ಸಾವಿರಗಟ್ಟಲೆ ಸಂಬಳ ಸಿಕ್ಕುತೆಂದು ಭನ್ಸಾಲಿಯವರಿಗೆ ಉಪವಾಸದ ಪ್ರಸಂಗ ಬಂದಿಲ್ಲವಷ್ಟೆ? ಇದಲ್ಲದೆ ಅಣಿಯವರು ಸಾಕ್ಷಾತ್ ಭಾರತೀಯರ ಪ್ರತಿನಿಧಿಗಳು. ಭಾರತೀಯರಿಗೆ ಉಪವಾಸದ ರೂಢಿ ಸಾಕಷ್ಟಿದೆ ಎಂಬುದು ಅಣಿಯವರಿಗೆ ಗೊತ್ತಿರಲಿಕ್ಕಿಲ್ಲವೆ? ಇಡಿಯ ಇನ್ನ ಭಾರತೀಯನ ಕರ್ಮವಾದ ದುಃಸ್ಥಿತಿಯಲ್ಲಿದ್ದು, ಈಗ ಅಳರಸಿಕೆಯ ವೈಭವಕ್ಕೇರಿದ ಅಣಿಯವರು ಚಿಮೂರಕ್ಕೆ ಮರಳಿ ಬರಬೇಕೆಂದರೆ, ಅದೇನು ಬೊಟ್ಟ (ಕೆಟ್ಟ) ಅಣಿಯೇ ಮರಳಿ ಮನೆಗೆ ಬರಲಿಕ್ಕೆ? ಹಾಂ! ಹಾಂ! ಮಾಧವಜಿಯವರಿಗೆ ಇಷ್ಟೊಂದು ಗತ್ತು ಗೊತ್ತಾಗುವುದಿಲ್ಲವೆ? ಈಗಾಗಲೊಮ್ಮೆ ರಾಮೇಶ್ವರಕ್ಕೆ ಹೋಗಿ ರೈಲಿನ ದಂಡಕಾರಣ್ಯದಲ್ಲಿ ವನವಾಸವನ್ನು ಅನುಭೋಗಿಸಿದ ಅವರು, ಮತ್ತೆ ಅಂತಹ ಬಲೆಯಲ್ಲಿ ಸಿಕ್ಕಬಹುದೆ? ಗಾಂಧಿಯವರೇ ಎಲ್ಲ ಅನರ್ಥಕ್ಕೆ ಕಾರಣ ಎಂದು ಮಾನ್ಯ ಮಾಧವಭಟ್ಟರು ಗದ್ದರಿಸಿಲ್ಲವೆ? ಅರ್ಥಾತ್, ಚಿಮೂರದ ಅನರ್ಥಕ್ಕೂ ಗಾಂಧಿಯವರೆ ಕಾರಣ—ಜೀಲೆ, ಉಪವಾಸದ ಅನರ್ಥಕ್ಕೆ ಮುರಿಗಾಂಧಿ (ಭನ್ಸಾಲಿ) ಕಾರಣ. ಇದುವರೆಗೆ ಲೋಕನಾಯಕರೆನಿಸಿದ್ದ ಅಣಿಯವರು ಈಗ ಉಚ್ಚ ದರ್ಜಿಯಲ್ಲಿದ್ದುದರಿಂದ, 'ಪರಲೋಕನಾಯಕ'ರೆನಿಸುವುದು ಸಹಜವಲ್ಲವೆ? ಅದ್ದರಿಂದ ನಾಚಕರೆ, ಶಿಷ್ಟಮಂಡಳದ ಯಾಚಕರೆ, ಸಿಟ್ಟನ್ನು ಬಿಡಿರಿ, ಗಟ್ಟಿಯಾಗಿ ಕೂಗಿರಿ—

ನಿಕೆಲ್ಲನಾಯಕ ಮಾಧವಜೀ,
ಪರಲೋಕನಾಯಕಾ ಪಂತೋಜೀ
ಜೀಜೀಜೀ ಜೀಂ ಹಾಜೀ ॥

*ಈ ಮಲ್ಲಿನಾಥಿಯು ಕಳೆದ ಸಂಚಿಕೆಯಲ್ಲಿಯೇ ಬರಬೇಕಾಗಿತ್ತು. ಸರಕಾರದ ನಿರ್ಬಂಧದ ಮೂಲಕ ಅಚ್ಚಾಗುತ್ತಿರುವಾಗಲೆ ನಿಲ್ಲಿಸಬೇಕಾಯಿತು. ಸಂ. ಜ.

ಕಿಚ್ಚು

(ಬೆಲೆ: ೦-೮-೦ ಆಣೆ)

ಲೇಖಕರು:

ಬಿ. ಅಶ್ವತ್ಥನಾರಾಯಣರಾವ್, ಬಿ. ಎ.

ಇವರ ಸಣ್ಣಕತೆಗಳ ಸಂಗ್ರಹ

ಮಾರಾಟದ ಹಕ್ಕುಳ್ಳವರು:

ಶಾರದಾಮಂದಿರ,
ಸುಲ್ತಾನ ಬಝಾರ್, ಹೈದರಾಬಾದ (ದಕ್ಷಿಣ)

(೪೦೪ ಪುಟದಿಂದ ಮುಂದುವರಿದುದು.)

ವೇಳೆಯೂ ಸಾಲುವುದಿಲ್ಲ, ಧನವೂ ಸಾಲುವುದಿಲ್ಲ. ಸಮಾಜಕ್ಕೆ ಅವರು ಚಿಲಿಯನ್ನೇ ಕೊಡುವುದಿಲ್ಲ. ವಿುಕ್ಕವರು ಉದ್ಯಮಿಗಾರರು, ಇವರಿಗೆ ಬರೀ ದುಡ್ಡಿನ ಹುಚ್ಚು; ಯಾವಾಗಲೂ ಇವರ ಕಿವಿ ಹಣದ ನಾದವನ್ನೇ ಕೇಳುತ್ತಿರಬೇಕು. ವಿುಕ್ಕುದಾವುದನ್ನೂ ನೋಡಲಿಕ್ಕೆ ಇವರಿಗೆ ಅವಕಾಶವೇ ಇರದು. ಹೀಗಿರುವಾಗ, ಅಪತ್ತಿಗೆ ಒಳಗಾದ ಬಹುಜನ ಸಮಾಜ ಎಷ್ಟುಕಾಲ ಸುಮ್ಮನೆ ತಳಮಳಿಸುತ್ತ ಕುಳಿತೀತು? ಹಸಿವೆಯ ಕಸವಿಸಿಯಿಂದದು ಕೆರಳಿ ಕನಲಿ ಮೇಲಕ್ಕೆದ್ದು ಬಿಟ್ಟರೆ, ಅಸಾಧ್ಯನಾದ ರಾಕ್ಷಸರೂಪವನ್ನದು ತಳೆದೀತು; ಕೈಗೆ ಸಿಕ್ಕುದನ್ನೆಲ್ಲ ತುತ್ತುತ್ತ ನಡೆದೀತು! ಆಗ ಸರಕಾರದ ಅಧಿಕಾರಿಗಳಿಗೂ ಅಸ್ತಿತ್ವವುಳಿಯಲಿಕ್ಕಿಲ್ಲ; ಶ್ರೀಮಂತ ಜವಿುನ್‌ದಾರರಿಗೂ ಸ್ಥೈರ್ಯಬೊರೆಯಲಿಕ್ಕಿಲ್ಲ; ಹಣದ ಹುಚ್ಚಿನ ಉದ್ಯಮಿಗಾರರಿಗೂ ಉಳಿಗಾಲವಿರಲಿಕ್ಕಿಲ್ಲ. ಸಮಾಜದ ದೇವಮನಸ್ಸು ರಾಕ್ಷಸಭಾವವನ್ನು ತಳೆಯುವುದಕ್ಕಿಂತ ಮೊದಲೇ, ನಮ್ಮಲ್ಲಿಯ ಅಧಿಕಾರಿಗಳೂ ಜವಿುನ್‌ದಾರರೂ ವರ್ತಕರೂ ಮನುಷ್ಯರಾಗಿ ವರ್ತಿಸತೊಡಗಿದರೆ, ಭಾರತಕ್ಕೂ ಹಿತವಾದೀತು, ಅದರ ಮುಖಾಂತರ ಜಗತ್ತಿನ ಶಾಂತಿ-ಸೌಖ್ಯಗಳಿಗೂ ಅವಕಾಶವುಂಟಾದೀತು!

ಮಾನವರು ಮಾನವರಾಗಿ ವರ್ತಿಸಲಿ, ಅಂದು ನರಲೋಕವೇ ಸುರಲೋಕವಾಗಿ ನಿಲ್ಲುವುದು!

—ಸಂಪಾದಕರು

ಮಹಾಭಾರತ ಮತ್ತು ರಾಮಾಯಣ

(ಉಪನ್ಯಾಸ)*

ಪ್ರೊ. ಆರ್. ವ್ಹಿ. ಜಾಗಿರದಾರ, ಎಮ್. ಎ. (ಲಂಡನ್)

★

'ಮಹಾಭಾರತ' 'ರಾಮಾಯಣ'ಗಳ ಕತೆಗಳ ಪರಿಣಾಮವು, ಕನ್ನಡ ಜನಜೀವನದ ಅಂಗಾಂಗಗಳಲ್ಲಿಯೂ ಒಡಮೂಡಿ ನಿಂತುದನ್ನು ಯಾರೂ ಕಾಣಬಹುದಾಗಿದೆ. ಈ ಪುರಾಣಗ್ರಂಥಗಳಲ್ಲಿ ಕಂಡುಬರುವ ವ್ಯಕ್ತಿಗಳೆಲ್ಲ ನಮ್ಮ ನಾಡಿನವರೇನೋ ಎಂಬಂತೆ ನಮಗೆ ಆತ್ಮೀಯರಾಗಿ ಬಿಟ್ಟಿದ್ದಾರೆ.

ಗೆಳೆಯರೆ,

ಈ ದಿನ ನಾನು ಮಹಾಭಾರತ ಮತ್ತು ರಾಮಾಯಣ ಎಂಬ ಎರಡು ಗ್ರಂಥಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವವನಿದ್ದೇನೆ. ನಾನು ಹೇಳುವ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿ ಬರೆದುವು— ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಯಾಕೆಂದರೆ, ಅನೇಕ ಕನ್ನಡಕವಿಗಳೇ ಮಹಾಭಾರತವನ್ನೂ ರಾಮಾಯಣವನ್ನೂ ಬರೆದುದು ನಿಮ್ಮ ಲಕ್ಷ್ಯಕ್ಕೆ ಬಂದು ನೀವು 'ಇವು ಕನ್ನಡ ಗ್ರಂಥಗಳೇ' ಎಂದು ತಿಳಿಯಬಹುದಾಗಿದೆ. **ಪಂಪಭಾರತ, ಜಂಪುಭಾರತ, ರನ್ನನ ಗದಾಯುದ್ಧ, ಕುಮಾರವ್ಯಾಸನ ಭಾರತ, ಜೈಮಿನಿಭಾರತ**— ಚಿಕ್ಕಪುಟ್ಟ ಕವಿಗಳ ಲೆಕ್ಕವಿಲ್ಲದಷ್ಟು ಭಾರತಗಳು ಕನ್ನಡದಲ್ಲಿ; ರಾಮಾಯಣದ ಮಾತೂ ಹಾಗೆಯೆ. ಕನ್ನಡ ಕವಿಗಳು ಬರೆದ ರಾಮಾಯಣಗಳ ಭಾರದ ಕೆಳಗೆ 'ತಿಣಿಕಿದನು ಫಣಿರಾಯ' ಎಂದು, ಆದಿಶೇಷನ ಪೆನ್ನೆಲುಬಿನ (ಇದ್ದರೆ) ಮೇಲೆ ಕರುಣೆಯಿಂದ ತಾನು ಭಾರತವನ್ನು ಬರೆಯತೊಡಗಿದೆನು ಎಂದು ಕುಮಾರವ್ಯಾಸನು ಹೇಳಿದ್ದಾನೆ. ಪಂಪರಾಮಾಯಣ, ಕುಮಾರವಾಲ್ಮೀಕಿ ರಾಮಾಯಣ, ಸಾಳಿಯವರ ರಾಮಾಯಣ, ಪುಟ್ಟಪ್ಪನವರ ರಾಮಾಯಣ— ಅಂದಿನಿಂದ ಇಂದಿನವರೆಗೆ ಕನ್ನಡ ರಾಮಾಯಣಗಳ ಪಟ್ಟಿಯನ್ನು ಹನುಮಂತನ ಬಾಲಕ್ಕಿಂತಲೂ ಉದ್ದವಾಗಿ ಬೆಳೆಯಿಸಬಹುದಾಗಿದೆ. ಆದರೆ ಮಹಾಭಾರತ-ರಾಮಾಯಣಗಳು ಕನ್ನಡದಲ್ಲಿ ಕಂಡುಬರುವುದಕ್ಕೆ ೧೫೦೦ ವರ್ಷಗಳಾದರೂ ಮುಂಚಿತ—ಮೊದಲು ಸಂಸ್ಕೃತದಲ್ಲಿ ಬರೆಯಲ್ಪಟ್ಟಿರಬೇಕೆಂದು ಬಲ್ಲವರು ಊಹಿಸುತ್ತಾರೆ. ಪರಂಪರೆಯಿಂದ ಕೇಳಬರುವಂತೆ ವ್ಯಾಸಮಹರ್ಷಿಯು ಮಹಾಭಾರತವನ್ನು ಬರೆದನು— ವಾಲ್ಮೀಕಿಮುನಿಯು ರಾಮಾಯಣವನ್ನು ಬರೆದನು— ಎಂದು ತಿಳಿಯಲಾಗುವುದು. ಒಬ್ಬನು ಮಾನಹಿಡಿವ ಜಾತಿಯ ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟಿದವನು, ಇನ್ನೊಬ್ಬ ಬೇಡರ ಜಾತಿಯವನು. ಇವರು ತಮ್ಮ ಗ್ರಂಥಗಳನ್ನು ಬರೆದುದು ಆರ್ಯರ—ದೇವತೆಗಳ—ಭಾಷೆ ಎಂದೆನಿಸಿಕೊಳ್ಳುವ ಸಂಸ್ಕೃತದಲ್ಲಿ. ಮೊದಲ ಹೆಜ್ಜೆಗೇ ಹೀಗೆ ಸ್ವಾರಂಭವಾಯಿತು ಅದ್ಭುತದ ಅನುಭವ.

ಸಂಸ್ಕೃತ ಮಹಾಭಾರತ, ಸಂಸ್ಕೃತ ರಾಮಾಯಣ ಇವು ನಿಜವಾಗಿ ಅದ್ಭುತಗಳ ಪರಂಪರೆಯಾಗಿವೆ. ಇವುಗಳ ಉಳತೆ, ಇವುಗಳ ಕತೆ, ಇವುಗಳಲ್ಲಿಯ ಘಟನೆಗಳು, ಇಲ್ಲಿಯ ವ್ಯಕ್ತಿಗಳು, ಈ ಗ್ರಂಥಗಳ ಪ್ರಭಾವ, ಇವುಗಳ ಜಗತ್‌ಪ್ರಸಿದ್ಧಿ— ಒಂದೊಂದೂ ಒಂದು ಅದ್ಭುತವಾಗಿದೆ; ಜಗತ್ತಿನಲ್ಲಿ ಯಾವ ಕಾಲವ ಯಾವ ಸಾಹಿತ್ಯದ ಯಾವ ಕಾವ್ಯವೂ ಇದನ್ನು ಈ ದೃಷ್ಟಿಯಿಂದ ಸರಿಗಟ್ಟಲಾರದು. ಹಿಂದುಸ್ತಾನದಲ್ಲಿ ಎಲ್ಲ ಕಾಲದಲ್ಲಿ, ಎಲ್ಲ ಜನಾಂಗಗಳಲ್ಲಿ, ಎಲ್ಲ ಸಾಹಿತ್ಯಗಳಲ್ಲಿ ಇವುಗಳ ಪ್ರಭಾವ ಕಾಣದೆ ಇಲ್ಲ. 'ಯದಿಹಾಸ್ತಿ ತದನ್ಯತ್ರ, ಯನ್ನೇಹಾಸ್ತಿ ನ ತತ್ ಕ್ವಚಿತ್'—ಇದರಲ್ಲಿದ್ದುದೆ ಜಗತ್ತಿನಲ್ಲಿದೆ, ಇಲ್ಲಿ ಇಲ್ಲದುದು ಎಲ್ಲಿಯೂ ಕಂಡುಬರುವಂತಿಲ್ಲ' ಎಂಬ ಆತ್ಮಪ್ರಾಥಿಯ ವಾಕ್ಯವು ಮಹಾಭಾರತದಲ್ಲಿಯೆ ಇದೆ. ಮಹಾಭಾರತದಲ್ಲಿ ಒಂದು ಲಕ್ಷ ಶ್ಲೋಕಗಳಿವೆ; ಆದರೂ ಅದನ್ನೋದಿ ಯಾರೂ ಬೇಸರಿಯುವಂತಿಲ್ಲ. ಇಂದಿಗೂ ಪರದೇಶದ ಭಾಷೆಗಳಲ್ಲಿ ಕೂಡ ಭಾರತ-ರಾಮಾಯಣಗಳ ಭಾಷಾಂತರಗಳಾಗುತ್ತಿವೆ. ನಮ್ಮ ದೇಶದಲ್ಲಂತೂ ಅಂದಿನಿಂದ ಇಂದಿನವರೆಗೆ ಪ್ರತಿಯೊಂದು ಕಾಲದ ಪ್ರತಿಯೊಂದು ಸಾಹಿತ್ಯದಲ್ಲೂ ಇವುಗಳಲ್ಲಿಯ ಕತೆಗಳ ಹೊರತು ಬೇರೆ ಕತೆಯೆ ಇಲ್ಲ. ತಾಯಿಯು ಮಗುವಿಗೆ, ಹಿರಿಯಜ್ಜನು ಹುಡುಗರಿಗೆ, ಶಿಕ್ಷಕರು ವಿದ್ಯಾರ್ಥಿ-

---

* ತಾ. ೧೦-೧೨-೪೭ನೆಯ ದಿನ ಮುಂಬಯಿಯ ಆಲ್ ಇಂಡಿಯಾ ರೇಡಿಯೊ ಕಾರ್ಯಾಲಯದಿಂದ ವಿದ್ಯಾರ್ಥಿಗಳಿಗಾಗಿ ಬ್ರಾಡ್‌ಕಾಸ್ಟ್ ಮಾಡಿದ ಉಪನ್ಯಾಸವಿದು. ರೇಡಿಯೊ ಅಧಿಕಾರಿಗಳ ಸಮ್ಮತಿ ಪಡೆದು ಪ್ರಕಟಿಸಲಾಗಿದೆ. **ಸಂ. ಜ.**

ಗಳಿಗೆ, ಧರ್ಮೋಪದೇಶಕರು ಭಾವಿಕರಿಗೆ, ಕವಿಗಳು ವಾಚಕರಿಗೆ– ಹೇಳುವ ಮಾತು-ಕತೆಗಳೆಲ್ಲ ಇದರಲ್ಲಿವೆ! ಇದೆಂತಹ ಅದ್ಭುತವಾದ, ಆನಂದಕಾರಕವಾದ, ಆಸಂತವಾದ ಜಾಲ! ಇದರಲ್ಲಿಯೆ ಜಗತ್ತಿನ ಭಾವನೆ ಇನ್ನೂ ಸುಳಿದಾಡುತ್ತಿದೆ, ಇದಕಾಗಿಯೆ **ಆದರ್ಶಗ್ರಂಥ** ಎಂಬ ಹೆಮ್ಮೆ ನಮಗೆ.

ಮಹಾಭಾರತದ ಕತೆ ನಿಮಗೆಲ್ಲರಿಗೂ ಗೊತ್ತಿದ್ದುದೆ ಇದೆ. ಆದರೆ ಮಹಾಭಾರತದಲ್ಲಿ ಕೌರವ-ಪಾಂಡವರ ಕತೆಯಲ್ಲದೆ ಬೇರೆ ಎಷ್ಟು ಮತ್ತು ಎಂತಹ ಕತೆಗಳಿವೆ ಎಂಬುದು ನಿಮಗೆ ಗೊತ್ತಿದೆಯೆ? ನಿಮ್ಮೆಲ್ಲರಿಗೂ ಚಿಕ್ಕಂದಿನಿಂದ ಗೊತ್ತಿದ್ದು, ರುಚಿಕಟ್ಟಾಗಿ ತೋರುವ ಎಲ್ಲ ಅದ್ಭುತರಮ್ಯ ಕತೆಗಳ ಮೂಲವು ಮಹಾಭಾರತದಲ್ಲಿಯೆ. ನಳ-ದಮಯಂತಿ, ಸತ್ಯವಾನ-ಸಾವಿತ್ರಿ, ದುಷ್ಯಂತ-ಶಕುಂತಲಾ— ಇವರೆಲ್ಲರ ಕತೆಗಳು ಸರಳವಾದ, ನಾರ್ಮಿಕವಾದ, ಮಧುರವಾದ ಶೈಲಿಯಲ್ಲಿ ಕಂಡುಬರುವುವು. ಆಸ್ತಿಕನ ಕತೆ, ಅಗಸ್ತ್ಯರ ಕತೆ, ಉದ್ದಾಲಕನ ಕತೆ— ಹೊನೆಗೆ ರಾಮಾಯಣದ ಕತೆ ಕೂಡ ಮಹಾಭಾರತದಲ್ಲಿಯೆ ಇದೆ. ಸಂಸಾರದ ಚಿತ್ರ, ಸವತಿಯರ ಕಾದಾಟ, ಬಡತನ-ಬರಗಾಲಗಳ ಭೀಕರ ನೋಟ, ಮಗು-ತಾಯ್ತಂದೆಗಳ ತಿಕ್ಕಾಟ— ಹೀಗೆ ಸಾಮಾನ್ಯಮನುಷ್ಯನ ಅನುಭವಗಳ ಕತೆಗಳೂ ಇವೆ. ಭಗವದ್ಗೀತೆಯೂ ಮಹಾಭಾರತದಲ್ಲಿದೆ; ರಾಜಧರ್ಮವಿದೆ; ಪ್ರಜಾಸತ್ತೆ ಇದೆ. ಹೀಗಿರುವಾಗ 'ಇಲ್ಲಿ ಇಲ್ಲದ್ದು ಮತ್ತೆಲ್ಲೂ ಇಲ್ಲ' ಎಂಬ ಹೆಮ್ಮೆ ಕೊಚ್ಚಿದರೆ ಆಶ್ಚರ್ಯವೇನು? ಇನ್ನು ಮಹಾಭಾರತದ ಮೂಲ ಕತೆಯಂತೂ ಇಂದಿಗೂ ನಮಗೆಲ್ಲರಿಗೆ ಮುಖಪಾಠವಿದ್ದಂತಿದೆ; ಹೇಳಲು ಹುರುಪು, ಕೇಳಲು ಕುತೂಹಲ, ಇಂತಹ ಕತೆ.

ಹಿಂದುಸ್ತಾನದ ಇಂತಹದೊಂದು ಭಾಷೆಯಲ್ಲಿ ಸಂಸ್ಕೃತ ಮಹಾಭಾರತದ ಭಾಷಾಂತರವಿಲ್ಲ ಎಂದಿಲ್ಲ. ಒಂದೇ ಭಾಷೆಯಲ್ಲಿಯೆ ಬೇರೆಬೇರೆ ಕವಿಗಳು ಅದನ್ನು ಭಾಷಾಂತರಿಸಿದ್ದಾರೆ. ಕನ್ನಡದಲ್ಲೂ ಹಾಗೆಯೆ ಇದೆ. ಅನೇಕ ಕವಿಗಳು ತಮ್ಮ ಪರಿಸ್ಥಿತಿಗನುಸರಿಸಿ ಅದನ್ನು ರೂಪಾಂತರಿಸಿದ್ದಾರೆ. ಉದಾಹರಣಾರ್ಥವಾಗಿ—'ವಿಕ್ರಮಾರ್ಜುನವಿಜಯ' ಎಂಬ ಹೆಸರಿನಿಂದ ಪಂಪ ಕವಿಯು, ತನಗೆ ಆಶ್ರಯಕೊಟ್ಟ ಅರಸನನ್ನೂ ಅರ್ಜುನನನ್ನೂ ಹೋಲಿಸಿ ಮಹಾಭಾರತದ ಕತೆಯನ್ನು ಬರೆದಿದ್ದಾನೆ. ರನ್ನ ಕವಿಯು ಗದಾಯುದ್ಧವೂ ಹಾಗೆಯೆ. ಕೇವಲ ಕವಿಗಳಿಗೆಯೆ ಮಹಾಭಾರತ ಸೇರುತ್ತಿತ್ತೆಂದಲ್ಲ. ಜನರಿಗೆ ಬೇಕಾಗಿದ್ದಿಲ್ಲವಾದರೆ ಇಷ್ಟೊಂದು ಕವಿಗಳು ಅದರ ಗೊಡವೆಗೇ ಹೋಗುತ್ತಿರಲಿಲ್ಲ. ಗುಡಿ ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿ ಪುರಾಣ-ವಾಚನಗಳೆಂದರೆ ಭಾರತದ ವಾಚನವೆ. ಕನ್ನಡದ ಕುಮಾರವ್ಯಾಸನ ಭಾರತವು ಬಡವ-ಬಲ್ಲಿದರ, ಪಂಡಿತ-ಪಾಮರರ ಪ್ರೀತಿಯ ವಾಚನವಾಗಿದೆ. ಅದರಂತೆಯೆ ನಮ್ಮಲ್ಲಿಯ ಹರಿಕಥೆಯ ರೂಢಿಯನ್ನು ನೋಡಬಹುದು. ದರಿಕಥೆಯ ವಿಷಯವೆಂದರೆ ಮಹಾಭಾರತದ ಕತೆಗಳೆ. ಇತ್ತ ಯಕ್ಷಗಾನಕ್ಕೂ ಮಹಾಭಾರತವೆ ವಿಷಯ.

ಕೇವಲ ಉಚ್ಚಸಂಸ್ಕೃತಿಯ ಕನ್ನಡಿಗರ ಜೀವನದಲ್ಲಿ ಮಾತ್ರ ಮಾಹಾಭಾರತದ ಸಂಬಂಧವಿದೆ ಎಂದು ತಿಳಿಯಬೇಡಿರಿ. ಜಾನಪದ ಜೀವನದಲ್ಲೂ ಮಹಾಭಾರತವು ಸಾಮಾನ್ಯರ ಮೈಗೂಡಿದೆ. ನನ್ನ ಗೆಳೆಯರಾದ ಶ್ರೀಮಾನ್ ಕೃಷ್ಣಶರ್ಮ ಬೆಟಗೆರಿಯವರು, ಜನಪದಸಾಹಿತ್ಯದಲ್ಲಿ ಮಹಾಭಾರತ ಎಷ್ಟು ಸಹಜವಾಗಿ ಮೈಗೂಡಿದೆ ಎಂಬುದರ ಬಗ್ಗೆ ಕೆಲವು ಸಂಗತಿಗಳನ್ನು ನನ್ನ ಲಕ್ಷ್ಯಕ್ಕೆ ತಂದುಕೊಟ್ಟಿದ್ದಾರೆ. ನಮ್ಮಲ್ಲಿ ಒಕ್ಕಲಿಗರ ಜೀವನದಲ್ಲಿ ಮಹಾಭಾರತಕ್ಕೆ ವಿಶಿಷ್ಟ ಮಹತ್ವವಿದೆ. ಮಳೆಹೋದರೆ ಅದನ್ನು ತರಿಸಲು ಮತದಯ್ಯನವರಿಂದ ಭಾರತವಾಚನವನ್ನು ಮಾಡಿಸುವುದು; ಲಾವಣಿಗಳಲ್ಲಿ, ಭಾಗವತರ ಆಟಗಳಲ್ಲಿ, ಯಕ್ಷಗಾನದಲ್ಲಿ ಮಹಾಭಾರತದ ವ್ಯಕ್ತಿಗಳು, ಮಹಾಭಾರತದ ಸಂನಿವೇಶಗಳು. ಸೀಗೆಯ ಹುಣ್ಣಿಮೆಯ ಕಾಲಕ್ಕೆ ಪಾಂಡವರ ಪೂಜೆಯಾಗುವುದು. ಬೆಳೆಗಳಿಗೂ ಪಾಂಡವರಿಗೂ ಒಂದು ಸಂಬಂಧವಿದೆಯೊ ಏನೊ! ರಾಶಿಯನ್ನು ಆಳೆಯುವಾಗ ಮೊದಲಿನ ಹಿಡಿಕೆಗೆ 'ಪಾಂಡವರ ಕಾಳು' ಎಂದು ಹೆಸರು; ಅದನ್ನು ತೆಗೆದಿಟ್ಟು ಮುಂದೆ ಅಳೆಯುವರು. ಆಟ-ನೋಟಗಳಲ್ಲೂ ಪಾಗೆಯೆ. ಕಿಳಿಕ್ಯಾತರ ಆಟ ನಿಮಗೆ ಗೊತ್ತಿದೆಯೆ? ಇಂದಿನ ಸಿನೇಮಾದ ಚಿತ್ರದರ್ಶನತತ್ತ್ವ ಈ ಆಟದಲ್ಲದ್ದಂತಿದೆ. ಕೆಲವು ಚರ್ಮದ ಗೊಂಬೆಗಳನ್ನು ಪರದೆಯ ಹಿಂದೆ, ದೀಪದ ಮುಂದೆ ಕುಣಿಸಿ, ಅವುಗಳ ನೆರಳು ಮಾತ್ರ ಪ್ರೇಕ್ಷಕರಿಗೆ ಕಾಣಿಸುವಂತೆ ಆಡಿಸುವರು. ಈ ಆಟಗಳ ಕತೆ ಎಲ್ಲವೂ ಪಾಂಡವರ ಕತೆಯೆ. ಕತೆಯಂತೆ ಅದರೊಳಗಿನ ವ್ಯಕ್ತಿಗಳೂ ಈ ಸಾಮಾನ್ಯ ಜನರಿಗೆ ತೀರ ಪರಿಚಿತವಾಗಿವೆ; ಅವರ ದಿನದ ಮಾತುಗಳೆಲ್ಲ ಗಾದೆಯ ಮಾತಿನಂತಾಗಿವೆ. 'ದುಷ್ಟದುರ್ಯೋಧನನಕಿಂತ ಕೋಪ ಅವನ ಹೊಟ್ಟಾಗ' ಎಂದು ಕಟ್ಟೀ ಚಿನ್ನನ ಲಾವಣಿಯಲ್ಲಿ ಕೂಡ ಹೇಳುತ್ತಾರೆ. ದುರ್ಯೋಧನನು ಒಂದು ಮಾದರಿಯಾದರೆ. ಭೀಮನು ಇನ್ನೊಂದು ಮಾದರಿ, ಕಸುವಿನ ಮಾದರಿ; ಅರ್ಜುನನು ಬಿಲ್ಲುಗಾರಿಕೆಯ—ಗುರಿತಪ್ಪದ ಮಾದರಿ. ಹೆಣ್ಣು ಪುಕ್ಕಳ ಹಾಡಿನಲ್ಲಿ ಕೂಡ ಇಂತಹ ಮಾತುಗಳನ್ನು ನೀವು ಕಾಣುವಿರಿ. ಕೇಳಿರಿ ಇದನ್ನು:

ಹೆಣ್ಣು ಹುಟ್ಟಿದ ಮನಿಗೆ ಹೆಗ್ಗಣ ಹತ್ತಿ ಧಾಂಗ
ಗಂಡುಮಗನವ್ವ ಗಜಭೀಮ |

ಕಾವ್ಯ-ಜನಪದಸಾಹಿತ್ಯ-ಜನಜೀವನ ಇವುಗಳಲ್ಲಿದ್ದಂತೆ ಕರ್ನಾಟಕದ ಸಂಪ್ರದಾಯದ ಇತಿಹಾಸದಲ್ಲೂ ಭಾರತದ ನಿಕಟ ಸಂಬಂಧವಿದೆ. ಇಂದಿನ ಹಾನಗಲ್ಲು ವಿರಾಟನ ರಾಜಧಾನಿ ಎಂಬ ಐತಿಹ್ಯವನ್ನು ಎಷ್ಟು ಜನರು ಕೇಳಿಲ್ಲ? ಗೋವಳಕೊಂಡಕ್ಕೆ ಉತ್ತರಗೋಗ್ರಹಣಕಾಲದ ಸಂಬಂಧವನ್ನು ಹಚ್ಚುವುದು ನಿಮಗೆ ಗೊತ್ತಿದೆಯೆ?

ಮಹಾಭಾರತದ ವಿಷಯವಾಗಿ ಹೇಳಿದ ಮಾತುಗಳನ್ನು ರಾಮಾಯಣದ ವಿಷಯವಾಗಿಯೂ ಹೇಳಬಹುದು. ರಾಮಾಯಣದ ಕತೆ ಭಾರತಕ್ಕಿಂತ ಮುಂಚಿನದು, ಭಾರತದಲ್ಲೂ— ಹಿಂದೆ ಹೇಳಿದಂತೆ ಕಂಡುಬರುವುದು. ಆದರೆ ರಾಮಾಯಣ ಕಾವ್ಯ ಮಾತ್ರ ಮಹಾಭಾರತದ ತರುವಾಯ ಬರೆಯಲ್ಪಟ್ಟುದು ಎಂದು ಪಂಡಿತರು ಹೇಳುತ್ತಾರೆ. ಸಂಸ್ಕೃತದಲ್ಲಿಯೆ ಮಹಾಭಾರತಕ್ಕಿಂತ ರಾಮಾಯಣವು ಅನೇಕ ದೃಷ್ಟಿಗಳಿಂದ ಜೇಠೆಯಾಗಿದೆ. ರಾಮಾಯಣದಲ್ಲಿ ಒಂದೇ ಕತೆ, ಮುಖ್ಯ ಕತೆ ಹೆಚ್ಚು ಸುಸಂಬದ್ಧವಾಗಿ ಹೇಳಲ್ಪಟ್ಟಿದೆ. ಸೃಷ್ಟಿ-ಋತು-ಸಮುದ್ರ-ವನ ಮೊದಲಾದುವುಗಳ ವರ್ಣನೆ ರಾಮಾಯಣದಲ್ಲಿ ಯೋಗ್ಯವಾದ ಸಂದರ್ಭಗಳಲ್ಲಿದೆ, ಹೆಚ್ಚು ಕಾವ್ಯಮಯವಾಗಿದೆ. ಅದಕ್ಕಾಗಿ ರಾಮಾಯಣಕ್ಕೆ 'ಮೊದಲ ಕಾವ್ಯ' ಎಂದು ಬರೆದ ವಾಲ್ಮೀಕಿಗೆ ಆದಿಕವಿ ಎಂಬ ಬಿರುದು ದೊರೆತಿದೆ. ರಾಮ-ಲಕ್ಷ್ಮಣ-ಸೀತಾ-ಹನುಮಂತ ಈ ಪಾತ್ರಗಳು ಮಾನವ-ಸ್ವಭಾವದ ಒಂದೊಂದು ತರದ ಮಾದರಿಯೆನಿಸಿ, ರಾಮಾಯಣವು ಇಂದಿಗೂ ಜನಪ್ರಿಯವೆನಿಸಿದೆ, ಎಲ್ಲ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿದೆ. ಕನ್ನಡದ ಕವಿಗಳೂ ತಮತಮಗೆ ಇಷ್ಟ ಇಲ್ಲವೆ ಅನುಕೂಲವಿದ್ದಂತೆ ಕತೆಯನ್ನು ಬದಲಾಯಿಸಿಕೊಂಡೂ— ರಾಮಾಯಣದ ಕತೆಯನ್ನೆ ಬರೆದಿದ್ದಾರೆ. ರಾಮನ ಸರಲ ಚಾರಿತ್ರ್ಯ, ಸೀತಾದೇವಿಯ ಪಾತಿವ್ರತ್ಯ, ಲಕ್ಷ್ಮಣನ ಬಂಧುಪ್ರೇಮ, ಹನುಮಂತನ ಗುರುಭಕ್ತಿ— ಇವು ನಮಗೆ ಗಾದೆಯ ಮಾತಿನಂತಿವೆ.

ಒಂದು ದೃಷ್ಟಿಯಿಂದ ರಾಮಾಯಣವು ಕನ್ನಡಿಗರ ಜೀವನದಲ್ಲಿ ಮಹಾಭಾರತಕ್ಕಿಂತ ಹೆಚ್ಚಾಗಿ ಒಂದುಗೂಡಿದೆ ಎಂದು ಹೇಳಬಹುದು. ರಾಮಾಯಣದ ಕತೆಯಲ್ಲಿಯೆ ಕರ್ನಾಟಕವೂ ಹಂದು ಸ್ಥಾನವನ್ನು ಪಡೆದಿಲ್ಲವೆ? ಸಾಕ್ಷಾತ್ ಶ್ರೀರಾಮಚಂದ್ರನೇ ಸೀತಾ-ಲಕ್ಷ್ಮಣರೊಡನೆ ದಂಡಕಾರಣ್ಯದಲ್ಲಿ ಕಾಲವನ್ನು ಕಳೆಯಲಿಲ್ಲವೆ? ಈಗ ನಮ್ಮಲ್ಲಿ ಹೋದಹೋದಲ್ಲಿ ರಾಮಕುಂಡಗಳಿವೆ, ಸೀತೆಯ ಕಣ್ಣೀರುಗಳಿವೆ. ನೀರು ಸರಿಯದ ತಗ್ಗು ರಾಮಕುಂಡ, ಕಲ್ಲಿನಲ್ಲಿ ಮೂಡಿದ ಗುರುತು ಸೀತಾದೇವಿಯ ಹೆಜ್ಜೆ. ಕರ್ನಾಟಕದ ಎಷ್ಟು ಸಣ್ಣ-ಪುಟ್ಟ ಊರುಗಳಲ್ಲಿ ಇವನ್ನು ನೀವು ಕಂಡಿಲ್ಲ? ಇನ್ನು ಹಂಪೆಯಂತೂ ಸಾಕ್ಷಾತ್ ಪಂಪಾಕ್ಷೇತ್ರ. ಅಲ್ಲಿ ರಾಮ-ಲಕ್ಷ್ಮಣ-ಸೀತೆಯರ ಜೀವನಕ್ಕೆ ಸಂಬಂಧಿಸಿದ ಸಾವಿರಾರು ಕುರುಹುಗಳನ್ನು ತೋರಿಸುತ್ತಾರೆ.

ಮಹಾಭಾರತದಂತೆ ರಾಮಾಯಣವೂ ಹರಿಕಥೆ-ಪುರಾಣಗಳಲ್ಲಿ ನಮ್ಮ ಜನರಿಗೆ ಬಹಳೇ ರೂಢವಾಗಿದೆ. ಈ ಸಂದರ್ಭದಲ್ಲಿ ರಾಮಾಯಣದ ಒಂದು ವಿಶೇಷವನ್ನು ಹೇಳಬಹುದು. ಸೀತಾದೇವಿಯು ಹೆಣ್ಮಕ್ಕಳಿಗೆ ಅತ್ಯಂತವಾಗಿ ಆದರ್ಶಳಾದ ಪತಿವ್ರತೆಯಾಗಿದ್ದಾಳೆ. ಲವ-ಕುಶರ ಕತೆ ಹೆಣ್ಮಕ್ಕಳ ಹಾಡಿನಲ್ಲಿ ಸರಸವಾಗಿ, ತಾಯಿಯ ಪ್ರೇಮದಿಂದ ಸೂಸುವಂತಾಗಿ ಹೇಳಲ್ಪಡು-


LOTUS INK
LOTUS
Office file
WRITING INK
ಅಭ್ಯುದಯ :
ಸ್ವದೇಶಿ ಕಂಪನಿಗಳು ಪೂರ್ಣ ಯಶಸ್ವೀ ವ್ಯವಹಾರವನ್ನು ಮಾಡುವುದಕ್ಕೆ ಸಹಾಯ-ಮಾಡುವುದಕ್ಕಾಗಿಯೇ ನಮ್ಮ ಪ್ರಯತ್ನ. ಗಿರಾಕಿ, ಮಾಲು ತಯಾರಿಸುವವರು ಮತ್ತು ವ್ಯಾಪಾರಸ್ಥರ ನಡುವೆ ಇದೊಂದು ಒಳ್ಳೆಯ ಸಂಬಂಧ ಈ ರೀತಿಯ ಸಂಬಂಧವು ಮಾಲನ್ನು ತಯಾರಿಸುವವರಿಗೆ ಒಳ್ಳೆಯ ಯಶಸ್ಸನ್ನು ತರುತ್ತದೆ.
SALES ASSOCIATION
BOMBAY

ವುದನ್ನು ನಿಮ್ಮಲ್ಲಿ ಎಷ್ಟೋ ಜನರು ಚಿಕ್ಕಂದಿನಲ್ಲಿ ಕೇಳಿರಬಹುದಾಗಿದೆ. ಜನಪದಸಾಹಿತ್ಯದಲ್ಲಿ ಈ ಹಾಡಿನ ಒಂದು ಉದಾಹರಣೆಯನ್ನು ಕೊಡಬಹುದು:—

ಜನಕರಾಯನ ಮಗಳು ವನಕೆ ತೊಟ್ಟಿಲ ಕಟ್ಟ
ಲವಕುಶರೆಂಬ ಮಗರ್ವಡೆದು।
ಲವಕುಶರೆಂಬ ಮಗರ್ವಡೆದು ಲ ತಾಯಿ
ನಗುತ ವನವಾಸ ಕಳಿದಾಳು ॥

ಮಹಾಭಾರತದ ವೀರಾವೇಶದ ಪಾತ್ರಗಳು ಗಂಡುಸರ ಲಾವಣಿ-ಯಕ್ಷಗಾನ ಮೊದಲಾದುವುಗಳಲ್ಲಿ ಹೆಚ್ಚಾಗಿ ಕಂಡುಬಂದರೆ, ರಾಮಾಯಣದ ಸೌಮ್ಯವೃತ್ತಿಯ ಪಾತ್ರಗಳು ಹೆಣ್ಮಕ್ಕಳ ಹಾಡಿನಲ್ಲಿ ಹೆಚ್ಚಾಗಿ ಸೂರ್ತಿಗೊಂಡಿವೆ. ಇಂತಹ ವೈತ್ಯಾಸವನ್ನು ಬಿಟ್ಟರೆ ರಾಮಾಯಣ-ಮಹಾಭಾರತಗಳು—ಇವೆರಡೂ-ಪೂರ್ತಿಯಾಗಿ ಕನ್ನಡಿಗರಾದ ನಮ್ಮ ಜೀವನದಲ್ಲಿ ಕರ್ನಾಟಕದ ಸಂಸ್ಕೃತಿಯಲ್ಲಿ ಸಮರಸಗೊಂಡಿವೆ.

ಗೆಳೆಯರೆ, ಇದುವರೆಗೆ ನಾನು ಹೇಳಿದ್ದನ್ನು ಕೇಳಿ ನಿಮಗೆ ಅತ್ಯಂತ ಆಶ್ಚರ್ಯವಾಗಿರಬಹುದು. ಕನ್ನಡಕ್ಕೆ ಸಂಬಂಧಿಸಿಯೆ ಇವೆರಡು ಗ್ರಂಥಗಳ ಒಗ್ಗೆ ನಾನು ಮಾತನಾಡಿರುವೆ. ಆದರೆ ಇವೆರಡೂ ಗ್ರಂಥಗಳು ಮೂಲತಃ ಬರೆಯಲ್ಪಟ್ಟಿದ್ದು ಸಂಸ್ಕೃತದಲ್ಲಿ ಎಂದು ಮೊದಲೇ ಹೇಳಿದ್ದನ್ನು ಮರೆತಿಲ್ಲವಷ್ಟೆ? ಇವೆರಡೂ ತೀರ ಪ್ರಾಚೀನವಾಗಿವೆ. ತೀರ ಕಡಿಮೆ ಎಂದರೆ ಮಹಾಭಾರತವು ೨೫೦೦ ವರ್ಷಗಳ ಮುಂಚೆ, ರಾಮಾಯಣವು ೧೮೦೦ ವರ್ಷಗಳ ಮುಂಚೆ ಬರೆಯಲ್ಪಟ್ಟಿರಬೇಕೆಂದು ಸಂಸ್ಕೃತ ಸಾಹಿತ್ಯದ ತಜ್ಞರೆ ಅಭಿಪ್ರಾಯಪಡುತ್ತಾರೆ. ಅಂದಿನಿಂದ ಇಂದಿನವರೆಗೆ ಈ ಗ್ರಂಥಗಳು ಇಷ್ಟೊಂದು ಎಲ್ಲವಿಧದಿಂದಲೂ ಜನಪ್ರಿಯವಾದುದು ಹೇಗೆ? ಮಹಾಭಾರತಕ್ಕೆ ಮುಂಚೆ ಸಂಸ್ಕೃತದಲ್ಲಿ ಕತೆಯ ಗ್ರಂಥಗಳೇ ಇದ್ದಿರಲಿಲ್ಲವೆಂದು ಹೇಳಬಹುದು. ಇದಲ್ಲದೆ ಇಡಿಯ ಮಹಾಭಾರತವನ್ನು ಒರೆದದ್ದು ಸುಲಭವಾದ, ಸಣ್ಣವಾದ ೧೬ ಅಕ್ಷರಗಳ ಎರಡು ಸಾಲುಗಳ ಶ್ಲೋಕಗಳಲ್ಲಿ. ಇಂದು ನಾವು ಓದುವ ಮಹಾಭಾರತವು ಪೌರಾಣಿಕನಾದ 'ಸೌತಿ' ಎಂಬವನ ಬಾಯಲ್ಲಿದೆ. ಯಜ್ಞಸತ್ರ ನಡೆದಾಗ, ನೆರೆದ ಋಷಿಗಳ ಗುಂಪಿನಲ್ಲಿ ಈ ಸೌತಿಯು ಶ್ಲೋಕಗಳನ್ನು ಹೇಳುವನು. ಕತೆಯಲ್ಲಿ ಕೂಡ ಪಾತ್ರಗಳ ನಡುವೆ ಮಾರ್ಮಿಕವಾದ ಸಂಭಾಷಣೆ ಇರುವುದು. ಒಂದು ಕಡೆ ಕೌರವರು, ಕುರುಡ ಅರಸನ ನೂರು ಮಕ್ಕಳು; ಇನ್ನೊಂದು ಕಡೆ ಪಾಂಡವರು, ತಾಪದಿಂದ ನಿಸ್ಸತ್ತ್ವನಾದವನ ಹೆಂಡಿರಲ್ಲಿ ಅನ್ಯರ ಪ್ರಸಾದದಿಂದ ಹುಟ್ಟಿದ ಮಕ್ಕಳು. ಏನೇ ಕೂಡಿಯೆ ಒಬ್ಬಾಕೆಯನ್ನು ಮದುವೆಯಾಗುವುದು, ಇಡಿಯ ಆರ್ಯಜನಾಂಗಗಳೆ ಪಕ್ಷ ಕಟ್ಟಿಕೊಂಡು ಒಬ್ಬರನ್ನೊಬ್ಬರು ಕೊಲ್ಲಲು ಯುದ್ಧ ಹೂಡುವುದು, ಎಲ್ಲವೂ ಅದ್ಭುತವೆ! ಅದ್ಭುತವೆಂದೇ ಕೇಳಲು ಕುತೂಹಲ ಹೆಚ್ಚುವುದು; ಶ್ಲೋಕಗಳ ಸಂಭಾಷಣೆಯ ಶೈಲಿಯನ್ನು ಕೇಳಿದಂತೆ ಆಸಕ್ತಿಯೂ ಹೆಚ್ಚುವುದು. ಮೊತ್ತ ಮೊದಲು ಈ ಕತೆಯನ್ನು ಬರೆದವ ವ್ಯಾಸ-ಮಹರ್ಷಿ; ಕೌರವ-ಪಾಂಡವರಿಗೆ ಆಪ್ತನೆನಿಸಿ ಸಮಕಾಲೀನನಾದವನು. ಆ ಕತೆಯನ್ನು ವ್ಯಾಸನ ಶಿಷ್ಯನಾದ ವೈಶಂಪಾಯನನು ಪಾಂಡವರ ವಂಶಜನಾದ ಜನಮೇಜಯನಿಗೆ ಹೇಳಿದನು. ಇದನ್ನೇ ಮುಂದೆ ಸೌತಿಯು ನೈಮಿಷಾರಣ್ಯದ ಋಷಿಗಳಿಗೆ ಹೇಳಿದನು. ಹೀಗೆ ಬಾಯಿ-ಬಾಯಿಗೆ ಸಾಗಿ ಬೆಳೆದ ಕತೆ ಇದು. ಮಹಾಭಾರತವು ಇಷ್ಟೊಂದು ಜನಪ್ರಿಯವಾದುದಕ್ಕೆ ಈ ಸಂಗತಿಗಳೂ ಕಾರಣಗಳಾಗಿವೆ.

ರಾಮಾಯಣದ ಮಾತು ಬೇರೆ. ಅದನ್ನು ಬರೆದವನು ಒಬ್ಬನೆ. ಮಹಾಭಾರತದಂತೆ ಅದು ಬರಿಯ ಯುದ್ಧದ ಕತೆಯಲ್ಲ, ಎಂದರೆ ಕೇವಲ ವೀರಕಾವ್ಯವಲ್ಲ. ರಾಮಾಯಣವನ್ನು ಬರೆದ ವಾಲ್ಮೀಕಿಯ ವಿಷಯವಾಗಿ ಒಂದು ಕತೆಯನ್ನು ಕೇಳಿರುವಿರಾ? ಒಂದು ದಿನ ವಾಲ್ಮೀಕಿ ಸ್ನಾನಕ್ಕೆ ಹೊರಟಾಗ, ಬೇಡರವನೊಬ್ಬನು ಸರಸವಾಡುವ ಎರಡು ಹಕ್ಕಿಗಳಲ್ಲಿ ಗಂಡನ್ನು ಕೊಂದನಂತೆ; ಅದನ್ನು ನೋಡಿ ವಾಲ್ಮೀಕಿಗೆ ಅತ್ಯಂತ ವ್ಯಥೆಯಾಯಿತಂತೆ; ಆ ವ್ಯಥೆಯ ಆವೇಶದಲ್ಲಿ ಅವನ ಬಾಯಿಯಿಂದ ಒಂದು ಶ್ಲೋಕ ಬಂದಿತು: 'ವಾಲ್ಮೀಕಿಯ ಶೋಕವೆ ಶ್ಲೋಕವಾಯಿತು' ಎಂದು ಕಾಲಿದಾಸನು ಹೇಳಿದ್ದಾನೆ. ಆ ಶ್ಲೋಕದ ಸುಂದರವಾದ ಶೈಲಿಯನ್ನು ನೋಡಿ, ಸಾಕ್ಷಾತ್ ಬ್ರಹ್ಮದೇವನೆ ವಾಲ್ಮೀಕಿಗೆ ಆದೇ ಧಾಟಿಯಲ್ಲಿ **ರಾಮಾಯಣ** — ಎಂದರೆ ರಾಮನ ಕತೆಯನ್ನು ಬರೆಯಲು ಹೇಳಿದನಂತೆ. ವಾಲ್ಮೀಕಿಗೆ ರಾಮನ ಕತೆ ಚೆನ್ನಾಗಿ ಗೊತ್ತು. ಯಾಕೆಂದರೆ, ರಾಮನು ಸೀತೆಯನ್ನು ಬಿಟ್ಟ ಮೇಲೆ, ಗರ್ಭಿಣಿಯಾದ ಅವಳನ್ನು ವಾಲ್ಮೀಕಿ ತನ್ನ ಆಶ್ರಮಕ್ಕೆ ತಂದು ಸಲುಹಿದ್ದನು; ಅವಳ ಹೊಟ್ಟೆಯಲ್ಲಿ ಹುಟ್ಟಿದ ಲವ-ಕುಶರನ್ನು ಬೆಳೆಯಿಸಿದ್ದನು. ವಾಲ್ಮೀಕಿಯಾದರೂ ತಾನು ಬರೆದುದನ್ನು ಲವ-ಕುಶರಿಂದ ಹಾಡಿಸಿದನಂತೆ. ಅರಸನ ಕತೆ; ಅವನಿಗೂ ಸಾಮಾನ್ಯರಂತಹ ಸುಖ-ದುಃಖಗಳು; ಅವನ ಸ್ವಭಾವ ಮಾತ್ರ ಅಸಾಮಾನ್ಯ. ಇಷ್ಟಾದ ಮೇಲೆ ಕತೆ ಜನರ ಮನಸ್ಸನ್ನು ಹಿಡಿಯದೆ ಬಿಟ್ಟೀತೆ? ಇದಲ್ಲದೆ ಮಹಾಭಾರತದಲ್ಲಿ ಇಲ್ಲದ ಒಂದು ವಿಷಯವನ್ನು ವಾಲ್ಮೀಕಿ ತನ್ನ ಗ್ರಂಥದಲ್ಲಿ ಸೇರಿಸಿದನು. ಅದೆಂದರೆ ಸೃಷ್ಟಿಸೌಂದರ್ಯ—ಸರೋವರ-ಋತುಮಾನ-ಸೂರ್ಯೋದಯ ಮೊದಲಾದುವುಗಳ ವರ್ಣನೆ. ಇವುಗಳಿಂದ ಕತೆ ಜನರಿಗೆ ಕಣ್ಣು ಕಟ್ಟುವಂತಾಯಿತು. ಇದಕಾಗಿಯೆ ರಾಮಾಯಣವು ಮೊದಲಕಾವ್ಯ ಎನಿಸಿಕೊಂಡಿತು. ಮಹಾಭಾರತವು ಒಂದು ವೀರಕಾವ್ಯ; ರಾಮಾಯಣವು ಒಂದು ಲಲಿತಕಾವ್ಯ. ಎರಡೂ ನಮಗೆ ಎರಡು ಕಣ್ಣುಗಳಂತಿವೆ.

ಮಾರಿಗೆಯ ಮನೆ

(ಒಂದು ಏಕಾಂಕದೃಶ್ಯ)

ಶ್ರೀ. ಬೇಂಬ್ರೆ ಲಕ್ಷ್ಮಣರಾಯರು, ಧಾರವಾಡ

★

[ಮೊಗಸಾಲೆ-ಕುರ್ಚಿಯ ಮೇಲೆ ಮನೆಯ ಒಡತಿ ಕುಳಿತಿದ್ದಾಳೆ. ಎದುರಿಗೆ, ಸ್ವಲ್ಪ ಅಂತರದ ಮೇಲೆ ಅಡಿಗೆಯವಳು ನಿಂತಿದ್ದಾಳೆ. ಅಡಿಗೆಯವಳ ಹೆಸರು ತುಂಗಾ. ಒಡತಿಯ ಹೆಸರು ಅಲಕಾಬಾಯಿ. ಮನೆಯ ಮಾರಾಟದ ವಿಷಯ ಮಾತು ನಡೆದಿದೆ. ಹೊತ್ತು ಸುಮಾರು ಮುಂಜಾನೆ ೧೦-೩೦ ಗಂಟೆ.]

ತುಂಗಾ :— ತಾವು ವ್ಯಸನಪಡಬೇಕಾದ ಕಾರಣ ಏಲ್ಲ; ಇಂದಿಲ್ಲ ನಾಳೆ ಗಿರಾಕಿ ಬಂದಾವು.

ಅಲಕಾಬಾಯಿ :— ಬಾರದಿದ್ದರೆ ಒಂದು ಬಗೆಯಿಂದ ಕ್ಷೇಮವೇ ಅನಿಸ್ತಾ ಇದೆ. ಅವರು ಎಷ್ಟು ಪ್ರೀತಿಯಿಂದ ಈ ಮನೆ ಕಟ್ಟಿಸಿದರು. ಹದಿನೈದು ವರ್ಷ ಈ ಮನೆಯಲ್ಲಿ ಸಂಸಾರ ಮಾಡಿದ್ದಾಯಿತು; ನಮ್ಮ ದುರ್ದೈವಕ್ಕೆ ಎಲ್ಲಾ ಬಿಟ್ಟುಹೋದರು. ನಾವು ಸುಖಪಟ್ಟ ದಿವಸಗಳು ನೆನಪಿಗೆ ಬಂದರೆ, ಈ ಮನೆ ಮಾರಲೇಬಾರದು.. ಎನಿಸುವದು; ಆದರೆ ಇಟ್ಟುಕೊಂಡಾದರೂ ಮಾಡುವದೇನು? ನಾನೊಬ್ಬಳೇ ದೆವ್ವನ್ಹಾಂಗಿರಬೇಕಿದರಲ್ಲ ! ಎಲ್ಲಾ ಸುತ್ತಷ್ಟೂ ದುಃಖಕ್ಕೆ ಕಾರಣ!

ತುಂಗಾ :— ಅದೇನೊ ನಿಜ, ಅಮ್ಮನವರಿಗೆ ಆ ದಿನ ಎಷ್ಟು ದುಃಖವಾಯಿತೊ !

ಅಲಕಾ :— ಎಂದು ?

ತುಂಗಾ :— " ಮಾರಿಗೆಯ ಮನೆ " ಎಂದು ಬೋರ್ಡು ಬರೆಯಿಸಿ ತಂದಂದು! ನನಗೆ ಅದನ್ನು ಹಗಲು ಪಾಕಗೊಡಲಲ್ಲ; ನೀವೇ ರಾತ್ರಿ ಹೋಗಿ ತೂಗುಹಾಕಿದಿರಿ!

ಅಲಕಾ :— ಹೌದು, ರಾತ್ರಿ ಯಾರೂ ಅದನ್ನೋದುವದಿಲ್ಲಾ ಎಂದು. ಆ ಒಂದು ರಾತ್ರಿಯಾದರೂ ಈ ಮನೆ ನನ್ನದೆಂದಿರಲೆಂದು. ಅಂದು ಹಗಲು ಬೋರ್ಡು ತೂಗುಹಾಕಿದ್ದರೆ, ಖರೀದಿಗಾರರು ಆಗಲೇ ಮೇಲಾಡಿ, ಮನೆಯನ್ನೆಲ್ಲ ಕೊಂಡುಬಿಡುವರೋ ಎನಿಸಿತು ನನಗೆ. ಮುಂದೆ ಒಂದು ವಾರ, ಬೋರ್ಡು ಕಣ್ಣಿಗೆ ಬೀಳುವಾಗಲೆಲ್ಲ, ನೆಟ್ಟಮುಳ್ಳು ಆಳುಕಿದ ಹಾಗೆನಿಸಬೇಕು; ಕಟ್ಟಿದ ಮನೆಯನ್ನು ಕೆಡವಿದಹಾಗೆನಿಸಬೇಕು! ಆದರೆ ಈಗದೆಲ್ಲ ಹೋಯಿತು; ಬೋರ್ಡು ಹಾಕಿ ತಿಂಗಳಮೇಲಾದರೂ ಮನೆ ಕ್ಯೆಬಿಟ್ಟು ಹೋಗುವ ಲಕ್ಷಣ ತೋರುವದಿಲ್ಲ. ನಾಲ್ಕು ಸಲ ನಾನು ಕೊಟ್ಟದ್ದಾಯಿತು; ನಾಲ್ಕು ಸಲ ಮುಂದಿ ತಕ್ಕೊಂಡದ್ದಾಯಿತು! ಮಾತು ಮುಗಿಸಿ ಹೋದವರು ಮೋರೆಯನ್ನೇ ತೋರಿಸಲಿಲ್ಲ. ಈವತ್ತು ಮಾರೀತು, ನಾಳೆ ಮಾರೀತು.....ಎಂದು ಎಷ್ಟು ದಿನ ಕಾಯುವದು? ಸಾಕಾಯಿತು! ಇನ್ನು ಒಂದೇ ನಿಶ್ಚಯ: ಬಂದಷ್ಟು ಬೆಲೆಗೆ ಇದನ್ನು ಮಾರಿಬಿಡುವದು. ಬದು ಸಾವಿರಕ್ಕೆ ಇದನ್ನು ಮಾರಬೇಕೆಂದಿದ್ದೆ. ಈಗ ಸಾವಿರ ರೂಪಾಯಿ ಕಡಿಮೆ ಬಂದರೂ ಪರವಾ ಇಲ್ಲ ; ಇನ್ನಿದನ್ನು ಇಡುವಹಾಗಿಲ್ಲ!

ತುಂಗಾ :— ಪೇಪರಿನಲ್ಲಿ ಜಾಹಿರಾತು ಬೇರೆ ಕೊಟ್ಟಿದ್ದೀರಲ್ಲ ಅಮ್ಮನವರೇ! ಅದರಿಂದೇನಾದರೂ ಉಪಯೋಗವಾಯಿತೆ ?

ಅಲಕಾ :— ಬೋರ್ಡುಹಾಕಿ ಸಾಲದ್ದಕ್ಕೆ ಅದೊಂದನ್ನೂ ಮಾಡಿದ್ದಾಗಿದೆ. ಮೂರು ದಿನಗಳಿಂದ ಪೇಪರಿನಲ್ಲಿ ಬರ್ತಾ ಇದೆ. ಇದುವರೆಗೆ ಯಾರೂ ಕಾಲಿಟ್ಟಿಲ್ಲ !

[ಆ ಹೊತ್ತಿಗೆ ಪೋಸ್ಟ್‌ಮನ್ ಬಂದು ಎರಡು ಪತ್ರಗಳನ್ನು ಒಗೆದು ಹೋಗುತ್ತಾನೆ. ತುಂಗಾ ಅವನ್ನು ತಕ್ಕೊಂಡು ಅಲಕಾಬಾಯಿಯ ಕ್ಯೆಯಲ್ಲಿ ಕೊಡುತ್ತಾಳೆ. ಅವನ್ನು ಒಡೆದು ನೋಡಿ]

ಅಲಕಾ :— (ಉತ್ತೇಜಿತಳಾಗಿ) ತುಂಗಾ, ಇಂದೊಬ್ಬರು, ನಾಳೆಗೊಬ್ಬರು ಮನೆ ಕೊಳ್ಳುವದಕ್ಕಾಗಿ ಬರುತ್ತಾರೆ. ಈಗ ಎಷ್ಟು ಗಂಟೆ ?

ತುಂಗಾ :— (ಗಡಿಯಾರ ನೋಡಿ) ಹನ್ನೊಂದಕ್ಕೆ ಇಪ್ಪತ್ತು ನಿಮಿಷ ಇದೆ.

ಅಲಕಾ :— ಅಯ್ಯೋ! ಇನ್ನೊಂದು ಬದು ನಿಮಿಷದಲ್ಲಿಯೆ ಒಬ್ಬರು ಬರಬಹುದು. ನಾನು ಇಲ್ಲಿಯೆ ಕುಳಿತರೆ, ತಮ್ಮ ದಾರಿಯನ್ನೇ ಕಾಯುತ್ತ ಕುಳಿತಿದ್ದೇನೆ—ಎಂದು ಅವರ ಕಲ್ಪನೆಯಾಗಬಹುದು. ಇದೂ ಅಲ್ಲದೆ, ಮಾರುವ ಅಗತ್ಯ ನಮಗೇ ಹೆಚ್ಚಿಗಿದೆ ಎಂದು ಅವರ ಭಾವನೆಯಾಗಬಾರದು. ನಾನು ಮಹಡಿಯ ಮೇಲಿರುತ್ತೇನೆ. ನೀನು ಒಳಗೆ ನಿನ್ನ ಕೆಲಸದಲ್ಲಿ ತೊಡಗಿರು! ಅವರು ಕರೆದರೆ ' ಈಗ ಒರ್ತಾರೆ ' ಎಂದು ಹೇಳು. ನಾನು ಬೇಕಾಗಿ ತುಸು ತಡಮಾಡಿಯೆ ಬರ್ತೇನೆ!

[ಇಬ್ಬರೂ ಹೋಗುತ್ತಾರೆ. ರಮಾನಂದರಾವ್ ಅವನ ಹೆಂಡತಿ ಕೃಷ್ಣಾಬಾಯಿ ಬರುತ್ತಾರೆ.]

'Villa for Sale' ಎಂಬ ಇಂಗ್ಲೀಷ್ ಏಕಾಂಕದ ಕನ್ನಡ ಪೇಷಾಂತರ.

ತುಂಗಾ :— (ಹೊರಗೆ ಬಂದು) ಮನೆ ನೋಡುವದಕ್ಕಾಗಿ ಬಂದಿದ್ದೀರೇನೊ !

ರಮಾನಂದ :— ಹೌದು !

ತುಂಗಾ :— ಇಲ್ಲಿ ಕೂಡ್ರಿ ! ನಾನು ಬಾಯಿಯವರನ್ನ ಕರೀತೇನೆ.

(ಹೋಗುತ್ತಾಳೆ.)

ರಮಾನಂದ :— (ಪೇಪರಿನಲ್ಲಿರುವ ಜಾಹಿರಾತಿನ ಮೇಲೊಮ್ಮೆ ದೃಷ್ಟಿ ಹೊರಳಿಸಿ) ಇದು 'ಅಲಕಾ ನಿವಾಸ' ಕುಬೇರನ ವಾಸ-ಸ್ಥಾನ ! ಮುಂದೆ ಕಾಣುವದು ನಂದನವನ ! ಸನ ಮೇಯಲು ಗೇಣು ಕರಿಕೆ ಕೂಡ ಕಾಣುವದಿಲ್ಲ ಅದರಲ್ಲಿ ; 'ಸುಂದರವಾದ ತೋಟ' ಎಂದು ಜಾಹೀರಾತು !

ಕೃಷ್ಣಾಬಾಯಿ :— ಆದರೆ ಮನೆಯ ಭಾಗ ಸುಮಾರಾಗಿ ನೆಟ್ಟಗೆ ಇದ್ದ ಹಾಗೇ ಇದೆ.

ರಮಾನಂದ :— ಆದರೆ ಇಲ್ಲಂತೂ ಗೋಡೆಯ ಬಣ್ಣ ಹಾರಿ ಮಣ್ಣು ಮೈದೋರಿದೆ !

ಕೃಷ್ಣಾಬಾಯಿ :— ಒಳಗಿನ ಭಾಗ ಚೆನ್ನಾಗಿರಬಹುದು. ಮೊಗಸಾಲೆಯಲ್ಲಿ ಕಾಲಿಟ್ಟ ಕ್ಷಣಕ್ಕೇ ಮನೆಯ ಮುದ್ದು-ಮಾಟ ತಿಳಿಯುತ್ತಿರುವದಿಲ್ಲ ; ಸ್ವಲ್ಪ ನಿಧಾನಿಸಿರಿ !

ರಮಾನಂದ :— ಏನು ನಿಧಾನಿಸೋದು ?

ಕೃಷ್ಣಾಬಾಯಿ :— ಇದು ಸರಿಯಲ್ಲ, ನೀವು ಮನೆ ನೋಡುವದಕ್ಕಾಗಿ ಬಂದಿದ್ದೀರಿ ; ಕುಚೇಷ್ಟೆ ಮಾಡುವುದಕ್ಕಾಗಿ ಅಲ್ಲ !

ರಮಾನಂದ :— ನೋಡಿದ್ದಾಗಾಯ್ತು ! ತೋಟದ ಸೌಂದರ್ಯ ಭಾವನೆಯಿಂದಲೇ ರೂಪಿಸಬೇಕು. ದಿವಾನ್‌ಖಾನೆಯ ಅಂದ ಪ್ರತ್ಯಕ್ಷ ಕಾಣಬೇಕು ! ಆಹಾಹಾ ! ಏನು ಬಣ್ಣ, ಏನು ಬಿರುಕು !

ಕೃಷ್ಣಾಬಾಯಿ :— ಇದಕ್ಕೇನಾಗಿದೆ ? ಪರವಾ ಇಲ್ಲ !

ರಮಾನಂದ :— ಇದಕ್ಕೆ ದಿವಾನ್‌ಖಾನೆ ಎನ್ನುವುದಕ್ಕಿಂತ ದನದ ದಡ್ಡಿ ಎನ್ನುವದು ಲೇಸು !

ಕೃಷ್ಣಾಬಾಯಿ :— ದಿವಾನ್‌ಖಾನೆ ಇನ್ನೊಂದು ಇರಬಹುದು !

ರಮಾನಂದ :— ಇನ್ನೊಂದರ ಮಾತಿರಲಿ, ಈಗ ನಾವು ಇದರ ವಿಷಯ ಮಾತಾಡ್ತಾ ಇದ್ದೇವೆ !

ಕೃಷ್ಣಾಬಾಯಿ :— ಇದನ್ನು ಸುಧಾರಿಸಿದರೆ ಬೇರೆ ವಿಧವಾಗಿ ಉಪಯೋಗಿಸಬಹುದು.

ರಮಾನಂದ :— ಹೂಂ, ಕೆಡವಿ ಬಯಲುಮಾಡಿದರೆ, ಅಂಗಳ ಎಂದು ಉಪಯೋಗಿಸಬಹುದು !

ಕೃಷ್ಣಾಬಾಯಿ :— ಅದ್ಯಾಕೆ ? ಅಭ್ಯಾಸದ ಕೋಣೆಯನ್ನು ಮಾಡಬಹುದು !

ರಮಾನಂದ :— ಅಭ್ಯಾಸ ಮಾಡೋದಕ್ಕೆ ನಾವೇನು ಈಗ ಕಾಲೇಜಿಗೆ ಹೋಗತಾ ಇಲ್ಲ !

ಕೃಷ್ಣಾಬಾಯಿ :— ಹುಚ್ಚು ಚ್ಚು ಮಾತಾಡಬೇಡ್ರಿ ! ಇದನ್ನು ಒಂದಿಲ್ಲೊಂದಕ್ಕೆ ಉಪಯೋಗಿಸಲು ಬರುವದಿಲ್ಲವೇನು ?

ರಮಾನಂದ :— ಹಾಳು ಬಯಲನ್ನು ಕೂಡ ಉಪಯೋಗಿಸ ಬಹುದಂತೆ, ಇದಂತೂ ಕಾಣಾಕಾಣಾ ಮನೆ ! "ಅಲಕಾ-ನಿವಾಸ" !

ಕೃಷ್ಣಾಬಾಯಿ :— ಹುಡುಗಾಟಿಕೆ ಸಾಕು ; ಮನೆ ನಿಜವಾಗಿ ಕೊಂಬೋದಿದ್ದರೆ ಹೇಳ್ರಿ ; ಇಲ್ಲದಿದ್ದರೆ ಇದರ ಬಗ್ಗೆ ಇನ್ನು ಚಕಾರ ಶಬ್ದ ಕೂಡ ತೆಗೆಯುವದು ಬೇಡ !

ರಮಾನಂದ :— ಈ ಮನೆಯನ್ನು ಬೀದಿಯಲ್ಲಿರುವಾಗ ನೋಡಿದ ಕೂಡಲೆ ನಾನು ನಿನಗೆ ಹೇಳಿದೆ— 'ನಮಗೆ ಈ ಮನೆ ಬೇಡ' ಎಂದು. ಆದರೆ 'ಮಾಂಗೆಯ ಮನೆ' ಎಂಬ ಬೋರ್ಡು ನೋಡಿದ ಕೂಡಲೆ, ಅದನ್ನು ನೋಡುವುದೊಂದು ಚಟವೇ ಬಿದ್ದಿದೆ ನಿನಗೆ !

ಕೃಷ್ಣಾಬಾಯಿ :— ಚಟ ಅಂದರೇನದು ?

ರಮಾನಂದ :— ನಿಮ್ಮ ಹೆಂಗುಸರದೊಂದು ವಿಚಿತ್ರ ಸ್ವಭಾವ. ಮುಂದಿಯ ಮನೆಯ ಹುಳುಕು ನಮಗೇಕೆ ಎನ್ನುವವರಲ್ಲ ; ಅವರು ಮಲಗುವ ಕೋಣೆಯನ್ನು ಸಹ ಪಣಕಿ ನೋಡುವವರು ನೀವು ! ಅದರಲ್ಲಿಯೂ ಗುರುತಿಲ್ಲದವರು ಸಿಕ್ಕರಂತೂ ಪೂರ್ತಿ ಪಾತಾಳ ಕಾಣ್ತೀರಿ.

ಕೃಷ್ಣಾಬಾಯಿ :— ನಿಮಗೆ ಕೈಜೋಡಿಸ್ತೇನೆ— ಸಾಕು ಈ ಪುರಾಣ ! ನಾನು ಕೇಳಲಾರೆ ! ನಾವು ಮನೆ ನೋಡಲಿಕ್ಕೆ ಬಂದಿದ್ದೇವೊ, ಕಾದಾಡಲಿಕ್ಕೆ ಬಂದಿದ್ದೇವೊ ?

ರಮಾನಂದ :— ನೀನು ಬಂದಿರಬಹುದು–ನಾನು ಬಂದಿಲ್ಲ–ಮನೆ ನೋಡಲಿಕ್ಕೆ !

ಕೃಷ್ಣಾಬಾಯಿ :— ಅಂದರೆ ? ಇದರರ್ಥವೇನು ? ಬಂದಿಲ್ಲ ಹೌದಲ್ಲೋ ?

ರಮಾನಂದ :— ಇಲ್ಲ, ಇಲ್ಲ. ಖಂಡಿತವಾಗಿಯೂ ಇಲ್ಲ.

ಕೃಷ್ಣಾಬಾಯಿ :— ಹಾಗಾದರೆ ಯಾರಿದನ್ನು, ಅಂದುಕೊಂಡದ್ದು ?

ರಮಾನಂದ :— ಇದೆಲ್ಲಾ ಸುಳ್ಳೀತಾ ಇರೋದು ನಿನ್ನ ತಲೆಯಲ್ಲಿಯೆ !

ಕೃಷ್ಣಾಬಾಯಿ :— ಆದರೆ ಮಾತಾಡಿದ್ದನ್ನು ನಾವಿಬ್ಬರೂ ಮಾತಾಡಿದ್ದೇವೆ. ಕೆಲವುದಿನ ಆಂತೂ ಇದರ ಹೊರತಾಗಿ ಬೇರೆ ಏನೂ.....

ರಮಾನಂದ :— ನೀನು ಮಾತಾಡಿರಬಹುದು ; ನಾನು ಮಾತಾಡಿಲ್ಲ ! ನೀನೇನೋ ತಿಳಕೊಂಡಿದ್ದೀ—ನಾನು ನಿನ್ನ ಮಾತಿನಲ್ಲಿ ಕಚೇರಿದ್ದೇನೆಂದು. ನಾನು ಒಂದಕ್ಷರ ಆಡಿದ್ದರೆ ಇಟ್ಟಾಣೆ ! ನೀನೇ ಸಾವಿರ ಸಲ ಈ ವಿಷಯ ಮಾತಾಡಿದ್ದೀ ! ಇನ್ನು ನೀನೇ ಮನೆ ನೋಡತಾ ಇದ್ದರೆ, ಆ ಮಾತು ಬೇರೆ !

ಕೃಷ್ಣಾಬಾಯಿ:— ಅದರಲ್ಲಿ ಹೆಚ್ಚು ಕಡಿಮೆಯೇನು? ನಾನೊಬ್ಬಳೇ ನೋಡಿದರೂ ಅಷ್ಟೆ, ನಾವಿಬ್ಬರೂ ನೋಡಿದರೂ ಅಷ್ಟೆ! ನಾನು ನೋಡಿದರೂ ನಮ್ಮಿಬ್ಬರಿಗಾಗಿ ಅಂಬೋ ಮಾತು ಸುಳ್ಳಾಗಲಾರದು!

ರಮಾನಂದ:— ನಮ್ಮಿಬ್ಬರ ಸಲುವಾಗಿಯೇನಲ್ಲ. ಯಾರ ಸಲುವಾಗಿಯಾದರೂ ಇದ್ದರೆ, ಅದು ನಿನ್ನ ತಂದೆ-ತಾಯಿಗಳ ಸಲುವಾಗಿ! ಅದನ್ನು ನನ್ನ ಕೊರಳಿಗೆ ಕಟ್ಟಿ, ಅವರನ್ನು ತಂದು ಆ ಗುನೆಯಲ್ಲಿಡಬೇಕೂ—ಅಂತ ನಿನ್ನ ಪ್ರಯತ್ನ! ಈ ನಿನ್ನ ಹಂಚಿಕೆಯನ್ನೆಲ್ಲ ನಾನು ಜನ್ನಾಗಿ ಬಲ್ಲೆ! ಇದರಿಂದ ಆಗೋದೇನು ಗೊತ್ತೇ ನಿನಗೆ? ನಾವು ಇರುವದು ಒಂದೂವರೆ ತಿಂಗಳು; ಅವರು ತಳ ಊರುವದು ಹತ್ತೂವರೆ ತಿಂಗಳು! ಯಾಕಂದರೆ ಬೇಸಗೆಯ ರಜೆಯನ್ನಷ್ಟು ಬಿಟ್ಟರೆ ಉಳಿದ ದಿನಗಳಲ್ಲಿ ನಮಗೆ ಬರಲಿಕ್ಕಾಗುವದಿಲ್ಲ! ಅವರು ಮಾತ್ರ ವರ್ಷಾನುವರ್ಷ ವಸ್ತೀ ಹಾಕಬೇಕು! ಬೇಲಾಷಕ್— ಬಾಡಿಗೆ ಇಲ್ಲದೆ—ಬಾಳ್ವೆ ಸಾಗಿಸಬೇಕು! ಬಂದು ಇರೋದಾದರೂ ಒಬ್ಬರೇ ಇರ್ತಾರೇ— ಅಂದರೆ ಹಾಗೂ ಇಲ್ಲ; ಜೊತೆಗೆ ನಿನ್ನಕ್ಕ-ಅನಳ ಆ ಏಳೆಂಟು ಹುಡುಗರ ತಾಂಡೆ! ಅಲ್ಲಾ, ಅವರು ನಿನಗೆ ತಂದೆ-ತಾಯಿ, ನನಗೆ ಅತ್ತೆ-ಮಾವ! ಇದೆಲ್ಲ ಸರಿ! ಅದರೆ ಇದೇನಿದು? ನಮಗಿದು ಒಗ್ಗೋದಿಲ್ಲ!

ಕೃಷ್ಣಾಬಾಯಿ:— ಮತ್ತೀಗ ವಾರದಿಂದಲೂ ಮನೆಯನ್ನು ನೋಡ್ತಿದ್ದೀರಲ್ಲ, ಏನು ಹಾಗಾದರೆ?

ರಮಾನಂದ:— ನಾನು ನೋಡ್ತಾ ಇಲ್ಲ; ನೋಡ್ತಿರೋವಳು ನೀನು! ನನಗೆ ತ್ರಾಸು ಬಂದಿರೋದು ಇದೇ!

ಕೃಷ್ಣಾಬಾಯಿ:— ಬಂದರೆ ನೆಟ್ಟಗಾಯ್ತು!

ರಮಾನಂದ:— ಏನು ನೆಟ್ಟಗಾಯ್ತು?

ಕೃಷ್ಣಾಬಾಯಿ:— ತ್ರಾಸು ಬಂದಿದ್ದರೆ ಮನೆ ನೋಡಿ ಕೊಳ್ಳಬೇಕು, ತ್ರಾಸು ತಪ್ಪಿಸಿಕೊಳ್ಳಬೇಕು! ಆಮೇಲೆ ಇದರ ಬಗ್ಗೆ ಮಾತು ತೆಗೆದರೆ ಹೇಳ್ರಿ!

ರಮಾನಂದ:— ಹೌದು, ಸಾಪ, ಹಾಗೇ ಮಾಡಬೇಕು! ಯಾರಪ್ಪನ ಗಂಟೋ!

ಕೃಷ್ಣಾಬಾಯಿ:— ನಿಮ್ಮದೇ ಗಂಟು! ಹೌದು, ಮನೇನ ನಾನೇ ನಮ್ಮಪ್ಪ-ಅವ್ವನಿಗಾಗಿ ಕೊಟ್ಟೇನೆ— ಎಂದು ತಿಳೀರಿ. ಅಲ್ಲಿಗೆ ಆಯಿತೇನು?

ರಮಾನಂದ:— ಇದು ನೋಡು, ನೀನು ನಿನ್ನ ತಂದೆ-ತಾಯಿಗಳಿಗಾಗಿ ಅದನ್ನು ಕೊಳ್ಳಬೇಕೆಂತೀ ಅಂಬೋ ಮಾತು ನನಗೆ ಅಕ್ಷರಶಃ ಒಪ್ಪಿಗೆ. ಆದರೆ ನಾನು ಅದಕ್ಕೆ ಒಂದರೆಕಾಸು ಕೂಡಾ ಬಿಚ್ಚುವವನಲ್ಲ ಅಂಬೋ ಮಾತನ್ನು ನೀನು ಒಪ್ಪಿಕೊ!

ಕೃಷ್ಣಾಬಾಯಿ:— ನೀವು ಕೊಡದಿದ್ದರೆ ನನ್ನಮದುವೆ ದುಡ್ಡು ಇದೆ. ನನ್ನ ಸ್ತ್ರೀಧನದಮೇಲೆ ನಿಮ್ಮ ಅಧಿಕಾರವೇನೂ ಇಲ್ಲವಲ್ಲ!

ರಮಾನಂದ:— ನಿನ್ನ ದುಡ್ಡೇ? ಅದನ್ನು ನಾವಿಬ್ಬರೂ ಖರ್ಚು ಮಾಡಿ ಎಷ್ಟೋ ವರ್ಷಗಳಾದುವು. ಅದೀಗ ಹಳೇ ಮಾತಾಯ್ತು!

ಕೃಷ್ಣಾಬಾಯಿ:— ಆದರೆ ಆ ನನ್ನ ಹಣದಿಂದಲೇ ನೀವು ಇಷ್ಟೆಲ್ಲ ಸಂಪತ್ತು ಗಳಿಸಿದ್ದು!

ರಮಾನಂದ:— ಹೌದು! ನಾನೇ ಗಳಿಸಿದ್ದೇನೆ, ನೀನೇನೂ ಗಳಿಸಿಲ್ಲ! ಇದು ನೋಡು, ಈ ಮಾತಿನ ಅರೆದಾಟದಲ್ಲಿ ಅರ್ಥವಿಲ್ಲ. ನಾನೊಂದೇ ಮಾತನ್ನು ಹೇಳುತ್ತೇನೆ— ನನಗೆ ಮನೆಯನ್ನು ಕೊಳ್ಳಲು ಇಷ್ಟವಿಲ್ಲ; ನಾನು ಕೊಳ್ಳೋದಿಲ್ಲ. ಮುಗಿಯಿತು!

ಕೃಷ್ಣಾಬಾಯಿ:— ಹಾಗಿದ್ದರೆ ಇಲ್ಲಿಗೆ ಬರೋದ್ಯಾತಕ್ಕೆ ಬೇಕಾಗಿತ್ತು?

ರಮಾನಂದ:— ಕಂಪೌಂಡಿನಲ್ಲಿ ಕಾಲಿಡುವಾಗ ನಾನಿದನ್ನೇ ನಿನಗೆ ಹೇಳಿದೆ!

ಕೃಷ್ಣಾಬಾಯಿ:— ಒಳ್ಳೆಯದಾಯಿತು; ನಡಿಯಿರಿನ್ನು!

ರಮಾನಂದ:— ಅಗತ್ಯ, ನಡಿ!

ಕೃಷ್ಣಾಬಾಯಿ:— ಅಲ್ಲಾ, ಈ ಮನೆಯ ಹೆಣ್ಣುಮಗಳಿಗೆ ನಮ್ಮ ಬಗ್ಗೆ ಏನೆನಿಸಬಹುದು?

ರಮಾನಂದ:— ಮಂದಿಯ ಅಭಿಪ್ರಾಯ ನನಗೆ ಕಾಲುಕಸ! ಅದಕ್ಕೆಂದೂ ನಾನು ಲಕ್ಷ್ಯಮಾಡಿಲ್ಲ. ಸಾಕೇಳಿನ್ನು!

[ಕೂಡೆಯನ್ನು ಕೈಯಲ್ಲಿ ತಕ್ಕೊಂಡು ಏರುತ್ತಾನೆ. ಅಲಕಾಬಾಯಿ ಒಳಗಿಂದ ಬರುತ್ತಾಳೆ]

ಅಲಕಾ:— ನಮಸ್ತೆ (ಇಬ್ಬರಿಗೂ ನಮಸ್ಕಾರ ಮಾಡುತ್ತಾಳೆ).

ಇಬ್ಬರೂ:— ನಮಸ್ತೆ!

ಅಲಕಾ:— ಕೂತುಕೊಳ್ಳಿರಿ. (ಎಲ್ಲರೂ ಕೂಡುತ್ತಾರೆ) ಮನೆ ನೋಡಿ ಏನೆನಿಸಿತು?

ಕೃಷ್ಣಾಬಾಯಿ:— ಚೆನಾಗಿದೆ.... ನಮ್ಮೋತ್ಕೃಷ್ಟವಾಗಿದೆ!

ಅಲಕಾ:— ನಿಮಗೆ ಹಾಗೆ ಎನಿಸಬಹುದು ಎಂದು ನಾನೆಂದುಕೊಂಡಿದ್ದೆ! ನಮ್ಮ ಮನೆಯೆಂದರೆ ಸುಂದರವಾದ ಸಣ್ಣ ಕುಟೀರ! ಕಾಣಲಿಕ್ಕೆ ಚಿಕ್ಕದಾಗಿದ್ದರೂ ಇದರ ಜೊಕ್ಕಟತನ ಇನ್ನೊಂದಕ್ಕೆ ಬಾರದು! ಇದರಲ್ಲಿ ಇರುವದೆಂದರೆ ಒಂದು ಹಿಗ್ಗು! ಕ್ಷಮಿಸಿರಿ, ನಾನು ಮನಸ್ಸಿನಿಂದ ಹೇಳ್ತೇನೆ— ನಿಮಗೆ ಈ ಮನೆ ಒಪ್ಪದೆ— ಈ ಮನೆಗೆ ನೀವು ಒಪ್ತೀರಿ! ನಾನೇ ಈ ಮಾತಾಡುವದು ನಿಮಗೆ ಆಶ್ಚರ್ಯವೆನಿಸೀತು— ಆದರೆ ನಿಮ್ಮನ್ನು ಇಲ್ಲಿ ನೋಡಿದರೆ, ನೀವೇ ಈ ಮನೆಯವರೇನೊ ಎನ್ನುವ ಹಾಗಿನೆ. ನಿಮಗೆ ಹೇಳಬೇಕಾದರೆ— ಈ ಮನೆಗೆ ಎಲ್ಲಾ ಅನುಕೂಲ ಇದೆ. ಮಿಂಚಿನ ದೀಪ, ನೀರಿಗೆ ನಳ, ದನಕ್ಕೆ ದಡ್ಡಿ, ಕಟಿಗ್ಗೆ ಕೊಟ್ಟಡಿ, ಕೈಕಾಲಿಗೆ ಕಕ್ಕಸ, ಮಡೀಗೆ ಮಜ್ಜನಶಾಲೆ, ಅಡಿಗ್ಗೆ ಭೋಜನಶಾಲೆ! ಮಹಡೀಯ ಮೇಲಾರವನ್ನ ಮೊನ್ನೇ ಹೊಸದಾಗಿ ಹಾಕಿಸಿದೆ!

ಕೃಷ್ಣಾಬಾಯಿ:— ಓ, ಅದು ಮಹತ್ವದ್ದು !

ರಮಾನಂದ:— ಯಾರಿಗೊ !

ಅಲಕಾ:— ತೋಟ ದೊಡ್ಡದಿಲ್ಲ .... ಚಿಕ್ಕದೇ ಇದ್ದರೂ ಆಸ್ಥ ಉದ್ದವೂ ಇಲ್ಲ, ಹೆಚ್ಚು ಆಗಲವೂ ಇಲ್ಲ!

ರಮಾನಂದ:— ಹಾಗಾದರೆ ಎತ್ತರ ಇದೆಯೇನು ?

ಅಲಕಾ:— ಛೀ, ಛೀ, ನಾನು ಹೇಳಿದ್ದರ ಅರ್ಥ . ಅದಲ್ಲ! (ಕೃಷ್ಣಾಬಾಯಿಗೆ) ನಿಮ್ಮ ಗಂಡ ಬಹಳ ವಿನೋದಪ್ರಿಯರು! ನಾನು ಅನ್ನುತ್ತಾ ಇರೋದು ಎಂದರೆ— ನಮ್ಮ ತೋಟ ದೊಡ್ಡದಿರದಿದ್ದರೂ, ಸುತ್ತುಮುತ್ತು ಬೇಕಾದಷ್ಟು ದೊಡ್ಡ ತೋಟಗಳಿವೆ— ಎಂದು.

ರಮಾನಂದ:— ಆಹಾ, ಅವನ್ನು ನೋಡಿ ನಾವು ಸಂತೋಷ ಪಡಬೇಕು!

ಕೃಷ್ಣಾಬಾಯಿ:— ಶ್‌ಶ್‌ಶ್‌ಶ್, ಸುಮ್ಮನೆ ಹಾಸ್ಯಮಾಡಬೇಡ್ರಿ! ಅವರು ಇದ್ದ ಸಂಗತಿ ಹೇಳ್ತಾರೆ. (ಅಲಕಾಬಾಯಿಗೆ) ಒಳ್ಳೇದು, ನನಗೆ ಹೇಳ್ರಿ–ನೀವು; ಇದರ ಬೆಲೆ ಏನು ಕೇಳಬಹುದು?

ಅಲಕಾ:— ನನ್ನ ಮನಸ್ಸಿನ ಒಳಮಾತನ್ನು ನಿಮಗೆ ಹೇಳ್ತೇನೆ .... ಹಾಗೆ ನೋಡಿದರೆ— ನಿಜವಾಗಿ, ಇದನ್ನು ಮಾರುವ ಮನಸ್ಸೇ ಇಲ್ಲ ನನ್ನದು. ....

ರಮಾನಂದ:— (ಏಳುತ್ತ) ಅಂದಮೇಲೆ ಮಾತೇ ಮುಗಿಯಿತು— ಏಳು ಇನ್ನು. ....

ಅಲಕಾ:— ದಯಮಾಡಿ, ನನ್ನ ಮಾತೊಂದು .. ..

ಕೃಷ್ಣಾಬಾಯಿ:—ಅವರ ಮಾತು ಪೂರಾ ಮುಗಿಯಿಲೊಮ್ಮೆ!

ಅಲಕಾ:— ಸಂತೋಷ– ನಾನಿದನ್ನು ಹೇಳ್ತಾ ಇದ್ದೆ:— ಕೊಡೋದೇ ಆದರೆ ನಿಮ್ಮಂಥಾ ಜನಕ್ಕೇ ಕೊಡಬೇಕೂ—ಅಂತ ನನ್ನಾಶೆ. ಯಾಕೆಂದರೆ ನೋಡ್ರಿ— ನಾವು ಕಟ್ಟಿಸೋವಾಗ ಏನೇನೋ ಆಲೋಚನೆ ಮಾಡಿಕೊಂಡು, ನಮ್ಮ ಅಭಿರುಚಿಗೆ ಅವಕಾಶ ದೊರೆಯುವಹಾಗೆ ಕಟ್ಟಿಸಿದ್ದೇವೆ. ಅಂಥ ಮನೆಯಲ್ಲಿ ಯಾರೋ ಯಃಕಶ್ಚಿತರು ಬಂದಿರ್ತಾರೆ.... ಅಂದರೆ, ಹ್ಯಾಗೋ ಎನಿಸುತ್ತದೆ! ನನ್ನಭಿಪ್ರಾಯ ತಾವು ತಿಳಕೊಂಡಿರಬಹುದು– ನನ್ನ ಉದ್ದೇಶ ಇಷ್ಟೇ— ಆದರೆ ತಮ್ಮ ವಿಷಯದಲ್ಲಿ ನನಗೆ ಪೂರಾ ವಿಶ್ವಾಸ. ನಾನು ಹೆದರುವ ಕಾರಣವೇ ಇಲ್ಲ. ಸರಿ. ನಿರ್ಧಾರವಾಯಿತು. ನಾನು ನಿಮಗೆ ಮನೆ ಕೊಡ್ತೇನೆ!

ಕೃಷ್ಣಾಬಾಯಿ:— ಬಹಳ ಸಂತೋಷ ; ನಿಮ್ಮ ಮನಸ್ಸು ದೊಡ್ಡದು!

ರಮಾನಂದ:— ಬಹಳ ಸಂತೋಷ! ಹ್ಯಾಂ .... ಬೆಲೆ ಕೇಳಿಕ್ಕೇನು ಬಂತು .... ಸರಿ .... ನೀವು ಏನು ಬೆಲೆ ಹೇಳ್ತೀರಿ ?

ಅಲಕಾ:— ನಾನೀಗ ಹೇಳಿದರೆ ನೀವು ನಂಬಲಿಕ್ಕಿಲ್ಲ ....

ರಮಾನಂದ:— ನೀವು ಹೇಳುವಹಾಗೆ ಹೇಳ್ರಿ– ನನಗಿರೋ ವಿಶ್ವಾಸ ದೇವರಲ್ಲಿದೆ!

ಅಲಕಾ:— ಮನೆ ಇದ್ದಕ್ಕಿದ್ದಹಾಗೆ— ಎಲ್ಲ ಫರ್ನಿಚರ್ ಸಹಿತ— ಅದರೆ ಗೋಡೆಗೆ ತೂಗುಹಾಕಿದ ಆ ಒಂದು ತೈಲ-ಚಿತ್ರದ ವಿನಾ— ಅದನ್ನು ತೆಗೆದ ಚಿತ್ರಕಾರನ ಹೆಸರನ್ನು ಕೇಳಿ-ಬಲ್ಲಿರೇನೊ ತಾವು!

ರಮಾನಂದ:— ಯಾರು ?

ಅಲಕಾ:— ನಂದಲಾಲ ಜೋಸ !

ರಮಾನಂದ:— ಇಲ್ಲ. ಎಂದೂ ಆ ಹೆಸರನ್ನು ಕೇಳಿಲ್ಲ!

ಅಲಕಾ:— ಇರಲಿ, ನಾವು ಈ ಮನೆಗೆ ಖರ್ಚುಮಾಡಿದ್ದು ಬದುಸಾವಿರ ರೂಪಾಯಿ. ಫರ್ನಿಚರು, ಫಿಟಿಂಗು, ಬಣ್ಣ, ಸುಣ್ಣ ಎಲ್ಲಾಸೇರಿ ಸಾವಿರ ರೂಪಾಯಿ ಆಗಿರಬೇಕು! ನನಗೆ ಬೇಡಾದವರು ಕೇಳಿದರೆ— ನಾನು ಎಂಟುಸಾವಿರ ಎಂದೇ ಹೇಳಿಬಡಬಹುದು. ಆದರೆ ನಿಮಗಾದರೆ– ನಾನು ಕಟಿಸಿದ ವೆಚ್ಚದಲ್ಲಿಯೂ ಸಾವಿರ ರೂಪಾಯಿ ಬಿಟ್ಟು, ಅಂದರೆ, ನಾಲ್ಕು ಸಾವಿರ ರೂಪಾಯಿವರೆಗಾದರೆ ಕೊಡಬಹುದು. ನಿಜವಾಗಿ ಈ ಬೆಲೆ ನಿಮಗೆ ....

ರಮಾನಂದ:— ಬಹಳ ಹೆಚ್ಚು!

ಅಲಕಾ:— ಏನೂ ಹೆಚ್ಚಲ್ಲ !

ರಮಾನಂದ:— ಇಲ್ಲ, ನಿಜವಾಗಿ ಈ ಮನೆಗೆ ಅದು ಹೆಚ್ಚೇ!

ಅಲಕಾ:— ನೀವು ಹಾಗೆ ತಿಳಿದುಕೊಂಡಿದ್ದರೆ ಅದೊಂದು ಆಶ್ಚರ್ಯ.....

ರಮಾನಂದ:— ನಾನೊಪ್ಪೇನೆ; ಜಗತ್ತೆಲ್ಲ ಇಂಥ ಆಶ್ಚರ್ಯಗಳಿಂದಲೇ ತುಂಬಿದೆ.

ಅಲಕಾ:— ಈ ಮನೆಗೆ ನಾಲ್ಕು ಸಾವಿರ ಹೆಚ್ಚು ಎಂದು ಹೇಳಿದರೆ, ಇದಕ್ಕೂ ಕೆಳಗೆ ನಾನು ಹೋಗಲಾರೆ; ನಿಮ್ಮ ಸವಾಲು ನೀವು ತಿಳಿಸಬಹುದು!

ರಮಾನಂದ:— ನನ್ನ ಅಂಕಿಯನ್ನು ನಾನು ಹೇಳಿದರೆ ನಿಮಗೆ ಬಹಳ ಕಡಿಮೆ ಎನಿಸಬಹುದು.

ಅಲಕಾ:— ಪರವಾ ಇಲ್ಲ, ಹೇಳ್ರಿ !

ರಮಾನಂದ:— ಇಲ್ಲ, ಅದು ಸರಿ ಕಾಣದು. ನನಗೆ.....

ಕೃಷ್ಣಾಬಾಯಿ:— ಏನಾದರೂ ಒಂದು ಅಂಕಿ ಹೇಳ್ರಿ— ನನ್ನ ಸಂತೋಷಕ್ಕಾದರೂ ಹೇಳ್ರಿ.....

ರಮಾನಂದ:— ಎಲ್ಲಾ ಪಂಚೇತಿ.....ಸರಿ.....ಒಂದು ಮಾತು ಹೇಳ್ತೇನೆ.....ಎರಡು ಸಾವಿರ.....

ಅಲಕಾ
ಕೃಷ್ಣಾ } :— ಓ ಓ ಓ.

ರಮಾನಂದ:—ಅಂದರೇನು ? ನನ್ನ ದೃಷ್ಟಿಯಿಂದ ಇದಕ್ಕೂ ಹೆಚ್ಚು ಬೆಲೆ ಸಾಧ್ಯವೇ ಇಲ್ಲ!

ಅಲಕಾ:— ರಾಯರೆ, ನಾನೊಂದು ಖಂಡಿತ ಮಾತು ಹೇಳ್ತೇನೆ.....ಮೂರು ಸಾವಿರ ಅಯ್ತು—ಖರೀದಿ ಪತ್ರ ಆಗಲಿ; .....ಇಲ್ಲವಾದರೆ ನನ್ನ ಮನೆ ನನಗಿರಲಿ!

ರಮಾನಂದ:— ನಿಮ್ಮ ಮನೆಯ ವಿಷಯದಲ್ಲಿ ನಿಮ್ಮ ಖುಷಿಯಂತೆ ಮಾಡುವ ಅಧಿಕಾರ ನಿಮಗಿದೆ!

ಅಲಕಾ:— ನಿಜವಾಗಿ ಹೇಳ್ತೇನೆ—ನಾನೇನೋ ದೊಡ್ಡ ಮನಸ್ಸುಮಾಡಿ, ಮೂರು ಸಾವಿರಕ್ಕೆ ನಿಮಗಿರಲಿ.....

ರಮಾನಂದ:— ನಾನೂ ಅಷ್ಟೇ ಒಳ್ಳೇ ಮನಸ್ಸಿನಿಂದ ಹೇಳುತ್ತೇನೆ— ಅದೇ ಮೂರು ಸಾವಿರಕ್ಕೆ ಈ ಮನೆ ನಿಮಗೇ ಇರಲಿ— ಎಂದು.

ಅಲಕಾ:— ಆ ಪಕ್ಷದಲ್ಲಿ ಈ ಮಾತು ಇಲ್ಲಿಗೇ ಮುಕ್ತಾಯವಾದ ಹಾಗೆ!

ರಮಾನಂದ:— ಬರ್ತೇವೆ, ಅಪ್ಪಣೆ ಕೊಡ್ರಿ! (ಕೈಮುಗಿಯುತ್ತ ಏಳುತ್ತಾನೆ.)

ಕೃಷ್ಣಾಬಾಯಿ:— ಒಂದು ನಿಮಿಷ ತಾಳ್ರಿ. ಇದು ನೋಡ್ರಿ—ಪ್ಯಾಗೂ ನೀವು ಮಾತು ಮುಗಿಸಿಬಿಟ್ಟಿದ್ದೀರಿ—ಹೋಗುವ ಮೊದಲು ಮಹಡಿಯನ್ನಾದರೂ ಒಮ್ಮೆ ನೋಡಿಕೊಂಡು ಹೋಗೋಣ!

ಅಲಕಾ:— ಅಗತ್ಯ ನೋಡಬಹುದು, ಸಂತೋಷದಿಂದ ತೋರಿಸ್ತೇನೆ. ಹಾಗಾದರೆ ಬನ್ನಿ ಹೋಗೋಣ.....

ರಮಾನಂದ:— ಕ್ಷಮಿಸಿರಿ, ನಾನೇನೋ ನಿರ್ಧಾರಮಾಡಿಬಿಟ್ಟಿದ್ದೇನೆ. ಇಷ್ಟಾಗಿ ಆ ಸೋಪಾನ ಏರಿ ಇಳಿಯುವದೆಂದರೆ ನನಗೆ ಬೇಜಾರು!

ಅಲಕಾ:— ತಮ್ಮಿಷ್ಟ! (ಕೃಷ್ಣಾಬಾಯಿಗೆ) ತಾವು ಬನ್ನಿ, ಹೋಗೋಣ!

ಕೃಷ್ಣಾಬಾಯಿ:— ನಡೆಯರಿ!

(ಇಬ್ಬರೂ ಹೋಗುತ್ತಾರೆ.)

ರಮಾನಂದ:— ಈ ಮೂರು ಮೊಳ ಜಾಗಾಕ್ಕೆ ಮೂರು ಸಾವಿರ ರೂಪಾಯಿ ಅಂತೆ! ನನ್ನನ್ನು ಹುಚ್ಚ ಎಂದು ತಿಳಿದಿದ್ದಾಳೋ ಏನೋ ಈ ಪ್ರಾಣಿ!

[ಬಾಗಿಲನ್ನು ಬಡಿದ ಸಪ್ಪಳವಾಗುತ್ತದೆ. ತುಂಗಾ ಹೋಗಿ ಬಾಗಿಲನ್ನು ತೆರೆಯುತ್ತಾಳೆ. ಖುಶಾಲದಾಸ ಬರುತ್ತಾನೆ.]

ತುಂಗಾ:— ಹೀಗೆ ಒಳಗೆ ಬನ್ರಿ.....

ಖುಶಾಲ:— ಇದು ನೋಡ್ರಿ, ನಾನು ಅವಸರದಲ್ಲಿದ್ದೇನೆ. ಈ ಮನೆಗೆ ಏನಂತೆ ಬೆಲೆ?

ತುಂಗಾ:— ನನಗೆ ತಿಳಿಯದು ರಾಯರೆ!

ಖುಶಾಲ:— ಆ ಬೋರ್ಡಿನ ಮೇಲೆ ಯಾಳೆ ನೀವು ಬೆಲೆ ಬರೆಯಕೂಡದು? ಕರ್ನಾಟಕದ ಮಂದಿ! ನಿಮ್ಮ ವ್ಯವಹಾರದ ರೀತಿಯೇ ಒಂದು ವಿಚಿತ್ರ! ನೀನು ಹೋಗಿ ಮನೆಯ ಮಾಲೀಕರಿಗೆ ತಿಳಿಸು— ಕೂಡಲೆ ಬರದಿದ್ದರೆ ಹೊರಟೆನೆಂದು— ಹೊತ್ತು ಕಳೆಯಲಿಕ್ಕೆ ನನಗೆ ಅವಕಾಶವಿಲ್ಲ! ನನಗೆ ಬೇಕಾದದ್ದು ಬೇಗನೆ ಆಗಬೇಕು; ಅದರಲ್ಲಿ ಅಭ್ಯಂತರವಾಯ್ತೆಂದರೆ ನನಗೆ ಆಗೋದಿಲ್ಲ!

ತುಂಗಾ:— ಅಮ್ಮಾಅವರು ಒಬ್ಬರ ಸಂಗಡ ಮಾತಾಡ್ತಾ ಇದ್ದಾರೆ. ನಾನು ಪೇಟೆಯಲ್ಲಿ ತರ್ಕಾರಿಗಾಗಿ ಹೋಗಬೇಕು; ತಾವು ಒಂದು ನಿಮಿಷ ಒಳಗೆ ಕೂಡ್ರಿ, ಅವರು ಇಷ್ಟರಲ್ಲೇ ಬರ್ತಾರೆ. (ಹೊರಗೆ ಹೋಗುತ್ತಾಳೆ.)

ಖುಶಾಲ:— (ಒಳಗೆ ಪ್ರವೇಶಿಸಿ) ಓ, ತಾವು ಈ ಮನೆಯ ಮಾಲೀಕಳ ಯಜಮಾನರೇನೊ! ನಮಸ್ಕಾರ, ತಮಗೆ ಇಂಗ್ಲೀಷು ಬರ್ತಿದೆಯಲ್ಲಾ?

ರಮಾನಂದ:— ತಮಗೆ ಕನ್ನಡವೂ ಬರ್ತಿದೆಯಲ್ಲಾ?

ಖುಶಾಲ:— ಹೌದು.

ರಮಾನಂದ:— ಸರಿ, ಅದರಲ್ಲಿಯೇ ಮಾತಾಡ್ರಿ!

ಖುಶಾಲ:— ಆಯಿತು, ಎಷ್ಟು ಈ ಮನೆಗೆ?

ರಮಾನಂದ:— ಕುಳಿತು ಮಾತಾಡಿರಲ್ಲ!

ಖುಶಾಲ:— ಇಲ್ಲ, ನಿಂತೇ ವ್ಯವಹಾರ ಮುಗಿಸುವ ಅಭ್ಯಾಸ ನನಗೆ!

ರಮಾನಂದ:— ಓಹೊ ಹೀಗೊ?

ಖುಶಾಲ:— ಹೌದು, ನಿಮ್ಮ ಹೆಣ್ತಿಯೆಲ್ಲಿ?

ರಮಾನಂದ:— ನನ್ನ ಹೆಣ್ತಿ? ಓ, ಆಕೆ ಮೇಲೆ ಹೋಗಿದ್ದಾಳೆ!

ಖುಶಾಲ:— ಪರವಾ ಇಲ್ಲ, ನಾವು ಮಾತು ಮುಗಿಸಬಹುದು. ಇನ್ನು ಅವರೊಡನೇ ಆಲೋಚನೆ ಮಾಡುವದು ಅಗತ್ಯವೇ ಇದ್ದರೆ, ಅವರನ್ನೂ ಕರೆಯಬಹುದು ಬೇಕಾದರೆ!

ರಮಾನಂದ:— ನಾನೇ? ಆ ವಿಷಯದ ಆಲೋಚನೆ? ನಿಮ್ಮಾಣೆಯೆಂದರೂ ಮಾಡುವದಿಲ್ಲ!

ಖುಶಾಲ:— ಇದಕ್ಕೆ ನೀವೊಂದು ಅಪವಾದ ಎನ್ನಬಹುದು; ಇಲ್ಲದಿದ್ದರೆ ನೀವು ಕಾರವಾರೀ ಜನ, ಹೆಣ್ತಿನ್ನ ಕೇಳದಲೆ ಯಾವುದನ್ನೂ ಮಾಡೂದಿಲ್ಲ. ಇನ್ನು ನನಗೆ ಹೇಳ್ರಿ—ಈ ಮನೆ ಮಾರುವ ಇಷ್ಟ ನಿಮಗಿದೆಯೊ ಇಲ್ಲವೊ?

ರಮಾನಂದ:— ನನಗೆ? ಓ, ನನಗೆ ಪೂರಾ ಇಷ್ಟ!

ಖುಶಾಲ:— ಹಾಗಾದರೆ ಅದರ ಬಗ್ಗೆ ಏನು? ಐದು ನಿಮಿಷಕ್ಕಿಂತ ಹೆಚ್ಚು ಹೊತ್ತನ್ನು ನಾನಿದರಲ್ಲಿ ಕಳೆಯಲಾರೆ!

ರಮಾನಂದ:— ಅದರಲ್ಲಿ ಮೂರು ನಿಮಿಷ ನನಗಾಗಿ ಖರ್ಚು ಮಾಡ್ರಿ. ಕುಳಿತುಕೊಳ್ರಿ! ಮೊದಲನೇ ಮಾತು ಅಂದರೆ— ಈ ಮನೆಯನ್ನು ನಮ್ಮಜ್ಜಂದಿರು ಕಟ್ಟಿಸಿದರು.....

ಖುಶಾಲ:— ನಿಮ್ಮಜ್ಜಂದಿರು ಗೋರಿಗೆ ಹೋದರು; ಅದು ನನಗೆ ಬೇಕಾಗಿಲ್ಲ!

ರಮಾನಂದ:— ನನಗೂ ಈಗದು ಬೇಕಾಗಿಲ್ಲ— ಆದರೆ ಪ್ರಸಂಗ ಬಂದರೆ ಹೇಳ.....

ಖುಶಾಲ:— ಇದು ನೋಡ್ರಿ.... ಇದರ ಬೆಲೆಯೇನು ಅಷ್ಟು ಹೇಳಿಬಿಡ್ರಿ!

ರಮಾನಂದ:— ಅದನ್ನೇ ತಿಳಿಸಿ ಹೇಳ್.....

ಖುಶಾಲ:— ಬೇಕಾಗಿಲ್ಲ!

ರಮಾನಂದ:— ನಮ್ಮಲ್ಲಿ ಮಿಂಚಿನ ವೇಗ, ನೀರಿಗೆ ನಳ, ದನಕ್ಕೆ ದಡ್ಡಿ.....

ಖುಶಾಲ:— (ಗಟ್ಟಿಯಾಗಿ-ಆವೇಶದಿಂದ) ನನಗದು ಬೇಡಾ; ಇದರ ಬೆಲೆಯೆಷ್ಟು? ಒಂದೇ ಮಾತು!

ರಮಾನಂದ:— ಆದರೆ, ಪೂರಾ ಮನೆಯನ್ನಾದರೂ ಒಮ್ಮೆ ನೋಡಿ, ಆಮೇಲೆ.....

ಖುಶಾಲ:— ನನಗೆ ಜರೂರಿಲ್ಲ. ನಾನೀ ಮನೇನ ನೆಲಸಮ ಮಾಡಿ, ಥಿಯೆಟರ್ ಕಟ್ಟಿಸುವವನಿದ್ದೇನೆ.

ರಮಾನಂದ:— ಓ, ಹೀಗೋ?

ಖುಶಾಲ:— ನನಗೆ ಮುಖ್ಯವಾಗಿ ಅಂದರೆ ಜಾಗಾ ಬೇಕು; ಇಮಾರತು ಬೇಡ!

ರಮಾನಂದ:— ಓಹೊ, ತಾವು ಧನಿಕರು, ಲಕ್ಷಾಧೀಶರು, ಲಕ್ಷ್ಮೀದೇವಿ ತಮಗೆ ಒಲಿದಿದ್ದಾಳೆ!

ಖುಶಾಲ:— (ಸ್ತುತಿಯಿಂದ ಉಬ್ಬಿ, ತುಸ ನಿಧಾನತಾಳಿ) ಸರಿ, ಏನೆಂದಹಾಗಾಯಿತು?

ರಮಾನಂದ:—ಹಾಗಿದ್ದ ಪಕ್ಷಕ್ಕೆ ಜಾಗಾ, ಮನೆ, ಫರ್ನಿಚರ್ ಸಹಿತ—ಆದರಲ್ಲಿ ಆ ಒಂದು ಪೇಂಟಿಂಗ ಮಾತ್ರ ಬಿಟ್ಟು—ಅದು ಒಬ್ಬ ಅಪ್ರಸಿದ್ಧ ಚಿತ್ರಕಾರನ ಪ್ರಸಿದ್ಧ ಚಿತ್ರ—ಅದನ್ನು ನಮ್ಮ ಮುತ್ತಜ್ಜಿಯ ತವರುಮನೆಯವರು ಅಂದಕ್ಕೆ ಎಂದು ಕೊಟ್ಟಿದ್ದರು—ಅದೊಂದು ನನಗೆ ಬೇಕೇ ಬೇಕು!

ಖುಶಾಲ:— ನಿಮ್ಮ ಪೂರ್ವಿಕರ ಒಡಪೆಗಳ ಮೇಲೆ ನಿಮಗೆ ತುಂಬಾ ಪ್ರೀತಿ ಹಾಗಾದರೆ?

ರಮಾನಂದ:— ಇಲ್ಲದೆಯೇನು? ಎಷ್ಟು ವರ್ಷಗಳಿಂದ ಇದನ್ನು ಕಾಯ್ದು ಇಟ್ಟಿದ್ದೇನೆ!

ಖುಶಾಲ:— ಆಶ್ಚರ್ಯ, ನಿಮ್ಮದೆಲ್ಲ ಹಿಂದಿನ ಆಲೋಚನೆ; ನಮ್ಮದೆಲ್ಲ ಮುಂದಿನ ಆಲೋಚನೆ!

ರಮಾನಂದ:— ಯಾರಿದ್ದರೂ ಇಂದಿನದನ್ನು ಆಲೋಚಿಸಲೇ ಬೇಕು!

ಖುಶಾಲ:— ಏನಾದರೂ ನೀವು ನಮ್ಮಹಾಗೆ ಪ್ರಯತ್ನವಾದಿಗಳಲ್ಲ; ಹೆಚ್ಚೆಚ್ಚು ನಮ್ಮ ಅನುಕರಣ ಮಾಡಬೇಕು ನೀವು!

ರಮಾನಂದ:— ಅನುಕರಣ ಯಾವಾಗಲೂ ಅನುಕರಣೀಯ ವಿರುವದಿಲ್ಲ! ನಾವು ಬರೇ ನಿಮ್ಮ ಅನುಕರಣ ಮಾಡಬಹುದು; ಆದರೆ ಅನುಕರಣವೆಲ್ಲ ಅಣಕವಾಡಾಗಬಹುದು! ನಾವು ನಮಗೆ ಒಗ್ಗಿದ್ದನ್ನೇ ಮಾಡಬೇಕು, ನೀವು ನಿಮಗೆ ಸಗ್ಗಿದ್ದನ್ನೇ ಮಾಡಬೇಕು. ನೀವು ನಮ್ಮ ದೇಶಕ್ಕೆ ಬಂದು ಸಂಪಾದಿಸ್ತೀರಿ; ನಾವು ನಿಮ್ಮ ಮುಂಬಯಿಗೆ ಬಂದು ಕಳೀತೇವೆ!

ಖುಶಾಲ:— ನೀವೂ ನಮ್ಮ ಹಾಗೆ ವ್ಯಾಪಾರ ಮಾಡಬೇಕು!

ರಮಾನಂದ:— ಅದನ್ನೇ ಈಗ ಕಲೀತಾ ಇದ್ದೇವೆ.

ಖುಶಾಲ:— ಒಳ್ಳೇದು, ಎಷ್ಟೆಂದ ಹಾಗಾಯ್ತು?

ರಮಾನಂದ:— ಈ ಮನೆಗೇ? ಆದರ ವಿಷಯ ಹೀಗಿದೆ—ಒಂದೇ ಮಾತು ನಿಮಗೆ ಹೇಳುವದಾದರೆ.... ಆರು ಸಾವಿರ ರೂಪಾಯಿಗಳಿಗೆ ಅರೆಕಾಸೂ ಕಡಿಮೆ ಆಗದು! ಯಾರ ಕೇಳಿದರೂ ಇಷ್ಟೇ ಬೆಲೆ! ನೀವು ಮುಂಬಯಿಯವರು, ಲಕ್ಷಾಧೀಶರು ಎಂದು ನಿಮ್ಮಿಂದ ಹೆಚ್ಚು ತಕ್ಕೊಳ್ಳುವ ಮನಸ್ಸಿಲ್ಲ ನನ್ನದು!

ಖುಶಾಲ:— ಅದು ನ್ಯಾಯವಾದ ಮಾತು; ಆದರೆ ನಮಗೆ ಅಂತ ಹೆಚ್ಚು ಹೇಳಬೇಡ್ರಿ!

ರಮಾನಂದ:— ಛೆ, ಎಂದಾದರೂ ಉಂಟೆ?

ಖುಶಾಲ:— ಒಳ್ಳೇದು. ಆರು ಸಾವಿರ—ಒಪ್ಪಿತು—

ರಮಾನಂದ:— ಆದರೆ ನನ್ನಲ್ಲಿ ಉಗಾದಿ ಉದ್ರಿ ನಡೆಯದು; ಝಣ್ ಝಣಾ ಅಂತ ಆರುಸಾವಿರ ಎಣಿಸಬೇಕಿಲ್ಲಿ!

ಖುಶಾಲ:— ಅದಕ್ಕೇನು ಬಂತು? Imperial Bank ನ ಮೇಲೆ ಈಗ ಚೆಕ್ಕು ಕೊಟ್ಟು ಬಿಡ್ತೇನೆ. (ಜೇಬಿನೊಳಗಿಂದ ಚೆಕ್ಕು ಬುಕ್ಕು ತೆಗೆದು ಬರೆಯುತ್ತಾನೆ, ಮತ್ತು ಅದನ್ನು ರಮಾನಂದರಾಯನಿಗೆ ಕೊಡುತ್ತಾನೆ.) ಇದರಲ್ಲಿ ನಿಮ್ಮ ಹೆಸರೊಂದನ್ನು ನೀವೇ ಬರೆದುಕೊಂಡು, ನಾಳೆ ಮುಂಜಾನೆ ನನ್ನ ವಕೀಲನನ್ನು ಕಾಣಬಹುದು.

ರಮಾನಂದ:— ತಾವಿರುವದೆಲ್ಲಿ?

ಖುಶಾಲ:— ಗುಜರಾತ ಲಾಜ್, ಪೂನಾ ರೊಡ್. ಖರೀದಿ ಪತ್ರವನ್ನು ನಾಳೆ ಬರೆಯಿಸಬಹುದು. ನೀವು ಎಷ್ಟು ಗಂಟೆಗೆ ಬರುವವರು?

ರಮಾನಂದ:— ಎಷ್ಟು ಗಂಟೆಗೆ ಬರಬೇಕು?

ಖುಶಾಲ:— ಹತ್ತುಗಂಟೆಗೆ ಬನ್ನಿರಿ!

ರಮಾನಂದ:— ಸಂತೋಷ.

ಖುಶಾಲ:— ನೀವು ಮನೆಯನ್ನು ತೆರವು ಮಾಡುವದ್ಯಾವಾಗ?

ರಮಾನಂದ:— ನಾಳೆ ಈ ಕೆಲಸವಾದರೆ, ನಾಡಿದ್ದೇ ತೆರವು ಮಾಡ್ತೇನೆ.

ಖುಶಾಲ:— ಆಗಬಹುದು. ಬರ್ತೇನೆ, ಜಯಗೋಪಾಳ!

ರಮಾನಂದ:— ನಮಸ್ತೆ. ವಿಶ್ವಾಸ ಇರಲಿ!

(ಖುಶಾಲದಾಸ ಹೋಗುತ್ತಾನೆ. ಕೃಷ್ಣಾಬಾಯಿ, ಅಲಕಾಬಾಯಿ ಬರುತ್ತಾರೆ.)

ರಮಾನಂದ:— ಉಂ, ಏನು?

ಕೃಷ್ಣಾಬಾಯಿ:— ಇಲ್ಲ, ಮನೆ ಹಾಗೆ ನಿಜವಾಗಿಯೇ ಲಕ್ಷಣವಾಗಿದೆ!

ಅಲಕಾ:— ನಾನು ಮೊದಲಿಗೇ ನಿಮಗೆ ಹೇಳಿದ್ದೇನೆ—ಮನೆ ಚಿಕ್ಕದು ಎಂದು. ಆದರೂ ಎರಡು ದೊಡ್ಡ ಮಲಗುವ ಕೋಣೆ, ಒಂದು ಸಣ್ಣ ಅಡಕಲುಕೋಣೆ ಇವೆ.

ರಮಾನಂದ:— ಇಷ್ಟೆಲ್ಲ ಇದ್ದಮೇಲೆ ಇನ್ನೇನು ಬೇಕು?

ಕೃಷ್ಣಾಬಾಯಿ:— (ಅಲಕಾಬಾಯಿಗೆ) ಏನಮ್ಮಾ, ನಮಗಂತೂ ಈ ಮನೆ ಚಿಕ್ಕದಾಗತ್ತೆ. ಉಪಾಯವಿಲ್ಲ. ಬರ್ತೇವೆ; ಸುಮ್ಮನೆ ನಿಮಗೆ ತೊಂದರೆ ಕೊಟ್ಟಹಾಗಾಯ್ತು!

ಅಲಕಾ:— ಛೇ, ಅದರಲ್ಲೇನು ತೊಂದರೆ? ನಿಮಗೆ, ಪಾಪ, ಮನೆ ಚಿಕ್ಕದಾಗ್ತಾ ಇದ್ದರೆ, ನೀವೇನು ಮಾಡೀರಿ?

ರಮಾನಂದ:— ಏನು, ಎರಡು ಮಲಗುವ ಕೋಣೆ, ಒಂದು ಅಡಕಲು ಕೋಣೆ ಎಂದು ಹೇಳಿದ್ದಾಗಾಯ್ತಲ್ಲಾ ಇವರು?

ಅಲಕಾ:— ಅಷ್ಟೇ ಅಲ್ಲ, ಕೆಲಸದವರಿಗೆ ಎರಡು ಖೋಲಿಗಳು ಬೇರೆ ಇವೆ!

ರಮಾನಂದ:— ಎಲಾ ಇವನ! ಹೀಗೇನು ಹಾಗಾದರೆ? ಇದು ನನಗೆ ಗೊತ್ತೇ ಇರಲಿಲ್ಲ! ಏನು, ಕೆಲಸದವರಿಗೆ ಎರಡು ಖೋಲಿಗಳೇ?

ಅಲಕಾ:— ಹೌದು!

ರಮಾನಂದ:— ಛೆ, ಹಾಗಿದ್ದರೆ ಕೇಳ್ತಿರಾ? ಭಾರೀ ಆಯ್ತು!

ಕೃಷ್ಣಾ:— ನಿಮ್ಮ ಈ ಕಟುಕನುಡಿ ಸಾಕುಮಾಡ್ರಿ ಇನ್ನು!

ರಮಾನಂದ:— ಮತ್ತೆ ಬಚ್ಚಲುಮನೆ? ಅದು ಹ್ಯಾಗಿದೆ?

ಅಲಕಾ:— ಅಯ್ಯೋ, ಅದೂ ಚೆನ್ನಾಗಿದೆ! ಅದರಲ್ಲಿ ಬಚ್ಚಲೂ ಇದೆ—

ರಮಾನಂದ:— ಓ, ಬಚ್ಚಲುಮನೆಯಲ್ಲಿ ಬಚ್ಚಲೂ ಇದೆ! ಅಲ್ಲವೆ?

ಅಲಕಾ:— ಅರ್ಥಾತ್, ಇದ್ದೇ ಇದೆ!

ರಮಾನಂದ:— ಅದು ಬಹಳ ಮಹತ್ವದ್ದು! ಸರಿ, ಏನೇನು ಇದ್ದ ಹಾಗಾಯ್ತು? ಬಚ್ಚಲುಮನೆಯಲ್ಲೊಂದು ಬಚ್ಚಲು, ಎರಡು ಮಲಗುವ ಕೋಣೆ, ಒಂದು ಅಡಕಲು ಕೋಣೆ, ದನಕ್ಕೆ ದಡ್ಡಿ, ಕಟ್ಟಿಗೆಗೆ ಕೊಟ್ಟಡಿ, ಇದರ ಹೊರತಾಗಿ ತೋಟ—ಬಯಲು ಜಾಗಾ ಸಹಿತ. ಇದೆಲ್ಲ ಅಂದರೆ ತೀರ ಕಡಿಮೆಯೇನೂ ಅಲ್ಲ. (ಹೆಂಡತಿಗೆ) ನೀನು ಆಟ್ಟದ ಮೇಲೆ ಹೋದಾಗ, ನಾನು ವಿಚಾರ-ಪೂರ್ವಕವಾಗಿದೆ—ನಿನ್ನ ತಂದೆ-ತಾಯಿ ಅಂದರೆ ನನಗೇನು ಬೇರೆ ಅಲ್ಲ. ನಿನ್ನಕ್ಕ—ಮಕ್ಕಳು—ಒಂದು ವೇಳೆ ಬಂದರೂ ಸಾಕಾಗುವಷ್ಟು ಕೋಣೆ ಇವೆ. ಇದೂ ಅಲ್ಲದೆ, ನಾವು ಮುಂದಿನ ಯೋಜನೆಯನ್ನೂ ಮಾಡಬೇಡವೆ? ಒಂದಿಲ್ಲೊಂದು ದಿನ ಮುಪ್ಪು ನಮಗೆ ಬರೋದೇ! ಆ ಕಾಲಕ್ಕೆ ಇಂಥ ಶಾಂತಮನೆ ಇರುವದೊಳ್ಳೆಯದು! (ಅಲಕಾಬಾಯಿಗೆ) ನೀವೆಷ್ಟು ಹೇಳಿದಿರಿ?—ಮೂರು ಸಾವಿರ—ಅಲ್ಲವೆ?

ಕೃಷ್ಣಾ:— ಏನು ನಡೆಯಿಸಿದ್ದೀರಿದು?

ರಮಾನಂದ:— ಇದೆಲ್ಲಾ ನಿನ್ನ ಪ್ರೀತಿಗಾಗಿ! (ಅಲಕಾಬಾಯಿಗೆ) ಎಷ್ಟು? ಮೂರು ಸಾವಿರವೇ?

ಅಲಕಾ:— ಹೌದು! ಮೂರು ಸಾವಿರಕ್ಕೆ ಒಂದು ದುಗ್ಗಾಣಿ ಕಡಿಮೆ ಇಲ್ಲ; ಅದನ್ನೂ ನಗದು ಕೊಡಬೇಕು!

ರಮಾನಂದ:— ಅದರ ಬಗ್ಗೆ ನನ್ನ ತಕರಾರಿಲ್ಲ. ಸರಿ, ಮಾತು ಒಪ್ಪಿತು!

(ಚಿಕ್ಕುಬುಕ್ಕು ಹೊರಗೆ ತೆಗೆಯುತ್ತಾನೆ.)

ಕೃಷ್ಣಾಬಾಯಿ:— ಇನ್ನುಳಿದ ವಿಷಯಗಳನ್ನು ನಾವು ಆಲೋಚಿಸಬೇಡವೆ?

ರಮಾನಂದ:— ಏನೂ ಕಾರಣವಿಲ್ಲ. (ಅಲಕಾಬಾಯಿಗೆ) ನೀವು ಹೇಳಿದ ಬೆಲೆಗೆ ನಾನು ಒಪ್ಪಿದೆ. ಹೆಚ್ಚು ಕಡಿಮೆ ಕೇಳಲಿಲ್ಲ. ಆದರೆ ನನ್ನದೊಂದು ಕೋರಿಕೆಯನ್ನು ನೀವು ಪೂರಯಿಸಬೇಕು: ಆ ಚಿತ್ರವೊಂದನ್ನು ನೀವು ನನಗೆ ಕೊಟ್ಟುಬಿಡಬೇಕು: ನೀವಿಬ್ಬರೂ ಆಟ್ಟದಮೇಲೆ ಹೋದಾಗ ಆದೇ ನನಗೆ ಜೊತೆಯಾಗಿತ್ತು. ಅದರದೇನಾದರೂ ಬೆಲೆ ಇದ್ದರೆ—

ಅಲಕಾ:— ಬೆಲೆಯ ಪ್ರಶ್ನೆ ಇಲ್ಲ!

ರಮಾನಂದ:— ಅದೇನಿಲ್ಲ, ನಿಮ್ಮದೊಂದು ನೆನಪು!

ಅಲಕಾ:— ಆಗಲಿ, ಇಷ್ಟು ಪ್ರೀತಿಯಿಂದ ಕೇಳ್ತಿರಿ. ನೀವು ಅದನ್ನಿಟ್ಟುಕೊಳ್ಳಬಹುದು!

ರಮಾನಂದ:— ನಿಮ್ಮಿಂದ ನಾನು ಉಪಕೃತ! ಸರಿ, ತಾವು ಪಾವತಿಯನ್ನು ಬರೆದುಕೊಡುವಿರಾ? ಖರೀದಿಪತ್ರ ಇಂದು ಮಧ್ಯಾಹ್ನ ಮಾಡಿಬಿಡೋಣ! ಇಂದೇನು ಇಪ್ಪತ್ತುಮೂರಲ್ಲವೇ ತಾರೀಖು?

ಅಲಕಾ:— ಅಲ್ಲ, ಇಪ್ಪತ್ತೊನಾಲ್ಕು.

ರಮಾನಂದ:— ಅದರೇನಾಯಿತು? ಪಾವತಿಯನ್ನು ನಿನ್ನೆಯ ತಾರೀಖಿಗೇ ಬರೆಯಿರಿ!

ಅಲಕಾ:— ಅದೇನದು?

ರಮಾನಂದ:— ಒಂದು ದಿನ ಹೆಚ್ಚೇನು, ಕಡಿಮೆಯೇನು?

ಅಲಕಾ:— ಆಗಲಿ, ನಿಮ್ಮಂತೆಯೆ ಆಗಲಿ. (ಬರೆಯುತ್ತಾಳೆ.)

[ಅಲಕಾಬಾಯಿ ಪಾವತಿಯನ್ನು ಕೊಡುತ್ತಾಳೆ. ರಮಾನಂದರಾಯ ಚಕ್ಕು ಕೊಡುತ್ತಾನೆ.]

ಅಲಕ:— ತಮ್ಮುಪಕಾರ ಸ್ಮರಿಸ್ತೇನೆ!

ರಮಾನಂದ:— ಇದು ನನ್ನ ಹೆಸರಿನ ಕಾರ್ಡು. ಹೊರಡತೇವೆ ಇನ್ನು. ಓ, ಒಂದು ಮಾತನ್ನು ಕೇಳುವುದುಳಿಯಿತು. ತಾವು ನಾಳೆ ಬೆಳಿಗ್ಗೆ ಮನೆಯನ್ನು ತೆರವು ಮಾಡಬಹುದಲ್ಲ?

ಅಲಕಾ:— ಏನು, ನಾಳೆ? ಇಷ್ಟು ಬೇಗ?

ರಮಾನಂದ:— ಬೆಳಿಗ್ಗೆ ಆಗದಿದ್ದರೆ ಸಾಯಂಕಾಲದೊಳಗಾಗಿ ಮಾಡಿದರೂ ಪರವಾ ಇಲ್ಲ!

ಅಲಕಾ:— ಆಗಲಿ, ಸಾಯಂಕಾಲದೊಳಗಾಗಿ ತೆರವು ಮಾಡ್ತೇನೆ. ಇಷ್ಟಕ್ಕೂ ನಮಸ್ಕಾರ. ಬರ್ತೀರಾ. ....

ಕೃಷ್ಣಾಬಾಯಿ:— ನಮಸ್ತೇ!

ರಮಾನಂದ:— ಎಲಾ, ಆ ಚಿತ್ರ ಒಂದು ಒಯ್ಯುವದುಳಿಯಿತು. (ಅದನ್ನು ತೆಗೆಯುತ್ತಾನೆ) ಆಹಾಹಾ! ಎಷ್ಟು ಸುಂದರವಾಗಿದೆ?

(ಇಬ್ಬರೂ ಹೊರಡುತ್ತಾರೆ. ಹೋಗುವಾಗಲೆ)

ಕೃಷ್ಣಾಬಾಯಿ:— ಅಲ್ಲ, ಇದೇನು ಮಾಡಿದಿರೀ ಅಂತ....

ರಮಾನಂದ:— ಈಗ ನಡಿ .... ಮನೆಗೆ ಹೋದ ಮೇಲೆ ಎಲ್ಲಾ ವಿಚಾರಾನೂ ಹೇಳತೀನಿ!

ಬ್ರಹ್ಮಸೂತ್ರ-ಭಾಷ್ಯಗಳು

ಶ್ರೀ. ಚಿದಿರೆಮಂತದ ವೀರಭದ್ರಶಾಸ್ತ್ರಿ
ವೇದ-ಕಾವ್ಯ-ಸ್ಮೃತಿತೀರ್ಥ, ಧರ್ಮಾಚಾರ್ಯ, ವಿದ್ಯಾನಿಧಿ

ಭಾರತೀಯ ಸುತಿಕ್ಷಿತರಲ್ಲಿ 'ಬ್ರಹ್ಮಸೂತ್ರ ಭಾಷ್ಯ'ದ ಹೆಸರನ್ನು ಕೇಳದವರು ವಿರಳರು. ನಮ್ಮ ಆಧ್ಯಾತ್ಮಿಕ ಜೀವನವಿಕಾಸದ ಕೊನೆಯ ರೇಷೆಯನ್ನು ಬರೆದು ತೋರಿಸುವ ಗ್ರಂಥವೆಂದರೆ ಶ್ರೀವೇದವ್ಯಾಸರ ಈ ಸೂತ್ರಸಂಗ್ರಹ. ಈ ಸೂತ್ರಗಳ ವಿಚಾರವನ್ನು ಸಂಪೂರ್ಣವಾಗಿ ತಿಳಿದವರು ನಮ್ಮಲ್ಲಿ ಎಷ್ಟು ಜನರು?

ಅವತಾರಿಕೆ:— ಭಾರತೀಯರ ಸಂಸ್ಕೃತಸಾಹಿತ್ಯದಲ್ಲಿಯ ಯಾವ ಭಾಗವನ್ನವಲೋಕಿಸಿದರೂ ವಿಪುಲವಾದ ವಿಜ್ಞಾನ-ಸಂಪತ್ತು ಕಾಣಿಸುವುದೆಂಬುದು ನಿರ್ವಿವಾದ. ತರ್ಕ-ವ್ಯಾಕರಣ-ಕಾವ್ಯಗಳಲ್ಲಿ ಹೊರತು ಮಿಕ್ಕಾದ ಶಾಸ್ತ್ರವಾಙ್ಮಯವನ್ನುಕುರಿತು, ಸಂಸ್ಕೃತದಲ್ಲಿ ಸಾಮಗ್ರಿಯೆಷ್ಟಿದೆಯೋ ಸಾಮಾನ್ಯರಿಗೆ ಗೊತ್ತಿಲ್ಲವು. ವೇದಗಳು, ಆಗಮಗಳು, ಉಪನಿಷತ್ತುಗಳು, ಪುರಾಣಗಳು, ಇತಿಹಾಸಗಳು, ದರ್ಶನಗಳು, ಧರ್ಮಶಾಸ್ತ್ರಗಳು, ಅರ್ಥ-ಕಾಮಶಾಸ್ತ್ರಗಳು ಮೊದಲಾದುವುಗಳಲ್ಲಿ, ಒಂದೊಂದೇ ಒಂದು ಮಹಾಸಾಗರದಂತೆ ಅಪಾರವಾಗಿದೆ. ಅದರೊಳಗೂ ಶಾಖಾಭೇದಗಳು, ತತ್ತ್ವಭೇದಗಳು, ಗದ್ಯ-ಪದ್ಯಾತ್ಮಕಗಳು, ಸೂತ್ರಾತ್ಮಕಗಳು ಮುಂತಾಗಿ ಒಂದೊಂದು ವಿಷಯಕ್ಕೆ ಸಂಬಂಧಪಟ್ಟ ವಾಙ್ಮಯವೇ ಹಲವು ಬಗೆಯಾಗಿದೆ. ಸಂಸ್ಕೃತವನ್ನು ಮೃತಭಾಷೆಯೆಂದು (ಶಾಂತಂ ಪಾಪಂ!) ಪರಿಹಾಸಿಸುವ ವಿದೇಶೀಯ ಭಾವುಕರ ವಿಪರೀತ ಜ್ಞಾನವು ಹೇಗಿದ್ದರೂ, ಪ್ರಪಂಚದಲ್ಲಿ ಪ್ರಧಾನವಾದ ಸಕಲಸಾಹಿತ್ಯಸಂಘಗಳೂ, ನೂರುಗಟ್ಟಲೆ ಸಂಸ್ಕೃತ ಗ್ರಂಥಗಳನ್ನು ಪ್ರಕಟಿಸುತ್ತಲೇ ಇವೆ. ಭಾರತದ ಪ್ರಸಿದ್ಧ ಗ್ರಂಥಾಲಯಗಳಲ್ಲಿ ಅಮುದ್ರಿತಗಳಾದ ಸಾವಿರಾರು ಸಂಸ್ಕೃತ ಪುಸ್ತಕಗಳು ಮೂಲೆಗುಂಪಾಗಿರುವುವಲ್ಲದೆ, ಪ್ರತಿವರ್ಷದಲ್ಲಿಯೂ ಸಾವಿರಾರು ಸಂಸ್ಕೃತ ಗ್ರಂಥಗಳು ಲಭಿಸುತ್ತಲೇ ಇವೆ. ಈಗ ಯುಗಾಂತವಾದರೂ ಸಂಸ್ಕೃತ ಭಾಷೆಗೆ ಅಂತವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ, ಸಾಧಾರಣವಾಗಿ ಸಂಸ್ಕೃತ ವಾಙ್ಮಯದೊಡನೆ ಅಕ್ಷರಾಸ್ಯರೂ ಪರಿಶೋಧಕರೂ ಆದ ಪೌರವರಿಗೆ ನಿತ್ಯಜೀವಿತ-ಸಂಬಂಧವುಂಟಾಗಿ, ಅನೇಕ ಅಂಶಗಳನ್ನು ಕುರಿತು ಅಭಿನವ-ಪದ್ಧತಿಯಂತೆ ಆಲೋಚಿಸುವುದು ಆಚಾರವಾಗಿಬಿಟ್ಟಿದೆ.

ಸೂತ್ರಗಳು:— ಸೂತ್ರಶಬ್ದಕ್ಕೆ ಹಲವು ಅರ್ಥಗಳಿದ್ದರೂ, ಇಲ್ಲಿ ನಮಗೆ ಪ್ರಸ್ತುತವಾದುದು ಸಂಸ್ಕೃತ ಭಾಷೆಯಲ್ಲಿ ಸೂತ್ರನಿಬದ್ಧಗಳಾದ ಗ್ರಂಥಗಳು ನಾತ್ರವೇ! ಸೂತ್ರವನ್ನು ಸಾಧಾರಣವಾಗಿ ಸಣ್ಣಮಾತೆಂದು ಹೇಳಬಹುದು. ಇದರಲ್ಲಿ ಸಾಧ್ಯವಾದಮಟ್ಟಿಗೆ ಅಕ್ಷರಗಳು ಸ್ವಲ್ಪವಾಗಿಯೂ, ಅರ್ಥವು ಸಂದೇಹರಹಿತವಾಗಿಯೂ ಇರಬೇಕು. ಮುಖ್ಯವಾದ ಅರ್ಥವೆಲ್ಲವನ್ನು ಹೇಳತಕ್ಕುದಾಗಿಯೂ, ಅನರ್ಥದೋಷಾದಿಗಳಿಲ್ಲದುದಾಗಿಯೂ ಇರಬೇಕು. ಗಂಭೀರವಾಗಿ ವಿಚಾರಿಸತಕ್ಕವರಿಗೆ ಅಮೋಘಗಳಾದ ಅನೇಕಾರ್ಥಗಳು ಗೋಚರವಾಗುವಂತಿರಬೇಕು. ಇಂತಹ ಅದ್ಭುತವಾದ ರಚನೆಯನ್ನು ಸೂತ್ರವೆಂದು ಹೇಳಲಾಯಿತು.

"ಅಲ್ಪಾಕ್ಷರಮಸಂದಿಗ್ಧಂ, ಸಾರವದ್ವಿಶ್ವತೋಮುಖಂ |
ಅಸ್ತೋಭಮನವದ್ಯಂ ಚ, ಸೂತ್ರಂ ಸೂತ್ರವಿದೋ ವಿದುಃ ||"

ಇವು ಗದ್ಯ (ರಚನ) ದಲ್ಲಿಯೇ ಇರುವುದು ಸರ್ವಪ್ರಸಿದ್ಧವಾಗಿದೆ. (ಆದರೆ 'ಈಚೆಗೆ ವಾತೂಲನಾಥ ಸೂತ್ರಂ' ಎಂಬ ಪ್ರಾಚೀನಗ್ರಂಥವು ಶ್ಲೋಕಬದ್ಧವಾಗಿರುವುದು ಗೋಚರವಾಗಿದೆ) ಇಂತಹ ಸೂತ್ರವಾಙ್ಮಯವು ಸಂಸ್ಕೃತದಲ್ಲಿಯೇ ಹೊರತು ಬೇರೊಂದು ಯಾವ ಭಾಷೆಯಲ್ಲಿಯೂ ಇಲ್ಲ. ಇದು ಈ ದೇವಭಾಷೆಯಲ್ಲಿಯ ಸಮಾಸವೈಭವವೆಂದು ಹೇಳಬಹುದು. ವ್ಯಾಕರಣಶಾಸ್ತ್ರಾನುಸಾರವಾಗಿ, ಅನೇಕ ಶಬ್ದಗಳನ್ನು ಒಂದು ಕಡೆ ಕೂಡಿಸುವುದು ಸಮಾಸವೆನಿಸುವುದು. ಕನ್ನಡ ದೊದಲಾದ ದೇಶಭಾಷೆಗಳಲ್ಲಿ, ನಾಲ್ಕಾರು ಶಬ್ದಗಳಿಗಿಂತಲೂ ಹೆಚ್ಚಿನ ನುಡಿಗಳನ್ನು, ಒತ್ತಟ್ಟಿಗೆ ವಿಭಕ್ತಿಗಳಿಲ್ಲದಂತೆ ಸೇರಿಸುವುದು ಸಾಧ್ಯವೇ ಇಲ್ಲ. "ಅಗಳ್ ಶ್ರೀಗುರುಪಾದವಾರಿಪರಿಷೇಕಾನಂದಸಮ್ಮೋಹಿತರ್" ಮುಂತಾದುವು ಕನ್ನಡಕಾವ್ಯಗಳಲ್ಲಿ ಪ್ರಯೋಗಿಸಲ್ಪಟ್ಟರೂ ಸಂಸ್ಕೃತ ಸಮಾಸಗಳೇ ಆಗಿರುವುವು. "ಏಮೊಗದ ದೊರೆನುಗುವ" (ಕುಮಾರಸ್ವಾಮಿ) ಎಂಬೀ ಕನ್ನಡದ ಸಮಾಸವೇ ಸಾಧಾರಣವಾಗಿ ದೊಡ್ಡದು. ಸಂಸ್ಕೃತದಲ್ಲಿ ಯಾದರೆ ನಿವಗಂಗೆಯ ಜಲಪ್ರಪಾತಕ್ಕಿಂತಲೂ ಉದ್ದವಾದ ಸಮಾಸವನ್ನು ಸುಲಭವಾಗಿ ಹೆಣೆಯಬಹುದು. ಅದು ಸಂಸ್ಕೃತ ಭಾಷೆಯಲ್ಲಿಯ ವಿಲಕ್ಷಣ ಮಹತ್ತ್ವವೆಂಬುದು ಸರಿಯಷ್ಟೆ!

ಆದರೆ ಕಂಠಸ್ಥಮಾಡುವುದಕ್ಕೆ ಶ್ಲೋಕಗಳು ಹೆಚ್ಚು ಅನುಕೂಲ್ಯವುಳ್ಳವಾಗಿದ್ದರೂ ಅವುಗಳಲ್ಲಿ ಛಂದೋನಿಯಮವಿರುವುದರಿಂದ, ಆಗಾಗ ಅಧಿಕಪದಗಳನ್ನು ಪ್ರಯೋಗಿಸಬೇಕಾಗುವುದು. ಸೂತ್ರದಲ್ಲಿ ಬೇಕಾದಷ್ಟು ಪದಗಳನ್ನು ಮಾತ್ರವೇ ಕೂಡಿಸಬಹುದು. ಆದುದರಿಂದ ಶಾಸ್ತ್ರನಿರ್ಣಯಕ್ಕೆ ಈ ಸೂತ್ರಗ್ರಂಥಗಳು ಬಹಳ ಉಪಯುಕ್ತವಾದುವೆಂದು ಎಣಿಸಲಾಗಿದೆ. ಇವನ್ನೂ ಸುಲಭವಾಗಿ ಕಂಠಗತಮಾಡಬಹುದು.

ಸಂಸ್ಕೃತದಲ್ಲಿ ಮೊಟ್ಟಮೊದಲಿನ ಸೂತ್ರ ಗ್ರಂಥವಾವುದೊ ನಿರ್ಣಯಿಸುವುದು ದುಸ್ಸಾಧ್ಯವಾಗಿದೆ. ವಿವಿಧ ಶಾಸ್ತ್ರಗಳಿಗೆ ಸೇರಿದ ಸೂತ್ರಗ್ರಂಥಗಳು ಶತಾಧಿಕವಾಗಿ ಇಂದಿಗೆ ಉಪಲಬ್ಧವಾಗಿ ವ್ಯವಹಾರದಲ್ಲಿವೆ. ಬ್ರಹ್ಮಸೂತ್ರಗಳು, ಶಿವಸೂತ್ರಗಳ, ಶಕ್ತಿಸೂತ್ರಗಳು, (ವೇದಾಂತಶಾಸ್ತ್ರ) ಕಲ್ಪಸೂತ್ರಗಳು, ಧರ್ಮಸೂತ್ರಗಳು, ಅರ್ಥಸೂತ್ರಗಳು, ಗೃಹ್ಯಸೂತ್ರಗಳು, ನ್ಯಾಯ, ವ್ಯಾಕರಣ, ವೈಶೇಷಿಕ, ಸಾಂಖ್ಯಯೋಗ, ವಿಮಾಮಾಂಸಾ, ಶುಲ್ಬ ಶಾಸ್ತ್ರಗಳು, ಕಾಮಸೂತ್ರಗಳು, ಭಕ್ತಿಸೂತ್ರಗಳು ಎಂಬುವು ಪ್ರಸಿದ್ಧವಾಗಿವೆ. ಇವಲ್ಲದೆ ಅನೇಕ ಪ್ರಾಚೀನ ಗ್ರಂಥಗಳಲ್ಲಿ ಹೆಸರ್ಗೊಳ್ಳಲ್ಪಟ್ಟ ಭಿಕ್ಷುಸೂತ್ರಗಳೂ, ನಟಸೂತ್ರಗಳೂ, ಘಟ್-ಸೂತ್ರಗಳೂ, ವೃಷ್ಟಿಲಂಬನ. ಗಣಿತ-ಗಾಂಧರ್ವಾದಿ ಶಾಸ್ತ್ರಗಳಿಗೆ ಸೇರಿದ ಸೂತ್ರಗ್ರಂಥಗಳೂ, ಇನ್ನೂ ಯಾವ ವಿದ್ವಾಂಸರ ಕಣ್ಣಿಗೆ ಬಿದ್ದಂತೆ ಗೊತ್ತಾಗಿಲ್ಲ. ಈ ಗ್ರಂಥಗಳೆಲ್ಲವೂ ಅಧ್ಯಾಯ-ಪಾದಗಳಿಂದ ವಿಭಾಗಿಸಲ್ಪಟ್ಟು, ಆಯಾ ವಿಷಯಗಳನ್ನು ಚರ್ಚಿಸತಕ್ಕುವಾಗಿವೆ. ಧರ್ಮ-ವಿಮಾಮಾಂಸಾಸೂತ್ರಗಳು "ಅಥಾತೋ ಧರ್ಮ ಜಿಜ್ಞಾಸಾ" ಎಂತಲೂ, ಕಾಮಸೂತ್ರಗಳು "ಅಥಾತಃ ಕಾಮಜಿಜ್ಞಾಸಾ" ಎಂತಲೂ ಆರಂಭವಾಗುವುವು. ಒಮ್ಮೊಮ್ಮೆ "ಧರ್ಮವ್ಯಾಖ್ಯಾಸ್ಯಾಮಃ" ಎಂಬ ಪಕ್ಕಿಯಲ್ಲಿಯೂ ಇರುವುದುಂಟು. ಪಾಣಿನಿ ಮಹರ್ಷಿಯ ವ್ಯಾಕರಣಸೂತ್ರಗಳು (ಅಷ್ಟಾಧ್ಯಾಯ) ಮಾತ್ರ "ವೃದ್ಧಿರಾದೈಚ್" ಎಂದು ಆರಂಭವಾಗಿ "ಆ ಇ ಉಣ್" ಎಂಬ ಪದಿನಾಲ್ಕು ಮಾಹೇಶ್ವರಸೂತ್ರಗಳ ಆದ್ಭುತಗಳಾದ ಪರಿಭಾಷೆಗಳಿಂದ ರಚಿಸಲ್ಪಟ್ಟಿದೆ. ಎರಡನೆಯ ಅರ್ಥಕ್ಕೆ ಲೇಶವೂ ಸಂಬಂಧವಿಲ್ಲದಂತೆ, ಮಹಾ ಪ್ರತಿಭೆಯಿಂದ ಅವಿಷ್ಕೃತಗಳಾದ ಈ ಪಾಣಿನಿಸೂತ್ರಗಳಿಗೆ ಸಮಾನವಾದ ಸೂತ್ರಗಳು ಸಂಸ್ಕೃತದಲ್ಲಿಯೂ ಬೇರೆ ಇಲ್ಲ.

ಬಹ್ಮಸೂತ್ರಗಳು:— ಸಮಸ್ತ ಶಾಸ್ತ್ರಗಳಲ್ಲಿ ವೇದಾಂತ ಶಾಸ್ತ್ರವು ಶಿರೋಭೂಷಣವಾದುದರಿಂದ, ಇದರ ಮಹತ್ತ್ವ ಘನವಾದುದಾಗಿದೆ. ಎಂತಹ ಮಹಾನುಭಾವನಾದರೂ ಜೀವಿತಾಂತದಲ್ಲಿ ವೇದಾಂತ ವಿಚಾರದಲ್ಲಿ ಬೀಳದಿರಲಾರನು. ಸಾಮಾನ್ಯ ಪ್ರಜೆಗಳಲ್ಲಿಯೂ ಕಾವ್ಯಶಾಸ್ತ್ರದ ಅನಂತರ ವೇದಾಂತಶಾಸ್ತ್ರದ ಪ್ರಚಾರವೇ ಬಾಹುಳ್ಯವಾಗಿದೆ. ಇನ್ನು ಬ್ರಹ್ಮಜ್ಞಾನಕ್ಕಾಗಿ ತಮ್ಮ ಜೀವಿತವನ್ನು ಅರ್ಪಿಸಿದ ಮಹರ್ಷಿಗಳೂ ಆಚಾರ್ಯರೂ ಮುಂತಾದ ಮಹಾನುಭಾವರ ವೇದಾಂತಪ್ರೇಮವನ್ನು ಕುರಿತು ಬೇರೆ ಹೇಳಬೇಕಾಗಿಲ್ಲ. ಬ್ರಹ್ಮವೆಂದರೆ ದೊಡ್ಡದೆಂದು ಅರ್ಥವು. ಅದು ಇಷ್ಟಷ್ಟು ದೊಡ್ಡದಲ್ಲ. ಆನೆಗಿಂತಲೂ, ಹಿಮಾಲಯಕ್ಕಿಂತಲೂ, ಜಂಬುದ್ವೀಪಕ್ಕಿಂತಲೂ, ವಿಶ್ವಕ್ಕಿಂತಲೂ, ಪಂಚಮಹಾಭೂತಗಳಿಗಿಂತಲೂ ದೊಡ್ಡದಾದ ಈ ಬ್ರಹ್ಮವನ್ನು ಕುರಿತು ತಮಗೆ ಎಷ್ಟು ಮಾತ್ರ ಗೊತ್ತಿದ್ದರೂ ಅನುಭವವುಂಟಾದರೂ ಪಂಡಿತರು, ಆಚಾರ್ಯರು, ಅದರಲ್ಲಿ ಮಹರ್ಷಿಗಳು ಹರ್ಷ ಮಾಡದೆ ಬಿಡುವುದಿಲ್ಲ. ಮಹರ್ಷಿಗಳಿಗೆಲ್ಲ ಮುಕುಟಾಯಮಾನನಾದ ಬಾದರಾಯಣನು* ಬ್ರಹ್ಮವಿಚಾರವನ್ನು ಹೃದಯದಲ್ಲಿ ಮಾತ್ರವೇ ಮಾಡಿಬಿಡದೆ ಅದಕ್ಕೆ ಗ್ರಂಥಸ್ವರೂಪವನ್ನು ಕಲ್ಪಿಸಿದನು. ಅದುವೇ ಬ್ರಹ್ಮಸೂತ್ರಗಳೆಂಬ ಮಹಾಕೃತಿ. ಆಗಿನ ಕಾಲದಲ್ಲಿರುವ ವೇದಾಗಮ ಪುರಾಣೋಪನಿಷತ್ತುಗಳನ್ನೆಲ್ಲ ಸಾಕಲ್ಯವಾಗಿ ಅವಲೋಕನ ಮಾಡಿದ ಮಹಾಜ್ಞಾನಿಯಾದ ವ್ಯಾಸನು' ಈ ಬ್ರಹ್ಮಸೂತ್ರಗಳಿಗೆ ಕರ್ತನಾಗಿರುವುದು ಭಾರತೀಯರ ಭಾಗ್ಯವೆನಬಹುದು.

ಇದರಲ್ಲಿ ನಾಲ್ಕು ಅಧ್ಯಾಯಗಳೂ, ಅವುಗಳಲ್ಲಿ ನಾಲ್ಕು ಪಾದಗಳೂ ಉಂಟು. ಈ ೧೬ ಪಾದಗಳಲ್ಲಿ ಒಟ್ಟಿಗೆ ೫೫೫ ಸೂತ್ರಗಳಿವೆ. ಇವುಗಳಲ್ಲಿ ಎರಡಕ್ಷರ ಮೊದಲ್ಗೊಂಡು ಮುನ್ನೂತ್ತಕ್ಷರಗಳವರೆಗೆ ಸಂಖ್ಯೆಯಿದೆ. ಒಂದೊಂದು ವಿಷಯವನ್ನು ಆಲೋಚಿಸಿ ನಿರ್ಣಯಿಸುವುದಕ್ಕೆ ಹಲವು ಸೂತ್ರಗಳು ಬೇಕಾಗುವುವು. ಈ ಸ್ಥಲಕ್ಕೆ ಅಧಿಕರಣವೆಂದು ಹೆಸರು. ಸಂಸ್ಕೃತ ಭಾಷೆಯಲ್ಲಿ ಸಹಜವಾಗಿ ಅಧಿಕರಣವೆಂದರೆ "ಕೋರ್ಟು" (ಕಚ್ಚೇರಿ) ಎಂಬ ಅರ್ಥವುಂಟು. ಶಾಸ್ತ್ರವಿಷಯಗಳು ಕೂಡ "ವಿಷಯ, ವಿಶಯ, ಪೂರ್ವಪಕ್ಷ, ಉತ್ತರಪಕ್ಷ, ನಿರ್ಣಯ" ಎಂಬ ಐದು ವಿಧಗಳಿಂದ ಪರೀಕ್ಷಿಸಲ್ಪಟ್ಟು ಅಧಿಕರಣವೆನಿಸಲ್ಪಡುವುದು.

"ವಿಷಯೋ ವಿಶಯಶ್ಚೈವ, ಪೂರ್ವಪಕ್ಷಸ್ತಥೋತ್ತರಂ।
ನಿರ್ಣಯಶ್ಚೇತಿ ಪಂಚಾಂಗಂ, ಶಾಸ್ತ್ರೇಧಿಕರಣಂ ಸ್ಮೃತಂ॥"

ಈ ಅಧಿಕರಣಗಳ ಒಟ್ಟು ಸಂಖ್ಯೆ ೧೯೨ ಉಂಟು. (ಈ ಸಂಖ್ಯೆಗಳ ವಿಷಯವಾಗಿ ಮತಭೇದವಿದೆ). "ದೇವರುಂಟೋ ಇಲ್ಲವೋ?" ಎಂಬ ಎರಡು ಪ್ರಶ್ನೆಗಳನ್ನೇ ನಮ್ಮ ಆಧುನಿಕ ಸೋದರರು ಹಾಕಿಕೊಳ್ಳುತ್ತಿದ್ದಾರೆ. ಆದರೆ ನಮ್ಮ ಪೂರ್ವಿಕರು ನೂರಾಜೊಂಬತ್ತೆರಡು ಪ್ರಶ್ನೆಗಳನ್ನು ಹಾಕಿಕೊಂಡು ಸಮಾಧಾನವನ್ನು ಹೇಳಿದ್ದಾರೆಂಬುದು ಅನೇಕರಿಗೆ ಗೊತ್ತಿಲ್ಲ. ಪರಾವ್ಪರವಾದ ಬ್ರಹ್ಮವುಂಟೆಂತಲೇ ವ್ಯಾಸಮಹರ್ಷಿಯು ಅದ್ಭುತಗಳಾದ ಪ್ರಮಾಣಗಳಿಂದ, ಯುಕ್ತಿಗಳಿಂದ ಸಮಂಜಸವಾಗಿ ನಿರ್ಣಯಿಸಿದ್ದಾನೆ.

* ಬಾದರಾಯಣ, ವೇದವ್ಯಾಸ ಎಂಬ ಎರಡು ಹೆಸರುಗಳುಳ್ಳವನೂ ಒಬ್ಬನೇ ಎಂದು ಸನಾತನರ ವಾದವಾಗಿದೆ. ಅಲ್ಲವೆಂದು ಆಧುನಿಕರ ವಾದವುಂಟು. ಅದು ಪ್ರತ್ಯೇಕವಾಗಿ ಹೇಳತಕ್ಕುದು. ಲೇ.

ವ್ಯಾಸನು ಬ್ರಹ್ಮಸೂತ್ರಗಳಲ್ಲಿ ಬಹಳ ಸಲ (೧-೨-೩೦, ೩-೧-೧೧, ೪-೩-೭, ೪-೪-೧೦) ಬಾದರಿ ಮಹರ್ಷಿಯ ವೇದಾಂತವನ್ನೂ; ಎರಡು ವೇಳೆ (೧-೨-೨೯, ೧-೪-೨೦) ಆಶ್ಮರಥ್ಯನ ವೇದಾಂತವನ್ನೂ; ಒಂದು ಬಾರಿ (೩-೪-೪೪) ಆತ್ರೇಯನ ಮತವನ್ನೂ; ಒಂದು ಪರ್ಯಾಯ (೧-೪-೨೨) ಕಾಶಕೃತ್ಸ್ನನ ಮತವನ್ನೂ; ಮೂರು ಹೊತ್ತು (೧-೪-೩೧, ೩-೪-೪೫, ೪-೪-೬) ಔಡುಲೋಮಿ ಮಹರ್ಷಿಯ ಮತವನ್ನೂ; ಒಂದಾವರ್ತಿ (೩-೧-೯) ಕಾರ್ಷ್ಣಾಜಿನಿಯ ಮತವನ್ನೂ ಉದ್ಧರಿಸಿ ವಿಮರ್ಶನೆ ಮಾಡಿದ್ದಾನೆ. ಶಾಂಡಿಲ್ಯನ ಭಕ್ತಿಸೂತ್ರಗಳಲ್ಲಿಯೂ (೨೨. ಸೂ) ಮಹಾಭಾರತದಲ್ಲಿಯೂ (೧೩-೩೧೯-೫೯) ಮತ್ತೊಬ್ಬ ವೇದಾಂತಸೂತ್ರಕರ್ತನಾದ ಕಾಶ್ಯಪನು ಹೆಸರ್ಗೊಳ್ಳಲ್ಪಟ್ಟಿದ್ದಾನೆ. ಈ ಪ್ರಮಾಣಗಳಿಂದ ವ್ಯಾಸನಿಗಿಂತಲೂ ಪೂರ್ವಕಾಲದಲ್ಲಿ ವೇದಾಂತಶಾಸ್ತ್ರಕರ್ತೃಗಳು ಅನೇಕರಿದ್ದರೆಂದು ನಿಶ್ಚಿತವಾಗಿ ಗೊತ್ತಾಗುತ್ತಿದೆ. ಆದರೆ ಆ ಶಾಸ್ತ್ರವು ಸೂತ್ರಬದ್ಧವಾಗಿದ್ದಿತೋ, ಅವುಗಳಿಗೂ ಬ್ರಹ್ಮಸೂತ್ರವೆಂಬ ಹೆಸರಿದ್ದಿತೋ ಇಲ್ಲವೋ?—ಎಂಬುದನ್ನು ತಿಳಿಯಲು ಇನ್ನೂ ಯುಕ್ತಿಗಳು ದೊರೆತಿಲ್ಲ. ಪಾಣಿನಿ (೪-೩-೧೧೦) ಹೇಳಿದ ಭಿಕ್ಷುಸೂತ್ರವು ವೇದಾಂತಕ್ಕೆ ಸಂಬಂಧಿಸಿದುದೋ ಇಲ್ಲವೋ? ಭಿಕ್ಷುವೆಂದರೆ ಸನ್ಯಾಸಿಗೆ ವೇದಾಂತಶಾಸ್ತ್ರದ ಜರ್ಜರಿಯಲ್ಲದೆ ಮತ್ತೇನು?* ಇಂತಹ ಪ್ರಾಚೀನ ವೇದಾಂತ ತತ್ತ್ವಕರ್ತರು; ಸ್ಕಂದ-ನಂದಿ-ಭೈಗೀಷವ್ಯ- ಭೃಗು- ಗರ್ಗ- ಪರಾಶರ- ಶ್ವೇತ- ಆಸಿತ- ದೇವಲ-ನಾರದ-ಯಾಜ್ಞವಲ್ಕ್ಯಾದಿಗಳು ಹಲವರು ಇದ್ದರೆಂಬುದು ಆಗಮೋಪನಿಷತ್ಪುರಾಣಗಳಿಂದ ಗೊತ್ತಾಗುತ್ತದೆ.

ಯಾವ ಸುಮುಹೂರ್ತದಲ್ಲಿ ವ್ಯಾಸನ ಬ್ರಹ್ಮಸೂತ್ರಗಳು ಹುಟ್ಟಿದುವೋ ಆಗಲಿ, ಇದಕ್ಕುಂಟಾದ ಪ್ರಖ್ಯಾತಿ ಲೊಕೋತ್ತರವಾಯಿತು. ವ್ಯಾಸರಿರುವಾಗಲೇ ಇವು ಗಣನೆಗೆ ಬಂದು ಆದರಪೂರ್ವಕವಾಗಿ ಸಮಾಲೋಚಿಸಲ್ಪಡುತ್ತಿದ್ದವೆನ್ನಬಹುದು. ಬ್ರಹ್ಮವಿಚಾರಕ್ಕೆ ಈ ಸೂತ್ರಗಳು ನೀಡಿದುದೇ ಭಿಕ್ಷೆಯಾಗಿದೆ. ಇದು ಅಂದಿನ ಮಾತಲ್ಲ. ಇಂದಿಗೂ ಪ್ರಪಂಚದಲ್ಲಿ ಇದರೊಡನೆ ಸ್ವಲ್ಪ ಸಮಿಾಪವಾಗಿ ಹೋಲುವ ಗ್ರಂಥವು ಕೂಡ ಹುಟ್ಟಿಲ್ಲವೆಂತಲೂ ಹುಟ್ಟಲಾರದೆಂತಲೂ ನಿಸ್ಸಂದೇಹವಾಗಿ ನಿವೇದಿಸಬಹುದು. ಇದರ ಮೊದಲನೆಯ ಸೂತ್ರ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬುದಾಗಿದೆ.

ಸೂತ್ರವೃತ್ತಿಗಳು:— ಬ್ರಹ್ಮಸೂತ್ರಗಳ ಅರ್ಥವು ವ್ಯಾಸನ ಕಾಲದಲ್ಲಿ ಪ್ರಸಿದ್ಧವಾಗಿರಬಹುದು. ಆದರೆ ಮಹರ್ಷಿಗಳೆಲ್ಲರೂ ಆ ಸೂತ್ರಗಳನ್ನು ಅವಲೋಕಿಸಿದ ಹಾಗೆಲ್ಲವೂ, ಅವು ಕೇವಲ ಈಶ್ವರಪ್ರೇರಣೆಯಿಂದ ಅವಿಷ್ಕೃತಗಳಾಗಿವೆ ಹೊರತು ಸಾಮಾನ್ಯವಲ್ಲವೆಂದು ನಂಬುತ್ತ, ಅವುಗಳ ಗಂಭೀರಾರ್ಥವನ್ನು ಪ್ರಕಟಿಸಹತ್ತಿದರು. ಬರುಬರುತ್ತ ಬ್ರಹ್ಮಸೂತ್ರಗಳಿಗೆ ಅನೇಕ ಸ್ವಾರಸ್ಯಗಳಾದ ಅರ್ಥಗಳು ಹೇಳಲ್ಪಡುತ್ತಿದ್ದುವು. ಅವು ಚಿರಕಾಲ ಉಳಿಯಲೆಂಬ ಭಾವನೆಯಿಂದ ಚಿಕ್ಕ ಚಿಕ್ಕ ಟಿಪ್ಪಣಿಗಳಾಗಿ ಬ್ರಹ್ಮಸೂತ್ರಗಳ ಕೆಳಗೆ ಬರೆಯಲ್ಪಡುತ್ತಿದ್ದುವು. ಇವಕ್ಕೆ 'ವೃತ್ತಿ' ಯೆಂಬ ಹೆಸರುಂಟಾಯಿತು. ಇದೊಂದು ಸಣ್ಣ ಟೀಕೆಯೇ ಸರಿ! ಇದರಲ್ಲಿ ಸೂತ್ರದೊಳಗಿನ ಶಬ್ದಗಳಿಗೆ ಸಂದೇಹವುಂಟಾಗದಂತೆ ಅರ್ಥವು ಬರೆಯಲ್ಪಡುತ್ತಿತ್ತು. ಈ ವೃತ್ತಿಗಳನ್ನು ಸಾಮಾನ್ಯರಲ್ಲದೆ ಮಹರ್ಷಿಗಳೇ ಬರೆಯುತ್ತಿರುವುದರಿಂದ, ಅವುಗಳ ಮಹಾತ್ಮೆಯು ದೊಡ್ಡದಾಯಿತು. ಮೊಟ್ಟಮೊದಲನೆಯ ವೃತ್ತಿಗ್ರಂಥವು ಯಾರಿಂದ ಬರೆಯಲಾಯಿತೋ ಗೊತ್ತಿಲ್ಲವಾದರೂ, ಹಲವರು ಮಹರ್ಷಿಗಳು ಬರೆದಿರಬಹುದೆಂದು ಭಾವಿಸಲವಕಾಶವಿದೆ. ಶ್ರೀಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ, ವೃತ್ತಿಕಾರನಾದ ಉಪವರ್ಷನನ್ನು ಸ್ಮರಿಸಿದ್ದಾರೆ. ಶ್ರೀರಾಮಾನುಜಾಚಾರ್ಯರು ಬ್ರಹ್ಮಸೂತ್ರದ ಶ್ರೀಭಾಷ್ಯದ ಆರಂಭದಲ್ಲಿ "ಬೌಧಾಯನನ ವಿಸ್ತಾರವಾದ ವೃತ್ತಿಯನ್ನನುಸರಿಸಿದ್ದೇನೆ" ಎಂದಿದ್ದಾರೆ.

"ಭಗವದ್ಬೌಧಾಯನಕೃತಾಂ ವಿಸ್ತೀರ್ಣಾಂ ಬ್ರಹ್ಮಸೂತ್ರವೃತ್ತೀಂ ಪೂರ್ವಾಚಾರ್ಯಾಃ ಸಂಚಿಕ್ಷಿಪುಃ। ತನ್ಮತಾನುಸಾರೇಣ ಸೂತ್ರಾಕ್ಷರಾಣಿ ವಾಖ್ಯಾಸ್ಯಂತೇ"

ತ್ರಿವೇಂದ್ರಪುರವರು ಪ್ರಕಟಿಸಿದ 'ಪ್ರಪಂಚಹೃದಯ'ವೆಂಬ ಗ್ರಂಥದಿಂದಲೂ (ಪುಟ ೩೯) ಈ ಬೌಧಾಯನವೃತ್ತಿಗೆ ಕೈಚಕೋಟಿಯೆಂಬ ನಾಮವಿತ್ತೆಂದು ತೋರುವುದು. ರಾಮಾನುಜನು ಕ್ರಿ. ಶ. ೧೧೧ನೆಯ ಶತಾಬ್ದದ ಆರಂಭದಲ್ಲಿ ಇದ್ದವನಾದುದರಿಂದ, ಇಂದಿಗೆ ಒಂಭತ್ತುನೂರು ವರ್ಷಗಳ ಹಿಂದೆ ಬೌಧಾಯನನ ವೃತ್ತಿಯು ಪ್ರಚಾರದಲ್ಲಿದ್ದಂತೆ ಊಹಿಸಬಹುದು. ಆದರೆ ಈಗ ಯಾವ ಗ್ರಂಥಾಲಯದಲ್ಲಾಗಲಿ, ಯಾವ ಪಂಡಿತನ ಪತ್ತರವಾಗಲಿ, ಈ ವೃತ್ತಿಗ್ರಂಥವಿಲ್ಲದುದು ವಿಷಾದಕರವು. ರಾಮಾನುಜನಿಗೆ ಸಮಕಾಲಿಕನಾದ ಶ್ರೀಪತಿ ಪಂಡಿತಾಚಾರ್ಯನು, ಆಗಸ್ತ್ಯ ಮಹರ್ಷಿಯ ಸೂತ್ರವೃತ್ತಿಯನ್ನನುಸರಿಸಿ ಶ್ರೀಕರಭಾಷ್ಯವನ್ನು ಬರೆದಿದ್ದೇನೆಂದು ಸ್ಪಷ್ಟವಾಗಿ ಹೇಳಿದ್ದಾನೆ:

"ಆಗಸ್ತ್ಯಮುನಿಚಂದ್ರೇಣ, ಕೃತಾಂ ವೈಯಾಸಿಕೀಂ ಶುಭಾಂ।
ಸೂತ್ರವೃತ್ತಿಂ ಸಮಾಲೋಕ್ಯ, ಕೃತಂ ಭಾಷ್ಯಂ ಶಿವಂಕರಂ ॥೦೬॥"

ಬೌಧಾಯನನ ವೃತ್ತಿಗೆ ಉಂಟಾದ ಗತಿಯೇ ಆಗಸ್ತ್ಯನ ವೃತ್ತಿಗೂ ಉಂಟಾಗಿದೆ. ಇದನ್ನೂ ಆಧುನಿಕರಾರೂ ನೋಡಿಲ್ಲ. ಇದಕ್ಕೆ ಮುನಿಜಂದ್ರ ವೃತ್ತಿಯೆಂಬ ಹೆಸರಿತ್ತೆಂದು ಗೊತ್ತಾಗಿದೆ. ಈ ವೃತ್ತಿಗ್ರಂಥದ ಪ್ರತಿಯೊಂದನ್ನು ದ್ರಾವಿಡ ದೇಶದ ಪಂಡಿತನೋರ್ವನ ಪತ್ತರ ತಾವು ನೋಡಿರುವುದಾಗಿ, ಪ್ರಾಮಾಣಿಕರಾದ ಪಂಡಿತ ಮಿತ್ರರೊಬ್ಬರು ಹೇಳುತ್ತಿದ್ದಾರೆ. ನಾನೆಷ್ಟು ಯತ್ನಿಸಿದರೂ ಅದರ ದರ್ಶನವಾಗಲಿಲ್ಲ. ಶ್ರೀಪತಿಯು ತನ್ನ ಶ್ರೀಕರ

* ಭಿಕ್ಷುವೆಂದರೆ ಬೌದ್ಧಸಂನ್ಯಾಸಿಯೆಂದು ಇಲ್ಲಿ ಅರ್ಥಮಾಡಲಾಗದು. ಪಾಣಿನಿಯು ಬುದ್ಧನಿಗಿಂತಲೂ ಹಿಂದಿನವನು.

ಭಾಷ್ಯದಲ್ಲಿ (ಚತುಃಸೂ. ೫೫ ಪು.) ದೂರ್ವಾಸೀಯ ವೃತ್ತಿಯಿಂದ ಅನೇಕಾಂಶಗಳನ್ನುಉದ್ಧರಿಸಿ ತೋರಿದ್ದಾನೆ. ಈ ಗ್ರಂಥಭಾಗವು ಕಾಣುವಂತೆ ಬೌಧಾಯಾಗಸ್ತ್ಯರ ವೃತ್ತಿಗಳ ಭಾಗಗಳು ಯಾರಿಂದಲೂ ಉದಾಹರಿಸಲ್ಪಟ್ಟಿಲ್ಲ. ಮೇಲಾಗಿ ದೂರ್ವಾಸ ವೃತ್ತಿಯು ಕೊಂಚ ವಿಪುಲವಾದುದಾಗಿಯೂ ಗದ್ಯಪದ್ಯಾತ್ಮಕವಾದುದಾಗಿಯೂ ಇತ್ತೆಂದು ಶ್ರೀಕರ ಭಾಷ್ಯದಿಂದ ತಿಳಿಯಬಹುದು. ಹದಿನೇಳು ವರ್ಷಗಳ ಹಿಂದೆ ಈ ದೂರ್ವಾಸವೃತ್ತಿಯೆಂಬ ಗ್ರಂಥವನ್ನು ನಾನು ಪ್ರತ್ಯಕ್ಷವಾಗಿ ನೋಡಿ ಪರಿಶಿಸಿದ್ದೆನು. ಆದರೆ ಆಗ ಅದರ ಮಹತ್ತ್ವ ಗೊತ್ತಿಲ್ಲದುದರಿಂದ, ಆ ಗ್ರಂಥರತ್ನವನ್ನು ನನ್ನ ಕೈಯಿಂದಲೇ ಕಳೆದುಕೊಂಡುದಾಯಿತು. ಈ ದೂರ್ವಾಸೀಯ ವೃತ್ತಿಯ ಹತ್ತೆಂಟು ಪ್ರತಿಗಳು ತೆಲುಗುದೇಶದ ಆರಾಧ್ಯರ ಮನೆಗಳಲ್ಲಿ ಬಿದ್ದು ಬೀಳಾಗುತ್ತಿವೆ. ಮೂರು ಪ್ರತಿಗಳ ಸಂಗತಿ ನನಗೆ ಸರಿಯಾಗಿಯೇ ಗೊತ್ತಿದೆ. ಆದರೆ ಅವರು ಪ್ರಕಟಿಸುವುದೂ ಇಲ್ಲ; ಇತರರಿಗೆ ಕೊಡುವುದೂ ಇಲ್ಲ. ಪ್ರಾಚೀನ ಮಹರ್ಷಿಗಳನೇಕರು ರಚಿಸಿದ ಬ್ರಹ್ಮಸೂತ್ರವೃತ್ತಿಗಳು ಕಾಲಗರ್ಭದಲ್ಲಿ ಲಯಹೊಂದಿದರೂ ಈ ದೂರ್ವಾಸನ ವೃತ್ತಿಯೊಂದು ಮಾತ್ರ ಗಟ್ಟಿಯಾಗಿ ಉಳಿದುಬಂದಿದೆ. ಇನ್ನು ಭಾಷ್ಯಕಾರರ ಅನಂತರ, ೧೫ ನೂರು ವರ್ಷಗಳಿಂದಲೂ ಬ್ರಹ್ಮಸೂತ್ರಗಳಿಗೆ ಅನೇಕ ವೃತ್ತಿಗಳೂ ಕಾರಿಕೆಗಳೂ ಹುಟ್ಟಿವೆ. ಆಧುನಿಕ ಪಂಡಿತರಲ್ಲಿಯೂ ಕೆಲವರು ಸೂತ್ರವೃತ್ತಿಗಳನ್ನು ರಚಿಸುತ್ತಲೇ ಇದ್ದಾರೆ. ಆದರೆ ಇವೆಲ್ಲವೂ ಭಾಷ್ಯಗಳ ಅನಂತರ ಹುಟ್ಟಿದುದರಿಂದ ಮಹತ್ತ್ವವನ್ನು ಪಡೆಯಲಿಲ್ಲ.

ಸೂತ್ರಭಾಷ್ಯಗಳು:—ಆರ್ಷಕಾಲವು ಕಳೆದ ಹಾಗೆಲ್ಲ ಬ್ರಹ್ಮಸೂತ್ರಗಳ ಪಠನ ಪಾಠನವು ಕೊಂಚ ವಿಚ್ಛಿನ್ನವಾಗಿರಬಹುದೇನೋ ಎಂದು ಸಂದೇಹವುಂಟಾಗುತ್ತಿದೆ. ಸೂತ್ರಗಳೂ, ಸೂತ್ರವೃತ್ತಿಗಳೂ ಆಗ ಇದ್ದರೂ ವಿಪುಲವಾಗಿ ಅಧಿಕಾರಯುಕ್ತವಾಗಿ ಅದಕ್ಕೆ ವ್ಯಾಖ್ಯಾನವು ಬೇಕಾಗಿ ಬಂದಿತು. ಬ್ರಹ್ಮಸೂತ್ರಗಳಿಗೆ ಸರಿಯಾದ ಪದ್ಧತಿಯಿಂದ (ಎಂದರೆ ಆಯಾ ಅಧಿಕರಣಗಳಲ್ಲಿಯ ಸೂತ್ರಗಳಿಗೆ ಒಳ್ಳೆ ವಾಕ್ಯಗಳಿಂದ) ತಕ್ಕ ಅರ್ಥವನ್ನೂ, ಅದರ ಸಮರ್ಥನಾರ್ಥವಾಗಿ ಉಪನಿಷದಾದಿಗಳಿಂದ ಪ್ರಮಾಣೋಪನ್ಯಾಸವನ್ನೂ, ಪರವಾದಿಗಳ ಆಕ್ಷೇಪಗಳಿಗೆ ಸಮಾಧಾನವನ್ನೂ ವಿವರಿಸುತ್ತ; ಸಿದ್ಧಾಂತ ಪ್ರಯೋಜನಗಳನ್ನು ತಿಳಿಸುತ್ತ; ಉಪಕ್ರಮ ಉಪಸಂಹಾರ ಅಭ್ಯಾಸ ಅಪೂರ್ವತ್ವ ಅರ್ಥವಾದ ಉಪಪತ್ತಿಗಳೆಂಬ ಷಡ್ಲಿಂಗಗಳ ದ್ವಾರಾ ತಾತ್ಪರ್ಯವನ್ನು ತಿಳಿಸಬೇಕಾಗುವುದು. ಇಂತಹ ಸಮರ್ಥವಾದ ರಚನೆಗೆ ಭಾಷ್ಯವೆಂದು ಹೆಸರು.

"ಸೂತ್ರಾರ್ಥೋ ವರ್ಣ್ಯತೇ ಯತ್ರ, ವಾಕ್ಯೈಃ ಸೂತ್ರಾನುಸಾರಿಭಿಃ।
ಸ್ವಪದಾನಿ ಚ ವರ್ಣ್ಯಂತೇ, ಭಾಷ್ಯಂ ಭಾಷ್ಯವಿದೋ ವಿದುಃ ॥"

"ವಿಷಯ ಸಂಶಯ ಪೂರ್ವಪಕ್ಷ ಸಿದ್ಧಾಂತಪ್ರಯೋಜನ
ಸಂಗತಿರೂಪಾಧಿಕರಣ ವಿಶಿಷ್ಟಸ್ಯೇ ಸತಿ, ಸೂತ್ರಾನುಕೂಲ ಶ್ರುತ್ಯಾದಿ ಸಹಲಿಖಿತಪದ
ಪರಿಷ್ಕೃತ ಸೂತ್ರಪದಾಧಿಷ್ಠಾನತ್ವೇ ಸತಿ, ಉಪಕ್ರಮೋಪಸಂಹಾರಾದಿ
ಷಡ್ವಿಧ ತಾತ್ಪರ್ಯ ಲಿಂಗಪ್ರಕಾಶಕತ್ವಂ ಭಾಷ್ಯತ್ವಂ"

—ಶ್ರೀಕರಭಾಷ್ಯೇ (ಪು. ೩)

ಇಂತಹ ಲಕ್ಷಣಗಳುಳ್ಳ ಭಾಷ್ಯವನ್ನು ಬ್ರಹ್ಮಸೂತ್ರಗಳ ಮೇಲೆ ರಚಿಸಬೇಕೆಂದು ಪ್ರಥಮದಲ್ಲಿ ಯಾವ ಮಹನೀಯನ ಬುದ್ಧಿ ಪ್ರಸರಿಸಿತೋ ಗೊತ್ತಿಲ್ಲವಾಗಲಿ, ಅತನು ಧನ್ಯತಮನೆಂದು ಹೇಳಲು ಸಂದೇಹವಿಲ್ಲ. ಸಂಸ್ಕೃತದಲ್ಲಿ ಯಾವ ವಿಭಾಗಕ್ಕಾದರೂ ಆದಿಯನ್ನು ನಿರ್ಣಯಿಸುವುದು ಅಸಾಧ್ಯವಾದಂತೆ; ಈ ಆದಿಯ ಸೂತ್ರಭಾಷ್ಯವನ್ನೂ ಕಂಡುಹಿಡಿಯಲಾರೆವು. ಆದುದರಿಂದಲೇ ಅನಾದಿತ್ವ ಸಿದ್ಧಾಂತಗಳಿಂದ ನಮ್ಮ ವಾಙ್ಮಯವು ತುಂಬಿದೆ.

ಯಾಮುನಾಚಾರ್ಯನ ಸಿದ್ಧಿತ್ರಯ ಗ್ರಂಥದ ಪ್ರಾರಂಭದಲ್ಲಿ "ಗಭೀರಭಾಷ್ಯಕೃತಾ" ಎಂಬ ವಾಕ್ಯದಿಂದ ಪೂರ್ವದ ದ್ರಮಿಳಾಚಾರ್ಯ ಬ್ರಹ್ಮದತ್ತರೆಂಬ ವೇದಾಂತಭಾಷ್ಯಕಾರರು ಸೂಚಿತರಾಗಿದ್ದಾರೆ. ಸುಪ್ರಸಿದ್ಧನಾದ ಮಧುಸೂದನ ಸರಸ್ವತಿಯು ತನ್ನ ಸಂಕ್ಷೇಪ ಶಾರೀರಿಕ ಟೀಕೆಯಲ್ಲಿ (೩–೨೧೩) ಬ್ರಹ್ಮನಂದಿ ಎಂಬವನನ್ನು ಭಾಷ್ಯಕರ್ತನನ್ನಾಗಿ ಹೇಳುತ್ತ ಅತನ ಮತವನ್ನು ಉದಾಹರಿಸಿದ್ದಾನೆ. ಬ್ರಹ್ಮನಂದಿಗೆ ಟಂಕಾಚಾರ್ಯನೆಂಬ ಬೇರೊಂದು ಹೆಸರಿದ್ದಂತೆ ವೈಷ್ಣವರು ಹೇಳುತ್ತಾರೆ. ಶಂಕರಾಚಾರ್ಯರು ಬ್ರಹ್ಮದತ್ತನೆಂಬ ಆ ಭಾಷ್ಯಕರ್ತೃವಿನೊಡನೆ ಸಂಭಾಷಿಸಿದ ಪಾಗೆ, ಮಣಿಮಂಜರಿಯೆಂಬ ಮಾಧ್ವಗ್ರಂಥದಲ್ಲಿ (೬-೨-೩) ಬರೆಯಲ್ಪಟ್ಟಿದೆ. ಈ ಬ್ರಹ್ಮದತ್ತನ ಅದ್ವೈತಮತವು ನೈಷ್ಕರ್ಮ್ಯಸಿದ್ಧಿಯಲ್ಲಿ (೧–೬೮) ಹೇಳಲ್ಪಟ್ಟಿದೆ. ಈ ಗ್ರಂಥಕರ್ತನಾದ ಸುರೇಶ್ವರಾಚಾರ್ಯನು ಶಂಕರನ ಶಿಷ್ಯನೆಂಬುದು ಸುಪ್ರಸಿದ್ಧವಷ್ಟೆ! ಸುರೇಶ್ವರನು ಒಬ್ಬ ಬ್ರಹ್ಮದತ್ತನನ್ನೇ ಅಲ್ಲ "ಕೆಲವರು (ಭಾಷ್ಯಕಾರರು) ತಮ್ಮ ಸಂಪ್ರದಾಯದ ಬಲಪ್ರಾಗಲ್ಭ್ಯವನ್ನು ಮುಂದೊಡ್ಡುತ್ತ ಹೀಗೆನ್ನುತ್ತಾರೆ" ಎಂಬ ವಾಕ್ಯದಿಂದ, ಶಂಕರನಿಗಿಂತಲೂ ಪೂರ್ವದಲ್ಲಿ ಅನೇಕರು ಬ್ರಹ್ಮಸೂತ್ರ ಭಾಷ್ಯಕಾರರು ಇದ್ದರೆಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದಾನೆ.

"ಕೇಚಿತ್ ಸ್ವಸಂಪ್ರದಾಯಬಲಾವಷ್ಟಂಭಾದಾಹುಃ"

(ನೈ. ೧–೬೩)

ಸ್ವಂತವಾಗಿ ಶಂಕರಾಚಾರ್ಯನೇ ಬೃಹದಾರಣ್ಯಕ ಭಾಷ್ಯದಲ್ಲಿ (೧–೪–೩) ಈ ಬ್ರಹ್ಮದತ್ತನ ಮತವನ್ನೇ ವಿಸರ್ಜಿಸಿದ್ದಾನೆ. ಶಂಕರನ ಬೇರೊಬ್ಬ ಶಿಷ್ಯನಾದ ಪದ್ಮಪಾದಾಚಾರ್ಯನು ಪಂಚಪಾದಿಕೆಯಲ್ಲಿ (ಪೂನಾ, ೯೯), ಪ್ರಾಚೀನ ಬ್ರಹ್ಮಸೂತ್ರಭಾಷ್ಯಗಳ ಮತದ ಮೇಲೆ ತನ್ನ ಅಸಮಾಧಾನವನ್ನು ವ್ಯಕ್ತಗೊಳಿಸಿದ್ದಾನೆ. ಶಂಕರನ ಬೃಹದಾರಣ್ಯಕ ಭಾಷ್ಯದಲ್ಲಿಯೂ (ಪೂನಾ. ೨೯೩)

ನೊಂಡೂಕ್ಯೋಪನಿಷದ್ಭಾಷ್ಯದಲ್ಲಿಯೂ (೨-೨೧, ೨-೩೨) ಸಂಪ್ರದಾಯವಿತ್' 'ಆಗಮವಿತ್' ಎಂಬ ಶಬ್ದಗಳಿಂದ ಪ್ರಾಚೀನರಾದ ಸೂತ್ರಭಾಷ್ಯಕರ್ತರು ಸೂಚಿಸಲ್ಪಟ್ಟಿದ್ದಾರೆ. ಶಂಕರನುತಾನುಯಾಯಿಯಾದ ಸರ್ವಜ್ಞಾತ್ಮಮುನಿ ತನ್ನ ಸಂಕ್ಷೇಪಶಾರೀರಕದಲ್ಲಿ (೩-೨೨-೧), ಬ್ರಹ್ಮನಂದಿಯ ಸೂತ್ರಭಾಷ್ಯದಿಂದ ಅನೇಕ ವಚನಗಳನ್ನುದ್ಧರಿಸಿದ್ದಾನೆ. ಈ ಮೇಲಿನ ಗ್ರಂಥಕರ್ತರೆಲ್ಲರೂ ಕ್ರಿ. ಶ. ಒಂಭತ್ತನೆಯ ಶತಾಬ್ದಕ್ಕಿಂತಲೂ ಪ್ರಾಚೀನರಾಗಿರುವರಲ್ಲದೆ ಪ್ರಾಮಾಣಿಕರಾಗಿದ್ದಾರೆ. ಶ್ರೀಕಂಠಾಚಾರ್ಯನು ತನ್ನ ಭಾಷ್ಯದ ಸಮನ್ವಯಾಧಿಕರಣದಲ್ಲಿ "ಗೌಣಮಿಥ್ಯಾತ್ಮನೋಽಸತ್ತ್ವೇ" ಎಂಬ ಸುಂದರಪಾಂಡ್ಯಾಚಾರ್ಯನ ಕಾರಿಕೆಗಳನ್ನು ಉದ್ಧರಿಸಿದ್ದಾನೆ. ಈ ಸುಂದರಪಾಂಡ್ಯನು ಪ್ರಾಚೀನ ಶೈವವೇದಾಂತಾಚಾರ್ಯರಲ್ಲಿ ಸುಪ್ರಸಿದ್ಧನೆಂಬುದು ಶೈವವಾಙ್ಮಯಜ್ಞರಿಗೆ ಹೇಳಬೇಕಾಗಿಲ್ಲ. ಇದು ಸುಂದರಪಾಂಡ್ಯನದೆಂಬ ಸಂಗತಿ ಮಾಧವಾಚಾರ್ಯನ "ಸೂತ ಸಂಹಿತಾ ಟೀಕೆ" ಯಿಂದಲೂ ಪದ್ಮಪಾದನ ಪಂಚಪಾದಿಕೆಯ ಪ್ರಬೋಧ ಪರಿಶೋಧಿನೀ ಟೀಕೆಯಿಂದಲೂ ಗೊತ್ತಾಗುತ್ತದೆ. ಉತ್ಪಲಾಚಾರ್ಯನಿಗೆ ಗುರುವೂ ಶಿವದೃಷ್ಟಿಯೆಂಬ ಗ್ರಂಥಕ್ಕೆ ಕರ್ತನೂ ಆದ ಸೋಮಾನಂದನು, ಶಂಕರಾಚಾರ್ಯನಿಗಿಂತಲೂ ಪ್ರಾಚೀನನೆಂಬುದು ಸಹಜಸಿದ್ಧವಸ್ತೆ! ಈತನ ಕಾಲದಲ್ಲಿ ಸೂತ್ರಭಾಷ್ಯಗಳು ಇಲ್ಲದಿದ್ದರೆ ಶಿವದೃಷ್ಟಿಯಂತಹ ಗ್ರಂಥವು ಹುಟ್ಟುತ್ತಿರಲಿಲ್ಲ. ಶಂಕರನ ಗ್ರಂಥಗಳಲ್ಲಿ ಅಲ್ಲಲ್ಲಿ "ಔಪನಿಷದಮನ್ಯರು" ಮುಂತಾದ ಶಬ್ದಗಳಿಂದ ಪ್ರಾಚೀನ ಭಾಷ್ಯಕಾರರು ಸೂಚಿಸಲ್ಪಟ್ಟೇ ಇದ್ದಾರೆ. ಶ್ರೀಕಂಠಶಿವಾಚಾರ್ಯನು ಅಪ್ಪಯ್ಯದೀಕ್ಷಿತನು ಸೂಚಿಸಿದಂತೆ ಶಂಕರನಿಗಿಂತಲೂ ಪ್ರಾಚೀನನೆಂಬುದನ್ನು ನಾನು ಅಂಗೀಕರಿಸುವುದಿಲ್ಲ. ಆದರೆ ಶ್ರೀಕಂಠನು ಮಾತ್ರ ಶಂಕರಭಾಷ್ಯವನ್ನಲ್ಲದೆ ತತ್ಪೂರ್ವಾಚಾರ್ಯಕೃತಗಳಾದ ಸೂತ್ರಭಾಷ್ಯಗಳನ್ನೂ ಇನ್ನೂ ಕೆಲವನ್ನೂ ನೋಡಿದ್ದನೆಂಬುದು ನಿರ್ವಿವಾದವೇ ಸರಿ. ರಾಮಾನುಜನು ತನ್ನ ವೇದಾರ್ಥಸಂಗ್ರಹದಲ್ಲಿ (ಪು. ೧೫೪, ಕಾಶೀ) ಭಾರುಚಿ, ಟಂಕ, ಗುಹದೇವ, ಕಪರ್ದಿ, ದ್ರಮಿಳರನ್ನು ವೇದಾಂತಾಚಾರ್ಯರನ್ನಾಗಿ ಹೇಳಿದ್ದಾನೆ. ಇದರಲ್ಲಿ ಕೆಲವರಾದರೂ ಸೂತ್ರಭಾಷ್ಯಕಾರರಾಗಿರಬಹುದು. ರಾಮಾನುಜನಿಗೆ ಸಮಕಾಲಿಕನಾದ ಶ್ರೀಪತಿ ಪಂಡಿತನು ತನ್ನ ಶ್ರೀಕರಭಾಷ್ಯದ ಹಲವು ಸ್ಥಳಗಳಲ್ಲಿ, (ಪು. ೪೭-೬೨ ವರೆಗೆ) ಠೇಣುಕ, ದಾರುಕ, ಶಂಬುಕರ್ಣ, ಗೋಕರ್ಣ, ಏಕೋರಾಮ, ಶಾಂಭವಾನಂದ, ಪರಮಶಿವಾಚಾರ್ಯ, ವಿಶ್ವಾರಾಧ್ಯ, ನೀಲಕಂಠ, ಜ್ಯೋತಿರ್ನಾಥ ಮೊದಲಾದ ಭಾಷ್ಯಕಾರರನ್ನೂ ಕೆಲವುಕಡೆ ಆಯಾ ಭಾಷ್ಯವಾಕ್ಯಗಳನ್ನೂ ಪ್ರಯೋಗಿಸಿದ್ದಾನೆ. ಇದರಲ್ಲಿ ಕೆಲವರು ಗೀತೋಪನಿಷದ್ಭಾಷ್ಯಕಾರರೆಂದು ಭಾವಿಸಿದರೂ ಕೆಲವರಾದರೂ ಬ್ರಹ್ಮಸೂತ್ರಭಾಷ್ಯಗಳನ್ನು ವಿರಚಿಸಿಯೇ ಇದ್ದರೆಂಬುದು ನಿಶ್ಚಿತವೇ ಸರಿ! ನೀಲಕಂಠನ ಸೂತ್ರಭಾಷ್ಯವನ್ನು ಕುರಿತು, ಜೈನ ಜಗತ್ತಿನಲ್ಲಿ ಚಿರಕಾಲದಿಂದಲೂ ಪ್ರಸಿದ್ಧಿಯಿದೆ. ನೀಲಕಂಠನು ಶಂಕರನಿಗಿಂತಲೂ ಪ್ರಾಚೀನನೆಂಬುದನ್ನು ಸಹಜವಾಗಿ ನಂಬಬಹುದು. ೧೪ನೆಯ ಶತಾಬ್ದದಲ್ಲಿದ್ದ ನೀಲಕಂಠದೀಕ್ಷಿತನು, ತನ್ನ ಕ್ರಿಯಾಸಾರವೆಂಬ ಹೆಬ್ಬೊತ್ತಿಗೆಯು ಪ್ರಾಚೀನ ನೀಲಕಂಠಭಾಷ್ಯಕ್ಕೆ ಕಾರಿಕಾರೂಪವೆಂದು ಹೇಳಿದ್ದಾನೆ.

"ನೀಲಕಂಠಶಿವಾಚಾರ್ಯನಾಮ್ನಾ ಭಾಷ್ಯಮುಚೀಕರತ್"

(ಕ್ರಿಯಾಸಾರ ೨-೨೪).

ಠೇಣುಕಭಾಷ್ಯ ಠೇಣುಕಕಾರಿಕೆಗಳ ಪ್ರತಿಗಳನ್ನು ನಿಜಾಂ ದೇಶದ ವರಂಗಲ್ ಜಿಲ್ಲೆಯಿಂದಲೇ ಜೋಕಬ್ ಎಂಬ ಆಂಗ್ಲ ಪಂಡಿತನು ಶೇಖರಿಸಿಕೊಂಡುಹೋದಂತೆ ನನಗೆ ಸರಿಯಾಗಿಯೇ ತಿಳಿದಿದೆ. ಆದರೆ ಬರ್ಲಿನ್ ಲೈಬ್ರರಿಯ ಕೇಟಲಾಗಿನಲ್ಲಿ ಮಾತ್ರ ಠೇಣುಕಕಾರಿಕೆಯೊಂದೇ ಕಾಣುತ್ತದೆ. ಇಂದಿಗೂ ಸಿಕಂದ್ರಾಬಾದಿನ ಪಂ. ಮಾಕರ್ಾಂಡೇಯಶಾಸ್ತ್ರಿಗಳವರ ಹತ್ತಿರ ಠೇಣುಕಭಾಷ್ಯವಿದೆಯೆಂಬುದು ಅವರ ಕೇಟಲಾಗಿನಿಂದಲೂ ಹೇಳಿಕೆಯಿಂದಲೂ ಪ್ರಸಿದ್ಧವೇ ಸರಿ. ಆದರೆ ಅವರು ತಮ್ಮಲ್ಲಿರುವ ಪ್ರಾಚೀನ ಗ್ರಂಥರಾಶಿಯನ್ನು ಯಾವ ಪಂಡಿತರಿಗೂ ತೋರಿಸಿದ ಪುಣ್ಯಕ್ಕೆ ಭಾಗಿಗಳಾಗಿಲ್ಲ.

ಹೀಗೆಯೇ ವಿಚಾರಿಸುತ್ತ ಹೋದರೆ ಪ್ರಾಚೀನಗಳಾದ ಬ್ರಹ್ಮಸೂತ್ರಭಾಷ್ಯಗಳು ಅನೇಕವಾಗಿದ್ದವೆಂಬುವ ವಿಷಯವು ಪ್ರಾಚೀನ ಗ್ರಂಥಗಳಿಂದಲೇ ದೃಢವಾಗುವದಲ್ಲದೆ ಕೆಲವು ಭಾಷ್ಯಗಳ ಭಾಗಗಳನ್ನೂ ಅಲ್ಲಲ್ಲಿ ಕಾಣಬಹುದು. ಈ ಭಾಷ್ಯಗಳಲ್ಲಿ ಕೆಲವಾದರೂ ಶಂಕರನಿಗಿಂತಲೂ ಪ್ರಾಚೀನವಾದುವೆಂದು ನಿಸ್ಸಂಶಯವಾಗಿ ಹೇಳಲು ಅಡ್ಡಿಯಿಲ್ಲ. ಆ ಮೇಲೆ ಜೈನ-ಬೌದ್ಧಾದಿ ಮತಗಳ ಪ್ರಾಬಲ್ಯದಿಂದಲೂ, ರಾಜಕೀಯ ಕಾರಣಗಳಿಂದಲೂ ಅನೇಕ ಗ್ರಂಥರಾಶಿಗಳ ಜೊತೆಗೆ ಸೂತ್ರಭಾಷ್ಯಗಳಂತಹ ಪ್ರಖರ ಗ್ರಂಥರತ್ನಗಳೂ ಅನ್ಯಾಕ್ರಾಂತವಾಗಿರುವುದರಲ್ಲಿ ಆಶ್ಚರ್ಯವೇನು? ಆದುದರಿಂದಲೇ ಶಂಕರನಂತಹ ಸಿದ್ಧಸಂಕಲ್ಪನು ಅವತರಿಸಬೇಕಾಯಿತು.

(ಮುಂದುವರಿಯುವುದು)

೫೦ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ.
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:— ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಸಿಡಿಲು

ಶ್ರೀ. ನ. ಕೃ. ಕುಲಕರ್ಣಿ, ಧಾರವಾಡ

★

ಮದುವೆ ಜೊತೆಯಲಿತ್ತ ಜೀವ-
ಕೆಲ್ಲ ದೇವನೊಬ್ಬನಾಗಿ
ಬೆಳಗುತಿದ್ದ ಪತಿಯ ಜೀವ-
ದೀಪವಿಂದು ಆರಿ, ಕೂರಿ
ಮನೆಯಲಿರುಳು ನುಗ್ಗುತಿತ್ತು ;
ಮರಣವೆಂಬ ಮುತ್ತಿ ಬಂದು
ಸುತ್ತಿಕೊಂಡು ಅಳುತಿತ್ತು ;
ನೋಡಿದತ್ತ ಹಾಳು ಬಯಲು !
ಭಯವು ತೇಲಿ ಅಲೆಯುತಿತ್ತು.
ವಿಧಿಯು ತೆರೆಯೊಳಡಗಿ ನಿಂತು
ಹಲ್ಲು ಕಿರಿದು ನಗುತಲಿತ್ತು,
ಪ್ರೇತದೀಪದಂಥ ಬೆಳಕು
ಮನೆಯ ರಾಹುರೂಪವನ್ನು
ಕೆದರಿ ಕರೆದು ತೋರುತಿತ್ತು.

ಮುರಿದ ಬಾಳಿನುರಿಯಲಿದ್ದು
ಕರಿವ ಕೂಳಿಗೊಡತಿಯಾಗಿ
ನಿಧವೆಯೊಬ್ಬಳುಳಿದ ಜೀವ
ಮನೆಯ ಹಾಳನಳೆಯುತಿತ್ತು.
ಸೆರಗು ಬಾಯ ಮುಚ್ಚಿ ಕಚ್ಚಿ
ಉಸಿರಿನಿಸರ ನೋಸುತಿತ್ತು.
ತೊಯ್ದ ಕಣ್ಣು ತೆರೆದುಕೊಂಡು
ಚಿಂತೆಯನ್ನು ನಿಟ್ಟಿಸುತ್ತ
ಕೊರಗಿನಾಳ ಕೊಳ್ಳದಿಂದ
ಕೋಡಿಯನ್ನು ಹರಿಸುತಿತ್ತು.
ಹಣೆಯ ಕೆಂಪು-ಪೆಂಪನಗಲಿ
ಹಾಳು ಹಸಿರನೊಂದಿ ಇತ್ತು.
ಕರಿಯಮಣಿಯ ಕಳೆದ ಕೊರಳು
ಕೊಳವಿಯಲ್ಲಿ ನರಳುತಿತ್ತು.

ಒಡಲ ದುಃಖ ತುಂಬಿ ಕೊಳ
ಗಡಿಗೆಯಂತೆ ಕುದಿಯುತಿತ್ತು.
ಬಳೆಯ ಬೆಡಗನಳಿದ ಕರವು
ಹಣೆಯ ಹೊಡೆದುಕೊಳ್ಳುತಿತ್ತು.
ಜನವು ಹೆಣ್ಣ ಬಾಳಿಗೆಸೆದ
ಧರ್ಮದುಗ್ರ ಜಾಲದಲ್ಲಿ
ಮನವು ಸಿಲುಕಿ ತೊಳಲುತಿತ್ತು.
ಬದಿಯ ಬರಲು ಮರದಲಿದ್ದ
ಗೂಬೆಯೊಂದು ಕೂಗುತವಳ
ಗೋಳನಿಳೆಗೆ ಸಾರುತಿತ್ತು :
' ಸಿಡಿಲು ಬಿತ್ತು, ಸಿಡಿಲು ಬಿತ್ತು !
ಕನಸದೆಲ್ಲ ಮುಡಿದು ಹೋಯ್ತು !
ನಗುತಲಿರುವ ಜೀವವೊಂದು
ನೋವುಹಾವಿಗಾಯ್ತು ಹುತ್ತು !'

ತೇಲಿಹೋಗು !

ಶ್ರೀ. ಎಲ್. ವಿ. ಕಾವೇರಮ್ಮ, ಭದ್ರಾವತಿ

ತೇಲಿಹೋಗು, ತೇಲಿಹೋಗು,
ಬಾಳಹೊನಲಿನೊಡನೆ ಕಂದ !

ಶೂನ್ಯ ಬಾಳರಂಗನೆರೆದು
ನಿನ್ನ ಬಾಳ ಬೀಡಿಗೆ,
ಮೆರುಗನಿತ್ತ ಕಾಯಮನದ
ಬನಕೆ ಬಣ್ಣ ಪೆರೆಯುತೆ !
ತೇಲಿಹೋಗು, ತೇಲಿಹೋಗು ! ॥ ೧ ॥

ಸ್ವಾರ್ಥಭೂತಕೆದಿರು ಪೆಡಂ-
ಭೂತವಾಗಿ ನಿಲ್ಲುತ !
ಕಾನುದಲೆಯ ಬಡಿತದಿದಿರು
ಬಂಡೆಯಾಗಿ ನಿಲ್ಲುತ,
ತೇಲಿಹೋಗು, ತೇಲಿಹೋಗು ! ॥ ೩ ॥

ಪ್ರೀತಿಯಜ್ಞ ಕುಂಡದಲ್ಲಿ
ಜಾತಿಬಲಿಯ ನೀಯುತೆ !
ಸತ್ಯಜ್ಯೋತಿ ಬೆಳಗುವಲ್ಲಿ
ತನುಮನವನು ಬೆಳಗುತೆ !
ತೇಲಿಹೋಗು, ತೇಲಿಹೋಗು ! ॥ ೨ ॥

ದುಃಖವಿತ್ತ ಹುತ್ತಕೆದಕಿ
ಮುತ್ತು ಹಗೆಯ ಬೆಳಸದೆ ;
ಹಿತವನೆರೆದ ಕುಲಕೆ ಫಲವ-
ನಿತ್ತು ಋಣವ ನಿಲಿಸದೆ !
ತೇಲಿಹೋಗು, ತೇಲಿಹೋಗು ! ॥ ೪ ॥

ಬಾಳಗದ್ದೆಯಲ್ಲಿ ಬೆಳೆದ
ಬೆಳೆಯ ಕಂಡು ಹಿಗ್ಗದೆ !
ಕಳಪೆನೆಲವನಿದು ನಗುವ
ಕೋಪ ಮೂಡಲಂಜದೆ !
ತೇಲಿಹೋಗು, ತೇಲಿಹೋಗು ! ॥ ೫ ॥

"ನೋಕ್ರಾ! ಏ!....."

(ಸಣ್ಣಕತೆ)*

ಶ್ರೀ. ಕುಳುಕುಂದ ಶಿ. ರಾಯ, ಮಂಗಳೂರು

★

ಒಂದೇಸವನೆ ಕುದುರೆಯ ಗೊಣಸು, ಡಾಮರ ಹಾಕಿದ್ದ ರಸ್ತೆಗೆ ತಗಲಿ 'ಟಕ್-ಟಕ್-ಟಕ್' ಸದ್ದು ಮಾಡುತಿತ್ತು. ಕುದುರೆ ಹೊಡೆಯುತ್ತಿದ್ದ ಕೆಂಜ ತಿರುಗಿ ಹಿಂದಕ್ಕೆ ನೋಡಿದ. ಆ ಹೆಂಗಸು ಅಲ್ಲಿಯೆ ಕುಳಿತಿದ್ದಳು. ಬಾಡಿ ಬಸವಳಿದಿತ್ತು ಆ ದೇಹ. ಪಕ್ಕದ ಸೀಟಿನಲ್ಲಿ ಕುಳಿತು, ಆಕೆಯ ಮಡಿಲಮೇಲೆ ತಲೆಯಿಟ್ಟು, ಆರೇಳು ವರ್ಷದ ಆವಳ ಹುಡುಗ ಮಲಗಿದ್ದ.

ಆ ಹೆಂಗಸು ಕೊಟ್ಟಿದ್ದ ಯಾವುದೋ ಒಂದು ಪತ್ತೆಯನ್ನು ಕಂಡುಹಿಡಿಯಲು ಆದಾಗಲೇ ಹಲವಾರು ಬೀದಿಗಳಲ್ಲಿ ಕೆಂಜ ಜಟಕವನ್ನೋಡಿಸಿದ್ದ. ಅಷ್ಟರಲ್ಲೇ ಮೂರು ಗಂಟೆಗಳ ಕಾಲ ವ್ಯರ್ಥವಾಗಿ ಹೋಗಿತ್ತಲ್ಲ! ಬರ್ಮದ ಮುಂದಿ; ದಬಾಯಿಸಿ ಬಿಟ್ಟು ಹೆಜ್ಜೆ ಕೂಲಿ ಹೊಡೆಯಬಹುದು— ಎಂದು ಅವನು ಎಣಿಕೆ ಹಾಕಿದ್ದ. ಆದರೆ ಸಂಜೆ ಮದ್ರಾಸದ ಗಾಡಿ ಬರುವ ಹೊತ್ತಿಗೆ ಸ್ಟೇಶನ್ ಸೇರುವುದೂ ತನ್ನ ಕೈಲಾಗದೆ ಹೋಗುವುದಲ್ಲ; ಹೆಚ್ಚು ಸಂಪಾದನೆಯಾಗುವಂತಹ ಗಿರಾಕಿಗಳೆಷ್ಟು ಮಂದಿ ತಪ್ಪಿ ಹೋಗುವರೊ! ಹುಂ! ಅವನೇಕೆ ಬಡಬೇಕು? ತನ್ನ ದಿನದ ದುಡಿತವನ್ನೆಲ್ಲ ಆ ಹೆಂಗಸೇ ತೆರಲೊಲ್ಲಳೇಕೆ?

ಕೆಂಜ ಪುನಃ ತಿರುಗಿ ನೋಡಿದ. ಆ ಹೆಂಗಸು ಶೂನ್ಯನೋಟ ಬೀರುತ್ತ ಮಾರ್ಗದ ಎಡಪಕ್ಕದಲ್ಲಿದ್ದ ಮರಗಳ ಸಾಲನ್ನು ನೋಡುತ್ತಿದ್ದಳು. ಕದ್ದು ನೋಡುವುದರಿಂದ ಮಹದನ್ಯಾಯ ಮಾಡಿದವನಂತೆ ಕೆಂಜ, ದೃಷ್ಟಿಯನ್ನು ಹಿಂದಕ್ಕೆಳೆದು, ಜೈ ಜೈ ಎಂದು ಕುದುರೆಯ ಕಡಿವಾಣವನ್ನು ಜಗ್ಗಿದ.....

"ಸಾಬಿ!" ಎಂದವಳು ಕಾಯುವ ದನಿಯಲ್ಲಿ ಕರೆದಳು.

ಸಾಬಿಯೆ! ಜಟಕಾ ಹೊಡೆಯುತ್ತಿರುವುದಂದಿನಿಂದ ಕೆಂಜನ ಹೆಸರು ಒಂದಲ್ಲ ಹೋಗಿ [illegible] ಜೀವನದ ದನಿಯಲ್ಲಿ, ಪಕ್ಕಕ್ಕೆ ತಿರುಗಿ "ಏನಮ್ಮ?" ಎಂದು ಕೆಂಜ ಕೇಳಿದ. ನಿದ್ದೆ ಹೋಗುತ್ತಿದ್ದ ಆ [illegible]ಗನ ಮುಖ ಅವನಿಗೆ ಕಾಣುತಿತ್ತು. ಎಷ್ಟು ಚಿಕ್ಕ-ಆಗಲ ಕಿರಿದಾದ- ಕಣ್ಣುಗಳು! ಶುದ್ಧ ಬರ್ಮಿಯ ನಿರಬೇಕು, ಅನಳು? ಹಿಂದೀಯರಂತೆಯೆ ಇದೆ ಆಕೆಯ ರೂಪ....

ಅವಳು ಹೇಳುತಿದ್ದಳು-ಪರಕು ಹಿಂದುಸ್ಥಾನಿಯಲ್ಲಿ, "ಬಿದರ್ ರೋಡಿಗೆ ಇನ್ನೆಷ್ಟು ದೂರವಿದೆ, ಸಾಬಿ?"

ಪಾದಿಯಲ್ಲೊಬ್ಬ ಅಡ್ಡ ಬಂದ. ಕುದುರೆಯ ಕಡಿವಾಣವನ್ನು ಜಗ್ಗಬೇಕಾಯಿತು. ಉದ್ವಿಗ್ನತೆಗೊಂಡು ಕೆಂಜ ನುಡಿದ, "ಬಹು ದೂರ ಹೋಗಬೇಕಮ್ಮ....ದೂರ!" ನಿಜವಾಗಿಯೂ ಬೀದರ್ ರೋಡ್ ಸವಿಾಪಿಸಿತ್ತು. ಅಲ್ಲೇ, ಎಡಪಕ್ಕದಿಂದ ಸರಿದರಾಯಿತು. ಆದರೆ, ಆ ಹೆಂಗುಸು ಹೋಗಬೇಕಾಗಿದ್ದ ಮನೆಯನ್ನು ಹುಡುಕಿ ಕೊಡುವುದಷ್ಟೆ ಕೆಂಜನ ಕೆಲಸವಲ್ಲ. ಅವನ ಕೈಮೇಲೂ ಪಣ ತಣನೆ ಹಣ ಕುಣಿದಾಡಬೇಡವೇನು?

"ನೋಡಿರಮ್ಮ! ಎಷ್ಟುದೂರ ಬಂದುದಾಯಿತು! ಇಮ್ಮಡಿ ಕೊಡಬೇಕು ಜಟಕದ ಬಾಡಿಗೆ—"

ಉತ್ತರ ಬರಲಿಲ್ಲ! ಮಲಗಿದ್ದ ತನ್ನ ಹುಡುಗನನ್ನು ಆಕೆ ಎಚ್ಚರಿಸುತ್ತಿದ್ದಳು.

* * *

ಶ್ರೀಯುತ ಜೆ. ಸಿ. ನೇವಾರರ ಭವನದ ಮುಂದುಗಡೆ ಜಟಕ ನಿಂತಿತು. ಮುಖದ ಮೇಲೆ ಬೀಳುತ್ತಿದ್ದ ತಲೆಗೂದಲನ್ನು ಹಿಂದೆ ನೂಕುತ್ತಾ ಆಕೆ ಕೆಂಜನಿಗೆ ಕೂಲಿ ಎಂದು ಎರಡು ರೂಪಾಯಿಗಳನ್ನಿತ್ತಳು. ಹುಡುಗ ತನ್ನ ಹ್ಯಾಟನ್ನು ಸರಿಪಡಿಸುತ್ತಾ ಗಾಡಿ

★

ಬದುಕಬೇಕೆನ್ನುವ ಜೀವ ಎಂತಹ ಪ್ರತಿಕೂಲ ಪರಿಸ್ಥಿತಿಯನ್ನೂ ಎದುರಿಸುವ ಬಲವನ್ನು ಪಡೆಯುತ್ತದೆ. ರಾಜಕುಮಾರನಂತೆ ಬರ್ಮಾದಲ್ಲಿ ಕಾಲವನ್ನು ಕಳೆದ ಮಹಾಶಯನು, ನಿರ್ವಾಸಿತನಾಗಿ ಬಂದು ಭಾರತದ ಕಂಗಾಲ ಜೀವನದ ಕಹಿಗೂಳನ್ನೂ ಉಣ್ಣಲು ಸಿದ್ಧನಾದನು.

★

ಯವನನ್ನು ಎವೆಯಿಕ್ಕದೆ ನೋಡುತ್ತಿದ್ದ; ಅವನಿಗೆ ಅದೇನೂ ಹೊಸ ಚಿತ್ರವಲ್ಲ. ರಂಗೂನಿನಲ್ಲಿ ಅಂತಹ ಪಲವರನ್ನು ಅವನು ಕಂಡಿದ್ದ, ಅಲ್ಲಿ ಅವರೊಡನಿದ್ದ ಆಳುಮಗನ ವೇಷಕ್ಕೂ ಕೆಂಜನವದಕ್ಕೂ ಅಂತರವಿರಲಿಲ್ಲ.

ಆ ಹೆಂಗುಸು ನೇವಾರರಿಗೆ ತನ್ನ ಪರಿಚಯ ಪತ್ರ ಕಳುಹಿದಳು; ಭೇಟಿ ಯೋಜಿಸಿದಳು. ನೇವಾರರಿರಲಿಲ್ಲ. ಕ್ಲಬ್ಬಿಗೆ ನಡೆದಿದ್ದಿರಬಹುದು. ನಿವೃತ್ತ ಅಧಿಕಾರಿಗಳೆಲ್ಲ ತಮ್ಮ ಜೀವನದ ಕೆಲವೇ ಸಂಜೆಗಳನ್ನಾದರೂ ಸಂತೋಷದಿಂದ ಕಳೆಯಬೇಡವೇನು?

ಆದರೆ ನೇವಾರರ ಮಗಳು- ಕಿರಿಯವಳು- ಆ ಹೆಂಗುಸಿನಲ್ಲಿ, ಬರ್ಮದಿಂದ ಬಂದಿದ್ದ ರಕ್ಷಾರ್ಥಿಯೆಂದು ತಿಳಿದಾಗ, ಅಸಹ್ಯ ತೋರಿಸಿದಳು. ಬರ್ಮದ ಹೋರಾಟವನ್ನು ಜಪಾನರು ಪೂರ್ಣಗೊಳಿಸುತ್ತಲಿದ್ದ ಕೊನೆಯ ದಿನಗಳು ಅವು. ಭಾರತದ ಜನ ಆಕ್ರಮಣಭೀತಿಯಿಂದ ದಿನ ನೂಕುತ್ತಿದ್ದರು. ಹುಡುಗನೊಬ್ಬನೊಡನೆ ಜೀವಂತಳಾಗಿ ಉಳಿದು ಓಡಿಬಂದಿದ್ದ ತನ್ನ ಕುಲದವಳೇ

* ಮೇಲಾಟಕ್ಕೆ ಬಂದ ಒಳ್ಳೆಯ ಕತೆಯಿದು. —ಸಂ. ಜ

ಅದಾಕೆಯೊಬ್ಬಳ ಆತ್ಮವೃತ್ತವನ್ನು ತಿಳಿಯುವ ಆಸಕ್ತಿ ಯಾವ ಸ್ತ್ರೀಗಾದರೂ ಹೇಗೆ ಇಲ್ಲದೆ ಇದ್ದೀತು?

ರಾತ್ರಿ ನೇವಾರರು ಮನೆಗೆ ಬಂದರು. ಆ ಹೆಂಗುಸು ಅವರ ಪಾದಿಯನ್ನು ಕಾಯುತ್ತ ಅಲ್ಲೇ ಕುಳಿತಿದ್ದಳು. ಬೇರೆ ತಾಣವಿರಲಿಲ್ಲ ಅವಳಿಗೆ ಹೋಗುವುದಕ್ಕೆ. ನೇವಾರರಿಂದ ಸರ್ವಸಹಾಯಗಳನ್ನೂ ಆಕೆ ನಿರೀಕ್ಷಿಸಿದ್ದಳು. ಮನುಷ್ಯನೊಬ್ಬ ತನ್ನ ಗೆಳೆಯನ ವಿಧವೆಗೆ-ಅನಾಥೆಗೆ-ನೆರವಾಗುವುದು ತೀರ ಸಂಭವನೀಯ ತಾನೆ? ನೇವಾರರು ದುಃಖದ ವಾರ್ತೆಯನ್ನು ಕೇಳಿದರು; ಅವರ ಸಹೋದ್ಯೋಗಿ- ರಂಗೂನಿನಲ್ಲಿ ಒಂದೇ ಎಡೆದುಡಿಯುತ್ತಿದ್ದಾಗ ಬೆಳೆದು ಬಂದಿತ್ತು ಆ ಗೆಳೆತನ- ಜಪಾನರು ರಂಗೂನಿನ ಮೇಲೆ ವಿಮಾನ ದಾಳಿಮಾಡಿದಾಗ, ಇದ್ದೊಬ್ಬಳು ಹೆಂಡತಿಯನ್ನೂ ಮಗುವನ್ನೂ ನಿರ್ಗತಿಕರನ್ನಾಗಿ ಮಾಡಿಬಿಟ್ಟು, ಆಳುವವರು ತನಗೆ ನೀಡಿದ ರಕ್ಷಣೆಯ ಬೆಲೆಯನ್ನು ತಮ್ಮ ಪ್ರಾಣವನ್ನರ್ಪಿಸಿ ತೆತ್ತಿದ್ದರು. ಹಾಗೆ ದುರಂತಕ್ಕೊಳಗಾದ ಹಲವು ಸಾವಿರ ಹಿಂದೀಯರಲ್ಲಿ ಅವರೂ ಒಬ್ಬರು, ಅಷ್ಟೆ.

* * *

ಯಾವುದು ಅವರಿಂದ ಅಪೇಕ್ಷಿಸಲ್ಪಟ್ಟಿತ್ತೋ ಅದನ್ನು ನೇವಾರರು ಮಾಡಿದರು. ಬಳಿಯಲ್ಲೆ ಇದ್ದ ಹಳೆಯ ಮನೆಯೊಂದನ್ನು ಆ ತಾಯಿ-ಮಕ್ಕಳಿಗಾಗಿ ತೆರವು ಮಾಡಿಕೊಟ್ಟರು; ಹಣದ ಸಹಾಯವನ್ನಿತ್ತರು.

ಬಂದ ಕಷ್ಟಗಳನ್ನೆಲ್ಲ ನುಂಗಿಕೊಂಡು, ಗಂಡುಸಿಗಿಂತಲೂ ಇಮ್ಮಡಿ ಧೈರ್ಯದಿಂದ ಜೀವನ ನಡೆಯಿಸುವ ವಿಧಾನವನ್ನು ತೆಂಗುಸರು ಮಾತ್ರ ಬಲ್ಲರು. ಆಕೆ-ನೀರಾದೇವಿ-ಮಾಡಿದುದೂ ಅಷ್ಟೆ. ಹದಿನೈದು ವರ್ಷಗಳ ಹಿಂದೆ, ತಾನು ಜವ್ವನದ ಹೊಸ್ತಿಲಲ್ಲಿ ಕಾಲಿಡುತ್ತಿದ್ದಾಗ, ತನ್ನ ತಂದೆ ಸಕುಟುಂಬರಾಗಿ ಆ ಊರನ್ನು ಬಿಟ್ಟು ರಂಗೂನಿಗೆ ತೆರಳಿದ್ದರು. ತನ್ನ ವೈವಾಹಿಕ ಜೀವನ ಅಲ್ಲಿಯೇ ಆರಂಭವಾಯಿತು. ಆಳಿಯುತ್ತ ಬಂದ ಸಂಬಂಧಿಕರಲ್ಲಿಯೂ ಉಳಿದವರು ವಿಮಾನದಾಳಿಗೆ ತುತ್ತಾಗಿದ್ದರು. ಈಗ ಪುನಃ ತನ್ನೊಡನೆ ದುರಂತದ ಕಥೆಯ ಒಂದು ಜೊರೆಯನ್ನೇ ಹೊತ್ತುಕೊಂಡು, ಆ ಹಳೆಯ ಊರಿಗೆ ಆಕೆ ಹಿಂದಿರುಗಿದ್ದಾಳೆ. ಯಾರಾದರೂ ಕ್ಷೇಮಸಮಾಚಾರ ಕೇಳಿದರೆಂದರೆ ಗಂಭೀರಳಾಗಿ, ದುಃಖವನ್ನೆಲ್ಲ ನಗುವಿನ ಮೂಲಕ ಮರೆಯಿಸಲು ಯತ್ನಿಸುತ್ತ, ಆಕೆ ಉತ್ತರಿಸುವಳು. ಏಕಾಂತದಲ್ಲಿದ್ದಾಗ, ಇಲ್ಲವೆ ಮಗು 'ಮಹಾಶಯ' ನಿದ್ರಿಸಿದಾಗ, ನೀರಾದೇವಿಯ ಕಣ್ಣೀರಕಾಲುವೆ ತನ್ನಿಂದ ತಾನಾಗಿಯೆ ಹರಿದುಹೋಗುತ್ತಿತ್ತು.

* * *

ಆ ಜೀವನ ಹಾಗೆಯೆ ಸಾಗಿತು.

ಎಂತಹ ಸಂಕಷ್ಟಗಳಲ್ಲಿ ತಾವು ಸಿಲುಕಿಬಿದ್ದಿದ್ದೆವೆಂಬುದು ಹುಡುಗ 'ಮಹಾಶಯ'ನಿಗೆ ತಿಳಿಯದು. ತನ್ನ ತಂದೆಯನ್ನು ಕಳೆದುಕೊಂಡಿದ್ದ; ಅದಕ್ಕಾಗಿ ದುಃಖವಾಗುತ್ತಿತ್ತು; ಅಷ್ಟೆ.

ಆದರೆ, ಅವನ ಸೌಕರ್ಯಗಳಲ್ಲಿ ಕುಂದು-ಕೊರತೆ ಬಾರದಂತೆ ನೀರಾದೇವಿ ಬಹು ಜತನದಿಂದ ನೋಡಿಕೊಳ್ಳುತ್ತಿದ್ದಳು. ಹೀಗಿದ್ದೂ ಮಹಾಶಯನಿಗೆ ತೃಪ್ತಿಯಿಲ್ಲ; ಹಾಗೆಯೇ ಕೊಂಚ ಗೊಂದಲವಾಯಿತು ಒಂದು ದಿನ—

'ಆಳುಮಗ ಬೇಕು; ಅವನಿಲ್ಲದೆ ತಾನು ಉಣ್ಣಲಾರೆ—ಉಡಲಾರೆ—ಮಲಗಲಾರೆ' ಎಂದು ಮಹಾಶಯ ಹಟಹೊಟ್ಟ. 'ಆ ಹಿಂದಿನ ಊರಲ್ಲಿ—ಬೇರೆ ಊರಲ್ಲಿ—ಇದ್ದಾಗ, ತಮಗೊಬ್ಬ ಛೋಕ್ರಾ ಇದ್ದನಲ್ಲ? ಅವನೆಲ್ಲಿ?' ಎಂದು ಕೇಳಿದರೆ, ಕಣ್ಣೀರು ಜುಂಬಿ, "ಆ ಊರಲ್ಲೆ ಉಳಿದು ಹೋದ" ಎನ್ನುತ್ತಾಳೆ ತಾಯಿ! 'ಹಾಗೂ ಇದೆಯೇನು? ಅಡಿಗೆಯವಳೇನಾದಳು?' ಎಂದರೆ, 'ನಾನು ಅಡಿಗೆ ಮಾಡಿ ಹಾಕುವುದಿಲ್ಲವೇನು?' ಎಂದು ಉತ್ತರ. 'ಏನೋಪ್ಪಾ! ತನಗಾಗದು ಇದೆಲ್ಲ' ಎಂದು ಮಹಾಶಯ ಬಿಡುಗಚ್ಚಿದ; ಹಾರಾಡಿದ; ಜೊಬ್ಬಿಟ್ಟ. ನೀರಾದೇವಿ ಮಗನನ್ನು ಸಂತೈಸುವ ನಿರರ್ಥಕ ಯತ್ನಮಾಡಿದಳು.

ಆಳು ನಿಲ್ಲಿಸಿದಮೇಲೆ ಮಹಾಶಯ ಹೊರಕ್ಕೆ ಹೋದ.

ಹಿಂದೆ ಬಂದಾಗ ಜತೆಯಲ್ಲೊಬ್ಬ ಮಾಸಿದ ಬಟ್ಟೆಯ, ಹತ್ತಾರು ವರ್ಷದ, ಬಡಪುಡುಗನಿದ್ದ.

"ಅಮ್ಮಾ! ಜಾ ಇಲ್ಲಿ!" ಎಂದು ಮನೆಯ ಪೆಟ್ಟಿಲನ್ನೇರುತ್ತಾ ಮಹಾಶಯ ಕೂಗಿದ. ಅಧಿಕಾರಯುತ ಧ್ವನಿಯದು. ಅವನ ಅಪ್ಪ ಹಿಂದಕ್ಕೆ ರಂಗೂನಿನಲ್ಲಿ ಹಾಗೆಯೆ ಮಾತನಾಡುತ್ತಿದ್ದರು.

ನೀರಾದೇವಿ ಮಗನನ್ನು ಮೆಚ್ಚಿಸುವುದಕ್ಕಾಗಿ ಇದ್ದ ಸಾಮಾನಿನಲ್ಲೆ ಭಕ್ಷ್ಯತಯಾರಿಸುವ ಯತ್ನದಲ್ಲಿದ್ದಳು.

"ಛೋಕ್ರಾನನ್ನು ಕರೆದು ತಂದಿದ್ದೇನೆ! ಇಲ್ಲಿ ನೋಡು!" ಎಂದು ಮಹಾಶಯ ಪುನಃ ಕರೆದು ಹೇಳಿದ.

ಆಕೆ ಬೇಗಬೇಗನೆ ಬಂದಳು. ಆದೇನು, ಹಲವು ಕೋಣೆಗಳನ್ನು ದಾಟಿ ಬರಬೇಕಾದುದಿಲ್ಲ. ನಡುಕೋಣೆಯನ್ನು ದಾಟಿ, ಎದುರು ಜಗುಲಿಗೆ ಕಾಲಿಟ್ಟರಾಯಿತು. ಆಕೆ ಯೋಚಿಸುತ್ತ ಬಂದಳು. ಎಂತಹ ತುಂಟತನಕ್ಕೆ ಹೊರಟಿದ್ದ ಹುಜ್ಜು ಹುಡುಗ?

ನಿಜಕ್ಕೂ! ಅಲ್ಲೊಬ್ಬ ಹುಡುಗ ನಿಂತಿದ್ದ ಹಲ್ಲುಕಿಸಿಯುತ್ತ.

"ಏನಪ್ಪ?" ಎಂದಳು ಅವನನ್ನುದ್ದೇಶಿಸಿ ತಾಯಿ. ಮಹಾಶಯನಿಗೆ ಸಿಟ್ಟುಬಂತು. ತಾಯಿ ತನ್ನನ್ನು ಹೀಗೂ ಅವಮಾನಿಸುವುದೆ? ಛೋಕ್ರಾನನ್ನು ತಾನು ತಂದಿದ್ದು, ಛೋಕ್ರಾನಂತೆ ಅವನನ್ನು ನಡೆಯಿಸಬೇಡವೆ? ಎಷ್ಟು ದಿನಗಳಿಂದ ಅವನು

ದಿಕ್ಕುಗೆಟ್ಟಿದ್ದ ! ಫೋಕ್ರಾನ ಬಿನ್ನಮೇಲೆ ಕುದುರೆಸವಾರಿಮಾಡದೆ, ಅವನನ್ನು ತುಳಿಯದೆ-ಹೊಡೆಯದೆ ಇದ್ದರೆ ಮಹಾಶಯನಿಗೆ ನಿದ್ದೆಬಾರದು. ಮನೆಯ ಫೋಕ್ರಾನ ಮೇಲೆ ಅವನಿಗೆ ಪೂರ್ಣ ಹಕ್ಕು. ಅವನ ತಂದೆ ಹಾಗೆ ಮಾಡಲು ಹೇಳಿಕೊಟ್ಟಿದ್ದರು. ಬರ್ಮಾ ಸರಕಾರದ ಹಿರಿಯ ಅಧಿಕಾರಿಯ ಮಗನೊಬ್ಬ ಫೋಕ್ರಾನ ಮೇಲಾದರೂ ಅಧಿಕಾರ ನಡೆಯಿಸಲು ಕಲಿಯಬೇಡವೇನು?

ಆದರೂ ಛದೊಂದು ತಾಯಿ! ಅಗಂತುಕನನ್ನು ಪ್ರಶ್ನಿಸುವಂತೆ ವಿನಯದಿಂದ 'ಏನಪ್ಪ?' ಎನ್ನುತ್ತಿದ್ದಾಳೆ!

"ಏಯ್! ನನ್ನ ಹ್ಯಾಟು ತೆಗೆದಿಡು....." ಎಂದು ಮಹಾಶಯ ಫೋಕ್ರಾನಿಗೆ ಅಜ್ಞೆ ಕೊಟ್ಟ. ಆ ಹುಡುಗ ಹಲ್ಲುಕಿಸಿದ ಪುನಃ. ಎಲ್ಲವೂ ಬಂದು ತಮಾಷೆಯಾಗಿ ತೋರುತ್ತಿತ್ತು ಅವನಿಗೆ. ಬರ್ಮಾಯರಂತೆ ಕಾಣುತ್ತಿದ್ದ ಭಾರತೀಯ ಹುಡುಗನೊಬ್ಬ. 'ಫೋಕ್ರಾ!' ಎಂದು ತನ್ನನ್ನು ಸಂಭೋಧಿಸುತಿದ್ದಾನೆ! ಮಹಾಶಯ ರೀವಿಯಿಂದ ಮಾರ್ಗದಲ್ಲಿ ನಡೆದಾಗ ಯಾರೋ ಅವನನ್ನು ಕಂಡು, ಕರೆದು, ಮಾತನಾಡಿರಬಹುದು. ತನಗೊಬ್ಬ ಫೋಕ್ರಾನಿಲ್ಲದ ದುರವಸ್ಥೆಯನ್ನು ಹುಡುಗ ಹೇಳಿರಬಹುದು. ಹಾಗೆಯೇ ಮಜಾ ನೋಡೋಣವೆಂದು ಬೀದಿಯ ಹುಡುಗನೊಬ್ಬನನ್ನು ಫೋಕ್ರಾನನ್ನಾಗಿ ಮಹಾಶಯನ ಜೊತೆಯಲ್ಲಿ ಕಳುಹಿಸಿದ್ದರು!

ಅಪ್ಪಣೆ ಕೊಟ್ಟಾಗಲೂ ಫೋಕ್ರಾ ಅಲುಗದೆ ನಿಂತರೆ—?

"Fool!" ಎಂದ ಮಹಾಶಯ; "ಈ ಫೋಕ್ರಾ, ಫೂಲ್!"

ನೀರಾದೇವಿ ಹೇಳಿದಳು: "ಒಳಗೆ ನೋಡು ಶಾಯ್! ನಿನಗೆ ಏನು ಇಟ್ಟಿದ್ದೇನೆ—!"

"ತಿಂಡಿ? ಅವಶ್ಯವಾಗಿ!" ಮಹಾಶಯ ಒಳಗೆ ಧಾವಿಸಿದ. ಆದರೆ, "ಫೋಕ್ರಾ! ಅಲ್ಲಿ ನಿಂತಿರು— ಬಂದೆ!" ಎಂದು ಅಡಿಗೆಯ ಮನೆಯಿಂದಲೂ ಅಜ್ಞೆ ಕೊಡುವುದನ್ನು ಮರೆಯಲಿಲ್ಲ.

ಅವಸರವಸರವಾಗಿ, ಇಳಿದನಿಯಲ್ಲಿ, ನೀರಾದೇವಿ ನುಡಿದಳು: "ಒಡನ್ಪಾ.....ಲಗೂನೆ ಓಡಿಬಿಡು. ಬಂದರೆ ಈಗ ಗಲಾಟೆ ಮಾಡುತ್ತಾನೆ."

ಅವಿಧೇಯತೆ ತೋರಿಸುವ ಅವಶ್ಯಕತೆ ಆ ಹುಡುಗನಿಗಿರಲಿಲ್ಲ. ತಾಯಿ ಒಳಸಾಗಿದಳು; ಮಗನ ರಂಜಾಟವನ್ನು ಎದುರಿಸಲು ಸಿದ್ಧತೆಯಾಗಬೇಕಿತ್ತು.

* * *

"ಆಗೋ!" ಎಂದ ಮಹಾಶಯ, ಕೆಲತಿಂಗಳ ಬಳಿಕ. ಲೊಂದು ದಿನ, ತನ್ನ ಕಿವಿ ನಿಗುರಿಸುತ್ತಾ. ತಾಯಿ-ಮಕ್ಕಳು ತಿಂಡಿ ತಿನ್ನುತ್ತಾ ಕುಳಿತಿದ್ದರು. "ಏನದು?" ಎಂದಳು ನೀರಾದೇವಿ.

"ಕೇಳುವುದಿಲ್ಲೇನು? 'ಜೈ! ಜೈ' ಅಂತ? ಗಾಂಧೀಜನ ಅದು!"

ತಾಯಿ ಮುಖದ ಭಾವ ಬದಲಿಸಲಿಲ್ಲ. ಆಕೆಗೂ ಸ್ಪಷ್ಟವಾಗಿ ಜಯಘೋಷ ಕೇಳಿಸುತ್ತಿತ್ತು.

"ನಾನು ಹೋಗಬೇಕು!" ಎಂದ ಮಹಾಶಯ—ಬಿಸ್ಕುಟುಗಳನ್ನು ಗಂಟಲಿಗೆ ತುರುಕುತ್ತಾ.

"ನೋಡಿಬಿಡುತ್ತೇನೆ ನೀನು ಹೊರಗೆ ಕಾಲಿಡುವುದನ್ನು" ಎಂದು ನೀರಾದೇವಿ ಬಿರುಸಾಗಿ ಗದರಿಸಿದಳು. ಆ ಧ್ವನಿಯನ್ನು ಹೆಜ್ಜು ಸಲ ಹುಡುಗ ಕೇಳಿದವನಲ್ಲ. ದಂಗುಬಡಿದಂತಾಯಿತು ಅವನಿಗೆ. ಸಿಟ್ಟು ತೋರಿಸಿದ ತಾಯಿಯ ಮುಖ ಜೋಲು ಬೀಳುತ್ತಿದ್ದುದನ್ನೂ, ಆಕೆ ಉದ್ವಿಗ್ನಳಾಗುತ್ತಿದ್ದುದನ್ನೂ ಮಹಾಶಯ ಕಂಡ.

ಪೆರೆವಣಿಗೆ ನೋಡಲೆಂದು ಹಿತ್ತಿಲಿಗಿಳಿದಿದ್ದ ನೇವಾರರ ಕಿರಿಯ ಮಗಳು ಆ ಕಡೆಗೆ ಬಂದಳು. ಜನಸಂದಣಿ ಮಾರ್ಗವನ್ನು ದಾಂಟಿತು. ಜಯಘೋಷದ ಸದ್ದು ಅಳಿಯುತ್ತ ನಡೆಯಿತು.

ನೀರಾದೇವಿ ಬಂದಿದ್ದವಳೊಡನೆ ಕೇಳಿದಳು: "ಇನ್ನೇನಾಗುವುದು? ಗಲಾಟೆಯಾಗುವುದೇನು? ಅಪಾಯವಿದೆಯೇನು?"

"ಇಲ್ಲವೆಂದು ಹೇಗೆನ್ನಬೇಕು? ಈ ದಿನ ಪತ್ರದಲ್ಲಿದೆ.... ಶ್ರೀಮತಿ ಗಾಂಧಿಯನ್ನೂ ಹಿಡಿದಿದ್ದಾರೆ!"

ಆಸಕ್ತಿಯಿಂದ ನೀರಾ ಕೇಳಿದಳು: "ಅವರೆಲ್ಲಿ ಈಗ?" ಎಂದು.

"ಪೂನಾದಲ್ಲೇ— ಗಾಂಧಿಯ ಜತೆಯಲ್ಲೇ— "

"ಮಕ್ಕಳಿಲ್ಲವೇನು?"

"ಇರಬೇಕು, ನಾಲ್ವರು...."

"ಜೆನ್ನಾದ ಉದ್ಯೋಗದಲ್ಲಿರುವರೇನು?"

ಕೇಳುತ್ತಿದ್ದಾಕೆಗೆ ನಗು ಬಂತು; ಆದರೆ ನಕ್ಕು, ನೀರೆಯನ್ನು ನೋಯಿಸಲಿಲ್ಲ. ಆ ಹೃದಯ ತನ್ನ ಸಂಕಷ್ಟಗಳನ್ನು ಹಿರಿದು ಮಾಡಿ ಮಾತನಾಡುತ್ತಿತ್ತು. ಇತರರಿಗೂ ದುಃಖವಿದೆಯೇನೋ ಎಂದು ತಿಳಿಯುವ ಆತುರ ಅದಕ್ಕೆ.

"ಇನ್ನೇನು ಅವರಿಗೆ? ಜೆನ್ನಾಗಿಯೇ ಇದ್ದಾರೆ" ಎಂದಳು ನೇವಾರರ ಮಗಳು.

"ಯಾರು ಬಲ್ಲರು? ಏನಾದರೂ ಗಲಾಟೆಯಾದರೆ?..... ಬರ್ಮದಿಂದ ಓಡಿಬಂದಿದ್ದೇವೆ;— ಸತ್ತೂ ಸಾಯದೆ..... ಇಲ್ಲಿಗೂ ಜಪಾನರು ಬಂದರೆ?....."

ಜಪಾನರು— ಎಂಬ ಶಬ್ದಕ್ಕೆ ಮಹಾಶಯ ಎದ್ದುನಿಂತ, "ಏಯ್!" ಎನ್ನುತ್ತಾ; "ನಾ ನೋಡುತ್ತೇನೆ ಅವರನ್ನು. ನಮ್ಮ ಆ ಊರಿಗೆ ಬಾಂಬು ಹಾಕಿದವರಲ್ಲವೆ? ತಂದೆಯನ್ನು ಕೊಂದರಲ್ಲವೆ? ನಾನಿದ್ದೇನೆ ಬರಲಿ ಅವರು!"

ನೇವಾರರ ಮಗಳು 'ಓ' ಎಂದು ನಕ್ಕಳು.....ಮಹಾನೀರನ ಪೌರುಷ ಕಂಡು. ನೀರಾದೇವಿಗೂ ನಗು ಬಂತು.

ಮಗನನ್ನು ಆಕೆ ಬರಸೆಳೆದಳು. ಆದರೆ ಗಂಡನ ನೆನಪನ್ನು ಮಗ ಮಾಡಿಕೊಟ್ಟಿದ್ದ. ಕಣ್ಣಲ್ಲಿ ನೀರು ತುಂಬಿತ್ತು. ನಗುತ್ತಿದ್ದರೂ ಅದು ಆನಂದಾಶ್ರುವಲ್ಲ.

* * *

ಆ ರಾತ್ರಿ ಇರುಳಲ್ಲಿ ಕುಳಿತು ನೀರಾದೇವಿ ಕಣ್ಣಿಗೆ ಕೆಲಸ ಕೊಟ್ಟಳು ಕೊಂಚ. ಚಿಮಣಿ ಎಣ್ಣೆಯ ಅಭಾವದಿಂದ—ಜತೆಯಲ್ಲಿ ಹಣದ ಅಭಾವದಿಂದ—ದೀಪಹಚ್ಚಿರಲಿಲ್ಲ. ನೇವಾರರು, ತನ್ನ ಉದಾರತೆಯನ್ನು ತೋರಿಸುವುದಕ್ಕಾಗಿಯೋ ಏನೋ, ಬಂದ ಮೊದಲಿಗೆ, "ಬೇಕಿದ್ದರೆ ಇಲೆಕ್ಟ್ರಿಕ್ ಲೈಟ್ಸ್ ಹಾಕಿಸೋಣ" ಎಂದಿದ್ದರು. "ಬೇಡ" ಎಂದು ನೀರಾ ಉತ್ತರವಿತ್ತಿದ್ದಳು. ಅದೊಂದು ಒಣ ಅಭಿಮಾನ, ಸ್ವಾಭಿಮಾನ; 'ಪರರ ಹಂಗಿಗೆ ಬೀಳಬಾರದು' ಎಂಬ ಆಶೆ.

ಪತಿನಿಯೋಗದ ಜತೆಯಲ್ಲಿ, ರಂಗೂನಿನ ಮೇಲೆ ಜಪಾನರು ಸುರಿದ ಮೊದಲ ಬಾಂಬಿನ ಸುಳಿಯ ಜತೆಯಲ್ಲಿ,—ಆಕೆಯ ಸಂಕಟಪರಂಪರೆಗೆ ಆರಂಭವಾಗಿತ್ತು. ಏನನ್ನೆಲ್ಲ ಆಕೆ ಅನುಭವಿಸಲಿಲ್ಲ? ಇನ್ನೇನು ಲೋಕದಲ್ಲಿ ಉಳಿದುದು? ಮಗುವಿನೊಡನೆ ಭಾರತಕ್ಕೆ ಬರುವುದಕ್ಕಾಗಿ ಆಕೆ ಪಟ್ಟ ಕಷ್ಟವನ್ನು ವಿವರಿಸುವುದೂ ಶಕ್ಯವೆ? ತನ್ನ ಗಂಡ ಜಪಾನರ ವಿರುದ್ಧ ಹೋರಾಟವೆಸಗಿದ್ದ. 'ಅಂತಹನ ಪತ್ನಿಗಾದರೂ ಭಾರತದ ಸರಕಾರ ಸಹಾಯ ಕೊಡದಿರದು' ಎಂಬ ಹಿರಿದಾಶೆಯನ್ನು ಆಕೆ ಕಟ್ಟಿಕೊಂಡಿದ್ದಳು. ಆದರೆ ತನ್ನ ಸೈಧವ್ಯವನ್ನೂ, ಪತಿಯ ಪರಿಚಯವನ್ನೂ, ರುಜುಪಡಿಸಲು ಅವಶ್ಯವಿರುವ ಪುರಾವೆಗಳು ಅವಳಲ್ಲಿರಲಿಲ್ಲ. ನೇವಾರರ ಮೂಲಕ ಆ ಯತ್ನ ಆಗಲೂ ನಡೆಯುತ್ತಿತ್ತು.

ನೇವಾರರ ಬೆಂಬಲವೊಂದು ಇಲ್ಲದೆ ಹೋಗುತಿದ್ದರೆ? ಏನಾಗುತ್ತಿತ್ತು ಅವರಿಬ್ಬರ ಅವಸ್ಥೆ? ಸರಕಾರದಿಂದ ಸಹಾಯ ವೇತನ ಪಡೆಯುವುದಕ್ಕೂ ಅವರು ನೆರವಾದರು. ಅವಳಿಗೆ ಹದಿನೈದು, ಮಗುವಿಗೆ ಐದು ರೂಪಾಯಿಗಳನ್ನು ಕೊಡಬಹುದೆಂದಿತು ಸರಕಾರ. ಅವಕ್ಕೂ ಆ ಹುಡುಗ ಶಾಲೆಗೆ ಹೋಗುತ್ತಿರಬೇಕು! ಆದರೆ ಅದೇ ನಗರದಲ್ಲಿ ವಾಸವಾಗಿದ್ದ ಧನಿಕ ರಕ್ಷಾರ್ಥಿಗಳಲ್ಲಿ—ಹಿರಿಯ ಅಧಿಕಾರಿಗಳಾಗಿ ಇದ್ದವರು ಅವರು— ಪ್ರತಿಮಗುವೂ ೫೦ ರೂಪಾಯಿ ಸಹಾಯವೇತನ ಪಡೆಯುತ್ತಿತ್ತು. ಒಕ್ಕೈಯ ನ್ಯಾಯ! ವಿಮಾನ ಮಾರ್ಗವಾಗಿ ಮೊದಲೇ ಭಾರತವನ್ನು ಬಂದು ತಲಪಿದುವಕ್ಕೆ ಬಹುಮಾನವಿರಬಹುದು ಇದು.

ಯೋಚನೆ ಒಂದು ಹೊರಟಿತೆಂದರೆ ಬಳಿಕ ತಡೆಯಿಲ್ಲ. ಸಾಲು ಗಟ್ಟಿ ಹರಿದು ಬರುವುದು.

"ಅಮ್ಮಾ...." ಎಂದಿತೊಂದು ಸ್ವರ—ಮಹಾಶಯನದು. ನಿದ್ದೆಯಲ್ಲಿ ಮಧ್ಯೆ ಎಚ್ಚತ್ತಾಗ, ಮಲಗವೆ ಇದ್ದ ತಾಯಿಯನ್ನು ಕಂಡನೇನೋ! ಆಕೆ ಉಗುಳು ನುಂಗಿ, ಅಳುತ್ತಿದ್ದುದನ್ನು ತಿಳಿಯಗೊಡದೆ, "ಮಲಗು ಶಾಯ್...." ಎಂದಳು.

ಶಾಯ್‌ಯೇನೋ ಮಲಗಿದ. ಆದರೆ ಅವನಿಗೆ ಈಗಲೀಗ ಒಂದೊಂದಾಗಿ ತಿಳುವಳಿಕೆಯಾಗುತ್ತಿತ್ತು. ಆ ಕಿರಿಯ ಹೆಗಲುಗಳ ಮೇಲಿನ ತಲೆಯಲ್ಲಿ ಪ್ರಾಯಕ್ಕೆ ಮೀರಿದ ವಿಚಾರಗಳು ತುಂಬ ತೊಡಗಿದ್ದುವು.

"ಹತ್ತಿರ ಬಾಮ್ಮಾ.... ಎಂತಹ ಮಳೆ ಹೊರಗೆ....ಚಳಿಯಾಗುತ್ತೆ!"

ನೀರಾದೇವಿ ಬಳಿಸಾರಿದಳು. ಸಾಪ ಹುಡುಗ! ಕೆಲವೇ ತಿಂಗಳ ಹಿಂದೆ ಬರ್ಮಾದಲ್ಲಿ ಛೋಕ್ರನಿಗಾಗಿ, ಗರ್ಜಿಸಿ, ಅವನನ್ನು ಬಳಿಯಲ್ಲೇ ಮಲಗಗೊಡುತ್ತಿದ್ದ ಮರಿಸಿಂಹ ಅದು. ಈಗ ಎಷ್ಟು ಸಾಧುವಾಗಿದ್ದಾನೆ! ಅಮ್ಮನೊಬ್ಬಳೇ ಅವನಿಗೆ ಶರಣು. ನೀರಾಳಿಗೆ ಕಂಠ ಬಿಗಿದು ಬಂತು; ಕಣ್ಣೀರು ಉಕ್ಕಿಬಂತು.

* * *

ನೇವಾರರು ಹೇಳಿದರು: "ಇಲ್ಲ; ಇಲ್ಲ; ಏನೂ ಭೀತಿ ಬೇಡ. ಅವಶ್ಯ ಆಸ್ಪತ್ರೆಗೆ ಕೊಂಡೊಯ್ಯಿರಿ. ಎಲ್ಲ ವ್ಯವಸ್ಥೆ ನಾನು ಮಾಡುತ್ತೇನೆ!....."

"ಅವನನ್ನು ನನಗೆ ಬಿಟ್ಟಿರಲಿಕ್ಕಾಗುವುದಿಲ್ಲ; ನಾನೂ ಜತೆಯಲ್ಲೇ ಇರುವೆ." ಎಂದಳು ನೀರಾದೇವಿ. ಮಹಾಶಯನ ಜ್ವರ ಹಿಡಿದು ಮಲಗಿದ್ದ. ಬಿಡದೆ ಮೈ ಬಿಸಿಯಾಗುತ್ತಿತ್ತು. ಸಾರ್ವಜನಿಕ ಆಸ್ಪತ್ರೆಯ 'ಬೆಡ್ಡಿ'ಗೆ ತಾಯಿ ಮಗುವನ್ನು ಸಾಗಿಸಿದಳು.

ಆಸ್ಪತ್ರೆಯವರು ತನ್ನ ಮಗುವಿನ ಸಂರಕ್ಷಣೆ ಮಾಡುವರು, ಎಂಬ ನಂಬಿಕೆ ಅವಳಿಗೆ; ದೇವರು ತನ್ನ ಒಬ್ಬನೇ ಮಗನಿಗೆ ಕೆಡುಕನ್ನುಂಟುಮಾಡಲಾರನೆಂಬ ಅಚಲ ವಿಶ್ವಾಸ ಜತೆಯಲ್ಲೆ. ಔಷಧೋಪಚಾರ ಸಾಗಿತು. ಗುಣವಾಗಲಿಲ್ಲ. ಜ್ವರ ಕಳೆದು ಪಾರ್ಶ್ವಬೇನೆ ಹೆಚ್ಚಿತು. ತನ್ನ ನರಳಾಟದಲ್ಲಿ ಇತರರ ಕರುಳನ್ನೇ ಮಹಾಶಯ ಕೊಯ್ಯುತ್ತಿದ್ದ. ಅಧೀರೆಯಂತೆ ಅಳಲಿಲ್ಲ ಆ ತಾಯಿ. ಉಪಚಾರದಲ್ಲಿ ಕೊಂಚ ಹೆಚ್ಚುಕಡಿಮೆಯಾದರೂ ಆಕೆಗೆ ಸಹನೆಯಾಗುತ್ತಿರಲಿಲ್ಲ ಆಷ್ಟೆ; ಅವಳಗೇನೂ ಬೇನೆಯ ಕುರಿತು ಗೊತ್ತಿರಲಿಲ್ಲ. ಡಾಕ್ಟರರ ಮೇಲೆಯೇ ಎಲ್ಲ ಭಾರ.

ಆ ದಿನ, ಅದೊಂದು ದುರ್ದಿನ! ಮಗನ ಮಗ್ಗುಲಲ್ಲಿ ಕುಳಿತು ಹೊತ್ತು ಕಳೆಯಲೆಂದು ನೀರಾದೇವಿ ಪತ್ರಿಕೆ ಕೊಂಡಳು. ಮುಂಬಯಿಯ ಒಂದು ಸಾಪ್ತಾಹಿಕ. ಎಮರು ಪುಟದಲ್ಲೊಂದು ಲೇಖನವಿತ್ತು. ಸಿಂಗಾಪುರದ ರಕ್ಷಾರ್ಥಿಯೊಬ್ಬನು ಕೊಟ್ಟದ್ದ ಮೊಕ, ಆ ಮುದುಕನ ಉಳಿದೊಬ್ಬನೇ ಒಬ್ಬ ಮಗ, ಈ ಲೋಕದಲ್ಲಿ ಅವನ ಸರ್ವಸ್ವ, ಅಲ್ಪ ಕಾಯಿಲೆಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋದವನು—ಅದೂ ಮುಂಬಯಿಯ ಮುಖ್ಯ ಆಸ್ಪತ್ರೆಯೊಂದರಲ್ಲಿ—ಡಾಕ್ಟರರ ಅಜಾಗರೂಕತೆಯಿಂದ ಪ್ರಾಣ ಕಳೆದು ಕೊಂಡಿದ್ದ!

ಅವಳು, ಅದೂ ಆ ಹೊತ್ತಿನಲ್ಲಿ ಅವಶ್ಯ ಓದಬೇಕಾಗಿದ್ದ ವಿಷಯವಲ್ಲವೆ ಅದು! ಆಕೆಯ ಶಕ್ತಿ ಎಲ್ಲ ಉಡುಗಿಹೋದಂತಾಯಿತು.

"ಕಾಡುಕೋಣ"ದ ಗುರುತಿನ
++ ++ ++ ++ ಕಾಗದವು
ಕನ್ನಡನಾಡಿನದು!
ಬರೆಯಲಿಕ್ಕೂ ಮುದ್ರಣಕ್ಕೂ ತಕ್ಕುದಾದುದು.
ಅಧಿಕೃತ ಪ್ರಸಾರಕರು: ಜಿ. ಕೆ. ಕೇಳಕರ
ಸ್ವದೇಶಿ ಪೇಪರ್ ಮಾರ್ಟ್, ಧಾರವಾಡ.

ಮೂಕ ಜೀವಿಯಂತೆ ಮಗನ ಮುಖ ನೋಡುತ್ತ ಅವಳು ಕುಳಿತಳು.

ರಾತ್ರಿ, ಕೆಟ್ಟ ಕಲ್ಪನೆಗಳ ಫಲವಾಗಿ ದುಃಸ್ವಪ್ನ ಬಿತ್ತು. ತನ್ನ ಮಗ ದೊಡ್ಡವನಾಗಿ, ಭಿಕಾರಿಯಾಗಿ, ಬೀದಿಯಲ್ಲಿ ಅಲೆಯುತ್ತಿದ್ದುದನ್ನು ಅವಳು ನೋಡಿದಳು. ಒಮ್ಮೆಲೆ ಎಚ್ಚರವಾಯಿತು. ಮೈ ಥರಥರನೆ ನಡುಗುತ್ತಿತ್ತು. ಮಂದಪ್ರಕಾಶದಲ್ಲಿ ಮಗನನ್ನು ನೋಡಿದಳು. ನಿದ್ರಿಸುತ್ತಿದ್ದನಾತ.

ಬೆಳಕು ಹರಿಯಿತು. ಡಾಕ್ಟರರು ಬಂದಾಗ ಆಕೆ ಗಂಭೀರಳಾಗಿ ನಿಂತು ಅವರ ಮೇಲೆ ಆರೋಪ ಹೊರಿಸುವವರಂತೆ, "ನನ್ನ ಮಗುವನ್ನು ಉಳಿಯಗೊಡುತ್ತೀರಿ ತಾನೆ?" ಎಂದಳು.

ಡಾಕ್ಟರರು ಇದೇನು ಹೊಸ ವೈಚಿತ್ರ್ಯವೆಂದು ಆಕೆಯನ್ನು ವಿಲಕ್ಷಣವಾಗಿ ನೋಡಿದರು. ಮಾತೆಯ ಹೃದಯವನ್ನು ತಿಳಿದುಕೊಳ್ಳುವಷ್ಟು ಮನಃಶಾಸ್ತ್ರ ಆ ಡಾಕ್ಟರ್ ಕಲಿತಿರಲಿಲ್ಲ.

ನರ್ಸ್ ಬಂದಾಗ ನೀರಾ ಹೊರಗಿದ್ದಳು. ನುದ್ದನ್ನಿರಿಸಿ ಹಿಂದಿರುಗುತ್ತಿದ್ದ ದಾದಿಯನ್ನು ಮಹಾಶಯ ಕ್ಷೀಣ ಸ್ವರದಲ್ಲಿ "ಛೋಕ್ರಾ!" ಎಂದ. ನರ್ಸ್ ಸಿಟ್ಟುಗೊಂಡು ಬೇಕೆಂದೇ ಉತ್ತರ ಕೊಡಲಿಲ್ಲ. ಪುನಃ ಗಟ್ಟಿಯಾಗಿ ಶಾಯ್ "ಛೋಕ್ರಾ!" ಎಂದ. ನೀರಾ ಒಳಬರುವುದೂ ಏರಿಹೋಯಿತು. ನರ್ಸ್ ಹೇಳಿದಳು. "ನೋಡಿರಿ ಮಹಾರಾಣಿಯವರೇ.... ನಿಮ್ಮ ಮಗನಿಗೆ ಸ್ವಲ್ಪ ಮರ್ಯಾದೆಯಿಂದಿರಹೇಳಿ!"

ನೀರಾಳಿಗೆ ತಿಳಿಯಿತು. ಮುಖವನ್ನು ಸೆರಗಿನಿಂದ ಮರೆಮಾಡಿ ಬಹು ಕಾಲ ಕಳೆದಳು. ಎಚ್ಚತ್ತಾಗ ಮಗು ನಿದ್ದೆ ಹೋಗಿದ್ದುದು ಕಂಡಿತು.

ಬೇನೆ ಇಳಿದಿತ್ತು ಆ ದಿನ.. ಆದರೆ ಜ್ವರ ಕೆಂಡದಂತೆ ಸುಡುತ್ತಿತ್ತು. ರಾತ್ರಿ ಜಾಗರದಲ್ಲಿದ್ದಳು. ನೀರಾ "ಎಚ್ಚರಿಕೆಯಿಂದಿರಿ–" ಎಂದಿದ್ದರು ಡಾಕ್ಟರರು.

ಕೊಂಚ ನಿದ್ದೆ ಹತ್ತಿತೆಂದರೆ ಏನೆಲ್ಲ ಕಣ್ಣಿಗೆ ಕಾಣಿಸುತ್ತಿತ್ತು. ಎಚ್ಚರಿಕೆಯಿಂದಲೇ, ಎಚ್ಚರದಲ್ಲೇ ನೀರಾ ಹೊತ್ತು ಕಳೆದಳು. ಎಷ್ಟೋಕಾಲದಿಂದ ಮರೆತಿದ್ದರೂ ಪುನಃ 'ಛೋಕ್ರಾ'ನ ಸುದ್ದಿಯೆತ್ತಿದನಲ್ಲ ಹುಡುಗ! ಇದೊಂದು ತಿಂಗಳು ನೆರವೇರದೆ ಉಳಿಯಬೇಕೇನು? ತನ್ನ ರಕ್ತದ ಒಂದು ಬಿಂದು, ಮಾಂಸದ ಒಂದು ಖಂಡ, ಕರುಳಿನ ಒಂದು ಚೂರು— ಆ ಮಗುವಿಗೆ ತಾನು ಸೌಕರ್ಯ ಒದಗಿಸದೆ ಹೋದೆನೇನು?— ನೀರಾ ಅಸಹನೀಯ-ಯಾತನೆಯನ್ನು ಅನುಭವಿಸುತ್ತಿದ್ದಳು.

ಒಮ್ಮೆ, ಶಾಯ್ ಗುಣಮುಖನಾದನೆಂದರೆ—ಹೊಸ ಜೀವನವನ್ನು ಏಕೆ ಸಾಗಿಸಬಾರದು? ತನ್ನ ಒಂದೇ ಒಂದು ಆಶೆಯಾದ ಶಾಯ್ ಬೆಳಕಿಗೆ ಬರಬೇಡವೇನು? ಲೋಕದ ದೃಷ್ಟಿಯಲ್ಲಿ ಮಾನಿಸಲ್ಪಡುವದು ಅವಶ್ಯವಿಲ್ಲವೇನು? ತನ್ನ ಜೀವನ ಎಷ್ಟರದು? ನಾಳೆ ಮಣ್ಣಿಗೆ ಮರಳಬಹುದು. ಆದರೆ ಮಹಾಶಯನ ಬಾಳ್ವೆ....?

ಆ ದಾದಿ ಕೂಡಾ ಎಂತಹ ಮಾತನ್ನಾಡಿದಳು! ತನ್ನದೇ ತಪ್ಪು. ಮಗನಿಗೆ ಆ ಮೊದಲೇ, 'ಛೋಕ್ರಾ'ನೊಬ್ಬನನ್ನು ಒದಗಿಸಬೇಕಿತ್ತು. ನಿಜ—ಇನ್ನಾದರೂ ಅದನ್ನು ಮಾಡಬೇಕು. ಮರುದಿನವೇ ಆ ಕೆಲಸವಾಗಬೇಕು.....

ನಾಲ್ಕು ಗಂಟೆಗೆ– ಬೆಳಗಿನ ಜಾವ– ಮಹಾಶಯನಿಗೆ ಬೆವರಿತು ಜ್ವರ ಇಳಿಯಿತು; ಗಂಡಾಂತರ ಕಳೆಯಿತು.

ಡಾಕ್ಟರರು ಬಂದಾಗ ನೀರಾ ವಂದನೆಯಿತ್ತಳು. ತಾಯಿಯನ್ನನುಕರಿಸಿ ಮಹಾಶಯನೂ "ನಮಸ್ಕಾರ ಡಾಕ್ಟರ್! ನಾನು ಹುಷಾರಿದ್ದೇನೆ; ಇಲ್ಲವೆ?" ಎಂದ. ಡಾಕ್ಟರರ ಸಂತೋಷಕ್ಕೆ ಪಾರವಿರಲಿಲ್ಲ. ಅವರು ಔಷಧೋಪಚಾರ ಮಾಡಿದಮೇಲೆ ಹಾಗಾಗದಿರುವುದೆ? ನೀರಾ ಸಂತಸದ ಕಂಬನಿ ಮಿಡಿದಳು.

ಡಾಕ್ಟರರು ಹೋದಾಗ ತಾಯಿ ಮಗನ ಹಣೆಯಮೇಲೆ ಮುದ್ದಿಟ್ಟಳು. ಮಗನಿಗೆ ಸಂತೋಷವಾಗುವಂತಹ ಮಾತಾಡಬೇಕೆಂದು ಆಕೆಗೆ ತವಕ, ಆದರೆ ಶಬ್ದ ಹೊರಡಲೊಲ್ಲದು....

ಶಾಯ್ ಕ್ಷೀಣ ಸ್ವರದಲ್ಲಿ ಹೇಳಿದ; "ಅಮ್ಮಾ....ಒಬ್ಬರಿಗೆ 'ಛೋಕ್ರಾ' ಎಂದು ಕರೆದರೆ ಸಿಟ್ಟು ಬರುತ್ತೇನು? ನನಗೆ ಗೊತ್ತೇ ಇರಲಿಲ್ಲ...."

ತಾಯಿ ಗಾಬರಿಯಾಗಿ ಹೇಳಿದಳು: "ಇಲ್ಲ ಮಗೂ....ಈ ದಿನ ಹೊಸ-ಛೋಕ್ರಾನನ್ನು ತಂದೇ ಬಿಡುತ್ತೇನೆ...."

"ಅಯ್ಯೋ! ಇಲ್ಲಮ್ಮಾ....ಖಂಡಿತ ಕೂಡದು....ಇನ್ನು ಯಾರಿಗೂ ಹಾಗೆ ಕರೆಯುವುದಿಲ್ಲ....ಯಾರೂ ಹಾಗೆ ಬೇಡ. ನಾವೇ–ಇಬ್ಬರೇ–ಒಟ್ಟಿಗೆ ಸುಖದಿಂದಿರೋಣ...." ನೀರಾ ಆ ಬಡಕಲು ಜೀವವನ್ನಪ್ಪಿಕೊಂಡಳು.

ಹಿಂದಿನ ದಿನ ಬಂದಿದ್ದ ನರ್ಸ್ ಬಂದಳು. "ರಾಜಕುಮಾರಿಗೆ ಸೌಖ್ಯವೇ?" ಎಂದಳು, ನಂಜಿನ ನುಡಿ!

ಮಹಾಶಯ ಹೇಳಿದ: "ನಮಸ್ತೆ ನರ್ಸ್, ಕ್ಷಮಿಸು ನರ್ಸ್,.... ನಾನು ಬುದ್ಧಿಯಿಲ್ಲದ ಹುಡುಗನಾಗಿದ್ದೆ....ಈಗ ಹಾಗಲ್ಲ ನೋಡಿ....ನಾವು ಮಿತ್ರರು ಅಲ್ಲವೆ?"

ಆ ತಾಯಿ ಅಳುತಿದ್ದಳು, ನಗುತಿದ್ದಳು, "ಹುಚ್ಚು ಹುಡುಗ" ಎನ್ನುತ್ತಾ.

ನರ್ಸಿನಲ್ಲಿಯೂ ಇದ್ದ ಅಲ್ಪ ಸ್ವಲ್ಪ ಮಾನವತೆ ಒಡಮೂಡಿತೋರಿತು.

ವಾರಗಳ ಉತ್ಪತ್ತಿ

★

(ಜ್ಯೋತಿಷ ವಿಚಾರ)

ಶ್ರೀ. ಜ್ಯೋತಿರ್ವಿದ್ವಾನ್ ಎಸ್. ಎಸ್. ಹಿರೇಮಠ,
ಹಂಗರಕಿ

★

ವಾರಗಳ ಉತ್ಪತ್ತಿ ಹೇಗೆ? ಭೂಮಿಯು ಅಚಲವೆಂಬ ತಿಳುವಳಿಕೆಗೆ ಅನುಸರಿಸಿ, ಸಿದ್ಧವಾದ ಪ್ರಾಚೀನ ವಾರಗಳು, ಆ ಕಲ್ಪನೆ ತಪ್ಪು ಎಂದು ತಿಳಿದಾಗಲೂ ಅವುಗಳಲ್ಲಿ ಬದಲಾವಣೆಯಾಗುವುದು ಬೇಡವೆ? ಇಂದಿನ ಶಾಸ್ತ್ರದೃಷ್ಟಿಯಿಂದ ವಾರಗಳನ್ನು ನಿರ್ಧರಿಸಬೇಕು.

★

ಪ್ರಪಂಚದಲ್ಲಿರುವ ಆಬ್ರಹ್ಮಕೀಟಪರ್ಯಂತವಾಗಿ ಸಮಸ್ತ ಪ್ರಾಣಿಗಳೂ ಸೂರ್ಯರಶ್ಮಿಯ ಆಧಾರದಿಂದಲೇ ಜೀವಿಸುತ್ತಿವೆ. ಈ ಸೂರ್ಯರಶ್ಮಿ ಇಲ್ಲದಿದ್ದರೆ ಯಾವ ಪ್ರಾಣಿಯೂ ಜೀವಿಸಲಾರದು ಮತ್ತು ಅಂತರಿಕ್ಷದಲ್ಲಿಯ ಯಾವ ಗ್ರಹ-ನಕ್ಷತ್ರಗಳೂ ಸಂಚರಿಸಲಾರವು. ಆದುದರಿಂದ ಹೀಗೆ ಪ್ರಪಂಚದ ಮುಖ್ಯ ಅಧಿಕಾರವೇ ಸೂರ್ಯನಿಗೆ ಸೇರಿರುವುದರಿಂದ, ಸೂರ್ಯನೇ ಪ್ರತ್ಯಕ್ಷದೈವವೆಂದು ನಮ್ಮ ಪ್ರಾಚೀನ ಜ್ಯೋತಿಷ್ಕರಾದ ವಸಿಷ್ಠ, ಪರಾಶರ, ಮಯ, ಯವನ, ಮಣಿತ್ಥ, ಸತ್ಯಾಚಾರ್ಯ, ಜೀವಶರ್ಮ, ಕೃತಕೀರ್ತಿ, ಜಯದೇವ, ಭಾಸ್ಕರಾಚಾರ್ಯ, ಆರ್ಯಭಟ್ಟ, ವರಾಹಮಿಹಿರ ಮೊದಲಾದವರು ತಿಳಿದರು.

ಸೂರ್ಯನೇ ಮೊದಲಾದ ಇತರ ಗ್ರಹ-ನಕ್ಷತ್ರಗಳಿಗೆ ಸಂಬಂಧಪಟ್ಟ ಶಾಸ್ತ್ರವೇ ಜ್ಯೋತಿಷ್ಯಶಾಸ್ತ್ರವು. ಇದರಲ್ಲಿ ಗಣಿತ, ಮುಹೂರ್ತ, ಫಲಜ್ಯೋತಿಷ್ಯಗಳೆಂಬ ಭಾಗಗಳಿವೆ. ಫಲಜ್ಯೋತಿಷ್ಯಭಾಗಕ್ಕೆ ಹೋರಾಶಾಸ್ತ್ರವೆಂದೂ ಹೆಸರು ಇದೆ. ಈ ಭಾಗವು ಮುಖ್ಯವಾಗಿ ಅಹೋರಾತ್ರಿಗಳಿಗೆ ಸಂಬಂಧಿಸಿರುವುದರಿಂದ ಇದಕ್ಕೆ ಹೋರಾಶಾಸ್ತ್ರವೆಂದು ಹೆಸರು ಬಂದಿದೆ. ಅದು ಹೇಗೆಂದರೆ "ಹೋರೇತ್ಯಹೋರಾತ್ರ ವಿಕಲ್ಪಮೇಕೇ| ವಾಂಛಂತಿ ಪೂರ್ವಾಪರ ವರ್ಣಲೋಪಾತ್" ಈ ಪ್ರಕಾರ ಅಹೋರಾತ್ರದ ವಿಕಲ್ಪವೇ ಹೋರೆ ಎಂದು ಕೆಲವರು ಕೋರುತ್ತಾರೆ. ಅದು ಹೇಗೆಂದರೆ ಪೂರ್ವವರ್ಣವಾದ 'ಅ' ಕಾರವನ್ನೂ ಪರವರ್ಣವಾದ 'ಹ್ರ' ಕಾರವನ್ನೂ ಲೋಪಮಾಡಿದರೆ, ಮಧ್ಯ ಉಳಿಯುವ ಅಕ್ಷರದ್ವಯವೇ ಹೋರಾ. ಹೋರಾ ಶಬ್ದವು ಅಹೋರಾತ್ರ ಸೂಚಕವಾದರೂ ಅದು ಕೇವಲ ೨೪ ಘಳಿಗೆಯ ಕಾಲವನ್ನು ಸೂಚಿಸುವುದಕ್ಕೇ ಉಪಯೋಗಿಸಲ್ಪಟ್ಟಿದೆ. ವಾರೋತ್ಪತ್ತಿಯು ಮುಖ್ಯವಾಗಿ ಹೋರಾಚಕ್ರದ ಆಧಾರದಿಂದಲೇ ಆಗಿದೆ. ವಾರೋತ್ಪತ್ತಿಯನ್ನು ತಿಳಿಯುವುದಕ್ಕಿಂತ ಮೊದಲು, ಖಗೋಲಶಾಸ್ತ್ರದ ಬಗ್ಗೆ ಪ್ರಾಚೀನ ಜ್ಯೋತಿಷ್ಕರ ವಿಚಾರಗಳು ಹೇಗೆ ಇದ್ದುವೆಂಬುದನ್ನು ತಿಳಿಯುವುದು ಅವಶ್ಯ.

ನಮ್ಮ ಪೃಥ್ವಿಯ ಮಧ್ಯಬಿಂದು ಮತ್ತು ಅದರ ಸುತ್ತಲೂ ಸೂರ್ಯ ಮೊದಲಾದ ಗ್ರಹಗಳು ಸುತ್ತುವುವೆಂದು, ಕ್ರಿ. ಪೂ. ಎಷ್ಟೋ ಸಾವಿರ ವರ್ಷಗಳ ಪೂರ್ವದಲ್ಲಿ ಭಾರತೀಯ ಜ್ಯೋತಿಷ್ಕರು ತಿಳಿದಿದ್ದರು. ಇದೇ ಭೂಕೇಂದ್ರ (Geo-centric) ತತ್ತ್ವವನ್ನು ಗ್ರೀಕ್ ಖಗೋಲ ಶಾಸ್ತ್ರಜ್ಞನಾದ ಟಾಲೆಮಿಯು ಕ್ರಿ.ಶ. ೨ನೆಯ ಶತಮಾನದಲ್ಲಿ ಕಂಡುಹಿಡಿದನು. ಇದೇ ತತ್ತ್ವವು ಮುಂದೆ ೧೪೦೦ ವರ್ಷಗಳ ವರೆಗೆ ಎಲ್ಲ ದೇಶಗಳಲ್ಲಿಯೂ ರೂಢಿಯಲ್ಲಿತ್ತು. ಆದರೆ ೧೬ನೆಯ ಶತಮಾನದಲ್ಲಿ ಪೋಲಂಡ ದೇಶದ ಖಗೋಲ ಶಾಸ್ತ್ರಜ್ಞನಾದ ಕೋಪರ್ನಿಕಸ್ ಎಂಬವನು, ಈ ಭೂಕೇಂದ್ರ ತತ್ತ್ವವು ತಪ್ಪೆಂದೂ, ಆದರೆ ಭೂಮಿಯು ತನ್ನ ಮೈಸುತ್ತು ತಿರುಗುತ್ತ ಭೂಮಿಸಹಿತವಾಗಿ ಎಲ್ಲ ಗ್ರಹಗಳು ಸೂರ್ಯನ ಸುತ್ತಲೂ ಪ್ರದಕ್ಷಿಣೆ ಹಾಕುವುವು ಎಂದೂ ಸೂರ್ಯಕೇಂದ್ರ (Helio-Centric) ತತ್ತ್ವವನ್ನು ಕಂಡು ಹಿಡಿದನು. ಆದರೆ ಈ ತತ್ತ್ವವನ್ನು ಜನರು ಒಪ್ಪಲಿಕ್ಕೆ ಎಷ್ಟೋ ವರ್ಷಗಳು ಬೇಕಾದುವು. ಖಗೋಲ ಶಾಸ್ತ್ರದ ಬಗ್ಗೆ ಇದ್ದ ಭಾರತೀಯರ ಹಾಗೂ ಪಾಶ್ಚಿಮಾತ್ಯರ ತಿಳಿವಳಿಕೆಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದಾಯಿತು. ಇನ್ನು ವಾರೋತ್ಪತ್ತಿಯನ್ನು ನೋಡುವಾ.

ಭೂಮಿಯನ್ನು ಸುತ್ತುವುದಕ್ಕೆ—ಪ್ರಾಚೀನ ಮತದಂತೆ—ಬೇರೆ ಬೇರೆ ಗ್ರಹಗಳಿಗೆ ಬೇರೆ ಬೇರೆ ಅವಧಿಯು ಹಿಡಿಯುತ್ತದೆ. ಉದಾಹರಣೆಗಾಗಿ ಸೂರ್ಯನಿಗೆ ಒಂದು ವರ್ಷ, ಗುರುವಿಗೆ ೧೨ ವರ್ಷ, ಶನಿಗೆ ೩೦ ವರ್ಷಗಳು ಬೇಕು. ಇದಕ್ಕೆ ಕಾರಣವೆಂದರೆ ಭೂಮಿಯಿಂದ ಗ್ರಹಗಳು ಉನ್ನತೋನ್ನತ ಸ್ಥಾನಗಳಲ್ಲಿ ಸಂಚರಿಸುವುದರಿಂದ, ಕಾಲವಿಪರ್ಯಾಸ ಉಂಟಾಗುವುದು. ಇದಕ್ಕೆ ಪ್ರಮಾಣ ಸೂರ್ಯಸಿದ್ಧಾಂತದಲ್ಲಿ ಹೇಳಿರುವುದೇನೆಂದರೆ—

ಮಂದಾಮರೇಜ್ಯ ಭೂಪುತ್ರ ಸೂರ್ಯ ಶುಕ್ರೇಂದುಜೇಂದರಃ |
ಪರಿಭ್ರಮಂತ್ಯಧೋಧಸ್ತಾತ್ ಕ್ರಮಶಃ ಶೀಘ್ರ ಗಾಮಿನಃ ||

ಈ ಪ್ರಕಾರ ಎಲ್ಲ—ಗ್ರಹಗಳಿಗಿಂತಲೂ ಭೂಮಿಗೆ ಶನಿಯು ಮೇಲ್ಭಾಗದಲ್ಲಿ ದೂರದಲ್ಲಿ, ಅನಂತರ ಕೆಳಗೆ ಗುರುವು; ಮಂಗಳನು, ಸೂರ್ಯನು, ಶುಕ್ರನು, ಬುಧನು, ಚಂದ್ರನು ಹೀಗೆ ಒಂದರ ಕೆಳಗೊಂದು ಅಧೋಧಃ ಪ್ರಕಾರವಾಗಿ ಎಲ್ಲ ಗ್ರಹಗಳು ಸಂಚರಿಸುತ್ತವೆ. ಭೂಮಿಗೆ ಚಂದ್ರನಿಗಿಂತ ಸಮೀಪವಾದ ಯಾವ ಗ್ರಹವೂ ಇಲ್ಲ. ಈ ಗ್ರಹಗಳ ಸಂಚಾರ ಕ್ರಮವನ್ನನುಸರಿಸಿ

ರವಿವಾರಾದಿ ೭ ವಾರಗಳು—ಹೋರೆಗಳು—ಕ್ರಮವಾಗಿ ಉಂಟಾಗಿರುತ್ತವೆ. ಹೇಗೆಂದರೆ ಶನಿ, ಗುರು, ಮಂಗಳ, ರವಿ, ಶುಕ್ರ, ಬುಧ, ಚಂದ್ರ, ಈ ಪ್ರಕಾರ ಸಂಚರಿಸುವುದರಿಂದ, ಈ ಕ್ರಮದಲ್ಲಿ ಸೂರ್ಯಾದಿಯಾಗಿ ೪ನೆಯ ಗ್ರಹವು ಯಾವುದೋ ಆ ಗ್ರಹದ ಹೆಸರಿನ ವಾರವೆ ರವಿವಾರದ ಮಾರನೆಯ ದಿನವಾಗುವುದು. ರವಿಯಿಂದ ೪ನೆಯ ಗ್ರಹವು ಚಂದ್ರನಾದ್ದರಿಂದ, ಮರುದಿನ ಸೋಮ—ಚಂದ್ರ—ವಾರವಾಗುವುದು. ಚಂದ್ರನಿಂದ ೪ನೆಯ ಗ್ರಹವು ಮಂಗಳ ಆದ್ದರಿಂದ, ಸೋಮವಾರದ ಮರುದಿನ ಮಂಗಳವಾರವಾಗುವುದು. ಹೀಗೆಯೇ ಸಪ್ತವಾರಗಳನ್ನು ಹೊಂದಿಸಿ ನೋಡಬಹುದು. ಇಲ್ಲಿ ನಾಲ್ಕನೆಯ ಗ್ರಹವನ್ನೇ ಏಕೆ ಹಿಡಿದರು ಎಂಬುದು ಮಹತ್ತ್ವದ್ದಿದೆ. ಒಂದು ದಿನವಮಾನಕ್ಕೆ ೬೦ ಘಳಿಗೆಗಳು. ೨೪ ಘಳಿಗೆಗೆ ಒಂದು ಹೋರೆಯೆಂದು ಮೇಲೆ ಹೇಳಿದೆ. ಆದ್ದರಿಂದ ಒಂದು ದಿವಸಕ್ಕೆ ೨೪ ಹೋರೆಗಳಾದವು. ಎಂದರೆ ೧ ಹೋರೆಯೆಂದರೆ ೧ ತಾಸು ಆಯಿತು. ಈ ೨೪ ಹೋರೆಗಳಿಗೆ ಸಪ್ತ ಗ್ರಹಗಳನ್ನೇ ಹೋರಾಧಿಪತಿಗಳೆಂದು ನಿಶ್ಚಯಿಸಿದರು. ಇದಕ್ಕೆ ಪ್ರಮಾಣವಾಗಿ ಗರ್ಗ ಮುಹರ್ಷಿಗಳು ಹೇಳಿರುವುದೇನೆಂದರೆ: —

ಅರ್ಕ ಶುಕ್ರ ಬುಧಾಶ್ಚಂದ್ರ ಮಂದ ಜೀವಧರಾಸುತಾಃ ।
ಕ್ರಮಾದರ್ಕಾದಯೋಜ್ಞೇಯಾ ಸ್ವಸ್ವಕಾಲ ಪ್ರವರ್ತಕಾಃ ॥

ಪಾಶ್ಚಿಮಾತ್ಯರು ತಾವೀನಿನ ಆರಂಭವನ್ನು ಮಧ್ಯರಾತ್ರಿಯ ನಂತರದಿಂದ ಹಿಡಿದರೆ, ಭಾರತೀಯರಾದ ನಾವು ದಿನದ ಆರಂಭವನ್ನು ಸೂರ್ಯೋದಯದಿಂದ ಹಿಡಿಯುತ್ತೇವೆ. ಸೂರ್ಯ ಉದಯವು ಯಾವ ಹೋರೆಯಲ್ಲಿ ಆಗುವುದೋ ಆ ಹೋರಾಧಿಪತಿಯ ಹೆಸರಿನಿಂದಲೇ ಆ ವಾರ (ದಿನ) ವನ್ನು ಕರೆಯುತ್ತಾರೆ. ಆದ್ದರಿಂದ ಭಾನುವಾರಾದಿಯಲ್ಲಿ ಸೂರ್ಯೋದಯಕಾಲಕ್ಕೆ ರವಿ ಹೋರೆ ಬರುವುದು. ೧ ತಾಸಿನ ವರೆಗೂ ರವಿ ಹೋರೆಯಾಗುವುದು. ೨ನೆಯ ಹೋರೆಗೆ ಶುಕ್ರ. ೩ನೆಯ ಹೋರೆಗೆ ಬುಧ. ೪ನೆಯ ಹೋರೆಗೆ ಚಂದ್ರ. ೫ನೆಯ ಹೋರೆಗೆ ಶನಿ. ೬ನೆಯ ಹೋರೆಗೆ ಗುರು. ೭ನೆಯ ಹೋರೆಗೆ ಮಂಗಳ. ೮ನೆಯ ಹೋರೆಗೆ ರವಿ. ೯ನೆಯ ಹೋರೆಗೆ ಶುಕ್ರ. ೧೦ನೆಯ ಹೋರೆಗೆ ಬುಧ. ೧೧ನೆಯ ಹೋರೆಗೆ ಚಂದ್ರ. ೧೨ನೆಯ ಹೋರೆಗೆ ಶನಿ. ೧೩ನೆಯ ಹೋರೆಗೆ ಗುರು. ೧೪ನೆಯ ಹೋರೆಗೆ ಮಂಗಳ. ೧೫ನೆಯ ಹೋರೆಗೆ ರವಿ. ೧೬ನೆಯ ಹೋರೆಗೆ ಶುಕ್ರ. ೧೭ನೆಯ ಹೋರೆಗೆ ಬುಧ. ೧೮ನೆಯ ಹೋರೆಗೆ ಚಂದ್ರ. ೧೯ನೆಯ ಹೋರೆಗೆ ಶನಿ. ೨೦ನೆಯ ಹೋರೆಗೆ ಗುರು. ೨೧ನೆಯ ಹೋರೆಗೆ ಮಂಗಳ. ೨೨ನೆಯ ಹೋರೆಗೆ ರವಿ. ೨೩ನೆಯ ಹೋರೆಗೆ ಶುಕ್ರ. ೨೪ನೆಯ ಹೋರೆಗೆ ಬುಧ. ಈ ಪ್ರಕಾರ ಅಧಿಪತಿಗಳಾಗುತ್ತಾರೆ. ಇಲ್ಲಿಗೆ ಭಾನುವಾರ ಮುಗಿಯಿತು. ೨೫ನೆಯ ಹೋರೆಗೆ ಚಂದ್ರ. ಈ ಚಂದ್ರ ಹೋರೆಯಲ್ಲಿ ಸೂರ್ಯ ಉದಯನಾಗುವುದರಿಂದ, ಸೋಮವಾರವಾಯಿತು. ಈ ಚಂದ್ರನು ಸೂರ್ಯನಿಂದ ೪ನೆಯ ಗ್ರಹ. ಆದುದರಿಂದಲೇ ೪ನೆಯ ಗ್ರಹವು ಮುಂದಿನ ವಾರವಾಯಿತು. ಪ್ರಕಾರವೆ ಯಾವ ಹೋರೆಯಲ್ಲಿ ಸೂರ್ಯನು ಉದಯಿಸುತ್ತಾನೆಯೋ ಆ ಹೋರಾಧಿಪತಿಯಾದ ಗ್ರಹದ ಹೆಸರಿನ ವಾರವೆನಿಸುತ್ತದೆ. ಈ ಸಂಗತಿಯು ಕೆಳಗಿನ ಹೋರಾಚಕ್ರವನ್ನು ಅವಲೋಕಿಸಿದರೆ ಸ್ಪಷ್ಟವಾಗುತ್ತದೆ.

ಸದ್ಯದ ಹೋರಾಚಕ್ರ

ಹೋರೆ ಸಂ	ವಾರಗಳು						
	ರವಿ ವಾರ	ಸೋಮ ವಾರ	ಮಂಗಳ ವಾರ	ಬುಧ ವಾರ	ಗುರು ವಾರ	ಶುಕ್ರ ವಾರ	ಶನಿ ವಾರ
೧	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ
೨	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು
೩	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ
೪	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ
೫	ರವಿ	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ
೬	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ
೭	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
೮	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ
೯	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು
೧೦	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ
೧೧	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ
೧೨	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ
೧೩	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ
೧೪	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
೧೫	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ
೧೬	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು
೧೭	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ
೧೮	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ
೧೯	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ
೨೦	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ
೨೧	ಮಂಗಳ	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ
೨೨	ರವಿ	ಚಂದ್ರ	ಮಂಗಳ	ಬುಧ	ಗುರು	ಶುಕ್ರ	ಶನಿ
೨೩	ಶುಕ್ರ	ಶನಿ	ರವಿ	ಚಂದ್ರ	ಮಂಗಳ	ಬುಧ	ಗುರು
೨೪	ಬುಧ	ಗುರು	ಶುಕ್ರ	ಶನಿ	ರವಿ	ಚಂದ್ರ	ಮಂಗಳ

ವಾರೋತ್ಪತ್ತಿಯನ್ನು ತಿಳಿದುಕೊಂಡಾಯಿತು. ಆದರೆ ಈ ಕ್ರಮವು ದೋಷಯುಕ್ತವಿದೆ. ಯಾಕೆಂದರೆ ರವಿಗೆ ಸಮೀಪವಿರುವ ಗ್ರಹ ಬುಧ, ಆದರೆ ಶುಕ್ರನಲ್ಲ. ಮೇಲೆ ಹೇಳಿದ ಹೋರಾಚಕ್ರದ ಗ್ರಹಕ್ರಮದಲ್ಲಿ ಶನಿ, ಗುರು, ಮಂಗಳ, ರವಿ, ಬುಧ, ಶುಕ್ರ, ಚಂದ್ರ ಹೀಗೆ ಇರಬೇಕಿತ್ತು. ಆದರೆ ಬುಧ-ಶುಕ್ರರ ಸ್ಥಾನಪಲ್ಲಟವಾಗಿದೆ. ಆದ್ದರಿಂದ ಈಗ ನಾವು ಆಚರಿಸುವ ಹೋರಾಕ್ರಮವು ಶಾಸ್ತ್ರಸಮ್ಮತವಾದುದಲ್ಲ.

ಶನಿ, ಗುರು, ಮಂಗಳ, ರವಿ, ಬುಧ, ಶುಕ್ರ, ಚಂದ್ರ ಈ ಹೋರಾಕ್ರಮದಂತೆ ವಾರೋತ್ಪತ್ತಿಯನ್ನು ರಚಿಸಿದರೆ, ಈಗಿರುವ ವಾರಗಳು ಕ್ರಮತಪ್ಪಿ ಹಿಂದುಮುಂದೆ ಆಗಿಹೋಗುತ್ತವೆ. ಆದರೆ ಇವೆರಡೂ ಕ್ರಮಗಳು ದೋಷಯುಕ್ತವು. ಯಾಕೆಂದರೆ ಇವೆರಡೂ ಕ್ರಮಗಳು ಭೂಕೇಂದ್ರ (Geocentric) ತತ್ತ್ವದಂತೆ ರಚಿಸಲ್ಪಟ್ಟಿವೆ. ಆದರೆ ಈ ಭೂಕೇಂದ್ರತತ್ತ್ವವು ೧೬ನೆಯ ಶತಮಾನದಲ್ಲಿಯೆ ಕೋಪರ್ನಿಕಸ್‌ನಿಂದ ಮಣ್ಣುಪಾಲಾಗಿದೆ; ಎಂದಮೇಲೆ ನಾವು ಒಪ್ಪುತ್ತಿರುವ ರವಿಕೇಂದ್ರ (Heliocentric) ತತ್ತ್ವದಂತೆ ವಾರೋತ್ಪತ್ತಿಯನ್ನು ರಚಿಸಿ ಆಚರಣೆಯಲ್ಲಿ ತರುವುದು ಉಚಿತವಲ್ಲವೆ? ಹಾಗಾದರೆ ಈ ತತ್ತ್ವದಂತೆ ಸೂರ್ಯನೇ ಗ್ರಹಮಾಲೆಯ ಮಧ್ಯಬಿಂದು. ಸೂರ್ಯನ ಸುತ್ತಲೂ ಕ್ರಮವಾಗಿ ಬುಧ, ಶುಕ್ರ, ಪೃಥ್ವಿ (ಪೃಥ್ವಿಯ ಸುತ್ತಲೂ ಚಂದ್ರ) ಆರ್ಧಾತ್ ಚಂದ್ರ, ಮಂಗಳ, ಗುರು ಶನಿ ಈ ಗ್ರಹಗಳು ಹೆಚ್ಚು ಹೆಚ್ಚು ಅಂತರದಿಂದ ಸುತ್ತುಹಾಕುತ್ತವೆ. ಇವುಗಳನ್ನು ಸೂರ್ಯನಿಂದ ಅತಿ ದೂರವಿರುವ ಗ್ರಹದಿಂದ ಕ್ರಮವಾಗಿ ನಿರೀಕ್ಷಿಸಲಾಗಿ ಈ ಚಕ್ರವು ಶನಿ, ಗುರು, ಮಂಗಳ, ಚಂದ್ರ, ಶುಕ್ರ, ಬುಧ, ರವಿ ಈ ಪ್ರಕಾರ ವಾಗುವುದು. ಈ ಚಕ್ರದ ಆಧಾರದಿಂದ ವಾರೋತ್ಪತ್ತಿಯ ಕ್ರಮದಂತೆ ನಾಲ್ಕನೆಯ ಗ್ರಹವನ್ನು ಎಣಿಸುತ್ತಹೋದರೆ, ವಾರಗಳು ಕ್ರಮವಾಗಿ ರವಿವಾರ ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ, ಶನಿವಾರ, ಸೋಮವಾರ ಆಗುವುವು. ಈ ಕ್ರಮವು ಈಗಿನ ಭೂಗೋಲಶಾಸ್ತ್ರದ ತಿಳಿವಳಿಕೆಗೆ ಅನುಸಾರವಾಗಿ ಶಾಸ್ತ್ರೀಯವಾಗಿರುವುದು. ಕಾರಣ ದೋಷಯುಕ್ತವಾದ ಸದ್ಯದ ಪದ್ಧತಿಯನ್ನು ಬಿಟ್ಟು, ಶಾಸ್ತ್ರೀಯವಾದ ಈ ಪದ್ಧತಿಯನ್ನು ಅನುಸರಿಸುವುದು ಯೋಗ್ಯವಲ್ಲವೆ? ಸರಿ ಕಂಡರೆ ವಾಚಕರು ಇದನ್ನು ಅನುಸರಿಸಲೆಂದು ನನಗೆ ತಿಳಿದ ವಿಚಾರಗಳನ್ನು ಪ್ರಕಟ ಪಡಿಸಿದ್ದೇನೆ.

ಹೊಸ ಪದ್ಧತಿಯ ಹೋರಾಚಕ್ರ

ಹೋರೆ	ವಾರಗಳು						
	ರವಿ ವಾರ	ಮಂಗಳ ವಾರ	ಬುಧ ವಾರ	ಗುರು ವಾರ	ಶುಕ್ರ ವಾರ	ಶನಿ ವಾರ	ಸೋಮ ವಾರ
೧	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ
೨	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ
೩	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ
೪	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ	ರವಿ
೫	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ
೬	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು
೭	ಬುಧ	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ
೮	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ
೯	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ
೧೦	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ
೧೧	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ	ರವಿ
೧೨	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ
೧೩	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು
೧೪	ಬುಧ	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ
೧೫	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ
೧೬	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ
೧೭	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ
೧೮	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ	ರವಿ
೧೯	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ
೨೦	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು
೨೧	ಬುಧ	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ
೨೨	ರವಿ	ಮಂಗಳ	ಬುಧ	ಗುರು	ಶುಕ್ರ	ಶನಿ	ಚಂದ್ರ
೨೩	ಶನಿ	ಚಂದ್ರ	ರವಿ	ಮಂಗಳ	ಬುಧ	ಗುರು	ಶುಕ್ರ
೨೪	ಗುರು	ಶುಕ್ರ	ಶನಿ	ಚಂದ್ರ	ರವಿ	ಮಂಗಳ	ಬುಧ

ಕನ್ನಡ ನಾಡಿನ ವೈಶ್ಯರಿಗೊಂದು ಹೆಮ್ಮೆಯ ವಿಷಯ!

ವೈಶ್ಯರ ಏಳ್ಗೆಗಾಗಿ ಹಗಲಿರುಳು ಶ್ರಮಿಸುವ ಒಂದೇ ಒಂದು ಪತ್ರಿಕೆಯೆಂದರೆ

ಮೈಸೂರು ವೈಶ್ಯ ಪತ್ರಿಕೆ!

(ಕನ್ನಡ-ತೆಲುಗು ಮಾಸಪತ್ರಿಕೆ)

ಕಳೆದ ಆಗಸ್ಟ್ ತಿಂಗಳಿಗೆ ಎರಡನೆಯ ವರುಷ ಪ್ರಾರಂಭವಾಗಿದೆ.
ಎಲ್ಲರೂ ಪ್ರಯೋಜನ ಪಡೆಯಬಹುದಾದ ಅನೇಕ ವಿಷಯಗಳಿವೆ.

ವಾ. ಚಂ. ೨-೪-೦, ಬಿಡಿ ಪ್ರತಿ ೦-೪-೦.

ಮೈಸೂರು ವೈಶ್ಯಪತ್ರಿಕೆ
ವಾಸವಾಂಬಾ ಬಿಲ್ಡಿಂಗ್, ಮೈಸೂರು.

ಶಿಕ್ಷಣ ಮಿತ್ರ

ಸಂಪಾದಕರು: ಜೋಶಿ ಅರವಿಂದರಾಯರು ಬಿ.ಎ., ಬಿ.ಟಿ.

ಶಿಕ್ಷಣದ ಬಗೆಗೆ ಉಪಯುಕ್ತ ಲೇಖನಗಳುಳ್ಳ, ಪ್ರಾಥಮಿಕ ಶಿಕ್ಷಕರ ಸುಖ-ದುಃಖದ ವಿಷಯವಾಗಿ ವಿಚಾರಿಸುವ ಅತ್ಯುತ್ತಮ ಮಾಸಪತ್ರಿಕೆ.

ವಾರ್ಷಿಕ ಚಂದಾ: ೨-೮-೦

'ಶಿಕ್ಷಣ ಮಿತ್ರ' ಕಾರ್ಯಾಲಯ,
ನೆಲಜಾಗಗಲ್ಲಿ, ಬೆಳಗಾಂವಿ

ವೀರಕರಚರಿತಂ'

(ಒಂದು ಲಘುಪ್ರಬಂಧ

ಅರ್ಥಾತ್

"ಅನಿರುದ್ಧ" ಬಿ. ಎ.

ಕರ್ಮಯೋಗಿಗಳ ಕೈವಾ

★

ಕೈಗಳೇ ಮಾನವ-ಸಂಸ್ಕೃತಿಯ ಮುಖ್ಯ ಚಿನ್ಹ; ಪಶುಗಳಿಗೆ ಕೈಗಳಿಲ್ಲದಿರುವುದು, ದೇವರಿಗೆ ನಾಲ್ಕು ಕೈಗಳಿರುವುದು ಈ ಮಾತಿಗೆ ಸಾಕ್ಷಿ. ಮಾನವನು ಇಂದು ನೃತ್ಯ-ಗಾಯನ ಚಿತ್ರ-ಶಿಲ್ಪಗಳ ಹೆಗ್ಗಳಿಕೆ ಹಾಡುತ್ತಿದ್ದಾನೆ. ಅದರ ಹಿನ್ನೆಲೆಯಲ್ಲಿರುವುದೇನು? ಕೈಯು-ಲ್ಲವೇ? ಕೈಯ 'ಮಾಹಾತ್ಮ್ಯ'ವೆಂದರೆ ಕರ್ಮಯೋಗ; ಇದುವೇ ಗೀತೆಯ ತತ್ತ್ವಸಾರ.

★

ಒಂದು ಸನ್ನಿವೇಶ. ಸಣ್ಣದೊಂದು ಕಿರಿಯ ಸಾಹಿತಿಗಳ ಗುಂಪು ಗಳಪ್ಪತ್ತ ಕುಳಿತಿದೆ. ಹರಟೆಗಳಿಗೆ ತುದಿಮೊದಲಿರಲಿಲ್ಲ. ತಡೆ-ಯಿಲ್ಲದೆ ಸಾಹಿತ್ಯವಿಚಾರದ ಕಡೆಗೆ ಹರಟೆ ಸಾಗಿತು.

"ಹಳಗನ್ನಡ ಸಾಹಿತ್ಯವನ್ನು ಓದಲೇಬೇಕು. ಆ ಸಾಹಿತ್ಯದಲ್ಲಿ ಜೈನರ ಉದಾತ್ತ ಕಾವ್ಯಗಳ ಕೈಗೋಲಾಗಿನೆ. ಅದರಲ್ಲಿಯೂ ಸಂಜರನ್ನರದೇ ಬೇಲ್ಸ್ಲು."

"ಹಳೆಯದು ಹಳಮ್ಮಾಯಿತು. ಹಳಸಿ ಹೋದರೂ ಹೋದೀತು ಈಗಿ-ನದು ಹೇಳು! ಯಾರು ತಲೆಕೆರೆದುಕೊಂಡು ಓದುತ್ತಾರೆ ಹಳಗನ್ನಡವನ್ನು?"

"ಈಗಬೇಕು ಸಣ್ಣಕತೆ. ಕತೆ ಸಣ್ಣದಾದರೂ, ಅದರಲ್ಲಿ ಮಾಸ್ತಿಯವರು.... ಎಷ್ಟು ಕೈಚಳಕ ಅವರದು! ನಮ್ಮನಿಮ್ಮಂತಹರ ಕಡೆಯಿಂದ..."

"ಹೀಗೆ ಅನ್ನಬೇಡಿರಿ ನೀವು, ಇದು ಕೃಷಾಗದವರ ಲಕ್ಷಣ! ಒಂದು ಕೈತೋರಿಸಿಯೇ ಬಿಟ್ಟೀನು ಎನ್ನುವ ಹುಮ್ಮಸ್ಸು ಇದ್ದವರಿಗೆ, ಎಲ್ಲ ಕೈಚಳಕ ಗಳೂ ಕೈಗೂಡುವವು. ಬರೆದು ಬರೆದು ಅವರದೂ ಕೈ ಕೂಡುವುದು. ಇಪ್ಪು ಪಣ ಬೆಚ್ಚವಾಡಿ, ಇಪ್ಪು ಕಲಿತು, ಇಪ್ಪದ್ದ ಪದವೀಧರರಾಗಿ, ನಿಮ್ಮಂತಹರು ಹೀಗೆ ಕೈಬಿಲ್ಲಿಕೊಂಡು ಕುಳಿತರೆ...."

"ಬರೆಯಲು ಸುರುವಾಡಿದೆ ಎಂದು ತಿಳಿಯೋಣ. ಆದರೆ ಮುದ್ರಣ? ಒಬ್ಬರಾದರೂ ಕೊಡುಗೈದೊರೆಗಳು ಸಿಕ್ಕಿತರೆ ಗುಣ. ಒಳ್ಳೆಯದು; ನೀನೆನ್ನುನಹಾಗೆ ಅಲ್ಪ ಸ್ವಲ್ಪ ಹಣ ಕೂಡಿತು ಎಂದೂ ಇಟ್ಟುಕೊಳ್ಳೋಣ.. ಇದೆಯೆಲ್ಲ ಅರ್ಧಮಾರ್ಧ ಕೆಲಸ ಆಗೋಣ.. ಆಗ "ನಡುನೀರೊಳು ಕೈಯ ಬಿಡುವರೆ ಕೃಷ್ಣ' ಎನ್ನುವ ಸರತಿಯೇ ಬರುವುದರಲ್ಲಿ ಸಂಶಯವಿಲ್ಲ."

"ಇರಲಿ ತಿಳಿಯಿತು ಬಿಡು; ನಿನ್ನ ಜಾಣತನ ಸಾಕು! ಬರೆಯಲಿಕ್ಕೆ ಬರುವದಿಲ್ಲ ಅಂತ ಹೇಳಬೇಕು ಇಂತಹ ಪರಿಯಿಂದ! ನನಗೆ ಗೊತ್ತಿಲ್ಲೇನು? 'ಕೈ ತೋರಿಸಿ ಅವಲಕ್ಷಣ' ಎನಿಸಿಗೊಳ್ಳಬಾರದೆಂದು ಬಿಟ್ಟಿರುವೆನೆಂದು ಹೇಳು, ಹಾಗೆ ಒಳ್ಳೆಯ ಬರಿಹಗಾರನಾಗಿದ್ದರೆ, ಒಂದು ಯಾವುದಾದರೂ ದಾಖಲೆಕ್ಕೆ ಕೊಡಬೇಕು.?"

"ಅವು ಇದ್ದರೂ ಎಲ್ಲಿ ನಡೆಯುವುವು! ಚಂದಾಹಣ ವಸೂಲು ಮಾಡುವ ಕಾಲಕ್ಕೆ ನೋಡಬೇಕು. ಸಂಪಾದಕರಿಗೂ ಓದುಗರಿಗೂ ಕೈಗೆ ಕೈ ಹತ್ತುವ ಪ್ರಸಂಗ ಬರುತ್ತದೆ! ಇಂದು ಕೊಡುತ್ತೀವೆ, ನಾಳೆ ಕೊಡುವೆವು ಎಂದ ಕೈಕೊಡುವ ಜನರಿಷ್ಟೊ! ಇನ್ನು ನಮ್ಮ ಪುಸ್ತಕಗಳನ್ನು ಯಾರು ಕೀ ಬೇಕು? ಈ ಆರ್ಥಿಕ ದುಃಸ್ಥಿತಿಯಿಂದ ಕೈಕಟ್ಟಿದ ಹಾಗೆ ಆಗಿಬಿಟ್ಟಿದೆ ಎಲ್ಲರದೂ ಕೈ ಖುಟ್ ಆಗಬೇಕಾಗಿದೆ."

ಹೀಗೆಯೆ ಹರಟೆ ಸಾಗಿರಲು, ಬರೆಹಗಾರರ ಬವಣೆಯನ್ನು ಕಂಡು ತಾನೂ ದುಃಖಪಟ್ಟವಳಂತೆ ಪ್ರಕೃತಿದೇವಿಯು ಕತ್ತಲೆ ಯನ್ನಪ್ಪಿದಳು. ಆ ಗುಂಪು ಒಬ್ಬರನ್ನೊಬ್ಬರು ಕೈಯ ಕುಲುಕಿಸಿ ನಂತರ ಜೆದರಿತು.

ಮೇಲಣ ಸನ್ನಿವೇಶವನ್ನು ಕೈಗೋಸ್ಕರ ವಿನಿಯೋಗಿ ಕೊಂಡುದು ಓದುಗರಿಗೆ ತಿಳಿದಿರಲು ಸಾಕು. ಇಂತಹ ಒಣ್ಣನೆಯ ಮಾತ್ರದಿಂದ ಕೈಯ ಕೆಲಸ ಮುಗಿಯಿತು ಎಂದ ಕೈಜೆಲ್ಲಿ ಕೂಡುವ ಕಾರಣವಿಲ್ಲ. ಇಷ್ಟಕ್ಕೆಯೆ ಕೈಮುಗಿದ ಕೈಬಿಡುವಂತಿಲ್ಲ. ಮಾನವನಿಗೂ ಪಶುವಿಗೂ ಭೇದವೇನಿದೆ ಮಾನವನಿಗೆ ತಿಳಿವಳಿಕೆಯಿದೆ; ಅದು ಪಶುಗಳಿಗೆ ಇಲ್ಲ!....ಇದ ತಪ್ಪು! ಪಶು-ಪಶುಗಳಲ್ಲಿ ಉಪಯೋಗವಾಗುವಂತಹ ತಿಳಿವಳಿ ಪಶುಗಳಿಗೆ ಇದೆ; ಅದರಂತೆಯೆ ಮಾನವನಿಗೆ ಮಾನವನಿಗೋಸ್ಕರ ತಿಳಿವಳಿಕೆಯಿದೆ. ಆದರೆ ಭೇದವೇನು? ಆ ಭೇದವನ್ನು ತಿಳಿ ಬೇಕಾದರೆ ಕೈ ನಮ್ಮ ಸಾಹಾಯ್ಯಕ್ಕೆ ಬರುವುದು. ಕೈಯಿಲ್ಲ ಮಾನವನು ದನವೆ ಸೈ. ಮಾನವನಿಗೆ ಕೈಗಳೆಂದರೆ ಒಂದ ಹೆಮ್ಮೆ; ಹಾಗೆ ಇರುವುದು ಒಂದು ವೈಶಿಷ್ಟ್ಯ. ಮಾನವ ಮಾನವನಾಗಿ ಭೂಮಿಯಮೇಲೆ ಅವತರಿಸುವಾಗ, ಅವನ ಕೈಗ ಮೊದಲು ಮುಂದಕ್ಕೆ ಬಂದುವುವೆಂಬುದನ್ನು ಮರೆಯ ವಂತಿಲ್ಲ! ಎರಡು ಕೈಗಳೂ ಎರಡು ಕಾಲುಗಳೂ ಕೂ ನಾಲ್ಕು ಮಾನವನಿಗೆ, ಅದರಂತೆಯೆ ನಾಲ್ಕು ಪಶುಗಳಿಗೆ ಎಂ ಕೆಣಕಬಹುದು. ಆದರೆ ಪಶುಗಳಿಗೆ ಇರುವ ನಾಲ್ಕು ಕಾಲುಗಳ

ನಾಲ್ಕು ಕಾಲುಗಳೆ ಹೊರತು, ಕೈಗಳಲ್ಲ! ಪಶುವಿಗೂ-ಅದೂ ಒಂದೇ ಒಂದು ಪಶುವಿಗೂ-ಕೈಯಿದ್ದುದರಿಂದಲೆ, ಆ ಪಶುವಿಗೆ 'ಹಸ್ತಿನ್' ಎಂದು ಸಂಸ್ಕೃತ ಭಾಷೆಯಲ್ಲಿ ಕರೆದುದು ಯೋಗ್ಯವೆ ಆಗಿದೆ. ಕೋಟಿ ಕೋಟಿ ಜೀವಿಗಳ ಜನ್ಮ-ಮರಣಗಳನ್ನು ದಾಟಿ, ಮಾನವಜನ್ಮಕ್ಕೆ ಬರುವುದು; ಆಮೇಲೆ ಅವನಿಗೆ ಮುಕ್ತಿ ಸಿಕ್ಕುವುದು; ಮುಂದೆ ಅವನು ದೇವನೂ ಆಗಬಹುದು. 'ದೇವರುಗಳ ಆಕಾರದ ಕಲ್ಪನೆ ದೇವರದು ಅಲ್ಲ, ಮಾನವನದು' ಎಂದು ಎಲ್ಲರೂ ಒಪ್ಪಿದ ಸಂಗತಿಯಾಗಿದೆ. ಸಾಕ್ಷಾತ್ ವಿಷ್ಣು ಸರಮಾತ್ಮನನ್ನೇ ನೋಡುವ! ಮಾನವನಿಗೆ ಎರಡು ಕೈಗಳಿದ್ದರೆ, ವಿಷ್ಣುವಿಗೆ ನಾಲ್ಕು ಕೈಗಳು! ಇದರಿಂದ, ಸಾಂಸ್ಕೃತಿಕ ಮೇಲ್ಮಟ್ಟವನ್ನು ಅಳೆಯಬೇಕಾದರೆ ಕೈಗಳ ಸಂಖ್ಯೆಯಿಂದಲ್ಲವೆ?

ಜೀವಿಗೆ ಜೀವಿಸಲಿಕ್ಕೆ ಸೂಕ್ಷ್ಮಭಾಗಗಳ ಉಪಯೋಗವೆ ಮುಖ್ಯವಾಗಿದೆ. ಹೃದಯ, ಮೆದುಳು ಇವು ಅತೀವ ಸೂಕ್ಷ್ಮತೆ ಮತ್ತು ಮಹತ್ವವುಳ್ಳವುಗಳಾಗಿವೆ. ಕೈಗಳಿಗೆ ಮತ್ತು ಇವುಗಳಿಗೆ ಸಂಬಂಧವೇನು ಹಾಗಾದರೆ? ನಿಮಗೆ ಗುರುತಿನವರಿಗಾಗಲಿ, ಗೆಳೆಯರಿಗಾಗಲಿ, ಇಲ್ಲವೆ ಹಗೆಗಳಿಗೇ ಆಗಲಿ, ಜೋರಿನಿಂದ ಒಂದೇಟು ಕೊಡಲಿಕ್ಕೆ ನೀವು ಹೋದರೆ (ಹೊಡೆಯಬೇಡಿರಿ ಮತ್ತೆ!), ಆ ಹೃದಯವಾಗಲಿ, ಆ ಮೆದುಳಾಗಲಿ ನಿಮ್ಮನ್ನು ತಡೆಯುವುದಿಲ್ಲ! ಕೈಗಳೆ ಮುಂದಕ್ಕೆ ಬರುವುದು ಸ್ವಾಭಾವಿಕವಾಗಿದೆ. ನೀವು ಮುಷ್ಟಿಗೈಯನ್ನು ಎತ್ತುವುದೊಂದೇ ತಡ, ಆ ಕೈಗಳು ಗುರಾಣಿಯ ಆಕಾರವನ್ನು ತಳೆದು ನಿಮ್ಮ ಕೈಯನ್ನು ತಡೆಯುವುವು. ಆವಾಗ ನೀವು ಹಿಂದಕ್ಕೆ ಸರಿಯಬೇಕಾಗುವುದು! ಇಷ್ಟಾರ್ಥ ಇಷ್ಟೆ: ಹೃದಯವು ದೇಹದ ರಾಜನಾದರೆ, ಮೆದುಳು ಮಂತ್ರಿಯಾದರೆ, ಕೈಗಳು ಅಂಗರಕ್ಷಕರಿದ್ದಂತೆ! ಈಗಿನದು ಪ್ರಜಾಸತ್ತಾತ್ಮಕ ರಾಜಕಾರಣವಾದುದರಿಂದ, ಪ್ರಜೆಗಳಿಂದ ಅರಸು ಎಂದು ನಿರ್ಧರಿಸಿದಂತೆ, ಕೈಗಳಿಂದಲೇ ಹೃದಯ ಎಂದು ನಾವು ಇಟ್ಟುಕೊಳ್ಳುವುದು ಯೋಗ್ಯವಲ್ಲವೆ?

ಮಾನವನಿಗೆ ದೇಹವೊಂದಿದ್ದರೆ ಸಾಲದು, ಅದಕ್ಕೆ ನುಡಿಯೂ ಬೇಕು. ನುಡಿಯನ್ನು ಇಡಿಯಾಗಿ ತಿಳಿದುಕೊಂಡು, ಆ ನುಡಿಯನ್ನೇ ಸಾಹಿತಿಗಳು ತಮ್ಮ ವಿಚಾರದ ತಿಳಿಯಲ್ಲಿ ಬೆರಸಿ, ಓದುಗರಿಗೆ ನೀಡುವರಲ್ಲವೆ? ಆ ಸಾಹಿತಿಗಳ ಮೇಲೆ ಕೂಡ ಕೈ ತನ್ನ ಪ್ರಭಾವವನ್ನು ಬೀರಿಬಿಟ್ಟಿದೆ. ಬರೆಯುವ ಕೈಜಳಕಬೇಕಾದರೆ ಕೈ ಬೇಕು; ಅಲ್ಲದೆ, 'ಇದು ಸಂಸ್ಕೃತ, ಇದು ಕನ್ನಡಶಬ್ದ, ಎರಡೂ ಶಬ್ದಗಳನ್ನು ಕೂಡಿಸಿ ಸಮಾಸಮಾಡಿದರೆ, ಅರೀಸಮಾಸದ ದೋಷತಟ್ಟುವುದು' ಎಂದು ಸಾಹಿತಿಗಳಲ್ಲಿ ಮತ್ತು ಅವರ ಕಲೆಗಳಲ್ಲಿ ತುಮುಲಯುದ್ಧ ನಡೆದಾಗ, ಕೈ ಇವರ ಸಹಾಯಕ್ಕೆ ಬಂದಿತು! ಆವಾಗ ಕ್ರಿಯಾಸಮಾಸದ ಹುಟ್ಟಾಯಿತು. ಹೀಗೆ ವ್ಯಾಕರಣದಲ್ಲಿಯೂ ಕೂಡ ಕೈಯೇ ಮೇಲ್ಗೈಯಾಗಿದೆ!!

ಮನಸ್ಸಿನಲ್ಲಿಯ ಭಾವವಾಗಲಿ, ರಸವಾಗಲಿ, ಇಲ್ಲವೆ ಹೊರಗಣ ಇಂದ್ರಿಯಗಳು ತಮ್ಮ ಮನೋಗತವನ್ನು ಅರುಹಿ ಕಾರ್ಯಕ್ಕೆ ಪ್ರವೃತ್ತರಾಗಬೇಕಾದಾಗಾಗಲಿ, ಕೈಗಳೆ ಮುಂದಕ್ಕೆ ಬರುವುವು. ತಪ್ಪು ಮಾಡಬೇಕಾದರೆ ತಪ್ಪಗೆಯ್ಯಬೇಕಾಗುವುದು; ತಪಸ್ಸು ಮಾಡಬೇಕಾದರೆ, ತಪಂಗೆಯ್ಯಬೇಕಾಗುವುದು!!

"ಚಿತ್ತವೃತ್ತಿ ನಿರೋಧ" ಎಂಬುದು ಎಲ್ಲ ತತ್ತ್ವಜ್ಞಾನಗಳ ಅಡಿಗಲ್ಲಾಗಿದೆ. ಒಂದು ವಸ್ತುವಿನಲ್ಲಿಯಾಗಲಿ, ಒಂದು ವ್ಯಕ್ತಿಯಲ್ಲಿಯಾಗಲಿ ಒಂದೆ ಮನದಿಂದ, ಒಂದೆ ಚಿತ್ತದಿಂದ ಇಡಿಯ ದೇಹವನ್ನೇ ನೀಡುವ ಪ್ರಸಂಗವಿರುವಾಗ, ಕೈಯ ಕೆಲಸವೆ ಮುಖ್ಯವಾಗಿದೆ! ಹಿಂದೂ ದೇಶವು ಕುಸುರುಕುಸುರಾದ ಕಲೆಗಳಿಂದಲೂ, ಅವುಗಳಿಗಾಗಿ ತಮ್ಮ ಜೀವನವನ್ನು ಮೀಸಲಿಸಿದ ಕಲೋಪಾಸಕರಿಂದಲೂ, ಸಾಧು-ಸಂತರಿಂದಲೂ ಅಗ್ಗಳದ ನೆಗಳ್ತೆ ಪಡೆದಿದೆ. ಅಂತಹ ತಪಸ್ವಿಗಳಿಗಾಗಲಿ, ಅಂತಹ ಕಲೋಪಾಸಕರಿಗಾಗಲಿ ಕೈಯೇತಕ್ಕೆ ಬೇಕು? ತಲ್ಲೀನತೆಯೊಂದ ಬೇಕಾದರೆ ಕೈಯೇಕೆ? ದೇವರಧ್ಯಾನ ಮಾಡಬೇಕಾದರೆ ಕೈಯವೇನು ಕೆಲಸ? ದೇವರ ಧ್ಯಾನಮಾಡುವಾಗ ಜಪಮಾಲೆಯ ಮಣಿಗಳನ್ನೆಣಿಸುವುದಕ್ಕೆ! ದೇವರ ಸ್ತೋತ್ರಮಾಡುವಾಗಾಗಲಿ, ಹಾಡುವಾಗಾಗಲಿ, ತಾಳಹಾಕಲಿಕ್ಕೆ! ಅದೇಕೆ ಚಿತ್ರಕಾರನಿಗೆ ನಾನಾತೆರನಾದ ಭಾವಾನುಭಾವಗಳನ್ನು ಒಡಮೂಡಿಸಲಿಕ್ಕೆ, ಒಡಮೂಡಿಸುವಾಗ ತಾನು ತಲ್ಲೀನತೆ ಪಡೆಯಲು ಇಲ್ಲವೆ ಒಡಮೂಡಿಸಿಯಾದಮೇಲೆ ನೋಡುಗರು ತಲ್ಲೀನರಾಗಲು, ಆ ಚಿತ್ರಕಾರನಿಗೆ ಕೈಯೇ ಬೇಕಾಯಿತಲ್ಲವೆ? ಬಿರುಸಾದ ಕಲ್ಲನ್ನು ಮೇಣದಂತೆ ಮಾಡಿ ಕುಸುರುಕುಸುರಾಗಿ ಕೊರೆದು, ವಾಸ್ತುಚಿತ್ರ-ಭಾವಗಳನ್ನು ಮೈದೋರಲಿಕ್ಕೆ ಶಿಲ್ಪಿಯ ಕೈಕೆಲಸವಲ್ಲದೆ ಮತ್ತೇನು? ವಾದ್ಯಗಾರನಿರುವ; ವೀಣೆಯನ್ನು ಬಾರಿಸುತ್ತಿರುವ. ದರ್ಬಾರಿಕಾನಡಾ ಎಂಬುದೊಂದು ಗಂಭೀರ ರಾಗ ನುಡಿಸುತ್ತಿರುವ. ಕೆಳಗಿನಿಂದ ಮೇಲಸ್ವರದ ವರೆಗೆ ಸ್ವರದ ಎಳೆತ, ತಾನು ತೆಗೆಯುವುದು, ಮುರುಕಹೊಡೆಯುವುದು, ಗಮಕಗಳನ್ನು ತಿಕ್ಕುವುದು, ಮುಂತಾದುವುಗಳನ್ನೆನುನುಡಿಸಿ ಬಗೆಯ ಮಿಡಿಸುತ್ತಿರುವ. ಇವುಗಳೆಲ್ಲಕ್ಕೂ ಕೈಚಪಲತೆಯೆ ಕಾರಣ! ಗಾಯಕನು ಹಾಡುವುದು ಮುಂದೆ, ವಾದ್ಯಗಳು ಹಿಂದೆ. ಆದುದರಿಂದ ಗಾಯಕನಿಗೆ ಕೈಯ ಉಪಯೋಗವೇತಕ್ಕೆ?— ಎಂದು ನೀವು ಕೇಳುತ್ತೀರಲ್ಲವೆ? ಅವನು ಹಾಡುವುದು ಬಾಯಿಂದಾದರೆ, ಕೈಯದೇನು ಕೈವಾಡ?—ಎಂದು ನಿಮಗೂ ನನಗೂ ಕೂಡಿಯೆ ಸಂಶಯ ಬಂದೆಬರುವುದು. ಅದಕ್ಕೆ ಜೆನ್ನಾಗಿ ನಿರೀಕ್ಷಿಸಬೇಕು. ಗಾಯಕನು ಹಾಡುತ್ತಿರುವನೆಂದು ತಿಳಿಯುವ. ಆಲಾಪನೆಯಿಂದ: ಸ್ಥಾಯಿಯಲ್ಲಿ ಸ್ವರದಿಂದ ಸ್ವರಕ್ಕೆ ಎಳೆದು ಮೇಂಡ ಕೆಲಸ ಮಾಡಬೇಕಾದಾಗ, ಆದರ ಹಾಗೆಯೆ ಕೈಬೆರಳುಗಳು ಗಾಳಿಯಲ್ಲಿ ತೀಡುವುವು! ಒಂದೇ ಸ್ವರದ ಮೇಲೆ

ಬಹುಹೊತ್ತು ನಿಲ್ಲುವಾಗ 'ಇದು ನೋಡಿ' ಎಂದು ಕೈಯನ್ನು ಚಾಚುವನು. ತಾರಷಡ್ಜ ಹಚ್ಚಬೇಕಾದರೆ, 'ಇದು ತಕ್ಕೊಳ್ಳಿ' ಎಂದು ಕೈಯ ಹರಿಬಿಡುವನು! ಗಮಕಗಳನ್ನು ಹೊರಡಿಸಬೇಕಾದರೆ, ತೆರೆಗಳನ್ನೆಬ್ಬಿಸುವನು ಕೈಯಿಂದ! ಸ್ವರದೊಳಗೆ ಗಿರಿಗಿರಿ ತಿರುಗುವ ಮುಂದೆ ಕೈಯಿಂದ ಪರ್ದೂಲಗಳನ್ನು ತೆಗೆಯುವನು! ಅವರೋಹ ಆರೋಹ ತಾನಗಳನ್ನು ತೆಗೆಯುವ ಮುಂಚೆ, ಕೈ ತಾನಾಗಿಯೆ ಖಡ್ಗದಂತೆ-ಮೇಲಿನಿಂದ ಕೆಳಕ್ಕೆ ಕೆಳದಿಂದ ಮೇಲಕ್ಕೆ—ಆ ಸ್ವರಗಳನ್ನು ತೋರಿಸುವುದು! ಒಮ್ಮೆಲೆ ಮೇಲ್ಪರಗಳನ್ನು ಎಳೆದರೆ, ಬಾಣ ಹೂಡಿದಂತೆ ಆಗುವುದು! ಆಗ ನೋಡಬೇಕು ಗಾಯಕನ ಕೈಯ! ಗುರಿಹಿಡಿದು ಜೆದೆಯನ್ನೇರಿಸಿ ಹೊಡೆಯುವ ಬಾಣಪ್ರಂತೆ ಕಾಣುವುದು ಅವನ ಕೈ! ಬಟಕಗಳನ್ನು ಹೊರಡಿಸುವಾಗ, ಆ ಸ್ವರಗಳನ್ನು ಕೈಯಿಂದಲೆ ಕೊಚ್ಚುವುದು. ನೀವು ನಂಬಲಿಕ್ಕಿಲ್ಲ, ಗಾಯಕ ಯಾವನೆ ಆಗಲಿ, ಅವನ ಕೈಗಳನ್ನು ಹಿಂದಕ್ಕೆ ಕಟ್ಟಿ ಹಾಡಲಿಕ್ಕೆ ಹೇಳಬೇಕು ಅವನಿಗೆ! ಧನಿಯು ಹೊರಡುವುದೇ ಇಲ್ಲ. ಸಂಗೀತ ಗಾರನ ತಲೆ ಒಂದು ಹಾಡಹಂಜಾದರೆ (Record) ಅದರ ಗೆರೆಗಳ ಸುತ್ತಲೂ ತಿರುಗುವ ಮುಳ್ಳು ಕೈಯಾಗುವುದು! ಬೇಕಾದರೆ ನೃತ್ಯಕಲೆಯನ್ನು ಕೂಡ ಕಿಣಕಿ ನೋಡೋಣ. ಅಂಗವಿನ್ಯಾಸಗಳಲ್ಲಿ, ಹಸ್ತವಿನ್ಯಾಸವೆ ಸ್ವಾಶಸ್ತ್ಯವಹಿಸಿದೆ. ಹಾವು ಆಡಿದಂತೆ, ಹರಿದಾಡಿದಂತೆ, ಕೈ ಹಾವಾಗುವುದು; ಪೆರಲುಗಳೆ ಪೆಡೆಯಾಗುವುವು. ಇಡಿಯ ಕೈ ಕಮಲವಾದರೆ, ಕೈಬೋಳು ನಾಳವಾಗುವುದು; ಪೆರಲು ಕಮಲದ ಎಸಳುಗಳಾಗುವುವು.

'ಒನ್ನಿ, ಹೋಗಿ, ನಾನೊಲ್ಲೆ; ನನಗಿದು ಸೇರಿಕೆಯಿಲ್ಲ, ನನಗೆ ಆದರ ಅಸೆ' ಎಂದು ಹೇಳುವಕಾಲಕ್ಕೆ, ಕೈ ಹೊರಳಿಕೆ ಮುರುಕಿಗಳೆ ಹೆಚ್ಚು ರಸಾತ್ಮಕವಾಗಿ ಆ ಭಾವಗಳನ್ನು ಚಿತ್ರಿಸಬಲ್ಲವು. ಇಂತಿಪ್ಪ ಕೈಯ ಶ್ರೇಷ್ಠತೆ, ಇಂತಿಪ್ಪ ಕೈಯ ಮೇಲ್ಮೆ!!

ಯೋಗ, ಕರ್ಮ, ತ್ಯಾಗ, ಮುಂತಾದುವುಗಳನ್ನು ಸಾಧಿಸಬೇಕಾದರೆ, ಕೈಯ ಆರಾಧನೆಯೆ ಬೇಕು. ಅದುವೆ ಕರ್ಮಯೋಗ! ಅರ್ಜುನನು, ತನ್ನ ಬಂಧು ಬಾಂಧವರನ್ನೂ, ಗುರುಹಿರಿಯರನ್ನೂ, ನಚ್ಚಿನ ಬಳಗದವರನ್ನೂ ಕುರುಕ್ಷೇತ್ರ ರಣರಂಗದಲ್ಲಿ ಕಂಡು ತಳವೆಳಗಾಗಿ, ಬಿಲ್ಲು-ಕೋಲುಗಳನ್ನು ಎಸೆದು ಕೈಜಲ್ಲಿ ಕುಳಿತಿರುವಾಗ, ಆ ದಾನ ಕೃಷ್ಣ ಪರಮಾತ್ಮನರಸ್ವರೂಪಿಯಾದ ಅರ್ಜುನನಿಗೆ ಉಪದೇಶಿಸಿದುದು ಏನು? ಕರ್ಮಯೋಗವಲ್ಲವೆ? ಆರ್ಥಾತ್ ಕೈಯ ಮಹಾತ್ಮ್ಯವನ್ನಲ್ಲವೆ? ಏಕೆಂದರೆ ಕರ್ಮವಾಗಲಿ, ಕ್ರಿಯೆಯಾಗಲಿ, ಇಲ್ಲವೆ ಕೈಯಿಂದ ಕೋಲುಗಳನ್ನೆಸೆದು ಕೊಲ್ಲುವ ಕಾರ್ಯವೆ ಆಗಲಿ, 'ಕೈ' ಶಬ್ದದಿಂದ ಹೊರಟಂತಹ ಕೈದಂತನಾಮಗಳಲ್ಲವೆ ಮತ್ತೇನು? ಇವುಗಳನ್ನೆಲ್ಲ ಕಾರ್ಯರಂಗದಲ್ಲಿ ತರುವುದೆ ಕರವಾಯಿತು; ಆರ್ಥಾತ್ ಕೈಯಾಯಿತು! ಆ ಕೈಯ ಮಹಾತ್ಮ್ಯೆಯನ್ನು ಕೇಳಿ, ಅರ್ಜುನನು ಎರಡೂ ಕೈಗಳಿಂದ ಕೋಲುಗಳನ್ನೆಸೆದುದರಿಂದ ಅವನಿಗೆ 'ಇರ್ಕೈಯವನ್' (ಸವ್ಯಸಾಚಿ) ಎಂದು ಬಿರುದು ದೊರೆಕಿದುದರಲ್ಲಿ ಆಶ್ಚರ್ಯವು ಮಾತಿದೆ! ಅದಕ್ಕಾಗಿ ಕೈಯ ನಾಮಸ್ಮರಣೆಮಾಡಿ, ಕೈಯ ಧ್ಯಾನಮಾಡಿ, ಕೈಯ ಸಾಕ್ಷಾತ್ಕಾರಮಾಡಿಕೊಳ್ಳಬೇಕು! ಮುಂಬರುವ ಕವಿಗಳು ಕೂಡ ಕೈಯ ವಿಷಯಕ್ಕೆ ಭಾವದುಂಬಿದ ಕನನಗಳನ್ನು ಕಟ್ಟಬೇಕು! ನನಗೆ ಕೈಯ ವಿಷಯಕ್ಕೆ ಉದ್ಭವಿಸಿದ ಕವನದ ಕಿಡಿಯೊಂದು ನುಡಿಯೊಂದು ಇಲ್ಲಿದೆ:

ತಾಳ : ದೀಪಚಂದಿ— ರಾಗ : ರಾಘವ ಕಾನಡಾ

ಕೈಯಕ ಬಿಡಕ ಬೇಡ ಕೈಯೇ,
ಕೈಯಕ ನೀ ಬಿಟ್ಟರ| ಕಾಲಕ
ಬಿಡುವೆನು ನಾನು || ಅಸ್ಥಾಯಿ ||

ಕೈಯಕ ಹಿಡಿದು ನೀ ದಾರೀಯ
ತೋರಿನೂ | ಕೈಯಕ ನೀ ತೋರಿದರೆ |
ಒಂದು ಕೈಯಕ ನೋಡುವೆ ನಾನು || ಅಂತರಾ ||

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನಾಲ್ಕುನೂರು

(ಸಣ್ಣ ಕತೆ)

ಕುಮಾರಿ ದೇವಾಂಗನಾಶಾಸ್ತ್ರಿ, ಗೋಕರ್ಣ

★

ನನ್ನ ಗೆಳತಿ ಇಂದಿರೆಯ ಗಂಡನ ಮನೆ ಹಳ್ಳಿಯಿಂದ ಆರೆಂಟು ಸ್ಟೈಲು ದೂರದಲ್ಲಿದೆ. ಐದಾರು ಸಾವಿರ ಜನರು ವಾಸಿಸುವ ಆ ಊರು, ಪಟ್ಟಣವೆಂದು ಹೇಳಿಕೊಳ್ಳುವಷ್ಟು ದೊಡ್ಡದಾಗಿದೆ. ಊರಲ್ಲಿ ಬ್ರಾಹ್ಮಣರ ಮನೆಗಳೆ ಹೆಚ್ಚು. ಇಂದಿರೆಯ ಲಗ್ನ-ಸಂಧಾನ ನಡಿಸಲು ಬಂದ ಜಯರಾಮಜೋಯ್ಸರ ಶ್ಯಾಲಕನು, ಆ ಮನೆತನದ ಖ್ಯಾತಿಯನ್ನೂ ಜೋಯಿಸರ ಸಂಪನ್ನತೆಯನ್ನೂ ನುತ್ತ, ಅವರ ಪುತ್ರನ ಎಂದರೆ ಇಂದಿರೆಯ ವರನಾಗುವವನ ಸಾಂಡಿತ್ಯವನ್ನೂ ಜೆನ್ನಾಗಿ ಪ್ರಶಂಸೆಮಾಡಿದ್ದನ್ನು ನಾನು ಕೇಳಿದ್ದೆ. ನನಗಾಗ 'ಅವಳ ಭಾಗ್ಯವೇ ಭಾಗ್ಯ' ಎನಿಸಿತ್ತು. ಅವಳನ್ನು ಹಳ್ಳಿಯ ಹೆಂಗುಸಾಗಿ ನಸುಕಿನಲ್ಲೆದ್ದು ಕುಡುಗೋಲು ಹಿಡಿದು ಸುಲ್ಲಿಗೆಂದು ಬೆಟ್ಟಕ್ಕೆ ಹೋಗಬೇಕಾಗಿಲ್ಲ. ಶ್ರೋತ್ರಿಯರ ಸೊಸೆ. ಊರ ತುಂಬ ಗೌರವದಿಂದ ಮೆರೆಯುತ್ತಾಳೆ. ಊಟ-ಉಡಿಗೆಗಳಿಗೂ ಕೊರತೆಯೇ ಇರಲಾರದು. ನಾಲ್ಕು ಕಡೆ ನಿಮಂತ್ರಣ ಹೇಳುವುದರಿಂದ ದುಡ್ಡು-ದುಗ್ಗಾಣಿಗಳೂ ಕೈಯಲ್ಲಿ ಕೂಡುವುವು. ಮತ್ತೇನು?....ಎಲ್ಲ ಆಲೋಚಿಸಿಕೊಂಡಾಗ ಮನದಲ್ಲಿ ಸ್ವಲ್ಪ ಪುಟ್ಟಿಗೆ ಅಸೂಯೆಯೂ ಹುಟ್ಟಿಕೊಂಡಿತ್ತು ನನಗೆ.

ಆದರೆ ಆಗಿನ ನನ್ನ ಊಹೆ ಎಷ್ಟು ಅಸಂಗತವಾಗಿತ್ತೆಂಬುದನ್ನು ನೆನೆದು ಈಗ ನಾನು ಕಳವಳಪಟ್ಟುಕೊಳ್ಳುತ್ತಿದ್ದೇನೆ. ಕಾರ್ಯ-ಸಾಧನೆಗಾಗಿ ಜನ ಏನೇನೋ ಸುಳ್ಳು ಹೇಳುವುದಿಲ್ಲವೇ? ಇಂದಿರೆಯ ಗಂಡನ ಮನೆಯವರೂ ಇದಕ್ಕೆ ಹೊರತಾಗಿರಲಿಲ್ಲ. ಮಾರಿಗೆ ಗೊತ್ತು? ಆ ಊರಲ್ಲಿ ಜಯರಾಮ ಜೋಯಿಸರ ಮನೆ. ಮುಂದರೆ ಅರಿಸಿಟ್ಟದ್ದು. ಜಮದಗ್ನಿಸ್ವಭಾವದ ಲೋಭಿಯಾದ ಆ ಕಠೋರ ಕರ್ಮಠ ಬ್ರಾಹ್ಮಣನಿಗೆ ನಾಲ್ಕು ಜನ ಗಂಡುಮಕ್ಕಳಿದ್ದು, ಎಲ್ಲರೂ ಮದುವೆಗೆ ಬಂದಿದ್ದರೂ ಊರಲ್ಲಿ ಯಾರೂ ಹೆಣ್ಣು ಕೊಡುವುದಿಲ್ಲವಂತೆ! 'ಅವರ ಮನೆಗೆ ಹೆಣ್ಣು ಕೊಡುವುದೆಂದರೆ ದೆವ್ವದ ಬಲಿಗೆ ಕುರಿಯನ್ನು ಸುಳಿದು ಬಿಟ್ಟಂತೆಯೇ' ಎಂದು ಆ ಕಡೆಯ ಹೆಣ್ಣು ಮಕ್ಕಳ ತಾಯಂದಿರು ಹೇಳಿಕೊಳ್ಳುವ ರೂಢಿ. ಒಟ್ಟಿನಲ್ಲಿ ಹೇಳುವುದಾದರೆ ಇಂದಿರೆಯ ದುರದೃಷ್ಟವು ಅವಳನ್ನು ಆ ಮನೆಯ ಸೊಸೆಯನ್ನಾಗಿಸಿತು.

ಇಂದಿರೆಯ ತಂದೆ ಲಚ್ಚಯ್ಯ, ಜೋಯಿಸರ ಸಂಪನ್ನತೆಯನ್ನಷ್ಟೇ ಆವರ ಶ್ಯಾಲಕನಿಂದ ಕೇಳಿದ್ದ. 'ಹೆಣ್ಣು ಕೇಳಲಿಕ್ಕೆ ತಾವಾಗಿ ಮನೆಬಾಗಿಲಿಗೆ ಬಂದಿದ್ದಾರೆ. ಒಳ್ಳೆ ಶ್ರೋತ್ರಿಯರ ಮನೆತನ. ಮೇಲಾಗಿ ವರದಕ್ಷಿಣೆಯೂ ಕಡಿಮೆ. ಐದುನೂರು ರೂಪಾಯಿಗಳನ್ನು ಕೊಟ್ಟರಾಯಿತು. ಹುಡುಗಿಯ ವಯಸ್ಸು ಹದಿನಾಲ್ಕು ದಾಟುವುದರಲ್ಲಿದೆ. ಋತುಮತಿಯಾಗುವ ಮೊದಲೇ ಮದುವೆಮಾಡಿಬಿಟ್ಟರೆ ಒಳಿತು' ಹೀಗೆಲ್ಲಾ ಆಲೋಚಿಸಿ ಲಚ್ಚಯ್ಯ ಆ ಸಂಧಾನಕ್ಕೆ ಸಮ್ಮತಿಯನ್ನಿತ್ತ.

ಅಂತೂ ಮದುವೆಯೇರ್ಪಾಡಾಯಿತು. ಆದರೇನು? ವಧೂ-ವರರ ತಲೆಯ ಮೇಲೆ ಅಕ್ಕೀಕಾಳು ಬೀಳುತ್ತಿರುವಾಗಲೆ ಬೀಯ-ಗರಲ್ಲಿ ಅಸಂತುಷ್ಟಿ ಬಂದುಬಿಡಬೇಕೆ? ವರೋಪಚಾರಕ್ಕೆ ಬೇರೆ ಐದುನೂರು ರೂಪಾಯಿಗಳನ್ನು ಕೊಟ್ಟ ಹೊರತು ಈ ವಿವಾಹ ಪೂರಯಿಸದೆಂದು ಹಟ ಹಿಡಿದು ಕುಳಿತರು ಜೋಯಿಸರು. ಲಚ್ಚಯ್ಯನಿಗೆ ಒಬ್ಬಳೇ ಮಗಳು; ಈ ನಂದರ್ಭದಲ್ಲಿ ಒಂದಿಷ್ಟು ಬಿಗಿಯಾಗಿ ವರ್ತಿಸಿದರೆ ಹಣವು ತಾನಾಗಿಯೆ ಕೈಗೆ ಬರುವುದೆಂದು ಚಾಣಾಕ್ಷರಾದ ಜೋಯಿಸರ ಎಣಿಕೆ. ಪಾಪ! ಐದು ನೂರು ರೂಪಾಯಿಗಳನ್ನು ಒದಗಿಸಬೇಕಿದ್ದರೆಯೆ ದರಿದ್ರ ಲಚ್ಚಯ್ಯನಿಗೆ ಸಾಕಾಗಿಹೋಗಿತ್ತು. 'ಹುಡುಗಿಗೆ ಸುಖವಾದರೆ ಸಾಕು' ಎಂಬ ಭಾವನೆಯಿಂದ ಆತ ಹೇಗೋ ಆ ಕಷ್ಟ ಸಹಿಸಿ-ಕೊಂಡಿದ್ದ. ಹೆಣ್ಣುಹೆತ್ತ ಕರುಳಲ್ಲ ಜೋಯಿಸರದು; ಆ ಭಾವನೆ ಅವರಿಗೇನು ಗೊತ್ತು?

★

ದುಡ್ಡಿಗಿಂತ ದೊಡ್ಡದಾವುದಿದೆ? ಇಂದಿರೆಗೆ ಬೇಕಾದಂತಹ ರೂಪವಿದ್ದರೇನು, ಗುಣವಿದ್ದರೇನು? ನಾನ್ನೂರು ರೂಪಾಯಿಗಳ ಬೆಲೆಗೆ ಅವಾವುವೂ ಸಮಾನವಾಗಲಿಲ್ಲ.

★

ಎರಡು ಕಡೆಯವರಲ್ಲಿಯೂ ಘರ್ಷಣೆಗೆ ಮೊದಲಾಯಿತು.

"ಮೊದಲು ಈ ಮಾತು ಜೇಳಲಿಲ್ಲವಲ್ಲ!" ಎಂದ ಲಚ್ಚಯ್ಯ.

"ಆದನ್ನು ನೀವಾಗಿ ತಿಳಿದುಕೊಳ್ಳಬೇಕಿತ್ತು. ಈಗ ಐದು ನೂರು ಬೇರೆ ಕೊಡುತ್ತಿರೋ, ಇಲ್ಲವೇ ದಿಬ್ಬಣವನ್ನು ಹೀಗೆಯೆ ಹಿಂದಕ್ಕೆ ತೆಗೆದುಕೊಂಡು ಹೋಗಬೇಕೋ?" ಎಂದು ಕರುಳೇ ಇಲ್ಲದವರಂತೆ ಗುಡುಗಿದರು ಜೋಯಿಸರು. ಸಮಯದಲ್ಲಿ ಆಗಲಿರುವ ಮದುವೆ ಮುರಿದುಹೋಗಬಾರದೆಂದು, ಕೂಡಿದ ಸಭ್ಯರು ಮಧ್ಯಸ್ಥಿಕೆ ನಡೆಯಿಸಿದರು:

"ಇಂತಹ ಮಂಗಲಕಾರ್ಯದಲ್ಲಿ ರೂಪಾಯಿಯ ಮೇರೆ ನೋಡುವುದರಲ್ಲಿ ಅರ್ಥವಿಲ್ಲ. ಲಚ್ಚಯ್ಯ ಅಡಜಣಿಯ ಮನುಷ್ಯ-ನಾದುದರಿಂದ, ಹಣಕೂಡಿಸಿ ಕೊಡುವುದಕ್ಕೆ ಮಗಳ ಶೋಭನ-ಪ್ರಸ್ಥದ ವರೆಗೆ ಅವಕಾಶ ಕೊಡಬೇಕು. ಜೋಯಿಸರು, ಕೇಳಿದ್ದಕ್ಕೆ ಒಂದು ನೂರು ರೂಪಾಯಿ ಕಡಿಮೆ ಎಂದರೆ ನಾಲ್ಕುನೂರು ರೂಪಾಯಿಗಳನ್ನು ಆ ಸಮಯ ತೆಗೆದುಕೊಳ್ಳಬೇಕು!"

ಈ ರೀತಿಯ ಸಭ್ಯರ ತೀರ್ಮಾನಕ್ಕೆ ಲಚ್ಚಯ್ಯ ಒಪ್ಪಿಕೊಂಡು "ಈ ಘಟವೊಂದು ಗಟ್ಟಿಯಾಗಿದ್ದರೆ ಹಣಕೊಡದೆ ಇರುವುದಿಲ್ಲ!"

ಎಂದು ಪಣತೊಟ್ಟ; ಅಂತೂ ಮದುವೆ ಸಾಂಗವಾಯಿತು.

ಕಾಲಗತಿ ವಿಚಿತ್ರ. ಇಂದಿರೆಯ ತಂದೆ ಮುಂದೆ ಒಂದು ವರ್ಷ ಕಳೆಯುವುದರೊಳಗೆ ಪರಿಂಧಾಮಹೊಂದಬೇಕೇ? ಮಗಳ ಶೋಭನಕಾರ್ಯ ಪೂರೈಸುವ ಪುಣ್ಯ ಆತನಿಗಿರದೆ ಹೋಯಿತು. ಅಂತಹ ದುರ್ದಶೆಯಲ್ಲಿಯೂ—ಇಂದಿರೆಯ ಅನಾಥೆಯಾದ ತಾಯಿ ಸಾವಿತ್ರಮ್ಮ ಬುದ್ಧಿವಂತೆಯಾದುದರಿಂದ, ಧೈರ್ಯ ತಂದುಕೊಂಡು ಹೇಗೋ ಬಾಳುವೆಯನ್ನು ಮುಂದುವರಿಸಿದಳು.

ಮತ್ತೆರಡು ತಿಂಗಳಿಗೆ ಇಂದಿರೆಯ ಶೋಭನವಾಗಿ ಆಕೆ ಗಂಡನ ಮನೆಯನ್ನು ಸೇರಿದಳು. ಆದರೆ ಲಗ್ನಕಾಲದಲ್ಲಿ ನಡೆದ ತೀರ್ಮಾನದಂತೆ ನಾನೂರು ರೂಪಾಯಿಗಳು ಮಾತ್ರ ಜೋಯಿಸರ ಕೈಯನ್ನು ಸೇರಲೆ ಇಲ್ಲ. ಇಂದಿರೆಯ ತಾಯಿಯವಾಗಿದ್ದ ಚಿಲ್ಲರೆಪಲ್ಲರೆ ಆಭರಣಗಳನ್ನು, ಈ ಅವಾಂತರದಲ್ಲಿ, ಆ ಮನೆಯಲ್ಲಿ ಕೂಲಿಗಿದ್ದ ಪರವೂರಿನವನೊಬ್ಬನು ಅಪಹರಿಸಿ ಫರಾರಿಯಾದ. ಆ ಆಭರಣಗಳ ಮೇಲೂ ಕಣ್ಣಿಟ್ಟಿದ್ದರು ಜೋಯಿಸರು. ಹೀಗೆ ಎಲ್ಲ ಬದಿಯಿಂದ ನಿರಾಶೆಯಾದಂತಾದ್ದರಿಂದ ಅವರ ತಳಮಳ ಹೇಳತೀರದು. ಇಂದಿರೆಯು ಮನೆಗೆ ಸೇರಿದುದೇ ತಡ, "ಸೊಸೆ ಅವಲಕ್ಷಣದವಳು" ಎಂದು ಅವಳಿಗೆ ಹಿಂಸೆ ಕೊಡುವುದಕ್ಕೆ ಮೊದಲಾಯಿತು ಆ ಮನೆಯಲ್ಲಿ.

೨

ನನ್ನ ಸೋದರಮಾವ ಅಂಚೆಯ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದ. ಆತನಿಗೆ ಇಂದಿರೆಯ ಗಂಡನ ಮನೆಯಿರುವ ಊರಿಗೆ ವರ್ಗವಾಗಿದೆಯೆಂದು ತಿಳಿದಾಗ ನನಗೆ ಸಂತೋಷವಾಯಿತು. ಗಂಡನ ಮನೆಯನ್ನು ಸೇರಿದ ಮೇಲೆ, ಇಂದಿರೆಯನ್ನು ನೋಡಿ ಸುಮಾರು ಮೂರು ವರ್ಷ ಸಂದುಹೋದಂತಿತ್ತು. ಈಗ ಅವಕಾಶ ದೊರೆಕಿದೆ, ಹಳ್ಳಿಯ ವಾಸದ ಬೇಜಾರನ್ನು ಕಳೆಯಲು ನಾನು ಮಾವನ ಮನೆಯಲ್ಲಿ ಹದಿನೈದು ದಿನ ಇದ್ದು ಬರುವೆನೆಂದು ತಾಯಿಗೆ ಹೇಳಿ ಹೊರಟುಬಂದೆ. ನಾನು ಬಂದ ವಾರ್ತೆ ಕೇಳಿ ಇಂದಿರೆ ತಾನಾಗಿಯೆ ನನ್ನನ್ನು ಕಾಣಲು ಬರುವಳೆಂದು ನನ್ನ ಎಣಿಕೆಯಿದ್ದಿತು; ಒಂದುವಾರ ದಾಟಿದರೂ ಆಕೆಯ ಸುಳಿವಿಲ್ಲ. ಹೆರವರ ಮನೆಗೆ ಅಮಂತ್ರಣವಿಲ್ಲದೆ ಹೋಗುವುದೆಂದರೆ ನನಗೆ ನಾಚಿಕೆ. ಏನು ಮಾಡುವುದು?

ಇಂದಿರೆಯ ಮನೆಗೆ ತುಸುದೂರದಲ್ಲಿ ಒಂದು ದೊಡ್ಡ ಕೆರೆಯಿದೆ. ಕೇರಿಯ ಹೆಂಗುಸರು ಬಟ್ಟೆ ಒಗೆಯುವದಕ್ಕೆ ನಿತ್ಯವೂ ಅಲ್ಲಿಗೆ ಬರುತ್ತಿದ್ದರು. ಅಲ್ಲಿಯಾದರೂ ಅವಳು ಕಾಣಸಿಗುವಳೆಂದು ಬಗೆದು ನಾನು ಆ ಕಡೆಗೆ ಹೊರಟೆ. ನನ್ನ ನಿರೀಕ್ಷಣೆ ತಪ್ಪಾಗಲಿಲ್ಲ. ಅಲ್ಲಿ ಆಕೆ ಒಗೆದ ಬಟ್ಟೆಯ ರಾಶಿಯನ್ನು ಕಂಕುಳಲ್ಲಿ ಇರಿಸಿಕೊಂಡು, ಕೆರೆಯ ಕಟ್ಟೆಯನೇಲೆ ಬರುತ್ತಿದ್ದಳು. ಅವಳು ಬಹಳೇ ನಿರ್ವಿಣ್ಣಳಾಗಿರುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ನನ್ನನ್ನವಳು ನೋಡದೆ ಶೂನ್ಯಮನಸ್ಕಳಂತೆ ಎತ್ತೆತ್ತಲೋ ನಿಟ್ಟಿಸುತ್ತಿದ್ದಳು. ಬಹು ದಿವಸಕ್ಕೆ ಸಿಕ್ಕಿದ ಗೆಳತಿಯೆಂದು ನನ್ನನ್ನು ನೋಡುವ ಕುತೂಹಲವನ್ನು ಸಹ ತೋರಿಸದೆ, ತಪ್ಪಿಸಿಕೊಂಡು ಇನ್ನೊಂದು ಬದಿಯಿಂದ ಹೋಗಲು ಹವಣಿಸುತ್ತಿದ್ದಳು. ಅವಳಾ ಔದಾಸೀನ್ಯದಿಂದ ನನಗೆ ಸಿಟ್ಟುಬಂದು "ಇಂದೂ, ಗಂಡನಮನೆಯ ವೈಭವದ ಸೊಗಸಿನಲ್ಲಿ ಇತರರ ನೆನಪು ಹೇಗೆ ಬರಬೇಕು ನಿನಗೆ?" ಎಂದು ಅಣಕಿಸುವ ಮನಸ್ಸಾಯಿತು. ಆದರೆ ಆ ಮರುನಿಮಿಷದಲ್ಲಿಯೇ ಅವಳಿಗೆ ಅಂತಹ ದುರ್ದಶೆ ಏನು ಬಂತೋ, ಅವಳ ನೋವು ಎಂತಹದೊ—ತಿಳಿಯಲು ಮನಸ್ಸು ಉದ್ವೇಗಗೊಂಡಿತು. ನಾನು ಹಿಂಬಾಲಿಸಿ ಹೋಗಿ ಅವಳನ್ನು ಏಕಾಂತದಲ್ಲಿ ಹಿಡಿದು, ದಾರಿಯಬದಿಗೆ ನಿಂತು ಸೌಮ್ಯವಾಗಿ ಮಾತಿಗೆ ಮೊದಲು ಮಾಡಿದೆ.

"ಇಂದೂ, ನಿನ್ನನ್ನು ಕಾಣದೆ ಒಂದು ತಪ ಸಂದುಹೋಯಿತು. ಈಗ ಇಲ್ಲಿಗೆ ಬಂಗು ಒಂದು ವಾರವಾದರೂ ಸಿಗುವುದಾಗಲಿಲ್ಲ. ನನ್ನ ದುರ್ದೈವ, ಹೋಗಲಿ, ಹೇಗಿದ್ದಿಯೆ ಈಗ?"

ಎಲ್ಲಿಯೋ ನೆಟ್ಟಂತಿದ್ದ ದೃಷ್ಟಿಯನ್ನು ಇಂದಿರೆ ಬಹಳ ಆಯಾಸದಿಂದ ತಿರುಗಿಸಿದಳು. ನನ್ನನ್ನು ನೋಡಿದ್ದೇ ತಡ, ಅದೆಷ್ಟು ತಡೆಯಲು ಯತ್ನಿಸಿದರೂ ತಡೆಯದೆ ಆಕೆಯ ಕಣ್ಣಿನಿಂದ ಬಾಷ್ಪಗಳು ಧಾರೆಗಟ್ಟಿ ಹರಿದುವು. ಒಂದುಕ್ಷಣ ಬಾಯಿಂದ ಮಾತೇ ಹೊರಡಲಿಲ್ಲ.

"ಕಾಣಿಸುವುದಿಲ್ಲವೇ? ಹೀಗಿದ್ದೇನೆ ಈಗ ಸರಳಾ! ಹಾಂ, ನೀನೆಷ್ಟು ದೊಡ್ಡವಳಾಗಿದ್ದೀಯೆ? ನಿನಗೊಳ್ಳೇ ಗಂಡನ ಮನೆ ದೊರಕಬೇಕು ನೋಡು!"

ಇಂದಿರೆಯು ಹೇಗೋ ದಣಿವನ್ನು ತಡೆಹಿಡಿದು ಶುಷ್ಕವಾಗಿ ನಕ್ಕು ಹೇಳಿದಳು. ಅವಳ ಆ ಅತಿಪ್ರಸಂಗ ನೋಡಿ ನನಗೆ ಸಹಿಸಲಾಗಲಿಲ್ಲ. ನಾನು ಸ್ವಲ್ಪ ಸೆಡೆದುಕೊಂಡು ಹೇಳಿದೆ: "ಹಾಂ. ನಿನ್ನ ಹರಕೆಹೊರುವುದಕ್ಕೆ ಮಿಂದು ಮಡಿಯುಟ್ಟು ಬರುತ್ತೇನೆ. ಈಗ ಹೇಳು, ನೀನು ಅಳುತ್ತೀಯೇಕೆ? ನಿನ್ನ ಕಣ್ಣಿಕೆಳಭಾಗದಲ್ಲಿ ಅದೇನು ಘಾಯ? ಇಂದು ಮನೆಯಲ್ಲಿ ಏನೋ ಉತ್ಪಾತ ನಡೆದಿರಬೇಕು. ಜೀವದ ಗೆಳತಿ ನಾನು, ನನ್ನೊಡನೆಯೂ ಪುಚ್ಚುಮರೆಯೇಕೆ?"

"ನೀನಿದನ್ನು ಕೇಳಬೇಡ ಸರಳಾ! ಒಂದು ಮಾತು, ಈ ಜೀವ ಬೇಗನೆ ಹೋಗುವುದಿಲ್ಲ. ಇಂದು ಬಟ್ಟೆ ಒಗೆಯುವುದು ಬಹಳವಿದ್ದುದರಿಂದ, ವಿಪರೀತ ವೇಳೆಯಾಗಿಬಿಟ್ಟಿತು. ಮತ್ತೆ ತಡವಾದರೆ ಮನೆಯಲ್ಲಿ ಏನೆಲ್ಲ ಅಂದುಕೊಳ್ಳುತ್ತಾರೆಯೋ, ನೀನೀಗ ಹೋಗು!"

ಇಂದಿರೆ ನಡುವನ್ನು ಸಡಿಲಿಸುತ್ತ ಹೋಗಲನುವಾದಳು. ಗಂಡನಮನೆಯ ಆತಂಕಮಯ ಬದುಕಿನಿಂದಾಗಿ ಉಂಟಾದ ಅವಳ ಆ ವಿರಕ್ತಿ ನನಗೆ ವಿಸ್ಮಯವನ್ನುಂಟುಮಾಡಿತು. ಅಪರೂಪವಾಗಿ ಭೆಟ್ಟಿಯಾದ ನನ್ನನ್ನು ಕೂಡ "ಯಾವಾಗ ಬಂದೆ? ಎಷ್ಟು ದಿವಸ ಇರುತ್ತೀಯೆ?" ಇದೊಂದನ್ನೂ ಆಕೆ

ವಿಚಾರಿಸಬೇಡವೇ? ಹೆಂಗುಸಾದವಳು ತವರುಮನೆಯ ವಾರ್ತೆಯನ್ನೂ ವಿಚಾರಿಸದಷ್ಟು ಮನುತಾಹೀನಳೇ?

"ಇಂದೂ! ನಿನ್ನ ತಾಯಿ....." ನಾನು ಮುಂದೆ ಮಾತಾಡುವುದಕ್ಕೆ ಮೊದಲೇ ಸರಕ್ಕನೆ ತಿರುಗಿನಿಂತು "ಮತ್ತೇನು? ಚೆನ್ನಾಗಿದ್ದಾಳೆ ಅಲ್ಲವೇ? ಆಯಿತು, ನೀನು ನನ್ನನೇಕೆ ಹಾಗೆ ದಿಟ್ಟಿಸಿ ನೋಡುತ್ತೀಯೆ ಸರಳಾ?" ಈಗ ಅವಳ ಹೃದಯದ ಬೆಂಕಿ ಕಣ್ಣಲ್ಲಿ ಹೊರಹೊಮ್ಮಿತು.

"ನಿನ್ನನ್ನು ನೋಡಬೇಕೆನಿಸುವುದು. ಅದಕ್ಕಾಗಿ ನೋಡುತ್ತಿದ್ದೇನೆ ಅಷ್ಟೆ! ಅದರಿಂದೇನು ಕೇಡು ಇಂದೂ?"

ನಿಜವಾಗಿಯೂ ಇಂದಿರೆ ಸುಂದರಿ. ದೇವರಿಗೆ ಅದೆಷ್ಟೋ ಹರಕೆ ಸಲ್ಲಿಸಿ, ಎಷ್ಟೋ ಬೇನೆಗಳ ದವಡೆಯಿಂದ ಪಾರಾಗಿ ಉಳಿದ ಜೀವ ಅದು. ದಾರುಣವಾದ ಮನೋವ್ಯಥೆ ಆವರಿಸಿದ್ದರೂ ಇನ್ನೂ ಆ ರೂಪ ಮನೋಜ್ಞವಾಗಿಯೆ ಇದೆ.

"ಸರಳಾ, ಕಣ್ಣಿಗೆ ಮೆಚ್ಚುಗೆಯಾದ ವಸ್ತು ಈ ಮನೆಯಲ್ಲಿ ಧಾರಿಸುವುದಿಲ್ಲ. ಈ ರೂಪ ಯಾಕೆ ಹಾಳಾಗುವುದಿಲ್ಲವೊ!"

ಈ ಬಾರಿ ಇಂದಿರೆಯ ಕಣ್ಣಿಂದ ನೀರಿನ ಬದಲು ರಕ್ತ ಕಾಣಿಸಿಕೊಂಡಿತು. ಕೆನ್ನೆಯ ಮೇಲುಗಡೆ ಸುಟ್ಟ ಘಾಯದಂತಿದ್ದು, ಕಣ್ಣುಜ್ಜಿಕೊಳ್ಳುವಾಗ ಕೈತಾಕಿ ಆ ಘಾಯ ತೆರೆದುಹೋಗಿರಬೇಕು.

"ಅಯ್ಯೋ, ಇದೇನು ರಕ್ತ? ಈ ದುಷ್ಕೃತ್ಯ ಮಾವನದೋ, ಗಂಡನದೋ? ಯಾರದು ಹೇಳು?"

"ಏನಿಲ್ಲ. ಹೀಗೆಯೇ ಅಡಿಗೆಯಲ್ಲಿ ತೊಡಗಿದಾಗ ...." ಇಂದಿರೆಯು ತಲೆಯನ್ನು ಅಲ್ಲಾಡಿಸಿದಳು. ರಕ್ತಮಿಶ್ರಿತವಾದ ಒಂದೆರಡು ಹನಿ ಆಕೆಯ ಕಣ್ಣಿನಿಂದ ಪಟಪಟ ಉದುರಿತು.

"ಅಡಗಿಸುವೆಯೇಕೆ ಇಂದೂ? ನನ್ನಾಣೆಯಿದೆ, ನಡೆದುದನ್ನು ಇದ್ದಹಾಗೆ ಹೇಳಬೇಕು ನೋಡು; ಇಲ್ಲವಾದರೆ ನಾನು ಬಿಡುವವಳಲ್ಲ!"

ನಾನವಳ ಕೈಹಿಡಿದು ಅಚ್ಚೆಯಿಂದ ಹಿಸುಕಿದೆ. ಇಂದಿರೆಯು ನಿರುಪಾಯಳಾಗಿ ಹೇಳತೊಡಗಿದಳು:

"ಕೇಳು ಸರಳಾ! ಈ ಮನೆಯಲ್ಲಿ ಇಂತಹ ಹಿಂಸೆಯೇನೂ ಹೊಸದಲ್ಲ. ಇಲ್ಲಿಯ ಸೊಸೆತನ ಕೂಲಿಯ ಹೆಂಗುಸಿಗೂ ಕೀಳಾದುದು! ನೋಡು, ಉಡುವುದಕ್ಕೆ ಸರಿಯಾದ ಸೀರೆಯಿಲ್ಲ. ತೊಡುವ ರವಿಕೆಯ ಬೆನ್ನ ಬದಿ ಹರಿದುಹೋಗಿದೆ. ಸೂಜಿ-ದಾರ ಕೇಳಿದರೆ "ನಿನ್ನಪ್ಪ ಇಟ್ಟಿರುವನೋ ಇಲ್ಲಿ?" ಎನ್ನುತ್ತಾರೆ ಮಾವನವರು. ಯಾರ ಮನೆಗೂ ಹೋಗುವುದಕ್ಕಿಲ್ಲ. ಇಂದು ಹೊರಬಾಗಿಲನ್ನು ಸಾರಿಸುತ್ತಿದ್ದಾಗ ಒಂದು ನಂಗತಿ ನಡೆಯಿತು: ಎದುರುಮನೆಯ ಪದ್ಮಾಕ್ಷಿ ಸಿಲ್ಕಿನ ಬ್ಲೌಜು ಹೊಲಿಯುವುದಕ್ಕೆ, ದರ್ಜಿಯವನಿಗೆ ಹೇಳಿ ಕರೆಯಿಸಿದ್ದಳು. ಆತ ಅಳತೆಯನ್ನು ನೋಡುತ್ತ ಅಲ್ಲಿ ನಿಂತಿದ್ದ. ನನಗೆ ರವಿಕೆ ಹರಿದುದು ನೆನಪಾಗಿ ನನ್ನ ಅಸಹಾಯಸ್ಥಿತಿಗೆ ಅಳು ಬಂತು. ಅದೇ ಸಮಯ ಹೆರೆಯಲ್ಲಿ ಯಿಂದು ಮಾವನವರು ಒಳಗೆ ಬರುತ್ತಿದ್ದರು. ನನ್ನನ್ನು ನೋಡಿದ್ದೇ ಬೈಗಳಿಗೆ ಸುರು.... "ರಂ....ಕೆಲಸಬಿಟ್ಟು ಜಾಗಿಲಿಗೆ ನಿಂತು ಅದೇನು ಹೊಂಚು ನಡಿಸಿದ್ದೀಯೆ?" ಎಂದು ಗದ್ದರಿಸಿದರು. ಆ ಕೂಗಿಗೆ ದರ್ಜಿಯವನೂ ಕುತೂಹಲಪಟ್ಟು ನನ್ನೆಡೆಗೆ ನೋಡಿದ. ನನಗೆ ನಾಚಿಕೆಯಿಂದ ಸತ್ತಹಾಗೆ ಆಯಿತು. ನಾನು ಮೋರೆ ಎತ್ತದೆ ಒಳಗೆ ನಡೆದೆ. ಒಳಮನೆಗೆ ಬಂದ ಮೇಲೆ ಅವರೆಲಿದ ಮಾತು ಎಷ್ಟು ಅಸಹ್ಯವಾಗಿತ್ತೆಂಬುದನ್ನು ಈ ಬಾಯಿಂದ ಹೇಳುವುದು ಸಾಧ್ಯವಿಲ್ಲ ಸರಳಾ!"

"ನಿನ್ನ ಕೆನ್ನೆಯ ಮೇಲೆ ಬರೆಯೆಳೆದವರೂ ಮಾವನವರೇ ಏನೋ!"

"ಇಲ್ಲ. ಅವರು ಮಡಿಯಾಗಿದ್ದುದರಿಂದ ಆ ಕೆಲಸ ಮಗನಿಂದ ಮಾಡಿಸಿದರು."

"ಏನು? ಆತ ವಿದ್ಯಾಬುದ್ಧಿ ಬಲ್ಲವನೆಂದು ಹೇಳುವರಲ್ಲ, ಇಂದೂ?"

"ಬದುಕಿಗೆ ಬೇಕಾದ ವಿದ್ಯೆಯ ಹೊರತಾಗಿ ಉಳಿದುದರಲ್ಲಿ ಅವರು ಪಾರಂಗತರೇ! ಅಂಥ ಪ್ರಾಣಿಯನ್ನು ತಂದೆ ಗೊಂಬೆಯಂತೆ ಆಡಿಸುವುದು, ಆಶ್ಚರ್ಯದ ಮಾತಲ್ಲ!"

ಹೇಳುಹೇಳುತ್ತಲೇ ಇಂದಿರೆಯ ಕಂಠ ಉಕ್ಕಿ ಬಂತು. ಬಿಕ್ಕಿ ಬಿಕ್ಕಿ ಅಳುತ್ತಿದ್ದಂತೆಯೇ ಮಾತು ನುಂದುವರಿಯಿತು:

"ಸರಳಾ! ನಾನು ಪಾಪಿ! ಅವರು ದೇವರಂಥವರು. ನಾನು ಎಷ್ಟು ಅವರನ್ನು ಪ್ರೀತಿಸುತ್ತೇನೆ. ಛೇ! ಗಂಡನ ಮನೆಗೆ ದೋಷಕೊಟ್ಟು, ಆಡಿಕೊಳ್ಳುವಂತಹ ಹೀನದಶೆ ಇನ್ನಾವ ಹೆಂಗುಸಿಗೂ ಬಾರದಿರಲಿ. ನಡೆ. ಈಗ ಮಾತು ಸಾಕು. ಮನೆಯವರಾರಾದರೂ ನೋಡಿದರೆ ಮತ್ತೆ ಆ ಕಷ್ಟ ಬೇಡ!" ಎಂದವಳೇ ಅವಳು ಸರಸರನೆ ಮನೆಯ ಹಾದಿಯನ್ನು ಹಿಡಿದಳು.

* * *

ಇಂದಿರೆಯ ಮಾತು ಅಕ್ಷರಶಃ ಸತ್ಯವಾಗಿತ್ತೆಂಬುದು, ಊರ ಜನರ ಸುದ್ದಿಯಿಂದ ಆಮೇಲೆ ತಿಳಿಯಿತು. ಆಕೆಯ ಬಾಳು ಅದೆಷ್ಟು ದಾರುಣವಾಗಿದ್ದಿತು! ಮನೆಯಲ್ಲಿ ಎಲ್ಲವೂ ಇದ್ದರೂ ಸನ್ಮಾನ, ಸುಖ-ಸಂಪತ್ತುಗಳಿಗೆ ಇಂದಿರೆ ಹೊರತಾಗಿದ್ದಾಳೆ. ಬರೇ ಅಪಮಾನ, ಕಣ್ಣೀರು, ನೋವು....ಇನ್ನೇನಿದೆ ಆಕೆಯ ಬದುಕಿನಲ್ಲಿ! ಜಾಗಿಲಿಗೆ ಯಾರಾದರೂ ಭಿಕ್ಷೆಗೆ ಬಂದರೆ, ಒಂದು ಹಿಡಿ ಅಕ್ಕಿ ಪಾಕುವ್ರದಕ್ಕಿಲ್ಲ. ಆ ತುಂಬಿದ ಮನೆಯಲ್ಲಿ ಅನ್ನ-ಸತ್ಯಾಗ್ರಹದ ದಿನಗಳನ್ನೆಷ್ಟೋ ಕಂಡಿದ್ದಾಳೆ, ಆಕೆ. ಗಂಡನೋ ಶುದ್ಧ ಶ್ರೋತ್ರಿಯು ಹಿಂಡ; ಮತ್ತೆ ಆ ಪತಿಯ ಮೋರೆಯನ್ನು ಚೆನ್ನಾಗಿ ನೋಡಲೂ ಅಧಿಕಾರವಿಲ್ಲ ಆಕೆಗೆ! ಇಂತಹ ಜಾಗದಲ್ಲಿ ಒಬ್ಬರ ಹೃದಯವನ್ನು ಒಬ್ಬರು ಅರಿಯುವ ಬಗೆ ಹೇಗೆ? ಒಮ್ಮೆ ಸಾಹಸಮಾಡಿ, ಆವಳು ತನ್ನ ಕಷ್ಟವನ್ನು ತೋಡಿಕೊಳ್ಳಲು ಗಂಡನೊಡನೆ ಮಾತಿಗೆ ಪ್ರಯತ್ನಪಟ್ಟಳೊ! ಮಾವ ಬೆನ್ನ ಹಿಂದೆಯೆ ಬರುತ್ತಾನೆ."ಬೇರೆ ಕೆಲಸವಿಲ್ಲವೋ ನಿನಗೆ ಮುಟ್ಠಾಳ? ನಡೆ, ಆಜ್ಞೆ, ಹೆಂಗುಸಿನ ಮಾತು ಕೇಳುತ್ತಿದ್ದವನ ಮನೆ ಹಾಳು, ಉಳಿಯುವುದಿಲ್ಲ! ತಿಳಿಯಿತೇ?" ಎಂದು ಭಯಾನಕವಾದ

ಎಚ್ಚರಿಕೆ ಕೊಡುತ್ತಾನೆ, ಆ ಮಾವ! ಸೊಸೆಯನ್ನು ಹೊಡೆಯುವುದರಲ್ಲಿ ಅತನ ಕೈ ಬಹಳ ಬಿರುಸು. ಅಷ್ಟಕ್ಕೂ ಮನಸ್ಸಿಗೆ ತೃಪ್ತಿಯಾಗದಿದ್ದರೆ ಕಸಬರಿಗೆಯನ್ನೊ, ಉರಿಯುವ ಕೊಳ್ಳಿಯನ್ನೋ, ಇಲ್ಲವೇ ಪಂಚಪಾತ್ರೆ ಕಾಲುಮಣೆ ಯಾವುದು ಸಿಕ್ಕಿದರೂ ಆಯಿತು....ಉಪಯೋಗಿಸುತ್ತಾನೆ.ಆ ನಿಷ್ಕರುಣಿ! ಇಂತಹ ಸಮಯದಲ್ಲೆಲ್ಲ ಅತ್ತೆಯೂ ಗಂಡನೊಡನೆ ಸಹಕರಿಸುತ್ತಾಳೆ. ಅನಾರೋಗ್ಯದಿಂದಲೂ ಅಂತಸ್ತಾಪದಿಂದಲೂ ಕಸುವುಗೆಟ್ಟ ಇಂದಿರೆಯ ಸೊರಗಿದ ಶರೀರಕ್ಕೆ, ಆ ಏಟ್ಗಳನ್ನು ಅನುಭವಿಸಿ ಚಟಬಿದ್ದು . ಹೋಗಿತ್ತು. ಹಾ, ಇವೆಲ್ಲಕ್ಕೆ, ಕಾರಣೀಭೂತವಾಗಿದ್ದುದೆಂದರೆ, ಆಕೆಯ ತವರುಮನೆಯಿಂದ ಬರಬೇಕಾಗಿದ್ದ ನಾಲ್ಕುನೂರು ರೂಪಾಯಿಗಳು. ಆ ರೂಪಾಯಿಗಳಿಂದಾಗಿ, ಸ್ವರ್ಗಸ್ಥನಾದ ಆಕೆಯ ತಂದೆಯ ಹೆಸರೆತ್ತಿ, ಅತನ ಕುಲಗೋತ್ರಗಳನ್ನೆಲ್ಲ ಆ ಮಾವ ತನ್ನ ಬೈಗಳಿಂದ ಉದ್ಧಾರಮಾಡದೆ ಇದ್ದ ದಿನವಿಲ್ಲ!

ಅಂದು ಅನಂತನ ಚತುರ್ದಶಿ. ಹಬ್ಬವನ್ನುಗಿಸಿ ನಾನು ಹಳ್ಳಿಗೆ ಹೋಗಬೇಕೆಂದಿದ್ದೆ; ಮತ್ತೆ ಇಂದಿರೆಯನ್ನು ಕಾಣುವುದರಲ್ಲಿ ನನಗೆ ಲೇಶವೂ ಉತ್ಸಾಹವುಳಿಯಲಿಲ್ಲ. ತಿರುಗಿತಿರುಗಿ ಆಕೆಯ ವೇದನೆಯನ್ನು ಕೆರಳಿಸುವುದರಲ್ಲಿ ಅರ್ಥವೇನಿದೆ? ಅವಳನ್ನು ಬೀಳ್ಕೊಡ್ಲುವ ದುಃಸಹವಾವ ಗಳಿಗೆಯನ್ನು ದಾಟಿದರೆ ಸಾಕಾಗಿತ್ತು. ಊಟದ ಹೊತ್ತಿಗೆ ಸೋದರಮಾವ ಆಫೀಸಿನಿಂದ ಬಂದ. ಆಶ್ಚರ್ಯ! ಅವನ ಹಿಂದೆಯೆ ಇಂದಿರೆಯೂ ಬಂದಿದ್ದಾಳೆ. ಆಕೆ ನನ್ನನ್ನು ಕಾಣುತ್ತಲೇ ದನಿದೆಗೆದು ಅಳಹತ್ತಿದಳು. ಧೂಳಿಯಲ್ಲಿ ಉರುಳಾಡಿಯೊ ಏನೊ, ಬಟ್ಟೆ ಹೊಲನಾಗಿದೆ. ನೈಯೆಲ್ಲ ಬಾಸುಂಡೆಗಳು. ಮನೆಯಲ್ಲಿ ಜೆನ್ನಾಗಿ ಹೊಡೆತ ಬಿದ್ದಿರಬೇಕು. ಮಾವನೊಡನೆ ಗಾಬರಿಯಿಂದ ಕೇಳಿದೆ:

" ಏನಾಯಿತು? "

" ಬ್ರಾಹ್ಮಣಜಾತಿಯಲ್ಲಿ ಯಾಕೆ ಹುಟ್ಟಿದ್ದಾರೆಯೊ! ಭಾವ್ರ ಪದವಾಸದಲ್ಲಿ ಮನೆಯೊಳಗಿನ ಬೆಕ್ಕು ಕುನ್ನಿಗಳನ್ನು ಕೂಡ ಹೊರದೂಡಲಾಗದು; ಈ ನಡುಮಧ್ಯಾಹ್ನದಲ್ಲಿ, ಅದೂ ಇಂದು ಶುಕ್ರವಾರ! ಸೊಸೆಯನ್ನು ಹೊರಗೆ ಹಾಕಿದರಲ್ಲ ಆ ರಾಕ್ಷಸರು! ಎಂತಹ ಕ್ರೌರ್ಯವೋ, ಏನು ನಡತೆಯೋ? "

ಮಾವ ಏನೆಲ್ಲ ರೇಗಾಡಿದ.

ಇಂದಿರೆಯು ಆಕ್ರೋಶದ ಧ್ವನಿಯಲ್ಲಿ ಹೇಳಿದಳು: " ನೋಡು ಸರಳಾ! ಇಂದು ಚತುರ್ದಶಿಯ ಹಬ್ಬ. ಮನೆಯಲ್ಲಿ ಸತ್ಯನಾರಾಯಣ ವ್ರತಮಾಡುತ್ತಾರೆ. ಬೆಳ್ಳಿಯ ಲೋಟವೊಂದು ಕಾಣೆಯಾಗಿದೆಯಂತೆ! ಮಾವನವರು ಎಲ್ಲ ಕಡೆಗೆ ಹುಡುಕಾಡಿ, ಕೊನೆಗೆ ನನ್ನ ಮೇಲೆ ಎಂತಹ ಅಸಹ್ಯ ಆರೋಪ ಹಾಕಿದರು ಗೊತ್ತೇ? ಮೊನ್ನೆ ಪರ್ಜಿಯವನು ನೋಡಿದ ಸಂಗತಿ ಹೇಳಿದೆನಲ್ಲ, ಆತನಿಗೂ ನನಗೂ ರಹಸ್ಯ ಸಂಬಂಧವಿದೆಯಂತೆ! ನಾನು ಲೋಟ ಕದ್ದು ಅತನಿಗೆ ಕೊಟ್ಟೆನಂತೆ!..ಬೇಡ ತಂಗೀ! ಈ ಹೆಣ್ಣು ಜನ್ಮ ಏಳೇಳು ಜನ್ಮಕ್ಕೂ ಬೇಡ! "

ಮುಂದಿನ ವಿವ್ಯವಾನವನ್ನು ಆಕೆಯು ಹೇಳಬೇಕಾವ ಅವಶ್ಯಕತೆಯುಳಿಯಲಿಲ್ಲ. ಬೀದಿಯಲ್ಲಿ ಹೊರಳುವ ಆ ಅಸಹಾಯ ಅಬಲೆಯನ್ನು ಸಂತಯಿಸಲು ನನ್ನ ಮಾವ ಅಲ್ಲಿ ಕಾಣಿಸಿಕೊಳ್ಳದಿದ್ದರೆ, ಅವಳೇನು ಮಾಡಬೇಕಾಗಿತ್ತು? ಜೋಯಿಸರ ವಿರೋಧ ಕಟ್ಟಿಕೊಳ್ಳುವ ಸಾಹಸ ಆ ಕಡೆ ಇನ್ನಾರಿಗೂ ಇಲ್ಲ. ಎಲ್ಲ ನೆನೆದು ನನ್ನ ಮೈಕೂದಲುಗಳು ನೆಟ್ಟಗಾದುವು.

" ಇಂದೂ, ನಡೆ, ನಾವಿನ್ನು ಈ ಪಾಪದ ಊರಲ್ಲಿ ಇರುವುದು ಬೇಡ. ನಾಳೆ ಹುಣ್ಣಿಮೆಯೊಂದನ್ನು ಮುಗಿಸಿ, ನಾನು ನಿನ್ನನ್ನು ತವರುಮನೆಗೆ ಕರೆದೊಯ್ಯುತ್ತೇನೆ, ನೀನಲ್ಲಿ ತಿರಿದು ಬದುಕಿದರೂ ಅಡ್ಡಿಯಿಲ್ಲ. ಈ ನರಕ ಮಾತ್ರ ಬೇಡ! "

" ಸರಳಾ, ಈ ಅಪವಾದ ಹೊತ್ತು ಬದುಕವುದಕ್ಕಿಂತ ಬಾವಿಗೆ ಬೀಳುವುದು ಎಷ್ಟೋಪಾಲಿಗೆ ಬೇಕು! ಆದರೆ ಮಾಡಲೇನು? ಹೊಟ್ಟೆಯಲ್ಲಿ ಇನ್ನೊಂದು ಜೀವ ಸೇರಿದೆ. ವಿಧಾತನು ಈ ಪಾಪಿಯೊಡನೆ ಹೀಗೇಕೆ ಚೆಲ್ಲಾಟವಾಡುತ್ತಾನೆಯೊ? ಆಗಲಿ, ನೀನೆಂದಂತೆ ನಡೆಯವೆ ಈಗ ನನಗೆ ಬೇರೆ ಗತಿಯೇ ಇಲ್ಲದಾಗಿದೆ! '

ಅಂದು ಮಧ್ಯಾಹ್ನ ಆಕೆ ಊಟಮಾಡಲೆ ಇಲ್ಲ. ಸಾಯಂಕಾಲ ಒಂದು ತುತ್ತು ತಿನ್ನಿಸಬೇಕಾದರೆ ನನಗೆ ಸಾಕಾಗಿಹೋಯಿತು. ಹುಣ್ಣಿಮೆಯ ಮರುದಿನ ಮಾವ ನಮ್ಮಿಬ್ಬರನ್ನೂ ಹಳ್ಳಿಗೆ ಕಳಿಸಿ ಕೊಟ್ಟ.

ಇಂದಿರೆಯು ಒಳಗೆ ಬಂದವಳೇ ತಾಯಿಗೆ ನಮಸ್ಕಾರಮಾಡಿದಳು. ಸಾವಿತ್ರಮ್ಮನಿಗೆ ಮಗಳ ಅಕಸ್ಮಿಕ ಆಗಮನದಿಂದ ಹೌಹಾರಿದಂತಾಯಿತು. ನಾನು ಎಲ್ಲ ಸಂಗತಿಯನ್ನೂ ಸ್ವಲ್ಪದರಲ್ಲಿ ವಿವರಿಸಿದೆ. ತಾಯಿ-ಮಗಳ ಆಗಿನ ಸಮಾಗಮವು ತುಂಬ ವೇದನಾಮಯವಾಗಿತ್ತು.

" ಅಯ್ಯೋ, ದೇವರೇ! ನನ್ನ ಚಿನ್ನದಂತಹ ಮಗಳಿಗೆ ಈ ಅವಸ್ಥೆ ಬರಬೇಕೆ! ಮಗೂ ಸರಳಾ! ನಿನ್ನಿಂದ ಉಪಕಾರವಾಯಿತು. ಆಗಲಿ, ಅಷ್ಟು ದೊಡ್ಡವಳಾಗುವವರೆಗೆ ಸಾಕಿದೆ ನನಗೆ ಹೊಟ್ಟೆಯ ಮಗಳು ಹೆಚ್ಚಾಗುವುದಿಲ್ಲ; ಇವಳು ಇರುವಷ್ಟು ದಿನವೂ ಇಲ್ಲಿಯೇ ಇರುತ್ತಾಳೆ!" ಸಾವಿತ್ರಮ್ಮ ಮಗಳ ಕಣ್ಣೊರೆಸುತ್ತ ನನ್ನೊಡನೆ ಗದ್ಗದವಾಗಿ ಹೇಳಿದಳು.

ನಾನು ಮನೆಗೆ ಹೊರಡಬೇಕೆಂದು ಎದ್ದೆ. ಇಂದಿರೆಯ ಮನಸ್ಸಿನಲ್ಲಿ ಏನು ಹೊಳೆಯಿತೊ? ಆಕೆ ನನ್ನನ್ನು ನಿಲ್ಲಿಸಿಕೊಂಡು " ನಿಲ್ಲು, ಅಲ್ಲಿ ನಡೆದ ಸಂಗತಿಯನ್ನು ಇನ್ನಾರಿಗೂ ಹೇಳಬೇಡ," ಎಂದು ಎಚ್ಚರಿಸಿದಳು. ನನಗೆ ಕಳವಳವಾಯಿತು.

" ನನಗಷ್ಟು ಬುದ್ಧಿಯಿಲ್ಲವೇ? " ಎಂದೆ.

" ಒಂದು ಮಾತು ಸರಳಾ, ನಮ್ಮ ಮನೆಯಲ್ಲಿ ಪ್ರಬಲವಾದ ರೂಢಿಯೊಂದಿದೆ. "

"ಏನು?" ನನಗೆ ಕುತೂಹಲವಾಯಿತು.

"ಗಂಡನ ಮನೆಯನ್ನು ಸೇರಿದೊಡನೆಯೆ, ವಧುವು ತನ್ನ ತವರಿಗೆ 'ಇನ್ನು ನಿಮ್ಮ ಋಣ ತೀರಿತು' ಎಂದು ಹೇಳಿ ಬಾಗಿಲಿಗೆ ಮುಳ್ಳುಹಾಕಿ ಬರಬೇಕು. ನಾನು ಆ ರೂಢಿಯನ್ನು ಮುರಿದು ಬಿಟ್ಟಿದ್ದೇನೆ.!"

"ಹೆಣದ ಎದುರು ಯಾವ ರೂಢಿಯೂ ನಿಲ್ಲುವುದಿಲ್ಲ. ಆಗಲಿ, ಇಂದೂ, ನೀನೆಂದಮಾತನ್ನೇ ಕೇಳಿದವರಿಗೆ ಹೇಳುತ್ತೇನೆ!"

ನಾನು ಅಲ್ಲಿಂದ ಹೊರಟುಬಂದೆ. ನಾಲ್ಕು ದಿವಸ ಕಳೆಯುವಷ್ಟರಲ್ಲಿಯೆ ಮಾವನಿಂದ ಕಾಗದ ಬಂದಿತು. ಮಾವ ಆ ಕಾಗದದಲ್ಲಿ ಇಂದಿರೆಯ ಯೋಗಕ್ಷೇಮವನ್ನು ವಿಚಾರಿಸಿದ್ದಲ್ಲದೆ ಆಕೆಯ ಮೇಲಿನ ಕಳವಿನ ಆರೋಪ ಸುಳ್ಳೆಂದೂ, ಜಯರಾಮ ಜೋಯಿಸರ ಎರಡನೆಯ ಮಗನೇ ಬೆಳ್ಳಿಯ ಲೋಟವನ್ನು ಕದ್ದು ವೇಶ್ಯೆಯೊಬ್ಬಳಿಗೆ ಕೊಟ್ಟದ್ದ ಸಂಗತಿ ತಿಳಿದುಬಂದಿದೆಯೆಂಬುದಾಗಿಯೂ ಬರೆದಿದ್ದ. ಇಂದಿರೆಗೆ ಆ ಕಾಗದ ಓದಿ ತೋರಿಸಿದಾಗ, ಸಮಾಧಾನದಿಂದ ಅವಳಿಗೆ ಅಳುಬಂತು.

* * *

ಮುಂದೆ ನಾಲ್ಕು ತಿಂಗಳಿಗೆ ಇಂದಿರೆಯು ಗಂಡುಶಿಶುವನ್ನು ಹೆತ್ತಳು. ಸಾವಿತ್ರಮ್ಮನಿಗೆ ಅಂತಹ ದುಃಸ್ಥಿತಿಯಲ್ಲಿಯೂ ನೊಮ್ಮಗನನ್ನು ಕಂಡೆನೆಂದು ತುಸು ಸಂತೋಷ. ಅಂದೆಯೆ ನೆರೆಮನೆಯ ಸದಾಶಿವಯ್ಯನಿಂದ ಆಕೆ, ಇಂದಿರೆಯ ಗಂಡನಿಗೆ, ಸೊಟ್ಟಿಲ ಮುಹೂರ್ತ ಮಾಡಲು ಹೊರಟು ಬರುವಂತೆ ಕಾಗದ ಬರೆಯಿಸಿದಳು. ಮರುಟಪಾಲಿಗೆ ಇಂದಿರೆಯ ಮಾವನಿಂದ ಸಿಡಿಲಿನಂತಹ ಉತ್ತರ ಬಂತು:

"ಮದುವೆಯ ಸಭೆಯದಲ್ಲಿ ಆದ ನಿರ್ಣಯದಂತೆ ನಾನೂರು ರೂಪಾಯಿಗಳನ್ನು ಕಳುಹಿಸಿಕೊಟ್ಟಲ್ಲಿ ಸೊಸೆಯನ್ನು ತಿರುಗಿ ಕರೆಯಿಸಿಕೊಳ್ಳುವುದಕ್ಕೆ ವಿಚಾರಮಾಡುವೆವು. ಅಲ್ಲಿಯ ತನಕ ಅವಳಾರೋ ವಿಷಯಾರದೋ....ನಮಗೆ ಸಂಬಂಧವಿಲ್ಲ!"

ತನ್ನನ್ನು ಮನೆಗೆ ಕರೆಯಿಸಿಕೊಳ್ಳಬಹುದೆಂದು ಇಷ್ಟು ದಿವಸವೂ ಇಟ್ಟುಕೊಂಡಿದ್ದ ಅವಳ ಆಸೆ ಇದರಿಂದ ನಿರಾಶೆಯಾಯಿತು. ಪತ್ರ ಬಂದಂದಿನಿಂದಲೇ ತನ್ನನ್ನು ಮನೆಗೆ ಕಳುಹಿಸಿಕೊಡೆಂದು ಪಟ್ಟುಬಿಡದೆ ತಾಯಿಗೆ ಬೆನ್ನು ಹತ್ತಿದ್ದಳು ಇಂದಿರೆ. ತಾನು ಇಲ್ಲಿರುವುದು ಅಷ್ಟು ಅಸಂತೋಷಕರವಲ್ಲದಿದ್ದರೂ, ಮಗನ ಕಲ್ಯಾಣದ ದೃಷ್ಟಿಯಿಂದ, ಎಷ್ಟು ಹಿಂಸೆಯಾದರೂ ತಾನು ಮನೆಯನ್ನು ಸೇರಿಕೊಳ್ಳುವುದೇ ಮೇಲೆಂದು ಆಕೆ ನಿರ್ಧಾರಕ್ಕೆ ಬಂದಿದ್ದಳು. ದಿನಹೋದ ಹಾಗೆಲ್ಲ ಅನ್ನಾಹಾರಗಳನ್ನು ಬಿಟ್ಟದ್ದರಿಂದ, ಆಕೆಯ ಮೈ ತೀರಾ ಸೊರಗಿಹೋಗಿತ್ತು.

ಸಾವಿತ್ರಮ್ಮನಿಗೆ ಮಗಳ ಕಷ್ಟ ನೋಡುವುದಾಗಲಿಲ್ಲ. ನಿರುಪಾಯಳಾಗಿ ಆಕೆ, ಅಂತೂ ಇಂತೂ ತನ್ನದೇ ಆದ—ಕೊನೆಯನಾಗಿದ್ದ ಸೆಣ್ಣದೊಂದು ಹೊಲವನ್ನು ಒತ್ತೆಯಿಟ್ಟು, ನಾನೂರು ರೂಪಾಯಿಗಳನ್ನು ಸಾಲತಂದಳು. ಇಷ್ಟಕ್ಕೆ, ಸುಮಾರು ಮೂರುತಿಂಗಳು ಹಿಡಿಯಿತು. ಸದಾಶಿವಯ್ಯ ಬಾಣಂತಿಯನ್ನು ಕರೆದೊಯ್ಯಲು ಸಿದ್ಧನಾದ.

* * *

ಮಧ್ಯರಸ್ತೆಯಲ್ಲಿ ಮದುವೆಯ ದಿಬ್ಬಣವೊಂದು ಸಡಗರದಿಂದ ಸಾಗಿದೆ. ಹೆಣ್ಣಿನ ಮನೆ ಇನ್ನೂ ಮೂರು ಫರ್ಲಾಂಗು ದೂರದಲ್ಲಿದೆ. ಜಯರಾಮಜೋಯಿಸರ ಮಗ—ಇಂದಿರೆಯ ಗಂಡ—ಬಾಸಿಂಗ ಕಟ್ಟಿಕೊಂಡು ಗೊಂಡೆ ಅಲ್ಲಾಡಿಸುತ್ತ ಪಾಲಕ್ಕಿಯ ಮೇಲೆ ಕುಳಿತಿದ್ದಾನೆ. ಮಾರ್ಗದ ಅಂಚಿನಲ್ಲಿ ಶಿಶುವನ್ನು ಎತ್ತಿಕೊಂಡು ನಿಂತಿದ್ದ ಇಂದಿರೆ, ಆ ದೃಶ್ಯ ನೋಡಿ ದೊಪ್ಪನೆ ನೆಲಕ್ಕೆ ಬಿದ್ದಳು. ಸದಾಶಿವಯ್ಯ ಹತ್ತಿರವಿದ್ದ ಹೊಟೆಲಿನಿಂದ ನೀರುತಂದು ಆಕೆಯ ಮೋರೆಯ ಮೇಲೆ ಸಿಂಪಡಿಸಿದ, ಇಂದಿರೆಯು ಒಂದು ಕ್ಷಣದ ನಂತರ ಕಣ್ಣು ತೆರೆದಳು.

"ಈಗೇನು ಮಾಡಬೇಕು ಇಂದೂ?" ಸದಾಶಿವಯ್ಯ ದಿಜ್ಮೂಢನಾದವನಂತೆ ಕೇಳಿದ; ಇಂದಿರೆ ಬಿಕ್ಕಿಬಿಕ್ಕಿ ಅಳುತ್ತಲೇ ಹೇಳಿದಳು:

"ಕಕ್ಕಾ; ನನ್ನನ್ನು ಸುಡುಗಾಡಿಗೆ ಕರೆದುಕೊಂಡು ಹೋಗು!"



೪೩ ಸಂವಾದಮಾಲೆ

(ಗಾಂಧೀಸಾಹಿತ್ಯ ೪)

ಸಂಪಾದಕರು ಮತ್ತು ಅನುವಾದಕರು

ಶ್ರೀಮಾನ್ ಸಿದ್ಧವನಹಳ್ಳಿ ಕೃಷ್ಣಶರ್ಮ

ಬೆಲೆ ೧—೪—೦.

'ವರ್ಧಾಯಾತ್ರೆ' 'ಪರ್ಣಕುಟಿ' 'ದೀಪಮಾಲೆ' 'ಕನ್ನಡದ ಕಿಡಿಗಳು' ಮೊದಲಾದ ಗ್ರಂಥಗಳಿಂದಲೂ 'ಕನ್ನಡ ಹರಿಜನ' ಪತ್ರಿಕೆಯಿಂದಲೂ ಶ್ರೀ. ಕೃಷ್ಣಶರ್ಮರ ಸಾಹಿತ್ಯಿಕ ವ್ಯಕ್ತಿತ್ವ ಕನ್ನಡ ನಾಡಿಗೆಲ್ಲ ಚೆನ್ನಾಗಿ ಪರಿಚಿತವಾಗಿದೆ. ಗಾಂಧೀ ಸಾಹಿತ್ಯವನ್ನು ಕನ್ನಡಕ್ಕೆ ತರಲು ಈ ಮೊದಲೇ ಅನೇಕರು ಪ್ರಯತ್ನಿಸಿದುದುಂಟು. ಆದರೆ ಕೃಷ್ಣಶರ್ಮರಂತೆ ಪೂರ್ಣ ಯಶಸ್ಸನ್ನು ಪಡೆದವರು ಯಾರೂ ಇಲ್ಲವೆಂದೇ ಹೇಳಬೇಕು. ಶ್ರೀ. ಶರ್ಮರಿಗೆ ಕನ್ನಡ-ಇಂಗ್ಲಿಷ್ ಭಾಷೆಗಳೆರಡರ ಮೇಲೂ ಚೆನ್ನಾದ ಹಿಡಿತವಿದೆ; ಮೂಲ ವಿಷಯವನ್ನು ಗ್ರಹಿಸಿ ಸರಿಯಾಗಿ ಅರಗಿಸಿಕೊಳ್ಳುವಂತಹ ಬುದ್ಧಿಯ ಬಲ್ಪು ಇದೆ; ಅಲ್ಲದೆ ಗಾಂಧೀಜಿಯವರ ರಾಜಕೀಯ ಸಾಮಾಜಿಕ ಆಧ್ಯಾತ್ಮಿಕ ವಿಚಾರಗಳಲ್ಲಿ ಸಂಪೂರ್ಣವಾದ ಶ್ರದ್ಧೆಯಿದೆ. ಆದುದರಿಂದಲೆ ಗಾಂಧೀಜಿಯವರ ಮಾತುಗಳನ್ನೂ ವಿಚಾರಗಳನ್ನೂ, ಅವರಷ್ಟೇ ಅರ್ಥವತ್ತಾದ ಸೂತ್ರವತ್ತಾದ ಸುಂದರ ಶೈಲಿಯಲ್ಲನವರು ಕನ್ನಡಕ್ಕೆ ಇಳಿಸಬಲ್ಲವರಾಗಿದ್ದಾರೆ.

'ವರ್ಧಾಯಾತ್ರೆ' 'ಪರ್ಣಕುಟಿ'ಗಳಲ್ಲಿ ಗಾಂಧೀಜಿಯವರೊಂದಿಗೂ ಅವರ ಪರಿವಾರದೊಂದಿಗೂ ಕೂಡಿ ಮಾತನಾಡಿಕೊಂಡಿದ್ದ ಶ್ರೀ. ಕೃಷ್ಣಶರ್ಮರೂ ವಾಚಕರಿಗೆ ಕಾಣುವರು. ಅವು ಕೂಡ 'ಗಾಂಧೀಸಾಹಿತ್ಯ' ಗಳೆನಿಸಿಕೊಂಡರೂ ಲೇಖಕರ ಸ್ವತಂತ್ರ ಕೃತಿಗಳವು. ಈ 'ಸಂವಾದಮಾಲೆ' ಆ ಜಾತಿಗೆ ಸೇರಿದುದಲ್ಲ; ಪೂರ್ಣವಾಗಿ ಅನುವಾದಿತ ಗ್ರಂಥ. ಮಹಾತ್ಮರು ತಮ್ಮೊಂದಿಗೆ ಮಾತನಾಡಲು ಬಂದ ಅನೇಕ ಮಹನೀಯರೊಂದಿಗೆ ಬೇರೆ ಬೇರೆ ವಿಷಯಗಳನ್ನು ಕುರಿತು ನಡೆಯಿಸಿದ ಸಂವಾದಗಳನ್ನು ಇದರಲ್ಲಿ ಕಾಣಬಹುದು. ಗಾಂಧೀಜಿಯವರ ತತ್ತ್ವದ ವಿವರಗಳಲ್ಲಿ ಕಂಡು ಬರುವ 'ಅಹಿಂಸೆ' 'ಸತ್ಯ' 'ಬ್ರಹ್ಮಚರ್ಯ' 'ನೂಲುವುದು' 'ಯಂತ್ರ ಬಹಿಷ್ಕಾರ' ಮೊದಲಾದುವುಗಳ ಬಗೆಗಿರುವ ಸಂಶಯ-ತಿರಸ್ಕಾರಗಳನ್ನು ಅನೇಕರು ಆಸರೆದುರು ಆಡಿ ತೋರಿಸಿದಾಗ, ಎಲ್ಲರನ್ನೂ ತಮ್ಮ ಸಮಂಜಸ ವಾದಸರಣಿಯಿಂದ ಮಹಾತ್ಮರು ಜಾಯಿ ಮುಚ್ಚಿಸುವರು. ಇದನ್ನು ನೋಡಿದಾಗ, ಮಹಾತ್ಮರ ತತ್ತ್ವನಿಷ್ಠೆಯ-ಬಗೆಗೂ ಸಾಧಕ ಬಾಧಕ ಪ್ರಮಾಣಗಳಿಂದ ಅದನ್ನವರು ಹಿಂಜಿ ಹಿಂಜಿ ತಿಳುಹಿ ಕೊಡುವುದರ ಬಗೆಗೂ ಯಾರಿಗೂ ಕಾತುಕವೆನಿಸದಿರದು. ಕ್ರೈಸ್ತ ಪಾದ್ರಿಗಳೊಂದಿಗೆ ವಾದ ನಡೆಯಿಸಿದ ಸಂದರ್ಭಗಳು ಲೆಕ್ಕವಿಲ್ಲದಷ್ಟು. ಎಲ್ಲರೂ ಮಹಾತ್ಮರ ಸಿದ್ಧಾಂತಗಳಿಗೆ ತಲೆಗೊಟ್ಟು ಹೋಗುವವರೆ.

ಪ್ರಸ್ತುತ ಗ್ರಂಥದಲ್ಲಿಯ 'ರಸನಿಮಿಷ' 'ಅಹಿಂಸೆಯೆ ಸರಿಯಾದ ದಾರಿ' 'ಜಪಾನಿ ಗಾಂಧಿ' 'ಬ್ರಾಹ್ಮಣ ಬ್ರಾಹ್ಮಣೇತರವಾದ' 'ಗೀತೆಯ ಉಪದೇಶ' 'ನಮಗೆ ಬೇಕಾದ ಸಾಹಿತ್ಯ' 'ಸಂನ್ಯಾಸ-ಕರ್ಮ (ಪ್ರೊ. ಭನ್‌ಸಾಲಿ ಮತ್ತು ಗಾಂಧೀಜಿಯವರಲ್ಲಿ ನಡೆದ ಮಾತು-ಕತೆ)' 'ತಂಗಿಯೊಬ್ಬಳ ಪ್ರಶ್ನೆ' ಮೊದಲಾದ ಭಾಗಗಳು ಮತ್ತೆ ಮತ್ತೆ ಓದಿ ಮೆಲುಕು ಹಾಕಲಕ್ಕೆ ತಕ್ಕವುಗಳಾಗಿವೆ. ಗಾಂಧೀಜಿಯವರ ಮಾತಿನ ಮತ್ತು ಕೃತಿಯ ಉದ್ದೇಶ, ಆದರ್ಶಗಳೆಂದರೆ, ಭೂಮಿಗೂ ಸ್ವರ್ಗಕ್ಕೂ ತಳಕುಹಾಕಲು ಹೊರಟಂತಹವು; ವ್ಯವಹಾರ-ಪರಮಾರ್ಥಗಳ ಸಾಮರಸ್ಯವನ್ನು ಸಾಧಿಸಲು ನಿಂತಂತಹವು. ಎಲ್ಲರೂ ಈ 'ಸಂವಾದಮಾಲೆ' ಯನ್ನು ಓದಬೇಕು, ಮನನಮಾಡಿಕೊಳ್ಳಬೇಕು. ಇದರಿಂದ ಜಾಳದಾರಿಯಲ್ಲಿ ಆಗಾಗ ಬೆಳಕು ದೊರೆಯುವುದರಲ್ಲಿ ಸಂದೇಹವಿಲ್ಲ.

—ಬಿ. ಪಿ. ಎಸ್. ರಾವ್.

೭೧. ಕೆಲವು ಚಿತ್ರಗಳು

ಬರೆದವರು: ಶ್ರೀಮಾನ್ ವಿ.ಜಿ. ಶಾನಭಾಗ, ಕುಮಟಾ. ಪ್ರಗತಿ ಪುಸ್ತಕ ೧. ಬೆಲೆ ೬ ಆಣೆ.

ಇದು ಒಂಬತ್ತು ಚಿಕ್ಕ ಕತೆಗಳ ಸಂಗ್ರಹ. ಸಂಪಾದಕರು ತಮ್ಮ ಮಾತಿನಲ್ಲಿ ಈ ಕತೆಗಳ ವಿಚಾರವಾಗಿ ಹೀಗೆ ಹೇಳಿರುವರು:

"ಈ ಕತೆಗಳಲ್ಲಿ ಹೆಚ್ಚಾಗಿ ಹಳ್ಳಿಯ ಜನರ ಜೀವನದ ಚಿತ್ರಗಳೇ ಇವೆ. ಮಧ್ಯಮವರ್ಗದವರ ಬಾಳಿನ ಚಿತ್ರಗಳೂ ಕೆಲವಿವೆ. ನಮ್ಮ ದೇಶದ ಈ ಕಾಲದ ಜೊಡಕುಗಳಂದರೆ ವಿಶೇಷವಾಗಿ ಹಳ್ಳಿಗರ ತೊಡಕುಗಳು. ಅವನ್ನು ಬಗೆಹರಿಸಬೇಕಾದರೆ ಹಳ್ಳಿಗರ ಜೀವನವನ್ನು ಸಾಂಗವಾಗಿ ಅರಿತುಕೊಳ್ಳಬೇಕು. ಅವರ ಸುಖ-ದುಃಖ ರೀತಿ-ನೀತಿಗಳನ್ನು ತಿಳಕೊಳ್ಳಬೇಕು. ಕತೆಗಾರರು ಒಕ್ಕಣಿಸಿದ ಪಾತ್ರಗಳನ್ನೂ ಘಟನೆಗಳನ್ನೂ ನಮ್ಮ ಉತ್ತರ ಕನ್ನಡದ ಹಳ್ಳಿಗಳಲ್ಲಿ ಎಲ್ಲೆಲ್ಲಿಯೂ ಕಾಣಬಹುದಾಗಿದೆ....."

(ಳಿಯನೆಯ ಪುಟದಡಿಯಲ್ಲಿ)

ಸಾದರ ಸ್ವೀಕಾರ

೫೮. **ಕಾಮನ ಸೋಲು** (ಹನ್ನೆರಡು ಸ್ವತಂತ್ರ ಸಣ್ಣ ಕಥೆಗಳು) ಬರೆದವರು ಶ್ರೀಮಾನ್ ಅ. ನ. ಕೃಷ್ಣರಾಯರು. ಇವರ ಸಂಚಾಲಕತ್ವದಲ್ಲಿಯೆ ಬೆಂಗಳೂರಲ್ಲಿ ಹೊಸತಾಗಿ ಹೊರಟಿರುವ ವಸಂತ ಗ್ರಂಥಮಾಲೆಯ ೧ ನೆಯ ಪ್ರಕಟನೆ. ಉತ್ತರಕರ್ನಾಟಕದಲ್ಲಿ ಮಾರಾಟದ ಪುಕ್ಕನ್ನು ಪಡೆದವರು ಶ್ರಿ. ಶೇ. ಗೋ. ಕುಲಕರ್ಣಿ, ಸಾಧನ ಪ್ರೆಸ್ ಧಾರವಾಡ ಇವರು. ಕ್ರೌ. ಅ. ೧೪೦ ಪುಟಗಳು, ಬೆಲೆ ೧-೦-೦.

೫೦. **ಗುಲಾಮು ಈಸಪ್.** ಕ್ರೌ. ಚಿ. ೨೦ ಪುಟ. ಬೆಲೆ ೦-೨-೦.

೬೦. **ದರ್ಜಿ ರಾಣೋಜಿ.** ಕ್ರೌ. ಅ. ೧೬ ಪುಟ. ಬೆಲೆ ೦-೨-೦.

೬೧. **ಜಾಣಮೇಕೆ.** ರೊ. ಅ. ಗಿಣ್ಣಿ ೨೧೬ ಪುಟ. ಬೆಲೆ ೦-೧-೦.

೬೨. **ಮಾತುಗನಿಗಿಂತ ಮಾಡುವವ ಮೇಲು !** ರೊ. ನ್ಯೂಸ್ ೧೪ ಪುಟ. ಬೆಲೆ ೦-೧-೦.

೬೩. **ಕೈಕೆಸರಾದರೆ ಬಾಯಿ ಮೊಸರು.** ರೊ. ನ್ಯೂಸ್ ೧೬ ಪುಟ. ಬೆಲೆ. ೦-೧-೦.

೬೪. **ಮಿಂಚು-ಮುತ್ತು.** (ರಾಮುಲನ ಮೊಲಗಳು). ರೊ. ನ್ಯೂಸ್ ೨೦ ಪುಟ. ಬೆಲೆ ೦-೨-೦.

ಮೇಲಿನ ೫೯ ರಿಂದ ೬೪ರ ವರೆಗಿನ ಆರು ಪುಟ್ಟ ಮಕ್ಕಳ ಕಥೆಗಳನ್ನು, ಬೆಂಗಳೂರಿನ ಪಿ. ಟಿ. ಏ. ಬುಕ್ ಡಿಪೊ ಎಂಬ ಹೆಸರಿನ ಪ್ರಸಿದ್ಧ ಗ್ರಂಥಪ್ರಕಾಶನ ಸಂಸ್ಥೆಯವರು ಪ್ರಕಟಿಸಿ, ನಮ್ಮ ನೋಟಕ್ಕಾಗಿ ಕಳುಹಿರುವರು. ಮುಖಚಿತ್ರ, ಸಂದರ್ಭಚಿತ್ರ, ಮುದ್ರಣ ಎಲ್ಲವೂ ತುಂಬ ಆಕರ್ಷಕವಾಗಿವೆ. ಭಾಷೆ ಮಾತ್ರ ಕೇವಲ ಇಂಗ್ಲಿಷ್ ಭಾಷಾಂತರವಿದೆಯಲ್ಲದೆ ಕನ್ನಡವಾಗಿ ಇಲ್ಲ. ಕತೆಗಳು ಪುಟ್ಟ ಮಕ್ಕಳಿಗಾಗಿ ಇದ್ದರೂ ಭಾಷೆಯ ರೀತಿ ಮಕ್ಕಳಿಗಾಗಿ ಇದ್ದಂತಿಲ್ಲ. ಮಕ್ಕಳ ವಾಙ್ಮಯ ನಿರ್ಮಿತಿಗಾಗಿ ಪಿ. ಟಿ. ಏ. ಬುಕ್ ಡಿಪೋನವರು ಮಾಡುತ್ತಿರುವ ಪ್ರಯತ್ನ ಪ್ರಶಂಸನೀಯ. ಪ್ರಕಟನೆಗಳ ಬಹಿರಂಗ ಸೌಂದರ್ಯಕ್ಕೆ ಅನುಗುಣವಾಗಿ ಅಂತರಂಗ ಸೌಂದರ್ಯವೂ ಇದ್ದು ಬಿಟ್ಟರೆ ಕನ್ನಡಿಗರೆಲ್ಲರ ಮನೆಮನೆಗಳಲ್ಲಿಯೂ ಇವರ ಗ್ರಂಥಗಳು ನಲಿದಾಡುವುವೆಂದು ನಮ್ಮ ನಂಬುಗೆ.

೬೫. **ಕುಡಿ.** (೪ ಸಣ್ಣಕತೆಗಳು). ಬರೆದವರು 'ಕಿಳಿಯರು,' ಪ್ರಕಾಶಕರು ಹುಬ್ಬಳ್ಳಿಯ ಕನ್ನಡ ಬಾಲಸಾಹಿತ್ಯ ಮಂಡಲಿಯವರು. ಕ್ರೌ. ಅ. ೧೬ ಪುಟಗಳು. ಬೆಲೆ ೦-೩-೦.

ನಾಡಿನ ಹಿರಿಯರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಈ ಚಿಕ್ಕ ಹೊತ್ತಗೆಗೆ ಮುನ್ನುಡಿ ಬರೆದು ಕಿರಿಯರನ್ನು ಹರಸಿದ್ದಾರೆ. ಶ್ರೀ. ಸೊರಟೂರು ರಾಮಚಂದ್ರರು ಬರೆದ 'ಯಾವುದು ಹೊಣೆ' ಎಂಬ ವಿಷಮವಿವಾಹಸನ್ನಿವೇಶ ಪ್ರಧಾನವಾದ ಕಿರುಗತೆಯೂ, ಶ್ರೀ. ರಾ. ಕೃ. ಕಲಬುರ್ಗಿ ಎಂಬವರು ಬರೆದ 'ತಾಯ್ಗರುಳು' ಎಂಬ— ಮಗುವನ್ನು ಕಳೆದುಕೊಂಡ— ವಿಧವೆ ತಾಯಿಯ ದುಃಖಾಂತ ಜೀವನದ ಚಿತ್ರವೂ, ಶ್ರೀ. ರಾ. ಪಾ. ಶಿರೋಳ ಎಂಬವರು ಬರೆದ 'ಹಾಲಿನ ಮಡುಗಿ' ಎಂಬ ಹೆಸರಿನ ಗಂಡ-ಹೆಂಡಿರಲ್ಲಿಯ ಹೆಂಡತಿಯ ಸಂಕೇಪ ಹೃದಯದ ಕೈಯಾಟವೂ, ಶ್ರೀ. ರಾ. ನ. ಬಾಗಲ ಎಂಬವರು ಬರೆದ 'ಸರೋಜ' ಎಂಬ ವಸ್ತು ಜನುತ್ಕೃತಿಯಿಂದ ಕೂಡಿದ ಕತೆಯೂ ಇದರಲ್ಲಿ ಪ್ರಕಟವಾಗಿವೆ. ಕಿರಿಯರ ಈ ಕೃತಿಗಳು ಅವರ ಶುಭ್ರಭವಿಷ್ಯವನ್ನು ಸೂಚಿಸುವಂತಿರುವಾಗಿವೆ. ಪ್ರಯತ್ನ ಮುಂದುವರಿಯಲಿ, ಯಶಸ್ಸು ಹೊರೆಯಲಿ !

೬೬. **ವಚನ ಧರ್ಮಸಾರ** (ವಚನ ಸಾಹಿತ್ಯದ ವಿವೇಚನೆ-ವಿಮರ್ಶೆ). ಬರೆದವರು ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ ೧೯. ಕ್ರೌ. ಅ. ೩೦೦ ಕಿಂತ ಹೆಚ್ಚಿಗೆ ಪುಟಗಳು. ಬೆಲೆ ೦-೧೨-೦.

೬೭. **Bombay Market** (ಮುಂಬಯಿ ಪೇಟೆಯ ದರಗಳ ವಾರ ಪತ್ರಿಕೆ). ಪ್ರಕಾಶಕರು ಆರ್. ಎಸ್. ಅಗರ್‌ವಾಲಾ, ೨೧ ದಾದೀಶೇಕ್ ಅಗರೀ ಸ್ಟ್ರೀಟ್, ಕಾಳಬಾದೇವಿ ರೋಡ್, ಮುಂಬಯಿ. ಫೂಲ್‌ಸ್ಕ್ಯಾಪ್ ಅರ್ಧ ಪಾಳೆಯುಳತೆಯ ೧೬ ಪುಟಗಳು. ವಾರ್ಷಿಕ ಚಂದಾ ೬೪ ರೂ. ಗಳು. ಬಿಡಿಸಂಚಿಕೆಗೆ ೦-೪-೦.

(೪೦ನೆಯ ಪುಟದಿಂದ ಮುಂದುವರಿದುದು.)

ಸಂಪಾದಕರ ಮೇಳಿಕೆಯಂತೆ ಪ್ರತಿಯೊಂದು ಕತೆಗೆ ಪಸ್ತುವನ್ನು, ಉತ್ತರ ಕನ್ನಡ ಜಿಲ್ಲೆಯ ಜನಸಾಮಾನ್ಯರ ಜೀವನದಿಂದಲೆ ಆಯ್ದುಕೊಂಡಿದ್ದಾರೆ ಲೇಖಕರು. ಭಾಷೆ ಕೂಡ ಉ. ಕ. ಜಿಲ್ಲೆಯ ಜಾನಪದ ಭಾಷೆಗೆ ಸ್ವಲ್ಪ ಸಂಸ್ಕಾರಕೊಟ್ಟುದಾಗಿದೆ. ಲೇಖಕರು ಕತೆಹೇಳಲಿಕ್ಕೆ ಹೆಚ್ಚು ಮಾತುಗಳನ್ನು ಒಳಸುವವರಲ್ಲ. ಸ್ವಲ್ಪ ಮಾತುಗಳಲ್ಲಿಯೆ ಪಾತ್ರಗಳ ಸ್ವಭಾವಗಳನ್ನೂ ವಸ್ತುಗಳನ್ನೂ ಚೆನ್ನಾಗಿ ಪರಿಪೋಷಿಸಬಲ್ಲರು. ಕತೆಗಾರರು ಹೊಸಬರಾಗಿ ಮುಂದೆಬಂದಿದ್ದರೂ, ಹೊಸ ಒರತ್ನೆಲ್ಲ ಏಕಾನಿಸುವಂತಹ ಔಚಿತ್ಯ, ಸಾಕ ಮುಂತಾದುವುಗಳು ಇವರ ಕತೆಗಾರಿಕೆಯಲ್ಲಿ ಕಾಣಲು ಸಿಕ್ಕುವುವು. ಪಾನವರ ಮನಸ್ಸನ್ನು ಹಿಂಜಿ ತೋರಿಸಬಲ್ಲ ಶ್ರೀಯುತ ಜಾನಭಾಗರ ಶಕ್ತಿ ಬಳೆಯುತ್ತ ಹೋದರೆ, ಕನ್ನಡ ಕಥಾಪ್ರಪಂಚದಲ್ಲಿ ಇವರು ಒಳ್ಳೆಯ ಹೆಸರನ್ನು ಪಡೆಯಬಹುದಾಗಿದೆ. ಶ್ರೀ. ಜಾನಭಾಗರ ಲೇಖನೋತ್ಸಾಹವೂ ಪ್ರಗತಿಪುಸ್ತಕವಾಲಿಯೂ ನಿತ್ಯನೂತನವಾಗಿ ಬೆಳೆಯುತ್ತಿರಲಿ ! —ಕುಂಜವಿಹಾರಿ

ನಗೀಗೆ ನೇವಿದ್ಯ

ಡಾಕ್ಟರರ ಕಟ್ಟಿಪ್ಪಣೆ

"ಏನು ರಾಯರಕ, ಪ್ರಕೃತಿ ಎಲ್ಲಾ ನೆಟ್ಟಗೆ ಆಧ್ವಾಂಗ ಕಾಣಿಸತ್ತದೆ; ಇನ್ನೂ ಬಿದ್ದುಕೊಂಡೇ ಇದ್ದೀರಲ್ಲಾ. . ಹಾಂಗಸ?"

"ಹೌದರೀ, ಹೀಂಗಸ ಬಿದ್ದುಕೊಂಡೇ ಇರೂದಂದರ ನನಗೂ ಬ್ಯಾಸರಿಕೆ ಬಂದಽದ ಏನ್ರೆಪಾ! ಆದರೆ ಮಾಡೂದೇನು? 'ನಾನು ಒಸ್ಸಿಗೀ ಕೊಡುತನಕಾ ಔಷಧ ನಿಲ್ಲೆಸೋ ಹಾಂಗಿಲ್ಲಾ. . ಹಾಸಿಗೀ ಬಿಟ್ಟು ಏಳೋ ಹಾಂಗಿಲ್ಲಾ' ಅಂತ ಡಾಕ್ಟರು ಕಟ್ಟಿಪ್ಪಣಿ ಮಾಡಿ ಬಿಟ್ಟಾರ ಕೀರೇಕ? ಡಾಕ್ಟರರ ಮಾತು ವಿಚಾರೂದು ಹ್ಯಾಂಗ. . ಹೇಳ್ರಿ ನೀವೇ?"

'ಆದೇನೋ ಸರಿಯಾಯ್ತುರೀ! ಈಗ ನೀವೇ ಡಾಕ್ಟರರಿಗೆ ಹೇಳಬೇಕು: ನನಗೀಗ ನೆಟ್ಟಗಾಗೇದ, ಬಿದ್ದಲ್ಲೇ ಬಿದ್ದು ಕೊಂಡಿರೂದು ಬ್ಯಾಸರಿಕೆ ಬಂದಽದ.... ಅಂತ!"

"ಹೇಳಬೇಕಂತ ಮಾಡಿದೀನ್ರೀ ನಾನೂ! ಆದರ ನಮ್ಮ ಡಾಕ್ಟರೇನೋ ಯುದ್ಧದ ನೌಕರೀಹಿಡಿದು ಪರದೇಶಕ್ಕ ಹೋಗ್ಯಾರಂತ! ಬರೂತನಕಾ ನಾನೇನು ಮಾಡಬೇಕು ಹೇಳ್ರಿ! ಎಲ್ಲಾ ನಿರುಪಾಯದ ಮಾತು ಆಗೇದ!"

* * *

ಹೆಸರಿಗೆ ತಕ್ಕ ಕಾರಣ

ಯಜಮಾನ:— ಏ ವಿಠೋಬಾ, ಬಾರೋ ಇಲ್ಲಿ ಸ್ವಲ್ಪ!

ಸೇವಕ:— ನನ್ನ ಹೆಸರು ವಿಠೋಬಾ ಅಲ್ಲ ರಾಯರಕ, ಪಣಮಂತಾ ಅಂತ!

ಯಜಮಾನ:— ಹೀಂಗೇನು? ಟೊಂಕದಮ್ಯಾಲ ಎರಡೂ ಕೈ ಇರಿಸಿಕೊಂಡು, ಸುಮ್ಮನೇ ನಿಂತಲ್ಲೇ ನಿಂತುಕೊಂಡಿರತೀ ಯಾವಾಗಲೂ! ಆದಕ್ಕಽ ನನಗ ಅನಿಸಿತು; ನಿನ್ನ ಹೆಸರು 'ವಿಠೋಬಾ' ಇರಬಹುದೂ ಅಂತ!

* * *

ಮೂರ್ತಿಯ ಕಾಗದ

ಡಾಕ್ಟರ್:— ರತ್ನಾ, ಮಗೂ ರತ್ನಾ! ಪೊದಲು ಹೋಗು, ನನ್ನ ಔಷಧದ ಬ್ಯಾಗ್ ತಂದುಕೊಡು ಬೇಗನೆ!

ಮಗಳು:— ತಂದುಕೊಡತೀನಿ, ಆದರ ಇಷ್ಟೊಂದು ಗಡಬಡಿಯ ಪ್ರಸಂಗ ಏನದೆ ಈಗ ಅಪ್ಪಾ!

ಡಾಕ್ಟರ್:— 'ಬೇಗನೆ ಬರಬೇಕು, ನನ್ನ' ಜೀವ ಒಂದೇ ಸವನೆ ತಳಮಳಗೊಳ್ಳುತ್ತಲಿದೆ ಎಂದು ಗೋಪಾಲಮೂರ್ತಿಯ ಕಾಗದ ಬಂದಽದ. ಅವರ ಸ್ವಂತ ಅಳೀ ತೆಗೆದುಕೊಂಡು ಬಂದಾನೆ.

ಮಗಳು: — ಕಾಗದದ ಮೇಲಿನ ವಿಳಾಸ ನೋಡಿದಿರೇನು? ಆ ಕಾಗದ ನಿಮಗೆ ಬಂದ ದ್ದಿರಲಿಕ್ಕಿಲ್ಲ, ನನಗಾಗಿ ಬಂದಿರಬೇಕು!

* * *

ಹೆಂಡತಿಯ ಹಿತಚಿಂತನೆ

"ನೋಡಿದೆಯಾ, ಈ ಪ್ರಸಿದ್ಧ ಆತೋಗ್ಯ ವಿಜ್ಞಾನಿ ತನ್ನ ಗ್ರಂಥದಲ್ಲಿ ಏನು ಬರೆದಿದ್ದಾನೆ: 'ಹೆಂಗುಸರಿಗೆ ಗಂಡುಸರಿಗಿಂತ ನಿದ್ದೆಯ ಆವಶ್ಯಕತೆ ಹೆಚ್ಚಾಗಿರುತ್ತದೆ. ಆದುದರಿಂದ ಅವರು ತುಂಬ ನಿದ್ದೆಯನ್ನು ಮಾಡುತ್ತಿರಬೇಕು,' ತಿಳಿಯಿತೇನು?"

"ಹೌದು, ಬರೆದಿದ್ದಾನೆ, ಸರಿ!"

"ಸರಿಯೇನು ಸರಿ! ಆದಕ್ಕಿಂತಲೇ ದಿನಾ ನಿನಗ ನಾ ಹೇಳತಿರೂದು: ನಾನು ಹೊರಗಿಂದಽ ಯಾವಾಗ ಬರತೀನೋ ಅಂತ ಹಾದೀ ನೋಡತಽ ಕೂಡೋದನ್ನ ಇಂದಿನಿಂದಽ ಬಿಟ್ಟುಬಿಡು! ಒಂಬತ್ತರ ಗಂಟ ಆಯ್ತೋ, ಮುಸುಕು ಹಾಕಿ ಮಲಗಿ, ಚೆನ್ನಾಗಿ ನಿದ್ದೆ ಮಾಡುತ್ತಿರು!"

* * *

ಚಹಾ ಆಗೇದ!

"ರಂಗಮ್ಮಾ, ಯಾಕ, ಚಹಾದ್ದು ಏನಾಯಿತು?"

"ಚಹಾ ಆಗೇದ ಬಾಯವರಽ!"

"ಆಗಿದ್ದರ ತೊಗೊಂಡು ಬನ್ರೆಲಾ ಲಗೂನಽ! ಸುಮ್ಮನ ತಡಾ ಯಾಕ ಮಾಡತೀರಿ?"

"ನಾ ಏನು ಹೇಳಿದೆ ಗೊತ್ತಾಗಲಿಲ್ಲ ಕಾಣಿಸತಽದ ತಮಗ! ಚಹಾ ಆಗೇದ; ತಾ ಅಂತ ಬರೇ ಹೇಳಿದರ ಎಲ್ಲಿಂದ ತರಬೇಕು ನಾನು?"

* * *

ಮನುಷ್ಯರ ಪರೀಕ್ಷೆ

"ನಾನು ತೀರಾ ಎರಡನೇ ಜೀವಾ ಅಂತ ಅಂಬೂ ಭಾವನೆಯಿಂದ ಸುಂದರಾನ್ನ ಪ್ರೀತಿಸತಿದ್ದೆ. ಆದರೆ ಕೊನೆಗೂ ಆಕಿ ರಂಗರಾಯನ ಜೊತೆಯನ್ನೇ ಒಪ್ಪಿ, ನನ್ನನ್ನು ಮೂರ್ಖನನ್ನಾಗಿ ಮಾಡಿದಳು!"

"ನೋಡು, ಗಂಡಸರಿಗೆ ಮನುಷ್ಯರ ಪರೀಕ್ಷಾ ಏನೇನೂ ಇರೂದಿಲ್ಲ. ಹೆಂಗಸರಲ್ಲಿ ಅದು ಚೆನ್ನಾಗಿ ಇರುತ್ತದೆ. ಯಾರನ್ನಾದರೂ ಅವರು ಪರೀಕ್ಷಿಸಿದರೆ ಒಮ್ಮೆಲ್ಲೆ ಅವರ ಗುಣದ ಗುಂಜಿ-ಮಾಸಿಯ ಲೆಕ್ಕಕೂಡ ಕಂಡು ಹಿಡಿಯುತ್ತಾರೆ!"

* * *

ದೇವರನ್ನು ನೋಡಬೇಕಾಗೇದ!

"ಗುಂಡಾ, ನೋಪು, ದೇವರು ನಿನಗ ಪುಟ್ಟ ತಮ್ಮನ್ನ ಕೊಟ್ಯಾನ! ಎಷ್ಟು ಮುದ್ದು ಮುದ್ದಾಗಿ ಇದ್ದಾನ ನೋಡು, ನಿಪ್ಪ ತಮ್ಮ!'

"ಉಹುಂ, ನನಗ ತಮ್ಮನ್ನ ಕೊಟ್ಟಿದ್ದಾನಲ್ಲಾ, ಆ ದೇವರನ್ನ ನೋಡಬೇಕಾಗೇದ ಮೊದಲು ನಾನು!"

* * *

ರೂಪಾಯ ???

(ಒಂದು ವಾಸ್ತವಚಿತ್ರ)

ಶೀ. ಧ್ರುವ ಭೀಮರಾವ ಟಂಕಸಾಲಿ,
B. A. LL. B. ಮುಧೋಳ

★

ಹಳ್ಳಿಯಿಂದ ಲಿಂಗಪ್ಪ, × × ಊರ ಸಂತೆಗೆ ಜೋಳಕ್ಕಾಗಿ ಬಂದಿದ್ದ. ಮಧ್ಯಾಹ್ನದಿಂದಲೂ ಸರಕಾರದ ಅಂಗಡಿಯ ಮುಂದೆ ತನ್ನ ಸರತಿಯ ದಾರಿಕಾಯುತ್ತ ನಿಂತಿದ್ದ. ಇರುವೆಯ ಗುಂಪಿನಂತೆ ಅಲ್ಲಿ ಜನರು ಮುಕುರಿದ್ದರು. ಮೇಲಿಂದ ಮೇಲೆ ಸಿಪಾಯಿಯರ ಬಡಿಗೆ-ಬಾರಕೋಲಿನ ಪ್ರಸಾದ ಎಲ್ಲರಿಗೂ ದೊರೆಯುತ್ತಿತ್ತು. ಬರಿಯ ಹೊಟ್ಟೆಗಳ ಶಾಪ- ಆಕ್ರೋಶ-ತಳಮಳಾಟಗಳಿಂದ ಆ ವಾತಾವರಣ ಬಿಸಿಬಿಸಿಯಾಗಿತ್ತು. ಕೊನೆಗೊಮ್ಮೆ ಸಂಜೆಯ ಆರುಗಂಟೆಗೆ ಲಿಂಗಪ್ಪನಿಗೆ ಎರಡು ರೂಪಾಯಿಗಳ ಜೋಳ ದೊರೆಯಿತು.

ಲಿಂಗಪ್ಪ ಭರಭರನೆ ಗಂಟುಕಟ್ಟಿಕೊಂಡು, ಇನ್ನು ತನ್ನ ಊರಿಗೆ ಹೊರಡುವುದರಲ್ಲಿ ಇದ್ದನು. ಅಷ್ಟರಲ್ಲಿಯೆ ಎಂಟೊಂಬತ್ತು ಜನರು ಆತನ ಹಳ್ಳಿಯವರು ಅಲ್ಲಿಗೆ ಬಂದರು. ಅವರಲ್ಲಿಯವನೊಬ್ಬನು ಲಿಂಗಪ್ಪನನ್ನು ಕೇಳಿದ ;

" ಏನ್ ಲಿಂಗಾ, ಈಗ ಊರಿಗೆ ಹೊರಟೀನು ? "

" ಹೌದಪಾ, ಮತ್ತೇನ್ ಮಾಡೂದು ? "

" ಎಲಾ, ಏನು ತಲೀಗಲೀ ತಿರಗೈತೇನು ನಿಂದು ? ಈಗ ಹೊಂಟುಬಿಟ್ಟು, ಗುಡ್ಡದ ವಾರ್ಯಾಗ ತುಡುಗರ ಕಡಿಂದ ಯೊಡತಾ ತಿಂದು, ಅವೀಸು ಜ್ವಾಳಾ ಅವರ ಮುಂದ ಸುರುವಿ, ಊರಿಗೆ ಹೋಗೂದೈತೀನು ನಿನಗ ? ಬಿಡೋ ಮಳ್ಳಕ ! ನಾಳೆ ಬೊಂತೂಪ್ಲೆ ಹೋಗೂಣು, ಎಲ್ಲಾರೂ ಕೂಡೇ ! "

ತತ್‌ಕ್ಷಣವೇ ವಿದ್ಯುದ್ದೀಪದ ಸ್ವಿಚ್ ಒತ್ತಿದಂತೆ, ಹಸಿವೆಯಿಂದ ಮುಖಜಾಡಿದ ಹೆಂಡತಿಯ, ನಿತ್ರಾಣಳಾದ ತಾಯಿಯ—ಮನೆಯಲ್ಲಿಯ—ಚಿತ್ರ ಲಿಂಗಪ್ಪನ ಕಣ್ಮುಂದೆ ಕಟ್ಟಿತು.

" ಛೇ ! ನನಗ ಈಗ ಹೋಗಲಾಕs ಬೇಕಪಾ ! " ಎಂದು ಲಿಂಗಪ್ಪ ಊರ ಹಾದಿಯನ್ನು ಹಿಡಿದನು.

ಗುಡ್ಡದ ಹತ್ತಿರ ಬಂದ ಕೂಡಲೆ ಲಿಂಗಪ್ಪನ ಕೈಕಾಲು ತಣ್ಣಗೆ ಆಗತೊಡಗಿದುವು. ಅಂಗಾಲಿಗೆ ಬೆವರು ಬಿಡಹತ್ತಿತು. ಬಾಯಿ ಒಣಗಲಾರಂಭಿಸಿತು. ಇಷ್ಟರಲ್ಲಿಯೆ "ಏsss! ಯಾರಲೆ, ನಿಂದ್ರು ! ಹೆಜ್ಜೀ ಮುಂದ ಕಿತ್ತಿ ಇಟ್ಟೀಂದ್ರು ನೋಡ್ನಿನ್ನ! " ಎಂದು ಕತ್ತಲೆಯೊಳಗಿಂದ ಕೂಗು ಬಂತು. ಒಮ್ಮೆಲೆ ಕಲ್ಲಿನಂತೆ ನಿಶ್ಚಲನಾಗಿ ನಿಂತಲ್ಲಿಯೇ ನಿಂತ ಲಿಂಗಪ್ಪನಿಗೆ, ಸುತ್ತಲಿನ ಆವರಿವು ಆಗುವುದರೊಳಗಾಗಿಯೆ, ಕೊಡಲಿ-ಬಡಿಗೆಗಳಿಂದ ಸನ್ನದ್ಧರಾದ ಎಂಟ್ಹತ್ತು ಜನರು ಆತನನ್ನು ಮುತ್ತಿದರು. ಅವರಲ್ಲಿಯವನೊಬ್ಬನು " ಏ, ಏನಲೇ ಅದು, ಗಂಟಿನ್ಯಾಗಿಂದು ? " ಎಂದು ಅಧಿಕಾರವಾಣಿಯಿಂದ ಪ್ರಶ್ನಿಸಿದನು.

" ಎನಿಲ್ರೋಽಪಾ, ಬಡವ ಅದೀನು ! ಎರಡುರುಪಾಯಿಗಾ ಜೋಳಾ ಸಂತ್ಯಾಗ ತೊಗೊಂಡು ಮನೀಗೆ ಹೊಂಟಿದೀನು ! "

" ನೀ ಎಂತಾ ಬಡವಲೇ, ಎರಡು ರುಪಾಯೀ ಜ್ವಾಳಾ ಬದೀಲೆ ಇಟಗೊಂಡು ? ಅಟ್ಟ ಇದ್ದರ ನಾವ್ಯಾಕ ತುಡುಗು ಮಾಡ್ತಿದ್ದೆವಲೇ ? "

" ನಾ ಬಡವ ಇದ್ದೀನ್ರೋಽಪಾ ! ಬರಗಾಲ ಧಾವಣಿಗೆ ಹೋಗಿದ್ದೆ. ಇಟ್ಟದಿನಾ ಕೂಲಿ ಒಂದಿದ್ದಿಲ್ಲ....ಎಡ್ಡವಾರ ಆತು, ಅರಹೊಟ್ಟೇ ತಗ್ದೀನು ! ಇಂದs ಹಿಂದಿನ ಪಗಾರ ಕೂಡಿ ಎಷ್ಟುರುಪಾಯಿ ಬಂತು. ಮತ್ತ ದಾವತಿ ಹತ್ತು ವತನ ಕಾ ಈಸ ಜ್ವಾಳದ ಮ್ಯಾಗ ಮೂರು ಜೀವ ಬದಕೂದೈತಿ ! ನಿಮ್ಮ ಕಾಲಿಗೆ ಬೀಳ್ತೀನ್ರೋಽಪಾ ! ಬಡವನ ಹೊಟ್ಟೇ ನೋಡ್ರಿ....." ಎಂದು ತಲೆಯಮೇಲಿನ ಗಂಟನ್ನು ನೆಲಕ್ಕೆ ಒಗೆದು, ಸಾಷ್ಟಾಂಗ ನಮಸ್ಕಾರ ಹಾಕಿ, ಅಂಗಲಾಚ್ಚು ಅವರಿಗೆ ಬೇಡಿಕೊಂಡ ಲಿಂಗಪ್ಪ.

ಕಳ್ಳರ ನಾಯಕನು ಲಿಂಗನನ್ನು ಕೆಲವು ನಿಮಿಷ ದಿಟ್ಟಿಸಿ ನೋಡಿ"ಏ, ಎಳಲೇ! ಇಕಾ ತೊಗೋ ನಿನ್ನ ಎರಡು ರೂಪಾಯಿ!" ಎಂದು ಲಿಂಗನ ಮೈಮೇಲೆ ಎರಡು ರೂಪಾಯಿಗಳನ್ನು ಬೀಸಾಡಿ " ಎತ್ರಲೇ ಆ ಗಂಟನ್ನ ! " ಎಂದು ತನ್ನ ಅನುಯಾಯಿಗಳಿಗೆ ಆಜ್ಞಾಪಿಸಿದನು. ನೋಡುನೋಡುವುದರಲ್ಲಿಯೆ ಜೋಳದ ಗಂಟನ್ನು ತಕ್ಕೊಂಡು, ಅವರೆಲ್ಲರೂ ಬಂದ ಹಾದಿಯಿಂದ ಹೊರಟು ಹೋದರು.

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು—'ಆನಂದಕಂದ'

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿವ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳೆವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನವ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನವನ್ನು ಪಡೆಮು ನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.



ಭಾರತಭಾಗ್ಯೋದಯ ಭನಸಾಲಿಯವರು

ಕಳೆದ ತಿಂಗಳು ಜರುಗಿದ ಅತ್ಯಂತ ಮಹತ್ವದ ರಾಜಕೀಯ ಘಟನೆ ಎಂದರೆ ಪ್ರೊ. ಭನಸಾಲಿಯವರು ಉಪವಾಸವನ್ನು ನಿಲ್ಲಿಸಿದರೆಂಬ ಸಮಾಚಾರಸಂಭ್ರಮ. ೬೩ ದಿವಸಗಳ ವರೆಗೆ ನಡೆದ ಉಪವಾಸದಲ್ಲಿ ಪ್ರೊ. ಭನಸಾಲಿಯವರು, ಇಡಿಯ ಹಿಂದುಸ್ತಾನದ ಪ್ರತಿಯೊಂದು ಹೃದಯದಲ್ಲಿ ಒಂದಿಲ್ಲೊಂದು ರೂಪದಿಂದ ಮೂರ್ತಿಸಿದರು. ಅವರಲ್ಲಿ ಆತ್ಮಿಕಬಲ ಸಾಕಷ್ಟಿದೆ ಎಂಬ ಆತ್ಮವಿಶ್ವಾಸದಿಂದ, ರಾಜಕೀಯ ವಾತಾವರಣಕ್ಕನುಸರಿಸಿ, ಅವರ ಜೀವಿತದ ಬಗ್ಗೆ ನಿರಾಶೆಗೊಂಡುದರ ವರೆಗಿನ ಎಲ್ಲ ಭಾವನೆಗಳು ಜನತೆಯ ಹೃದಯಗಳನ್ನು ತರಂಗಿಸಿದುವು. ಪ್ರೊ. ಭನಸಾಲಿಯವರು ಹಿಂದುಸ್ತಾನದ ಸ್ವಾಭಿಮಾನದ, ಸ್ವಾತಂತ್ರ್ಯ-ಸಮರದ ಸಂಕೇತದಂತಾದರು. ಅವರ ಜೀವಿತವನ್ನು ಉಳಿಸಿಕೊಳ್ಳುವುದಲ್ಲದೆ, ದೇಶಗ್ದಾಗಲಿ ಜಗತ್ತಿನದಾಗಲಿ ಬೇರೆ ಯಾವ ಘಟನೆಯೂ ಭಾರತೀಯರಿಗೆ ಮಹತ್ವದ್ದೆನಿಸಲಿಲ್ಲ. ಇತ್ತಿತ್ತ-ಲಾಗಿ ಸುದ್ದಿನಿಯಂತ್ರಣವು ಬಿಗುವಾದಂತೆ ಭನಸಾಲಿಯವರ ಬಗ್ಗೆ ಆನಿಷ್ಟದ ಹಾರಿಕೆಗಳಿ ಹೆಚ್ಚಾಗತೊಡಗಿದುವು. ಹಾರಿಕೆಯ ಸುದ್ದಿಗಳಿಗೆ ಪುಟುಗೊಡುವುದು ಆರ್ಡಿನೆನ್ಸಿನ ಅಪರಾಧವೆನಿಸಿದ್ದರೂ ಈ ಸಂದರ್ಭದಲ್ಲಿ, ಸರಕಾರದ ಸುದ್ದಿನಿಯಂತ್ರಣವೆ ಹಾರಿಕೆಗಳಿಗೆ ಪುಟುಗೊಡುತ್ತಿರುವ ಅಪಹಾಸ್ಯ ಪರಿಸ್ಥಿತಿ ಪ್ರಾಪ್ತ-ವಾಯಿತು. ನಸುಕಿನ ಕತ್ತಲಂತೆ ನಂಬಿಕೆಯ ನಿರಾಶೆ ಮುಸುಕಿ-ದಾಗ, ಪ್ರೊಫೆಸರ್ ಭನಸಾಲಿಯವರು ಸಮಾಧಾನಕಾರಕವಾದ ಒಡಂಬಡಿಕೆಯಿಂದ ಉಪವಾಸವನ್ನು ನಿಲ್ಲಿಸಿದರೆಂಬ ಅಧಿಕೃತ ಸುದ್ದಿ, ಒಮ್ಮೆಲೆ ಸೂರ್ಯೋದಯದಂತೆ ಬೆಳಗಿ, ಇಡಿಯ ದೇಶಕ್ಕೆ ಉಲ್ಲಾಸವನ್ನುಂಟು ಮಾಡಿತು.

ಉಪವಾಸದ ಉದಾತ್ತ ವೈಶಿಷ್ಟ್ಯ

ಪ್ರೊ. ಭನಸಾಲಿಯವರ ಘಟನೆ ಅತ್ಯಂತ ಮಹತ್ವದ್ದು ಎಂದು ನಾವು ಹೇಳುವುದರಲ್ಲಿ ಅತಿಶಯೋಕ್ತಿ ಇಲ್ಲ; ಆ ಮಹತ್ವಕ್ಕೆ ಘಟನೆಯ ಒಂದು ವೈಶಿಷ್ಟ್ಯವೆ ಕಾರಣವಾಗಿದೆ. ಇಂದು ಜಗತ್ತಿನಲ್ಲಿ ಪ್ರಲಯಕಾಲದಂತಹ, ಸಾರ್ವಜನಿಕ (totalitarian) ವಾದಂತಹ ಯುದ್ಧ ನಡೆದಿದೆ. ಹದಿನೆಂಟು ಇಪ್ಪತ್ತು ವರ್ಷಗಳಿಗೆ ಮುಂಚೆ, ಇಂದಿನದಕ್ಕಿಂತ ತುಸು ಚಿಕ್ಕ ಮಾದರಿಯ ಪ್ರಲಯವಾದ ಯುದ್ಧವು ಯುರೋಪದಲ್ಲಿ ಜರುಗಿತು; ಇಂದಿನ ಯುದ್ಧವೂ—ಇಡಿಯ ಜಗತ್ತನ್ನು ವ್ಯಾಪಿಸಿದ್ದರೂ—ಯುರೋ-ಪದ ರಾಷ್ಟ್ರಗಳ ಜೀವನಶಾಸ್ತ್ರದಲ್ಲಿಯೆ ಪ್ರಾರಂಭವಾಗಿದೆ. ಸಂಸ್ಕೃತಿಯ ಮೆಟ್ಟಿಲನ್ನು ಮೇಲೇರಬೇಕಾದ ಮಾನವನಿಗೆ, ಸಾಮಾಜಿಕ ಸಂದು-ಗೊಂದುಗಳನ್ನೂ ಅನ್ಯಾಯ-ಅವಿಶ್ವಾಸ-ಗಳನ್ನೂ ಸರಿಪಡಿಸಿಕೊಳ್ಳಲು ಸರ್ವವಿನಾಶಕವಾದ ಯುದ್ಧಕ್ಕಿಂತ ಬೇರೊಂದು ಉಪಾಯವಿಲ್ಲವೆ? ಕಳೆದ ಅನೇಕ ವರ್ಷಗಳಿಂದ ಯಾವ ಸುಸಂಸ್ಕೃತ ರಾಷ್ಟ್ರವೂ ಈ ಪ್ರಶ್ನೆಗೆ ಸಮಾಧಾನಕಾರಕ-ವಾದ ಉತ್ತರವನ್ನು ಕೊಟ್ಟಿಲ್ಲ. ಇಂದು ಮಹಾತ್ಮಾ ಗಾಂಧಿ-ಯವರ ಪ್ರೇರಣೆಯಲ್ಲಿ ಭಾರತವು ಉತ್ತರವನ್ನು ಕೊಡುತ್ತಲಿದೆ. ಬುದ್ಧಿಯನ್ನು ಕ್ರೂರಗೊಳಿಸುವುದಕ್ಕಿಂತ ಹೃದಯವನ್ನು ವಿಶಾಲ-ಗೊಳಿಸುವುದೆ ಹಿತಕರ—ಎಂಬುದು ಆ ಉತ್ತರ. ಈ ದೃಷ್ಟಿಯನ್ನು ಬಿಟ್ಟರೆ ಭನಸಾಲಿಯವರ ಉಪವಾಸಕ್ಕೆ ಅರ್ಥವೆ ಆಗುವಂತಿಲ್ಲ. ಭನಸಾಲಿಯವರ ಹೃದಯವು ಅತ್ಯಂತ ವಿಶಾಲವಾಗಿದೆ; ಅಲ್ಲಿ 'ತಾನು' ಎಂಬ ಬೇರೆ ಅರಿವು ಇಲ್ಲ, ಅದಕಾಗಿ ಆತ್ಮಹತ್ಯೆಯ ಸೋಂಕು ಇಲ್ಲ; ಅದರಂತೆಯೆ 'ಅನ್ಯರು' ಎಂಬ ಭೇದವೂ ಇಲ್ಲ, ಅದಕಾಗಿ ಇದಿರಾಳಿಗಾಗಿ ದ್ವೇಷವಿಲ್ಲ. ವಿಶಾಲಗೊಳಿಸಿದ ಹೃದಯದಲ್ಲಿ ಇದಿರಾಳಿಗೂ ಸ್ಥಾನಮಾಡಿ ಕೊಡುವುದೇ ಇಂತಹ ತಪಸ್ಸಿನ ಉದ್ದೇಶ; ಅದಕಾಗಿ ಉಪವಾಸದ ಕೊನೆಗೆ ಜೀವ ಉಳಿವ-ಅಳಿವುದರ ಪರಿವೆ ಅವರಿಗಿಲ್ಲ. ಈ ಉದಾತ್ತ ತತ್ತ್ವವನ್ನು ಇಡಿಯ ಮಾನವ ಜನಾಂಗಕ್ಕೆಯೆ ತೋರಿಸಿಕೊಡುವುದೆಂದು ಈ ಉಪವಾಸವು ಅತ್ಯಂತ ಮಹತ್ವದ್ದೆಂದು ನಾವು ಹೇಳಿದ್ದೇವೆ.

ರಾಜಕೀಯ ತಾತ್ತ್ವಿಕ ಪ್ರಶ್ನೆ

ಪ್ರೊ. ಭನಸಾಲಿಯವರ ಉಪವಾಸವು ಒಂದು ರಾಜಕೀಯ ಘಟನೆ ಎಂದು ಹೇಳಲೂ ಕಾರಣವಿದೆ. 'ಚಿಮೂರಲ್ಲಿ ನಡೆದುದು ಅನ್ಯಾಯ, ಮಧ್ಯಪ್ರಾಂತ ಸರಕಾರದವರು ಆ ಸಂದರ್ಭದಲ್ಲಿ ಆಡಿದ ಮಾತುಗಳು ಭಾರತೀಯ ಸ್ತ್ರೀಜಾತಿಗೆ ಅನ್ಯಾಯ' ಎಂದು

ಅಭಿಪ್ರಾಯಪಟ್ಟು, ಆ ಬಗ್ಗೆ ವಿಚಾರಣೆಯು ಆಗಬೇಕೆಂದೂ ಶ್ರೀ. ಆಣೆಯವರು ಸ್ವತಃ ಚಿಮೂರಿಗೆ ಬಂದು ಪರಿಸ್ಥಿತಿಯನ್ನು ಸಂದರ್ಶಿಸಬೇಕೆಂದೂ ಪ್ರೊ. ಭನಸಾಲಿಯವರು ಇಚ್ಛಿಸಿದರು. ಅನ್ಯಾಯವೆನಿಸಿದಲ್ಲಿ ಸರಕಾರವು ವಿಚಾರಣೆಗೆ ಒಪ್ಪದಿದ್ದರೆ, ಪ್ರಜೆಗಳಿಗೆ ಸುರಕ್ಷಿತತೆ ದೊರೆವುದು ಹೇಗೆ? ಅದರಂತೆ ಸರಕಾರವೆ ಮುಂದಾಗಿ ಅಪಾವನೆಮಾಡಿ ಅದನ್ನು ಸಿದ್ಧಮಾಡಲು ನಿರಾಕರಿಸಿದರೆ, ಜನತೆಯು ಸ್ವಾಭಿಮಾನದಿಂದ ಬದುಕುವುದು ಹೇಗೆ? ಇಂತಹ ವಿಚಾರಗಳಿಗಾಗಿ ಸರಕಾರವ ಮನಸ್ಸನ್ನೇ.... ತಮಗೆ ತೋರಿದಂತೆ–ನ್ಯಾಯದ ಕಡೆಗೆ ಒಲಿಸಲು ಪ್ರೊ. ಭನಸಾಲಿಯವರು ನಿಶ್ಚೈಸಿದರು. ಕೊನೆಗೆ ಬೇರೆ ಉಪಾಯಗಳು ಫಲಿಸದಂತಾಗಲು ಉಪವಾಸವನ್ನು ಕೈಕೊಂಡರು. ಈ ಸಂದರ್ಭದಲ್ಲಿ ಮುಂಬೆ ಮತ್ತೊಂದು ಪ್ರಶ್ನೆ ಉದ್ಭವಿಸಿತು. ಈಗಾಗಲೆ ಬಿಗಿಯಾಗಿದ್ದ ಸುದ್ದಿನಿಯಂತ್ರಣವು ಸಾಲದೆಂಬಂತೆ,ಮಧ್ಯಪ್ರಾಂತ ಸರಕಾರದವರು ಪ್ರೊ. ಭನಸಾಲಿಯವರ ಬಗ್ಗೆ ಯಾವ ಸುದ್ದಿಯನ್ನೂ ಪ್ರಕಟಿಸ ಕೂಡದೆಂದು ಆಜ್ಞೆಯನ್ನು ಹೊರಡಿಸಿದರು. ಪತ್ರಿಕಾ ಸ್ವಾತಂತ್ರ್ಯದ ಮೂಲತತ್ತ್ವದ ಮೇಲೆಯೆ ಗದೆ ಬಿದ್ದಂತಾಯಿತು. ಇಷ್ಟೆ ಅಲ್ಲ, ಸುದ್ದಿಯನ್ನು ಕೊಡದೆ ಜನರನ್ನು ಹಾರಿಕೆಯ ಸುದ್ದಿಗಳಿಗಾಗಿ ಪ್ರೋತ್ಸಾಹಿಸಲು ಪತ್ರಿಕೆಗಳು ಹೊಣೆಗಾರಪೆನಿಸಿದುವು! ಇದರಲ್ಲಿ ಅಡಕವಾದ ತತ್ತ್ವಕ್ಕಾಗಿ ಅ. ಭಾ. ಪ. ಸ್ಥಾಯಿ ಸಮಿತಿಯು ಹೆಣಗಾಡಬೇಕಾಯಿತು. ಯಾವ ಪ್ರಯತ್ನಗಳಿಂದಲೂ ಲಾಭವಿಲ್ಲದಂತಾಗಲು ಸ್ಥಾಯಿಸಮಿತಿಯು, ಪತ್ರಿಕೆಗಳು ಒಂದು ದಿನದ ಹರತಾಳವನ್ನಾಚರಿಸಬೇಕೆಂದು ನಿರ್ಧರಿಸಿತು. ದೇಶದ ೧೫೦ ಪತ್ರಿಕೆಗಳಲ್ಲಿ ೧೧೦ ಪತ್ರಿಕೆಗಳು ಹರತಾಳವನ್ನಾಚರಿಸಿದುವು! ಈ ಪರಿಸ್ಥಿತಿಯಿಂದ ಅನೇಕ ಪತ್ರಿಕೆಗಳ ಅಸ್ತಿತ್ವಕ್ಕೂ ಎಲ್ಲ ಪತ್ರಿಕೆಗಳ ಸ್ವಾತಂತ್ರ್ಯಕ್ಕೂ ಧಕ್ಕೆ ತಗಲಬಹುದಾಗಿತ್ತು. ರಾಜಕೀಯ ಸ್ವಾತಂತ್ರ್ಯಕ್ಕೆ ತಳಹದಿಯಂತಿದ್ದ ಪತ್ರಿಕಾಸ್ವಾತಂತ್ರ್ಯವೇ ಮಾಯವಾಗುವಂತಹ ಅನಿಷ್ಟ ಪ್ರಸಂಗ ಒದಗಿತ್ತು.. ಅದಕ್ಕಾಗಿಯೆ 'ಇದೊಂದು ರಾಜಕೀಯ ಘಟನೆ' ಎಂದು ಹೇಳಿದ್ದು .... ಆದರೆ ಸುದೈವದಿಂದ ಅದೆಲ್ಲವೂ ಈಗ ಹಳೆಯ ಮಾತಾಯಿತು. ಡಾ. ಖರೆ, ಶ್ರೀ. ಮುನಶಿ, ಶ್ರೀ. ಆಣೆ ಮತ್ತು ಮಧ್ಯಪ್ರಾಂತ ಸರಕಾರ—ಇವರೆಲ್ಲರೂ ಈ ಅನಿಷ್ಟಪ್ರಸಂಗವನ್ನು ತಪ್ಪಿಸಲು ಕಾರಣರಾದರು. ಇವರೆಲ್ಲರಿಗೂ ಧನ್ಯವಾದಗಳು; ತಮ್ಮ ಜೀವದ ಆಹುತಿಯ ಪರಿವೆ ಇಲ್ಲದೆ, ಇಡಿಯ ದೇಶದ ಜನತೆಯ ಮತ್ತು ಸರಕಾರದ ಹೃದಯಗಳಲ್ಲಿ ವಿಕಾಸದ ಸಂಕ್ರಾಂತಿಯನ್ನು ಮಾಡಿದ ಪ್ರೊ. ಭನಸಾಲಿಯವರಿಗಾಗಿ ಇಡಿಯ ದೇಶ ಋಣಿಯಾಗಿದೆ, ತುಂಬ ಅಭಿಮಾನವೆನಿಸಿದೆ.

ಸತ್ಕದ ಸರ್ಕಸ್ಸು (circus) ಬೇಡ!

ಇದೇ ಸಂದರ್ಭದಲ್ಲಿ ತುರ್ಕಸ್ತಾನದ ಪತ್ರಿಕಾಪ್ರತಿನಿಧಿಗಳು ಹಿಂದುಸ್ತಾನದಲ್ಲಿ ಸಂಚಾರಕ್ಕೆ ಬಂದುದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಗತ್ಯವಾಗಿದೆ. ತುರ್ಕಸ್ತಾನವು ತಟಸ್ಥರಾಷ್ಟ್ರ; ಹಿಂದುಸ್ತಾನವು ಯುದ್ಧದಲ್ಲಿ ಒಂದು ಪಕ್ಷಕ್ಕೆ ಸೇರಿದ ರಾಷ್ಟ್ರ. ಹೀಗಿರುವಾಗ ಹಿಂದುಸ್ತಾನದ ಸರಕಾರವು ಆ ಪ್ರತಿನಿಧಿಗಳನ್ನು ಆಮಂತ್ರಿಸಿದ್ದೂ ಅವರಾದರೂ ಆಮಂತ್ರಣವನ್ನು ಸ್ವೀಕರಿಸಿದ್ದೂ ಸೋಜಿಗದ ಸಂಗತಿಯಾಗಿದೆ. ಇಂತಹ ಪ್ರಸಂಗದ ಕಾರಣವೇನು? ಮಿತ್ರರಾಷ್ಟ್ರಗಳಿಗೆ ಹಿಂದುಸ್ತಾನವು ಪೂರ್ವಖಂಡದ ಯುದ್ಧದ ಮುಖ್ಯ ಕೇಂದ್ರವಾಗಿದೆ; ಆದುದರಿಂದ ಮಿತ್ರರಾಷ್ಟ್ರಗಳ ಸಾಮರ್ಥ್ಯವನ್ನು ತುರ್ಕಸ್ತಾನಕ್ಕೆ ತೋರಿಸಬೇಕಾಗಿದೆಯೆ? ಇಂತಹ ಯಾವ ಉದ್ದೇಶವಿದ್ದರೂ ಭಾರತೀಯರಿಗೆ ಅಸಂತೋಷವಿಲ್ಲ, ಆದರೆ ಇವೆಲ್ಲವನ್ನೂ ಬಿಟ್ಟು 'ಹಿಂದುಸ್ತಾನದ ಬಗ್ಗೆ ಬ್ರಿಟಿಶರು ತಳೆದಿರುವ ಧೋರಣೆಗೆ ಸಮರ್ಥನೆಯನ್ನು ಕೊಡಲಿಕ್ಕೆ ಈ ತಟಸ್ಥರಿಗೆ ಆಮಂತ್ರಣ' ಎಂದು ಅನೇಕರಿಗೆ ಸಂದೇಹ; ಆ ಸಂದೇಹ ನಿಜವಾದರೆ ಎಲ್ಲ ಭಾರತೀಯರಿಗೆ ಅಸಂತೋಷ. ಪ್ರಜೆಗಳ ವಿರುದ್ಧ ಪ್ರಚಾರವನ್ನು ಮಾಡಬೇಕಾದ ಪ್ರಸಂಗಗಳು ಯಾವ ಸರಕಾರಕ್ಕೂ ಗೌರವವಲ್ಲ; ಇದಲ್ಲದೆ, ಜನತೆಯ ಪ್ರತಿನಿಧಿಗಳು ಇಂದು ಕಾರಾಗೃಹದಲ್ಲಿದ್ದಾರೆ. ಕೇವಲ ಬ್ರಿಟಿಶರಿಗೆ ಅನುಕೂಲವಾದ ಮಾತುಸಂಗತಿಗಳನ್ನೆ ಈ ತುರ್ಕಬಂಧುಗಳು ನೋಡಿದರೆ, ಹಿಂದುಸ್ತಾನದ ಪರಿಸ್ಥಿತಿ ಅವರಿಗೆ ತಿಳಿಯದು. ಅವರ ದೇಶಸಂಚಾರದ ಕಾರ್ಯಕ್ರಮವನ್ನು ಸರಕಾರವೇ ಸಿದ್ಧಪಡಿಸಿದೆ; ಸಂಚಾರದಲ್ಲಿ ಅವರೊಡನೆ ಸರಕಾರೀ ಅಧಿಕಾರಿಯೊಬ್ಬನಿರುವನು. ಸರ್ಕಸಿನ ಸಿಂಹಗಳು ಬಡಿಗೆ ಎತ್ತಿದತ್ತ ನಡೆಯುವಂತೆ, ಸರಕಾರವು ತೋರಿಸಿದ್ದನ್ನಷ್ಟೇ ನೋಡುವ (ನೋಡಿದರೆ) ಈ ಪತ್ರಿಕಾಪ್ರತಿನಿಧಿಗಳು, ತಮ್ಮ ವ್ಯವಸಾಯಕ್ಕೆಯೆ ಅನ್ಯಾಯವನ್ನು ಬಗೆದಂತಾಗುವುದು. ಹಾಗಾಗಲಿಕ್ಕಿಲ್ಲ ಎಂದು ನಮ್ಮ ವ್ಯವಸಾಯಬಂಧುಗಳ ಅಭಿಮಾನದಿಂದ ನಾವು ಹಾರಯಿಸೋಣ.

ಗಾಯದಲ್ಲಿ ಉಪ್ಪು

ದೇಶದ ಪರಿಸ್ಥಿತಿಯು ಯುದ್ಧಕ್ಕಾಗಿ, ರಾಜಕೀಯ ತೊಡಕಿಗಾಗಿ ಮೊದಲೇ ಕಸವಿಸಿಗೊಂಡಿರುವಾಗ, ನಮ್ಮ ದುರ್ದೈವಿ ಪ್ರಾಂತದಲ್ಲಿ ಬರಗಾಲವೊಂದು ಕೊಡಲಿಯನ್ನೆತ್ತಿದೆ. ವಿಚಾವರ ಜಿಲ್ಲೆಯಲ್ಲಂತೂ ಜನರ ಗೋಳನ್ನು ಹೇಳಲಾಸಲ್ಲ. ಮುದುಕರನ್ನೂ ಮಕ್ಕಳನ್ನೂ, ಗತಿಗಾಣದೆ ಇದ್ದಲ್ಲಿಯೆ ಸಾಯಬಿಟ್ಟು, ಮಿಕ್ಕವರು ಜೀವನದ ಗುಳಿಕಟ್ಟಿಕೊಳ್ಳುವುದು ಅನೇಕರ ದಿನದ ಅನುಭವವಾಗಿದೆ. ಪ್ರಾಂತಿಕ ಸರಕಾರವು ಕೂಡಲೆ ಪರಿಹಾರದ ಕಾರ್ಯಗಳನ್ನು ಒಪ್ಪಿಕೊಂಡಿದೆ ಎಂದ ಮೇಲೆ, ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂಬುದನ್ನು ಊಹಿಸಬಹುದಾಗಿದೆ. ಆದರೆ ಇಂದು ಸರಕಾರವು ಕೈಕೊಂಡ ಕಾರ್ಯವು ಸಾಕಷ್ಟಿಲ್ಲ ಎಂಬುದೂ ಸ್ಪಷ್ಟವಾಗುವುದು. ಒಕ್ಕಲತನವನ್ನೇ ಅವಲಂಬಿಸಿ ನಿಂತಲ್ಲಿ, ಆ ಒಕ್ಕಲುತನವೆ ಕೇವಲ ಮೇಲಿನ ಮಳೆಯನ್ನೆ ಅವಲಂಬಿಸಿದಲ್ಲಿ ಇಂತಹ ಅನಿಷ್ಟ ಪ್ರಸಂಗಗಳು ಮೇಲಿಂದ ಮೇಲೆ

ಓದಗುತ್ತಲಿವೆ. ಕೇವಲ ಧಾನ್ಯವನ್ನು ಹಂಚುವುದರಿಂದಾಗಲಿ, ಅಲ್ಲೊಂದು ಇಲ್ಲೊಂದು ಸವಲತ್ತನ್ನು ತಾತ್ಪರ್ತಿಕವಾಗಿ ಕೊಟ್ಟಾಗಲಿ ಈ ಪರಿಸ್ಥಿತಿ ಸುಧಾರಿಸದು. ಬರಗಾಲನಿವಾರಣೆಯಲ್ಲಿ, ಬರಗಾಲದ ಪುನರಾವೃತ್ತಿಯಾಗದಂತಹ ಕಾರ್ಯಗಳನ್ನು ಕೈಕೊಳ್ಳುವುದೇ ಜಾಣತನ. ಅಂತಹ ದೂರದೃಷ್ಟಿಯನ್ನು ಸರಕಾರವು ತೋರಿಸಬೇಕಾಗಿದೆ. ಇದಲ್ಲದೆ ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ವಾಹಕ ಸವಲತ್ತು ಇಲ್ಲದ್ದಕ್ಕಾಗಿ, ಈಗಾಗಲೆ ದೇಶದ ಅನೇಕ ಭಾಗಗಳಲ್ಲಿ ಅನ್ನದ ಕೊರತೆಯಾಗಿದೆ. ಇಂತಹ ಸಂದರ್ಭದಲ್ಲಿ ಒಂದೆಡೆಯಲ್ಲಿ ಬರಿಯ ಧನ-ಧಾನ್ಯಗಳನ್ನು ಹಂಚುವುದು ಸರಿ ಎನಿಸಿದರೂ, ಸುಲಭವೆನಿಸಲಿಕ್ಕಿಲ್ಲ. ಸಿರಿವಂತರು ದಾನ-ಧರ್ಮಗಳನ್ನು ಮಾಡುತ್ತಿರುವರೆಂದೂ ನುಮ್ಮನಿರುವಂತಿಲ್ಲ. ದಾನ-ಧರ್ಮದ ಮೂಲಕವಾಗಿ ಅದನ್ನು ಸ್ವೀಕರಿಸುವವರಿಗೆ ಭಿಕ್ಷಾಸಂಸ್ಕೃತಿ ಬರುವುದು, ಸ್ವಾಭಿಮಾನ ಸೊನ್ನೆಯಾಗುವುದು. ರಾಷ್ಟ್ರದ ದೃಷ್ಟಿಯಿಂದ ಅದೂ ಹಿತಕರವಲ್ಲ. ಏನಾದರೂ ತಿಂದು ಜೀವವನ್ನುಳಿಸಿಕೊಳ್ಳೋಣ ಎಂದು ಬರಗಾಲದ ಬವಣೆಗರು ತಿಳಿಯುವುದು ಸಹಜವಿದೆ; ಆದರೆ ಅವರ ಪ್ರಾಣದೊಡನೆ ಅವರ ಮನುಷ್ಯತ್ವ. ವನ್ನೂ ಉಳಿಸುವುದು ಸರಕಾರದ ಮುತ್ತು ಘುರೀಣರ ಮೊದಲ ವಿಚಾರವಾಗಬೇಕಾಗಿದೆ.

ಹೇಡಿತನದ ಹಾನಿ

ಯುದ್ಧವು ಹಿಂದುಸ್ತಾನಕ್ಕೂ ಬಂದಿದೆ ಎಂಬುದನ್ನು ತೋರಿಸಿಕೊಡುವಂತೆ ಕಲಕತ್ತೆಯ ಮೇಲೆ ಐದಾರು ಸಲ ಜಪಾನದ ವಿಮಾನದಾಳಿಗಳಾದುವು. ವಿಮಾನದಾಳಿ ಪ್ರಾರಂಭವಾದಾಗ ಕೆಲವು ಅಧಿಕಾರಿಗಳ ಮತ್ತು ಕಲಕತ್ತೆಯ ಕೆಲವು ಪತ್ರಿಕೆಗಳ ನಡುನೆ ಒಂದು ಚಿಕ್ಕ ಯುದ್ಧನಡೆಯಿತು. 'ದಾಳಿಯಿಂದ ಜನತೆಯ ಮೇಲೆ ಯಾವ ಪರಿಣಾಮವೂ ಆಗಲಿಲ್ಲ' ಎಂದು ಅಧಿಕಾರಿಗಳು ಹೇಳಿದ್ದು (ಅಥವಾ ಹೇಳಿದ ರೀತಿ) ಈ ಪತ್ರಿಕೆಗಳಿಗೆ ಸರಿ ಎನಿಸಲಿಲ್ಲ. ಹೆದರಿದ ಜನರ ಸಂಖ್ಯೆಯೂ ಅವ್ಯವಸ್ಥೆಯೂ ಸಾಕಷ್ಟಿದ್ದಿತೆಂದು ಪತ್ರಿಕೆಗಳ ಅಭಿಪ್ರಾಯ. ವಿಮಾನದಾಳಿಗಳ ವಿಷಯವಾಗಿ ಹೆಚ್ಚು ಬರೆಯದಿರಲು ಸದ್ಯಕ್ಕೆ ಅನೇಕ ಕಾರಣಗಳಿವೆ. ಆದರೆ ಒಂದೆರಡು ಮಾತುಗಳನ್ನು ಅಧಿಕಾರಿಗಳೂ ಪತ್ರಿಕೆಗಳೂ ಲಕ್ಷ್ಯದಲ್ಲಡುವಂತೆ. ಸೈರಿಗೆ ಉಪಯುಕ್ತವಾಗದಂತೆ, ತಮ್ಮ ಯುದ್ಧಪ್ರಚಾರಕ್ಕೆ ಅನುಕೂಲವಾಗುವಂತೆ ಹೇಳುವುದು ಅಧಿಕಾರಿಗಳ ಮೊದಲ ಕರ್ತವ್ಯವಾಗಿದ್ದರೂ, ತಮ್ಮ ನಾಗರಿಕರಲ್ಲಿಯ ಅಸಮಾಧಾನ ಇಲ್ಲವೆ ಅವಿಶ್ವಾಸ ಹುಟ್ಟದಂತೆ ನೋಡುವುದೂ ಸರಕಾರೀ ಅಧಿಕಾರಿಗಳ ಮುಖ್ಯ ಕರ್ತವ್ಯವಾಗಿದೆ. ಅದರಂತೆಯೆ ಇಂತಹ ಪ್ರಸಂಗದಲ್ಲಿ ಹೆದರಿದ ಜನರೇ ಬೀದಿತುಂಬಿ ಪತ್ರಿಕಾಪ್ರತಿನಿಧಿಗಳ ಕಣ್ಣೊತ್ತುವಂತಿದ್ದರೂ, ಹೆದರಿಕೆಯನ್ನು ಹಾರಿಸುವುದು ಇಂದು ಪತ್ರಿಕೆಯ ಕರ್ತವ್ಯವಾಗಿದೆ. ವಿಮಾನದಾಳಿಯಂತಹ ಪ್ರಸಂಗ ಬಂದಾಗ, ರಾಜಕಾರಣವನ್ನು ಬದಿಗಿಟ್ಟು ಎಲ್ಲರೂ ಏಕರೂಪದ ಧೈರ್ಯವನ್ನು ತೋರಿಸಬೇಕಾಗುವುದು. ದಾಳಿಯಿಂದ ಸಂರಕ್ಷಣೆ, ದಾಳಿಯಾದನಂತರ ಅದರ ಪರಿಣಾಮದ ನಿವಾರಣೆ— ಇವೆರಡೇ ಮುಖ್ಯ. ಹೆದರುವವರು ಮುಂಚಿನಿಂದಲೇ ಆ ಸ್ಥಳವನ್ನು ಬಿಟ್ಟಿದ್ದರೆ ಅವರ ಹೆದರಿಕೆ ಸಾಂಕ್ರಾಮಿಕರೋಗವಾಗುವುದಿಲ್ಲ; ಹೆದರುವವರನ್ನು ಅಲ್ಲಿಯೆ ಹಿಡಿದಿಡುವ ಧೋರಣೆಯಿಂದ ಯುದ್ಧದ ಪ್ರಚಾರವೂ ಆಗುವುದಿಲ್ಲ. ದಾಳಿಗಾಗಿ ಹೆದರಿದ ನಾಗರಿಕರು, ಆ ನಾಗರಿಕರಿಗಾಗಿ ಹೆದರಿದ ಅಧಿಕಾರಿಗಳು— ಇಂತಹ ಪರಿಸ್ಥಿತಿಯಲ್ಲಿ ಇಬ್ಬರಿಗೂ ಹಾನಿಯಾಗಬಹುದಾಗಿದೆ.

ಅಮೇರಿಕೆಗಾಗಿ ಆಶೆ ಬೇಡ!

ಅಮೇರಿಕೆಯ ಅಧ್ಯಕ್ಷರಾದ ರೂಜವೆಲ್ಟರು ಹಿಂದುಸ್ತಾನದಲ್ಲಿ ತಮ್ಮ ಸ್ವಂತ ಪ್ರತಿನಿಧಿ ಎಂದು ಮಿ. ವಿಲಿಯಂ ಫಿಲಿಪ್ಸ್ ಎಂಬವರನ್ನು ಕಳುಹಿಸಿದ್ದಾರಷ್ಟೆ! ಕಳೆದ ಎಪ್ರಿಲ್‌ನಲ್ಲಿ ಕರ್ನಲ್ ಜಾನ್‌ಸನ್ ಎಂಬವರು ಹಿಂದುಸ್ತಾನದ ರಾಜಕೀಯ ತೊಡಕನ್ನು ಬಿಡಿಸಲು ಮಧ್ಯಸ್ಥಿಕೆ ವಹಿಸಿದ್ದನ್ನು ಲಕ್ಷ್ಯದಲ್ಲಿಟ್ಟು ಅನೇಕರು, ಮಿ. ಫಿಲಿಪ್ಸರು ಹೆಚ್ಚು ಅಧಿಕಾರಯುತವಾಗಿ ಆ ಕಾರ್ಯವನ್ನು ಮಾಡಬಹುದೆಂದು ಆಶಿಸಿದ್ದಾರೆ. ಆದರೆ ಇಂತಹ ಆಶೆಗಳು ನಿಷ್ಪ್ರಯೋಜಕವಾದುವುಗಳು ಎಂದು ನಮ್ಮ ಅಭಿಪ್ರಾಯ. ಅಮೇರಿಕೆಯ ಕಾಂಗ್ರೆಸಿನ ಅಧಿವೇಶನವನ್ನುದ್ದೇಶಿಸಿ ಅಧ್ಯಕ್ಷ ರೂಜವೆಲ್ಟರು ಮಾಡಿದ ಭಾಷಣವನ್ನಾಗಲಿ ಇಲ್ಲವೆ ಬ್ರಿಟಿಶ್ ಮತ್ತು ಅಮೇರಿಕನ್ ಮಂತ್ರಿಮಂಡಳಗಳ ಅಧಿಕಾರಿಗಳ ಭಾಷಣಗಳನ್ನಾಗಲಿ ನೋಡಿದರೆ, ನಮ್ಮ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುವುದು. ಯುದ್ಧದ ತರುವಾಯ ಜರ್ಮನಿ-ಜಪಾನ-ಇಟಲಿಗಳನ್ನು ನಿಃಶಸ್ತ್ರ ರಾಷ್ಟ್ರಗಳನ್ನಾಗಿ ಮಾಡಬೇಕೆಂದು ರೂಜವೆಲ್ಟರು ಹೇಳುವಲ್ಲಿ, ತಾವೇ ಸರ್ವಕಾಲದಲ್ಲಿ ಶ್ರೇಷ್ಠರು— ಕೆಲವರು ಸರ್ವಕಾಲದಲ್ಲೂ ಅಸಂಸ್ಕೃತರು ಎಂಬ ವಿಚಾರವಿದೆ. ಇದೇ ಸಾಮ್ರಾಜ್ಯಶಾಹಿತ್ವದ ಬೀಜಾಂಕುರ. ಅದರಂತೆಯೆ 'ಯುದ್ಧದ ತರುವಾಯ ಅಂತರ ರಾಷ್ಟ್ರೀಯ ಸರಕಾರವನ್ನು ಗೊತ್ತುಪಡಿಸಿ (ಅನೇಕ ಅಧಿಕಾರಗಳಲ್ಲಿ) ಅದಕ್ಕೆ ಕೆಲವು ಹಿಂದುಳಿದ ಮತ್ತು ಅಸಾಹತುದೇಶಗಳ ಉಡಳಿತೆಯ ಮತ್ತು ಮೇಲ್ವಿಚಾರಣೆಯ ಅಧಿಕಾರವನ್ನು ಕೊಡಬೇಕು' ಎಂದು ಸೆಕ್ರೆಟರಿ ಆಫ್ ಸ್ಟೇಟ್ ಇವರ ಅಸಿಸ್ಟೆಂಟ್‌ರಾದ ಫ್ರಾನ್ಸಿಸ್ ಸೈರ್ ಎಂಬವರು ಹೇಳಿದ್ದಾರೆ. ಈ ಅಭಿಪ್ರಾಯಗಳ ಅಂತರ್ಗತವು ಸ್ಪಷ್ಟವಿಲ್ಲವೆ? 'ಯುದ್ಧವನ್ನು ಗೆದ್ದುದಕ್ಕೆ ಹೆಚ್ಚಿನ ಹಕ್ಕು ಪ್ರಾಪ್ತವಾಗುವುದು' ಎಂದು ಹಿಂದಿನ ಯುದ್ಧಕಾಲದ ತಪ್ಪು ಧೋರಣೆಯನ್ನೇ ಇಂದಿನ ಮುಂದಾಳುಗಳೂ ವಹಿಸುತ್ತಿರುವಾಗ, ಅವರ ಯುದ್ಧಧ್ಯೇಯಗಳ ಬಗ್ಗೆ ನಮಗೆ ನಂಬುಗೆ ಕಡಮೆಯಾಗುವುದು ಸಹಜವಲ್ಲವೆ?



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಧವಾದ
ಉಷ್ಣತೆಯಿಂದ ಬಳಲಿರುವ
ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ,
ಅಯಾಸವನ್ನು ಹೋಗ-
ಲಾಡಿಸಿ ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು
ಹುಟ್ಟಿಸುವುದಕ್ಕೆ ಶ್ರೇಷ್ಠವಾದ
ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ  ಕುಲಾಬಾ

★

SHRI DHOOTAPAPESHWAR
PANVEL Ltd., PANVEL.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಕಂಚುವುದಲ್ಲದೆ, ಹೊಸ ವಿಮಾ ಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ಸಂತಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ

The United Karnatak Insurance Co. Ltd., DHARWAR.


ದ್ರಾಕ್ಷಾರಿಷ್ಟ
ರಜಿಸ್ಟರ್ಡ
ಯಾವುದೊಂದು ಕಾಹಿಲೆಯು ಬಂದು ಹೋದ ಮೇಲೆ ಬರುವ ಅಶಕ್ತತೆಗಾಗಿ, ಡಾಕ್ಟರರು ಇದು ಒಳ್ಳೆಯ ಶಕ್ತಿವರ್ಧಕ ಔಷಧಿಯೆಂದು ಹೇಳುತ್ತಾರೆ. ಈ ಮದ್ಯವು ಅಶುದ್ಧ ರಕ್ತವನ್ನು ಶುದ್ಧ ಮಾಡುತ್ತದೆ. ಎಲ್ಲೆಡೆಯಲ್ಲಿಯೂ ಸಿಕ್ಕುತ್ತದೆ.
ದ್ರಾಕ್ಷಾರಿಷ್ಟ ಡಿಪೊ ನಿಪ್ಪಾಣಿ (ಬೆಳಗಾವಿ)

Printed by Mr. V. Y. Jathar at the Karnatak Printing Works, Dharwar, and Published for the Proprietor Jayanti Publications, by M. V. Mellegatti at the Jayanti Office, Dharwar.

ಚಂದಮಾ

ನವಕರ್ನಾಟಕದ
ನಿರ್ಮಾಣಕ್ಕಾಗಿ
ಹೋರಾಡುವ
ಮಾಸಪತ್ರಿಕೆಯು



ಮಾರ್ಚ್
೧೯೪೩

ಗೆ ಅನೆ.

ಸರ್ವಮಂಗಳಾಂಬಾ
ಚಿ. ವೀರಭದ್ರಶಾಸ್ತ್ರಿ
ಎನ್. ಎಸ್. ಜಿ.
ಚಿದಾನಂದ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಯೆಚ್ಚ ಸೇರಿ ೩—೮—೦ ..... ವ್ಹಿ. ಪಿ. ಯಿಂದ ೩–೧೦–೦ ..... ಬಿಡಿಸಂಚಿಕೆಗೆ ೫ ಆಣೆ.

ಸಂಪಾದಕರು

ಬಿಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಮಾರ್ಚ್ ೧೯೪೩	೧೦ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಬಾವುಟ, ಕ್ರಾಂತಿ (ಕವನಗಳು)	ಶ್ರೀ. ವಿ. ಜಿ. ಭಟ್ಟ, ಪುಣೆ	೪೪೭
ಸಂಪಾದಕೀಯ (ನಮಗಾಗಿ ನಾವೆ ದುಡಿಯಬೇಕು)	ಸಂಪಾದಕರು	೪೪೮
ಮಂಗನ ಮಲ್ಲಿನಾಥತನ	' ಮಲ್ಲಿನಾಥ '	೪೪೯
ಸಕ್ಕರೆಯ ವ್ಯವಸಾಯ (ಪರಿಚಯಾತ್ಮಕ)....	ಶ್ರೀ. ಎಂ. ಪಿ. ರವಿಕೀರ್ತಿಸೆಟ್ಟಿ, ಮೂಡುಬಿದ್ರೆ	೪೫೧
ವಿಘ್ನೇಶ್ವರ (ಸಣ್ಣಕತೆ)	ಕುಮಾರಿ ತಾರಾ ಹೆಗಡೆ, ಸಿರಸಿ	೪೫೫
ಮತಿಕೆಂಡವಾಯ್ತು (ಕವನ)	ಶ್ರೀ. ಬಿ. ಎಚ್. ಶ್ರೀಧರ, ಬಿ. ಎ. (ಆನರ್ಸ್) ಪುಣೆ	೪೫೮
ಜೇನು (ಕವನ)	ಶ್ರೀ. ವಿ. ಜಿ. ಭಟ್ಟ, ಪುಣೆ	೪೫೮
ಬಯಕೆ (ಗೀತ)	ಶ್ರೀ. ಬೆನಗಲ್ ರಾಮರಾಯರು, ಎಂ.ಎ., ಎಲ್‌ಎಲ್.ಬಿ.	೪೫೯
ಬ್ರಹ್ಮಸೂತ್ರ ಭಾಷ್ಯಗಳು (ವಿವೇಚನಾತ್ಮಕ)	ಪಂಡಿತ ಚಿ. ವೀರಭದ್ರಶಾಸ್ತ್ರಿ, ವೇದ-ಕಾವ್ಯ-ಸ್ಮೃತಿತೀರ್ಥ	೪೬೪
ಮಲೆನಾಡಿನಲ್ಲಿಯ ನನ್ನ ಪ್ರವಾಸ (ಪ್ರವಾಸಪ್ರಬಂಧ)	ಶ್ರೀಮತಿ ತೊಗರೆ ಸರ್ವಮಂಗಳಾಂಬಾ, ಬಳ್ಳಾರಿ	೪೬೭
ಕಸೂತಿಯ ಕಲೆ (ಸಂಶೋಧನಾತ್ಮಕ)	ಶ್ರೀ. ಹಳಪೇಟಿ ಚಿಂತಾಮಣೆರಾಯರು, ಟಿ. ಸಿ. ಡಿ.	೪೭೦
ಕಲಿತಕಳ್ಳ (ಸಣ್ಣಕತೆ)	' ಇಂದುತನಯ ' ಉಗಾರ	೪೭೩
ಕಲ್ಲಪ್ಪ-ಮಲ್ಲಪ್ಪ (ಕಿರುಗತೆ)	ಶ್ರೀ. ಬಿ. ಜಿ. ' ಸ್ಪೂನೊ ' ಮುಂಬಯಿ	೪೭೬
ವೇದ ಮತ್ತು ಉಪನಿಷತ್ತು (ಉಪನ್ಯಾಸ)	ಪ್ರೊ. ಆರ್. ವಿ. ಜಾಗಿರದಾರ್, ಎಂ. ಎ. (ಲಂಡನ್)	೪೭೭
ಸಾದರ ಸ್ವೀಕಾರ	....	೪೮೦
ನಗೀಗೆ ನೇವಿದ್ಯ	' ನಳಲೀ ನಾರಾಯಣಾಚಾರ್ರು '	೪೮೧
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೪೮೨

ಜಯಂತಿಯ ಮುಂಬೈ ಶಾಖಾ ಕಚೇರಿ

ವಿಳಾಸ ಬದಲಾಗಿದೆ ; ದಯವಿಟ್ಟು ನೋಡಿಕೊಳ್ಳಿರಿ!

ನೊಗವೀರ ಯುವಕ ಸಂಘದ ಕಾರ್ಯಾಲಯ,
೪೬ ಚರ್ಚ್‌ಗೇಟ ಸ್ಟ್ರೀಟ, ೩ನೆಯ ಮಾಳಿಗೆ
ಫೋರ್ಟ್, ಮುಂಬಯಿ

ಮ್ಯಾ. ಜಯಂತಿ

ನಮ್ಮ ಬೆಂಗಳೂರ ಏಜಂಟರು

ಆರ್. ಎನ್. ನ್ಯೂಜ್ ಏಜನ್ಸಿ,
೬೬೫ ಚಿಕ್ಕಪೇಟೆ, ಬೆಂಗಳೂರು ನಗರ.

ನಮ್ಮ ಬಂಕಾಪುರದ ಏಜಂಟರು

ಶ್ರೀ. ಎ. ಕೆ. ಗಲಗಲ್ಲಿ: ಟೀಲರ್ ಮತ್ತು ನ್ಯೂಜ್
ಏಜಂಟ್, ಬಂಕಾಪುರ



ಸಂಪುಟ ೫ | ೧೯ೆಯ ಮಾರ್ಚ್ ೧೯೪೩ | ಸಂಚಿಕೆ ೧೦

ಬಾವುಟ!

ಶ್ರೀ. ವಿ. ಜಿ. ಭಟ್ಟ, ಪುಣೆ

★

ನಿನ್ನ ಸುತ್ತ
ಪೀರರಕ್ತ-
ದೋಕುಳಿ ನಡೆದಿರುವುದು!

'ಭಾರತಾಂಬೆ
ಜಯತು' ಎಂಬ
ನಾದವುಣ್ಮಿರಿವುದು!

ಜಯ್-ಜಯೆಂಬ
ಜಿಹ್ವೆ ಕೊಯ್ಮೆ
ಶಪ್ತಶಪ್ತ ಬಂದಿದೆ!

ನಿನಗೆ ಮಣೆಯೆ-
ಬಂದ ತಲೆಗೆ
ಕತ್ತಿಯೆತ್ತಿ ನಿಂದಿದೆ!

ನಿನ್ನ ಚರಣ-
ಸ್ಪರ್ಶ ಮಾಳ್ಪೆ-
ನೆಂಬ ಕೈಗೆ ಕಬ್ಬಿಣ!

ನಿನ್ನನೊಂದೆ
ದಿಟ್ಟಿಯಿಂದೆ
ನೋಳ್ಪ ಕಣ್ಗೆ ದಬ್ಬಣ!

ತಾಯ ಮೊಲೆಯ
ಕುಡಿಯೆ, ಕೊಲೆಯ
ಗೆಯ್ವೆವೆಂಬ ನೀತಿಗೆ—

ದಿಟದ ಮುಂದೆ
ಸಟೆಯು ತೋರ್ಪ
ಕುಶಲಹೀನ ಭೀತಿಗೆ—

ಗೊಂಬೆಯಾದ
ಗಂಡರುಗಳ
ದಿಂಡ ಡೇಗೆ ಕುಳ್ಳಲು,

'ಕಾಲಪಕ್ಷಿ'
ರವಿಯ ಸಾಕ್ಷಿ
ಷಂಡ ಮಾಂಸ ಮುಕ್ಕಲು—

ಬಾನಾಡಿ ಬಾವುಟ!
ನಾಡ ನಡುವೆ ನೀ— ದಿಟ—
ನಿಂದು ಜೈ-ಜಯೆಂದು ಹಾರೆ,
ಧೆನೆಗಳದನು ಮರಳಿ ಸಾರೆ,
ಕುಂಬುವುದ್ಯೆ ಬಾನ್‌ಮಟ—
ದಿಕ್ತಟಗಳ ರಿಕ್ಕಟ—
ಅರಿ ನಾಡ ಸಂಕಟ!

ಕ್ರಾಂತಿ

ಶ್ರೀ. ವಿ. ಜಿ. ಭಟ್ಟ, ಪುಣೆ

★

ಹರನೆ ನಿನ್ನ ಡಮರು ಬಡಿ!
ವೀಣೆವೆಣ್ಣೆ, ತಂತಿ ಹರಿ!
ನೆಲವ ತರಿ, ಬಾನ ಕಡಿ,
ಕ್ರಾಂತಿ, ಮಿಂಚುಗತ್ತಿ ಹರಿ!
ರಕ್ತಪ್ರಳಯ ವೃಷ್ಟಿ ಸುರಿ!

ಗೋಲ-ಗೋಲಗಳನು ಧಿಕ್ಕಿ—
ಹೊಡೆಸಿ ನುಚ್ಚುನೂರು ಗೈ!
ಸತ್ಯವಿಂದು ಸೆರೆಯ ಸಿಕ್ಕಿ
ಸವೆಯುತಿರಲು ನಿನ್ನ ಕೈ—
ರುಂಡವ ಚಂಡಾಡಲ್ಕೈ!

ಪಂಚಖಂಡ ಈಂಡ ಸೂಡು,
ನರರ ತೊಸಲ ದಟ್ಟಯಿಡು,
ಕುಣಿತ ಮುಗಿಯೆ ಮುರಳಿ ಹೂಡು,
ಕಣ್ಣ ತೇಜದಿಂದ ಸುಡು
ಬುವಿಯ, ಬೀಜಚಿತ್ರಲು—
ಶಾಂತಿದೇವಿ ಹಡೆವ ಶಿಶುಗೆ
ಮುಂದೆ ತಲೆಯನೆತ್ತಲು!

ಹರನೆ ನಿನ್ನ ಡಮರು ಬಡಿ!

ನಮಗಾಗಿ ನಾವೆ ಹುಡಿಯಬೇಕು !

ಸ್ವಹೀನತಾಭಾವನೆಯ ಜನಾಂಗವು, ತನ್ನ ಕಷ್ಟ-ನಷ್ಟ ನಿವಾರಣೆಗಾಗಿ ಯಾವಾಗಲೂ ಇನ್ನೊಬ್ಬರ ಮುಖದ ಕಡೆಗೆ ನೋಡುತ್ತಿರುತ್ತದೆ. ಆಧ್ಯಾತ್ಮಿಕತೆಗೆ ಪ್ರಾಧಾನ್ಯವಿರುವ ನಮ್ಮ ಭಾರತವಲ್ಲಂತೂ, ದೈವೀದಾಸ್ಯ ಭಾವನೆಯು ಜನರ ನೈ-ಮನಗಳಲ್ಲಿ ಬೆಳೆದು ನೆಲೆಗೊಂಡುದರಿಂದ, ಯಾವಾಗಲೂ ಇಲ್ಲಿಯ ಜನರು, ತಮ್ಮ ಉದ್ಧಾರಕ್ಕಾಗಿ ಅವತಾರದ ಕಡೆಗೆ ಕಣ್ಣಿಟ್ಟಿರುವರು. ತಮ್ಮ ಕಷ್ಟವನ್ನು ಕಳೆದುಕೊಳ್ಳುವ ಶಕ್ತಿ ತಮ್ಮಲ್ಲಿ ಇಲ್ಲವೆಂದೇ ಬಹುಜನರ ಭಾವನೆ. ಈ ಶೂನ್ಯಪೌರುಷ ಭಾವನೆಯೆ ನಮ್ಮನ್ನಿಂದು ದೈನ್ಯದೃಷ್ಟಿಯಿಂದ—ದಯೆಯ ಅಭಿಲಾಷೆಯಿಂದ— ಬಲಿಷ್ಠ ಪರರಾಷ್ಟ್ರಗಳ ಕಡೆಗೆ ನೋಡುತ್ತ ಕುಳ್ಳಿರುವಂತೆ ಮಾಡಿದೆ. ಸಮತಾವಾದದ ಅಭಿಮಾನಿಗಳು ಕೆಲವರು, ರಷ್ಯದ ದಯೆಯಿಂದ ಭಾರತವು ಮುಕ್ತವಾಗಬಹುದೆಂದು ಹೇಳುತ್ತಾರೆ. ಚೀನದ ಜನಸಂಖ್ಯೆಗೆ ಮರುಳಾದ ಕೆಲವರು, ಅದರ ನೆಲವಿನಿಂದ ಭಾರತೀಯರಿಗೆ ಸ್ವಾತಂತ್ರ್ಯವೆಂದು ಹೇಳುತ್ತಲಿದ್ದಾರೆ. ಅಮೇರಿಕೆಯ ಸಂಯುಕ್ತರಾಷ್ಟ್ರದ ಇಂದಿನ ಯುದ್ಧಪ್ರತಿಜ್ಞೆಗೆ ಮಂಕುವಟ್ಟ ಕೆಲವರು ' ಅಮೇರಿಕದಿಂದ ನಮಗೆ ಖಂಡಿತ ಮುಕ್ತಿಯುಂಟು ! ' ಎಂದು ಭರವಸೆ ಕೊಡುತ್ತಲಿದ್ದಾರೆ. ಅಚ್ಚಿನ ರಾಷ್ಟ್ರಗಳಂತೂ ' ಹಿಂದುಸ್ತಾನದ ಸ್ವಾತಂತ್ರ್ಯವೇ ನಮ್ಮ ಯುದ್ಧಾದರ್ಶ ' ಎಂದು ದಿನದಿನವೂ ಸಾರುತ್ತಲಿದ್ದು, ಅನೇಕ ಅಶಕ್ತ ಹೃದಯಿಗಳು ತೆರೆಬಾಯಿಯಿಂದ ಅವರ ಕಾರ್ಯದ ಕಡೆಗಿಂದು ನೋಡುತ್ತಲಿದ್ದಾರೆ. ಇದೆಲ್ಲವನ್ನೂ ವಿಚಾರಿ, ಎಲ್ಲರೂ ಎಲ್ಲಕ್ಕೂ ಜೆಟ್ಟಾಗಿ ದೈವದ ಮೇಲೆ ಭಾರಹಾಕಿ ಕುಳಿತುಕೊಂಡಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಹೀಗೆ ಸುಮ್ಮನೆ ಕಣ್ಣುಮುಚ್ಚಿ, ಯಾರ ಮೇಲೆಯೋ ಭಾರಹಾಕಿ, ಇಲ್ಲವೆ ತೆರೆದ ಕಣ್ಣುಗಳ ಆಶೆಯ ನೋಟದಿಂದ ಯಾರ ಕೈಯ ಕಡೆಗೋ ನೋಡುತ್ತ ಕುಳಿತುಬಿಡುವುದು ಸರಿಯೆನಿಸೀತೆ ?

ಅಚ್ಚಿನ ರಾಷ್ಟ್ರಗಳ ಅಧಿಕಾರಲಾಲಸೆಯೂ, ಸಾಮ್ರಾಜ್ಯ ಸಾಧನೆಯ ಮಹತ್ವಾಕಾಂಕ್ಷೆಯೂ ಆದಕ್ಕಾಗಿ ತಳೆದ ಪಶುವೃತ್ತಿಯೂ ಜಗತ್ತಿಗೇ ಸೊತ್ತಾಗಿಬಿಟ್ಟಿವೆ. ಮಿತ್ರರಾಷ್ಟ್ರಗಳ ಮುಂದಾಳುಗಳು, ಅಚ್ಚಿನ ರಾಷ್ಟ್ರಗಳ ವೈರಾಚ್ಯವೃತ್ತಿಯ ಪ್ರಚಾರವನ್ನು ಎಡೆಬಿಡದೆ ನಡೆಯಿಸಿಯೆ ಇದ್ದಾರೆ. ಅಂತಹ ಪಿತಾಮಹಗಳ ಸಹಾಯದಿಂದ ಭಾರತ ಒಳ್ಳೆಯ ಕಾಲವನ್ನು ಕಂದುಕೊಳ್ಳುವುದೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಮೂರ್ಖತನವೆ ಸರಿ. ಆ ರಾಷ್ಟ್ರಗಳನ್ನು ನಂಬಿದರೆ ಕಳ್ಳನಿಂದ ತಪ್ಪಿಸಿಕೊಳ್ಳಬೇಕೆನ್ನುವವನು ಕಾಡಿನ ಹುಲಿಗಳ ಬಾಯಿಗೆ ಬಿದ್ದಂತಾಗುವುದು ಕಟ್ಟಿಟ್ಟ ಮಾತು. ಇನ್ನು ಚೀನದ ವಿಷಯ : ತಾನು ತಾಣದ ಪಾಪಿ ಪರರಿಗೆ ಏನು ಕೊಟ್ಟೀತು ! ಜನಸಂಖ್ಯೆಯ ಬಲವೊಂದಲ್ಲದೆ ಚೀನಕ್ಕೆ ಯಾವ ಬಲವಿದೆ ? ಜನಸಂಖ್ಯೆಯ ಬಲವೇ ಬೇಕೆಂದರೆ ಭಾರತಕ್ಕೆ ಅದರ ಕೊರತೆಯೆಲ್ಲಿದೆ ? ಚೀನದ ಜನಬಲ ಕಾಳೆಗಕ್ಕೆ ಸಿದ್ಧವಿದ್ದರೂ ಅದಕ್ಕೆ ಅನ್ನ- ಯುದ್ಧಸಲಕರಣೆಗಳು ಒದಗುವ ಬಗೆ ಹೇಗೆ. ಒದಗಿಸುವೆವೆಂದು ಉದ್ದ ನಾಲಗೆ ತೆಗೆದು ಹೇಳುತ್ತಿರುವ ರಾಷ್ಟ್ರಗಳು ಹಾಗೆಲ್ಲಿ ಮಾಡುವುವು? ಬಹಳವಾದರೆ ಚೀನಿಗಳು ನಮ್ಮ ಕಂಬನಿಗಳನ್ನೊರಸಬಹುದು; ನಾವು ಅವರ ಕಂಬನಿಗಳನ್ನೊರಸಬಹುದು; ಇಷ್ಟೆ !

ರಷ್ಯ ಭಾರತಕ್ಕಾಗಿ ಈಗ ಏನು ಮಾಡುವಂತಿದೆ? ಅದು ಸದ್ಯ ಜಯಶಾಲಿಯಾಗಿರುವಂತೆ ಕಂಡರೂ, ಹುಳಿತ ಮರದಂತಾಗಿದೆ ಅದರ ಒಳಮೈ. ಮೊದಲಿನಂತೆ ಪುಂಬುಗೊಂಡ ರಾಷ್ಟ್ರವಾಗಬೇಕಾದರೆ (ಇದೇ ಕೊನೆಯ ಜಯವಿದ್ದಲ್ಲಿ) ಇನ್ನೂ ಐವತ್ತು ವರ್ಷಗಳಾದರೂ ಬೇಕು ರಷ್ಯಕ್ಕೆ. ಅಲ್ಲಿಯ ವರೆಗೆ ಅದು ಅತ್ತಿತ್ತ ನೋಡಲಾರದು ; ನೋಡಿದರೂ ಉಪಯೋಗವೇನೂ ಆಗಲಾರದು. ರಷ್ಯದಲ್ಲಿ ಸದ್ಯದ ಯುದ್ಧದಿಂದುಂಟಾಗುವ ಪರಿಸ್ಥಿತಿಯು, ಸಮತಾವಾದಕ್ಕೇ ಅಂಟಿಕೊಂಡಿರಲು ಅದನ್ನು ಬಿಡುವುದೋ ಇಲ್ಲವೊ ತಿಳಿಯದಂತಾಗಿದೆ. ರಷ್ಯದ ಕಡೆಗೆ ಬೆರಳುತೋರಿಸುವ ಆಶಾವಾದಿಗಳು ಮುಂಜಿನ ನೀರಿಗೆ ಕೈಯೊಡ್ಡಿದಂತೆಯೆ ಎಂದು ಯಾವ ವ್ಯವಹಾರವಿದನೂ ತಿಳಿದುಕೊಳ್ಳಬಹುದಾಗಿದೆ.

ಉಳಿದುದು ಅಮೇರಿಕೆ. ತತ್ತ್ವದ ಮಾತಿನಿಂದದು ಇಂದು ಭಾರತೀಯರನ್ನು ಮರುಳುಮಾಡುತ್ತಿದರೂ, ಅದರ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅಮೇರಿಕನರ ರಾಜಕೀಯ ಜೀವನದಲ್ಲಿ ಆ ತತ್ತ್ವದ ಅನುಷ್ಠಾನಕ್ಕೆ ಅವಕಾಶವಿದ್ದಂತೆಯೇನೂ ಕಣ್ಣಿಗೆ ಬೀಳುವುದಿಲ್ಲ. ಇದಕ್ಕೆ ಉದಾಹರಣೆಯೆಂದು 'ಫಿಲಿಪ್ಪೈನ್' ಜನರ ಪಾರತಂತ್ರ್ಯ ಕಥೆಯೊಂದನ್ನು ತಿಳಿದುಕೊಂಡರೆ ಸಾಕಾಗಿದೆ. ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಯುದ್ಧದಲ್ಲಿ ಧುಮುಕಿರುವ ಅಮೇರಿಕೆ, ಫಿಲಿಪ್ಪೈನ್ ಜನರ ಪಾರತಂತ್ರ್ಯದ ಪಾಶವನ್ನು— ಕೊನೆಯ ವರೆಗೂ ಸಡಿಲು ಮಾಡಿರಲಿಲ್ಲ. ಅಲ್ಲದೆ ಇದುವರೆಗೆ ದುಡ್ಡು ಗಳಿಸುವ ಹುಚ್ಚುಹಿಡಿದ ಅಮೇರಿಕೆಗೆ, ಇಂದು ಜಗತ್ತಿನ ಮೇಲೆ ತನ್ನ ಅಧಿಕಾರ ಮೆರೆಯಿಸಬೇಕೆಂಬ ಹುಚ್ಚು ಹಿಡಿದಿದೆಯೇನೋ ಎನಿಸುವಂತಿದೆ. ಯುದ್ಧೋತ್ತರದ ಜಗತ್ತಿನ ಇತಿಹಾಸವನ್ನು ಕಲ್ಪಿಸಲು ಹೊರಟ ಅಮೇರಿಕೆಯ ಹಗಲುಗನಸಿಗರನೇಕರು, ಅಮೇರಿಕೆಯ ಅಧಿಕಾರವೈಭವದ ಕಲ್ಪನಾಚಿತ್ರಗಳನ್ನು ಈಗಾಗಲೇ ರಾಶಿ-ರಾಶಿಯಾಗಿ ಬರೆದು ಪ್ರಕಟಿಸಿರುವರು ; ಪ್ರಕಟಿಸುತ್ತಿರುವರು. ಅಮೇರಿಕೆಯ ದಯೆಯಲ್ಲಿ ಅನಾಸಕ್ತ ಯೋಗಿಯ ದಯೆ ಇದ್ದಂತಿಲ್ಲ ; ವ್ಯವಹಾರರಕ್ತ ಭೋಗಿಯ ದಯೆ ಇದ್ದಂತಿದೆ. ತಾನು ಯಜಮಾನನೆಂಬುದನ್ನು ಮಿಕ್ಕ ರಾಷ್ಟ್ರಗಳು ಒಪ್ಪಿದರೆ, ಅವುಗಳ ಕಡೆಗೆ ಅಧಿಪತಿಯ ಅಹಂಕಾರದ ದಯೆಯಿಂದದು ನೋಡಲು ಸಿದ್ಧವಿದ್ದಂತಿದೆ. ಹಿಂದುಸ್ತಾನಕ್ಕೆ ಇಂತಹ ದಯೆಯ ಆವಶ್ಯಕತೆ ಇದೆಯೆ ? ಇಂತಹ ದಯೆಯಿಂದ ಭಾರತೀಯರು ಅಪೇಕ್ಷಿಸುವ ಸ್ವಾತಂತ್ರ್ಯ ದೊರೆತೀತೆ ?

ಇನ್ನೂ ಒಂದು ವಿಶೇಷ ವಿಷಯ : ಭಾರತೀಯರ ಬಣ್ಣ, ಅಮೇರಿಕೆ

(೪೫೩ ನೆಯ ಪುಟನೋಡಿರಿ.)



ಮಾನ್ಯ ಮುಂಬೇಡಕರ

ವೈಸರಾಯರ 'ಮೂರು ಮಂದಿ ದಾರಿಕಾರರು' ಬಾಜಿನಾಮೆಯನ್ನು ಕೊಟ್ಟುದಕ್ಕೆ, ಡಾಕ್ಟರ್ ಅಂಬೇಡಕರರಿಗೆ ಮುಂದಿನ ಜಾಗೆ ಮೊರೆಯಿ-ತೆಂದು ಕೇಳಿ ಮುಂಗರಾಯನಿಗೆ ಬಹಳೇ ಸಂತೋಷವಾಗಿದೆ. ಪಾಪ! ಡಾಕ್ಟರ್ ಸಾಹೇಬರ ಮೇಲೆ ಅಪಸಂಬುಗೆಯುಳ್ಳ ಜನರೇ ಹೆಚ್ಚಿರು-ವಾಗ, ನತೋನ್ನತಿಚ್ಛೆಯಿದ ಮುಂಗರಾಯನಿಗೆ ಆನಂದವಾಗಬಾರದೇಕೆ? ಇದಲ್ಲದೆ ಇಂದಿನ ವರೆಗೆ ಹಿಂದಿನ ಕುರ್ಚಿಯ ಮೇಲೆಯೆ ಕುಳಿತು ಅಂಬೇಡಕರರು ತಮ್ಮ ಕರ್ತವ್ಯವನ್ನು ಸಾಕ-ಷ್ಟಾಗಿ ನೆರವೇರಿಸಿದ್ದಾರೆ. ಹಿಂಬೆ ಕುಳಿತು ಕೇವಲ ಮುಂದಿದ್ದ ಮೂವರನ್ನು ನೂಕುವುದರಲ್ಲಿಯೆ ಅಂಬೇಡಕರರು ಇದುವರೆಗೆ ಕಾಲವನ್ನು ಕಳೆದ-ರೆಂದು ಕಿಡಿಗೇಡಿಗಳು ಹೇಳುತ್ತಿರುವಾಗಲೂ ಮುಂಗರಾಯನಿಗೆ ಸಂತೋಷವಿದೆ. ಯಾಕೆಂದರೆ-ಕಾಶೀ-ರಾಮೇಶ್ವರ ಪುರಿ-ತಿರುಪತಿಪರ್ಯಂತದ ಪುಣ್ಯಕ್ಕಿಂತಲೂ ಅಂಬೇಡಕರರ ಕಸುವು ಹೆಚ್ಚು ಎಂದಂತಾಯಿತಲ್ಲವೆ? ಭಲೆ! ಭಲೆ! ಅಂಬೇಡ-ಕರರೆ, ಸಖ್ಯಕ್ಕೆ ಮುಂಬೇಡಕರರೆ, ಇಷ್ಟೊಂದು ಬಲದ ರಾಶಿಯಾದ ನೀವು, ಮಿಕ್ಕ ಮಾನವ ಪುಳುಗಳಿಗೆ ಅನಾದ್ಯನಂತಕಾಲದಲ್ಲೂ ಅಸ್ಪೃಶ್ಯ-ರಾಗಿಯೆ ಉಳಿದರೆ ಆಶ್ಚರ್ಯವೇನು? ಪೀಡ ಯಾಕೆ?— ಅಲ್ಲ-ಅಂದರೆ-ಸಂತೋಷವೇ ಸರಿ! ಅನ್ಯಕ್ತದಿಂದ ಬಂದ ವ್ಯಕ್ತ ಕೊನೆಗೆ ಅವ್ಯಕ್ತ ಸೇರುವಂತೆ—ಅಸ್ಪೃಶ್ಯರಾಗಿ ಹುಟ್ಟಿ, ಸ್ಪೃಶ್ಯರಾಗಿ ಬೆಳೆದು, ಕೊನೆಗೆ ಮತ್ತೆ ಅಸ್ಪೃಶ್ಯರಾಗಿಯೆ ಉಳಿ-ಯುವ ಸೃಷ್ಟಿಯ ತತ್ತ್ವಕ್ಕೆ ಮೂಲವಾದ—ಅಲ್ಲ. ಆಂದ್ರೆ-ಪೆಹೆ!—ಮೂಲತತ್ತ್ವವಾದ— ಒಟ್ಟು-ಇಂಥಾ ಮಹಾವಿಭೂತಿ, ಪ್ರತಿ ಹತ್ತು ವರ್ಷ-ಕ್ಕೊಮ್ಮೆ ಇನ್ನೊಬ್ಬರು ಮಾಡುವ ಉಪವಾಸದ ನಿಮಿತ್ತದಿಂದ ಭಗವತೇಗೆರಲು-ಏನೆಂದು ಬಿರುದು ಕೊಡಲಿ—ಎಂದು ಮುಂಗರಾಯನು ಮತಿ-ಭ್ರಾಂತನಾಗಿ ನೈತುರಿಸುತ್ತಲಿದ್ದಾನೆ! ಡಿಸ್ರೈಸ್ಡ್ ಡಾಕ್ಟರ್?-ಡಿಡ್ಯೂಲ್ಡ್ ಕಾರ್ಮೂಲ್?ಅಧಿಕಪ್ರ-ಸ್ಪ-ಅಂಬೇಡಕರ! ಹಿಂದುಳಿದವರ ಹಿತೋಪಕಾರಿ? ಪುರೋ-ಹಿತರ ಶ್ವಾಸಾಪಹಾರಿ? ದಿಲ್ಲಿಯ ದಾಸಾ-ನುದಾಸಾ? ಪರೋಪವಾಸ ಪ್ರಕಾಶ?....

ಏನೆಂಬೆ ನಿನೆಂಬೆ? ಯಾವುದೂ ನಾ ನಂಬೆ,
ಅಂಬೇಡಕರನೆ ನೀ ನಂಬಬೇಡ ಎಂಬೆ ||

ರಾಜಕೀಯ ಬಿಡಿಗಣಿತ

ದಿಲ್ಲಿಯಲ್ಲಿ ಸೇರಿದ ಸರ್ವಪಕ್ಷ ಧುರೀಣರ ಪರಿಷತ್ತಿಗೆ ಜಿನಾಸಾಹೇಬರನ್ನು ಆಮಂತ್ರಿಸ-ಲಾಗಿತ್ತಷ್ಟೆ! 'ಉಪವಾಸ' 'ಮಹಾತ್ಮಾ' 'ಜೀವ ಉಳಿಸುವುದು' ಇಂತಹ ವಿಷಯಗಳು ಕೇವಲ ಹಿಂದುಗಳಿಗಷ್ಟೆ ಸಂಬಂಧಿಸಿವೆ, ತನಗೆ ಅದರ ಸಂಪರ್ಕ ಬೇಡ—ಅದ್ದರಿಂದ ಪರಿಷತ್ತಿಗೆ ಬರುವುದಾಗುವುದಿಲ್ಲ ಎಂದರೆ ಸಾಹೇಬರು. ಆ ಮಾತನ್ನು ಕೇಳಿ ಮುಂಗರಾಯನು ತಟ್ಟನೆ ಮತ್ತೊಂದು ಟೊಂಗೆಗೆ ಜಿಗಿದನು. ಕುತೂಹಲ-ದಿಂದ ಪಲ್ಲು ಕಿರಿದನು. ಸೋಜನ್ನನೇಕ್ಷಿಸುತ್ತ ಮೈ ತುರಿಸಿದನು. ಯಾಕೆನ್ನುವಿರಾ? ಇದಕ್ಕೆ ಇದಿರಾಗಿ ಗೋ-ಬ್ರಾಹ್ಮಣ (ಕೇವಲ 'ಗೋ'-ಲಿನ್ ಲಿತ್ ಗೋ-ಆಲ್ಲ) ಪರಿಪಾಲಕ ವೀರ ಸಾವರಕ-ರರು ಏನೆನ್ನುವರು ಎಂಬ ವಿಚಾರದಿಂದ. 'ಉಪವಾಸ' ಹಿಂದುಗಳಿಗೆ (ಎಂದರೆ ಮಹಾ-ಸಭೆಯ ಹಿಂದುಗಳಿಗೆ) ಸಂಬಂಧಿಸಿಲ್ಲ— ಎಂದು ಪ್ರತಿಭಟಿಸಿಯೆ ಬಿಟ್ಟರು ವೀರ ವಿನಾಯಕರು! 'ಪರಿಷತ್ತಿಗೆ ಹೋಗದ ಅದ್ವಿತೀಯ ಮುಂದಾಳು ಎಂಬ ಮಾನ ಬೇಕೇ ಜಿನಾ ನಾ ಹೇ ಬರಿಗೆ? ಪಾಣಾದರೆ ನಾನೂ ಹೋಗುವುದಿಲ್ಲ' ಎಂದರು ಮಹಾಸಭೆಯ ಮಹಾಧ್ಯಕ್ಷರು! 'ಜೀವ ಉಳಿ-ಸುವುದು' ಹಿಂದೂ ವಿಚಾರ ಎಂದು ಲೀಗಿನ ಶಾಶ್ವತಾಧ್ಯಕ್ಷರು ಹೇಳಿದರೆ, 'ಜೀವ ಉಳಿಸು-ವುದು' ಗಾಂಧಿಯವರ ವಿಚಾರ ಎಂದರು ಮಹಾಸಭೆಯ ಶಾಶ್ವತಾಧ್ಯಕ್ಷರು! ಅರ್ಥಾರ್— ಮಹಾತ್ಮಾಜಿಯವರು ಹಿಂದು ಅಲ್ಲವೆಂದೇ ಈ ನೂತನ ಸೂಚಿತಾರ್ಥ! ಅಪಹ! ಅವೆಂತಹ ಬುದ್ಧಿವಂತ್ರೆ! ಅವೆಂತಹ ಬುದ್ಧಿವಂತ್ರೆ!

ಪಹ ಪಹ! ಗಾಂಧಿಯವರ ಜೀವ ಉಳಿಸುವುದು ಗಾಂಧಿಯವರಿಗೆ ಸಂಬಂಧಿಸಿದೆ ಎಂದು ತಿಳಿಯ-ಬಾರದೇ ಮುಸಲ್ಮಾನರ ಮುಂದಾಳುಗಳಿಗೆ? ಬೋಲೋ ಪರಹರ ಮಂದಾವೇವ! ಅಂತೂ ಗಾಂಧೀಯವರು ಮುಸಲ್ಮಾನರೂ ಎನಿಸಿಕೊಳ್ಳ-ಲಿಲ್ಲ, ಹಿಂದು ಎಂದೂ ಎನಿಸಿಕೊಳ್ಳಲಿಲ್ಲ. ಈಗ ತಿಳಿಯಿತಲ್ಲವೇ ನಿಮಗೆ ದಿಲ್ಲಿಯಲ್ಲಿ ಕ್ರಿಶ್ಚನ್ಸ್ ಮುಂದಾಳುಗಳು ಕೂಡ ಯಾಕೆ ಬಂದಿಲ್ಲ-ವೆಂಬುದು? ದಿಲ್ಲಿಯ ಸೊತ್ತು ಜಳಿ ಸರ್ವಾನು-ಮತದಿಂದ ಸ್ವೀಕೃತವಾಯಿತು. 'ಇಲ್ಲ' ಎಂದರು ಜಿನಾಸಾಹೇಬರು; 'ಇಲ್ಲ' ಎಂದರು ಸಾವರಕರ ಪಂತರು. ಎರಡು 'ಅಲ್ಲ'=ಒಂದು 'ಇದೆ!' ಬಾಲಕರೆ, ಈ ಲೆಕ್ಕವನ್ನು ಬಿಡಿಸಿರಿ.

ಇಲ್ಲ + ಇಲ್ಲ = ಇದೆ

ಜಿನಾ ಇಲ್ಲ+ಸಾವರಕರ ಇಲ್ಲ=ಹಿಂದುಸ್ತಾನ ಇದೆ 'ಇಲ್ಲ'ಗಳು ಎರಡು :. ಹಿಂದುಸ್ತಾನ ಒಂದು!

ಬುದ್ಧಿಗೇಡಿ ಸುಖವಂತ

ರಾಜಕರೇ, ಬುದ್ಧಿಗೇಡಿ ಭಗವಂತನ ಕತೆ-ಯನ್ನು ಕೇಳಿರುವಿರಷ್ಟೆ? ಇನ್ನು ಬುದ್ಧಿವಂತ ಕತೆಯನ್ನಾಲಿಸಿರಿ. ಅವನಿಗೆ ಬುದ್ಧಿವಂತನೆಂಬ ಮಗ. 'ಮನೆಯ ಬುದ್ಧಿಯನ್ನು ಹೊರಗೆ ಹೇಳುವಂತಿಲ್ಲ' ಎಂದು ಭಗವಂತನು ಮಗನಿಗೆ ಕಟ್ಟಾಜ್ಞೆಯನ್ನು ವಿಧಿಸಿದನು. 'ನಿಮ್ಮ ತಂದೆ ಇದ್ದಾರೆಯೆ?' ಎಂದು ಕೇಳಿದ ಅತಿಥಿಗೆ 'ಇಲ್ಲ' ಎಂದನಂತೆ ಸುಖವಂತ! ಆಗ ಭಗವಂತ ಮಗನ ಬುದ್ಧಿಮತ್ತೆಗೆ ಹೌಹಾರಿದಂತಾಗಿ 'ಹಾಗಲ್ಲ ಬೃಹಸ್ಪತೀ, ಮನೆಯೊಳಗೆ ನಡೆವ ಸಂಗತಿಗಳನ್ನು ಹೇಳಕೂಡದು' ಎಂದು ಭಾವ್ಯೀಕರಿಸಿದನು. ಅಂತೂ ಒಂದು ದಿನ ಭಗವಂತನ ಮೈಯ-ಮೇಲೆ ಜೇಳು ಏರಿ ಕಡಿದಾಗ 'ಏನಿದು?' ಎಂದು ಚೀರಲು 'ಜೇಳು' ಎಂದ ಮಗ. 'ಮೊದಲೇ ಹೇಳಲಿಲ್ಲವೇಕೆ?' ಎಂದರೆ 'ಅದು ನಡೆಯುತ್ತಿ-ದ್ದಿತು ಮನೆಯಲ್ಲಿ! ನಿಮ್ಮ ಆಜ್ಞೆಯನ್ನು ಹೇಗೆ ಮೀರಲಿ?' ಎಂದ ಪತ್ತುಪಲೆಯ ವಾಕರಥಿಯ

ಅವತಾರ! ಭಗವಂತನಿಗೆ ತಡೆಯುದಂತಾಯಿತು. 'ಎಲೊ! ನಿಮ್ಮುಳಮೈಸ್ಪಿಂದಾ! ನಡೆವ ಸಂಗತಿ ಎಂದರೆ ನನಗೆ-ನಿಮಗೆ ಸಂಬಂಧಿಸಿದ ವಸ್ತು, ವಿಷಯ. ಆಸ್ಥರ ಸಂಬಂಧ ಅನಕೆಲ್ಲ. ಅದಕಾಗಿ ಹೇಳಕೂಡದು ಅನ್ಯರಿಗೆ!' ಎಂದು ಕಂಠ-ಕೋಷೀಕರಿಸಿದನು. ಸರಿ, ತೂಗಿತು ತಲೆ ಸುಖಿವಂತನದು! ತಾಯಿಯ ಕೂಡ ಬಾವಿಗೆ ಹೋದ. ತಾಯಿ ಜೈತಪ್ಪಿ ಬಾವಿಯಲ್ಲಿ ಬಿದ್ದಳು- ಮನೆಗೆ ಬಂದ ತಂದೆ ತಾಯಿಯಾನ್ನು ಎಂದೇ ಸಪನೆ ಹುಡುಕಿದ. ಕೊನೆಗೆ ಯಾರೋ ಹೇಳಿದರು: 'ಆಕೆ ಬಾವಿ ಬಿದ್ದಳಂತೆ; ನಿಮ್ಮ ಹುಡುಗನೂ ಅಲ್ಲಿಯೆ ಇದ್ದ ದಂತೆ!' ಎಂದು. 'ಅಹುದೊ?' ಎಂದು ಗದ್ದರಿಸಿದ ಭಗವಂತ. 'ಅಹುದು' ಎಂದು ಉತ್ತರಿಸಿದ ಸುಖವಂತ. 'ಆನಾಗಲೆ ಹೇಳಬಾರದಾಗಿತ್ತೆ?' ಎಂದು ಹಲುಬಿದ ತಂದೆ. 'ನಮಗೆ ನಿಮಗೆ ಸಂಬಂಧಿಸಿದ ವಸ್ತು ಅಲ್ಲವೆ ಅದು?' ಎಂದು ಪ್ರಶ್ನಿಸಿದ ಮಗ. 'ನೀನು ಇನ್ನು ನುಂಡೆ ಒಂದನ್ನೂ ಹೇಳಬೇಡ' ಎಂದು ಭಗವಂತನು ಆರ್ಭಟಿಸಿದನು. ಆಂದಿನಿಂದ ಎಲ್ಲವನ್ನೂ ಹೇಳತೊಡಗಿದನು ಸುಖವಂತನು. 'ಹೀಗೆ ಭಗವಂತನ ಬುದ್ಧಿಗೇಡಿತನಕ್ಕಾಗಿ ಸುಖವಂತನು ಸುದ್ದಿಗೇಡಿಯಾದ' ಎಂಬೀ ಕತೆಯನ್ನು ಹೇಳ್ದವರ್ಗೆ ೨ ವರ್ಷ—ಅಲ್ಲ ೬ ವರ್ಷ—ನನು ಎರಡರಿಂದ ಏಳು ವರ್ಷ—ಕ್ಷಮೆ ಇರಲಿ—ಮರೆತಿದ್ದಾನೆ ನುಡಿವಃಂಗರಾಯ.....

ಲೇಖಕ-ಸಂಪಾದಕರ ಪತ್ರವ್ಯವಹಾರ

ಜಯಂತಿಯ ಸಂಪಾದಕರು ಕಾರ್ಯಭಾರವೊಂದನ್ನು ಮುಂಗರಾಯನ ಮೇಲೆ ಹೊರಿಸಿದ್ದಾರೆ. ನಿಜವಾಗಿ ನೋಡಿದರೆ ತಾವೇ ಈ ಕೆಲಸವನ್ನು ನಿರ್ವಹಿಸಿಬಿಡಬೇಕಾಗಿದ್ದಿತು; ಆದರೆ ಈ ಕಾರ್ಯನಿರ್ವಹಣೆಗೆ 'ಮುಂಗತನ' ಸ್ವಲ್ಪ ಬೇಕೆಂದೆನಿಸಿದುದರಿಂದಲೇ ಇರಬಹುದು; ಮುಂಗ ನಾಯಕನಿಗೆ ಒಪ್ಪಿಸಿರುವರು.

'ಜಯಂತಿ' ಕಾರ್ಯಾಲಯದಲ್ಲಿಯೆ ಕಳೆದ ತಿಂಗಳಲ್ಲಿ ಒಂದು ವಿನೋದದ ಸಂಗತಿ ಘಟಿಸಿತಂತೆ. ಸಂಗತಿ ವಿನೋದಕರವಾಗಿದೆಯಾದರೂ ಸಂಪಾದಕರು, ಲೇಖಕರು, ಚಂದಾದಾರರು ಎಲ್ಲರೂ ಒಂದು ಜೊಸಪಾಠವನ್ನು ಕಲಿಯುವಂತಿದೆ. ಅದೇನು ಘಟನೆಯೆಂದು ಆತುರರಾಗೊಳ್ಳಬೇಡಿರಿ; ಸ್ವಲ್ಪ ಸಾವಧಾನದಿಂದ ಎಲ್ಲವನ್ನೂ ಕೇಳಿಕೊಳ್ಳಿರಿ.

ತಾ. ೩–೪–೪೩ನೆಯ ದಿನ, ಜಯಂತಿ ಕಾರ್ಯಾಲಯಕ್ಕೆ ಪ್ರಕಟನೆಗಾಗಿ ಮೂರು ಕವಿತೆಗಳು ಬಂದುವು; ಅವುಗಳ ಜತೆಯಲ್ಲಿಯೆ ಒಂದು ಪತ್ರ! ಸಂದರ್ಭಕ್ಕೆ ಬೇಕಾಗಿರುವ– ಪತ್ರದಲ್ಲಿಯ ಸಂಗತಿ ಹೀಗಿವೆ:

"..... ಮುಂತಾಗಿ ಮೂರು ಕವನಗಳನ್ನು ತಮ್ಮ ಸನ್ನಿಧಿಗೆ ಕಳಿಸಿದ್ದೇನೆ. ತಮ್ಮ ಪತ್ರಿಕೆಗೆ ಲೇಖನಗಳನ್ನು ಕಳುಹಿಸುದು ಇದೇ ಮೊದಲವ್ಯತ್ತಿ. ಈ ಮೊದಲು '.....ಮಿತ್ರ,' ಮಾಸಪತ್ರಿಕೆಗೆ ಕತೆ-ಕವಿತೆಗಳನ್ನೂ 'ಪ್ರಜಾ....' ಪತ್ರಿಕೆಗೆ ನನೆನೂತುಗಳನ್ನೂ ಕಳಿಸಿ, ಸಾಹಿತ್ಯ-ಕ್ಷೇತ್ರದಲ್ಲಿ ಕಾಲಿಟ್ಟಿದ್ದೇನೆ. ಸದ್ಯ ನಾನು ಕಳಿಸಿದ ಕವನಗಳು ಬೇರೆ ಎಲ್ಲಿಯೂ ಪ್ರಕಟವಾಗದಿರಬೇಕು, ಸ್ವಂತ ವಿಚಾರಗಳನ್ನು ಅನುಸರಿಸಿ ಇರುತ್ತವೆ. ನನಗರಿಯುವ ಉಳಿದ ದೋಷಗಳನ್ನು ಮನ್ನಿಸಿ, ತಮ್ಮ ಪತ್ರಿಕೆಯಲ್ಲಿ ನನ್ನ ಕವಿತೆಗಳನ್ನು ಪಯೆಮೊದಿ ಪ್ರಕಟಿಸುವುದಾಗಬೇಕು. ಮತ್ತು ನನ್ನ ಡ ನಾಡು-ನುಡಿಗಳಿಗಾಗಿ ಹೆಣಗಾಡುತ್ತಿರುವ ತಮ್ಮ ಪತ್ರಿಕೆಯ ಚಂದಾದಾರನಾಗಲು ಬಯಸುತ್ತೇನೆ. ಕಾರಣಾ ಬರುವ ಮಾರ್ಚ್ ತಿಂಗಳ ಸಂಚಿಕೆಯನ್ನು ವ್ಹಿ. ಪಿ. ಯಿಂದ ಕಳಿಸಬೇಕು. ಅದನ್ನು ನಾನು ಸಾರ್ಷಿಕ ಚಂದಾಹಣವನ್ನು ಕೊಟ್ಟು ಅವಶ್ಯವಾಗಿ ಸ್ವೀಕರಿಸುತ್ತೇನೆ....."

ಬಂದ ಕವಿತೆಗಳು ತೀರ ಪ್ರಾಥಮಿಕ ಪ್ರಯತ್ನಗಳಾದುದರಿಂದ, ಸಂಪಾದಕರು ಪದ್ಧತಿಯಂತೆ ಕೆಲವೊಂದು ಉಪದೇಶದ ನೂತುಗಳೊಂದಿಗೆ–ಕವನಗಳು ಪ್ರಕಟನೆಗೆ ತಕ್ಕವುಗಳಾಗಿಲ್ಲವೆಂದು ತಿಳುಹಿದರಂತೆ. ಅಲ್ಲದೆ 'ತಮ್ಮ ಬೇಡಿಕೆಯಂತೆ ಮಾರ್ಚ್ ಸಂಚಿಕೆಯನ್ನು ವ್ಹಿ. ಪಿ. ಯಿಂದ ಕಳುಹಲಾಗುವುದು' ಎಂಬ ನೂತನ್ನೂ ಕಾಗದದಲ್ಲಿ ಕಾಣಿಸಿದ್ದರಂತೆ ಈ ಕಾಗದ ಲೇಖಕರ ಕೈಗೆ ಸಿಕ್ಕದಿರುವ ಮೊದಲೇ ಅವರು ತಾ. ೧೧–೩–೪೩ನೆಯ ದಿನ ಬರೆದ ಇನ್ನೊಂದು ಕಾಗದವೂ ಬಂದುಬಿಟ್ಟಿತು. ಆದರಲ್ಲಿರುವ ಸಂಗತಿಯಿದು:

"ಮೊನ್ನೆ ನಾನು ಕಳಿಸಿದ ಕವರು ತಲುಪಿ ಕವನಗಳು ಕೈಸೇರಿದುವೆ? ಚಂದಾದಾರನಾಗಬೇಕೆಂಬನನ್ನ ಅಭಿಲಾಷೆಯು ಅವಗತವಾಯಿತೆ? ಈ ಬಗ್ಗೆ ಅಭಿಪ್ರಾಯವೇನೆಂಬುದನ್ನು ಪುರುಟಪಾಲಿಗೇ ದಯವೊಡಿ ತಿಳಿಸಬೇಕು....."

ಸಂಪಾದಕರು ಬರೆದ ಕಾಗದ ತಲ್ಪಿದ ಮೇಲೆ ತಾ. ೧೪–೩–೪೩ನೆಯ ದಿನ, ಆ ಲೇಖಕರಿಂದ ಇನ್ನೊಂದು ಕಾಗದ ಹೀಗೆ ಬಂದಿತು:

"ತಾ. ೧೨–೩–೪೩ರ ತಮ್ಮ ಕಾರ್ಡು ತಲ್ಪಿತು. ಮನಸ್ಸು ಆನಂದಸಾಗರದಲ್ಲಿ ತೇಲಾಡುತ್ತಿರುವಾಗಲೇ ತಮ್ಮ ಹಿತೋಪದೇಶದ—ವಿಷಾದದ–ತೆರೆ ತಾಕಿ ನನ್ನನ್ನು ದಂಡೆಗೆ ನೂಕಿತು. ಆಡ್ಡಿಯಿಲ್ಲ, ನಾನೇನೋ ತಮ್ಮ ಪತ್ರಿಕೆಗೆ ಚಂದಾದಾರನಾಗಬೇಕೆಂದಿದ್ದೆ; ಆದರೆ ಸುತ್ತಲಿನ ವಾತಾವರಣವು ದಿನದಿನಕ್ಕೆ ಭೀಕರವಾಗತೊಡಗಿದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಜೀವಿಸಿ ಉಳಿಯುವುದೇ ಹೆಚ್ಚಿನದಾಗಿದೆ. ಆದ್ದರಿಂದ ಮಾರ್ಚ್ ತಿಂಗಳ ಸಂಚಿಕೆಯನ್ನು ವಾರ್ಷಿಕ ಚಂದಾಪೆಣ ಕೊಟ್ಟು ಸ್ವೀಕರಿಸಲು ನಾನು ಅಶಕ್ಯನಾಗಿದ್ದೇನೆ. ....ತಮ್ಮ ಕಡೆಗೆ ಕಳಿಸಿದ ಕವನಗಳಲ್ಲಿ ೧ನೆಯ ವನ್ನು ''ಪ್ರಾರ್ಥಮಿಕ..''ಕ್ಕೆ ಕಳಿಸಿದ್ದೆ. ಅವರು ಆದನ್ನು ಚೆನ್ನಾಗಿ ಹೊಗಳಿ ಅನಿವಾರ್ಯವಾಗಿ ತಿರುಗಿ ಕಳಿಸಿದರು. ೨ನೆಯ ಕವನವನ್ನು ''ಶಿಕ್ಷಕ....''ಕ್ಕೆ ಕಳಿಸಿದ್ದೆ. ಅವರು ಸವಡಾನುಸಾರ ಪ್ರಕಟಿಸುವೆವೆಂದು ತಿಳಿಸಿದರು. ೩ನೆಯ ಕವನವನ್ನು ''ಜ....ಟಕ''ಕ್ಕೆ ಕಳಿಸಿದ್ದೆ. ಅವರು ಚಂದಾದಾರರಾದರೆ ಪ್ರಕಟಿಸುವೆವೆಂದು ತಿಳಿಸಿದರು. ಒಟ್ಟಿನ ಮೇಲೆ ಮೂರೂ ಪತ್ರಿಕೆಗಳ ಇಚ್ಛೆ ನಾನು ಚಂದಾದಾರನಾಗಬೇಕೆಂದೇ ಇತ್ತು. ಆ ಮೂರೂ ಪತ್ರಿಕೆಗಳು ನನ್ನ ಊರಲ್ಲಿ ಬರುತ್ತವೆ. ತಮ್ಮ ಪತ್ರಿಕೆಯನ್ನು ತರಿಸಬೇಕೆಂದು ಇಚ್ಛಿಸಿದರೆ ನೀವು ನನ್ನ ಕವನಗಳನ್ನು ಪ್ರಕಟಿಸೆ ಮಾಡಲಿಲ್ಲ!....."

ಎಲ್ಲ ವ್ಯವಹಾರಗಳನ್ನೂ ಓದಿನೋಡಿ, ವಿಚಾರಮಾಡಿ, ಮುಂಗರಾಯ ತೆಗೆದ ಸುದ್ದಿಗಳು ಇವು:

೧. ಜಯಂತಿ ಸಂಪಾದಕರಿಗೆ ವ್ಯವಹಾರಜ್ಞಾನ ಕಡಿಮೆ; ಆದುದರಿಂದಲೆ ಅವರ ಪತ್ರಿಕೆಗೆ ಚಂದಾದಾರರೂ ಕಡಿಮೆ.

೨. ಯಾವುದೇ ತಿಂಗಳ ೭ನೆಯ ತಾರೀಖಿನ ದಿನ ಇರುವ ಒಳ್ಳೆಯ ಪರಿಸ್ಥಿತಿಯು, ಕೆಲವೊಂದು 'ಮಹತ್ವದ' ಕಾರಣದಿಂದ, ಅದೇ ತಿಂಗಳ ೧೪ನೆಯ ತಾರೀಖಿಗೇ ಭೀಕರ ಬರಗಾಲವನ್ನು ತಂದೊಡ್ಡಬಲ್ಲದು.

೩. ತಾವು ಬರೆದ ಲೇಖನ ಪ್ರಕಟವಾಗಬೇಕೆಂಬ ಆತುರವಿದ್ದವರಿಗೆ, ಉಪದೇಶದ ಅಮೃತ ವಿಷದ ಕಡಲಾಗಿ ಪರಿಣಮಿಸುವುದು!

೪. ಚಂದಾದಾರನಾದರೆ, ಎಂತಹ ಲೇಖನ-ಕವನಗಳನ್ನಾ ಪ್ರಕಟಿಸುವೆವೆಂದು ಆಶ್ವಾಸನ ಕೊಡುವ ಸುಪ್ರಸಿದ್ಧ ಸಂಪಾದಕರೂ ಕನ್ನಡ ನಾಡಿನಲ್ಲಿ ಉಂಟು.

ಮುಂಗರಾಯನ ಈ ಮುದ್ದೆಗಳಿಂದ ಬುದ್ಧಿ ಕಲಿಯಬೇಕಾದವರು ಯಾರಾದರೂ ಇದ್ದರೆ ಅವಶ್ಯವಾಗಿ ಕಲಿಯಲಿ!

ಸಕ್ಕರೆಯ ★ ವ್ಯವಸಾಯ

ಶ್ರೀ. ಎಂ. ಪಿ. ರವಿಕೀರ್ತಿ ಸೆಟ್ಟಿ, ಮೂಡಬಿದ್ರಿ

★

ಪ್ರಾಂತಿಕ ಸರಕಾರಗಳು ಕಬ್ಬಿನ ಬೆಲೆಯನ್ನು ಮಣಕ್ಕೆ ಎಂಟು ಆಣೆಯೆಂದು ನಿಯಂತ್ರಣ ಗೊಳಿಸಿದುವು. ಭಾರತ ಸರಕಾರವು ಸಕ್ಕರೆಯ ದರಕ್ಕೆ ನಿಯಂತ್ರಣವನ್ನು ಹಾಕಿತು. ಬೆಲ್ಲದ ದರಕ್ಕೆ ಯಾವ ನಿಯಂತ್ರಣವೂ ಇರದುದರಿಂದ, ರೈತರು ತಮ್ಮ ಕಬ್ಬನ್ನು ಮಿಲ್ಲುಗಳಿಗೆ ಕೊಡದೆ ಬೆಲ್ಲವನ್ನು ಮಾಡತೊಡಗಿದರು.

★

ಯುದ್ಧದಿಂದಾಗಿ ನಮ್ಮ ದೇಶದಲ್ಲಿ ಕೆಲವು ಹೊಸ ಸಮಸ್ಯೆಗಳು ತಲೆದೋರಿರುವುವು. ಅವುಗಳಲ್ಲಿಯ ಮಹತ್ವಪೂರ್ಣವಾದುದೆಂದರೆ ಸಕ್ಕರೆಯ ವ್ಯವಸಾಯಕ್ಕೆ ಸಂಬಂಧಿಸಿದುದೂ ಒಂದು. ಭಾರತದ ಸಕ್ಕರೆ ವ್ಯವಸಾಯಸಂಘದ ಉಪಮಂತ್ರಿ ಶ್ರೀ. ಲಾಲಚಂದ ಹೀರಾಚಂದಜಿಯವರು ಸರಕಾರದೊಡನೆ ಮಾತುಕತೆ ನಡೆಯಿಸದೆ ಇರುತ್ತಿದ್ದಲ್ಲಿ, ಇಷ್ಟರಲ್ಲಿಯೆ ಸಕ್ಕರೆಯ ಪರಿಸ್ಥಿತಿಯು ಬಹಳ ಶೋಚನೀಯವಾಗುತ್ತಿತ್ತು. ಭಾರತಸರಕಾರದ ಸಕ್ಕರೆಯ ಸಂಬಂಧದ ನೀತಿಯಿಂದಾಗಿ, ಸಕ್ಕರೆಯನ್ನು ಪಡೆಯುವುದಕ್ಕೆ ಜನರಿಗೆ ತುಂಬ ತೊಂದರೆಯಾಗಿರುವುದಲ್ಲದೆ, ಸಕ್ಕರೆಯ ಕ್ರಯವು ಒಂದಕ್ಕೆ ಅರುಪಾಲು ಏರಿರುತ್ತದೆ. ಕೆಲವು ದಿನಗಳ ಹಿಂದೆ, ಒಂದು ವಾರದ ವರೆಗೆ ಮುಂಬೈ ಪ್ರಾಂತ್ಯದಲ್ಲಿ ಸಕ್ಕರೆಯೇ ಸಿಕ್ಕುತ್ತಿದ್ದಿಲ್ಲ. ಅಕ್ಟೋಬರ್ ತಿಂಗಳಲ್ಲಿ, ಸಕ್ಕರೆಯ ವ್ಯವಸಾಯದಲ್ಲಿ ಮುಖ್ಯ ರಾಜಧಾನಿಯಾದ **ಕಾನಪುರದಲ್ಲಿಯೆ** ಸಕ್ಕರೆ ಸಿಕ್ಕುತ್ತಿರಲಿಲ್ಲ. ಕಳೆದ ಮಹಾಯುದ್ಧದಲ್ಲಿ ಇಂತಹ ಪರಿಸ್ಥಿತಿಯು ಉಂಟಾಗಿರಲಿಲ್ಲ. ಬೆಲೆಯು ಮಾತ್ರ ಹೆಚ್ಚಿತ್ತು; ಆದರೆ ವಸ್ತುಗಳ ಅಭಾವವಿರಲಿಲ್ಲ. ಪೇಟೆಯಲ್ಲಿ ವಸ್ತುಗಳೇ ಸಿಕ್ಕುವುದಿಲ್ಲವೆಂಬಂತಾಗಿರಲಿಲ್ಲ. ಈಗಲೊ, ದೊಡ್ಡ ದೊಡ್ಡ ಪೇಟೆಗಳಲ್ಲಿ, ಸರಕಾರದ ನಿಯಂತ್ರಣದಲ್ಲಿ, ಕೆಲವೇ ಕೆಲವು ಅಂಗಡಿಗಳಲ್ಲಿ ಮಾತ್ರ ಸಕ್ಕರೆ ಸಿಕ್ಕುತ್ತದೆ. ಅಲ್ಲಿಯೂ ಅಂಗಡಿ ತೆರೆಯುವ ಮೊದಲೇ ಸಾವಿರಾರು ಜನರು ಒಟ್ಟುಗೂಡಿರುತ್ತಾರೆ. ಆದುದರಿಂದ ಅಲ್ಲಿ ಕುಸ್ತಿಯಾಟವನ್ನೇ ನಡೆಯಿಸಬೇಕಾಗುವುದು. ಒಬ್ಬ ಸಭ್ಯಮನುಷ್ಯನಿಗೆ ಅಲ್ಲಿ ಸಕ್ಕರೆಯನ್ನು ತೆಗೆದುಕೊಳ್ಳುವುದೆಂದರೆ ಬಹಳ ಕಷ್ಟದ ಸಂಗತಿಯಾಗಿರುವುದು.

ಕ್ರಿ. ಶ. ೧೯೩೧-೩೨ ರ ವರೆಗೆ ಭಾರತವು ಸಕ್ಕರೆಯ ವ್ಯವಸಾದುವಲ್ಲಿ ವಿದೇಶವನ್ನೇ ಅವಲಂಬಿಸಿಕೊಂಡಿತ್ತು. ಪರಂತು ಆ ವರ್ಷದಿಂದ ಭಾರತ ಸರಕಾರವು, ಹಿಂದುಸ್ತಾನದ ಸಕ್ಕರೆ ವ್ಯವಸಾಯವನ್ನು ಸಂರಕ್ಷಿಸುವುದಾಗಿ ನಿಶ್ಚಯಿಸಿತು. ಇದರಿಂದಾಗಿ ಏಳೆಂಟು ವರ್ಷಗಳೊಳಗೆಯೆ ಭಾರತವು, ಸಕ್ಕರೆಯ ಸಂಬಂಧದಲ್ಲಿ ಕೇವಲ ಸ್ವಾವಲಂಬಿಯಾಯಿತಷ್ಟೇ ಅಲ್ಲ; ಪ್ರಪಂಚದ ಎಲ್ಲಾ ರಾಷ್ಟ್ರಗಳಿಗಿಂತಲೂ ಹೆಚ್ಚಾಗಿ ಸಕ್ಕರೆಯನ್ನುಂಟುಮಾಡುವ ದೇಶವೆನಿಸಿಕೊಂಡಿತು. ಎಂದರೆ ಸಕ್ಕರೆಯ ವಾರ್ಷಿಕ ಉತ್ಪತ್ತಿಯು ಹೆಚ್ಚು ಕಮ್ಮಿ ಹದಿನೈದು ಲಕ್ಷ ಟನ್ನಿನ ವರೆಗೆ ಹೋಯಿತು.

ಭಾರತದಲ್ಲಿ ವರ್ತಮಾನ ಯುದ್ಧಕ್ಕಿಂತ ಮೊದಲು, ಸಕ್ಕರೆಯ ವ್ಯವಸಾಯದ ವಿಕಾಸಸ್ಥಿತಿ ಹೇಗಿತ್ತೆಂಬುದನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು:

ಭಾರತದಲ್ಲಿನ ಸಕ್ಕರೆಯ ಕಾರಖಾನೆಗಳ ಸಂಖ್ಯೆ

ಪ್ರಾಂತ	೧೯೨೦-೨೧	೨೧-೨೨	೨೨-೨೩	೨೩-೨೪	೨೪-೨೫	೨೫-೨೬	೨೬-೨೭	೨೭-೨೮	೨೮-೨೯	೨೯-೩೦	೩೦-೩೧	೩೧-೩೨
ಸಂಯುಕ್ತ ಪ್ರಾಂತ್ಯ	೨೨	೨೨	೨೨	೨೨	೨೨	೨೨	೨೨	೨೨	೨೨	೨೨	೨೨	೨೨
ಬಿಹಾರ	೧೦	೧೦	೧೦	೧೦	೧೦	೧೦	೧೦	೧೦	೧೦	೧೦	೧೦	೧೦
ಪಂಜಾಬ	೧	೧	೧	೧	೧	೧	೧	೧	೧	೧	೧	೧
ಸಂಯುಕ್ತ ಪ್ರಾಂತ್ಯ-ಬಿಹಾರ-ಪಂಜಾಬ	೩೩	೩೩	೩೩	೩೩	೩೩	೩೩	೩೩	೩೩	೩೩	೩೩	೩೩	೩೩
ನಿಜಾಮ	೨	೨	೨	೨	೨	೨	೨	೨	೨	೨	೨	೨
ಮುಂಬೈ	೧೫	೧೫	೧೫	೧೫	೧೫	೧೫	೧೫	೧೫	೧೫	೧೫	೧೫	೧೫
ಬಂಗಾಲ	೧೦	೧೦	೧೦	೧೦	೧೦	೧೦	೧೦	೧೦	೧೦	೧೦	೧೦	೧೦
ಮದರಾಸ	೧೦	೧೦	೧೦	೧೦	೧೦	೧೦	೧೦	೧೦	೧೦	೧೦	೧೦	೧೦
ಮೈಸೂರು	೪	೪	೪	೪	೪	೪	೪	೪	೪	೪	೪	೪
ಒಟ್ಟು	೧೨೯	೧೨೯	೧೨೯	೧೨೯	೧೨೯	೧೨೯	೧೨೯	೧೨೯	೧೨೯	೧೨೯	೧೨೯	೧೨೯

ಬೆಲ್ಲದ ಉತ್ಪತ್ತಿ.

ಕಳೆದ ಕೆಲವು ವರ್ಷಗಳಲ್ಲಿ ಬೆಲ್ಲದ ವಾರ್ಷಿಕ ಉತ್ಪತ್ತಿ ೨೬, ೫೮, ೦೦೦ ಟನ್ನಿನಿಂದ ಮೊದಲ್ಗೊಂಡು ೪೨, ೬೮, ೦೦೦ ಟನ್ನಿನ ವರೆಗೆ ಆಗಿದೆ. ಸಕ್ಕರೆಯ ಉತ್ಪತ್ತಿ ೮, ೦೦, ೦೦೦ ಟನ್ ಮತ್ತು ೧೬, ೦೦, ೦೦೦, ಟನ್ನಿನ ಒಳಗೆ ಆಗಿದೆ. ಭಾರತದಲ್ಲಿ ಸರಾಸರಿ ಪ್ರತಿ ವ್ಯಕ್ತಿಯು ಒಂದು ವರ್ಷದಲ್ಲಿ ಇಪ್ಪತ್ತೈದು ನಾಲ್ಕುಪೌಂಡು ಬೆಲ್ಲ ತಿನ್ನುತ್ತಾನೆ. ಸಕ್ಕರೆಯನ್ನು ಕೇವಲ ವರ್ಷದಲ್ಲಿ ಆರೇಳು ಪೌಂಡಿನಷ್ಟು ಪೆಚ್ಚ ಮಾಡುತ್ತಾನೆ. ಅನ್ಯದೇಶದ ದೃಷ್ಟಿಯಿಂದ ನಮ್ಮಲ್ಲಿ ಸಕ್ಕರೆಯ ಪೆಚ್ಚ ಕಡಿಮೆಯಾಗಿದೆ. ಇದನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ಪ್ರತಿ ವ್ಯಕ್ತಿಗೆ ಒಂದು ವರ್ಷದಲ್ಲಿ

ಅಮೇರಿಕೆ	೧೦೩	ಪೌಂಡು.
ಬ್ರಿಟನ್	೧೧೨	,,
ಜಾವಾ	೧೧೧	,,
ಡೇನ್ಮಾರ್ಕ್	೧೨೮,	,,
ಮಿಸ್ರ	೨೦	,,
ಜಪಾನ್	೨೯	,,
ಆಸ್ಟ್ರೇಲಿಯಾ	೧೧೪,	,,
ನ್ಯೂಜಿಲೇಂಡ್	೧೧೫,	,,
ಹಿಂದುಸ್ತಾನ	೨೪	,,

ಇದರಲ್ಲಿ ಬೆಲ್ಲವೂ ಸೇರಿರುತ್ತದೆ.

ಸನ್ ೧೯೩೬–೩೭ ರಲ್ಲಿ ಮೊದಲನೆಯ ಸಲ ಭಾರತದಲ್ಲಿ ಸಕ್ಕರೆಯ ಉತ್ಪತ್ತಿಯು ದೇಶದ ತಾತ್ಕಾಲಿಕ ಆವಶ್ಯಕತೆಗಿಂತ ಹೆಚ್ಚಿಗೆ ಆಯಿತು. ಆದುದರಿಂದಲೇ ಪೆಚ್ಚು ಕಡಿಮೆ ೨ ಲಕ್ಷ ಟನ್ ಸಕ್ಕರೆ ಉಳಿಯಿತು. ಆನಂತರ ಕಬ್ಬಿನ ಬೆಳೆ ಹಾಳಾದ್ದರಿಂದಲೂ, ಕಬ್ಬನ್ನು ಸ್ವಲ್ಪ ಪ್ರಮಾಣದಲ್ಲಿ ಬೆಳೆಯಿಸಿದ್ದರಿಂದಲೂ ಸಕ್ಕರೆಯ ಉತ್ಪತ್ತಿ ಬಹಳ ಕಡಿಮೆಯಾಯಿತು. ಇದರಿಂದಾಗಿ ೧೯೩೮–೩೯ ರಲ್ಲಿ ಸಕ್ಕರೆಯ ಕೊರತೆಯನ್ನು ತುಂಬುವುದಕ್ಕಾಗಿ ೩ ಲಕ್ಷ ಟನ್ ಸಕ್ಕರೆಯನ್ನು ಹೊರಗಿನಿಂದ ತರಿಸಲಾಯಿತು. ಸನ್ ೧೯೩೯–೪೦ರಲ್ಲಿ ಸಕ್ಕರೆಯ ಉತ್ಪತ್ತಿಯು ಮತ್ತೆ ಹೆಚ್ಚುಕಡಿಮೆ ೧೩ ಲಕ್ಷ ಟನ್ನಿನ ವರೆಗೆ ಹೋಯಿತು. ಇದರಿಂದಾಗಿ ಆ ವರ್ಷದ ಆವಶ್ಯಕತೆಯ ಸಕ್ಕರೆ ಪೆಚ್ಚವಾಗಿ ೧೯೪೦–೪೧ ಕ್ಕೆ ಸುಮಾರು ನಾಲ್ಕು ಲಕ್ಷ ಟನ್ ಸಕ್ಕರೆ ಉಳಿಯಿತು.

ಸನ್ ೧೯೩೭ ರಲ್ಲಿ, ಮೊದಲನೆಯಸಲ ಭಾರತದಿಂದ ಸಕ್ಕರೆಯು ನಿರ್ಯಾತ ಮಾಡುವ ಆವಶ್ಯಕತೆ ಉಂಟಾಯಿತು. ಇಲ್ಲಿ ಪೆಚ್ಚವಾಗಿ ಉಳಿದ ಸಕ್ಕರೆಯ ಸಂಗ್ರಹವನ್ನು ವ್ಯವಸಾಯಿಗಳು ಹೊರಕ್ಕೆ ಕಳುಹಿಸುವುದಕ್ಕಾಗಿ ಪರದೇಶಗಳನ್ನು ಹುಡುಕುವ ಆಲೋಚನೆಯಲ್ಲಿ ತೊಡಗಿದರು. ಆದರೆ ೧೯೩೬ ರ ಆಂತರ–

ಭಾರತದಲ್ಲಿ ಒಟ್ಟು ಎಷ್ಟು ಭೂಮಿಯಲ್ಲಿ ಕಬ್ಬು ಬೆಳೆಯಲ್ಪಡುತ್ತದೆ? ಕಬ್ಬು ಎಷ್ಟು ಬೆಳೆಯುತ್ತದೆ? ಬೆಲ್ಲ ಎಷ್ಟು ತಯಾರಾಗುತ್ತದೆ? ಎಂಬುದನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ವರುಷ	ಒಟ್ಟು ಭೂಮಿ	ಪ್ರತಿ ಗಡ್ಡೆಯಲ್ಲಿ ಆಗುವ ಕಬ್ಬು ಟನ್	ಬೆಲ್ಲದ ಒಟ್ಟು ಉತ್ಪತ್ತಿ (ಟನ್)	ಒಟ್ಟು ತಯಾರಾಗುವ ಕಬ್ಬು ಟನ್
೧೯೩೦–೩೧	೯೯,೦೫,೦೦೦	೧೨.೩	೩೫,೫೭,೦೦೦	೩,೫೭,೮೦,೦೦೦
೧೯೩೧–೩೨	೩೦,೭೬,೦೦೦	೧೪.೧	೪೧,೧೬,೦೦೦	೪,೭೬,೧೬,೦೦೦
೧೯೩೨–೩೩	೩೪,೨೫,೦೦೦	೧೨.೯	೪೪,೬೯,೦೦೦	೫,೧೧,೬೯,೦೦೦
೧೯೩೩–೩೪	೩೪,೨೨,೦೦೦	೧೨.೩	೪೦,೨೩,೦೦೦	೪,೦೨,೩೦,೦೦೦
೧೯೩೪–೩೫	೩೬,೦೨,೦೦೦	೧೨.೩	೪೬,೦೨,೦೦೦	೪,೬೦,೨೦,೦೦೦
೧೯೩೫–೩೬	೩೬,೫೦,೦೦೦	೧೨.೩	೪೬,೫೦,೦೦೦	೪,೬೫,೦೦,೦೦೦
೧೯೩೬–೩೭	೩೬,೫೦,೦೦೦	೧೨.೩	೪೬,೫೦,೦೦೦	೪,೬೫,೦೦,೦೦೦
೧೯೩೭–೩೮	೩೬,೫೦,೦೦೦	೧೨.೩	೪೬,೫೦,೦೦೦	೪,೬೫,೦೦,೦೦೦
೧೯೩೮–೩೯	೩೬,೫೦,೦೦೦	೧೨.೩	೪೬,೫೦,೦೦೦	೪,೬೫,೦೦,೦೦೦
೧೯೩೯–೪೦	೩೬,೫೦,೦೦೦	೧೨.೩	೪೬,೫೦,೦೦೦	೪,೬೫,೦೦,೦೦೦

ಉಳಿದುಬಂದ ಪಟ್ಟು ಎಷ್ಟೆಂಬುದನ್ನು ವಿವೇಚನೆಗಾಗಿ ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರದ ಬೇಸಾಯಗಾರರ ಸಂಖ್ಯೆ ಅಪ್ಪೋಣಗನಾಗಿದೆ. ಭಾರತದಲ್ಲಿ ಕಲ್ಲಿನಸಕ್ಕರೆ, ಹುಡಿಸಕ್ಕರೆಯೇ ಹೊಡಲಾಡುವುದು ಒಟ್ಟು ನಿಜ್ಜ ಟನ್ ತಯಾರಾಗುತ್ತದೆಯೆಂಬುದನ್ನು ಕೆಳಗೆ ಸೂಚಿಸಲಾಗಿರುವುದು.

ವರುಷ	ಸಕ್ಕರೆ ಕಾರಖಾನೆ ಸಂಖ್ಯೆ	ಕಾರಖಾನೆಯಲ್ಲಿ ತಯಾರಾಗುವ ಸಕ್ಕರೆ	ಬೆಲ್ಲದಿಂದ ತಯಾರಾಗುವುದು	ಕಲ್ಲುಸಕ್ಕರೆ	ಒಟ್ಟು ಉತ್ಪತ್ತಿ
೧೯೩೦–೩೧	೩೨	೧,೫೫,೫೦೦	೬೯,೦೦೦	೫೦,೦೦೦	೨,೭೪,೫೦೦
೧೯೩೧–೩೨	೫೭	೨೯೦,೧೭೭	೮೧,೧೧೫	೨,೦೦೦	೩,೭೦,೨೭೭
೧೯೩೨–೩೩	೧೧೨	೪,೫೨,೬೫೦	೭೬,೧೧೫	೨,೦೦೦	೪,೭೦,೭೬೫
೧೯೩೩–೩೪	೧೩೦	೫,೩೫,೧೦೦	೫೬,೦೦೨	೨,೦೦೦	೫,೯೩,೧೦೨
೧೯೩೪–೩೫	೧೩೭	೧೧,೧೬,೪೦೦	೧೯,೪೦೦	೧೦,೦೦೦	೧೧,೬೫,೯೦೦
೧೯೩೫–೩೬	೧೩೭	೬,೫೦,೨೦೦	೧೫,೨೦೦	೧೦,೦೦೦	೬,೭೫,೩೦೦
೧೯೩೬–೩೭	೧೩೯	೬,೫೧,೪೦೦	೧೫,೨೦೦	೧೦,೦೦೦	೬,೭೬,೬೦೦
೧೯೩೭–೩೮	೧೪೩	೧೨,೪೧,೨೦೦	೨೧,೨೦೦	೧೦,೦೬೦	೧೨,೭೩,೪೦೦
೧೯೩೮–೩೯	೧೪೩	೬,೫೦,೦೦೦	೨೦,೦೦೦	೨,೦೦,೦೦೦	೮,೭೦,೦೦೦
೧೯೩೯–೪೦	೧೪೩	೬,೫೦,೦೦೦	೨೦,೦೦೦	೨,೦೦,೦೦೦	೮,೭೦,೦೦೦

ರಾಷ್ಟ್ರೀಯ ಕಾನೂನು, ಅದರ ಮಾರ್ಗದಲ್ಲಿ ಬಾಧಕವಾಗಿತ್ತು. ಇದರಿಂದಾಗಿ ಐದುವರ್ಷದ ವರೆಗೆ ಅರ್ಥಾತ್ ೧೯೪೨ ರ ಕೊನೆಯ ವರೆಗೆ ಸಕ್ಕರೆಯ ನಿರ್ಯಾತವನ್ನು ಮಾಡಲಾಗುತ್ತಿರಲಿಲ್ಲ. ಸನ್ ೧೯೩೯ ರ ಸಪ್ಟೆಂಬರ್‌ನಲ್ಲಿ ಯುರೋಪಿನ ಯುದ್ಧ ಪ್ರಾರಂಭವಾಯಿತು. ಅದರ ಫಲಸ್ವರೂಪವಾಗಿ ಬೇರೆ ಬೇರೆ ರಾಷ್ಟ್ರಗಳಲ್ಲಿ ಸಕ್ಕರೆಯ ಆಯಾತ— ನಿರ್ಯಾತ ಮುಚ್ಚಲ್ಪಟ್ಟಿತು. ಬ್ರಿಟಿನಿನಲ್ಲಿ ಸಕ್ಕರೆ ಕಡಿಮೆಯಾಯಿತು. ಒಂದು ಕಡೆ ಹಿಂದುಸ್ತಾನದ ಮಿಲ್ಲುಗಳಲ್ಲಿ ಸಕ್ಕರೆಯ ಸಂಗ್ರಹ ತುಂಬಿಕೊಂಡಿತ್ತು; ಇನ್ನೊಂದೆಡೆ ಇಂಗ್ಲೆಂಡಿನಂತಹ ದೇಶಗಳಲ್ಲಿ ಸಕ್ಕರೆಯ ಅಭಾವ ಹೆಚ್ಚಾಗಲಾರಂಭಿಸಿತ್ತು. ಇದರಿಂದಾಗಿ ಇಂಗ್ಲೆಂಡು ಆಂತರರಾಷ್ಟ್ರೀಯ ಕಾನೂನನ್ನು ತೆಗೆದುಹಾಕಿ, ಭಾರತದಿಂದ ಒಂದು ಲಕ್ಷ ಟನ್ ಸಕ್ಕರೆಯನ್ನು ಕೇಳಲಾರಂಭಿಸಿತು. ಆದರೆ ಬ್ರಿಟಿಶ್ ಸರಕಾರವು ಭಾರತದ ಸಕ್ಕರೆಯನ್ನು ಬಹಳ ಕಡಿಮೆಯ ದರದಲ್ಲಿ ಕೇಳಿದುದರಿಂದ, ವ್ಯವಸಾಯಿಗಳು ತಮ್ಮ ಸಕ್ಕರೆಯನ್ನು ಮಾರಲು ಒಪ್ಪಲಿಲ್ಲ. ಆದುದರಿಂದ ಇಲ್ಲಿಯ ಸಕ್ಕರೆ ವಿದೇಶಗಳಿಗೆ ಹೋಗದೆ ಇಲ್ಲಿಯೆ ಉಳಿಯಿತು.

ವರ್ತಮಾನ ಸ್ಥಿತಿಯ ಕಾರಣ

ಸನ್ ೧೯೪೦ ರಲ್ಲಿ ಸಂಯುಕ್ತಪ್ರಾಂತ್ಯ ಮತ್ತು ಬಿಹಾರಗಳಲ್ಲಿ ಕಬ್ಬಿನ ಬೆಳೆ ಬಹಳ ಹೆಚ್ಚಾಯಿತು. ಇದರಿಂದಾಗಿ ಮಿಲ್ಲಿನಲ್ಲಿ ಸಕ್ಕರೆಯಾಗಿಯೂ ಪುನಃ ಕಬ್ಬು ಉಳಿಯಿತು. ಕಬ್ಬಿನ ಕ್ರಯವು ಬಹಳ ಕಡಿಮೆಯಾಯಿತು. ಒಂದು ಕಡೆ ಈ ಸ್ಥಿತಿಯಾದರೆ ಇನ್ನೊಂದು ಕಡೆ ಯುದ್ಧದಿಂದಾಗಿ ಮಿಲ್ಲಿನ ದರವು ಹೆಚ್ಚಾಗಲಾರಂಭಿಸಿತು. ಅದರ ಪರಿಣಾಮವಾಗಿ ೧೯೪೧ ರಲ್ಲಿ ಜೇಸಾಯಗಾರರು ಕಬ್ಬನ್ನು ಬಹಳ ಕಡಿಮೆಯಾಗಿ ಜೆಳೆಸಿದರು. ೧೯೪೦ ನೆಯ ಇಸ್ವಿಗಿಂತ ೧೯೪೧ ರ ಪರಿಸ್ಥಿತಿ ಬಹಳ ವಿಪರೀತವಾಯಿತು. ಕಬ್ಬು ಸರಿಯಾಗಿ ಸಿಕ್ಕದಿರುವುದರಿಂದ ಮಿಲ್ಲುಗಳು ಇಪ್ಪತ್ತು ಮೂವತ್ತು ದಿನ ನಡೆದು ಮುಚ್ಚಲ್ಪಟ್ಟುವು. ಕಬ್ಬಿನ ಕ್ರಯವು ಮಣವೊಂದಕ್ಕೆ ಪದಿಮೂರಾಣೆಯ ವರೆಗೆ ಏರಿತು. ಆದರೂ ಗದ್ದೆಯಲ್ಲಿ ಕಬ್ಬಿರಲಿಲ್ಲ. ಆದುದರಿಂದ

(೪೪೬ ನೆಯ ಪುಟದಿಂದ ಮುಂದುವರಿದುದು)

ಯುವರ ಬಣ್ಣದಂತಿಲ್ಲ. ಭಾರತೀಯರು ಅಮೇರಿಕನರ ಜಾತಿ-ಕುಲ-ಧರ್ಮಗಳಿಗೆ ಸೇರಿದವರಲ್ಲ. ಭಾರತೀಯರು ಬಡವರು, ಅಮೇರಿಕನರು ಶ್ರೀಮಂತರು. ಇವರು ಪರಾಧೀನರು, ಅವರು ಸ್ವತಂತ್ರರು. ಸಮಾನಶೀಲರಲ್ಲಿ ಮಾತ್ರ ಸಖ್ಯ ಬೆಳೆಸಿಕೊಳ್ಳುವುದೆಂಬುದು ಹಿರಿಯರಿಂದ ಬಂದ ಮಾತು. ಭಾರತೀಯರ ಮತ್ತು ಅಮೇರಿಕನರ ಶೀಲವಲ್ಲಿ ಸ್ವಲ್ಪವೂ ಸಾಮ್ಯವಿಲ್ಲ. ನಮ್ಮನ್ನಾಳುವ ಬ್ರಿಟಿಷರು ಮತ್ತು ಅಮೇರಿಕನರ ಶೀಲ-ವ್ಯಸನಗಳು ಸಂಪೂರ್ಣ ಸಮಾನಭಾವದಿಂದ ಕೂಡಿದುವಾಗಿವೆ. ಆದುದರಿಂದ ಅವರವರಲ್ಲಿಯೆ ಸಖ್ಯ ಬೆಳೆಯುವುದು ಸ್ವಾಭಾವಿಕವಾಗಿದೆ. ಈ ದೃಷ್ಟಿಯಿಂದ ನೋಡಿದರೂ ಅಮೇರಿಕೆಯ ಸಖ್ಯ, ದಯೆ ನಮಗೆ ಸಿಕ್ಕುವುದು ಅಶಕ್ಯವಾಗಿ ಕಾಣುತ್ತಲಿದೆ. ಸದ್ಯ ಭಾರತ-

ಸಕ್ಕರೆಯ ಉತ್ಪತ್ತಿ ಬಹಳ ಕಡಿಮೆಯಾಯಿತು. ೧೯೪೨ ರಲ್ಲಿ ಪುನಃ ಸಕ್ಕರೆಯ ಉತ್ಪತ್ತಿ ಸ್ವಲ್ಪ ಒಳ್ಳೆಯದಾಯಿತ್ತು. ಆದರೆ ಈ ವರ್ಷ ಯುದ್ಧದಿಂದಾಗಿ ಕೆಲವು ಹೊಸ ಸಮಸ್ಯೆಗಳು ಮುಂದೆ ಬರಲಾರಂಭಿಸಿದುವು. ಸಂಯುಕ್ತಪ್ರಾಂತ್ಯ ಮತ್ತು ಬಿಹಾರ ಸರಕಾರವೂ ಬೇರೆ ಪ್ರಾಂತದ ಸರಕಾರಗಳೂ ಕಬ್ಬಿನ ಬೆಲೆಯನ್ನು ಮಣಕ್ಕೆ ಎಂಟು ಆಣೆಯಂತೆ ನಿಶ್ಚಯಿಸಿದುವು. ಭಾರತ ಸರಕಾರವು ಸಕ್ಕರೆಯ ಕ್ರಯಕ್ಕೂ ನಿಯಂತ್ರಣ ಹಾಕಿತು. ಆದರೆ ಬೆಲ್ಲಕ್ಕೆ ಯಾವ ನಿಯಂತ್ರಣವೂ ಇಲ್ಲದುದರಿಂದ, ಅದರ ಕ್ರಯ ಹೆಚ್ಚಾಯಿತು. ಆದುದರಿಂದಲೇ ಜೇಸಾಯಗಾರರು ಕಬ್ಬನ್ನು ಮಿಲ್ಲಿಗೆ ಕೊಡದೆ, ತಮ್ಮಲ್ಲಿಯೆ ಬೆಲ್ಲವನ್ನು ತಯಾರಿಸಿ ಮಾರಲಾರಂಭಿಸಿದರು. ಕಾರಣ ಮಿಲ್ಲಿನಲ್ಲಿ ಕೊಡುವ ಎಂಟುಆಣೆಯ ಕಬ್ಬಿನಿಂದ ೧ ರೂಪಾಯಿ ೪ ಆಣೆ ಬೆಲೆಯ ಬೆಲ್ಲವಾಗುತ್ತಿತ್ತು. ಇದರಿಂದಾಗಿ ಮಿಲ್ಲಿಗೆ ಬೇಕಾದಷ್ಟು ಕಬ್ಬು ಸಿಕ್ಕದೆ, ಸಕ್ಕರೆಯ ಉತ್ಪತ್ತಿ ಬಹಳ ಕಡಿಮೆಯಾಯಿತು. ಮೊದಲಿನ ಸಂಗ್ರಹವೆಲ್ಲಾ ಖೆಚ್ಚವಾಯಿತು. ಆದಲ್ಲದೆ ಯುದ್ಧದಿಂದಾಗಿ ಸೈನ್ಯಕ್ಕೆ ಸಕ್ಕರೆ ಬೇಕಾಯಿತು. ವಿದೇಶೀಯ ಸೈನಿಕರಿಗೆ, ಹಾಗೂ ಮಲಯಾ, ಸಿಂಗಾಪುರ, ಬರ್ಮಾ ಮೊದಲಾದ ದೇಶಗಳಿಂದ ಬಂದ ಜನರಿಗೆ— ಹೀಗೆ ಬೇರೆ ಬೇರೆ ಕಾರಣಗಳಿಂದ ಸಕ್ಕರೆಯ ವೆಚ್ಚ ಹೆಚ್ಚಾಗಲಾರಂಭಿಸಿತು. ಸಕ್ಕರೆಯ ಉತ್ಪತ್ತಿ ಕಡಿಮೆಯಾಯಿತು. ಇದರಿಂದಾಗಿ ಕೆಲವು ದಿನಗಳ ಹಿಂದೆ ಸಕ್ಕರೆ ಸಿಕ್ಕುವುದೇ ದುರ್ಲಭವಾಗಿತ್ತು. ಇನ್ನೊಂದು ಕಾರಣವೆಂದರೆ ಅಂಗಡಿಯ ಸಾವುಕಾರರು ಹೆಚ್ಚಿನ ಲಾಭದಾಶೆಯಿಂದ ಸಕ್ಕರೆಯನ್ನು ಸಂಗ್ರಹಿಸಿಟ್ಟು ಕ್ರಯ ಹೆಚ್ಚಿಸಿದರು. ಆದರೆ ಸರಕಾರವು ಮೇಲಿನ ಎಲ್ಲಾ ಕಾರಣಗಳನ್ನೂ ಕಂಡು, ಅವುಗಳ ಬಗ್ಗೆ ತಮ್ಮ ನಿಯಂತ್ರಣ ಹೊರಡಿಸಿದುದರಿಂದ, ಈಗ ಪುನಃ ಅಲ್ಪ ಸ್ವಲ್ಪ ಸಕ್ಕರೆ ಸಿಕ್ಕುತ್ತಲಿದೆ; ಅದುವೇ ಸಂತೋಷದ ವಿಷಯವಾಗಿದೆ. ಸರಕಾರವು ಬೆಲ್ಲಕ್ಕೂ ನಿಯಂತ್ರಣ ಹಾಕಿದಲ್ಲಿ, ಇನ್ನೂ ಹೆಚ್ಚಿಗೆ ಸಕ್ಕರೆ ಸಿಕ್ಕುವುದರಲ್ಲಿ ಏನೂ ಸಂಶಯವಿಲ್ಲ, ಹಾಗೂ ಜೇಸಾಯಗಾರರು ಹಿಂದಿನಂತೆ ಹೆಚ್ಚು ಕಬ್ಬು ಬೆಳೆಯಿಸಿದಲ್ಲಿ ನಿಶ್ಚಯವಾಗಿಯೂ ಸಕ್ಕರೆಯ ಏರಿದ ಬೆಲೆಯು ಇಳಿಯಲು ಬಹುದು.

ದಲ್ಲಿ ನಡೆದಿರುವ ಘಟನೆಗಳತ್ತ ಜಿವಾಸೀನ್ಯದಿಂದ ಕಾಣುತ್ತ ನಡೆದಿರುವ ಅಮೇರಿಕೆಯ ಕಾರ್ಯಭಾರ, ನಮ್ಮ ಕಲ್ಪನೆಗೆ ಪುಷ್ಟಿಯನ್ನು ಕೊಡುತ್ತಲಿದೆ.

ಭಾರತದ ಸ್ವಾತಂತ್ರ್ಯ ಇಂದು ಇನ್ನಾರ ದಯೆ—ದಾಕ್ಷಿಣ್ಯಗಳಿಂದ ಸಾಧ್ಯವಿಲ್ಲ. ಅದಕ್ಕಾಗಿ ಭಾರತೀಯರೆ ಎದ್ದು ಒಂದುಗೂಡಿ, ತಮ್ಮ ಶಕ್ತಿಯಲ್ಲಿ ವಿಶ್ವಾಸವನ್ನಿಟ್ಟು ಕಾರ್ಯವಮಾಡಬೇಕು; ತಮ್ಮ ಸಾಮರ್ಥ್ಯದಿಂದಲೆ ಸ್ವಾತಂತ್ರ್ಯವನ್ನು ಗಳಿಸಿ ಉಳಿಸಿಕೊಳ್ಳಬೇಕು. ಇನ್ನೊಬ್ಬರ ಹಂಗಿನಿಂದ ನೂರೆತ ಸ್ವಾತಂತ್ರ್ಯ ಇಂದಿಲ್ಲ ನಾಳೆ—ದಾಸ್ಯದಲ್ಲಿಯೆ ಪರಿಣಮಿಸುವುದೆಂಬುದನ್ನು ಯಾರೂ ಮರೆಯಲಾಗದು.

'ಉದ್ಧರೇದಾತ್ಮನಾತ್ಮಾನಂ!'

—ಸಂಪಾದಕರು.

ಕಾಡುಮಲ್ಲಿಗೆ ಮತ್ತು ನಿರ್ಮಾಲ್ಯ ★

ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ., ಬಿ. ಟಿ.

ಕಾಡ ಮಲ್ಲಿಗೆ! ಕಾಡ ಬೆಳುದಿಂಗಳು! ಕಾಡಿನಲ್ಲಿ ರೋದನ! ಕಾಡಿನದೆಲ್ಲವೂ ಕಾಡುಪಾಲೇ ಅಲ್ಲವೆ? ಹರಹಿದ ಅಚ್ಚ ಬೆಳುದಿಂಗಳಲ್ಲಿ, ಅರಮನೆಯ ವಾತಾಯನದ ಮುಂದೆ ಬಳುಕುವ ಬಳ್ಳಿಯ ಮೇಲೆ, ಮುಗುದೆಯಂತೆ ಮೋದೆ ಮುದುರಿಕೊಂಡು ಬಿರಿತ ಮಲ್ಲಿಗೆಯನ್ನು ಅರಸಿಯು ತೆಗೆದು ಅದನ್ನು ಮೂಸಿ ಮುಡಿಗೇರಿಸಿ ಕೊಂಡಾಗ, ಮಲ್ಲಿಗೆಯ ಜೀವನವು ಸಾರ್ಥಕವಾಗುತ್ತದೆ; ಮಲ್ಲಿಗೆಯು ಕೃತಕೃತ್ಯವಾಗುತ್ತದೆ. ಕರುಮಾಡದ ಅಂಗಣದಲ್ಲಿ ತಲೆಬಾಗಿ ಬಿದ್ದುಕೊಂಡ ಬೆಳ್ದಿಂಗಳಿನಲ್ಲಿ ವಿಹರಿಸುವ ಅರಸುದಂಪತಿಗಳನ್ನು ನೋಡಿ, ಆ ಬೆಳುದಿಂಗಳು ತಾನೇ ಧನ್ಯನೆಂದು ತಿಳಿದುಕೊಳ್ಳಬಹುದು. ಕಾಡುಮಲ್ಲಿಗೆಯು ವಾಸನೆಯಲ್ಲಿ ಕಡಿಮೆಯೆ? ಬೀಡಗು-ಬಿನ್ನಾಣಗಳಲ್ಲಿ ಕಡಿಮೆಯೆ? ಆದರೆ ಅದೇನು ಸಾರ್ಥಕತೆಯನ್ನು ಸಾಧಿಸಿಕೊಂಡಿತು? ಹಾಗೆಯೆ ಕಾನನದ ಮರ-ಮರಗಳಲ್ಲಿ ಕೊಂಬೆ-ಕೊಂಬೆಗಳಲ್ಲಿ ತುಂಬಿ ತುಳುಕಾಡುವ ಜ್ಯೋತ್ಸ್ನೆಯು ಯಾವ ಸಿದ್ಧಿಯನ್ನು ಪಡೆಯಿತು?

ಜಗತ್ತಿನ ನಿಯಮವೆ ಹಾಗೆ. ಮನೆಯ ಮುಂದಿನ ಹಂದರದಲ್ಲಿ ಅರಳಿದ ಮಲ್ಲಿಗೆ ದೇವರ ತಲೆಯ ಮೇಲೆ ಕೂಡುವುದು. ಕಾನನದಲ್ಲಿ ಕುಸುಮಿತವಾದ ಕಾಡುಮಲ್ಲಿಗೆ ಹಾಗೆಯೆ ಬಾಡಿ ಹೋಗುವುದು. ಮೀಸಲು ಮುರಿಯದ ಸುಗಂಧವು ಅದರಲ್ಲಿ ಅಡಕವಾಗಿದ್ದರೂ ದೇವರು ಅದನ್ನು ಮುಟ್ಟುವುದಿಲ್ಲ. ಇದು ಕಾಡುಮಲ್ಲಿಗೆಯ ದುರ್ದೈವವೋ, ಸಮಾಜದ ಕಾಠಿಣ್ಯವೊ ತಿಳಿಯಲು ಸಾಲದು. ಬಲ್ಲವನ ಲೆಕ್ಕವೂ ಹಾಗೆಯೆ ಎಂದು ಹಿರಿಯ ಕವಿಗಳು ಹೇಳುತ್ತಾರೆ: ಜಗತ್ತಿನ ನಾಲಗೆಯ ಮೇಲೆ ಕುಣಿದಾಡುವನು, ಇಲ್ಲವೆ ಜಗತ್ತು ಅರಿಯದಂತೆಯೆ ಮಾಯವಾಗಿ ಬಿಡುವನು. ಅವನ ಜನವು ಜಗತ್ತಿನ ತುಂಬ ಹಬ್ಬಬೇಕಾದರೆ, ಅವನದೆಷ್ಟು ಸಲ ಹುಟ್ಟಿ ಬರಬೇಕೊ! ಭವಭೂತಿ, ಮುದ್ದಣ ಮೊದಲಾದ ಕವಿಗಳ ಬಾಳು ಮೊದಲು ಕಾಡಮಲ್ಲಿಗೆಯಂತೆಯೆ ಇದ್ದಿತೆನ್ನಬೇಕು; ಅವರು ಪಡೆದ ಸಿದ್ಧಿ ಅವರು ಸಾಧನಮಾರ್ಗದಲ್ಲಿದ್ದಾಗಲೆ ಅವರಿಗೆ ದೊರೆಯಲಿಲ್ಲ.

ಮನುಷ್ಯನ ಮೇಲ್ಮೆಯನ್ನು ಎಷ್ಟೋ ಸಲ, ಏಕೆ ಯಾವಾಗಲೂ, ಅವನು ಪಡೆದಿರುವ ಪ್ರಸಿದ್ಧಿಯ ಮೇಲಿಂದಲೆ ಜನರು ಎಣಿಸುವರಲ್ಲದೆ, ಅವನ ಅಂತಃಸತ್ತ್ವದಿಂದಲ್ಲ. ಇದು ಜಗದ ನೀತಿ. ಅದಕ್ಕೆ ಯಾರೇನೂ ಮಾಡಬರುವಂತಿಲ್ಲ. ಅಂತೆಯೆ ಜಾಹೀರಾತಿನಲ್ಲಿ ಅಷ್ಟೊಂದು ಮಹತ್ತ್ವವಿದೆ. ಆದರೆ ಇಷ್ಟೂ ಕೇವಲ ತಮ್ಮ ಅಧಿಕಾರಬಲದಿಂದ ಖ್ಯಾತಿವೆತ್ತ ಮಹಾಪುರುಷರು, ತಮ್ಮ ಅಧಿಕಾರ ಮುಗಿಯುತ್ತಲೆ ಓದಿ ಬಿಟ್ಟ ವೃತ್ತಪತ್ರಗಳಂತೆ ನಿರ್ಮಾಲ್ಯರಾಗಿ ಬಿಡುತ್ತಾರೆ. ಹೂವಿಗೂ ಒಂದು ಕಾಲವಿದೆ. ದೇವರ ತಲೆಯ ಮೇಲಿರುವವರೆಗೂ ಅದಕ್ಕೆ ದೊರೆತ ಮಾನ ಇನ್ನಾವುದಕ್ಕೂ ದೊರೆಯಲಾರದು. ಅದರ ಬಾಲ ಹಿಡಿದು ಒಂದು ಕೀಟವು ಕೂಡ ದೇವರ ನೆತ್ತಿಯನ್ನು ಕುಕ್ಕಬಹುದು. ಹೂವನ್ನು ಕೋದ ನಾರೂ ಉನ್ನತಿಯನ್ನು ಹೊಂದಬಹುದು. ಆದರೆ ನಿರ್ಮಾಲ್ಯ ವಿಸರ್ಜನಪಾಡೊಡನೆಯೆ ಅವುಗಳ ಪಾಡು ಯಾತಕ್ಕೂ ಬೇಡ. ನಾಳಿನ ವೃತ್ತಪತ್ರವು ಪ್ರಕಟವಾಗುವ ವರೆಗೂ ಇಂದಿನ ವೃತ್ತಪತ್ರಕ್ಕೆ ಬೆಲೆಗೆ ತಕ್ಕಂತೆ ಮಹತ್ತ್ವ. ನಾಳಿನ ವೃತ್ತಪತ್ರ ಬಂದೊಡನೆಯೆ ಶ್ವೇತಪತ್ರದ ಬೆಲೆಯೂ ಅದಕ್ಕೆ ಬಾರದು. ನಿವೃತ್ತರಾದ ಉದ್ದಾಮ ಅಧಿಕಾರಿಗಳು ಕೂಡ ಶೂಲದ ಹಲ್ಲು ಮುರಿದ ಹಾವಿನಂತಾಗಿ ಬಿಡುತ್ತಾರೆ. ಇನ್ನೇನು, ನಿವೃತ್ತಪತ್ರಗಳನ್ನು ಕಿರಾಣಿಯ ಅಂಗಡಿಯಲ್ಲಿ ಅರ್ಧ ಬೆಲೆಗಲ್ಲದಿದ್ದರೂ ಕಾಲು ಬೆಲೆಗಾದರೂ ಕೊಂಡು ಉಪಯೋಗಿಸಿಕೊಳ್ಳುವಂತೆ, ಈ ನಿವೃತ್ತ ರಾಜಮಾನ್ಯ ರಾಜಶ್ರೀಗಳನ್ನು ಖಾಸಗಿಯ ಚಾಕರಿಯಲ್ಲಿ ನಿಯಮಿಸಿಕೊಳ್ಳುವುದುಂಟು. ಇಂತಹ ಖಾಸಗಿಯ ಚಾಕರಿಯನ್ನು ತಾವಾಗಿಯೆ ಹುಡುಕಿದೆವು ಎನ್ನುವುದಕ್ಕಿಂತ, ಅದೇ ತಮ್ಮ ಕೊರಳಿಗೆ ಬಂದು ಬಿದ್ದಿತು ಎಂಬ ಅಳವಾದ ಗಂಭೀರ ಮಾತಿನಲ್ಲಿ ತಮ್ಮ ಮರ್ಯಾದೆಯನ್ನು ಮುಳುಗಿಸಿ ಕಾಯ್ದಿಡುತ್ತಾರೆ.

ಕೆಲವು ಸಾಹಿತ್ಯಕೃತಿಗಳ ವಿಚಾರವೂ ಹೀಗೆಯೇ! ಆ ಕೃತಿಗಳು ಆ ಸಾಹಿತಿ ಬದುಕಿರುವ ವರೆಗೂ ಬಾಳಿರುತ್ತವೆ. ಅವರು ತಮ್ಮ ಸಾಹಿತ್ಯದಿಂದ ಮನ್ನಣೆಯನ್ನು ದೊರಕಿಸುತ್ತಾರೆನ್ನುವುದಕ್ಕಿಂತ ಅವರ ಪದವಿ-ಪಟ್ಟಗಳ ಮೂಲಕವೆ ಅವರ ಸಾಹಿತ್ಯಕ್ಕೆ ಉಸಿರು ಬಂದಿರುತ್ತದೆನ್ನಬಹುದು. ಯಶೋಹೀನರಾಗಿ ಚಿರಕಾಲ ಬಾಳುವುದಕ್ಕಿಂತ ಉಜ್ವಲಕೀರ್ತಿಯುತರಾಗಿ ಮೂರು ದಿನ ಬಾಳುವುದು ಮೇಲೆಂದು, ನಾಲ್ಕನೆಯ ದಿನದಿಂದ ಅವರು ತಮ್ಮ ಸಾಹಿತ್ಯದೊಂದಿಗೆ ಜೀವಸ್ಮೃತರಾಗಿ ಬಾಳುತ್ತಾರೆ. ನಾಲ್ಕನೆಯ ದಿನದಿಂದ ಇವರೂ ಓದಿಬಿಟ್ಟ ವರ್ತಮಾನಪತ್ರ ಇಲ್ಲವೆ ನಿರ್ಮಾಲ್ಯರೆ!

'Every dog has his day'— ಎಂಬಂತೆ ಅತ್ತಿಗೊಂದು ಕಾಲ, ಸೊಸೆಗೊಂದು ಕಾಲ; ಕಮಲಕ್ಕೊಂದು ಕಾಲ, ಕುಮುದಕ್ಕೊಂದು ಕಾಲ. ಆದರೆ ಚಿರಂತನಕಾಲಕ್ಕೂ ಮಾನವನ ಬೆಳ್ಚಸದ ಬೆಳಗಿನ ಸೊಬಗು ನಾಲ್ಕೂ ನಿಟ್ಟಿಗೆ ಪಸರಿಸಬೇಕಾದರೆ, ನಿಜವಾದ ಗುಣ—ಹಿರಿಮೆ—ಹೆಂಪು ಬೇಕು ಅವನಲ್ಲಿ. ಒಂದು ಕಾಲದಲ್ಲಿಯೊ, ಒಂದು ದೇಶದಲ್ಲಿಯೊ, ಒಂದು ಸಮಾಜದಲ್ಲಿಯೊ— ಬಿಡಲಾರದ ಕರ್ಮವೆಂದು ಜನರಿಂದ ವಂದಿಸಲ್ಪಟ್ಟ ಮಾತ್ರಕ್ಕೆ ಮಾನವನು ಮಹಾಪುರುಷನಾಗಲಾರನು. ಸೂರ್ಯನ ಕಿರಣವು ಹೂವನ್ನರಳಿಸುವಂತೆ, ಇವನ ಪ್ರೇಮಕಟಾಕ್ಷವು ಅವನ ಅಂತಃಕರಣವನ್ನರಳಿಸಬೇಕು. ಇವನ ದೊಡ್ಡಿತೆಯು ಅವರ ಸಹಾನುಭೂತಿಯನ್ನು ಪಡಿಯಬೇಕು. ಇದ್ದಾಗ ಎಲ್ಲರ ತಲೆಯ ಮೇಲೆ ಮೆರೆದು, ಇಲ್ಲದಾಗ ನಿರ್ಮಾಲ್ಯವಾಗುವುದಕ್ಕಿಂತ, ಅಡವಿಯಲ್ಲಿಯೆ ಬೆಳೆದು ಅಡವಿಯಲ್ಲಿಯೆ ಬಾಡಿಹೋದರೂ ಸುಗಂಧಭರಿತವಾದ ಕಾಡುಮಲ್ಲಿಗೆಯಾಗಿ ಬಾಳುವುದು ಲೇಸು!

ವಿಘ್ನೇಶ್ವರ

(ಸಣ್ಣ ಕತೆ)

ಕುಮಾರಿ ತಾರಾ ಹೆಗಡೆ, ಸಿರಸಿ

★

"ಈ ಸೊತ್ತೀನು, ಆಡಿಗೆಮನೆಯ ಮೇಲ್ವಿಚಾರಣೆಗೆ ಬರಲೇ ಇಲ್ಲವಲ್ಲಾ ?"

"'ಮೇಷ್ಟ್ರ' ತುಂಬಾ 'ಹೋಂ ವರ್ಕ್' ಕೊಟ್ಟು ಬಿಟ್ಟಿದ್ದಾರೆ; ಏನು ಮಾಡ್ಲಿ !"

"ಅವರಿಗೇನು ಹೆಂಡಿರು-ಮಕ್ಕಳಿಲ್ವೇನ್ರೀ ?"

"ಹೆಂಡಿರು ಅಂದ್ರೇನೆ? ಅವರಿಗೆಷ್ಟು ಲಗ್ನಾಂತ ನೀನು ಅನ್ನೋದು? ನನಗೆ ಗೊತ್ತಿದ್ದ ಹಾಗೆ ಅವರಿಗಿರೋಳು ಒಬ್ಬಳೇ ಹೆಂಡ್ತಿ! ಅವರು ಆಫೀಸಿನಲ್ಲಿ ನಮ್ಮ ಮೇಲೆ ಅಧಿಕಾರ ಜಲಾಯಿಸೋ ಹಾಗೆ—ಅದೇಕೆ ಅದಕ್ಕೂ ಹೆಜ್ಜು—ಜರ್ಬಾಗಿ, ಆಕೆ ಮನೇಲಿ ಅವರ ಮೇಲೆ ಅಧಿಕಾರ ನಡಿಸ್ತಾಳಂತೆ !"

"ಓಹೋ! ಹೀಗೇನು? ಸರಿ!"

"ಸರಿಯೇನು-ಬಿಸ! ಮನೇಲಿ ಅಮ್ಮಾವ್ರಿಂದ ಬೈಸ್ಕೊಂಡು ಬರೋದು; ಆಫೀಸಿನಲ್ಲಿ ನಮ್ಮನ್ನು ಬೈಯೋದು! ಮೂಟೆ ಮೂಟೆ ಕೆಲಸವನ್ನ 'ಮನೇಲಿ ಮಾಡ್ಕೊಂಡು ಬನ್ನಿ' ಅಂತ ನಮಗೆ ಹೇಳೋದು!"

"ಕೊಟ್ಟರೇನಾಯ್ತು. 'ಹೆಣ್ಣು ತಿರುಗಿ ಕೆಟ್ಟಿತು, ಗಂಡು ಕೂತು ಕೆಟ್ಟಿತು' ಎಂತ ಗಾದೆಯೇ ಇದೆ. ಮನೇಲಿ ಬಂದು ಸುಮ್ಮನೆ ಕೂತ್ಕೊಳ್ಳೋ ಬದ್ಲು, ಒಂದಿಷ್ಟು ಕೆಲಸಾ ಮಾಡಿಪ್ರೆ...."

"ಹೌದು-ಹೌದು, ನಾವೆಲ್ಲಾ ಸಂಸಾರ ಗಿಂಸಾರ ಇಲ್ಲದ ಸಂನ್ಯಾಸಿಗಳಾಗಿ ಬಿಟ್ಟಿವೇನು? ಹಗಲೆಲ್ಲಾ ಆಫೀಸಿನಲ್ಲಿ ದುಡಿದೂ ದುಡಿದೂ ಸಾಕಾಗಿ ಮನೆಗೆ ಬಂದ ಮೇಲೆ, ಏನೋ ಕೈಹಿಡಿದ ಅನಳ ಸಂಗಡ ಒಂದು ನಾಲ್ಕು ಸುಖ-ದುಃಖದ ಮಾತನ್ನೋ ಸುದ್ದಿ-ಸಮಾಚಾರಗಳನ್ನೋ ಮಾತನಾಡುತ್ತಾ ಕುಳಿತರೆ ಸ್ವಲ್ಪ ಹಾಯಾಗಿರುತ್ತದೆ; ಅದಕ್ಕೂ ಅವಕಾಶ ಕೊಡಬೇಡೀ ಅಂತ ಇವರ ಮೇಲಿನವರಿಂದ ಆರ್ಡರ್‌ನೂ ಬಂದಿಲ್ಲವಲ್ಲಾ!"

"ಓಹೋಹೋ! ಗೊತ್ತಿದೆ ಬಿಡಿ, ನೀವು, ಸುಖ-ದುಃಖದ ಮಾತನಾಡೋದು! ಒಂದು ದಿನವಾದರೂ ನೀವು ನನ್ನ ಸುಖ-ದುಃಖದ ಮಾತನಾಡಿದ್ದಿರೇನು? ಆಫೀಸಿನಲ್ಲಿ ಈವತ್ತು ಕಾಫಿಗಾಗಿ ಯಾರಿಗೆ ಚಕ್ರಪಾಕಿದ್ದಾಯಿತು, ಹೆಡ್‌ಕ್ಲಾರ್ಕ್‌ರ ಕಣ್ಣು ತಪ್ಪಿಸಿ ಯಾರ್ಯಾರ ಸುದ್ದೀನ ಮಾತನಾಡಿಯಾಯ್ತು, ಅವರನ್ನ ಇವರನ್ನ ಹೇಗೆ ಜೇಷ್ಟೆ ಮಾಡಿದ್ದಾಯಿತು—ಇಂತಹ ಮಾತನ್ನು ಬಿಟ್ಟು, ಬೇರೆ ಯಾವ ಮಾತನ್ನ ನೀವು ನನ್ನ ಸಂಗಡ ಆಡ್ತೀರಿ? ಪುತ್ತೆ ನೀವು ಆಫೀಸಿನಲ್ಲಿ ಮಾಡುವ ಕೆಲಸಾನೂ ಅಷ್ಟಕ್ಕಷ್ಟೇ ಅಂತ ಕಾಣುತ್ತೆ. ಆಫೀಸರರಿಗೆ 'ಮೇಷ್ಟ್ರ', ಹೆಡ್‌ಕ್ಲಾರ್ಕ್‌ರಿಗೆ 'ಗೂಬೆ' ಇತ್ಯಾದಿ ಹೆಸರುಗಳನ್ನಿಟ್ಟು ಲೇವಡಿ ಮಾಡ್ತಾ ಇರುವವರಿಗೆ, ಕೆಲಸಾ ಮಾಡ್ಲಿಕ್ಕೆ ಕಾಲ ಎಲ್ಲಿ ಸಿಗಬೇಕು?"

"ಶ್ರೀರಾಮ.....!"

"ಯಾಕಪ್ಪಾ, ನಡುವೆ ಶ್ರೀರಾಮನ ಮೇಲೆ ಅನುಗ್ರಹ?"

"ರಾಮನ ಮೇಲಲ್ಲ ಅನುಗ್ರಹ; ಆತ ನನ್ನ ಮೇಲೆ ಅನುಗ್ರಹ ಮಾಡಲೀ ಅಂತ! ಮನೆಗೆ ಬಂದ್ಮೇಲೆ ನೀನೆಲ್ಲಿ ಕೆಲಸ ಮಾಡೋಕೆ ಬಿಡ್ತಿ? ನಾಳೆ ಬೈಸಿಕೊಳ್ಳುವವನು ನಾನು! ನಿನಗೇನು ಅದರ ಪರಿವೆ? ಒಂದು ಸಾವಿರ ಸಲ ಹೇಳಿದ್ದೇನೆ, 'ಕೆಲಸ ಮಾಡುವಾಗ ಮಾತಾಡಿಸಬೇಡ' ಅಂತ! ಗಂಡನ ಮಾತು ಕೇಳುವ ಪತಿವ್ರತೆಯರ ಕಾಲ ಕಳೆದು ಹೋಯ್ತು! ಪಾಪ ಅಂತ ಇದುವರೆಗೂ ಬಿಟ್ಟಿದ್ದೇನೆ; ಇನ್ನೊಮ್ಮೆ ಆಫೀಸರರು ಬೈಯುತ್ತಲೆ 'ಸ್ವಾಮಿ, ಏನ್ಮಾಡೋದು, ಮನೇಲಿ ಅಗ್ನಿಸಾಕ್ಷಿಯಾಗಿ ಕೈಹಿಡಿದ ಹೆಂಡತಿ ಒಬ್ಬಳಿದ್ದಾಳೆ; ವಿಘ್ನೇಶ್ವರನ ಅವತಾರ ಅದು; ಪ್ರತಿ ಕೆಲಸಕ್ಕೂ ವಿಘ್ನ ಅವಳಿಂದ; ಆದ್ದರಿಂದ ಕೆಲಸ ಆಗಲಿಲ್ಲ!' ಅಂತ ಹೇಳ್ಬಿಡ್ತೀನಿ."

★

ಮಧುಸೂದನನಿಗೆ ದೊರೆತ ಹೆಂಡತಿಯಂತಹರೇ ಎಲ್ಲ ಕಾರಕೂನರಿಗೂ ಸಿಕ್ಕರೆ, ಹನ್ನೆರಡು ತಿಂಗಳೂ ಅವರ ಬಾಳು ಬೆಳುದಿಂಗಳಲ್ಲಿ ನಲಿದೀತು!

★

"'ಹೆಂಡತೀನ ಸುಮ್ಮನೆ ಕುಳ್ಳಿರಿಸೋಕೆ ಆಗದಿದ್ದ ನೀವ್ರ ಎಂಥಾ ಗಂಡಸರು'—ಎಂತ ಅವರು ಕೆಳಿಬಿಟ್ಟರೆ?....."

"ಹೆಂಡತಿಯ ಬಾಯಿ ಮುಚ್ಚಿಸೋದು ಕಠಿನಾ—ಎಂಬೂ ಸಂಗತಿ ಅವರಿಗೂ ಚೆನ್ನಾಗಿ ಗೊತ್ತಿದೆ. ಹಾಗಿದ್ದೂ ಅವರು ಕೇಳಿಯೇ ಬಿಟ್ರೂ ಅಂದ್ರೆ 'ಸ್ವಾಮಿ ನಿಮ್ಮನೇಲಿ ಹೇಗೋ ನಮ್ಮನೇಲಿಯೂ ಹಾಗೆ!' ಅಂತ ಅಂದ್ಬಿಡ್ತೀನೆ!"

"ಸರಿ, ನಿಮ್ಮನ್ನು 'ಡಿಸ್‌ಮಿಸ್' ಮಾಡಿ ಬಿಡ್ತಾರೆ!"

"ಒಳ್ಳೇದೇ ಆಯ್ತು! ಆಗ ಇಪ್ಪತ್ತುನಾಲ್ಕು ತಾಸೂ ನಿನ್ನ ಮುಂದೆ ಕೂತು, ನಿನ್ನ ಸುಖ-ದುಃಖಾನ ವಿಚಾರಿಸಿ ಕೇಳ್ತೀನೆ! ನಿನ್ನಿಂದ ಬರುವ ಉಪವಾದನೂ ತಪ್ಪುತ್ತೆ!"

"ಹೊಟ್ಟೆಗೆ?"

"ಹುಟ್ಟಿಸಿದ ದೇವರು ಹುಲ್ಲು ಮೇಯಿಸ್ತಾನೆಯೆ?"

"ಸರಿ ಹೋಯ್ತು ಬಿಡಿ! ಹಾಗೆಲ್ಲಾ ಹುಚ್ಚಾಪಟ್ಟೆ ಮಾಡಿ, ಸಿಕ್ಕಿದ್ದ ಕೆಲಸಾ ಬಿಟ್ಟು ಬಿಡಬೇಡಿ! ಏಳಿ ಊಟಕ್ಕೆ ಇನ್ನು!"

* * *

"ಏನು ಈವೊತ್ತು ಸುಮ್ನೆ ಕೂತಿದ್ದೀರಿ?"

"ಇನ್ನೇನು ಮಾಡ್ಲಿ? ಅಳೊದೊಂದೇ ಬಾಕಿಯಿದೆ!"

"ಯಾಕೆ ಆಫೀಸಿನಲ್ಲಿ ಕಾಫೀ ಕುಡಿಸೋರು ಯಾರೂ ಸಿಕ್ಕಲಿಲ್ಲವೇನೊ!"

"ಆಂ! ನಾನೇನು ಮಗೂ ಅಂತ ತಿಳಿದಿದ್ದಿಯೇನು, ಕಾಫೀ ಸಿಗಲಿಲ್ಲಾ ಅಂತ ಅಳೋಕೆ? ಹೆಚ್ಚಿನವಳು ನೀನು!"

"ಮತ್ತೆ ಈ ಗ್ರಹಣ ಯಾಕೇ ಅಂತ?"

"ಹೆಂಡತಿಯೆನ್ನುವ ರಾಹು ಹಿಡಿದು ಈ ಗ್ರಹಣ ಬಂತು! ತಿಳಿಯಿತೇನು? ನಿನ್ನೆ ನನ್ನ ಪಾಡಿಗೆ ನಾನು ಕೆಲಸ ಮಾಡಿಕೊಳ್ಳುತಾ ಇದ್ದರೆ, ನೀನು ಇಲ್ಲದ ಹರಟೆ ಎತ್ತಿ ಸಮಯವನ್ನು ಕಳೆದೆ. ಕೆಲಸ ಆಗಲಿಲ್ಲ, ಮೇಷ್ಟ್ರು-ಅಲ್ಲಾ ಆಫೀಸರು ತರಾಟೆಗೆ ತಗೊಂಡರು! ಬಾಯಿಗೆ ಬಂದದ್ದು— ಬಾರದ್ದು— ಎಲ್ಲಾ ಆಡಿಬಿಟ್ಟರು!"

"ಇಷ್ಟೇನೋ?"

"ನಿನಗೆ 'ಇಷ್ಟೇನೋ'— ನನಗೆ ಎಷ್ಟೇನೋ ಎಂತ ಅನಿಸತದೆ! 'ಹಾಳು ಕೆಲಸ ಬಾವೀಗೆ ಬಿದ್ದುಕೊಳ್ಳಿ' ಅನಿಸತದೆ!"

"ಹಾಳು ಕೆಲಸ ಬಾವೀಗೆ ಬಿದ್ರೆ, ಈ ಹಾಳು ಹೊಟ್ಟೆ ಹಿಟ್ಟೆಲ್ಲದೆ ಒದ್ದಾಡತದೆ!"

"ಒದ್ದಾಡಿದರೆ ಒದ್ದಾಡಲಿ! ಅಲ್ಲಿ ಆಫೀಸರು, ಇಲ್ಲಿ ನೀನು, ಹೀಗೆ ಗೋಳುಹೊಯ್ಕೊತ್ತಾ ಇದ್ದರೆ, ನಾನೇನು ಮಾಡಲಿ?"

"ನಾಲ್ಕು ಮಾತನಾಡಿದರೂ ಗೋಳುಹೊಯ್ಕೊಂಡ ಹಾಗೇನು? ಇನ್ನು ಮೇಲೆ ಉಸಿರೆತ್ತಿದರೆ ದೇವರಾಣೆ!"

"ನಿಲ್ಲು ನಿಲ್ಲು; ಆಣೆಗೀಣೆ ಹಾಕ್ಕೋಬೇಡ! ನೀನು ಮಾತನಾಡಿದರೆ ಇಷ್ಟು ಅನರ್ಥ ಆಗ್ತಿರುವಾಗ, ಮೌನವಾಗಿದ್ದರೆ ಇನ್ನೇನನಾಹುತಾ ಆಗತದೋ! ಅಲ್ಲಾ,— ನೀನು ಮಾತನಾಡ ಬಾರದೂ— ಎಂದಲ್ಲ ನಾನು ಹೇಳಿದ್ದು! ಮಾತನಾಡುವ ಹೆಂಡ್ತಿ ಬೇಷಾ ಅಂತಿದ್ರೆ,ಒಂದು ಗೊಂಬೇನ ಲಗ್ನವಾಗ್ತಾ ಇದ್ದೆ. ಆದರೆ ಸಮಯವರಿತು ಮಾತನಾಡಬೇಕು! ಆ ಸಂಸ್ಕೃತ ಶ್ಲೋಕ ಹೇಳ್ತಿರೋ ಹಾಗೆ 'ಕಾರ್ಯೇಷು ಮಂತ್ರಿ' ಆಗ್ಬೇಕು! ಸಂಸಾರದಲ್ಲಿ ಹೆಂಡತಿಯೆಂದರೆ ಗಂಡನಿಗೆ ಕುರುಡನ ಕೈಯ ಕೋಲಾಗಬೇಕು; ಕತ್ತಲಲ್ಲಿ ಹಿಡಿದ ಕೈದೀವಿಗೆಯಾಗಬೇಕು—"

"ಮತ್ತೆ?"

"ಮತ್ತೆ, ಕಾರ್ಯಕ್ಕೆ ಸ್ಫೂರ್ತಿ ಕೊಡಬೇಕು, ಬುದ್ಧಿಗೆ ಪ್ರೋತ್ಸಾಹ ಕೊಡಬೇಕು!"

"ಮತ್ತೆ...."

"ಮತ್ತೆ, ಮತ್ತೆ, ಆತನಿಗೆ....ಹುಂ....ಆತನಿಗೆ....ಆತನ ಜೈತನ್ಯ ದೇವಿಯಾಗಬೇಕು!"

"ಸರಿ!"

"ಸರ್ರಿ ಏನು?"

"ನಾನು ದೇವಿಯಾದ ಮೇಲೆ, ನನ್ನನ್ನೇನು ಮಂಟಪದಲ್ಲಿ ಕೂರ್ಸಿ ಪೂಜೆ ಮಾತ್ತೀರೇನೊ!"

"ದೇವಿಯಾಗು, ಆ ಮೇಲೆ ಹೇಳ್ತೀನೆ! ಅದಿರಲಿ, ಇನ್ನು ಮೇಲೆ ನಾವು ಕೆಲವೊಂದು ಶರ್ತುಗಳನ್ನು ಹಾಕಿಕೊಳ್ಳೋಣ!"

"ಬೇಡ! ಶರ್ತು, ಕರಾರು, ಒಪ್ಪಂದ ಏನೂ ಬೇಡ; ನನ್ನ ಪಾಡಿಗೆ ತೆಪ್ಪಗೆ ಇರ್ತೀನೆ! ನಿಮ್ಮ ಕೆಲಸಾ ನೀವು ಮಾಡ್ಕೊಳ್ಳಿ! ನೀವು ಹೇಳಿದಹಾಗೆ 'ಕೋಲು' 'ಕೈದೀವಿಗೆ' 'ಸ್ಫೂರ್ತಿ' 'ಜೈತನ್ಯ' ಎಲ್ಲಾ ಆದ್ಮೇಲೆ, ನಾನಿನ್ನು ನಿಮ್ಮ ಕೂಡ ಮಾತ ನಾಡೋದು!"

"ಅಂದರೆ ಏನು, ಅಸಹಕಾರ ಮಾಡ್ತೀಯೋ ಏನು?"

"ಅಸಹಕಾರವಲ್ಲ, ಸಹಕಾರ ಮಾಡ್ತೇನೆ! ನಿಮ್ಮ ಕೆಲಸಕ್ಕೆ ನನ್ನ ಬಾಯಿ ವಿಘ್ನ— ಅಂತ ಅಂದ್ಮೇಲೆ, ನಾನು ಬಾಯಿ ಮುಚ್ಚಿಕೊಂಡಿದ್ದರೆ ನಿಮಗೆ ಸಹಕಾರ ಮಾಡಿದಂತಾಗಲಿಲ್ವೇನು?"

"ವಾದಮಾಡ್ಬೇಡವೆ! ನಾನು ಹೇಳಿದ್ದು ನೀನು ಬಾಯಿ ಮುಚ್ಕೊಂಡಿರಬೇಕೂ ಅಂತಲ್ಲ! ನೋಡು ನನ್ನ ಕೆಲಸ ಆಗದಿರೋಹಾಗೆ ನೀನು ಮಾತನಾಡಬಾರದು! ಕೆಲಸ ಆಗದಿದ್ರೆ ಆಫೀಸರು ಸಿಟ್ಟಾಗ್ತಾರೆ! ಆಫೀಸರ ಮರ್ಜಿ ಇಲ್ಲದಿದ್ರೆ 'ಪ್ರಮೋಷನ್' ಆಗೋದಿಲ್ಲ; 'ಪ್ರಮೋಷನ್' ಸಿಗದಿದ್ದರೆ ಹೆಚ್ಚಿನ ಸಂಬಳ ಇಲ್ಲ; ಹೆಚ್ಚಿನ ಸಂಬಳ ಇಲ್ಲದೆ ನಾವು ಹ್ಯಾಗೆ ಸುಖಪಡೋದು?"

"ಹೌದು!"

"ಹೌದಲ್ಲೊ?"

"ಹೌದು!"

* *

"ಯಾರಮ್ಮಾ ನೀನು?"

"ತಮ್ಮ ಆಫೀಸಿನಲ್ಲಿ—"

"ನನ್ನ ಆಫೀಸಿನಲ್ಲಿ....?"

"ಪಾಂ-ಅಲ್ಲ-ತಮ್ಮ ಯಜಮಾನ್ರು ಆಫೀಸಿನಲ್ಲಿ...."

"ಸರಿ ಸರಿ!"

"ತಮ್ಮ ಯಜಮಾನ್ರು ಆಫೀಸಿನಲ್ಲಿ ನಮ್ಮನೆಯವ್ರು ಕ್ಲಾರ್ಕು!"

"ಯಾರು? ವಿಟ್ಠಲರಾಯರೋ? ಅಲ್ಲ, ಅವರು ವಯಸ್ಸಾದವರು; ನೀನಿನ್ನೂ ಚಿಕ್ಕವಳು! ರಾಮರಾಯರೋ? ಇರಲಿಕ್ಕಿಲ್ಲ, ನಿನ್ನಂಥ ಹುಡುಗಿ ಸಿಗಲು ಅವನೇನೂ ಸ್ವರ್ಗದಿಂದ ಇಳಿದು ಬಂದಿಲ್ಲ! ಮತ್ತ್ಯಾರು? ಆಂ! ಮಧುಸೂದನನೋ? ಹೌದು, ಅವನೇ ನಿನಗೆ ತಕ್ಕ ಗಂಡ! ಅಲ್ಲವೆ?"

"ಹುಂ!"

"ಸರಿ, ಹುಡುಗ ಒಳ್ಳೆಯವ; ನಮ್ಮವರು ಸುಮ್ಮನೆ ಅವನ ಮೇಲೆ ರೇಗ್ತಿರ್ತಾರೆ!"

"ಕೆಲಸ-ಗಿಲಸ ಸರಿಯಾಗಿ ಆಗದಿದ್ದರೆ!"

"ಇಲ್ಲ, ಇಲ್ಲ, ಆತ ಚೆನ್ನಾಗಿ ಕೆಲಸ ಮಾಡ್ತಾನಂತೆ; ಆದರೆ ನಮ್ಮವರು ಸ್ವಲ್ಪ ಹಾಗೇ! ಯಾರನ್ನಾದರೂ ಗದರಿಸ್ತಾ ಇದ್ರೇನೇ ಅವರಿಗೆ ಸಮಾಧಾನ! ಇರಲಿ ಬಿಡು, ಮತ್ತೇನಮ್ಮಾ, ನೀನು ಬಂದದ್ದು?"

" ..... "

" ಹೇಳು ಹೆದರ್ಕೋಬೇಡ! "

" ನಮ್ಮ ಅಣ್ಣ ಜ್ಯೋತಿಷ್ಯ-ಗೀತಿಷ್ಯ ಹೇಳ್ತಾನೆ! "

" ಹುಂ! "

" ನಮ್ಮವರಿಗೆ ಐದು ವರ್ಷ ಸರ್ವೀಸಾಯ್ತು; ಇನ್ನೂ ಮೇಲಿನ ಜಾಗೆ ಸಿಕ್ಕಿಲ್ಲಾ....ಅಂತ ನಾನು, ಒಂದು ದಿನ ಹೀಗೆಯೆ ಮಾತನಾಡ್ತಾ ಹೇಳ್ದೆ; ಅದಕ್ಕಾತ ' ಈ ಊರ ಆಫೀಸಿನಲ್ಲಿ ಕೆಲಸ ಮಾಡುವವರಿಗೆ ಸಾಧಾರಣವಾಗಿ ಪ್ರಮೋಷನ್ ಆಗೋದಿಲ್ಲಾ ಅಂತ ಜ್ಯೋತಿಷ್ಯದಲ್ಲಿ ಕಂಡುಬಂದಿದೆ ನನಗೆ; ನಿನ್ನ ಗಂಡನ ಸೂತಿರಲಿ, ಅವನ ಆಫೀಸರು ಇಪ್ಪತ್ತಿಗೆ ಅಮಲ್ದಾರರ ಬದಲು ' ಡೆಪ್ಯೂಟಿ ' ಆಗಬೇಕಿತ್ತು. ಅವರು ಈ ಆಫೀಸಿನಲ್ಲಿರುವುದರಿಂದ ಅವರ ಪ್ರಮೋಷನ್ನಿಗೂ....'...."

"ಹೀಗೇನು ಸಮಾಚಾರ? ಇರಬೇಕು ಅನ್ನು! ಇಲ್ಲಾಂದ್ರೆ ಹತ್ತು ವರ್ಷ ಸರ್ವಿಸ್ ಆಗೂದರೊಳಗೇ ಅಮಲ್ದಾರರಾದವರು, ಅಮಲ್ದಾರರಾಗಿ ಆರು ವರ್ಷ ಆದರೂ ' ಡೆಪ್ಯೂಟಿ ' ಆಗಲಿಲ್ಲಾ ಅಂದರೆ! ವಿಚಾರ ಮಾಡ್ತೇನಮ್ಮಾ, ಈ ವಿಷಯಾನ?"

"ನಮ್ಮವರಿಗಷ್ಟು ಇಲ್ಲಿಂದ ಬೇರೆ ಊರಿಗೆ ವರ್ಗಮಾಡ್ಸಿಬಿಟ್ರೆ.."

" ಅಗ್ಲಿ, ಅಗ್ಲಿ! "

" ಬರತೀನಮ್ಮಾ! "

" ಬಾ, ಸ್ವಲ್ಪ ತಡಿ, ಕುಂಕುಮ ಹಚ್ಚಿಕೊಂಡು ಹೋಗು! "

* * *

" ಕೇಳಿದಿರೇನು? "

" ಹೇಳುವುದಕ್ಕೆ ಮೊದಲೇ ಕೇಳುವುದು ಹ್ಯಾಗೆ? "

" ನಿಮ್ಮ ಆಫೀಸಿನ ಕ್ಲಾರ್ಕು ಸುಧುಸೂದನ...."

" ಏನಂತೆ, ಆತನ ಸಮಾಚಾರ? ಪುಂಡೇವುಕ್ಕು...."

" ಯಾಕ್ಬಯ್ತೀರಿ ಅವನನ್ನ? ಸಮಾಚಾರ ಅವಂದಲ್ಲ, ಅವನ ಹೆಂಡ್ತೀದು "

" ಏನ್ಸಲಾಟೆ ಇದು? "

" ಗಲಾಟೆಯೂ ಅಲ್ಲ, ಗಿಲಾಟೆಯೂ ಅಲ್ಲ, ಜೇಳಿದ್ದಷ್ಟು ಕೇಳ! ಆಕೆಯ ಅಣ್ಣ ಜ್ಯೋತಿಷ್ಯ ಹೇಳ್ತಾನಂತೆ; ಈ ಊರ ಆಫೀಸಿನಲ್ಲಿರುವ ಯಾರಿಗೂ ಪ್ರಮೋಷನ್ ಆಗೋದು ಕಠಿಣ ಅಂತ ಹೇಳಿ, 'ನಿನ್ನ ಗಂಡನ್ನ ಬೇರೆಊರಿಗೆ ವರ್ಗಾಯಿಸಿಕೊ' ಅಂದ್ನಂತೆ!"

" ಏನೀಗ? ಅವನನ್ನ ವರ್ಗ ಮಾಡಿಸ್ಬೇಕಂತೇನೂ? "

" ಅವಳಂದದ್ದು ಹಾಗೆ; ನಾನನ್ನೂದು...."

" ನೀನನ್ನೂದು ಹ್ಯಾಗೆ? "

" ನೀವೇ ಯಾಕೆ ಇನ್ನೊಂದೂರಿಗೆ ವರ್ಗ ಮಾಡಿಸ್ಕೋಬಾರ್ದು? ಅಮಲ್ದಾರರಾಗಿ ಆರುವರ್ಷ ಆದರೂ ' ಡೆಪ್ಯುಟಿ ' ಮಾತೇ ಇಲ್ಲ! "

" ಹುಚ್ಚಿ ನೀನು? ಬೇರೆ ಊರಿಗೆ ವರ್ಗ ಮಾಡ್ಸಿಕೊಂಡ್ರೆ ' ಡೆಪ್ಯುಟಿ ' ಆಗ್ತೇನೇ? ಎಂಥ ಜ್ಯೋತಿಷ್ಯ ಹೇಳ್ತಾನೋ ಆ ಸೆದ್ದ! ಆಫೀಸಿಗೂ ಪ್ರಮೋಷನ್ನಿಗೂ...."

" ನಿಮ್ಮ ಬುದ್ಧಿವಂತಿಕೇನೇ ಖರ್ಚು ಮಾಡ್ಬೇಡಿ; ಯಾಕರ-ಬಾರ್ದೂ ಅಂತ! ಬೇರೆ ಊರಿಗೆ ಹೋದ್ರೆ ನಮಗೆ ನಷ್ಟವೇನು? ಏನೋ ಅವನ ಮಾತು ಯಾಕೆ ನಿಜಾ ಆಗ್ಬಾರ್ದು? "

" ಆಯ್ತು, ಇನ್ನು ವರ್ಗಮಾಡಿಸಿಕೊಂಡ ವಿನಾ ನೀನು ನನಗೆ ನಿದ್ದೆ ಮಾಡೋಕೆ ಬಿಡುವಹಾಗಿಲ್ಲ! ಆಯ್ತು, ಪ್ರಯತ್ನ ಮಾಡ್ತೇನೆ! ಬೇಕಾದರೆ, ಆ ಮಧುಸೂದನ—"

" ಏನ್ಬೇಡ, ಮುಂದಿಗೆ ಉಪಕಾರ ಮಾಡಹೋಗಿ ನಮ್ಮ ಕಾರ್ಯ ಕೆಡಿಸ್ಕೋಬಾರ್ದು! ಡೆಪ್ಯುಟಿ ಆದನಂತ್ರ.. "

" ಅಗ್ಲಿ! "

* * *

" ಏನು ನಗೆಯಾಡ್ತಾ ಬರ್ತಿದ್ದೀರಿ? "

" ಶನಿ ತೊಲಗತದೆ! "

" ಹಾಗಂದ್ರೆ! "

" ನಮ್ಮ ಆಫೀಸರಿಗೆ ಟ್ರಾನ್ಸ್ಫರ್ ಆಗ್ಬೋಯ್ತು! ತಾವೇ ಕಷ್ಟಪಟ್ಟು ಟ್ರಾನ್ಸ್ಫರ್ ಮಾಡಿಸಿಕೊಂಡಿದ್ದಾರೆ! ಇನ್ನು ಮೇಲೆ ಈ ಊರಿಗೆ ಬರುವ ಅಮಲ್ದಾರರು ಬಹಳ ಒಳ್ಳೆಯವರಂತೆ! ನಮ್ಮ ಹೆಡ್ಕ್ಲಾರ್ಕ್ ಹೇಳಿದರು. ಇನ್ನೇನು ನಿನ್ನ ಹತ್ತರ ಸುಖ-ದುಃಖದ ಮಾತನಾಡ್ಕೋಬಹುದು! ಈ ಹೊಸ ಆಫೀಸರು ಹೋಂ ವರ್ಕ್ ಕೊಡುವ ' ಮೇಷ್ಟ್ರು ' ಅಲ್ಲವಂತೆ! "

" ಹೇಳಿ, ನಿಮ್ಮ ಕೈದೀವಿಗೆ ಆದ್ನೋ ಇಲ್ವೋ? "

" ಆಂ? "

" ಆಂದ್ರೆ—ನೀವು ಆವೊತ್ತು ಕೈದೀವಿಗೆಯ ಉಪನ್ಯಾಸ ಕೊಟ್ಟ ಮಾರನೆಯ ದಿನವೇ, ನಾನು ಆಫೀಸರರ ಅಮ್ಮಾನ್ರ ಹತ್ತರ ದಯೆಮಾಡ್ಸಿ ' ನಮ್ಮಣ್ಣ ಜೋತಿಷ್ಯ ಹೇಳ್ತಾನೆ, ಈ ಊರ ಆಫೀಸಿನಲ್ಲಿದ್ದೋರಿಗೆ ಪ್ರಮೋಷನ್ ಆಗೋಲ್ವಂತೆ, ಕಾರಣ ನಮ್ಮವರಿಗೆ ಬೇರೆ ಊರಿಗೆ ವರ್ಗಾಯಿಸಿ ಕೊಡಿ' ಅಂತ ಹೇಳ್ಕೊಂಡೆ; ತನ್ನ ಗಂಡನಿಗೇ ಪ್ರಮೋಷನ್ ಕೊಡ್ಸೋಣಾ ಅಂತ ಅವರು, ತನ್ನ ಗಂಡ ಟ್ರಾನ್ಸ್ಫರ್ ಮಾಡ್ಸಿಕೊಳ್ಳೋ ಹಾಗೆ ಮಾಡಿದರು! "

" ಬೇಷ್, ಪ್ರಮೋಷನ್ ಸಿಕ್ಲೂ ಸಿಗಲಿ ಬೇಕಾದರೆ ಆತನಿಗೆ; ನಮ್ಮ ಶನೀ ತೊಲಗಿತಲ್ಲಾ ಸಾಕು! ಅಲ್ಬೇ, ನಿನ್ನ ಅಣ್ಣ ಎಂದಿ-ನಿಂದಲೇ ಜ್ಯೋತಿಷ್ಯ ಹೇಳೋಕೆ ಶುರು ಮಾಡಿದ್ದು? "

" ಅಣ್ಣ ಅಲ್ಲ, ನಾನು ಜೋತಿಷ್ಯ ಹೇಳೋಕೆ ಶುರುಮಾಡಿದ್ದು! ನಿಮ್ಮಿಂದ ' ವಿಘ್ನೇಶ್ವರ ' ಅಂತ ಹೇಳಿಸಿಕೊಳ್ಳಲಾರದೆ.... "

" ಹುಂ! ಈಗಲೂ ನಿನಗೆ ' ವಿಘ್ನೇಶ್ವರ ' ಅಂತ ಹೆಸರು ತಪ್ಪಿದ್ದಲ್ಲ! "

" ಗಂಡ ಅನ್ನೂ ಅಧಿಕಾರ! "

" ಅಧಿಕಾರ ಅಲ್ಲವೇ ಪುಚ್ಚಿ! ಆಗ ನೀನು ವಿಘ್ನಮಾಡುವ ಈಶ್ವರ ಅಂತ ಹೇಳಿದ್ದೆ; ಈಗ ನೀನು ವಿಘ್ನ ಪರಿಹಾರ ಮಾಡುವ ಈಶ್ವರ! ಎಲ್ಲಿ, ವಿಘ್ನೇಶ್ವರ ಈ ಕಡೆ ತಿರುಗಲಿ! "

" ಯಾಕೇ? "

" ಅನುಗ್ರಹ ಮಾಡ್ಲಿಕ್ಕೆ? "

" ಇಶ್..! "

ಮತಿಕೆಂಡವಾಯ್ತು!

★

ಶ್ರೀ. ಬಿ. ಎಚ್. ಶ್ರೀಧರ, ಬಿ. ಎ. ಪುಣೆ

ಬಾಹ್ಯರಣರಂಗ ರಕ್ತೋತ್ಪಾತದುಬ್ಬರವು
ಮೆದುಳ ಕಾಯಿಸಿತು ಮರಳಿ ;
ಅವ ಸಿದ್ಧಿಗೆ ತೊಡರಿ ಕಾದುವರೊ ಅದಕೆಳಿದು
ಮತಿಕೆಂಡವಾಯ್ತು ಕೆರಳಿ !

ಕೊಂದು ತಿನ್ನುವ ಹುಲಿಗೆ ದಯೆಯನುಪದೇಶಿಸಲು
ಫಲವೇನು ? ಫಾಲನೇತ್ರ
ಬಂದು, ಕೆಂಗಣ್ಣುರಿಯ ಭುಗಿಲೆಂದು ಬಿಡೆ ಕಳಿಗು
ನೀದು ಸುಡುತಿರಲು ಗಾತ್ರ !

ದಂತವಳಿದರು ದರ್ಪವಳಿದೀತೆ ಸರ್ಪಕ್ಕೆ ?
ದುರ್ನಯವು ದೂರಗಾವು ;
ಮಂತ್ರಕ್ಕು ಮುಗ್ಧವಾಗದು, ಮಾತ್ರನಿಲೆ ದೇಹ-
ಯಂತ್ರ, ಬದುಕೀತು ಭೂಮಿ !

ತಾವು ಸಾಕಿದ ಕುರಿಯ ತಾವೆ ಕಡಿದುಂಬಂತೆ
ಕಡಿದುಂಬ ನರರ ನರವ—
ಬೇರು ಬೇರಗೆದು ಸುಡಬಾರದೇಕೆನಿಸುತಿದೆ
ಕತ್ತರಿಸಿ ಅವರ ಶಿರವ !

ಯಾವ ಕಾಲದೊಳೂ ಸ್ವಭಾವ ದುರತಿಕ್ರಮವು,
ಅದಕೆದುವುದೊಂದೆ ಅಗದ ;
ಭಾವಕ್ಕೆ ಸಾಧನಾಭಾವವೆಸಪುದು, ವಿಕ್ಕ,
ಯಾವುದೂ ವ್ಯರ್ಥ ಜಗದ !

ಕೊಲ್ಲಬಹ ಕುನ್ನಿಗಳ ಕೊರಳನರಿವುದೆ ಧರ್ಮ
ತಿಳಿಯಿರಿದು ವೀರಯೋಗ !
ಅಲ್ಲದೊಡೆ ಈ ನರನ ಬಾಳು ಮರಣದ ಹಾಳು ;
ಕಿಡಿಗೊಡಲಿ ಖಡ್ಗವೇಗ !

ಜೇನು

★

ಶ್ರೀ. ವಿ. ಜಿ. ಭಟ್ಟ, ಪುಣೆ

ಬೆಳಗಿನಿಂ ಬೈತನಕ ಬುವಿಬಳಸಿ ಬಸವಳಿದು,
ಹನಿಜೇನ ಹೊತ್ತು ಹುಟ್ಟನು ತುಂಬಿದೆವು ನಾವು;
'ಮಳೆದಿನವ ಹೊದರಿನಲಿ ಕಳೆಯೋಣ ಸುಧೆಸವಿದು!'
ಎಂದು ಸುಖಗನಸುಗಳ ಕಾಣುತಿರಲಿಕೆ, ಸಾವು
ಜನರ ಜೇನಾಶೆಯಲಿ ಜನಿಸಿ ಬಂತೆಮ್ಮೆದೆಗೆ !
ನರಹಸ್ತ ಹೊಕ್ಕು ಹೊದರನು ಕೆದರಿತೆಲ್ಲರನು
*ಹೊಗೆ-ಜಾಲದಲಿ ಸಿಲುಕಿ ಪತ್ತೆ ಪೆಲ್ಲವು ಕೆಡೆಗೆ
ಹರಿದು ಹುಟ್ಟನು, ಜಿಹ್ವೆಗಿಟ್ಟ ಜೇನನು ನರನು!
'ಕವಿಯೊಳಗೆ ಜೇನಿಂಗೆ ಸರಿಯಾದುದೇ ಇಲ್ಲ!'
ಎಂದು ಕವಿವರರೆನಿತೊ ಬರೆದೆ ಬರೆಯುತಲಿಹರು.

ಬಯಕೆ

★

ಶ್ರೀ. ಬೆನಗಲ್ ರಾಮರಾಯರು, ಬೆಂಗಳೂರು

ರಾಗ—ಕಾಂಬೋದಿ, ರೂಪಕತಾಳ

ನಾನೇನು ನಿನಗನ್ಯನೇ ? ಅಂಬೆ ತಾಯೇ ! |
ದೀನ ಕಂದನ ಮರೆಯ | ದನವರತ ಕಾಯೇ ! ॥ ಪ ॥

ಲೋಕಗಳ ಬೆಳಗಿಪುವ ತೇಜರಾಶಿಯು ನೀನು |
ತೂಳಿದಲಿ ನಿನಗೆಣೆಯೆ ? | ಮಿಣುಕುಹುಳು ನಾನು ॥
ಭೀಕರ ಮಹಾಸಾಗರಾಯತದ ಜಲ ನೀನು |
ನೂಕಿ ಬರುವಲೆಗೇಳ್ವ ಸೀರ್ಪನಿಯು ನಾನು ! ॥ ೧ ॥

ಕಂಗಳಿಗೆ ಗೋಚರಿಪ | ಸಗುಣ ಬ್ರಹ್ಮವು ನೀನು |
ಪೊಂಗಿ ಕುಣಿಯುವ ನಿನ್ನ | ಕೈಗೂಸು ನಾನು ॥
ತುಂಗ ಬಲಶಾಲಿ ಮಹತೋ | ಮಹೀಯಳು ನೀನು |

ಬ್ರಹ್ಮಸೂತ್ರ-ಭಾಷ್ಯಗಳು

ಶ್ರೀ. ಚಿದಿರೆಮಠದ ವೀರಭದ್ರಶಾಸ್ತ್ರಿ
ವೇದ-ಕಾವ್ಯ-ಸ್ಮೃತಿತೀರ್ಥ, ಧರ್ಮಾಚಾರ್ಯ, ವಿದ್ಯಾನಿಧಿ

(ಫೆಬ್ರುವರಿ ತಿಂಗಳ ಸಂಚಿಕೆಯಿಂದ ಮುಂದುವರಿದಪ್ಪು)

ಶ್ರೀಶಂಕರಾಚಾರ್ಯನ ಕಾಲವನ್ನು ಕುರಿತು ಬಹಳ ಅಭಿಪ್ರಾಯ ಭೇದಗಳಿದ್ದರೂ, ಕ್ರಿ. ಶ. ಎಂಟನೆಯ ಶತಾಬ್ದಕ್ಕಿಂತಲೂ ಆತ ಆಧುನಿಕನು ಮಾತ್ರ ಅಲ್ಲವೆಂಬುದನ್ನು ವೃಥವಾಗಿ ಹೇಳಬಹುದು. ಸನಾತನರು ಎರಡನೆಯ ಶತಾಬ್ದಿಯಲ್ಲಿದ್ದನೆಂತಲೇ ನಂಬುತ್ತಿದ್ದಾರೆ. ಈ ವಿಷಯ ಹೇಗಿದ್ದರೂ, ಬ್ರಹ್ಮಸೂತ್ರ ಭಾಷ್ಯಗಳಲ್ಲಿ ಶಂಕರನ ಶಾರೀರಕ ಭಾಷ್ಯವು ಸರ್ವೋತ್ಕೃಷ್ಟವಾಗಿದೆಯೆಂಬು ನಿಷ್ಪಕ್ಷಪಾತಿಗಳು—ಯಾರಾದರೂ— ಹೇಳಬಹುದು. ಇದರಿಂದ ವೇದಾಂತಸಾಹಿತ್ಯದಲ್ಲಿ ಒಂದು ದಿವ್ಯಪ್ರಭೆ ಬೆಳಗಿತು. ಸೂತ್ರ-ಭಾಷ್ಯಗಳ ಪ್ರಾಚೀನಯುಗವು ಮುಗಿದು ಹೋದಮೇಲೆ, ಶಂಕರ ಭಾಷ್ಯದಿಂದ ಮಧ್ಯಯುಗ ಪ್ರಾರಂಭವಾಯಿತು. ಇದರಿಂದ ಮುತ್ತೊಮ್ಮೆ ಬ್ರಹ್ಮಸೂತ್ರಗಳ ಪ್ರಚಾರವು ಅತ್ಯಧಿಕವಾಗಿ ಹಬ್ಬಿತೆಂದು ಭಾವಿಸಲು ಬರುವಂತಿದೆ. ಸೇತು-ಶೀತಲಗಳಲ್ಲಿ ಶಂಕರನ ಅದ್ವೈತಕ್ಕಿದ್ದ ಪ್ರಾಬಲ್ಯವು ಮತ್ತಾವ ಸಿದ್ಧಾಂತಕ್ಕೂ ಇಲ್ಲ. ಏತತ್ಸಂಪ್ರದಾಯಾನುಸಾರಿಗಳಾದ ಗ್ರಂಥಗಳು ಐನೂರಿಗಿಂತ ಹೆಚ್ಚಾಗಿ ಉದ್ಭವಿಸಿ, ಶಂಕರಭಾಷ್ಯಕ್ಕೆ ಟೀಕೆಗಳ ಮೇಲೆ ಟೀಕೆಗಳೂ ವಿಶೇಷವಾಗಿ ಹುಟ್ಟಿದುವು. ವೈವ-ವೈಷ್ಣವರಲ್ಲಿ ಪ್ರಾಮಾಣಿಕ ರಾದವರು, ಶಂಕರಭಾಷ್ಯವನ್ನು ಅಭ್ಯಾಸಮಾಡದೆಯೆ ಪಂಡಿತ ರಾಗುವುದು, ಆಗಲೂ ಈಗಲೂ ಕಾಣುವುದಿಲ್ಲ. ಶಂಕರನ ಗಂಭೀರ ಗಳಾದ ಶೈಲಿ-ಶಯ್ಯೆಗಳು, ಪರಿಭಾಷಾಪಾಟವವು, ಪಾಂಡಿತ್ಯ-ಪ್ರತಿಭೆಗಳು ಅನನ್ಯ ಸಾಮಾನ್ಯಗಳಾಗಿ ಪ್ರಸಿದ್ಧವಾಗಿರುವುದು ಗಮನಿಸತಕ್ಕುದಾಗಿದೆ. ಇದು ಪ್ರತಿವಾದಿ ಭಯಂಕರವಾಗಿದ್ದರೂ ಕೊಂಚ ಸಂಕ್ಷಿಪ್ತವಾಗಿರುವುದರಿಂದ, ಸುರೇಶ್ವರ, ಪದ್ಮಪಾದ, ವಾಚಸ್ಪತಿ, ವಿದ್ಯಾರಣ್ಯ, ಮಧುಸೂದನ, ಅಪ್ಪಯ್ಯದೀಕ್ಷಿತಾದಿ ಪಂಡಿತ ಸಾರ್ವಭೌಮರು ಅದ್ಭುತಗಳಾದ ಗ್ರಂಥಗಳನ್ನು ವಿರಚಿಸಿ, ಅದ್ವೈತಶಾಸ್ತ್ರವನ್ನು ಪೂರ್ತಿಗೊಳಿಸಿದರೆಂದರೆ ಅತಿಶಯೋಕ್ತಿಯಲ್ಲ.

ಶಂಕರನ ಅನಂತರ ಕೆಲವು ನೂರು ವರ್ಷಗಳವರೆಗೂ ಬೇರೆ ಬ್ರಹ್ಮಸೂತ್ರಭಾಷ್ಯಗಳು ಹುಟ್ಟಿಲ್ಲವೆಂದು ಗೊತ್ತಾಗುವುದು. ಇದಕ್ಕೆ ಕಾರಣವು ಶಂಕರಭಾಷ್ಯದ ಪ್ರಭಾವವೆನ್ನುವುದಕ್ಕಿಂತಲೂ ಬೇರೆಯಿಲ್ಲ. ತದ್ವಿರುದ್ಧವಾಗಿ ಆಕ್ಷೇಪಿಸುವವನೊಬ್ಬನೂ ಇರಲಿಲ್ಲ. ಒಂಬತ್ತನೆಯ ಶತಾಬ್ದದ ಅಂತ್ಯದಲ್ಲಿ ಭಟ್ಟಭಾಸ್ಕರನು, ಬ್ರಹ್ಮ-ಸೂತ್ರಗಳಿಗೆ ಭಾಷ್ಯವನ್ನು ವಿರಚಿಸಿ, ಸೋಮಾನಂದ, ಸುಂದರ ಪಾಂಡ್ಯ, ಉತ್ಪಲಾದಿ ಪ್ರಾಚೀನಾಚಾರ್ಯರ ಜ್ಞಾನ-ಕರ್ಮ ಸಮುಚ್ಚಯವಾದವನ್ನು ಮತ್ತೆ ಉದ್ಧಾರಮಾಡಿದನೆನಿಸಬಹುದು. ಈತನ ರಚನೆ ನಿರಾಡಂಬರವಾಗಿ, ತತ್ತ್ವಪ್ರಧಾನವಾಗಿ ವಿದ್ವ-ಲ್ಲೋಕಕ್ಕೆ ಆಸಕ್ತಿಯನ್ನುಂಟುಮಾಡಿತೆಂಬುದನ್ನು ಸಂದೇಹಿಸ ಬೇಕಾಗಿಲ್ಲ.* ಇದರಿಂದಲೇ ಆಗಬಹುದು, ಪ್ರಭಾವಿತನಾಗಿ ಹತ್ತನೆಯ ಶತಾಬ್ದವಲ್ಲಿ ಪ್ರಸಿದ್ಧನಾದ ಶ್ರೀಕಂಠಶಿವಾಚಾರ್ಯನು, ಒಂದು ಒಳಿತಾದ ಸೂತ್ರಭಾಷ್ಯವನ್ನಾವಿಷ್ಕರಿಸಿದನು. ಶ್ರೀಕಂಠನು ತನ್ನ ಭಾಷ್ಯದಲ್ಲಿ ವಿಶಿಷ್ಟಾದ್ವೈತವನ್ನು ಪ್ರಸ್ಥಾಪಿಸಿ, ಶಿವಾಧಿಕ್ಯ ವನ್ನೂ ವೈದಧರ್ಮವನ್ನೂ ಪ್ರಕಾರಗೊಳಿಸಿದ್ದಾನೆ. ಶ್ರೀಕಂಠನಿಗೆ ಬಹಳ ಅನಂತರದಲ್ಲಿದ್ದ ಅಪ್ಪಯ್ಯದೀಕ್ಷಿತನು ಅದಕ್ಕೆ 'ಶಿವಾರ್ಕ-ಮಣಿದೀಪಿಕೆ' ಎಂಬ ವಿಪುಲವಾದ ವ್ಯಾಖ್ಯೆಯನ್ನು ಬರೆದು. ಶ್ರೀಕಂಠ ಭಾಷ್ಯವನ್ನು ಬಹಳವಾಗಿ ಪ್ರಕಾಶಕ್ಕೆ ತಂದು, ಅದನ್ನು ಶಂಕರ-ಭಾಷ್ಯಕ್ಕಿಂತಲೂ ಪ್ರಾಚೀನವೆಂದು ಅಭಿಪ್ರಾಯಪಟ್ಟಿದ್ದಾನೆ. ಶಂಕರ ಭಾಷ್ಯಕ್ಕಿಂತ ಶ್ರೀಕಂಠಭಾಷ್ಯವು ಸ್ವಲ್ಪ ಪ್ರಮಾಣ ಬಾಹುಳ್ಯವುಳ್ಳ ದಾಗಿ ಸುಲಭವಾಗಿದೆ. ಪೂರ್ವಾಚಾರ್ಯರ ಭಾಷ್ಯಗಳು ಸರಿಯಾಗಿಲ್ಲದುದರಿಂದ, ಪ್ರಾಮಾಣಿಕವಾದ ಭಾಷ್ಯವನ್ನು ರಚಿಸು-ತ್ತಿರುವೆನೆಂದು ಶ್ರೀಕಂಠನು, ಶಂಕರಾದ್ವೈತದ ಮೇಲಿರುವ ತನ್ನ ಕಟಾಕ್ಷವನ್ನು ಹೊರಪಡಿಸಿದ್ದಾನೆ. ಈ ಸ್ಥಳದಲ್ಲಿ ವ್ಯಾಖ್ಯಾತೃ-ಗಳಾದ ಅಪ್ಪಯ್ಯದೀಕ್ಷಿತರೂ ಹೀಗೆಯೇ ತಮ್ಮ ಅಭಿಮತವನ್ನು ಹೇಳಿದ್ದಾರೆ. ಪರಮತ ವಿಮರ್ಶನವು ಹೇಗಿದ್ದರೂ, ಶ್ರೀಕಂಠನು ಪ್ರಾಚೀನವಾದ ನೀಲಕಂಠ ಭಾಷ್ಯಾದಿಗಳನ್ನು ಅವಲಂಬಿಸಿಯೇ ತನ್ನ ಭಾಷ್ಯವನ್ನು ರಚಿಸಿದ್ದಾನೆಂದು ಭಾವಿಸುತ್ತೇನೆ. ನೀಲ-ಕಂಠನೂ ಶ್ರೀಕಂಠನೂ ಒಬ್ಬನೇ ಎಂದು ಕೆಲವರು ಹೇಳತೊಡ ಗಿದ್ದಾರೆ. ಅದು ಕೇವಲ ಪ್ರಾಮಾದಿಕವು.†

ಭಾಷ್ಯಕರ್ತೃಗಳಲ್ಲಿ ಶಂಕರನ ಅನಂತರ ಗಣನೆಗೆ ಬಂದವನು ರಾಮಾನುಜಾಚಾರ್ಯನು. ಇವನ ಕೃತಿ ಶ್ರೀಭಾಷ್ಯವು. ಇದು ಶೈಲಿಯಿಂದ ಶಂಕರನ ಗಂಭೀರವಾಕ್ಯನ್ನು ಹೋಲದಿದ್ದರೂ, ಪ್ರಮಾಣ-ಯುಕ್ತಿ-ಬಾಹುಳ್ಯಗಳಿಂದ ಲೋಕವನ್ನಾಕರ್ಷಿಸಿತೆನ್ನ-ಬಹುದು. ಅದ್ವೈತವನ್ನು ಪ್ರತಿಘಟಿಸುತ್ತ ವಿಶಿಷ್ಟಾದ್ವೈತವನ್ನು ಪ್ರಚಾರ ಮಾಡುವುದರಲ್ಲಿ ರಾಮಾನುಜನ ಸಾಮರ್ಥ್ಯವು ಅಸಾ-ಮಾನ್ಯವೆನ್ನದೆ ತಪ್ಪುವುದಿಲ್ಲ. ಶಂಕರನಂತೆ ರಾಮಾನುಜನೂ

---

* ಭಟ್ಟಭಾಸ್ಕರನಿಗೆ ಸಮಕಾಲಿಕನಾದ ಯಾದವಪ್ರಕಾಶನೂ ಸೂತ್ರ-ಭಾಷ್ಯವನ್ನು ವಿರಚಿಸಿದ್ದಾನೆ. ಅದನ್ನವಲೋಕಿಸುವುದಾಗಿಲ್ಲ.

† 'ವಿಭೂತಿ' ಪುಂ. ೩ ಸಂ. ವ. ೯, ಗಳಲ್ಲಿಯ "ನೀಲಕಂಠ ಶ್ರೀಕಂಠ ಭಾಷ್ಯಗಳು: ಶ್ರೀಕಂಠಭಾಷ್ಯ ಪ್ರತಿಜ್ಞೆ" ಎಂಬ ಲೇಖನದಲ್ಲಿ ಈ ವಿಷಯವು ವಿಪುಲವಾಗಿ ಚರ್ಚಿಸಲ್ಪಟ್ಟಿದೆ. ಲೇ.

೫೧ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿ

ಇವರ

ಜ್ವರದ ಗುಳಿಗೆ

ಬಾಟ್ಲಿಗೆ ೧ ರೂ. ೪ ಆಣೆ.

ಎಲ್ಲ ಪ್ರಕಾರದ ಜ್ವರಗಳಮೇಲೆ ದಿವ್ಯ ಔಷಧ!

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಭಾರತವರ್ಷವನ್ನೆಲ್ಲ ಸಂಚರಿಸಿ, ಶಿಷ್ಯ ಸಂಪತ್ತಿನಿಂದ ರಾಜಾಶ್ರಯದಿಂದಲೂ ಮತಪ್ರಚಾರವನ್ನು ಸಾಗಿಸಿ, ತನ್ನ ಭಾಷ್ಯಪರಂಪರಾಭಿವೃದ್ಧಿಗಾಗಿ ಸಮರ್ಥಗಳಾದ ಸಾಧನಗಳನ್ನು ಸಂಪಾದಿಸಿದನು. ಶಾಂಕರಭಾಷ್ಯಕ್ಕಿಂತಲೂ ಶ್ರೀಭಾಷ್ಯವು ದೊಡ್ಡದು. ಕೆಲವು ನೂತ್ನ ಯುಕ್ತಿಗಳನ್ನೂ ಪ್ರತ್ನಭಾವಗಳನ್ನೂ ಪ್ರಕಟಿಸಿ, ತನ್ನ ಅಖಂಡವಾದ ಪಾಂಡಿತ್ಯದಿಂದ ರಾಮಾನುಜನು ಪಂಡಿತರ ಮೆಚ್ಚುಗೆಯನ್ನು ಪಡೆದಿದ್ದನು. ಯಾವ ಕಾರಣದಿಂದಲೋ ಗೊತ್ತಿಲ್ಲವಾಗಲಿ, ಶ್ರೀಭಾಷ್ಯದಲ್ಲಿ ಬ್ರಹ್ಮಸೂತ್ರಗಳ ಸಂಖ್ಯೆ ಶಾಂಕರಭಾಷ್ಯದಲ್ಲಿಗಿಂತಲೂ ಹತ್ತರಷ್ಟು ಕಡಿಮೆಯಾಗಿದೆ. ಈ ಆಚಾರ್ಯನು ೧೧ನೆಯ ಶತಾಬ್ದದ ಆರಂಭದಲ್ಲಿದ್ದನು.

ರಾಮಾನುಜನ ಪ್ರಾಬಲ್ಯದಿಂದ ಶೈವಮತದ ವೈದಿಕತ್ವಕ್ಕೆ ದೊಡ್ಡ ಪೆಟ್ಟುಹತ್ತಿತು. ಆದುದರಿಂದ ಶೈವರಲ್ಲಿಯೂ ಒಬ್ಬ ಮಹನೀಯನು ಅವತರಿಸಿದನು. ಆತನು ಶ್ರೀಪತಿ ಪಂಡಿತಾಚಾರ್ಯನಾಗಿದ್ದಾನೆ. ಶ್ರೀಭಾಷ್ಯಕ್ಕೆ ಪ್ರತಿಯಾಗಿ ಶ್ರೀಕರಭಾಷ್ಯವನ್ನು ಬ್ರಹ್ಮಸೂತ್ರಗಳ ಮೇಲೆ ಗ್ರಥಿಸಿದನು. ಇಂದಿಗೆ ಉಪಲಬ್ಧಗಳಾದ ಸೂತ್ರಭಾಷ್ಯಗಳಲ್ಲಿ ಎಲ್ಲಕ್ಕಿಂತಲೂ ವಿಪುಲವಾಗಿ, ಲಲಿತವಾಗಿ, ನೂರುಗಟ್ಟಲೆ ಪ್ರಾಚೀನಗ್ರಂಥಗಳನ್ನು ಉಪನ್ಯಾಸಿಸತಕ್ಕುದಾಗಿ, ದ್ವೈತಾದ್ವೈತ (ಭೇದಾಭೇದ—ವಿಶೇಷಾದ್ವೈತ) ಮತವನ್ನು ಸ್ಥಾಪಿಸುವುದಾಗಿದೆ. ಮಾತು-ಮಾತಿಗೂ ಪುರಾಣಗಳ ಪ್ರಮಾಣವನ್ನು ವೇಗವಾಗಿ ಬಿಡುವುದರಲ್ಲಿ ಈತನಿಗೀತನೇ ಉಪಮಾನ. ರೇಣುಕ, ದಾರುಕ, ಪರಮ ಶಿವಾರಾಧ್ಯ, ಶೀಲಕಂಠಾಚಾರ್ಯ ಮೊದಲಾದ ಪ್ರಾಚೀನಾಚಾರ್ಯರ ಭಾಷ್ಯಗಳನ್ನೂ, ವೇದಾಗಮೋಪನಿಷತ್ಪುರಾಣೇತಿಹಾಸಗಳನ್ನೂ ಕೂಲಂಕಷವಾಗಿ ಜಾಲಿಸಿಬಪನಾದುದರಿಂದ, ಪರವಾದಿಗಳಿಗಚ್ಚರಿಯುಂಟಾಗುವಂತಹ ಸಾಮಗ್ರಿಯಿಂದ ಲಿಂಗಧಾರಣ ಸಿದ್ಧಾಂತವನ್ನು ಪ್ರಕಾಶಗೊಳಿಸಿ, ವೀರಶೈವರ ಏಕೈಕ ಕೃತಜ್ಞತೆಗೆ ಪಾತ್ರನಾಗಿದ್ದಾನೆ. ವೀರಶೈವರ ಪ್ರಾಚೀನ ವಾಙ್ಮಯವು ಲಯಹೊಂದಿದ ದೋಷವನ್ನು ಈ ಶ್ರೀಕರಭಾಷ್ಯವು ಬಹಳಮಟ್ಟಿಗೆ ತೀರಿಸಿತೆನ್ನಬಹುದು. ಈತನು ರಾಮಾನುಜನಿಗೆ ಸಮಕಾಲಿಕನಾಗಿ, ೧೧ನೆಯ ಶತಾಬ್ದ ಮಧ್ಯದಲ್ಲಿದ್ದನು. ರಾಜಾಶ್ರಯಾದಿಗಳು ಇಲ್ಲದುದರಿಂದಲೂ, ಕೇವಲ ಸ್ವಮತೀಯ ಭಕ್ತ ಪಕ್ಷಪಾತಳಿವನಾದುದರಿಂದಲೂ, ಶ್ರೀಕರಭಾಷ್ಯಪ್ರಚಾರವು ಬರುಬರುತ್ತ ಣವಾಗಿ ನಿರುದ್ಧವಾದಂತೆ ತೋರುತ್ತದೆ. ೧೨ನೆಯ ಶತಾಬ್ದದ ತಿಯಲ್ಲಿ ಗಣ್ಯನೆನಿಸಿದ ಪಾಲ್ಕುರಿಕೆ ಸೋಮನಾಥನು, ಈ ಶ್ರೀಪತಿಂಡಿತನ ಶ್ರೀಕರಭಾಷ್ಯವನ್ನು ತನ್ನ ಪಂಡಿತಾರಾಧ್ಯಚರಿತ್ರದಲ್ಲಿ ಪಯೋಗಿಸಿಕೊಂಡಂತಿದೆ. ಶ್ರೀಪತಿಪಂಡಿತನು ಆಂಧ್ರದೇಶದಲ್ಲಿಯೇ ಹುಟ್ಟಿ, ಆಂಧ್ರದೇಶದಲ್ಲಿಯೇ ಪ್ರಚಾರಮಾಡಿ ಸಂತೃಪ್ತಿಂದಿದ್ದಾನೆ. *

೧೨ನೆಯ ಶತಾಬ್ದ ಮಧ್ಯದಲ್ಲಿ ನಿಂಬಾರ್ಕಾಚಾರ್ಯನು ಒಂದು ಕ್ಕೆ ಸೂತ್ರಭಾಷ್ಯವನ್ನು ವಿರಚಿಸಿದ್ದಾನೆ. ಆದರೆ ಈತನು ಅಭಿದೇಶದಿಂದ ತನ್ನ ಭಾಷ್ಯವನ್ನು ಪ್ರಚಾರ ಮಾಡಿ, ಪಂಡಿತಶಿಷ್ಯರನ್ನು ವಿಶೇಷವಾಗಿ ಪಡೆದಂತೆ ಕಾಣಿಸುವುದಿಲ್ಲ. ಈತನು ಜನ್ಮದಿಂದ ಆಂಧ್ರನಾದರೂ (ನಿಂಬಾಪುರಂ-ಬಳ್ಳಾರಿ) ಮಥುರಾ, ವೃಂದಾವನ ಪ್ರಾಂತದಲ್ಲಿಯೂ, ವಂಗದೇಶದಲ್ಲಿಯೂ, ಭಕ್ತಿತತ್ತ್ವವನ್ನು ಪ್ರಚಾರಮಾಡಿದ್ದಾನೆ. ನಿಂಬಾರ್ಕನು ದ್ವೈತವಾದಿಯಾದರೂ ಅವನ್ನು ವಿಪುಲವಾಗಿ ಪ್ರತಿಪಾದಿಸಲು ಉಜ್ಜುಗಿಸಿಲ್ಲ. ಈತನ ಭಾಷ್ಯವು ಒಂದು ವಿಧವಾಗಿ ಸೂತ್ರಗಳಿಗೆ ಟೀಕೆಯಂತಿದೆ. ಶ್ರೀವೈಷ್ಣವರ ತೆಂಗಲ ಸಂಪ್ರದಾಯ ಸಿದ್ಧಾಂತಗಳು ನಿಂಬಾರ್ಕನಿಗೆ ಸಮಿಾಪವಾಗಿವೆಯೆನ್ನಬಹುದು.

ಶಂಕರ-ರಾಮಾನುಜರ ತರುವಾಯ ಮಧ್ವಾಚಾರ್ಯನ ಪ್ರಾಬಲ್ಯವು ಗಣನೀಯವಾಗಿದೆ. ಈತನ ದ್ವೈತ ಭಾಷ್ಯವು ಕೂಡ ಪ್ರಖ್ಯಾತಿ ಪಡೆಯಿತು. ದ್ವೈತವೆಂದರೆ ಒಂದು ವಿಧವಾಗಿ ರಾಮಾನುಜನ ವಿಶಿಷ್ಟಾದ್ವೈತಕ್ಕೆ ನಾಮಾಂತರವೆಂದು ಹೇಳಬಹುದು. ಈತನ ಮತಾಭಿಮಾನವು ದೃಢತರವಾದುದು. ಶಂಕರಭಾಷ್ಯದ ಕಾಲದಲ್ಲಿ ಬ್ರಹ್ಮಸೂತ್ರಗಳು ೫೫೫ ಮಾತ್ರ ಇದ್ದುವು. ಮಧ್ವಾಚಾರ್ಯನು ತಮ್ಮ ಭಾಷ್ಯದಲ್ಲಿ ಒಂಬತ್ತು ಸೂತ್ರಗಳನ್ನು ಹೆಚ್ಚಾಗಿ ಎಂದರೆ ೫೬೪ ಗಳನ್ನು ವ್ಯಾಖ್ಯಾನಿಸಿದ್ದಾನೆ. ಈ ಅಧಿಕ ಸೂತ್ರಗಳೆಲ್ಲಿಯವೋ ಗೊತ್ತಾಗುವುದಿಲ್ಲ. ಈ ಆಚಾರ್ಯನ ನಾಮದಲ್ಲಿದ್ದ 'ಮಧ್ವ' ಶಬ್ದಕ್ಕೆ ಸಂಸ್ಕೃತದಲ್ಲಿ ಅರ್ಥವು ದೊರೆಯುವುದಿಲ್ಲ. ರಾಮಾನುಜನಿಗಿಂತಲೂ ಮಧ್ವಾಚಾರ್ಯನ ಗ್ರಂಥಸಂಖ್ಯೆಯೂ ಶಿಷ್ಯಸಂಖ್ಯೆಯೂ ಆಗಿನ ಕಾಲದಲ್ಲಿ ಹೆಚ್ಚಾಗಿದೆ. ಭಾಷ್ಯಶೈಲಿಯು ಸ್ವಲ್ಪ ಸುಲಭವಾಗಿದ್ದರೂ, ಪಾಂಡಿತ್ಯ-ಪ್ರತಿಭೆಗಳು ಪ್ರಖರವಾಗಿಯೇ ಇವೆ. ಸಂಪ್ರದಾಯ ಪರಂಪರೆಯೂ ಸ್ಥಿರವಾಗಿದೆ. ಈತನು ೧೩ನೆಯ ಶತಾಬ್ದದ ಮಧ್ಯದಲ್ಲಿದ್ದನು. **ಕರ್ನಾಟಕ** ದೇಶೀಯನೆಂಬುದು ಸುಪ್ರಸಿದ್ಧವೇ ಸರಿ.

ಆಂಧ್ರನಾದ ವಲ್ಲಭಾಚಾರ್ಯನ ಸೂತ್ರಭಾಷ್ಯವು ಚಿಕ್ಕದಾಗಿದೆ. ಆದುದರಿಂದಲೇ ಇದಕ್ಕೆ "ಅಣುಭಾಷ್ಯ" ಎಂದು ಆಚಾರ್ಯನು ನಾಮಕರಣ ಮಾಡಿದ್ದಾನೆ. ಇದರಲ್ಲಿ ಶುದ್ಧಾದ್ವೈತವು ಪ್ರತಿ-

* ಸಿಕಂದ್ರಾಬಾದು ಶಿವಧರ್ಮಗ್ರಂಥಮಾಲೆಯ ಶ್ರೀಕರಭಾಷ್ಯದ ಚತುಸ್ಸೂತ್ರಿಯ ಪೀಠಿಕೆಯಲ್ಲಿ ವಿಶೇಷಗಳನ್ನು ಕಾಣಬಹುದು.

ಪಾದಿತವಾಗಿದೆ. ಪುಷ್ಟಿಮಾರ್ಗವೆಂತಲೂ ಇದಕ್ಕೆ ನಾಮಾಂತರವುಂಟು. ವಲ್ಲಭನು ಮಹಾಭಗವದ್ಭಕ್ತನಾದುದರಿಂದ, ಭಾಷ್ಯವಲ್ಲಿಯೂ ಸಾರಳ್ಯ-ಸಾತ್ತ್ವಿಕತೆಗಳು ಗೋಚರಿಸುತ್ತಿವೆ. ರಾಮಾನುಜ-ಮಧ್ವರ ವೈವನಿಂದೆಯಾಗಲಿ, ಶ್ರೀಪತಿಪಂಡಿತನ ವೈಷ್ಣವನಿಂದೆಯಾಗಲಿ ಆಯಾ ಭಾಷ್ಯಗೌರವಕ್ಕೆ ತಕ್ಕುದಲ್ಲ. ವಲ್ಲಭನೀ ತತ್ತ್ವವನ್ನು ಗಮನಿಸಿಸಿಯೇ ಆಗಬಹುದು, ತಾನು ವೈಷ್ಣವ ಶಿರೋಮಣಿಯಾಗಿದ್ದರೂ, ಶಿವನನ್ನು ಕುರಿತು—ಶಿವನ ಮತವನ್ನು ಕುರಿತು—ಬಹಳ ಔದಾರ್ಯದಿಂದ ಸುಳಿದಿದ್ದಾನೆ. ವಲ್ಲಭನ "ಸಿದ್ಧಾಂತ ಮುಕ್ತಾವಳಿ" "ತತ್ತ್ವಗ್ರಂಥ" "ಪತ್ರಾವಲಂಬನ" ಮುಂತಾದ ಕೃತಿಗಳನ್ನು ಅವಲೋಕಿಸುವುದಾದರೆ ಈ ವಿಷಯವು ಗೋಚರಿಸದಿರದು. ವಲ್ಲಭನು ಆಂಧ್ರನಾದ ನಿಂಬಾರ್ಕನಂತೆ, ತನ್ನ ದೇಶದಲ್ಲಿ ಬಿಟ್ಟು, ಗುಜರಾತು ಪ್ರಾಂತದಲ್ಲಿ ತನ್ನ ಪರಂಪರೆಯನ್ನು ನೆಲೆಗೊಳಿಸಿ ಪ್ರಚಾರಮಾಡಿದ್ದಾನೆ. ಆದರೆ ಈತನ ಭಾಷ್ಯವೂ ಪೆಜ್ಜಾಗಿ ಪ್ರಚಾರವಾಗಿಲ್ಲ. ಈತನು ೧೫೩೫ನೆಯ ಶತಾಬ್ದಿಯಲ್ಲಿ ಇದ್ದನು. ಸೂತ್ರಭಾಷ್ಯ ಕರ್ತೃಗಳಲ್ಲಿ ವಲ್ಲಭನೇ ಇಂದಿಗೆ ಕಡೆಯವನೆಂದು ಸಹಜವಾಗಿ ಭಾವಿಸಬಹುದು.

ನಾಲ್ಕೈದು ನೂರು ವರ್ಷಗಳಿಂದ ಮತ್ತೆ ಬ್ರಹ್ಮಸೂತ್ರ ಭಾಷ್ಯಗಳು ಅವತರಿಸಿಲ್ಲ. ಇದರ ಕಾರಣವು ಸ್ಪಷ್ಟವೇ ಆಗಿದೆ: ಕಳೆದ ಪ್ರಾಚೀನಾಚಾರ್ಯರೆಲ್ಲರೂ ದ್ವೈತಾದ್ವೈತ, ಅದ್ವೈತ, ವಿಶೇಷಾದ್ವೈತ, ವಿಶಿಷ್ಟಾದ್ವೈತ, ದ್ವೈತ, ಶುದ್ಧಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಮೊದಲಾದ ಸಮಸ್ತ ಸಿದ್ಧಾಂತಗಳನ್ನು ನಿರೂಪಿಸಿಯೆ ಇದ್ದಾರೆ. ಆ ಮೇಲೆ ಹೊಸದಾಗಿ—ಪ್ರತ್ಯೇಕವಾಗಿ—ಹೇಳತಕ್ಕ ಅಂಶಗಳೇ ಇಲ್ಲವೆನ್ನಬಹುದು. ಸಾಮಾನ್ಯವಾಗಿ ಸಮಸ್ತ ಸಿದ್ಧಾಂತಗಳು ಸ್ವಲ್ಪ ಹೆಚ್ಚುಕಡಿಮೆ "ದ್ವೈತಾದ್ವೈತ-ವಿಶಿಷ್ಟಾದ್ವೈತ"ಗಳೆಂಬ ತ್ರಿಮತಗಳಲ್ಲಿಯೇ ಅಂತರ್ಗತವಾಗುತ್ತವೆ. ಆದುದರಿಂದ ಶಂಕರ-ರಾಮಾನುಜ-ಮಧ್ವಾಚಾರ್ಯರ ಭಾಷ್ಯಗಳೇ ಪ್ರಚಾರ ಹೊಂದಿವೆ. ಕೆಲವು ಭಾಷ್ಯಗಳು ಕಾಲಗರ್ಭದಲ್ಲಿ ಪ್ರಳಯ ಹೊಂದಿಯೂ ಇರಬಹುದು. ಕೆಲವು ಭಾಷ್ಯಗಳು ನನಗೆ ತಿಳಿಯದಿವೂ (ಬೆಂಗಳೂರಿನ ಶುಕಭಾಷ್ಯ ಮುಂತಾದವು) ಇರಬಹುದು.

ನಾನು ಹೆಸರ್ಗೊಳ್ಳದ ಭಾಷ್ಯಗಳೂ ಕೆಲವುಂಟು. ಉದಾಹರಣಾರ್ಥವಾಗಿ ಮಹಾಮಹೋಪಾಧ್ಯಾಯ ಶ್ರೀ. ಪಂ. ಪಂಚಾನನ ತರ್ಕರತ್ನರು, ಇತ್ತೀಚೆಗೆ ಬ್ರಹ್ಮಸೂತ್ರಗಳ ಮೇಲೆ ಶಕ್ತಿಭಾಷ್ಯವನ್ನು ವಿರಚಿಸಿದ್ದಾರೆ. ಇದು ನೈಯಾಯಿಕರ ಶಕ್ತಿವಾದಕ್ಕೆ ಒಂದು ತೆರನಾಗಿ ಆಕರವೆನ್ನಬಹುದು. ಇದರಂತೆ ಎಷ್ಟೋಜನ ಮತನೀಯರು ಸೂತ್ರಭಾಷ್ಯಗಳನ್ನು ರಚಿಸಿ, ಲೋಕದಲ್ಲಿ ತಮ್ಮ ಪಾಂಡಿತ್ಯ-ಪ್ರಭೆಯನ್ನು ಬೆಳಗಿಸಬಹುದು. ಆದರೆ ಕೇವಲ ನೂತನ ಸಂದೇಶವೇನಾದರೂ ಕೊಡಲ್ಪಡುವುದೇ ಎಂಬುದನ್ನು ಸುಧೀಜನರಾಲೋಚಿಸತಕ್ಕ ವಿಷಯವಾಗಿದೆ.

ಬ್ರಹ್ಮಸೂತ್ರಗಳ ಮೇಲೆ ಇದ್ದಷ್ಟು ಭಾಷ್ಯಗಳೂ, ವಾರ್ತಿಕಗಳೂ, ಟೀಕೆಗಳ ಮೇಲೆ ಟೀಕೆಗಳೂ ಮತ್ತಾವ ಸೂತ್ರಗಳ ಮೇಲೆಯೂ ಇಲ್ಲ. ಆ ಕಾರಣದಿಂದಲೇ ದರ್ಶನಶಾಸ್ತ್ರಗಳಲ್ಲಿ ವೇದಾಂತಕ್ಕಿರುವ ಪ್ರಾಮುಖ್ಯವು ಸಿದ್ಧವಾಗುತ್ತದೆ. ಪ್ರಾಚೀನ ಕಾಲದಲ್ಲಿ ಇದ್ದಂತೆಯೇ ಆಧುನಿಕಕಾಲದಲ್ಲಿಯೂ ಬ್ರಹ್ಮಸೂತ್ರ ಜರ್ಜೆಗಳು ಲೋಕಜೀವಿತದೊಡನೆ ಸೇರಿಸಲ್ಪಡುವುದಾದರೆ, ಭೌತಿಕ ತಾಮಸ ಪ್ರವೃತ್ತಿಗಳ ಉದ್ರೇಕವು ವಿಲೀನವಾಗಿ ಶಾಂತಿ-ಲಾಭವಾಗುವುದರಲ್ಲಿ ಸಂದೇಹವಿಲ್ಲ. ಪ್ರಾಣಿಕೋಟಿಗಳ ವಿವಿಧ ರುಚಿಗಳಿಗೆ ಅಪ್ಯತಮಯವಾದ ಬ್ರಹ್ಮವನ್ನು ಅನುಗ್ರಹಿಸುವುದಕ್ಕಾಗಿಯೇ ಪ್ರಾಚೀನಾಚಾರ್ಯರು ತಮ್ಮ ಅಮೋಘವಾದ ಶಕ್ತಿಯನ್ನು ವಿನಿಯೋಗಿಸಿ, ಭಾಷ್ಯಪ್ರವಚನಗಳಿಂದ ಧರ್ಮಾತ್ಮರಾಗಿದ್ದಾರೆ. *

* ಈ ಲೇಖನದಲ್ಲಿ ಬ್ರಹ್ಮಸೂತ್ರಭಾಷ್ಯಗಳ ಬಾಹ್ಯಪರಿಚಯವನ್ನು ಮಾತ್ರ ಸಾಮಾನ್ಯವಾಗಿ ಕೊಡಲಾಗಿದೆ. ಸಿದ್ಧಾಂತಗಳ ಸಾಙ್ಗಯವಾದ ವಿಸ್ತಾರವು ಬೇರೊಂದರಲ್ಲಿ ವಿಚಾರಿಸತಕ್ಕುದಾಗಿದೆ.



ಮಲೆನಾಡಿನಲ್ಲಿಯ ನನ್ನ ಪ್ರವಾಸ

(ಪ್ರವಾಸ ಪ್ರಬಂಧ)

ಶ್ರೀಮತಿ ತೊಗರೆ ಸರ್ವಮಂಗಳಾಂಬಾ, ಬಳ್ಳಾರಿ.

★

ಕನ್ನಡನಾಡಿನಲ್ಲಿ ಮಲೆನಾಡೆಂದರೆ ಸೌಂದರ್ಯದ ಬೀಡು! ನಮುಗಾಗಿಯೆ ನಿಸರ್ಗವು ಅಲ್ಲಿ ಹಲವು ಚೆಲುವಿನ ತಾಣಗಳನ್ನು ನಿರ್ಮಿಸಿಟ್ಟಿರುವುದು. ಮಾನವನು ನಿರ್ಮಿಸಿದ ಕಲಾಸೌಂದರ್ಯದ ಕೇಂದ್ರಗಳಿಗೂ ಅಲ್ಲಿ ಕೊರತೆಯಿಲ್ಲ. ಎಲ್ಲರೂ ನೋಡಿ ನಲಿಯಬೇಕು.

★

ಶಿವಮೊಗ್ಗೆಗೆ ಹೋಗುವ ಬಸ್ಸು ಏಳು ಗಂಟೆಗೆ ಹೊರಡುವುದು ಎಂದು ಕೇಳಿ 'ಈಗಲೇ ಎದ್ದು ಬಿಡಲೆ?' ಎಂಬ ಆತುರ; ಆದರೆ 'ಮಲಗಿ ಏಳು, ನಾನು ನಿನ್ನ ಆತುರಕ್ಕೆ ಕಡೆ' ಎಂದಿತು ಇರುಳು.

ಮಲೆನಾಡನ್ನು ನೋಡಬೇಕೆಂಬ ಕುತೂಹಲವು, ಹಲವು ದಿವಸಗಳಿಂದಲೂ ನಸಿಯ ರೂಪದಲ್ಲಿಯೆ ಮೂಡಿತ್ತು. ಆ ನಸಿಯು, ಬೆಳಗಿದರೆ (೧೫ನೆಯ ದಿಸೆಂಬರ್ ೪೭) ಹೂಹೋತ್ತು ನಿಂತು ಶೋಭಿಸುವ ಗಿಡವಾಗುವುದಲ್ಲಾ—ಎಂಬ ಸಂತೋಷದಲ್ಲಿ, ಆ ಇರುಳೆಲ್ಲ ನಿದ್ದೆಯೆ ಬರಲೊಲ್ಲದು. ಆಗಾಗ ಎದ್ದೆದ್ದು ಗಡಿಯಾರವನ್ನು ನೋಡಿದರೆ 'ಆಮೆಯು ನಡಿಗೆಯನ್ನು ಈ ರಾತ್ರಿಯ ಮಟ್ಟಿಗೆ ಎರವಲಾಗಿ ತಂದಿದೆಯೇ ಈ ಗಡಿಯಾರ!' ಎನ್ನಿಸಿತು. 'ಹೇಗೂ ಭಾನು ಮೂಡುವನು, ಭಯಪಡಬೇಡ!' ಎಂಬ ಸಂಕೇತದಂತೆ 'ಕೊಕ್ಕೋಕ್ಕೋ' ಎನ್ನುವ ಕೋಳಿಗಳ ಮುಂಗಳಪಾತವನ್ನು ಕೇಳಿ ಹರುಷಗೊಂಡಿತು ಮನಸ್ಸು.

* * *

ಅಂತು ಬೆಳ್ಳಿ ಹೊರಟಿವು. ಒಟ್ಟು ಲೆಕ್ಕ ಎಂದರೆ ನಾನು, ನನ್ನ 'ಅವರು' ಮತ್ತು ನನ್ನ ಮಗ—ಹೀಗೆ ಮೂರು ಜನ ಶಿವಮೊಗ್ಗೆಯ ಬಸ್ಸನ್ನು ಹತ್ತಿದೆವು.

ದಾರಿಯ ಎರಡು ಪಕ್ಕಕ್ಕೂ, ಒರಣದಿಂದ ನಿಂತ ಸೀಪಾಯಿಗಳಂತೆ ಸಾಲಾಗಿ ಹಲಸು, ಮಾವು, ನೀಲ, ಅತ್ತಿ, ಆಲ ಮೊದಲಾದ ಹೆಮ್ಮರಗಳೆಲ್ಲವೂ, ಸೌಹಾರ್ದದಿಂದ ಒಂದಕ್ಕೊಂದು ಬೆರೆತು, ಮಲೆನಾಡನ್ನು ನೋಡಲು ಹೋಗುವ ಅತಿಥಿಗಳನ್ನು— ಸೇನಾಧಿಕಾರಿಯೊಬ್ಬನ ಪುದುವೆಯಾದ ಸಮುದಾಯದಲ್ಲಿ ಸ್ವಾಗತವೀಯುವ ಸೀಪಾಯಿಗಳಂತೆ—ಸ್ವಾಗತಿಸುವುದೋ ಎನ್ನುವಂತೆ ಕಾಣುವುವು.

ನಾವು ಶಿವಮೊಗ್ಗೆಯನ್ನು ತಲುಪಿದ ಸಮಯವೆಂದರೆ, ದಿನಕರನು ದುಡಿದು ಬೇಸರವನ್ನು ಕಳೆಯಲು ಮನೆಗೆ ಮರಳುವ ಸಂತೋಷದಲ್ಲಿ 'ಸೃಷ್ಟಿಯೊಂದಿಗೆ ಚಿನ್ನಾಟವಾಡಿ ಸಿಂಧುರವನ್ನು ಸೃಷ್ಟಿಗೆ ತೂರಿಹೋಗುತ್ತೇನೆ' ಎನ್ನುವ ಕೊನೆಯ ಕಟಾಕ್ಷವನ್ನು ಬೀರಿದ್ದುದು. ತೂರಿದ ಸಿಂಧುರದಲ್ಲಿ ಮಿಂದು 'ಸರಿ ಹೊರಡು, ಮತ್ತೆ ನಾಳೆ ನೋಡುವ!' ಎಂದು, ಎಳಗಾಳಿಯೊಂದಿಗೆ ನಲನಲಿದು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುತಿತ್ತು ಸೃಷ್ಟಿ.

* * *

ಮರುದಿನ ಮುಂಜಾನೆ, ದೇಶ-ವಿದೇಶಗಳ ಹೊಗಳಿಕೆಗೆ ಪಾತ್ರವಾದ ಗೇರುಸೊಪ್ಪೆಯ ತಡಿನಲನ್ನು ನೋಡಲು, ನಮ್ಮ ಸ್ನೇಹಿತರೊಂದಿಗೆ—ಅವರ ಕಾರಿನಲ್ಲಿ—ಹೊರಟೆವು. ಕಾಡನ್ನೇ ಕಾಣದ ನಾವು, ಕಣ್ಣು ಬಿಟ್ಟು ಆ ವನದೇವತೆಯ ವೈಭವವನ್ನು ನೋಡುತ್ತ ತಡಿನಲನ್ನು ಸಮೀಪಿಸಿದೆವು. "ಅದೇ ನೋಡಿ ಫಾಲ್ಸ್!" ಎಂದರು ನಮ್ಮ ಸ್ನೇಹಿತರು. ಭೋರ್ಗರೆಯುವ ದಿಕ್ಕನ್ನು ನೋಡಿದೆ; ನೋಡುತ್ತಲೆ-ತಾಯಮುಖವನ್ನು ಕಂಡೂ ಕಾಣದೆ ಬಳೆದ ಮಗುವಿಗೆ 'ನಿನ್ನ ತಾಯರೂಪವು ಹೀಗೆ ಹೀಗೆ!' ಎಂದು ಹೇಳಿದ ವರ್ಣನೆಯನ್ನೇ ಊಹೆಯಿಂದ ಸ್ಮರಿಸುವ ಮಗುವಿಗೆ 'ಮಗೂ, ಇಗೋ ನಿನ್ನ ಪ್ರತ್ಯಕ್ಷ ತಾಯಿಯೇ ಮುಂದೆ ನಿಂತಿದ್ದೇನೆ ನೋಡು ಮಗು!' ಎಂದು ಹೇಳುವ ಮಾತೆಯ ನುಡಿಯನ್ನು ಕೇಳಿ 'ಅಮ್ಮಾ ಅಮ್ಮಾ' ಎಂದು ಚೀತ್ಕರಿಸಿ ಬಿಗಿದಪ್ಪಿಕೊಂಡು, ಆಕೆಯ ಮಡಿಲಲ್ಲಿಯೆ ಮುಖವನ್ನಡಗಿಸಿ ಆನಂದಬಾಷ್ಪಗಳನ್ನು ಉದುರಿಸುವಂತಹ ಸ್ಥಿತಿಯೆ ನನಗೊದಗಿತು. ಕನ್ನಡತಾಯಿಯ ವೈಭವವನ್ನು ಕಂಡು, ಜಯಜಯಕಾರವನ್ನು ಮನಸ್ವಿಯಾಗಿ ಕಿರಿಚಿಕೊಳ್ಳಲೇ ಎನ್ನಿಸಿತು.

ದಂಗುಬಡಿದು "ಅಪಾ!! ಇದು ನೀರೇ, ಹಾಲೇ? ಕೈಲಾಸ ಪರ್ವತದ ಒಡೆಯನ ತಲೆಯನ್ನು ಬಿಟ್ಟು, ಪಾತಾಳವನ್ನು ಪಾವನ ಮಾಡಲು ಹೋಗುತ್ತಿರುವಳಲ್ಲಾ ಈ ಗಂಗೆ!" ಎಂದು ಅಡಿ ತಪ್ಪಿದರೆ ಮುಡಿ, ಮುಡಿ ತಪ್ಪಿದರೆ ಅಡಿ— ಹೀಗೆ ತಡಿಸಿಲನ್ನೇ ನೋಡುತ್ತ ಅಲುಗಾಡದೆ ನಿಂತುಬಿಟ್ಟೆ. ನಿಂತುನಿಂತಂತೆಯೆ,

"ಅದ್ಭುತ ಕರೆವುದು 'ಬಾಯಿಲ್ಲಿ'
ಭಯ ಗದರಿಸುತಿದೆ 'ನಿಲ್ಲಲ್ಲಿ'"

ಎಂಬ 'ಅಂಬಿಕಾತನಯದತ್ತ'ರ ಕವನದ ಸಾಲುಗಳು ಕಾವಾಗಿ ಬಗೆಯಿಂದ ಹೊರಹೊರಟುವು.

ಅತ್ತ ಇತ್ತ ಹೊರಳಿ ನೋಡಿದೆ. ಪ್ರವಾಸಿಕರ ಬಂಗಲೆಯ ಆವರಣದಲ್ಲಿ, ಪಾಶ್ಚಾತ್ಯ ಯುವತಿಯೊಬ್ಬಳು ಏನನ್ನೋ ಬರೆಯುತ್ತಾ ಕುಳಿತಿದ್ದಳು. ಅವಳಿಗೆ ಮೂರುಗಜದ ಅಂತರದಲ್ಲಿ, ಅದೇ ರಾತಿಯ ಅರುವತ್ತು ವರುಷದ ಮುದುಕಿಯೊಬ್ಬರು ತರುಣಿ ಮಾಡುತ್ತಿದ್ದ ಕೆಲಸದ ದೀಕ್ಷೆಯನ್ನೇ ದಕ್ಷತೆಯಿಂದ ವಹಿಸಿದ್ದರು. 'ಈ ದಿಡುಗಿನ ಬೆಡಗನ್ನೇ ವರ್ಣಿಸಿ ಸ್ಮರಿಸುವರಲ್ಲಾ ಇವರು! ನಿಜ, ತಾಯಿ! ನಿನ್ನನ್ನು ನೋಡಿದ ಮೇಲೆ ಆ ಋಣವನ್ನು ಹಾಡಿ ಹರಸಿ ತೀರಿಸುವ ಕವಿಗಳೇ ನಿನ್ನ ನಿಜವಾದ ಮಕ್ಕಳು; ನನ್ನಂತಹಳು ನಿನ್ನನ್ನು ಕಂಡರೇನು, ಕಾಣದೆ ಹೋದರೆನು? ನಿನ್ನನ್ನು ಪೆಟ್ಟಿದ ಪಾಪದ ಮೊಟ್ಟೆಯೊಂದೇ ನನ್ನ ತಲೆಯ ಮೇಲೆ! ನಿನ್ನನ್ನು ಬಣ್ಣಿಸಿ ಹಾಡಲು ಆಗುವುದೇ ತಾಯಿ ನನ್ನಿಂದ!' ಎಂದುಕೊಳ್ಳುವಾಗ ಕಣ್ಣು ತುಂಬಿಬಂದುವು. ಅಷ್ಟರಲ್ಲಿ 'ಇಲ್ಲಿ ನೋಡಿ! ಇವೆಲ್ಲಕ್ಕೂ ಹೆಸರುಗಳುಂಟು: **ಕಿಂಗ್, ರೋರ್, ರ್ಯಾಕೆಟ್, ಕ್ವೀನ್.**' ಎಂದು ನನ್ನನ್ನು ಸ್ನೇಹಿತೆ ಹೇಳಿದಳು. ಕವಿಗಳು ಕರೆದ ಈ ಹೆಸರುಗಳು ಎಷ್ಟು ಅನ್ವರ್ಥವಾದುವುಗಳು! ತನ್ನ ಗಂಭೀರತೆಯನ್ನು ನಿಮಿಷಮಾತ್ರವೂ ಮರೆಯದೆ, ರಾಜತೇಜಸ್ಸನ್ನು ರಸಾತಲದ ತನಕ ತೂರುತ್ತಿರುವಂತಿದೆ! 'ಕಿಂಗ್' ಪಡಿಸಿಲು. ರಸಿಕರಾಜನೆದುರಿಗೆ ತನ್ನ ಶಕ್ತಿಸಾಮರ್ಥ್ಯವನ್ನು ತೋರಿಸಿ ಪ್ರಶಸ್ತಿಯನ್ನು ಪಡೆಯಬೇಕೆಂಬ ಹುಮ್ಮಸದಿಂದ, ಕೇಕೆಯನು ಹಾಕುತ್ತಾ ಪಣದ ಕಣಕ್ಕೆ ಜಿಗಿಯುವ ಜಟ್ಟಿಯಂತೆ ಪುಟಿಯುತ್ತಿದೆ 'ರೋರ್' ಪ್ರಪಾತ. ಧೈರ್ಯ-ಶೌರ್ಯವನ್ನು ತೋರ್ಪಡಿಸುತ್ತ ಬತ್ತಳಿಕೆಯನ್ನೆಲ್ಲಾ ಬರಿದುಮಾಡುವ ಯೋಧನ ಬಾಣದಂತೆ ಬೀಳುತ್ತಿದೆ 'ರಾಕೆಟ್' ಧಬಧಬೆ. ಹಲವು ಅಭರಣಗಳನ್ನಿಟ್ಟು, ಮುಖದಲ್ಲಿ ನಗೆಯನ್ನು ಹೊತ್ತು, ಸೊಗಸಿನಿಂದ ತಾಳ್ಮೆಯ ಕಿರುಹೆಜ್ಜೆಯನ್ನು ಹಾಕುತ್ತ, ಕೆಲಕಿಂಚಿತ ಹೃದಯದಿಂದ ತನ್ನ ಸ್ವಾಮಿಯನ್ನು ಸ್ವಾಗತಿಸುವ ಗೃಹಿಣಿಯಂತೆ ಜಾರುತ್ತಿದೆ 'ಕ್ವೀನ್' ಜವುಗು. ಬೇಕೆನ್ನಿಸುವವರೆಗೂ ನಿಂತು ನೋಡಿ, ತಡಿಸಿಲಿನ ಮುಡಿಯಾದ ಶರಾವತಿಯಲ್ಲಿ ಆಟ ಮುಗಿಸಿದೆವು; ಬಳಿಕ ಅಲ್ಲಲ್ಲಿ ಕೆಲಸಮಾಡುವ ಸ್ಥಳಗಳನ್ನು ನೋಡಿದೆವು. ಕಾಡನ್ನು ಕಡಿದು ನಾಡನ್ನು ಮಾಡುತ್ತ, ತಡಿಸಿಲಿಗೂ ತಡೆಹಾಕಿ, ಸೃಷ್ಟಿಸೌಂದರ್ಯವನ್ನೆಲ್ಲ ತಮ್ಮ ಮೆದುಳಿನಿಂದ ಮೆಯ್ದು ಎಂಜಿನಿಯರುಗಳಿಗೆ ಪ್ರೋತ್ಸಾಹಕೊಟ್ಟು, ಕವಿಜೀವನಕ್ಕೆ ಧಕ್ಕೆತಂದರೂ ಜನಜೀವನಕ್ಕೆ ಉಪಯುಕ್ತ ವೆನಿಸುವಂತೆ ಮಾಡುವ ಸಾಹಸದಿಂದ ಅಲ್ಲಿ ಕೆಲಸ ನಡೆಯಿಸಿ, ನಿತ್ಯ ಸಾವಿರಾರು ಬಡಜೀವಿಗಳಿಗೆ— ಇಂತಹ ಕ್ಷಾಮದಲ್ಲಿ— ಬದುಕಲು ಒಂದು ಬಗೆಯನ್ನು ಒದಗಿಸಿಕೊಟ್ಟು, ಪ್ರಜರ ಹಿತವನ್ನೂ ತಮ್ಮ ಮೇಲ್ಮೆರೆಯನ್ನೂ ಕಾಯ್ದುಕೊಂಡ ಮೈಸೂರು ಸರಕಾರಕ್ಕೆ ಎಷ್ಟು ಸಲ ಧನ್ಯವಾದಗಳನ್ನರ್ಪಿಸಿದೆವೇನೊ!

ಇವೆಲ್ಲವನ್ನೂ ಸುತ್ತಿ ನೋಡುವುದರೊಳಗೆ ಘಂಟೆ ಏಳಾಗಿತ್ತು. 'ಏಳಾಗಿದೆ, ಏಳಿ! ಏಳಿ! ಹೊತ್ತಾಗಿದೆ ಹೋಗುವ!' ಎಂದು ಕಾರಿನಲ್ಲಿ ಹತ್ತಿದೆವು. 'ಈ ದೃಶ್ಯವನ್ನು ನೋಡುವುದು ನನ್ನ ಜೀವಮಾನದಲ್ಲಿ ಇದೇ ಮೊದಲು, ಇದೇ ಕೊನೆ' ಎಂದು, ತಡಿಸ್ಸಿಲು ಮರೆಯಾಗುವ ವರೆಗೂ ಮರಳಿ ಮರಳಿ ನೋಡಿದೆ. ಕಣ್ಣಿಗೇನೋ ಅದು ಕಾಣದಾಯಿತು; ಆದರೆ ಜೀವವಿರುವ ವರೆಗೂ ಮರೆಯಲಾಗದ ಆ ದೃಶ್ಯವನ್ನು ಮನವು ಮುಚ್ಚಿಟ್ಟುಕೊಂಡಿತು.

ಬೆಟ್ಟವನ್ನು ಇಳಿಯುತ್ತ, ಅಡ್ಡಬರುವ ಹಳ್ಳಿಗಳಲ್ಲಿ ಹಾಯುತ್ತ, ಕಾರು ವೇಗವಾಗಿ ಓಡುತ್ತಿತ್ತು. ಮೊದಲೇ ನಮ್ಮನ್ನು ಬೆದರಿಸುತ್ತಿದ್ದ ಚಳಿಗೆ ಕಾರಿನ ವೇಗವು 'ಟಾನಿಕ್' ಕೊಟ್ಟಂತಾಗಿ, ಭಯಪಡುವಂತಾಯಿತು. ಕಾರಿನ ಕಿಟಕಿಯ ಗ್ಲಾಸುಗಳನ್ನೆಲ್ಲಾ ಏರಿಸುತ್ತಿದ್ದರು. ನನ್ನ ಬದಿಗಿರುವ ಗ್ಲಾಸನ್ನೂ ಏರಿಸಲು ಸೂಚಿಸಿದರು. ತೃಪ್ತಿ ಎನಿಸದ ಮಾನವನ ಮರ್ಕಟತನಕ್ಕೆ ಕೊನೆಯಿದೆಯೆ? ಕಡೆಗೆ ಕಿಟಕಿಯಿಂದ ತಲೆಯನ್ನು ಹೊರಹಾಕಿ ಮೇಲೆ ನೋಡಿದೆ. ಶಿಂಗಳು ತನ್ನ ಜೆಲುವನ್ನೆಲ್ಲಾ ಸೃಷ್ಟಿಗೆರಚಿ, ಸಂತೋಷದಿಂದ ಮನಶ್ರೀಯೊಡನೆ ಕಣ್ಣುಮುಚ್ಚಾಲೆಯನ್ನು ಆಡುತ್ತ, ಅಡ್ಡ ಬಂದುವುಗಳಿಗೆ ಚಕ್ಕಳಗುಳಿಕೆಯನ್ನಿಟ್ಟು, ಅತ್ತ ಸರಿಸಿ ಓಡುತ್ತಿರುವಂತೆ ಕಂಡಿತು. ಹುಡುಗರೆಲ್ಲಾ 'ಮಪ್ಲರ್, ಸ್ವೆಟರ್' ಎಂದು ತಡಬಡಿಸುತ್ತಿದ್ದರು. 'ಅಯ್ಯೋ ಹುಚ್ಚೇ! ನಿನ್ನಿಂದ ಆವರಿಗೆ ಎಷ್ಟು ತೊಂದರೆ!' ಎಂದು ಗ್ಲಾಸನ್ನು ಏರಿಸಿ, ಗ್ಲಾಸಿನಲ್ಲಿ ಕಂಡೂ ಕಾಣದಹಾಗೆ ಸರಿದು ಹೋಗುತ್ತಿದ್ದ ಬನವನ್ನು ಬಿಟ್ಟು ಶಿವಮೊಗ್ಗವನ್ನು ಸೇರಿದೆವು.

ಮರುದಿವಸ ಮ್ಯಾಜಿಫ್ಯಾಕ್ಟರಿ, ಹೈಸ್ಕೂಲು ಎಲ್ಲವನ್ನೂ— ಕಾರಿನಲ್ಲೆ ಕುಳಿತು ಸುತ್ತುಹಾಕಿದೆವು. ಕಡೆಗೆ ಆಸ್ಪತ್ರೆಗೆ ಬಂದೆವು. 'ಗುಡಿ ನೋಡಿದರೆ ತಿಳಿಯುತ್ತೆ ದೇವರ ಸತ್ಯ!' ಎನ್ನುವಂತೆ, ಆಸ್ಪತ್ರೆಯನ್ನು ನೋಡುತ್ತಲೆ ಒಳಕ್ಕೆ ಹೋಗಿ ನೋಡಬೇಕೆನ್ನುವ ಆಸೆ ತಲೆದೋರಿತು. ಆದರೊಂದಿಗೆ ಭಯವು ಕೂಡ ಬೆರೆತಿದ್ದಿತು. ಏಕೆಂದರೆ ನಮ್ಮ ಊರಿನ ಆಸ್ಪತ್ರೆಯಲ್ಲಿ, ಜನರನ್ನು ಕಂಡಕೂಡಲೆ, 'ಹಚ್ ಹುಚ್! ಅಲ್ಲಿ ನಿಲ್ಲಿ, ಇಲ್ಲಲ್ಲ!' ಎಂದು ಸಿಡುಕಿನಿಂದ

ಸ್ವಾಗತಿಸುವುದೇ ನಮಗೆ ದೊರೆತ ಪ್ರಥಮಪಾಠ. 'ಇಲ್ಲಿಯ ಸ್ವಾಗತವು ಯಾವ ರೀತಿಯದೋ ಏನೊ?'ಎಂಬ ಸಂದೇಹದಿಂದಲೆ ಒಳಹೊಕ್ಕೆವು. ಒಳಹೊಗುತ್ತಲೆ ಗತಿಸಿದ ರಾಜರ್ಷಿ—ಕೃಷ್ಣ-ರಾಜೇಂದ್ರ ಒಡೆಯರ ಫೋಟೋ ಕಾಣಿಸಿತು. ರಾಜದರುಶನ, ಶುಭಚಿಹ್ನೆಯಲ್ಲವೆ? ಒಳಗಿನಿಂದ ಅಸಿಸ್ಟಂಟ್ ಸರ್ಜನರು ಬರುತ್ತಿದ್ದರು. ನಮ್ಮನ್ನೆಲ್ಲಾ ನೋಡಿ "ಹೋ! ನಮಸ್ಕಾರ, ಏನು?" ಎಂದರು. 'ಹೋ!' ಎಂದಾಕ್ಷಣ ಆಯಿತು ನಮ್ಮ ಕೆಲಸವೆಂದು ಪೆಚ್ಚುತನವ ಮೋರೆಯನ್ನಾಶ್ರಯಿಸುವುದರೊಳಗೆ 'ನಮಸ್ಕಾರ' ಎನ್ನುವುದನ್ನು ಕೇಳಿ 'ಅಯ್ಯೋ ಪೆಚ್ಚೇ! ಅವರು ಹೇಳುವುದಕ್ಕೆ ಮೊದಲೇ ನಮಸ್ಕಾರವೆನ್ನಬಾರದಿತ್ತೇ ನಾವು!' ಎನ್ನಿಸಿತು. ನಮ್ಮವರ ಸ್ನೇಹಿತರು 'ಇವರಿಗೆ ಆಸ್ಪತ್ರೆಯನ್ನು ನೋಡುವ ಇಚ್ಛೆ ಇದೆ; ಇವರು ಬಳ್ಳಾರಿಯವರು!' ಎಂದು ಪರಿಚಯಮಾಡಿಕೊಟ್ಟರು. 'ಸರಿ, ಸಂತೋಷ! ಹೀಗೆ ಬನ್ನಿ!' ಎಂದು ಆಸ್ಪತ್ರೆಯ ಎಲ್ಲಾ ಭಾಗಗಳನ್ನೂ ವಿವರ ವಿವರವಾಗಿ ತೋರಿಸಹೊರಟರು. ಎಮರು ಬರುತ್ತಿದ್ದ ನರ್ಸುಗಳು ಕೂಡ ತಲೆಯನ್ನು ಸ್ವಲ್ಪ ತಗ್ಗಿಸಿ ನಮಸ್ಕಾರದ ಚಿಹ್ನೆಯನ್ನೇ ತೋರಿಸುತ್ತಾ ತಮ್ಮ ಕೆಲಸಗಳಿಗೆ ನಡೆಯುತ್ತಿದ್ದರು. ನಾವು ಆಗ 'ಸ್ಪೇಶಲ್ ರೂಮು'ಗಳ ಬಾಗಿಲಲ್ಲಿದ್ದೆವು. ಆ ರೂಮುಗಳ ಸ್ವಚ್ಛತೆ, ಅನುಕೂಲತೆ, ಮೇಲೆ ಡಾಕ್ಟರುಗಳು ನರ್ಸುಗಳು ತೋರುವ ಪರಳತೆ ಇವೆಲ್ಲವನ್ನೂ ನೋಡಿ, ಭಯವೆಲ್ಲವೂ ಮಮತೆಯ ರೂಪವನ್ನು ತಾಳಿ ಮನಸೋತು: 'ಈ ರೂಮಿನಲ್ಲಿ ಒಂದು ದಿನವಾದರೂ ತಮ್ಮ 'ಇನ್-ಪೇಷಂಟ್' ಆಗಿರಬೇಕೆನ್ನಿಸುತ್ತೆ, ಡಾಕ್ಟರೇ!' ಎಂದುದಕ್ಕೆ, 'ನಮ್ಮ ಕರ್ತವ್ಯವನ್ನು ನಾವು ಮಾಡುತಿದ್ದೇವೆ. ಇದರಲ್ಲಾವ ದೊಡ್ಡತನವಿದೆ?' ಎನ್ನುವ ತಿಳಿನಗುವನ್ನು ತುಟಿಗಳಲ್ಲಿಯೆ ತೇಲಿಸಿಬಿಟ್ಟರು ಆ.ಸರ್ಜನರು. ಹೀಗೆಯೆ ನಡೆದುಕೊಂಡು ಮಹಾರಾಜರ ಫೋಟೊ ಇರುವಲ್ಲಿಗೆ ಮತ್ತೆ ಬಂದೆವು. 'ಇವರು ನಮ್ಮ ಮಹಾರಾಜರು!' ಎಂದು ಅಭಿಮಾನದಿಂದ ಹೇಳಿದರು ಡಾಕ್ಟರರು, 'ಇಂತಹ ರಾಜರಾದುದರಿಂದಲೇ ನಿನ್ನಂತಹ ಪ್ರಜರು' ಎಂದುಕೊಂಡೆ (ಮೈಸೂರು ಸಂಸ್ಥಾನದ ಹಲಕೆಲವು ಭಾಗಗಳಲ್ಲಿ ಶ್ರೀಮಂತರು, ಶ್ರೀಮಂತರ ಪತ್ನಿಯರು ತಮಗೆ ಇಷ್ಟವಿರುವ ವಾರ್ಡುಗಳನ್ನು ಕಟ್ಟಿಸಿಕೊಟ್ಟು, ಶ್ರೀಮಂತಿಕೆಯನ್ನು ಆಚಂದ್ರಾರ್ಕವಾಗಿ ಉಳಿಸಿಕೊಂಡಿದ್ದಾರೆ). ಕಾರಿನ ವರೆಗೂ ಬಂದು, ನಮಸ್ಕಾರದೊಂದಿಗೆ ನಮ್ಮನ್ನು ಬೀಳ್ಕೊಟ್ಟು ಹೋದರು ಆ. ಸರ್ಜನರು. 'ಕೆಂಪು ತಂಪಾದ ಭೂಮಿಯ ಗುಣಕ್ಕೂ, ಕಪ್ಪು-ಕಾವಿನ ನೆಲದ ಗುಣಕ್ಕೂ ಎಷ್ಟು ಉತ್ತರ-ದಕ್ಷಿಣಗಳು?' ಎನ್ನಿಸಿತು ನನಗೆ.

ಆಲ್ಲಿಂದ ಉಡುಪಿಗೆ ಹೊರಡುವ ಬಸ್ಸಿನ ಒಡಲನ್ನು ಆಶ್ರಯಿಸಿದೆವು. ಮುಂಬರುವ ಆಗಾಧವಾದ ಆಗುಂಬೆಯನ್ನು ನೋಡಲು ಹಾತೊರೆಯುತ್ತಿತ್ತು ಮನವು.

ನಾವು ಆಗುಂಬೆಯ ಬೆಟ್ಟವನ್ನು ಪತ್ತಿ ಇಳಿದುದು, ಸೂರ್ಯಾಸ್ತಮಯ ಕಾಲವಿನ್ನೂ ಎರಡುವರೆ ಘಂಟೆಗಳ ಕಾಲ ಮುಂದಿರುವಾಗ; ಆದುದರಿಂದ ಅಸ್ತಮಯವನ್ನು ನೋಡಲು ಆಗದೆ ಹೋದರೂ, ನಿಸರ್ಗದ ವೈಚಿತ್ರ್ಯವನ್ನೂ ಬೆಟ್ಟದ ಬೆದರಿಕೆಯನ್ನೂ ಕಾಣಬಹುದಲ್ಲ—ಎನ್ನುವ ಒಂದು ವಿಧವಾದ ಸಮಾಧಾನವು ಮನಸ್ಸನ್ನು ಸಂತಯಿಸಿತು. ಟ್ಯಾಕ್ಸಿಯು ಬೆಟ್ಟದ ಶಿಖರವನ್ನು ಮುಟ್ಟಿ ಹೊರಳುವಾಗ, ಮೇಘವೂ ಸೂರ್ಯರಶ್ಮಿಯೂ ಬೆರೆತು, 'ಇದೇನು? ಎಲ್ಲವೂ ಸಮುದ್ರಮಯವಾಗಿರುವುದಲ್ಲ!' ಎಂಬ ಆಶ್ಚರ್ಯವು ಕೆಲವು ನೋಟಕರನ್ನಾದರೂ ಆವರಿಸಬಹುದು. ಅಥವಾ 'ಗಗನ ವಿಮಾನದಲ್ಲಿ ಕುಳಿತಿರುವೆವೊ' ಎಂಬ ಭ್ರಮೆಯೂ ಉಂಟಾಗಬಹುದು. ದೃಷ್ಟಿಸಿ ಪಾತಾಳವನ್ನು ನೋಡಿದರೆ ತೆಂಗು, ಅಡಿಕೆ, ಉಳಿದ ಹೆಮ್ಮರಗಳೆಲ್ಲ—ಅದೇ ಆಗ ನೆಲವನ್ನು ಬಿಟ್ಟು ಮೇಲೆದ್ದ ಸಸಿಗಳಷ್ಟೇ ಕಾಣಿಸುತ್ತಿದ್ದುವು. ಅನುಭವವಿಲ್ಲದವರು 'ಅಮ್ಮಮ್ಮಾ' ಎಂದು ಕಣ್ಣುಕಟ್ಟಿಕೊಂಡು ಕುಳಿತುಕೊಳ್ಳುವ ದೃಶ್ಯವದು. ೧೪–೧೫ ಸುತ್ತುಗಳಲ್ಲಿ ಬೆಟ್ಟವನ್ನು ಇಳಿದು ಸೋಮೇಶ್ವರಕ್ಕೆ ಬಂದೆವು.

ಉಡುಪಿಯು ಸಮೀಪಿಸುತ್ತ ಬಂದಂತೆಲ್ಲಾ ಕೃಷ್ಣನ ನೆನಹು ದೂರವಾಗಿ, ಹೋಟೆಲಿನ ವಾಸನೆಯ ನೆನಹೇ ಮೊದಲಾಯಿತು. ಹಳ್ಳಿಯಿಂದ ಮೊದಲ್ಗೊಂಡು ದಿಲ್ಲಿಯ ವರೆಗೂ ಹರಡಿರುವ ಹೊಟೆಲುಗಳಿಂದ ಪರಿಚಿತವಾದ ಉಡುಪಿಗೆ ಹೋಗಿಯೂ ಹೊಟೆಲನ್ನು ಮರೆಯುವುದೆಂದರೇನು? ಕಡೆಗೆ, ಹೋಗುತ್ತಲೆ ಮೊದಲು ನಾವು ಹೊಕ್ಕಿದ್ದು ಹೋಟೆಲನ್ನೆ ಹೊರತು ಕೃಷ್ಣನ ಮಂದಿರವನ್ನಲ್ಲ. ಹೋಟೆಲಿನ ಮೇಲಿರುವ ನಮ್ಮ ಅಚಲಭಕ್ತಿಗೆ ಕೃಷ್ಣನು ಮೆಚ್ಚಿರಬೇಕು; ಇಲ್ಲದೆ ಹೋದರೆ ತಿಳಿದವರ ಮನೆಯಲ್ಲಿ ತಂಗದಂತೆ ಮಾಡಿ, ಹೋಟೆಲಿನಲ್ಲಿಯೇ ತಂಗಿಸಿ ಅದರ ವಾಸನೆಯನ್ನೇ ಅಜೀರ್ಣವಾಗುವಂತೆ ಮಾಡಿಸಬೇಕಿತ್ತೇಕೆ?

ಬೆಳಗ್ಗೆ ಗುಡಿಯೊಳಗೆ ಹೋಗುತ್ತ, ಯಾತ್ರಿಕರ ಬೇಟೆಯಾಡುತ್ತಿದ್ದ ಕ್ಷೇತ್ರಬ್ರಾಹ್ಮಣರೊಬ್ಬರು ಬಂದು, 'ಮೊದಲು ಈ ಹೊಂಡದಲ್ಲಿ ಸ್ನಾನಮಾಡಿ; ಆ ಮೇಲೆ ಮತ್ತೆ ಬರುತ್ತೇನೆ!' ಎಂದು ಹೇಳಿ, ಇನ್ನೂ ಕೆಲವು ಕಟ್ಟಳೆಗಳನ್ನು ತಿಳಿಸಿ ಹೋದರು. ಹೇಳಿದಂತೆ ಆತ ಬಂದು ಮಂಟಪಗಳನ್ನೆಲ್ಲಾ ಸುತ್ತಿಸಿ, ಆ ಆ ಸ್ಥಳಗಳ ಮಹತ್ತ್ವವನ್ನೂ ಉಳಿದ ವಿಷಯಗಳನ್ನೂ ವಿವರಿಸುತ್ತಾ, 'ಪಂಡರೀಪುರದಲ್ಲಿ ನಾದಬ್ರಹ್ಮ, ತಿರುಪತಿಯಲ್ಲಿ ಕಾಂಚನಬ್ರಹ್ಮ, ಮುಖ್ಯ ಇಲ್ಲಿ ನಡೆಯುವುದು ಅನ್ನಬ್ರಹ್ಮ' ಎಂದು ಹೇಳಿದರು. 'ಮೂವತ್ತೆಲೆಗೆ ನೀಡುವ ಮೃಷ್ಟಾನ್ನ ಬೇರೆ, ನೂರೆಲೆಗೆ ಹಾಕುವ ಪ್ರಸಾದವು ಬೇರೆ, ಉಳಿದ ಎಲೆಗಳಿಗೆ ಒಗೆಯುವ ಕವಳವು ಬೇರೆ' ಎನ್ನುವುದು ಅವರ ಮಾತಿನಿಂದ ತಿಳಿಯಿತು. ರೈಲಿನಲ್ಲಿ ೧–೨–೩ ನೆಯ ಕ್ಲಾಸುಗಳು ಇರುವಂತೆ, ಉಡುಪಿಯ ಅನ್ನಬ್ರಹ್ಮದ ಜಾತ್ರೆಯಲ್ಲಿಯೂ ೧–೨–೩ ನೇಯ ಕ್ಲಾಸುಗಳ ಊಟಗಳು ಇವೆ. ಸಂಖ್ಯಾಭೇದವು ಮಹಾಪಾತಕವೆಂದು ಉಪದೇಶ ಮಾಡುವ ಗುರುಗಳೇ ಇವರ ಗುರು. ದೇವರ ದೇವ ಹಿರಿಯರ ಕೈಯಿಂದ ಕಿರಿಯನಾಗಿದ್ದರೂ ಹಿರಿಯನೇ ಎನ್ನಿಸಿತು. ಕಡೆಗೆ

ಕೃಷ್ಣನ ದರುಶನವನ್ನು ಮಾಡಿಸಿ, ಒಂದು ಬೋರ್ಡನ್ನು ತೋರಿಸಿದರು. ಆ ಬೋರ್ಡಿನಲ್ಲಿ ಸಾವಿರಗಟ್ಟಲೆಯಿಂದ ಮೊದಲುಗೊಂಡು ೩-೮-೦ ಯ ವರೆಗೂ, ಕೃಷ್ಣನಿಗೆ ಪೂಜೆಯಾಗುವ ವಿಧಿ-ವಿಧಾನಗಳನ್ನೆಲ್ಲ ಬರೆದಿತ್ತು. 'ಕಡೆಯ ಪೂಜೆಯೇ ಕೃಷ್ಣನಿಗೆ ಪ್ರಿಯವಾದ ಹಾಲು ಬೆಣ್ಣೆಯ ಪೂಜೆ; ಮಾಡಿಸಿ!' ಎಂದರು ಆ ಬ್ರಾಹ್ಮಣರು. 'ಗೋಕುಲದ ಗೋಪಿಯರ ಮನೆಯ ಹಾಲು ಬೆಣ್ಣೆಗಳೆಲ್ಲವೂ ಸಾಲದ ನಿನಗೆ ೩-೮-೦ ಗಳ ಹಾಲುಬೆಣ್ಣೆ ಸಾಕೇ ದೇವ?' ಎಂದಿತು ನನ್ನ ಮನಸ್ಸು. "ಪೂಜೆ ಮಾಡಿಸುವ ಹೊತ್ತು ನಮಗಿಲ್ಲ, ಬಸ್ಸು ಹೋಗುತ್ತದೆ, ಏನಾದರೂ ಕಾಣಿಕೆ ಹಾಕಿ ಹೋಗುವವರೇ ನಾವು!" ಎಂದು ನಿಶ್ಚಲತೆಯಿಂದ ಹೇಳಿಬಿಟ್ಟರು ನಮ್ಮವರು. 'ಬೇಸ್ತ್ ಕೊಟ್ಟತಲ್ಲಾ ಈ ಆಸಾಮಿ' ಎಂದುಕೊಂಡು 'ಬಂದವರು ಪೂಜೆ ಮಾಡಿಸದೆ ಪ್ರಸಾದವಿಲ್ಲದೆ ಹೋಗಬಾರದು' ಎಂಬ ಬೋಧನೆ ಮಾಡಿದ ಬ್ರಾಹ್ಮಣ. 'ಪರವಾ ಇಲ್ಲ, ಎಲ್ಲಿದ್ದರೂ ಆ ಕೃಷ್ಣನ ಪ್ರಸಾದವೆ,' ಎಂದರು ಈ ವರ್ತಕರು. ಇವರ ಸಂಭಾಷಣೆಯನ್ನು ಕೇಳಿ 'ಸೇರಿಗೆ ಸವ್ವಾಸೇರು, ಜಿನ್ನಾಗಿಯೇ ಇದೆ!' ಎಂದು ತುಂಟ ನಗು ತುಳುಕಿಸುತ್ತಿತ್ತು ನನ್ನನ್ನು. 'ಒಂದೊಂದು ಸ್ಥಳಕ್ಕೂ ಕಾಲುಕಾಲು ಘಂಟೆ ಲೆಕ್ಚರು ಹೊಡೆದಿರಿ, ಸಾರ್ಥಕವಾಗಲಿಲ್ಲ! ನಿಮ್ಮ ಲೆಕ್ಚರಿನ ಶೀವಿ-ಶೈಲಿಯನ್ನು ನಮ್ಮ ಊರಿನ ನಾಡಹಬ್ಬದ ಸಮಿತಿಯ ಸದಸ್ಯರಾದವರು ಕೇಳಿದ್ದರೆ, ನಾಡಹಬ್ಬದಲ್ಲಿ ಒಂದು ದಿನವಾದರೂ ತಮಗೆ ದಿವಾಸಲಾಗುತ್ತಿತ್ತು, ಸ್ವಾಮಿ! ಏನು ಮಾಡುವುದು ನಿಮ್ಮ ಶ್ರಮವೆಲ್ಲವೂ ವ್ಯರ್ಥವಾಯಿತು!' ಎಂದು ಮನದಲ್ಲಿಯೆ ಮರುಗಿದೆ. ಮುಂದೆ ಮಂಗಳೂರನ್ನು ಮುಟ್ಟಿಸುವ ಬಸ್ಸಿನಲ್ಲಿ ಮಂಡಿಸಿದೆವು.

ಕಾರ್ಕಳವನ್ನು ತಲುಪಿದ ಕೂಡಲೆ ಅಲ್ಲಿ ನೋಡುವುದೇನು? ಗೋಮಟೇಶ್ವರನನ್ನು ತಾನೆ? ಉಳಿ ಪಾವಟಿಗೆಗಳನ್ನು ಹೆತ್ತ, ವಿಶಾಲವಾದ ಬಂಡೆಯ ಬಯಲಿನಲ್ಲಿ ತಾನೇ ತಾನಾಗಿ ನಿಂತಿದ್ದಾನೆ ಗೋಮಟೇಶ್ವರನು. ನಗ್ನವಾಗಿ ನಿಂತ ಆ ಭವ್ಯಮೂರ್ತಿಯನ್ನು, ಎಷ್ಟು ಸಲ ನೋಡಿದರೂ ನೋಟಕರಿಗೆ ಸಾಕೆನಿಸದು. ಮಾನವನ ಪಾಪಿಮಯ ಜೀವನಕ್ಕೆ ಎಡೆಗೊಡದೆ, ಮಾತಾಪಿತೃವಿನ ಮುಮತೆಯ ನೋಟವನ್ನೇ ಮೂಡಿಸಿ, ಮುಖದಲ್ಲಿ ಹಸುಗೂಸಿನ ಮುಗ್ಧತೆಯನ್ನೆ ಬೀರುತ್ತ ಮುದ್ದಾಗಿ ನಿಂತ ಆ ಮಹಾಮೂರ್ತಿಯನ್ನು ನೋಡಿದರೆ—ಎತ್ತ ಆಡಿಸಲೇ ಎನ್ನದಿರದು ಮನವು. ಆ ಮೂರ್ತಿಯನ್ನು ಮಾಡಿದ ಶಿಲ್ಪಿಗನ ಚತುರತೆಯನ್ನು ಇಂದು ನೋಡುವ ಶಿಲ್ಪಿಗಳಾಗಲಿ, ಕವಿಗಳಾಗಲಿ ಅಂದಿನ ಚತುರತೆಯ 'ಶಹಭಾಷ್ ಗಿರಿ'ಯನ್ನು ಹೊಗಳಬಲ್ಲರೇ ಹೊರತು, ನನ್ನಂತವಳಿಂದ ಸಾಧ್ಯವಿಲ್ಲ. ಅಲ್ಲಿಯ ಇನ್ನುಳಿದ ಬಸದಿಗಳನ್ನು, ಬಸ್ಸು ಹೊರಡುತ್ತವೆಂಬ ಭಯದಿಂದ ನೋಡಲು ಆಗಲಿಲ್ಲ. ದೂರದಿಂದ ಕಾಣುವ ಬಸದಿಗಳ ಹೊರಭಾಗವನ್ನು ಕಂಡು 'ಅಗೋ ಅಲ್ಲಿದೆ ಬಸದಿ' ಎಂದು ಬಸ್ಸ್-ಸ್ಟ್ಯಾಂಡಿಗೆ ಧಾವಿಸಿದೆವು. ಆದಿನ ರಾತ್ರಿಯೆ ಮಂಗಳೂರಿನ ಶೃಂಗಾರವನ್ನು ಕಂಡೆವು.

ಮಂಗಳೂರಿನ ಸ್ತ್ರೀಯರು ಸರಸ್ವತಿಯನ್ನು ಸ್ವಾಧೀನ ಪಡಿಸಿಕೊಂಡ ವತ್ಸಲೆಯರಾಗಿಯೂ, ಸರ್ವಮಂಗಳೆಯರಾಗಿಯೂ, 'ಪುರುಷನ ಅಧಿಕಾರದಲ್ಲಿ ನಮಗೂ ಅರ್ಧ ಅಧಿಕಾರವಿದೆ' ಎಂದು ಸಾರಿ, ಪುರುಷನ ಪೌರುಷದ ಬಲೆಯನ್ನು ಬೀಸಲು ಬಿಡದೆ, ಪುರುಷರನ್ನು ಅರ್ಧನಾರೀಶ್ವರರಂತೆ ಮಾಡಿ, ಅವರ ಜೀವನದಲ್ಲಿ ತಾವೂ ಸಮಾನಸ್ಥಳ ದೊರೆಕಿಸಿಕೊಂಡಿದ್ದಾರೆ.

ಅವರ ಧೈರ್ಯಕ್ಕೆ ಕೊಟ್ಟ ಉಡುಗೊರೆಯನ್ನು ಅಲ್ಲಿಯೇ ಕೇಳಿದ ಒಂದೆರಡು ಮಾತುಗಳಿಂದ ಹೇಳುತ್ತೇನೆ. ಒಬ್ಬ ಪ್ರವಾಸಿಯು ಮಂಗಳೂರನ್ನೆಲ್ಲ ನೋಡಿದ ಮೇಲೆ, ಆತನು ತಂಗಿದ ಮನೆಯವರು ಸಹಜವಾಗಿ ಆತನನ್ನು 'ನಿನಗೆ ಮಂಗಳೂರು ಹೇಗೆನಿಸಿತು?' ಎಂದು ಕೇಳಿದುದಕ್ಕೆ ಆ ಪ್ರವಾಸಿಯು 'ಸರಿ ಎಲ್ಲವು ಜಿನ್ನಾಗಿದೆ, ಆದರೆ ಇಲ್ಲಿಯು ಪುರುಷರಿಗೆ ಆಡಿಗೆ ಮಾಡುವವರಾರು?—ಎಂಬ ಸಂದೇಹವೇ ನನಗೆ!' ಎಂದನಂತೆ. ಇದು ಅಲ್ಲಿ ಅಧಿಕಾರದಲ್ಲಿರುವ ನಮ್ಮ ಬಳಗದವರೊಬ್ಬರು ಹೇಳಿದುದು. 'ಇಲ್ಲಿ ಪುರುಷರೆಂದರೆ ಅದು ಒಂದು ಗಂಡುಹುಳು ಎನ್ನುವಷ್ಟೇ ಭಾವನೆ' ಎಂದರವರು. ಈ ಉದಾಹರಣೆಗಳು ಹೇಗೆಯೆ ಇರಲಿ, ಕೆಸರನ್ನು ಹೊಕ್ಕ ಕುಂಬಾರ ಹುಳುವಿನಂತೆ, ಸಂಸಾರದಲ್ಲಿ ದುಡಿದರೂ ದಣಿವು ಕಾಣದೆ, ಸ್ವಚ್ಛತೆ-ಸ್ವೇಚ್ಛೆಗಳಿಂದ ಇಲ್ಲಿಯ ಸ್ತ್ರೀಯರು, ತಮ್ಮ ಜೀವನವನ್ನು ಒಂದು ಸುಖಮಯವಾದ ಕಲೆಯನ್ನಾಗಿಮಾಡಿಕೊಂಡು ಸಾಗಿಸುತ್ತಾರಲ್ಲದೆ ಕೊಲೆಯಂತಲ್ಲ—ಎನ್ನುವುದೇ ನನ್ನ ಭಾವನೆ.

ಸಮುದ್ರಯಾನದಿಂದ ಬಂದ ಪಾಶ್ಚಾತ್ಯರ ಕ್ರೈಸ್ತಧರ್ಮವು, ಮಂಗಳೂರಿನ ಹಾರ್ಬರಿನಲ್ಲಿ ಇಳಿದು ಸ್ಥಿರಮಾಡಿಕೊಂಡಂತಿದೆ. ಅಲ್ಲಿಯ ಜನಸಂಖ್ಯೆಯಲ್ಲಿ ಬಹುಸಂಖ್ಯಾಕರು ಕ್ರೈಸ್ತರಿರಬಹುದೆಂದು, ನೋಡಲು ಹೋದವರು ನಿಸ್ಸಂದೇಹವಾಗಿ ಹೇಳಬಹುದು. ಎಲ್ಲಿ ನೋಡಿದಲ್ಲಿ ಸ್ಕೂಲುಗಳು, ಕಾನ್ವೆಂಟುಗಳು, ಕಾಲೇಜುಗಳು; ಎಲ್ಲವೂ ಕ್ರಿಸ್ತಮಯ ಎನ್ನುವುದನ್ನು, ಆ ಆ ಕಟ್ಟಡಗಳ ಮೇಲೆ ನಿಲ್ಲಿಸಿದ ಗೊಂಬೆಗಳೇ ಎಡೆತಟ್ಟಿ ಹೇಳುವಂತೆ ಗಂಭೀರವಾಗಿ ನಿಂತಿವೆ. ಇಂತಹ ವಾತಾವರಣದಲ್ಲಿ ಬೆರೆತು ಬೆಳೆದ ಹಿಂದುಗಳೂ ಪಾಶ್ಚಾತ್ಯರ ಪಡಿನೆಳಲನ್ನು ಮೂಡಿಸಿಕೊಂಡಿದ್ದಾರೆ. ಕ್ರೈಸ್ತರಾದರೋ ಜನ ನಮ್ಮವರಾಗಿ ಅವಲಂಬಿಸಿದ ಮತವು ಆ ಕಡೆಯದಾದುದರಿಂದ, ರೊಟ್ಟಿಗೂ ಪಿಟ್ಟಿಗೂ ಮಧ್ಯೆ ಆರೆಬೆಂದ ರೊಟ್ಟಿಯಂತೆ ಆಂಗ್ಲೋ-ಇಂಡಿಯನರಾಗಿದ್ದಾರೆ.

ಕಪ್ಪು, ಕುರೂಪಿ ಎಂಬ ಶಬ್ದವನ್ನೇ ಕಿತ್ತೊಗೆಯಬೇಕು ಅಲ್ಲಿಯ ಜನರಲ್ಲಿ. ಭಾಷೆ, ಸ್ವಭಾವ ಮೆದುವೂ ಮಿತವೂ ಆಗಿದೆ.

'ಅಂತು ಇಂತು ಕುಂತಿ ಮಕ್ಕಳಿಗೆ ಕಷ್ಟ ತಪ್ಪಿದ್ದಲ್ಲ!' ಎನ್ನುವಂತೆ, ಎತ್ತಹೋದತ್ತ ಹತ್ತಿ ಕಾಡುತ್ತಿದೆ ಪರಭಾಷೆ ನಮ್ಮನ್ನು. ಒಂದೆಡೆ ಮರಾಟಿ, ಇನ್ನೊಂದೆಡೆ ಆಂಧ್ರ-ತಮಿಳು,

ಮತ್ತೊಂದೆಡೆ ನೈಚಾಮಿನ ನಂಜು ಹೇಗೋ ಹಾಗೆ, ಇಲ್ಲಿಯೂ ನಮ್ಮ ಕನ್ನಡನುಡಿಗೆ ತುಳು-ಕೊಂಕಣಿ ಕಲೆಬಿದ್ದಿವೆ. ಕಲೆಬಿದ್ದರೇನು, ಕೊಡಪುವ ನಮ್ಮ ಕೆಚ್ಚೆದೆಯು ಕನ್ನಡಿಗರೇ ಹೆಚ್ಚಾಗಿದ್ದಾರೆ.

'ಕಾಡೆಲ್ಲ ಕಡಿದು ನಾಡಾದುದು' ಎಂದು ಕೈಯೆತ್ತಿ ಹೇಳುತ್ತಿರುವಂತೆ, ಮಂಗಳೂರಿನಲ್ಲಿ ಗರುಸು ದಿನ್ನೆಗಳ ಮೇಲೆ ಕಟ್ಟಲ್ಪಟ್ಟ ಬಂಗಲೆಗಳು; ಏರಿಳಿತದ ಬೀದಿಗಳು. ಬೀದಿಯ ಎರಡು ಬದಿಗೂ ಬಂಗಲೆಗಳ ಮುಂದೆ, ಒಂದು ನನ್ನ ನೋಡೆಂದರೆ, ಮತ್ತೊಂದು ಅದನ್ನೇನು ನೋಡುವುದು ನನ್ನ ನೋಡೆನ್ನುವಂತೆ ಬೆಳೆದುನಿಂತ ವೃಕ್ಷರಾಜಿಗಳು; ಅವುಗಳ ಮಧ್ಯೆ ಮಧ್ಯೆ ಕಂಗೊಳಿಸುವ ಕೈತೋಟಗಳು. ತೋಟದ ವಿವಿಧವರ್ಣಗಳ ಪುಷ್ಪಗಳು ಗೊಂಜಲುಗೊಂಜಲಾಗಿ ವಿಕಸಿಸುತ್ತ, ಎಳಗಾಳಿಗೆ ಆ ಗೊಂಜಲು ಬಾಗಿ, ಹಾದಿಗರನ್ನು ಹಾರಯಿಸಲು ಆತುರದಿಂದ ಪುಷ್ಪಾಂಜಲಿಯನ್ನು ಅರ್ಪಿಸುತ್ತಿರುವುದೊ ಎನ್ನುವಂತೆ ನೋಟಕರ ಮನವನ್ನು ರಂಜಿಸದೆ ಬಿಡವು.

ಮಂಗಳೂರಿನ ಅಧಿದೇವತೆಯು ಮಂಗಳಾಂಬೆಯಾದುದರಿಂದ, ಸರ್ವೇಮಂಗಳೆಯರಿಗೆ ಸ್ವೇಚ್ಛೆ ಹೆಚ್ಚು. ಸ್ವೇಚ್ಛೆ ಹೆಚ್ಚಾದುದರಿಂದಲೇ ಶೋಭೆ ಹೆಚ್ಚಾಗಿ, ಮಂಗಳೂರು ಮಂಗಳಪುರಿಯಾಗಿ ಪೆರ್ಲ್ಗುತ್ತಿದೆ.

ಹಾಂ! ಮರೆತೆ, ಅಲ್ಲಿ ಮಿರಜ್‌ಕರರ ಬಂಗಲೆಯನ್ನು ನೋಡಿದೆವು. ನಿಮಗದನ್ನು ಸ್ವಲ್ಪ ಅಕ್ಷರಗಳಿಂದಲೆ ತೋರಿಸುವ ಹಂಬಲು ನನಗೆ.

ಸುಗನು ತನ್ನ ಪ್ರೊಮ್ಮಗನ ತಂದೆಯಾಗಬೇಕೆಂದು ಆಶಪಟ್ಟ ತಾಯಿಗೆ, ಅದನ್ನು ಅಲ್ಲಗಳೆದು ತಾನು ಗಳಿಸುವ ದುಡ್ಡಿನಿಂದಲೆ ತಾಯಿಯ ಆಶೆಗೆ ಒಪ್ಪುವಹಾಕಿ 'ನಿನ್ನಾಶೆಯ ಹೆಗ್ಗುರುತೇ ಇದು, ಇದರಿಂದಲೇ ತೃಪ್ತಿಪಡು' ಎಂದು ಮಾತೆಯ ಮಮತೆಗೆ ಮುಡುಪಾಗಿ 'ಆರಮನೆ' ಎಂದರೂ, ಒಪ್ಪಬಹುದಾದ–ಒಂದುವರೆ ಲಕ್ಷ ಪೆಚ್ಚವಿಟ್ಟು—ಅದರ ಸೊಬಗಿಗಾಗಿ ಇಟ್ಟ ಸಾಮಾನುಗಳು (ಫರ್ನಿಚರ್) ಮೂವತ್ತು ಸಾವಿರ ಹೀಗೆ—ಒಂದು ಸೊಬಗಿನ ಬಂಗಲೆಯನ್ನು ಕಟ್ಟಿಸಿಕೊಟ್ಟು, ತಾಯಹಾಲ ಋಣವನ್ನು ಮುಟ್ಟಿಸಿದ್ದಾನೆ ಆ ಮಾತೆಯ ಮಗನು. ತನ್ನಿಂದ ತಾನೆ ಉದುರಿ ಬೀಳುವಂತಹ ಹಣ್ಣು ಮುದುಕಿ 'ಮಾತೋಶ್ರೀ'ಯು, ನೋಡಲು ಹೋದ ನಮ್ಮನ್ನು ಅದರದಿಂದ ಬರಮಾಡಿಕೊಂಡು, ಆಳಿನಿಂದ ಮನೆಯೆಲ್ಲವನ್ನೂ, ತೋರಿಸಿ, ನಿಲ್ಲಲಾಗದಿದ್ದರೂ ನಿಂತು ನಮಸ್ಕರಿಸಿ 'ಕ್ಷಮಿಸಿ, ನನಗೆ ನಿಲ್ಲಲಾಗುವುದಿಲ್ಲ, ಹಾರ್ಟ್ ವೀಕೆಜೆ.' ಎಂದು ಆಯಾಸದಿಂದ ಹೇಳಿ, ಮಂಚದಲ್ಲಿ ಮಂಡಿಸಿದರು. ನಾಲ್ಕು ಗಂಡು, ಒಂದು ಹೆಣ್ಣು ಮಗುವನ್ನು ಹೆತ್ತು ಜೋಗುಳಹಾಡಿ ತೂಗಿದ ಕೈ-ಬಾಯಿಂದ ಅವರವರ ಫೋಟೋಗಳನ್ನು ತೋರಿಸಿ, ಅವರವರ ಅಧಿಕಾರಗಳನ್ನು ವಿವರಿಸಿ, ಕಡೆಗೆ 'ಈ ಮನೆಯನ್ನು ಕಟ್ಟಿಸಿದವ ಇವ' ಎಂದು ಹೇಳಿ ಹಾಡಿ ಹರಸಿತು ಆ ಮಾತೃಹೃದಯ. ಎಲ್ಲ ಮಕ್ಕಳೂ ಜಡ್ಜಿ, ಸರ್ಜನರೆ. ಅಳಿಯನು ಸಹ ಜಡ್ಜಿಯೆ. ಇಂತಹ ಲಕ್ಷಗಟ್ಟಲೆ ಲಕ್ಷ್ಮಿಯನ್ನು ಲಕ್ಷ್ಯವಿಲ್ಲದೆ ಸಂಪಾದಿಸುವ ಮಕ್ಕಳ ಮಾತೆಯು, ಉಂಗುಟದ ಉಗುರುಕಣ್ಣಲ್ಲಿ ಸಹ ಅಹಂಕಾರಕ್ಕೆ ಹೊಗಲು ಎಡೆಗೊಡದ ಮಾತೆಯಾಗಿದ್ದಾರೆ. ಅಂತಹ ನಿರಹಂಕಾರದ ಮಾತುಶ್ರೀಯನ್ನು ನಮಸ್ಕರಿಸಿ ಅಪ್ಪಣೆ ಪಡೆದು ಹೊರಗೆ ಬರುವಾಗ, ರತ್ನಗಂಬಳಿಯ ಹಾಸಿಗೆಯ ಮೇಲೆ ನಾಯಿ ಮಲಗಿದುದನ್ನು ನೋಡಿ, 'ಹಾಲಿಲ್ಲದೆ ಕಿರಿಚಿಕೊಳ್ಳುವ ಬಡಹಸುಳೆಗಳನ್ನು ಇಂತಹ ಶ್ರೀಮಂತರ ಮನೆಯ ನಾಯನ್ನಾದರೂ ಮಾಡಬಾರದಿತ್ತೇ ಶಿವ ಶಿವ!' ಎನ್ನಿಸಿತು.

ಮನೆಯನ್ನೇನೋ ನೋಡಿದೆವು, ಆದರೆ ನನ್ನ ಮನವು 'ಇಡೀ ಈ ಆರಮನೆಗೆ ಒಬ್ಬ ಮುದುಕಿ ಮಾತ್ರ' ಎಂದು ಮರುಕಗೊಂಡಿತು. ಇಟ್ಟ ಸಾಮಾನುಗಳನ್ನು ಕಿತ್ತೆಸೆದು, ಸುತ್ತಿಸುಳಿದು, ಅತ್ತು ಆಡುವ ಮಕ್ಕಳಿಲ್ಲದ ಮನೆ ಹೊಕ್ಕರೂ ಸಿರಿ ಇಲ್ಲ—ಎನ್ನುವ ಹೆಣ್ಣುನುಡಿಯೊಂದು ಮಿಡಿಯಿತು.

ಅಂತು ಮಂಗಳೂರನ್ನು ಮರೆಯಾಗಿಸಿ ಬೇಲೂರನ್ನು ಮುಟ್ಟಲು ಹೊರಟೆವು. ಬಸ್ಸು ನಮ್ಮನ್ನು ಮಂಗಳೂರಿಂದ ಆಗಲಿಸಿ, ಚಾರ್ಮಾಡಿ ಘಟ್ಟದ ಬನದ ಸೆರಗನ್ನು ಸೋಂಕಿಸಿತು. ಪ್ರಯಾಣಿಕರಿಗೆಲ್ಲಾ ಬೆರಗೆಂಬ ರೋಗವಂಟಿ, ಬಾಯಿಬಿಟ್ಟು ಕಣ್ಣುಬಿಟ್ಟು ಬನಶ್ರೀಯ ಸೊಬಗನ್ನವರು ಕಣ್ಣುಗಳಲ್ಲಿಯೇ ಇಂಗಿಸಿಕೊಳ್ಳುತ್ತಿದ್ದರು. ನಾಮುಂದು ನೀಮುಂದು ಎಂದು ಮುಗಿಲನ್ನು ಮುಟ್ಟಲು ಪಣತೊಟ್ಟು ಮುಂದೋಡುತ್ತಿರುವುವೋ ಎನ್ನುವಂತಹ ಹೆಮ್ಮರಗಳು. ಆ ಮರಗಳನ್ನೊತ್ತಿ ಬೀಸಾಗಿ ಬೆಳೆದು ನಿಂತ ಬಿದಿರು. ಅದರ ಮರಿಗಳಂತೆ ಬೆಳೆದ ಬೆತ್ತದ ಪೊದೆ. ಹಲವು ಮಕ್ಕಳನ್ನು ಹಲವು ನಿಧದಿಂದ ಶೃಂಗರಿಸಿ,ಹೊರಹೊರಟು ನಿಂತ ಶ್ರೀಮಂತರ ಕುಟುಂಬಗಳಂತೆ—ಸುತ್ತಲೂ ವಿವಿಧವರ್ಣದ ಹೂಗೊಂಚಲನ್ನು ಹೊತ್ತು-ನಿಂತ ಚಿಕ್ಕಚಿಕ್ಕ ಗಿಡಗಳ ಮಧ್ಯವಲ್ಲಿ ವಿರಾಜಿಸುವ ವೃಕ್ಷಗಳೆಷ್ಟೋ! ಬಾನುದ್ದ ಬೆಳೆದುನಿಂತ ಮರಗಳಿಗೆ ಸುತ್ತಿ ಬಳಸಿದ ಲತೆಗಳು, ಸಾಹುಕಾರನ ಬೆನ್ನ ತ್ತಿ ಬಡ್ಡಿ ಬಿಡಿಸಿಕೊಳ್ಳಲು ಹೊರಟ ಬಡಕೈತನಂತೆ, ಆ ಹೆಮ್ಮರಗಳ ಹಿಂದೆ ಜಿಗುರೆಲೆಯನ್ನು ಚೆಲ್ಲುತ್ತಲೇ ಹೊರಟಿದ್ದುವು. ಕೆಲವು ಕಡೆಗೆ ಬಿರುಗಾಳಿಗೆ ಬಳ್ಳಿಕಡಿದು ಕುಪ್ಪೆಯಾಗಿ ಬಿದ್ದು, ಅವರಡಿಯಲ್ಲಿಯೆ ತಳಿರೊಡೆದು, ತಳ್ಳಿದ ಮರಗಳನ್ನೇ ಮತ್ತೆ ತಬ್ಬಿಕೊಂಡು, ಬಡಿದರೂ 'ಬಾ' ಎಂದರೆಂದು ಒದ್ದ ಪಾದಕ್ಕೆ ಮುದ್ದುಕೊಟ್ಟು ಬೆನ್ನು ಬಿಡೆನೆಂದು ಬೇಡಿಕೊಳ್ಳುವ ಸಹಧರ್ಮಿಣಿಯಂತೆ ಶೋಭಿಸುತಿದ್ದುವು ಹಲವು ಲತೆಗಳು. ನೇಸರು ಹಲವು ಪ್ರಯತ್ನದಿಂದ ಒಳಹೊಗಲು ಹಾತೊರೆದರೂ 'ಕ್ವಿಟ್ ಇಂಡಿಯಾ' ಎಂಬ ಹರತಾಳವನ್ನು ಆಚರಿಸಿದ ದೇಶಸೇವಕರಂತೆ ಅಡ್ಡಗಟ್ಟಿಬಿಟ್ಟಿವೆ ಅರಣ್ಯಾನಿ. ಆ ಅರಣ್ಯದಲ್ಲಿ ಪ್ರವಹಿಸುವ ನದಿಯೊ, ಒಂದೆಡೆ ಶಾಂತವಾಗಿ ನಿಂತು ನಿಸರ್ಗಸುಂದರಿಗೆ ಕನ್ನಡಿ ಎನ್ನು-

ವಂತೆ ಕಂಡರೆ, ಇನ್ನೊಂದೆಡೆ ತುಂಟ ಮಕ್ಕಳಂತೆ ಕುಣಿಕುಣಿದು ಕೇಕೆಹಾಕುತ್ತಿತ್ತು; ಮತ್ತೊಂದೆಡೆ ಸಿಂಹನಾದದಿಂದ ಭಯ-ಹುಟ್ಟುವ ಹಾಗೆ ಭೋರ್ಗರೆಯುತ್ತಿತ್ತು. ಅಂತು ಆ ನದಿಯು, ಅರಿಪೆಟ್ಟುತಿಂದ ಘಟಸರ್ಪದಂತೆ ರಭಸದಿಂದೋಡುವ ಬಸ್ಸಿಗೆ, ಎಡತಪ್ಪಿದರೆ ಬಲ—ಬಲತಪ್ಪಿದರೆ ಎಡ ಹೀಗೆ ಸುಮಾರು ೧೫-೨೦ ಮೈಲುಗಳ ವರೆಗೆ ಸುತ್ತಿಸುತ್ತಿ ಬಸವಳಿದು, ಎತ್ತಲೋ ಮರೆಯಾಗಿ ಹೋಯಿತು. ನದಿ ಮರೆಯಾದ ಸ್ವಲ್ಪ ಮೈಲುಗಳಲ್ಲಿಯೇ ಅರಣ್ಯವೂ ಅಡಗುತ್ತ ಬಂದಿತು.

ಅಷ್ಟರಲ್ಲಿ ಒಬ್ಬ ಮಾಪಿಳ್ಳೆಯು ತನ್ನ ಪಕ್ಕದ ಮಾಪಿಳ್ಳೆಯೊಡನೆ ತನ್ನ ಸಾಣೆ ಹಿಡಿದ ಮೆದುಳನ್ನು ಬಸ್ಸಿನ ಜನಗಳಿಗೆ ತಿಳಿಸುವಂತೆ 'ಇದೆಲ್ಲವೂ ಫಾರೆಸ್ಟ್!' ಎಂದು ನುಡಿಸು, ಬಸ್ಸಿನ ಮೌನವನ್ನು ಮುರಿದ. ಎರಡನೆಯ ಮಾಪಿಳ್ಳೆಯು 'ಅಯ್ಯೋ! ನೀನು ಮೆದುಳು ಪೆಚ್ಚಾದ ಮನುಷ್ಯ, ಇದನ್ನು ವಿವರಿಸದೆ ಹೋದಲ್ಲಿ, ದೊಡ್ಡ ಪಟ್ಟಣವೆಂದೇ ಭಾವಿಸಿದ್ದೆ, ಹೇಗಾದರೂ ಹೇಳಿ ಪುಣ್ಯಕಟ್ಟಿಕೊಂಡೆಯಲ್ಲಾ!' ಎಂದು ಹೇಳುತ್ತಾನೇನೋ–ಎಂದು ಭಾವಿಸಿದ್ದೆ. ಆದರೆ ಆಶ್ಚರ್ಯದ ಸನ್ನಿಪಾತವು ಇನ್ನೂ ಆರಿರಲಿಲ್ಲವೋ ಅಥವಾ..... 'ಹಾ! ಹಾ!' ಎಂದು ಮತ್ತೂ ಆಶ್ಚರ್ಯವನ್ನೇ ಬೀರಿತು ಆ ಹದಿನೆಂಟನೆಯ ಶತಮಾನದ ವಿಗ್ರಹ. 'ಅಯ್ಯೋ! ಏನು ಕಾಡಪ್ಪಾ! ಕಾಡೆಂದರೆ ಕಾರುವಂತಾಯಿತು' ಎಂದ ಒಬ್ಬ ಕಾಫಿ ಚಟದ ಕನ್ನಡಿಗ. ಮುಂದೆ ಸಕಲೇಶಪುರದಲ್ಲಿ, ಅವರವರಿಗೆ ಅಂಟಿದ ಚಟದ ರೋಗಕ್ಕೆ ಚಿಕಿತ್ಸೆ ಪಡೆದು ಮುಂದೆ ಹೊರಟೆವು. ಚೆನ್ನಿಗ-ಕೇಶವನ ಗೋಪುರದ ದೀಪವು ತಾರೆಯಂತೆ ಮಿನುಗುವಾಗ ಬೇಲೂರನ್ನು ಮುಟ್ಟಿದೆವು.

ಮರುದಿನದ ಉದಯ, ಚೆನ್ನಕೇಶವನ ಗುಡಿ ನೋಡಲು ಹೊರಟೆವು. ಚರಿತ್ರೆಯ ಪುಸ್ತಕದ ಪುಟಪಲ್ಲಿ ನೋಡಿದ ಚಿತ್ರವನ್ನು ಪ್ರತ್ಯಕ್ಷವಾಗಿ ನೋಡಿದುದರಿಂದ ಮನಸ್ಸು ಮುದಗೊಂಡಿತು; ಮುಖವು ಮೇಲಾಯಿತು. ಕಣ್ಣುಗಳು ಮನದ ಕುದುರೆಯನ್ನೇರಿ ಸವಾರಿಗೆ ಪ್ರಾರಂಭಮಾಡಿದುವು.

ಹಿಂದೂ ದೇವತೆಗಳೆಲ್ಲಾ ಶಿಲ್ಪಿಗನ ಹಸ್ತಗತವಾಗಿ ನರ್ತಿಸುತ್ತಿರುವರೋ–ಎನ್ನುವಂತೆ,ತಾಂಡವವಾಡುತ್ತಿದ್ದಾರೆ ಗುಡಿಯ ಗೋಡೆಗಳ ಮೇಲೆ. ಅಂದಿನ ರಾಜನುಗಳ ವೈಭವವನ್ನು ವರ್ಣಿಸಿದಂತೆ ಆನೆ-ಸಿಂಹಗಳ ಗರ್ಜನೆಯ ಸಾಲು, ಕಾಲ್ದಳಗಳ ಗುಂಪಿನ ಕೇಕೆ, ರಥ ಹೊಡೆಯುವ ರಾವ್ತರ ಕೈಜಳಕ, ಯೋಧನ ಅಂಬಿನೇಟು, ಕುದುರೆ ಸವಾರರ ಚತುರತೆ, ಇವನ್ನೆಲ್ಲಾ ಈಕ್ಷಿಸುವ ರಾಜಸಭೆ ಅಲ್ಲದೆ ವೈಭಕ್ತಿ, ದಯೆ, ರಣೋತ್ಸಾಹದ ಸಾಹಸ, ರಸಿಕತೆಯ ರಾಜತ್ವ, ಸಂಗೀತದ ಮಾಧುರ್ಯ, ನೃತ್ಯದ ನೈಪುಣ್ಯ ಎಲ್ಲವನ್ನೂ ಕೆತ್ತಿ, ತನ್ನ ಕುಶಲತೆಯನ್ನೂ ತನಗೆ ಆಶ್ರಯವಿತ್ತ ರಾಜನ ವೈಭವವನ್ನೂ ಜನತೆಗೆ ತೂರಿಬಿಟ್ಟಿದ್ದಾನೆ ಶಿಲ್ಪಿಗನು.

ಅಲ್ಲಲ್ಲಿ ನಿಂತ ನಾಟ್ಯಕನ್ನಿಕೆಯರನ್ನೂ ಹಿಮ್ಮೇಳದವರನ್ನೂ ನೋಡುತ್ತ ನಿಂತಂತೆ "ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೆ 'ತೋಂ ತನನ ತನನ' ಎಂದು ಗೆಜ್ಜೆಕಟ್ಟಿದ ಕಾಲನ್ನು ಹೆಜ್ಜೆ ಹಾಕುತ್ತಾರೆ ಎನ್ನುವ ಭ್ರಮೆಯನ್ನು ನೋಟಕರಲ್ಲಿ ಮೂಡಿಸುವಂತಿವೆ—ಭರತನಾಟ್ಯಕ್ಕೆ ಆಣಿಯಾಗಿರುವ— ಆ ಪ್ರತಿಮೆಗಳ ಮುಖಭಾವ, ನಿಂತ ಭಂಗಿ.

ಶಿಲೆಯು ಶಿಲ್ಪಿಗನಿಗೆ ಮೋಣವಾಗಿ, ನಾಗರಿಕರಿಗೆ ಅಪರಂಜಿಗೂ ಮಿಗಿಲಾಗಿ ಮಿನುಗುತ್ತಿದೆ ಇಲ್ಲಿಯ ಶಿಲ್ಪಕಲೆ.

ಚೆನ್ನಕೇಶವನ ಗುಡಿಯೊಳಗೆ ಇರುವ ಎಷ್ಟೋ ಸ್ತಂಭಗಳೆಲ್ಲಾ ಉಡುಗೆ-ತೊಡಿಗೆಗಳಲ್ಲಿ ನಾನಾದೇಶದ ವ್ಯಕ್ತಿಗಳಂತೆ–ಒಂದನ್ನು ಮತ್ತೊಂದು ಹೋಲುವಂತಿಲ್ಲ. ಚೆನ್ನಕೇಶವನೂ ಅತನು ಮೆಟ್ಟಿ ನಿಂತ ಗುಡಿಯೂ ಜಿಲುಬಾಗಿ ಕಾಣುವಂತೆ 'ಫ್ಲೋಕಸ್' ಇಟ್ಟು, ಹಿಂದಿನ ನಿಪುಣತೆಯು ಇಂದಿನ ಬೆಳಕಿನಲ್ಲಿ ಮೆದುಗುಗೊಂಡಿದೆ ಬೇಲೂರಲ್ಲಿ.

* * *

ಹಳೆಬೀಡಿನ ಹೊಯಿಸಳೇಶ್ವರ ದೇವಾಲಯವನ್ನು ನೋಡಿದೆವು; ಆದರೆ ಗರ್ಭಗುಡಿಯ ಬಾಗಿಲು ಭದ್ರವಾಗಿತ್ತು. 'ದೇವನಾದರೆ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಏನು, ಮಾನವನ ಕೈಗೊಂಬೆಯಾದ ಮೇಲೆ ಸೆರೆಯಲ್ಲಿಟ್ಟರೂ ಇರಬೇಕಲ್ಲಾ! ಇರು ಇರು, ನೀನು ಎಲ್ಲಿದ್ದರೇನು? ನಿನ್ನ ವಾಹನ ನಂದಿಯನ್ನು ನೋಡಿ ಹೋಗುತ್ತೀವೆ' ಎಂದು, ನಂದಿಗಳು ಮಲಗಿದ ಮಂಟಪಗಳನ್ನು ಹೊಕ್ಕೆವು. ಇದೇ ಈಗ ಸಂಚಾರ ಮುಗಿಸಿ, ದೇವನನ್ನು ಒಳಬಿಟ್ಟು, ತಾವು ಶ್ರಮ ನಿವಾರಣೆಗೆ ಮೆಲುಕುಹಾಕುತ್ತಿವೆಯೊ—ಎನ್ನುವಂತಿವೆ ಆ ವೃಷಭಗಳ ಹಾವಭಾವ. (ಹಲವು ಮಹಾತ್ಮರು ತಿಳಿವಳಿಕೆಯಿಂದಲೋ ಅಥವಾ ತಿಳುವಳಿಕೆ ಹೆಚ್ಚಾದುದರಿಂದಲೋ ತಮ್ಮ ತಮ್ಮ ಅಗಮನದ ಹೆಗ್ಗುರುತೆಂದು, ಬಸವನ ಮೇಲೆ ತಮ್ಮ ಹೆಸರುಗಳನ್ನು ಕೊರೆಕೊರೆದು ಬಂದಿದ್ದಾರೆ. ಇನ್ನುಮೇಲೆ ಹೋಗುವವರಲ್ಲಿ ನನ್ನ ವಿಜ್ಞಾಪನೆ ಇಷ್ಟೆ: ಎಷ್ಟೋ ಪೀಳಿಗೆಗಳಿಂದ ನಾವು ಆ ಜೆಲುವನ್ನು ನೋಡಿ ನಲಿಯುತ್ತೇವೆ, ನಮ್ಮ ಪೀಳಿಗೆಗಳಿಗೂ ಆ ಜೆಲುವು ಉಳಿಯುವ ಭಾಗ್ಯ ಇರಲೆಂಬ ಭಾವನೆಯನ್ನು ತಂದು ಕೊಂಡು ದಯೆನೂಡಿ ಅದರ ಮೇಲೆ–ಅಲ್ಲ ಯಾವುದರ ಮೇಲೂ ಬರೆಯಬೇಡಿ!) ಊರು ಬೇರೆಯಾದರೂ, ಗುಡಿಗಳು ಎರಡಾದರೂ, ಚತುರತೆಯಲ್ಲಿ ಪಳಗಿದ ಕೈ ಒಂದೇ ಆಗಿದೆ. ಹಳೆಬೀಡಿನಲ್ಲಿ ಈಶ್ವರನ ದೇವಾಲಯವಾದರೆ, ಬೇಲೂರಿನಲ್ಲಿ ವಿಷ್ಣುವಿನದಿರವಾಗಿದೆ ಅಷ್ಟೆ.

ರಾಮೇಶ್ವರ, ಮಧುರೆ, ಕಂಚಿ, ಹಂಪೆ ಇಲ್ಲಿಯ ಶಿಲ್ಪ-ಕಲೆಯು ಭವ್ಯವಾಗಿ ಪುರುಷತನವನ್ನು ಬೀರಿದರೆ ಹಳೆಬೀಡು, ಬೇಲೂರಿನ ಶಿಲ್ಪಕಲೆಯು ನ ಯ ವಾ ಗಿ, ಸುಂದರವಾಗಿ ಸ್ತ್ರೀತನವನ್ನು ಬೀರುತ್ತದೆ.

ಬೇಲೂರನ್ನು ಬಿಟ್ಟು ಮರಳಿ ಶಿವಮೊಗ್ಗವನ್ನು ಸಾಯಂಕಾಲಕ್ಕೆ ಮುಟ್ಟಿದೆವು. ಕರ್ನಾಟಕದಲ್ಲಿ ಯಂತ್ರಯುಗದ ಮುಖ್ಯ ಪಟ್ಟಣವಾದ ಭದ್ರಾವತಿಯನ್ನು ಕಾಣಬೇಕೆಂಬ ಹಂಬಲು ಯಾರಿಗಿರಲಾರದು? ಆಗಲೇ ನಮ್ಮ ಸ್ನೇಹಿತರ ಕಾರಿನಲ್ಲಿ ಹೊರಟೆವು. ಕಾರ್ಖಾನೆಯಲ್ಲಿ ಎಂಜಿನಿಯರೊಬ್ಬರು ತಿಳಿದವರಿದ್ದುದರಿಂದ, ಕಾರ್ಖಾನೆಯ ಕೆಲಸಗಾರರಿಗಾಗಿ ರಚಿಸಲ್ಪಟ್ಟ ಜಕ್ರವ್ಯೂಹ ಕೋಟೆಯನ್ನು ಹೊಕ್ಕೆವು. ಆದರೇನು? ಎಷ್ಟೋ ಮೈಲುಗಳ ದೂರದಲ್ಲಿಯುದ್ಧದ ಬೇಗೆ ಉರಿಯುತ್ತಿರುವುದರಿಂದ, ತನ್ನವರನ್ನೇ ತಾನು ನಂಬಲಾಗದಷ್ಟು ಭಯವಾಗಿದೆ ಭದ್ರಾವತಿಗೆ. ಪ್ರವಾಸದ ಪ್ರಯಾಸದಿಂದ 'ಬಿಡಲಾಗದು' ಎಂಬ ಕಟ್ಟಾಜ್ಞೆಯನ್ನು ಕೇಳಿ ಕೆರಳಿತು ನನ್ನ ಮನಸ್ಸು. 'ಹೆಸರಿಗೆ ಹಾಲಪ್ಪ, ಮನೆಗೆ ಹೋದರೆ ನೀರು ಮಜ್ಜಿಗೆ ಇಲ್ಲ—ಎಂದಂತೆ, ಇದೆಂತಹ ಭದ್ರಾವತಿ! ಹೆಸರೇನೋ ಸರಿ, ಇದರ ಧೈರ್ಯ ನೋಡಿದರೆ....' ಎಂದು ಎನೇನನೋ ಗೊಣಗಿಕೊಂಡೆ. ಪ್ರಜ್ವಲಿಸುವ ದೀಪಗಳ ಬೆಳಕಿನಲ್ಲಿ ಹೊಗೆ ಕಾರುವ ಕೊಳವೆಗಳನ್ನು ಹೊರಗಿನಿಂದಲೇ ನೋಡಿ, ಅಲ್ಲಿಂದ ಹೊರಟಿದೆವು ಬಡದಿಯಾದ ಶಿವಮೊಗ್ಗಕ್ಕೆ.

ಮುಂಜಾವಿನಲ್ಲಿ (೨೬ನೆಯ ಡಿಸೆಂಬರ್ ೪೨) ಶಿವಮೊಗ್ಗವನ್ನು ಬಿಟ್ಟೆವು. ಮಲೆನಾಡನ್ನು ಬಿಟ್ಟು ಹೊರಡುತ್ತಿರುವ ಕಳವಳವು ಕಾಡುತ್ತಿತ್ತು ನನ್ನ ಮನವನ್ನು. ಕಡೆಯ ಸಾರಿ ಕಣ್ಣುಹಬ್ಬ ಮಾಡಬೇಕೆಂದರೆ, ಮಂಜಿನ ಮುಸುಕನ್ನು ಹೊದ್ದು ಮಲಗಿ ನಿದ್ರಿಸುವಂತಿತ್ತು ಮಲೆನಾಡು. ಬರುಬರುತ್ತ, ಭಾಸ್ಕರನು ಬದಿದೆಬ್ಬಿಸಿದ ಮೇಲೆ, ಮುಸುಕನ್ನು ಓರೆಮಾಡಿ ಮುಖ ಹೊರಮಾಡಿತು. ನಾನು ಶಿವಮೊಗ್ಗವನ್ನು ಸೇರುವ ದಿನ ಹುಟ್ಟುಹಾಕಿ ನೂಕುವ ದೋಣಿಯಂತೆ ನನ್ನನ್ನು 'ಮಲೆನಾಡನ್ನು ನೋಡು ನಡೆ!' ಎಂದು ಉತ್ಸಾಹದಿಂದ ತಳ್ಳಿದ ವೃಕ್ಷಗಳು, ಈಗ 'ನೋಡಿದೆಯಲ್ಲಾ ಊರಿಗೆ ನಡೆ!' ಎಂದು ಮುಗ್ಗರಿಸಿ ನೂಕುವಂತೆ ಕಂಡು, ಬಸ್ಸಿನ ವೇಗಕ್ಕೆ ಮರೆಯಾಗಿ ಹೋಗುತ್ತಿದ್ದುವು.

ಅಚ್ಚಳಿಯದ ಹಸಿರು ಪೀತಾಂಬರದಲ್ಲಿ ವಿವಿಧ ವರ್ಣಗಳ ಹೂತಾವರೆ ಮೂಡಿ, ನದಿಯೇ ರಜತದ ಅಂಚಾಗಿ, ಅಲ್ಲಲ್ಲಿ ಬರುವ ಚಿಕ್ಕ ದೊಡ್ಡ ಊರುಗಳ ಕುಶಲ ಕೆಲಸದ ಸೆರಗನ್ನು ಹೊದ್ದು ನಿಂತ ನಮ್ಮ ನಾಡತಾಯನ್ನು ನೋಡಿ ಯಾರ ಬಾಯಿಗೆ ನೀರು ಬಾರವು? ನಾಡತಾಯಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋಗುವ ನಾಡಿನವಳಾದ ನಾನೇ ಮನಸ್ಸಿಗೆ ಮೂಗುದಾರ ಹಾಕುತ್ತಿರುವಾಗ, ಹೊರನಾಡಿನವರ ಅವಸ್ಥೆ ಏನಾಗಬಹುದು? ಎಂತಲೇ ಏನೋ, ಪಾಪ! ಕರ್ನಾಟಕದ ಸೊಬಗನ್ನು ಕಂಡು ಬೆರಗಾದವರೆಲ್ಲ, ಇದು ನಮ್ಮದೆಂದು ಎದೆ–ಜಾಯಿ ಬಡಿದುಕೊಳ್ಳುತ್ತಿರುವರು. 'ಬದಿದು ಕೊಳ್ಳಲಿ! ಎದೆ, ಜಾಯಿ ನೋವಾಗುವವರೆಗೂ ಬ ಡಿ ದು ಕೊಂಡಾರು ಅಥವಾ ನೀರೊಡೆದ ಜಾಯಿಂದ ತಮ್ಮದೆಂದು ಹೇಳಿ ಆ ಜೊಲ್ಲನ್ನು ಅರಿಸಿಕೊಂಡಾರು' ಎಂದು ಎನೇನನೋ ಹಗಲುಗನಸನ್ನು ಕಾಣುತ್ತಿರುವಾಗಲೆ, ಬಳ್ಳಾರಿಯ ಕೋ ಟೆ ಯ ಗೋಡೆಯ ಮುಂದೆ ಬಸ್ಸು ಬಂದು ನಿಂತಿತು.

ಹೆಣ್ಣಿಗೆ ಮಾತೆಯಲ್ಲಿಯೆ ಮಮತೆ ಹೆಚ್ಚು. ಆ ಮಮಕಾರದ ನೆನಪನ್ನು—

" ಹರಿವ ನೀರನು ನೋಡಿ
ಅರಳಿದ್ದೂಗಳ ನೋಡಿ
ಹಲವು ಪೂಮರದ ಮಲೆನಾಡ ನಾ ನೋಡಿ
ಹಸಿವು ನೀರಡಿಕೆ ಮರೆತೆನು! "

ಎಂದು—ನೋಡಿ ಎಷ್ಟೋ ದಿನಗಳಾದರೂ—ನಾನು ಇದನ್ನು ಹಾಡಿಕೊಳ್ಳುತ್ತಲೇ ಇರುತ್ತೇನೆ.

"ಈ ಉತ್ಸಾಹವು ಅವನಿಗೆ ಎಲ್ಲಿಂದ ಬರುತ್ತದ್ದೆ"

ತಮ್ಮ ಮಕ್ಕಳನ್ನು ಬೇರೆ ತಾಯಿಯರು ಹೊಗಳಿದರೆ ತಾಯಿಯರು ಎಷ್ಟು ಹಿಗ್ಗುತ್ತಾರೆ! ಮತ್ತು ತಮ್ಮ ಮಕ್ಕಳಿಗೆ ಆರೋಗ್ಯವನು ಕೊಡುವ ಪೋಷಣ ಶಕ್ತಿಯನ್ನು ಕೊಡಲು ಎಚ್ಚರಿಕೆಯನ್ನು ತೆಗೆದುಕೊಂಡರೆ ಅವರೆಷ್ಟು ಜಾಣೆಯರು! ಏಕೆಂದರೆ, ಸಾಕಾದಷ್ಟು ಪೋಷಣ ಶಕ್ತಿ ಇಲ್ಲದ ಮಗುವು ಬೇಗನೇ ತನ್ನ ಶಕ್ತಿಯನ್ನು ಕಳೆದುಕೊಂಡು ತನ್ನ ಆರೋಗ್ಯವನ್ನು ಕೆಡಿಸಿಕೊಳ್ಳುವುದು. ಯಾವಾಗಲೂ ಕಡಿಮೆಯಾದ ಚೇತನವನ್ನು ಪೂರ್ಣವಾಗಿ ಉಂಟುಮಾಡುವ ವಿಟಮಿನ್‌ನಿಂದ ಕೂಡಿದ ಪೋಷಣೆಯುಳ್ಳ ಆಹಾರವನ್ನು ನಿಮ್ಮ ಮಕ್ಕಳಿಗೆ ಕೊಡುವುದು ಅಗತ್ಯವಾಗಿದೆ — ಇದಕ್ಕಾಗಿಯೇ ವಿಟಮಿನ್‌ನಿಂದ ಕೂಡಿದ ಡಾಲ್ಡವು ಅಷ್ಟು ಸಹಾಯಕಾರಿಯಾಗಿದೆ. ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ, ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ — ಕುಟುಂಬದಲ್ಲಿ ಪ್ರತಿಯೊಬ್ಬರಿಗೂ ಪೋಷಣ ಶಕ್ತಿಯು ಅಗತ್ಯವಾಗಿದೆ. ಮತ್ತು ಪ್ರತಿಯೊಬ್ಬರಿಗೂ ಡಾಲ್ಡದಿಂದ ತಯಾರಿಸಿದ ಅಡಿಗೆಯು ಇಷ್ಟ — ಅದು ಹೆಚ್ಚು ರುಚಿಯಾಗಿರುತ್ತದೆ.

ಡಾಲ್ಡ ತನ್ನಲ್ಲಿರುವ "ವಿಟಮಿನ್" ಮೂಲಕ ದೇಹ ಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯ ಮಾಡುತ್ತದೆ... "ವಿಟಮಿನ್" ದಿಂದ ಕೂಡಿದ ಡಾಲ್ಡವು ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಪದಾರ್ಥವಾಗಿದೆ. ಅಡಿಗೆಯನ್ನು ಅದರಿಂದ ತಯಾರಿಸಿದರೆ, ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ "ವಿಟಮಿನ್" ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ, ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.



ವಿಟಮಿನ್‌ದಿಂದ ಕೂಡಿದ ಡಾಲ್ಡ

ಖಾತ್ರಿ ವನಸ್ಪತಿ ಎಣ್ಣೆಗಳಿಂದಲೇ ಮಾಡಲ್ಪಟ್ಟಿದೆ

ಸೀಲು ಮಾಡಿದ ಡಬ್ಬಗಳಲ್ಲಿ ಮಾರಲ್ಪಡುತ್ತದೆ

HVM. 20-193 KN

THE HINDUSTAN VANASPATI MANUFACTURING CO., LTD., BOMBAY

ಕಸೂತಿಯ ಕಲೆ

(ಎಂಬ್ರಾಯಿಡರಿ)

ಶ್ರೀ. ಹಳಪೇಟಿ ಚಿಂತಾಮಣಿರಾಯರು, ಟಿ. ಸಿ ಡಿ.

★

ಸೂಚಿಶಿಲ್ಪ (ನಿಡ್ಲ್‌ಕ್ರಾಫ್ಟ್)ವನ್ನು ಸಾಮಾನ್ಯವಾಗಿ ಮೂರು ಬಗೆಗಳಲ್ಲಿ ನೋಡಬಹುದು. ಹೆಣಿಕೆ, ಕಸೂತಿ, ಹೂಲಿಗೆ ಗಳೇ ಆ ಮೂರು ಬಗೆಯ ಶಿಲ್ಪಕ್ಷೇತ್ರಗಳು. ಇವುಗಳಲ್ಲಿಯ ಒಂದೊಂದೂ ಸ್ವತಂತ್ರವಾಗಿ ಬೆಳೆದುನಿಂತಿದ್ದರೂ, ಎಲ್ಲವೂ ಇದ್ದುದು ಒಂದೇ ಉದ್ದೇಶಸಾಧನೆಗಾಗಿ. ಒಂದೇ ನಿಟ್ಟಿನಿಂದ—ಒಂದೇ ಕಾರ್ಯಕ್ಕಾಗಿ—ಕವಲೊಡೆದ ಕಾಲುದಾರಿಗಳಾಗಿವೆ ಇವು. ಹೂಲಿಗೆಗಿಂತಲೂ ಹೆಣಿಕೆ–ಕಸೂತಿಗಳು, ಅತಿ ಪ್ರಾಚೀನ ಕಾಲದಿಂದಲೇ ಕಲಾರೂಪದಲ್ಲಿ ಸಾಗಿಬಂದುವುಗಳಾಗಿದ್ದರೂ, ಅವುಗಳ ಇತಿಹಾಸವು ಇಂದು ಸಾಕಷ್ಟು ಸಿಕ್ಕುವುದಿಲ್ಲವೆಂದೇ ಹೇಳಬಹುದು. ಒಂದು ರೀತಿಯಲ್ಲಿ ಇತಿಹಾಸ ಸಿಕ್ಕದಿದ್ದರೂ ಊಹಿಸಬಹುದಾದ ಬೇಕಷ್ಟು ಸಂಗತಿಗಳು ನಮ್ಮ ಜೀವನದಲ್ಲಿ ಹಾಸು-ಹೊಕ್ಕಾಗಿ ಹೆಣೆದುಕೊಂಡಿದ್ದುದರಿಂದ, ಈ ಕಲೆಯ ಅನೇಕ ವಿಷಯ-ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ. ಮೇಲಾಗಿ ನಮ್ಮ ಪೂರ್ವಜರಿಗೆ ಬರೆದಿಡುವ ಪದ್ಧತಿಯ ವಿಷಯವಾಗಿಯಾಗಲಿ, ತಮ್ಮಲ್ಲಿದ್ದ ಕಲೆಯನ್ನು ಮುಂದಿನ ಪೀಳಿಗೆಗೆ ಕೊಡುವುದಾಗಲಿ, ಒಂದು ಪ್ರತ್ಯೇಕವಾದ ಕಾರ್ಯವೆಂದೆನಿಸಿರಲಿಲ್ಲ. ಜಾತಿವಂತ ಕುದುರೆಗೆ ನಡಿಗೆ ಕಲಿಸಬೇಕಾದುದೇನೂ ಇಲ್ಲದಿರುವಂತೆ—ಜೀವನವನ್ನೇ ಕಲಾಮಯವನ್ನಾಗಿ ಮಾಡಿಕೊಂಡ ನಮ್ಮ ಪೂರ್ವಜರು, ಕಲಾಜ್ಞಾನವನ್ನು ಒಂದು ವಿಶಿಷ್ಟ ರೀತಿಯಲ್ಲಿ ಕಾಯ್ದಿಡುವ ಗೋಜಿಗೆ ಹೋಗಿರಲಿಲ್ಲವೆನಿಸುತ್ತದೆ. ಯಾವ ಕಾರಣದಿಂದಲೋ ಕಳೆದುಕೊಂಡಿದ್ದುದರಿಂದಾಗಲಿ, ಮರೆತುಹೋದುದರಿಂದಾಗಲಿ, ಇಂದು ನಮಗೆ ಅವುಗಳ ಇತಿಹಾಸದ ಆವಶ್ಯಕತೆ ಎನಿಸಿದರೆ ಆಶ್ಚರ್ಯವಲ್ಲ. ಲಿಪಿಯ ಶೋಧವಾಗಿ, ವಿಚಾರದ ಭಾಷೆಯಾದ ವಾಣಿಯನ್ನೂ ಭಾವನೆಯ ಭಾಷೆಯಾದ ಕಲೆಯನ್ನೂ ಲಿಪಿಬದ್ಧಗೊಳಿಸುವ ಕ್ರಮವು ಪ್ರಪಂಚದಲ್ಲಿಯೆ ಅತ್ಯುಚ್ಚಶಿಖರವನ್ನು ಮುಟ್ಟಿ ನಿಲ್ಲುವ ವೇಳೆಯಲ್ಲಿ—ನಮ್ಮ ದೇಶದ ಜನಜೀವನದ ಪ್ರತ್ಯಂಗದಲ್ಲಿಯೂ ಅಂಧಕಾರವು ಮುಸುಕಿದುದರಿಂದಲೊ ಏನೊ—ವನಚರನಿದ್ದ ಮಾನವನ ನಾಗರಿಕತೆಯ ಸಂಗಡಲೇ ತಿಳಿದುಬಂದ ಹೆಣಿಕೆ, ಕಸೂತಿಗಳಂತಹ ಕಲೆಯ ಇತಿಹಾಸವು ಬರೆಹದಲ್ಲಿ ಸಿಕ್ಕದಿದ್ದರೆ, ಅದರ ಹೊಣೆ ಪೂರ್ವಜರದಲ್ಲ. ಅದರೂ ನಮ್ಮವರ ಹೆಗ್ಗಳಿಕೆಗಾಗಿ ಹೇಳುವ ಅತಿಬಣ್ಣನೆಯನ್ನೂ ಹೀಗಳೆಯುವುದಕ್ಕಾಗಿ ಹೇಳುವ ಹೀನತನವನ್ನೂ ಬಿಟ್ಟರೆ, ಊಹೆಯಿಂದೂಹಿಸಬಹುದಾದ ಅನೇಕ ಸಂಗತಿಗಳು ಸಿಕ್ಕುತ್ತವೆ.

ಅತಿ ಪ್ರಾಚೀನಕಾಲದಲ್ಲಿ—ಮಾನವನು ಕಾಡಿನಲ್ಲಿಯೆ ಇದ್ದಂದು—ಆ ಮಾನವನ ಜೀವನದಲ್ಲಿ ಇಣಿಕಿದರೆ, ಬುದ್ಧಿಯ ಬಲದಿಂದಲೇ ತನ್ನ ಎಲ್ಲ ಕಾರ್ಯಗಳನ್ನೂ ಸಾಗಿಸುತ್ತಿದ್ದನೆಂದು ಕಾಣುತ್ತದೆ. ಮೊತ್ತಮೊದಲು ಅವನೆದುರು ನಿಂತ ಸಮಸ್ಯೆಗಳೆಂದರೆ ಆಹಾರ–ವಸ್ತ್ರಗಳದು. ಅನಂತರ, ವಸತಿಯ ಚಿಂತೆ. ಅವುಗಳಲ್ಲಿ ಅನ್ನದ ವಿಷಯವಾಗಿ ನಿಸರ್ಗವನ್ನು ಮೊರೆಹೊಕ್ಕರೂ ವಸ್ತ್ರದ ವಿಚಾರವಾಗಿ ತನ್ನ ತಲೆಯನ್ನೇ ನಂಬಬೇಕಾಯಿತು. ಮರದ ಎಲೆ–ತೊಗಟೆಗಳನ್ನೊ, ಪಶು–ಪಕ್ಷಿಗಳ ಚರ್ಮ, ಗರಿಗಳನ್ನೊ ತನ್ನ ಆಚ್ಛಾದನವನ್ನಾಗಿ ಉಪಯೋಗಿಸಿದನು. ಅವೇ ಸಾಧನಗಳನ್ನೇ ತುಂಡುಗಳನ್ನಾಗಿಮಾಡಿ ತನಗೆ ಹಾಳತಾಗುವಂತೆ ಜೋಡಿಸಿಕೊಳ್ಳುವುದಕ್ಕಾಗಿ ಸೂಜಿಯಂತಹ ಸಾಧನವನ್ನು ಕಂಡುಕೊಂಡನು. ಸೂಜಿಯ ಶೋಧವು ಕೂಡ

★

ಹೆಣಿಕೆ-ಕಸೂತಿಗಳ ಕಲೆಯು ಕ್ರಮುವಾದ ಬೆಳೆವಣಿಗೆ ಮಾನವಜೀವನದಲ್ಲಿ ಹೇಗೆ ಹೇಗೆ ಆಯಿತು? ಇಂದು ಭಾರತದ ಬೇರೆ ಬೇರೆ ಪ್ರದೇಶದಲ್ಲಿವು ಯಾವಯಾವ ರೂಪದಿಂದ ಮುಂದುವರಿಯುತ್ತಿವೆ?

★

ಇನ್ನೊಂದು ಕಲೆಯಾದ ಹೆಣಿಕೆಯ ಸೂಚನೆಯಿಂದಲೇ ಸಿಕ್ಕವಾರ್ದಾಗಿರಬೇಕು. ಬುಟ್ಟಿಯನ್ನು ಎಲೆ–ಬಳ್ಳಿಗಳ ಹೆಣಿಕೆಯಿಂದಲೇ ಸಿದ್ಧಗೊಳಿಸಬೇಕಾಗುತ್ತಿತ್ತು. ಆಹಾರವನ್ನು ತರುವುದಕ್ಕಾಗಲಿ, ಅದನ್ನು ಕೂಡಿಸಿ ಕಾಯ್ದಿಡುವುದಕ್ಕಾಗಲಿ ಬಟ್ಟೆಗಳಿಗಿಂತಲೂ ಬುಟ್ಟಿಯಂತಹ ಸಾಧನದ ಆವಶ್ಯಕತೆ ಹೆಚ್ಚಾದುದರಿಂದ, ಆ ಬುಟ್ಟಿಯಲ್ಲಿಯ ಹೆಣಿಕೆಯ ಹಾಸುಹೊಕ್ಕುತನ,ಸೂಜಿಯಸಾಧನದಿಂದ ಜೋಡಿಸುವಿಕೆ ಇವೇ ಬಟ್ಟೆಯ ನೇಯ್ಗೆಯ, ಅದರ ಮೇಲಿನ ಕಸೂತಿಯ ಸೂಚಕಗಳಾಗಿದ್ದಿರಬಹುದಾಗಿದೆ.

ಹೆಣಿಕೆಯ ಕೆಲಸವು ಕಸೂತಿಗಿಂತ ಪೂರ್ವದ್ದೆನಿಸಿದರೂ, ಕಸೂತಿಯ ಬೆಳೆವಣಿಗೆ ಕಲಾಸ್ವರೂಪದಲ್ಲಿ ಆಯಿತು. ಕಸೂತಿಯು ಕಲೆಯಾಗಿ ಬೆಳೆದದ್ದನ್ನು ತಿಳಿಯಬೇಕಾದರೂ, ಮಾನವನ ಪ್ರಾರಂಭಿಕ ಜೀವನದ ಕಡೆಗೆ ಸೂಕ್ಷ್ಮವಾಗಿ ಅವಲೋಕಿಸುವುದರಿಂದ ಅದು ಹೆಚ್ಚು ಸ್ಪಷ್ಟವಾಗುವಂತಿದೆ.

ಭೌಗೋಲಿಕ ಕಾರಣದಿಂದಾಗಿ ಮಾನವನು ಜನಾಂಗವಾಗಿ ಮಾರ್ಪಟ್ಟನಷ್ಟೇ? ಈ ಮಾರ್ಪಾಟವೇ ಧರ್ಮದ ಹುಟ್ಟಿಗೆ

ಕಾರಣ. ಧರ್ಮವು ಕಲೆಯ ಪೋಷಕಗಳಲ್ಲೊಂದಾದುದರಿಂದ, ನಾಗರಿಕತೆಯು ಬಾಲ್ಯಾವಸ್ಥೆಯಿಂದಲೇ ಕಲೆ ಹಾಗೂ ಧರ್ಮಗಳು ಜನಾಂಗಗಳ ಬೆಳೆವಣಿಗೆಯ ಮೂಲಕಾರಣಗಳಷ್ಟೇ ಅಲ್ಲದೆ, ಪರಿಣಾಮಕಾರಕ ಪ್ರಜ್ಞೋದನೆಗಳಾಗಿ ಪರಿಣಮಿಸಿದುವೆಂದು ಹೇಳಬಹುದು. ಆ ಪ್ರಜ್ಞೋದನೆಯ ಫಲದಿಂದಾದ ಬುದ್ಧಿಯ ಬೆಳೆವಣಿಗೆಯ ಜಂಭವಸ್ಪಷ್ಟೆ ಕೊಚ್ಚಿಕೊಂಡರೂ, ಮಾನವನು ತನ್ನಲ್ಲಿಯ ಅಪೂರ್ಣತೆಯ ಕಾರಣದಿಂದ ಯಾವಾಗಲೂ ಸಂಶಯಭರಿತನಾಗಿಯೆ ಉಳಿದಿದ್ದಾನೆ. ತನಗಿಂತಲೂ ಹೆಚ್ಚಿನದಾದ ಶಕ್ತಿಯೊಂದು ಇದೆಯಾಗಿ ಅರಿತವನಾಗಿದ್ದಾನೆ. ಅಂಧಶ್ರದ್ಧೆಯಿಂದ ಆ ಶಕ್ತಿಯನ್ನು ಪೂಜಿಸುವುದಕ್ಕಾಗಲಿ, ಭಯಭಕ್ತಿಗಳಿಂದ ಮಾನಸೊಡುವುದಕ್ಕಾಗಲಿ, ಗುಡಿ-ಗೋಪುರಗಳನ್ನು ನಿರ್ಮಿಸಿದ; ಆ ಚಿಚ್ಛಕ್ತಿಯನ್ನು ಕಾಣುವುದಕ್ಕಾಗಿ ಮೂರ್ತಿಗಳನ್ನು ಕಲ್ಪಿಸಿದ. ಅವುಗಳ ಪೂಜೆಗಾಗಿ ವಸ್ತ್ರಾಭರಣಗಳನ್ನು ಮಾಡುವ ಕೆಲಸವನ್ನು ಕೈಕೊಂಡ. ಆಭರಣವೇ ಆರಂಭದಲ್ಲಿ ಸೌಂದರ್ಯದ ಸಾಧನವಾದುದರಿಂದ, ಅವುಗಳ ಮೇಲೆಯೆ ಮೊದಲು ಕಸೂತಿಯು ಪ್ರಾರಂಭವಾಯಿತು. ವಸ್ತ್ರವು ದೇವರಕ್ಷಣೆಯ ಹೊಣೆ ಮಾತ್ರ ಹೊತ್ತುದರಿಂದ, ಆಭರಣಕ್ಕಿಂತಲೂ ವಸ್ತ್ರವು ಆಗ ಹೆಚ್ಚಿನ ಸೌಂದರ್ಯಸಾಧನವಾಗಿರಲಿಲ್ಲ. ಆದರೂ ದೇವನ ಪೂಜೆಗಾಗಿ ಉಪಯೋಗಿಸುವ ವಸ್ತ್ರ, ಆಭರಣ ಎರಡೂ ಸುತೋಭೆಯನ್ನುಂಟುಮಾಡುವ ಸಾಧನಗಳಾಗಿದ್ದುವೆಂಬುದನ್ನು ಮರೆಯುವಂತಿಲ್ಲ. ಮಾನವನು, ತಾನು ಉಪಯೋಗಿಸುವ ಬಟ್ಟೆಗೂ ದೇವರಿಗಾಗಿ ಉಪಯೋಗವಾಗುವ ವಸ್ತ್ರಕ್ಕೂ ಭೇದವನ್ನು ಕಂಡುದರಿಂದಲೇ, ತನ್ನ ಬಟ್ಟೆಯನ್ನೇ ದೇವಸಂರಕ್ಷಣೆಯೊಂದಿಗೆ ಸೌಂದರ್ಯದಸಾಧನವನ್ನಾಗಿ ಮಾಡಿಕೊಳ್ಳಲು ತಡವಾಗಿರಬೇಕು.

ಮನುಷ್ಯನು ತನಗಿಂತಲೂ ಹೆಚ್ಚಿನದೊಂದು ಶಕ್ತಿಯನ್ನು ಪೂಜಿಸುತ್ತಲೇ ಆ ಶಕ್ತಿಗೂ ತನ್ನಂತೆಯೇ ಸುಖ-ದುಃಖಗಳಿರುವುವೆಂದು ಕಲ್ಪಿಸಿದ. ಈ ಕ್ರಮವೇ ಬರುಬರುತ್ತ ತನ್ನಂತೆ ಸುಖದುಃಖಗಳನ್ನನುಭವಿಸುತ್ತಿದ್ದರೂ ತನಗಿಂತಲೂ ಶಕ್ತಿವಂತನಾದವನಲ್ಲಿ ದೇವತ್ವವನ್ನು ಕಾಣಹತ್ತಿದ. ಅಂದಿನಿಂದಲೂ ಆ ಶಕ್ತಿಯುತನಾದ ವೀರನನ್ನೇ ದೇವರೆಂದು;ಅರ್ಹಾತ್ ವೀರಪೂಜೆಯನ್ನೇ ಪ್ರಾರಂಭಿಸಿದ. ಈ ವೀರ-ಪೂಜೆಯ ಪ್ರಾರಂಭದಿಂದಲೇ ಬಟ್ಟೆಯ ಪ್ರಯೋಜನ ಹೆಚ್ಚಾಗಿ ಬೆಳೆದು ಬಂದಿರುವಂತಿದೆ. ತಮ್ಮತಮ್ಮಲ್ಲಿಯೇ ಭೇದವನ್ನು ಕಂಡಂದಿನಿಂದಲೂ ಸಾಮಾನ್ಯನು ಉಪಯೋಗಿಸುವ ಬಟ್ಟೆಗೂ ವೀರನು ಉಪಯೋಗಿಸುವ ವಸ್ತ್ರಕ್ಕೂ ಅಂತರವಾಯಿತು; ಅಂತೆಯೆ ಆಭರಣಗಳಂತೆ ಬಟ್ಟೆಗಳ ಮೇಲೆಯೂ ಕಸೂತಿಯು ಬಂದು, ಕಸೂತಿಯ ಕಲೆಯ ಬೆಳೆವಣಿಗೆ ಭರದಿಂದ ಸಾಗಿತು. ಈ ಎಲ್ಲ ವಿವರಣೆಯಲ್ಲಿಯ ಸಮಸ್ಯೆಯು ಸತ್ಯವಿರದಿರಬಹುದಾದರೂ ಅನುಮಾನಸಹಜವಾಗಿದೆ.

ಬರು-ಬರುತ್ತ ಸಾದಾ ಬಟ್ಟೆಗಳಲ್ಲಿ ಬಣ್ಣಗಳ ಬೆರಕೆಗಾರಂಭವಾದುದರಿಂದ, ವಿವಿಧ ಬಣ್ಣದ ಸಣ್ಣ ಸಣ್ಣ ಎಳೆಗಳ ಸೇರ್ಪಡೆಯಾಗಿ, ಬುಟ್ಟೇದಾರಿಯ ನೇಯ್ಗೆಯ ಬಟ್ಟೆಗಳು ಹುಟ್ಟತೊಡಗಿದುವು. ಅವುಗಳಲ್ಲಿಯೂ ವಿಶೇಷವಾಗಿ ಫಲ, ಪುಷ್ಪ, ಗಿಳಿ ಮೊದಲಾದುವುಗಳ ಚಿತ್ರೀಕರಣವೇ ಹೆಚ್ಚಾಗಿರುತ್ತಿತ್ತು. ಈ ಚಿತ್ರೀಕರಣವು,ಜೋಡಣೆಯೊಂದಿದ ಉಡುಪಿನ ವಿವಿಧ ಭಾಗಗಳ ಮೇಲೆ ನೇಯ್ಗೆಯಲ್ಲಿಯೇ ಸಾಧ್ಯವಿಲ್ಲದ್ದರಿಂದ, ಬಟ್ಟೆಯ ಮೇಲೆಯೇ ಕೈಯಿಂದ—ಸೂಜಿಯ ಸಾಧನದಿಂದ—ಚೇಕಾದಂತೆ ಚಿತ್ರೀಕರಣವಾರಂಭವಾಯಿತು. ಅವಸರಾವಶ್ಯಕತೆಗಳಿಗನುಸರಿಸಿ, ನಿಸರ್ಗದಿಂದ ಸಿಕ್ಕ ಸೂಜನೆಯ ಲಾಭವಡೆದು, ಅದನ್ನು ಸುಂದುವರಿಸುವುದೇ ನಮ್ಮ ಪೂರ್ವಜರ ಪದ್ಧತಿಯಾದುದರಿಂದ, ಅಳವಿಲ್ಲದ ಅಭ್ಯಾಸದ ಇಂದಿನ ಬುದ್ಧಿಗಮ್ಯ ಜ್ಞಾನವಂತರು, ವೃಥಾಭಿಮಾನದಿಂದ ನಮ್ಮ ಪೂರ್ವಜರು ಮುಂಧೋರಣೆಯಿಲ್ಲದೆ ಕೇವಲ ಅನುಭವಜನ್ಯಜ್ಞಾನದ ತತ್ತ್ವಪೇತ್ರರಾಗಿದ್ದರಾಗಿ ಹೇಳುವರು.

ಐತಿಹಾಸಿಕ ದೃಷ್ಟಿಯಿಂದ ಭಾರತ ಹಾಗೂ ಚೀನಾಗಳ ಕಸೂತಿಯ ಕಲೆಯು ತೀರ ಪ್ರಾಚೀನವೆಂದು ತಿಳಿಯುತ್ತದೆ. ಯುರೋಪದಲ್ಲಿ ಇತ್ತೀಚೆಗೆ ಎಂದರೆ ಹದಿನೇಳನೆಯ ಶತಮಾನದಲ್ಲಿ ಕಸೂತಿಯ ಕಲೆಯು ಊರ್ಜಿತಾವಸ್ಥೆಯನ್ನು ಪಡೆಯಿತಾಗಿ ಎಷ್ಟೋ ತಜ್ಞರು ಒಪ್ಪುತ್ತಾರೆ. ಅದುಕೂಡ ಇಜಿಪ್ತ್‌ದಿಂದ ಹೆಬ್ರೂಜಾತಿಯ ಹೆಣ್ಣುಮಕ್ಕಳು ಕಸೂತಿಯನ್ನು ಕಲಿತು ಯುರೋಪದಲ್ಲಿ ಅದರ ಪ್ರಸಾರಕ್ಕೆ ಕಾರಣರಾದರೆಂದು ಹೇಳುತ್ತಾರೆ. ಇಂದು ಜಿಡಗಿನ ಉಡುಪಿನ ನಾಡಾದ ಫ್ರಾನ್ಸ್‌ನಲ್ಲಿ ಕಸೂತಿಯು ಅತ್ಯುನ್ನತ ಶಿಖರದಲ್ಲಿದ್ದರೆ, ಕಿಮೊನೊಗಳನ್ನುಡುವ ಜಪಾನಿನಲ್ಲಿಯೂ ಕಸೂತಿಯು ಬೆಳೆವಣಿಗೆಯಲ್ಲಿದೆಯಾಗಿ ಕಾಣುವುದು. ಭಾರತದಂತಹ ವಿಶಾಲ-ದೇಶದಲ್ಲಿ, ಭೂಮಿಗುಣವನ್ನನುಸರಿಸಿ, ಅಲ್ಲಲ್ಲಿ ವಾಸವಾಗಿರುವವರಲ್ಲಿ ತೆರತೆರನಾದ ಕಸೂತಿಯ ಕಲೆಯು ಜೀವಿಸಿದ್ದುದು ಕಂಡು ಬರುತ್ತದೆ. ಉತ್ತರ ಹಿಂದುಸ್ಥಾನದಲ್ಲಿ ದಕ್ಷಿಣಕ್ಕಿಂತಲೂ ಬೆಲೆಯುಳ್ಳ ಕಸೂತಿಯ ಕೆಲಸವು ಸಿಕ್ಕುತ್ತವೆ. ಅದಕ್ಕೂ ಕಾರಣವಿಲ್ಲದೆ ಇಲ್ಲ. ಉಷ್ಣಪ್ರದೇಶಕ್ಕಿಂತ ಸಮಶೀತೋಷ್ಣ ಪ್ರದೇಶಗಳಲ್ಲಿ ಕಲಾ, ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಅವಕಾಶವಿದ್ದುದರಿಂದ, ಉತ್ತರದಲ್ಲಿ ಜಿಡಗಿನ ಬಣ್ಣದ ಕಸೂತಿಯು ಕೆಲಸ ಸಿಕ್ಕುತ್ತಿರಬಹುದು. ಆದರೆ ದಕ್ಷಿಣದಲ್ಲಿಯೂ ವಿಳಿಯ ಕಸೂತಿಯ ಕೆಲಸವು ಅಷ್ಟೇ ಕೌಶಲ್ಯಯುಕ್ತವಾಗಿ ನಡೆದದ್ದು ಕಾಣುತ್ತವೆ.

ಉತ್ತರ ಹಿಂದುಸ್ತಾನದ ಆಸ್ಸಾಮಿನ ಗುಡ್ಡಗಾಡು ಪ್ರದೇಶದಲ್ಲಿ ವಾಸವಾಗಿರುವವರ ಸೂಚಿಶಿಲ್ಪವನ್ನಭ್ಯಸಿಸಿದಲ್ಲಿ, ಬರಿಯ ಭಾರತದ್ದೇಕೆ, ಇಡೀ ಜಗತ್ತಿನ ಮನಸೆಳೆವ ಕಸೂತಿಯ ಕೆಲಸವು ಕಂಡುಬರುವುದೆಂದು ತಜ್ಞರು ಬರೆಯುತ್ತಾರೆ. ಅದು ಹಾಗಿರಲೂ ಸಾಧ್ಯವಿದೆ. ಆಸ್ಸಾಮುವನ್ನಾಕ್ರಮಿಸಿದ ಭೂಪ್ರದೇಶವೆಂದರೆ ಒಂದು ಸಣ್ಣ ಹಿಂದುಸ್ಥಾನವೇ ಎಂದು ಅನೇಕರು ಬಣ್ಣಿಸಿದ್ದಾರೆ. ಅನೇಕ ರಾಜರುಗಳ ಕನ್ಯೆಯರನ್ನು ಸೆಳೆತಂದು

ತನ್ನ ಅಂತಃಪುರವನ್ನೇ ತುಂಬಿದ ನರಕಾಸುರನು ಅಸ್ಸಾಮಿನವನು. ಮಧ್ಯಪಾಂಡವನ– ಅರ್ಜುನನ– ಚಿತ್ರವನ್ನು ಸೆಳೆದ ಚಿತ್ರಾಂಗದೆ (ಮಣಿಪುರ) ಅಸ್ಸಾಮಿನವಳು. ಶ್ರೀಕೃಷ್ಣನ ಪುತ್ರ ಅನಿರುದ್ಧನ ಉಷೆಯಾದರೂ ಅಸ್ಸಾಮಿನವಳೇ ಆಗಿದ್ದಳು. ಸೌಂದರ್ಯದ ತವರೂರಾದ ಅಸ್ಸಾಮಿನಲ್ಲಿ ಕಸೂತಿಯಂತಹ ಕಲೆಯ ಬೆಳೆವಣಿಗೆಯು ಭರದಿಂದ ಬೆಳೆದು ನಿಂತಿದ್ದರೆ ಹೆಚ್ಚಲ್ಲ. ಎಷ್ಟೆಂದರೂ ಸೌಂದರ್ಯವು ಕಲೆಯ ಸುಗಂಧವಲ್ಲವೇ?

ಮಣಿಪುರದ ಸ್ತ್ರೀಯರು ಮಾಡುವ ರೇಶಿಮೆಯ ಹೊಲಿಗೆಯ (ಸಾಟಿನ್ ಹೊಲಿಗೆಯ) ಕಸೂತಿಯೂ, ಕಾಮಟಿ, ಸಿಂಗಫೋಗಳ ಸುಳಿವುಹೊಲಿಗೆಯ ಕಸೂತಿಯೂ ನೋಡತಕ್ಕಂತಹವಾಗಿವೆ. ಇತ್ತೀಚಿನವಾದ ಕಲಾಬತ್ತಿನ, ಕಿನಕಾಬಿನ ಮೇಲಿನ ಕಸೂತಿಯ ಕೆಲಸವು ಸಪ ಅಲ್ಲಲ್ಲಿ ದೊಡ್ಡ ಪ್ರಮಾಣದಿಂದ ಸಾಗಿದ್ದುದು ನೋಡಸಿಕ್ಕುವುದು. ಮುರ್ಶಿದಾಬಾದ್, ಬನಾರಸ, ಮುಲ್ತಾನ್, ಅಹಮ್ಮದಾಬಾದ್, ಸೂರತ, ಪುಣೆಗಳು ಕಿನಕಾಬಿನ (ರೇಶ್ಮೆಯ) ಕಸೂತಿಗೆ ಪ್ರಸಿದ್ಧವಾಗಿವೆ. ಮುರ್ಶಿದಾಬಾದಿನ ಹತ್ತಿರವಿದ್ದ ಬಲೂಚಾರದಲ್ಲಿ ಸಿದ್ಧವಾಗುತ್ತಿದ್ದ ಸೀರೆಗಳ ಮೇಲಿನ ಕಸೂತಿಯು, ಬಂಗಾಲದ ಗೃಹಿಣಿಯರಿಂದ ತುಂಬ ಮೆಚ್ಚುಗೆ ಪಡೆದಿದ್ದರೂ ಜಪಾನಿನ ಅಗ್ಗಬೆಲೆಯ 'ಪಾಯಿನ್‌ಎಪಲ್' ಬಟ್ಟೆಯ ಮುಂದದು ಮುಗ್ಗಿಹೋಯಿತು. ಮುಂಬೈ ಮೊದಲಾದ ಮಧ್ಯಭಾರತ ಮೊದಲುಮಾಡಿ ಇಡಿ ದಕ್ಷಿಣದಲ್ಲೆಲ್ಲ ಬೆಳ್ಳಿ, ಬಂಗಾರಗಳ ಎಳೆಗಳಿಂದ, ಪಟ್ಟಿಗಳಿಂದ ಬೆಲೆಯುಳ್ಳ ಬಟ್ಟೆಗಳ ಮೇಲೆ ತೆಗೆದ ಕಸೂತಿಯು ತುಂಬ ಪ್ರಚಾರದಲ್ಲಿದೆ. ರೇಶ್ಮೆಯ, ಕಿನಕಾಬಿನ ಬಟ್ಟೆಗಳ ಮೇಲಂತೂ ಬಟ್ಟೆ ಕೂಡ ಕಾಣದಂತೆ ಬೆಳ್ಳಿ, ಬಂಗಾರಗಳ ಎಳೆಗಳ ಕಸೂತಿಯನ್ನು ತೆಗೆಯಲಾಗುತ್ತದೆ. ಅದರಲ್ಲಿಯೂ ಒಂದು ರೀತಿಯನ್ನು ಅನುಸರಿಸಿದುದು ಕಂಡುಬರುವುದು. ಬಿಳಿಯ ಎಳೆಗಳಿಂದ ಕಸೂತಿಯನ್ನು ತೆಗೆಯುವುದಿದ್ದಲ್ಲಿ ಕಪ್ಪಿಯ ಇಲ್ಲವೆ ಕೆಂಪು ಕಿನಕಾಬನ್ನು ಆರಿಸಲಾಗುತ್ತಿದ್ದರೆ, ಕಂದು ಬಣ್ಣದ ಬಟ್ಟೆಯ ಮೇಲೆ ಬಂಗಾರದ ಎಳೆಗಳಿಂದ ಕಸೂತಿಯನ್ನು ತೆಗೆಯಲಾಗುತ್ತದೆ. ಬೆಳ್ಳಿ-ಬಂಗಾರಗಳ ಎಳೆಗಳನ್ನು ಪಯೋಗಿಸುವ ಕ್ರಮವೇ ಇಂದಿನ ಹೀನಾವಸ್ಥೆಯಲ್ಲಿ ಕೂಡ—ಬೆಳ್ಳಿ-ಬಂಗಾರಗಳ ಜೊಳಪನ್ನು ಕೊಡುವ ನೂಲಿನದೋ ರೇಶಿಮೆಯದೋ ಎಳೆಯನ್ನು ಪಯೋಗಿಸಿ ತೆಗೆದ ಕಸೂತಿಯಲ್ಲಿರುವುದನ್ನು, ಇಂದು ನಾವು ಮನೆಮನೆಗಳಲ್ಲಿಯೂ ಕಾಣಬಹುದು.

ಲೋಪದ ತುಂಡುಗಳ ಹಾಗೂ ಲೋಹಧಾತುಗಳ ಎಳೆಗಳ ಉಪಯೋಗವು ಕಸೂತಿಯಲ್ಲಿ ಸಾಕಷ್ಟು ಬಂದಿದೆಯೆನ್ನಲಿಕ್ಕೆ ದಿಲ್ಲಿ, ಮುಲ್ತಾನ್, ಬನಾರಸಗಳ ಕಚೆಗೆ ರೂಢಿಯಲ್ಲಿದ್ದ 'ಝಿಡೋರ್ಕಾ' ಇಲ್ಲವೆ 'ತಿಲ್ಮಾಸಿತಾರಾ' ಎಂದು ಹೇಳಿಸಿಕೊಳ್ಳುವ ಕಸೂತಿಯೇ ಸಾಕ್ಷಿ. ಇತ್ತೀಚೆಗೆ ಜೋಧಪುರ, ಅಲ್ವಾರುಗಳ ಕಡೆಯಿಂದಲೂ ಈ ಕಸೂತಿಯನ್ನು ತೆಗೆದ ಬಟ್ಟೆಗಳು ಪೇಟೆಯಲ್ಲಿ ಹೆಚ್ಚಾಗಿ ಬರತೊಡಗಿವೆ.

ಕಚ್ಛ, ಕಾಠೇವಾಡಗಳು ಸರಪಳಿ ಹೊಲಿಗೆಯ ಕಸೂತಿಗೆ ಪ್ರಸಿದ್ಧವಾಗಿವೆ. ಸರಪಳಿ ಹೊಲಿಗೆಯಿಂದ ನಾನಾಬಗೆಯ ಬಳ್ಳಿ, ಹೂ, ಪಕ್ಷಿಗಳನ್ನು ತೆಗೆಯಲಾಗುತ್ತದೆ. ಬಣ್ಣಗಳ ಸೇರ್ಪಡೆಯನ್ನು ಕೂಡ ಕ್ರಮವರಿತು ಮಾಡಲಾಗಿರುತ್ತದೆ. ಸಣ್ಣ ಸಣ್ಣ ಕನ್ನಡಿಯ ತುಂಡುಗಳನ್ನು ಬಟ್ಟೆಯಲ್ಲಿ ಸೇರಿಸಿ, ಸರಪಳಿಯ ಹೊಲಿಗೆಯಿಂದ ಸುಶೋಭಿತಗೊಳಿಸುವ ಕ್ರಮವನ್ನು ನಮ್ಮ ಕನ್ನಡ ನಾಡಿನಲ್ಲಿಯೇ ವಾಸವಾಗಿರುವ ಲಂಬಾಣಿಗರಲ್ಲಿ ಕಾಣಬಹುದಾಗಿದೆ. ಗುಜರಾಥ, ಮಹಾರಾಷ್ಟ್ರಗಳಲ್ಲಿ ಈಗೀಗ ಕಂಡುಬರುವ ಚೀನಾದೇಶದ ಕಸೂತಿಯು ಜನ-ಮನವನ್ನು ಸೆಳೆಯುತ್ತಿದ್ದರೂ 'ಕನ್ನಡ ಕಸೀದೆ' ಎಂಬ ಹೆಸರಿನಿಂದ ಈಗಲೂ– ಕರ್ನಾಟಕದ ಕಸೂತಿಯು ಅಲ್ಲಿ ಸುಪರಿಚಿತವಾಗಿದೆ. ಕರಿಯ ಜಂದ್ರಕಾಳಿಯ ಸೀರೆಯ ಮೇಲೆ ತೆಗೆವ ಕಸೂತಿಯು ಮೊನ್ನೆ–ಮೊನ್ನೆಯ ವರೆಗೂ ಅದೇಕೆ ಈಗಲೂ ಅನೇಕ ಕಡೆಗಳಲ್ಲಿ ಸಜೀವವಾಗಿದೆ.

ಹೊಲಿಗೆಯ ಯಂತ್ರದ ಶೋಧದಿಂದೀಚೆಗೆ, ಕೈಯಿಂದ ಸಾಗಿದ ಕಸೂತಿಯ ಕಲೆಯು ಬಹುತರವಾಗಿ ಯಂತ್ರದ ವಶವಾಗಿದೆ. ಯಂತ್ರನಿರ್ಮಿತ ಕಸೂತಿಯನ್ನು ನೋಡಿ ನೋಡಿ ಕಣ್ಣಿಗೆ ದಡ್ಡು ಬಿದ್ದು ಹೋದುದರಿಂದ, ಕೈಯಿಂದಾದ ಕಸೂತಿಯು ತುಸು ಹಿಂದೆಬಿದ್ದಂತಾಗಿದೆ. ಇಂದು ನಿರ್ಜೀವ ಚಲಚ್ಚಿತ್ರಕ್ಕೂ ಸಜೀವ ನಾಟಕಕ್ಕೂ ಸ್ಪರ್ಧೆಬಿದ್ದಂತಾಗಿದೆ. ಯಂತ್ರದ ಕೃತ್ರಿಮತನದಿಂದ ಮಾಡುವ ಕೆಲಸಕ್ಕೆ ಪೇಳೆ ತುಸುಹಿಡಿದರೂ ಅನೇಕ ಹೊಲಿಗೆಗಳು ಯಂತ್ರಗಳಲ್ಲಿ ಸಾಧ್ಯವಿಲ್ಲದುದರಿಂದ, ಸಜೀವ ಚಿತ್ರಶಕ್ತಿಯುಳ್ಳ ಕೈಯ ಕಸೂತಿಯು ಪ್ರಗತಿಯಲ್ಲಿದ್ದುದರಿಂದ, ತೀವ್ರ ಸ್ಪರ್ಧೆಗೆ ಅವಕಾಶವಿಲ್ಲದಾಗಿದೆ. ಇತ್ತೀಚೆಗೆ ಬಣ್ಣಗಳ ಉಪಯೋಗವು ಕೂಡ ಅಭ್ಯಾಸಯುಕ್ತವಾಗಿ ಸಾಗಿರುತ್ತದೆ. ಯಂತ್ರದ ಸಹಾಯ ಸಿಕ್ಕದ್ದರಿಂದ ತಿಳುವಾದ ಕಟ್ಟಿಗೆಯ (ಪ್ಲಾಯಉಡ್) ಮೇಲೆ, ಚರ್ಮದಮೇಲೆ, ದಪ್ಪಾಗಿದ್ದ ಬಟ್ಟೆಗಳ ಮೇಲೆ ಸಪ ಕಸೂತಿ ತೆಗೆದು, ಕಲೆಯ ಸೊಬಗಿನ ಸೌಂದರ್ಯವನ್ನು ಸವಿಯಲು ಇನ್ನೂ ಅನುಕೂಲವೆ ಹೆಚ್ಚಾಗಿದೆ.

ನಮ್ಮಲ್ಲಿ ಕಸೂತಿಯ ಕಲೆಯು ಕಡಗದ ಕೈಯವರದೆಂಬ ಮಾತು ಬಹುತರ ಪ್ರಚಾರದಲ್ಲಿದೆ. ಆದರೆ ಅದಕ್ಕೆ ಸರಿಯಾದ ಆಧಾರಗಳಿದ್ದಂತಿಲ್ಲ. ಪುರುಷನಿಗಿಂತಲೂ ಸ್ತ್ರೀಯರಲ್ಲಿ ಸೌಂದರ್ಯಸಮೀಕ್ಷಣಶಕ್ತಿ ಹೆಚ್ಚೆಂದಾಕ್ಷಣಕ್ಕೆ ಕಲೆಯ ಕಾರ್ಯವೆಲ್ಲ ಅವರ ಸೊತ್ತಾಗಬಲ್ಲದೆ? ಒಂದು ವೇಳೆ ಕಸೂತಿಯ ಕಲೆಯು/ಸ್ತ್ರೀಯರ ಸೊತ್ತೇ ಆಗಿದ್ದಲ್ಲಿ, ಅದರ ಕಾರಣ– ಇಂದು ಆ ಕಲೆಯಲ್ಲಿ ಸ್ತ್ರೀತ್ವವು ತುಂಬಿರಬೇಕು; ಇಲ್ಲವೇ ಪುರುಷನಿಗೆ ಆ ಕಲೆಯ ಮರೆವಾಗಿರಬೇಕಲ್ಲದೆ ಬೇರೆ ಇಲ್ಲ. ಹಾಗೆ ನೋಡಿದರೆ ಮೇಲೆ ಹೇಳಿದ 'ಝಿಡೋರ್ಕಾ' 'ತಿಲ್ಮಾಸಿತಾರಾ'ಗಳಂತಹ ಕಸೂತಿಯನ್ನು ಈ ವರೆಗೆ ಪುರುಷರೇ ಮಾಡುತ್ತ ಬಂದಿದ್ದಾರೆ. ನಾಡಿನ ಸ್ತ್ರೀ-ಪುರುಷರಿಬ್ಬರೂ ಕಲೆಗೆ ಪ್ರೋತ್ಸಾಹನೆಕೊಡುವುದಷ್ಟೇ ತಮ್ಮ ಕಾರ್ಯವೆಂದು ತಿಳಿಯದೆ, ಕಲೆಯನ್ನು ಮೈಗೂಡಿಸಿಕೊಂಡು ಕಲಾವಂತರಾಗಲು ಯತ್ನಿಸಬೇಕು.

ಕಲಿತ ಕಳ್ಳ

(ಸಣ್ಣಕತೆ)* .

ಶ್ರೀ. " ಇಂದುತನಯ " ಉಗಾರ

★

ಕಳವು ಮಾಡಿ, ಸಮಾಜದಲ್ಲಿ 'ಕಳ್ಳ! ಕಳ್ಳ!' ಎಂಬ ಅಪಖ್ಯಾತಿ ಅಪಮಾನ ಪಡೆಯುವ ಅಪೇಕ್ಷೆ ಯಾವ ಮನುಷ್ಯನಿಗಿರಬಹುದು? ಆದರೂ ಕಳವು-ತುಡುಗುಗಳಿಗೆ ಕಡಿಮೆಯಿಲ್ಲವಲ್ಲ? ಯಾಕೆ ಹೀಗೆ ಗೊತ್ತಿದೆಯೆ? ಗೊತ್ತಿಲ್ಲವಾದರೆ ಕಿಟ್ಟಣ್ಣನನ್ನು ಕೇಳಿರಿ!

★

'ಕಿಟ್ಟೂ.....! ಜಳಿಯೊ.....! ಹೊಟ್ಟೆಯಲ್ಲಿ ನಡುಕ....! ಅಯ್ಯೋ ಸಾಯ್ತಿನೊ.....ಕಿಟ್ಟೂ....ಅಯ್ಯೋ!....ಅಯ್ಯೋ!.... ಹ....ಯ್ಯೋ!....ಎಂಥಾ....ವೇಳೆ ತಂದೆಪ್ಪಾ ಭಗವಂತಾ!.... ಅಯ್ಯೋ!....ಜಳಿ ! ಜಳಿ!.... ಏನಾದರೂ ಹೊಚ್ಕೊ!....ಕಿಟ್ಟೂ ! ಕಿಟ್ಟೂ, ನಿನ್ನ ಪುಕ್ಕಳು ಮರೀ....ಎಲ್ಲಾ ನೋಡಿದೆ.....ಆದರೆ ಇದು ನೋಜೋದು ಬ್ಯಾಡಪ್ಪಾ !....ದೇವರು ಲಗೂನೇ ಕಣ್ಣು ಮುಚ್ಚಲಿನ್ನು!....ಎಲ್ಲ ಹೋದ್ಯೋ.....ಕಿಟ್ಟೂ.....?'

'ಎಲ್ಲಿಲ್ಲಮ್ಮಾ..ಇಲ್ಲೇ ಇದ್ದೀನಿ! ಹೊಚ್ಚಲಿಕ್ಕೆ ಏನಾದ್ರೂ ಅದಽ..ಏನು ನೋಡಿದೆ..ನೀನು ಹಾಗೆಲ್ಲಾ ಮನಸ್ಸಿಗೆ ಪಚ್ಚಿಕೊಳ್ಳಬೇಡವಮ್ಮಾ.....ದಿನಮಾನ ಬಂದ್ಹಾಂಗ ಹೋಗಲಿಕ್ಕೇಬೇಕು! ಈಗಾದರೂ ನಮಾಧಾನದಿಂದ ನಾಲ್ಕು ದಿನಾ ಹೋಗಲಿ!'

'ಎಂಥಾ....ಸಮಾಧಾನ! ಸುಡಗಾಡಿನಾಗಿನ....ಸಮಾಧಾನ! ಸುಟ್ಟು ಹೋಗಲಪ್ಪಾ ಇಂಥಾ ನಮಾಧಾನ!..... ಅಯ್ಯೋ!.... ಸಾಳಾ....ಕಿಟ್ಟೂ!....ಸಾಯ್ತೀನೋ.....ಇನ್ನ !..... ನಿನಗ ಕಲಿಸಿ....ಏನು ದಂಡೆಗೆ ಹಚ್ಚಿದ್ಹಾಂಗಾತು....ನಡು ಹೊಳ್ಯಾಗ ....ಹರಿಗೋಲಿನ ಹುಟ್ಟು.....ಸುರಿದ್ಹಾಂಗ ಆತಲ್ಲ.....ನಿನ್ನ ಜನ್ಮಾ!.....'

ಕಿಟ್ಟುವಿನ ವಿಷಣ್ಣವಾದ ಮೊಗದಿಂದ ಹೊರಟ ವಿಸಿಯುಸಿರೊಂದು ಮನೆಯೊಳಗಿನ ಹವೆಯನ್ನೆಲ್ಲ ಬೆಚ್ಚಗೆ ಮಾಡಿತು. ಅದರಿಂದ ಮುದುಕಿಯ ಜಳಿಯೂ ಕೊಂಚ ಕಡಿಮೆಯಾಯಿತೇನೊ! ಸ್ವಲ್ಪ ಶಾಂತಳಾಗಿ, 'ಶಾಂತೀದು ಇನ್ನೂ ಒಳಗಿನ ಕೆಲಸ.....ಆಗಲಿಲ್ಲಽ? ನಿನಗ ಅಂಗಡಿಗೆ ಹೋಗಲಿಕ್ಕೆ ಹೊತ್ತಾಯ್ತು....' ಎಂದು ಮತ್ತೊಂದು ನುಗ್ಗುಲಿಗೆ ಹೊರಳಲು ಯತ್ನಿಸಿದಳು.

೨

ಸ್ಥಾವರ ಆಸ್ತಿ-ಪಾಸ್ತಿಗಳಿಲ್ಲದೆ ಕೇವಲ ಸಣ್ಣ ಸಂಬಳದಮೇಲೆ ಸಾಗುವ ಸಂಸಾರವು, ಸದ್ಯ ಸುಸ್ಥಿತಿಯಲ್ಲಿದ್ದಂತೆ ಕಂಡರೂ, ಅದು ತಳಹರಿ ಹಾಕದೆ ಕಟ್ಟಿದ ಕಟ್ಟಡದಂತೆಯೆ. ಈ ಮಾತಿನ ಅರಿವು ಶ್ರೀನಿವಾಸರಾಯರಿಗೆ ಇರಲಿಲ್ಲವೆಂತಲ್ಲ, ಇತ್ತು. ಅಂತೆಯೆ ಅವರು ತಾಲ್ಲೂಕು ಕಚೇರಿಯೊಳಗಿನ ಸಣ್ಣ ಗುಮಾಸ್ತರಾಗಿದ್ದರೂ ಮೂರು ಸಾವಿರ ರೂಪಾಯಿಗಳ ಜೀವವಿಮೆಯೊಂದನ್ನು ಮಾಡಿಸಿದ್ದರು—ನುಪ್ಪಿನ ಕಾಲಕ್ಕೆ ನೆರವಾದೀತೆಂದು. ಇದೂ ಅಲ್ಲದೆ, ಸಂಬಳದಲ್ಲಿ ಮನೆತನ ಸಾಗಿಸಿ ಹಿರಿಯಮಗನನ್ನು—ಕಿಟ್ಟೂ ಅತನ ಹೆಸರು- ಬಿ. ಎ. ವರೆಗೆ ಅಭ್ಯಾಸ ಮಾಡಿಸಿದ್ದರು; ಅದರಲ್ಲೂ ವಿಶೇಷವೆಂದರೆ ಇಷ್ಟರಲ್ಲಿಯೆ ಕಿಟ್ಟುವಿನ ಮದುವೆಯನ್ನೂ ಮಾಡಿಬಿಟ್ಟಿದ್ದರು. ಇನ್ನೇನು, 'ಐದಾರು ತಿಂಗಳಲ್ಲಿ ಸೊಸೆ ಮನೆಗೆ ಬರುವಳು, ಅಷ್ಟರಲ್ಲಿಯೆ ಕಿಟ್ಟುವಿನ ಪರೀಕ್ಷೆಯೂ ಆಗುವುದು, ಮತ್ತೇನು? ಪ್ರಾಂತಸಾಹೇಬರ ಗುರುತೂ ಇದೆ, ಸ್ವಲ್ಪ ಹೇಳಿಕೊಂಡು ಕಿಟ್ಟುವಿಗೆ ಎಲ್ಲಿಯಾದರೂ ಒಂದು ಕೆಲಸ ಕೊಡಿಸಿದರೆ ತೀರಿತು. ಅವರ ಭಾರವಂತೂ ಬೇರೆ ಕಡೆಗೆ ಹೋಗುವುದು. ನನ್ನ ಸಂಬಳದಲ್ಲಿ ಸಣ್ಣ ಹುಡುಗನ ಶಿಕ್ಷಣ—ಮನೆಯ ವೆಚ್ಚಗಳು ಸಾಗುವುವು....' ಇವೇ ಮೊದಲಾದ ಕನಸುಗಳನ್ನು ಕಾಣುತ್ತ ಶ್ರೀನಿವಾಸರಾಯರು ಸುಖದಲ್ಲಿದ್ದರು. ಆದರೆ ವಿಧವೆಯಾದ ಮಗಳು ಮುಂದೆ ಹಾಯ್ದು ಹೋವಾಗ, ಅವರ ಹೃದಯಕ್ಕೆ ಸಾವಿರ ಜೇಳು ಕಡಿದಷ್ಟು ನೋವಾಗುವುದು. ಆದರೂ 'ಎಲ್ಲರಿಗೂ ಎಲ್ಲ ವಿಷಯಗಳಲ್ಲಿಯೂ ಎಲ್ಲಿ ಸರಿಯಾಗಿರುತ್ತದೆ! ಯಾವುದಾದೊಂದು ಕೊರತೆ ಇದ್ದೇ ಇರುವುದಲ್ಲ!' ಎಂದುಕೊಂಡು ಮನಸ್ಸಿಗೆ-ಏನೋ ಸ್ವಲ್ಪ-ಸಮಾಧಾನಮಾಡಿಕೊಳ್ಳುತ್ತಿದ್ದರು.

ಶ್ರೀನಿವಾಸರಾಯರ ಸಂಸಾರ ಕಟ್ಟಡವು, ಯಾವುದೊ ಒಂದು ಮೂಲೆಯಲ್ಲಿ ಸ್ವಲ್ಪ ಕೆಳಗಿಳಿದದ್ದು ಎಲ್ಲವೂ ಒಮ್ಮೆಲೆ ಮುರಿದೇನಿತ್ತು; ರಾಯರು ಅಕಸ್ಮಾತ್ ತೀರಿಕೊಂಡುದರಿಂದ, ಕಿಟ್ಟುವಿನ ಓದು ಅಷ್ಟಕ್ಕೆಯೆ ನಿಂತಿತು, ಮನೆಗೆ ಬಂದ. 'ಮಾವ ಸತ್ತ, ಮಾತನಾಡಿಸಬೇಕು' ಎಂದು ಶಾಂತೆಯ ತಂದೆ ಅವಳನ್ನು ಕರೆದುಕೊಂಡು ಬಂದು, ನಾಲ್ಕುದಿನ ನಿಂತು, ಅವಳನ್ನು ಅಲ್ಲಯೆ ಬಿಟ್ಟುಹೋದ. ಅಂತೂ ಕಿಟ್ಟುವಿಗೆ ತಾಯಿ, ಅಕ್ಕ, ತಮ್ಮ ಹಾಗೂ ಈಗ ಮನೆಗೆ ಬಂದ ಹೆಂಡತಿ ಇಷ್ಟು ಜನರ ಭಾರ ಹೊರಬೇಕಾಯಿತು. ಹಿರಿಯರಿಂದ ಬಂದ ಆಸ್ತಿಯೆಂದರೆ ದೂರದ ಹಳ್ಳಿಯಲ್ಲೊಂದು ಮನೆ, ಬರಬೇಕಾದ ವಿಮೆಯ ಹಣ, ಇಷ್ಟೇ! ವಿಮೆಯ ವಿಚಾರ ಮಾಡಲಾಯಿತು. ಪರವೇತದ

* ಜಯಂತಿಯ ಸಣ್ಣಕತೆಗಳ ಮೇಲಾಟಕ್ಕೆ ಬಂದುವುಗಳಲ್ಲಿ ಒಳ್ಳೆಯ ಕತೆಯೊಂದಿದು. ಸಂ. ಜ.

ಕಂಪನಿ. ಯುದ್ಧದ ವಿಷಮವಾತಾವರಣದಮೂಲಕ ಅದರ ಆಫೀಸು ಮುಚ್ಚಲ್ಪಟ್ಟಿದ್ದಿತಂತೆ. ಅದರ ಪ್ರಧಾನ ಕಾರ್ಯಾಲಯ ಅಮೇರಿಕೆಯಲ್ಲಿ ; ಅದುಪರಿಂದ ಅತ್ತ ಕೆಲಸ ನಡೆಯಿಸಿ, ವಾರಸ್‌ದಾರರ ನಿಶ್ಚಯವಾದಮೇಲೆ, ಆ ಹಣ ಕೈಗೆ ಸಿಕ್ಕುವುದು. ಅದರಿಂದ ಅದೂ ಸದ್ಯಕ್ಕೆ ಕನ್ನಡಿಯೊಳಗಿನ ಗಂಟೆ.

ಹೀಗಿತ್ತು, ಕಿಟ್ಟುವಿನ ಮನೆತನಕ್ಕೆ ಹಿರಿಯರಿಂದ ಬಂದ ಆಸ್ತಿಯ ಆಧಾರ. ಎಂದ ಮೇಲೆ ಅವನ ಶಿಕ್ಷಣ ಮುಂದೆ ಹೇಗೆ ಸಾಗಬೇಕು? ಅದರಿಂದ ಆತನು ಕಲಿಯುವುದನ್ನು ಬಿಟ್ಟು ಮನೆತನ ಸಾಗಿಸುವ ಯೋಚನೆ ಮಾಡಬೇಕಾಯಿತು. ತಾಯಿಯ ಹತ್ತಿರ ಇದ್ದ ಅಲ್ಪಸ್ವಲ್ಪ ಬಂಗಾರದ ಒಡವೆಗಳನ್ನು ಮಾರಿ, ತಂದೆಯ ಉತ್ತರಕರ್ಮ ತೀರಿಸಿ ತಿಲಾಂಜಲಿ ಕೊಟ್ಟನು. ಎಲ್ಲವನ್ನೂ ಬಿಡಲು ಬಂದೀತು, ಆದರೆ ಈ ಧರ್ಮದ ಕಟ್ಟಳೆಗಳನ್ನು ಮೀರುವುದು ಸಾಧ್ಯವೆ? ಧಾರ್ಮಿಕ ವಿಧಿ-ವಿಧಾನಗಳನ್ನಷ್ಟು ತೀರಿಸಿದ ಮೇಲೆ, ಉಳಿದ ನಾಲ್ಕು ಕಾಸುಗಳಿಂದ ಅಂತೂ ಇಂತೂ ನಾಲ್ಕುದಿನ ಹೊಟ್ಟೆಗಿಷ್ಟು ಹಿಟ್ಟೂ ನೀರೂ ಆಯಿತು.

ಮುಂದೆ ಮನೆತನ ಸಾಗಿಸಲು ಕಿಟ್ಟು ಕೆಲಸ ಹುಡುಕಬೇಕಾಯಿತು. ಎಲ್ಲ ಕಡೆಗೂ ಕೆಲಸಕ್ಕೆ ಅರ್ಜಿ ಹಾಕಿದ. ಇಂದಿನ ಈ ನಿರುದ್ಯೋಗ-ಯುಗದಲ್ಲಿ ಕೇವಲ ಅರ್ಜಿಯಿಂದಲೆ ಕೆಲಸ ಬೇಗನೆ ಹೇಗೆ ಸಿಕ್ಕಬೇಕು? ಕೆಲಸ ಸಿಕ್ಕುವನರೆಗೆ ಎಲ್ಲಿಯಾದರೂ ಅಂಗಡಿಯಲ್ಲಿ ಲೆಕ್ಕ ಬರೆದು, ಬಂದದ್ದರಲ್ಲಿಯೆ ಸಂಸಾರ ಸಾಗಿಸಬೇಕೆಂದು, ಲೆಕ್ಕ ಬರೆಯುವ ಕೆಲಸ ಹಿಡಿಯಲು ಅಂಗಡಿಗೆ ಹೋದ. ಅಂಗಡಿಕಾರನು 'ಹೊಟ್ಟೆಗೆ ಕಾಳು-ಕಡಿಗಳನ್ನು ಒಯ್ಯುವಂತಿದ್ದರೆ ನಾಳೆಯಿಂದ ಬರೆಯಲಿಕ್ಕೆ ಬರುತ್ತಿರು, ಇಲ್ಲದಿದ್ದರೆ ಜೋಡ! ಈಗೇನು ಬರೆಯುವವರಿಗೆ ಕಡಿಮೆ? ದಿನಾ ಕೊಳಿವಿ ಆಕ್ಕಿಕೊಟ್ಟರೆ, ಬಂದು ಬರೆದು ಹೋಗ್ತಾನ, ಆ ಪೇನ್ಯನರ್ ಮಾಸ್ತರು!' ಎಂದು ಹೇಳಿಬಿಟ್ಟನು. 'ಇರಲಿ, ಇದಕ್ಕೂ ಹೆಚ್ಚು ಎಲ್ಲಿ ಸಿಗತಕದ? ಒಂದು ವೇಳೆ ಎರಡನೆಯ ಕಡೆಗೆ ಸಿಕ್ಕರೂ ಇದನ್ನೇನು ನಾನು ಕಾಯಂ ಮಾಡಜೀಕಿಲ್ಲ. ನಾಲ್ಕುದಿನ ಕೆಲಸ ಸಿಕ್ಕುವನರೆಗೆ ಮಾತ್ರ ಮಾಡುವುದು!' ಎಂದು ಹೆಚ್ಚಿಗೆ ವಿಚಾರಿಸದೆ ಕಿಟ್ಟುವೂ ಅದಕ್ಕೆ ಒಪ್ಪಿದ. ಅಂದಿನಿಂದ ಕಿಟ್ಟುವಿಗೆ ನಾಲ್ಕಾರು ಅಂಗಡಿಗಳಲ್ಲಿ ಲೆಕ್ಕ ಬರೆಯಲು ಕೆಲಸ ಸಿಕ್ಕಿತು; ಅದರಿಂದ ಅರೆಹೊಟ್ಟೆಯ ಜೀವನವು ಸಾಗಲಾರಂಭಿಸಿತು.

* * *

ಸರಕಾರಿ ಕೆಲಸ ಸಿಕ್ಕುವವರೆಗೆ ಅಂಗಡಿಯ ಲೆಕ್ಕ ಬರೆಯಬೇಕೆಂದು ಕಿಟ್ಟು ನಿಶ್ಚಯಿಸಿ, ಬರೆಯುವುದನ್ನು ಹಿಡಿದ. ಆದರೆ ಇನ್ನೂ ಬೇರೆ ಕಡೆಗೆ ಕೆಲಸ ಸಿಕ್ಕಲಿಲ್ಲ. ಸಿಕ್ಕುವ ಸಂಬಳ-ಅಲ್ಲ ಕಾಳು-ಕಡಿ ಹೆಚ್ಚಾಗಲಿಲ್ಲ. ಸಂಬಳ ಹೆಚ್ಚಾಗದಿದ್ದರೂ ಸಂಸಾರ ದಿನ-ದಿನಕ್ಕೆ ಜೊಟ್ಟದಾಗುತ್ತಿದ್ದಿತು. ಬಡತನಕ್ಕೆ ಸಂತತಿ ಬೇಡ-ಬೇಡವೆಂದರೂ ಬಿಡುವುದಿಲ್ಲವಂತೆ. ಶಾಂತೆ ಈಗ ಎರಡು ಮಕ್ಕಳ ತಾಯಿ ; ಮೇಲೆ ಮತ್ತೊಂದು ಬಸಿರು ಬೇರೆ. ತಾಯಿ ಈಗೊಂದು ವರ್ಷದಿಂದಲೂ ಕ್ಷಯದಿಂದ ಹಾಸಿಗೆ ಹಿಡಿದಿರುವಳು. ಅಕ್ಕ ಸ್ವಲ್ಪ ವಿಶಾಲ ಮನಸ್ಸಿನವಳು; ಅದರಲ್ಲೂ ಸುಧಾರಕ ಕಿಟ್ಟುವಿನ ಸಹವಾಸ ಬೇರೆ. ತಾಯಿ ಕಟ್ಟಾ ಸನಾತನಿಯಾದರೂ, ಮಗಳು ನರ್ಸ್ ಕೆಲಸ ಮಾಡುವೆನೆನ್ನಲು ಅನಿವಾರ್ಯವಾಗಿ ಒಪ್ಪಿಗೆ ಕೊಡಬೇಕಾಯಿತು. ಆದರಿಂದ ಅಕ್ಕನ ಹೊರೆಯೊಂದು ಕಿಟ್ಟುವಿಗೆ ಕಡಿಮೆಯಾಗಿತ್ತು. ಇಷ್ಟೇ ಅಲ್ಲ, ಅವಳೇ ತನ್ನ ಹೊಟ್ಟೆ-ಬಟ್ಟೆ ಸಾಗಿಸಿಕೊಂಡು ತಿಂಗಳೊಂದಕ್ಕೆ ಕಿಟ್ಟುವಿಗೆ ನಾಲ್ಕು ರೂಪಾಯಿ ಕಳುಹುತ್ತಿದ್ದಳು. ಆದರೂ ಕಿಟ್ಟುವಿನ ಸಂಸಾರವು ಸುಖಮಯವಾಗಿ-ಜೇಡ-ಸುಸೂತ್ರವಾಗಿ ಸಾಗುವಂತೆಯೂ ಆಗಲಿಲ್ಲ.

*

ಕಿಟ್ಟು ಒಂದು ಅಂಗಡಿಯ ಲೆಕ್ಕ ಬರೆದು ಮತ್ತೊಂದು ಅಂಗಡಿಗೆ ಹೋಗಲೆಂದು ಹೊರಟ. ಹೊರಗೆ ಜಿಟಿಜಿಟಿ ಮಳೆ. ಆಕಾಶವು ತಿಳಿಯಾದ ಕಪ್ಪು ಮೋಡಗಳಿಂದ ಮುಚ್ಚಿದ್ದಿತು. ದಾರಿಯಲ್ಲಿ ಒಬ್ಬಿಬ್ಬರು ಕೊಡೆ ಹಿಡಿದು ಹೊರಟಿದ್ದರು. ಮಳೆ ಬೇಗ ನಿಲ್ಲುವ ಲಕ್ಷಣ ತೋರುತ್ತಿರಲಿಲ್ಲ. ಕಿಟ್ಟು ತಲೆಯ ಮೇಲಿನ ಟೊಪ್ಪಿಗೆ ತೆಗೆದು ಬಗಲಲ್ಲಿ ಹಿಡಿದು, ಸ್ವಲ್ಪ ಬೇಗ ನಡೆದ. ಈಗ ಅವನು ಹೋಗಬೇಕಾದದ್ದು ಜವಳಿಯ ಅಂಗಡಿಗೆ. ಅದು ಸ್ವಲ್ಪ ದೂರವಿತ್ತು. ಅಲ್ಲಿ ಹೋಗುವುದರೊಳಗೆ ಟೊಪ್ಪಿಗೆ ತೊಯ್ಯುವುದು; ತಲೆತೊಯ್ದರೂ ಬರಸಲಿಕ್ಕೆ ಬಂದೀತೆಂದು ಕಿಟ್ಟುವಿನ ವಿಚಾರ. ಕೊಡೆಹಿಡಿದುಕೊಂಡು ಹೊರಟ ದಾರಿಕಾರನಿಗೆ ಇದೊಂದು ಮೋಜೆನಿಸಿತೇನೊ ; ಅವನ ಮುಖದಲ್ಲಿ ಕಿರುನಗೆಯೊಂದು ಮಿಂಚಿತು.

ಹೋಗು-ಹೋಗುತ್ತ ಕಿಟ್ಟುವಿಗೆ ಹಿಂದಿನ ದಿನಗಳೆಲ್ಲ ನೆನಪಾಗ ತೊಡಗಿದುವು. ನಾಲ್ಕೈದು ವರ್ಷಗಳ ಹಿಂದೆ ತಾನು ಕಾಲೇಜಿನಲ್ಲಿದ್ದುದು: 'ಆಗ ತನ್ನ ಇಂಗ್ಲೀಷ್ ಎಷ್ಟು ಒಳ್ಳೆಯದಿತ್ತು. ಪ್ರಿನ್ಸಿಪಾಲ್‌ರೂ ಮೆಚ್ಚಿ ಹೊಗಳಿದ್ದರು. ಕನ್ನಡವೂ ಅದರಂತೆಯೆ. ನಾನು ಇಂಟರ್‌ನಲ್ಲಿದ್ದಾಗ ನನ್ನ ವಿಷಯ ಕನ್ನಡವಲ್ಲವಾದರೂ ಕಾಲೇಜ್ ಮಿಸೆಲೆನಿಗೆ ಒಂದು ಕವನವನ್ನು ಬರೆದು ಕೊಟ್ಟಿದ್ದೆ. ಎಷ್ಟು ಒಳ್ಳೆಯದಾಗಿತ್ತದು! ಒಂದೆರಡು ಅಭಿನಂದನ ಪರಪಾಡ ಪತ್ರಗಳು ಕೂಡ ಬಂದಿದ್ದುವು. ಆದರೆ.... ಆ ವಿದ್ಯೆ, ಆ ಕನ್ನಡ, ಇಂದು ಬಾಳುವೆಗೆ ಏನೂ ಉಪಯೋಗ ಬೀಳದಾದುವಲ್ಲ! ಹಾಸಿಗೆ ಹಿಡಿದ ತಾಯಿಗೆ ಬೆಚ್ಚಗೆ ಹೊಚ್ಚಲು ಒಂದು ಶಾಲನ್ನು ಸಂಪಾದಿಸಲೂ ಸಹಾಯವಾಗಲಾರವಲ್ಲ!....'ಹೀಗೆ ಏನೇನನೋ ವಿಚಾರಿಸುತ್ತಿರುವಾಗಲೆ, ಮನಸ್ಸು ಉದ್ವಿಗ್ನತೆಯಿಂದ ಯಾವುದೊ ಒಂದು ನಿಶ್ಚಯಕ್ಕೆ ಬಂದು ನಿಂತಂತಾಯಿತು. ಮುಖವೂ ಪ್ರಸನ್ನವಾಯಿತು. ತಲೆಗೆ ಟೊಪ್ಪಿಗೆಯನ್ನು ಹಾಕಿಕೊಂಡು ಅಂಗಡಿಯಲ್ಲಿ ಕಾಲಿಟ್ಟನು.

'ಕಿಟ್ಟಪ್ಪಾ, ಬರಲಿಕ್ಕೆ ತಡವಾಯಿತಿಂದು?' ಶೇಡಜಿಯವರು ಕೇಳಿದರು. 'ಮನೆಯಲ್ಲಿ, ಅಮ್ಮನ ಪೈಯಲ್ಲಿ ನೆಟ್ಟಗಿಲ್ಲ;

ಸ್ವಲ್ಪ ನಿಲ್ಲಬೇಕಾಯಿತು' ಎಂದು ಹೇಳಿ ತಿರುಗಿ ಶೇಡಜಿಯವರು 'ಏನಾಗಿದೆ?' ಎಂದು ಕೇಳುವುದಕ್ಕಿಂತ ಮುಂಚಿತವಾಗಿಯೆ ತಾನು ಬರೆಯುವ ಸ್ಥಳಕ್ಕೆ ಹೋಗಿ ಕುಳಿತುಬಿಟ್ಟ. 'ಬೇಗನೆ ಕೆಲಸ ತೀರಿಸಿಕೊಂಡು ಹೋಗಬೇಕೆಂದಿದ್ದಾನೇನೊ!' ಎಂದುಕೊಂಡು ಶೇಡಜಿಯವರೂ ಅಷ್ಟಕ್ಕೇ ಸುಮ್ಮನಾದರು.

ಕಿಟ್ಟು ಬರೆಯಲು ಕುಳಿತುಕೊಳ್ಳುವ ಸ್ಥಳವು ಶಾಂತವಾದುದು. ಅಲ್ಲಿ ಗಿರಾಕಿಗಳ ಗಲಾಟೆಯಿಲ್ಲ. ಸುತ್ತೆಲ್ಲ ಜವುಳಿಯ ನಗಗಳಿದ್ದರೂ, ಅದಾವಾಗಲೊ ಒಮ್ಮೊಮ್ಮೆ ಒಬ್ಬ ಆಳು ಬಂದು ಬೇಕಾದುದನ್ನಷ್ಟು ಎತ್ತಿ ಒಯ್ಯುವನಿಷ್ಟೆ!

ಕಿಟ್ಟು ಬರೆಯಲು ಕುಳಿತ; ಕೀರ್ದಿಯನ್ನು ಕೈಯಲ್ಲಿ ತಕ್ಕೊಂಡ. ಮನಸಿಯಲ್ಲಿ ಲೆಕ್ಕಣಿಕೆ ಅದ್ದಿದ. ಬರೆಯಲು ಕೈಸಾಗಲಿಲ್ಲ. ಹಾಗೆಯೆ ಕುಳಿತ. ಮನಸ್ಸು ವಿಚಾರಮಾಲಿಕೆಯನ್ನು ಮುಡಿಯುತ್ತ ಮುಂದೆ ಸಾಗತೊಡಗಿತು; ಲೆಕ್ಕಣಿಕೆಯ ಮಸಿ ಆರಿತು. ಮತ್ತೆ ಅದ್ದಿದ, ಬರೆಯಲೆಂದು. ಮತ್ತೂ ಬರೆಯುಲಾಗಲಿಲ್ಲ. ಕೀರ್ದಿಯನ್ನು ಬದಿಗೆ ಇಟ್ಟ, ಲೆಕ್ಕಣಿಕೆಯನ್ನು ಒಗೆದ, ಸುತ್ತಲೂ ನೋಡಿದ. ಚಿಟ್ಟನೆ ಎದ್ದು ನಿಂತ. 'ಏನೇ ಆಗಲಿ, ಹಾಗೆ ಮಾಡದೆ ಗತಿಯೇ ಇಲ್ಲ; ಈಗಲೇ ನೋಡಿ ಇಡಬೇಕು' ಎಂದು ತನ್ನಲ್ಲಿ ತಾನೇ ಅಸ್ಪುಟವಾಗಿ ಗುಣುಗುಟ್ಟಿದ. ಜವುಳಿಯ ಕಪಾಟುಗಳನ್ನೆಲ್ಲ ಕಿತ್ತುಹಾಕತೊಡಗಿದ. ರಗ್ಗುಗಳನ್ನೆಲ್ಲ ಒಂದೊಂದಾಗಿ ಇಳುಹಲಾರಂಭಿಸಿದ. 'ಇದು ಒಳ್ಳೆಯದಿದೆ! ಮಳೆಗಾಲದಲ್ಲಿ ಹೊದೆಯಲಿಕ್ಕೆ; ಆದರೆ ಇದರ 'ಕಲರ್' ಒಳ್ಳೆಯದಿಲ್ಲ. ಇಂತಹವೆ ಮತ್ತೊಂದನ್ನು ನೋಡಬೇಕು!' ಎಂದು ಕಪಾಟಿನತ್ತ ದೃಷ್ಟಿಯನ್ನು ಬೀರಿದ. ಕೂಡಲೆ 'ನಾನೇನು ಹಣಕೊಟ್ಟು ಕೊಳ್ಳಬೇಕಾಗಿದೆಯೇ? ಇಷ್ಟೇಕೆ ಚಿಕಿಷ್ಸೆ?' ಎಂದುಕೊಂಡನೇನೊ! ಮುಖದಲ್ಲಿ ಹುಚ್ಚುನಗೆಯೊಂದು ಚರಳಿತು. 'ಯಾವುದೇ ಇರಲಿ, ಕೈಗೆ ಬಂದದ್ದು ಕೈಲಾಸ!' ಎಂದುಕೊಂಡು 'ಅದನ್ನೇ ಮೇಲೆ ತೆಗೆದು ಇಟ್ಟು, ಬರೆಯುವ ಸ್ಥಳಕ್ಕೆ ಬಂದು ಕುಳಿತ.

ಬುದ್ಧಿ ಬಲವಿದ್ದವನು ತಪ್ಪು ಮಾಡಲು ಮನಸ್ಸುಮಾಡಿದರೂ, ದಾರಿತಪ್ಪಲು ಸುಲಭಸಾಧ್ಯವಾಗುವುದಿಲ್ಲ. ಕಿಟ್ಟು ವಿಚಾರಿಸತೊಡಗಿದ. 'ಇದೇನು ನನ್ನ ವಿಚಾರ? ನಾನಿಷ್ಟು ಕಲಿತವನು, ತಿಳಿದವನು....! ತುಡುಗು ಮಾಡಲು ಯೋಚಿಸಿದೆನೇ? ಈ ಮರ್ಕಟಮನಸ್ಸು, ಕ್ಷಣದಲ್ಲಿ ಬೇಕಾದುದನ್ನು ಮಾಡಲೂ ಮುಂದೂಡುವುದಲ್ಲ....! ನಾನು ಕಳ್ಳನೆನಿಸಿಕೊಳ್ಳಲೇ?..., ಕಳವು! ಕಳವು!....ಕೆಟ್ಟ ಕೆಲಸ! ಮಹಾ ಪಾಪ! ಇಂತಹ ಕೀಳು ಕೆಲಸ ನನ್ನಿಂದಾಗದು! ಸುಧಾರಿಸಿದವನಾದ ನನ್ನ ಮನಸ್ಸೇ ಹೀಗೆಂದ ಮೇಲೆ, ಅಶಿಕ್ಷಿತ ಜನರ ಮನಸ್ಸಿನ ಪಂತವೆಲ್ಲಿ? ಅಂತೆಯೆ ಸಮಾಜದಲ್ಲಿ ಇಷ್ಟು ಕಳವು! ಕೊಲೆಗಳು! ನಾನೂ ಅಂತಹ ಕಳ್ಳರಲ್ಲೊಬ್ಬನಾಗಲೇ?.... ಆಗಲಾರೆ! ಎಂದೂ ಇಗಲಾರೆ!....ಮಾಲಕನನ್ನು ಕೇಳಲೆ? ಕೇಳಿದರೆ ಕೊಟ್ಟಾರೆ?.... ಇಲ್ಲ ಇಲ್ಲ; ಕೇಳಿದರೆ ಕೊಡುವುದಿಲ್ಲ! ಖಂಡಿತ ಕೊಡುವುದಿಲ್ಲ!.... ಕೇಳಿದರೆ ಕೊಡುವುದಿಲ್ಲ; ಕೊಳ್ಳಲು ಕೈಯಲ್ಲಿ ಕಾಸಿಲ್ಲ! ಕದಿಯುವುದು ಕೆಡುಕು! ಆದರೆ....ಮನೆಯಲ್ಲಿ ತಾಯಿ 'ಜಳ! ಜಳ!' ಎಂದು ನಡುಗುತ್ತಿರುವಳಲ್ಲ! ಏನು ಆರ್ತಸ್ವರವದು!....ಅದನ್ನು ಮತ್ತೆ ಮತ್ತೆ ನನ್ನಿಂದ ಕೇಳುವುದಕ್ಕಾಗುವುದಿಲ್ಲ! ಕೇಳಲಾರೆ!' ಕಿಟ್ಟುವಿನ ಮೈನಡುಗಿತು. ಕಣ್ಣುಗುಡ್ಡೆಯಲ್ಲಿ ನೀರೊನರಿತು. ಮನೆಯಿಂದ ಹೊರಬೀಳುವಾಗ ಹೊತ್ತುಕೊಳ್ಳಲು ಕೇಳಿದ ಅಮ್ಮನ ಮಾತುಗಳು ಒಂದೆಸವನೆ ಕಿವಿಯಲ್ಲಿ ಸುತ್ತತೊಡಗಿದುವು. 'ಬೇಕು; ಅಮ್ಮನಿಗೆ ಬೆಚ್ಚಗೆ ಹೊದ್ದಿಸಲು ಬೇಕು! ಅದನ್ನು ತಂದುಕೊಡುವುದು ಆಳೆಯ ಮಗನಾದ ನನ್ನ ಕರ್ತವ್ಯ, ಆದರೆ....ಅದನ್ನು ಸಂಪಾದಿಸಿಕೊಡುವಷ್ಟು ನನ್ನಲ್ಲಿ ಸಾಮರ್ಥ್ಯವಿಲ್ಲ, ಅನುಕೂಲತೆಯಿಲ್ಲ! ಅದಕ್ಕೆ ಉಳಿದುದೊಂದೇ ಉಪಾಯ....!'

ಅದೇ ದಿನದ ಸಂಜೆಗೆ ಕಿಟ್ಟುವಿನ ನೂತನಪ್ರೇಮವು ಅತನ ವಿವೇಕವನ್ನು ಗೆದ್ದಿತು.

ಈಗ ಕಿಟ್ಟು ಪೋಲೀಸ ಸ್ಟೇಶನಿನ ಒಂದು ಮೂಲೆಯಲ್ಲಿ. ಮೋರೆ ಒಣಗಿದೆ. ಕಣ್ಣು ಕೆಂಪಗಾಗಿವೆ. ಕಣ್ಣೀರು ಹರಿದು ಹರಿದು ಗಲ್ಲಗಳು ಹಸಿಯಾಗಿವೆ; ಧೂಳುಕೂತು ಹೊಲಸಾಗಿವೆ. ಮೈಯಲ್ಲಿಯ ಶರಟಿಗೆಲ್ಲ ಕೆಸರುಪತ್ತಿದೆ. ತಲೆಯು ಮೇಲೆ ಟೊಪ್ಪಿಗೆಯಿಲ್ಲ. ಮನದಲ್ಲಿ, 'ನಾನೇಕೆ ಹಾಗೆ ಮಾಡಿದೆ? ಯಾವ ಕೆಟ್ಟ ಕಾಲವೂ ಳ ಕಳವಿಗೆ ಜೈತನ್ಯಕೊಟ್ಟಿತೊ! ನಿನ್ನೆಯ ಸಂಜೆ— ಬೇಡ, ಪುರಳಿ ನೆನೆಯುವುದೇ ಬೇಡ— ಎಂತಹ ಭೀಕರ ಒದೆತಗಳವು! ಅದೂ ದಾರಿಯಲ್ಲಿ! ಅಂಗಡಿಯವರೆಲ್ಲ ನೋಡುತ್ತಿದ್ದರು; ಪುಡುಗರು ನಗುತ್ತಿದ್ದರು; ಕಳ್ಳ! ಕಳ್ಳ! ಎಂದು ಕೂಗಿಕೊಳ್ಳುತ್ತಿದ್ದರು; ಜನರೇನೇನೊ ಆಡಿಕೊಳ್ಳುತ್ತಿದ್ದರು! ನೆಲಕ್ಕೆ ಮುಗ್ಗರಿಸಿಬಿದ್ದರೂ ಹಾಗೆಯೆ ಎಳೆದರಲ್ಲ! ಒದೆದರಲ್ಲ! ಏನು ನಿಷ್ಕರುಣಿಗಳು! ದಾರಿಯಲ್ಲಿಯ ಒಂದೊಂದು ಮಾತಿನ ಪೆಟ್ಟಿನ ನೋವಿಗೆ ಇಲ್ಲಿ ಹೊಡೆದ ನೂರು ನೂರು ಹೊಡೆತಗಳ ನೋವೂ ಸರಿಯೆನಿಸದು. ಎಂತಹ ಅಪಮಾನಕರವಾದ ಸಂಗತಿಯದು! ಜನರಲ್ಲಿ ನಾಳೆ ಹೇಗೆ ಮೋರೆತೋರಿಸಲಿ?.... ಮೋರೆ ತೋರಿಸುವುದು ....ಇಲ್ಲಿಂದ ಬಿಟ್ಟರಲ್ಲವೆ? ನಿನ್ನೆಯ ಸಂಜೆ ಶಾಂತಿ ಎಷ್ಟುಹೊತ್ತು ದಾರಿಕಾಯ್ದುಕೊ! ತಾಯಿ ಹಾಸಿಗೆ ಏಡಿದವಳು; ಶಾಂತಿಗೆಂತೂ ಕೊಸು ಕೈಯಿಡುವುದಿಲ್ಲ— ಎಂದ ಮೇಲೆ ಹೊರಗೆ ಬಂದು. ನಾನೆಲ್ಲ— ಎಂಬುದನ್ನು ಕೇಳುವವರಾದರೂ ಯಾರು? ಯಾರನ್ನು? ಒಂದು ವೇಳೆ ಕಂಡವರು ಯಾರಾದರೂ ವೇಳೆವ ವೆ ಏಷ್ಟು ನೊಂದುಕೊಂಡರೊ! ಮೊದಲೇ ನಾನು ಬರುವಾಗ, ನನ್ನ ಅಸಹಾಯ ಸ್ಥಿತಿಯನ್ನು

ಕಂಡು ಮರುಗುತ್ತಿದ್ದಳು ತಾಯಿ! ಈ ಸಂಗತಿಯನ್ನು ಕೇಳಿದ್ದರಂತೂ.... ....' ಎಂದು ಏನೇನನ್ನೊ ವಿಚಾರಿಸುತ್ತಿರುವಾಗಲೆ—

'ಪರಾಮಬೋರ್! ಮತ್ತೇನು ಕದ್ದಾನೊ! ಒಂದೂ ಹೇಳುವುದಿಲ್ಲ, ಲಾಕಪ್ಪಿಗೆ ಒಯ್ದು ಬಿಡಿರಿ! ಹೋಗಲಿ, ಹಾಳಾಗಿ!' ಎಂದು ಪತ್ತಿರನಿಂತ ಪೋಲೀಸನಿಗೆ ಹವಾಲದಾರನು ಹೇಳಿದನು.

ಕಿಟ್ಟು ತಡವರಿಸುತ್ತ 'ಇಲ್ಲ! ನಾನೆಂದೂ ಕಳವು ಮಾಡಿಲ್ಲ! ಮನೆಯಲ್ಲಿ ನಮ್ಮ ತಾಯಿ ಬೇನೆಯಿಂದ ಮಲಗಿದ್ದಾಳೆ. 'ಜಳಿ! ಜಳಿ!' ಎಂದಳು. ಬೇರೆಯೇನೂ ಉಪಾಯಗಾಣದೆ ಹೀಗೆ ಮಾಡಿದೆ. ನಾನೆಂದೂ ಇಂತಹ ಕೆಲಸ ಮಾಡಿದವನಲ್ಲ. ಇದನ್ನು ಮಾಡಿದ್ದಕ್ಕೇ ತುಂಬಾ ಪಶ್ಚಾತ್ತಾಪಪಡುತ್ತಿದ್ದೇನೆ. ನಾನು ಹುಂಬನೆಂದು ತಿಳಿಯಬೇಡಿರಿ. ಕಲಿತವನಿದ್ದೇನೆ! ನನಗೂ ಬುದ್ಧಿ ಇದೆ. ಒಮ್ಮೆ ಕಾಲುಜಾರಿದ ಮೇಲೆ ಮತ್ತೆ ಮತ್ತೆ ಹಾಗೆಯೆ ಆಗುತ್ತದೆಯೆಂದೇನೂ ಅಲ್ಲ!' ಎಂದ.

'ಮುಚ್ಚು ಬಾಯಿ ಸೂ .... ಮಗನೆ! ಕಲಿತವನಂತೆ! ತಿಳಿದವ! ತಿಳಿದವರು ಹೀಂಗ ಮಾಡತಾರಽ? ಮತ್ತೆ ನಮ್ಮ ಮುಂದ ಹಾಂಗಽ ಹೀಂಗಽ ಅಂತ ಹೇಳತಾನ! ದೊಡ್ಡ ದೊಡ್ಡ ಮಾತು ಹೇಳವನಿಗೆ ಕಳವು ಮಾಡಲಿಕ್ಕೇನಾಗಿತ್ತು?'

'ರಾವ್‌ಸಾಹೇಬರೆ, ನಾ ಹೇಳುವುದನ್ನಾದರೂ ಕೇಳಿಕೊಳ್ಳಿರಿ; ವಿಚಾರಮಾಡಿರಿ! ಆ ಮೇಲೆ ಬೇಕಾದುದನ್ನು ಹೇಳಿರಿ! ಏನೆಂದರೂ ಮನುಷ್ಯನ ಕರ್ತವ್ಯಾಕರ್ತವ್ಯಗಳಿಗೆ ಅವನಷ್ಟೇ ಅಲ್ಲದೆ, ಅವನ ಸುತ್ತಲಿನ ಪರಿಸ್ಥಿತಿಯೂ ಹೇಗೆ ಕಾರಣವಾಗಿರುತ್ತದೆಯೆಂಬುದನ್ನೂ ವಿಚಾರಮಾಡಿರಿ! ನನ್ನ ಸ್ಥಿತಿಯಲ್ಲಿ ಇದ್ದರೆ ನೀವೂ ಇದೇ ಕಳವು ....'

'ಬಾಯಿಮುಚ್ಚು! ಏನು ಬೊಗಳತಿದ್ದಿಯಾ? ಎಲ್ಲಿ ಇದ್ದೀದಿ ನೆನಪದನಽ ನಿನಗ?' ಎಂದು ಎದ್ದೇ ಬಂದ, ಹವಾಲದಾರ.

ಧಪ್ .... ಧಪ್ .... ಧಪ್ .... ಧಪ್ ....

"ಅಯ್ಯೋ .... ಸತ್ತೆ .... ಸತ್ತೆ! .... ಸತ್ತೆ ...."

೫

ಕಿಟ್ಟುವಿನ ವಿದ್ಯೆ, ಅಭ್ಯಾಸ, ಕಾರ್ಯಕುಶಲತೆಗಳೆಲ್ಲಾವ್ರದೂ ಆತನ ಆರ್ಥಿಕಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗಲಿಲ್ಲ!

ಕಿಟ್ಟು ಜೇಲಿನಲ್ಲಿ ನರಳುವಾಗ— ತಾಯಿ ಮನೆಯಲ್ಲಿ 'ಜಳಿ! ಜಳಿ!' ಎಂದು ನಡುಗಿ ಜೀವಬಿಡುತ್ತಿರುವಾಗ—ಶಾಂತೆ 'ನಿನ್ನೆಯಿಂದಲೂ ಗಂಡ ಮನೆಗೆ ಯಾಕೆ ಬರಲಿಲ್ಲ' ಎಂದು ಚಿಂತಿಸುತ್ತಿರುವಾಗ 'ಒಳ್ಳೇದಾಯ್ತು ನನಿಗೆ! ಎಷ್ಟುಸಾರೆ ಹೀಂಗ ಕಳವು ಮಾಡಿದ್ದನೊ! ಕಲಿತವನಂತೆ! ಕಲಿತ ಕಳ್ಳನಲ್ಲವೆ?' ಎಂದು ಜನರು ಆಡಿಕೊಳ್ಳುತ್ತಿದ್ದರು.

ಕಲ್ಲಪ್ಪ ಮತ್ತು ಮಲ್ಲಪ್ಪ

(ಕಿರುಗತೆ)

ಶ್ರೀ. ಬಿ. ಜಿ. 'ಸ್ಪೂನೊ'

ಕಲ್ಲಪ್ಪ ಮತ್ತು ಮಲ್ಲಪ್ಪರು ಮೇಲಿಂದ ಮೇಲೆ ತಮ್ಮ ಪರಾಕ್ರಮವನ್ನು ಪರಸ್ಪರರಿಗೆ ತೋರಿಸುತ್ತಿದ್ದರು.

ಕಲ್ಲಪ್ಪನು ಒಮ್ಮೊಮ್ಮೆ ಮಲ್ಲಪ್ಪನ ಎಮ್ಮೆಕರುವನ್ನು ಅವನ ಎದುರಿನಲ್ಲಿಯೆ ತುಡುಗುಮಾಡಿಕೊಂಡು ಬರುತ್ತಿದ್ದನು. ಮಲ್ಲಪ್ಪನು, ಕಲ್ಲಪ್ಪನು ಹೊಲದಲ್ಲಿ ಇರುವಾಗಲೆ, ಅವನ ಕಬ್ಬುಗಳನ್ನು ಮುರಿದು, ಕಡಲೆಯನ್ನು ಕಿತ್ತುತ್ತಿದ್ದನು. ಕಲ್ಲಪ್ಪನು, ಮಲ್ಲಪ್ಪನ ಜಣವೆಗೆ ಬೆಂಕಿಹಚ್ಚಲು ಹೋದಾಗ, ಮಲ್ಲಪ್ಪನು ಅವನ ಮನೆಯನ್ನು ಸುಡಲು ಪ್ರಯತ್ನಿಸುತ್ತಿದ್ದನು.

ಊರಲ್ಲಿಯ ಜನರು ಒಮ್ಮೆ 'ಕಲ್ಲಪ್ಪನೇ ಬಂಟ, ಅವನ ಹೆಸರನ್ನು ಯಾರೂ ತೆಗೆಯಲು ಶಕ್ಯವಿಲ್ಲ!' ಎಂದೆನ್ನುತ್ತಿದ್ದರು. ಒಮ್ಮೊಮ್ಮೆ 'ಮಲ್ಲಪ್ಪನೇ ನಿಜವಾದ ವೀರ; ಅವನನ್ನು ಸಿಟ್ಟಿಗೆ ಎಬ್ಬಿಸಬಾರದು—ಊರಲ್ಲಿ ಇರಬೇಕಾದರೆ!' ಎನ್ನುತ್ತಿದ್ದರು.

ಆದರೆ ಶ್ಯಾನುಭೋಗ ರಾಮರಾಯರಿಗೆ 'ಇಬ್ಬರೂ ಜಗಳಾಡುತ್ತಾರೆ,' ಎಂದು ಇಷ್ಟೆ ಎನಿಸುತ್ತಿತ್ತು.

* * *

ಇತಿಹಾಸದ ಹಾಳೆಗಳನ್ನು ತಿರುವಿ ಹಾಕುತ್ತ ನಾವು ಎನ್ನಬಹುದು: 'ಆ ದೇಶದವರು ಶೂರರು; ನೋಡಿರಿ ಹ್ಯಾಗೆ ಹೊಡೆದೊಗೆದರು ಆ ಇವರನ್ನು. ಈ ದೇಶದವರು ವೀರರು, ಕೇಳಿಲ್ಲವೇ ನೀವು ಇವರಕಥೆಯನ್ನು.....

ಆದರೆ ದೇವರಿಗೆ ಮಾತ್ರ 'ಆ ಈ ದೇಶಗಳು ಜಗಳಾಡುತ್ತವೆ' ಇಷ್ಟೆ ಎನಿಸೀತು.

ವೇದ ಮತ್ತು ಉಪನಿಷತ್ತು

(ಉಪನ್ಯಾಸ)*

ಪ್ರೊ. ಆರ್. ವಿ. ಜಾಗಿರದಾರ, ಎಂ. ಎ. (ಲಂಡನ್)

★

ವೇದವೆಂದರೇನು? ಉಪನಿಷತ್ತೆಂದರೆ ಏನು? ಯಾವ ಯಾವ ವೇದದಲ್ಲಿ ಏನೇನು ವಿಷಯಗಳಿವೆ?.... ಇತ್ಯಾದಿ ಪ್ರಶ್ನೆಗಳನ್ನೆಲ್ಲ ಐತಿಹಾಸಿಕದೃಷ್ಟಿಯಿಂದ ಇಲ್ಲಿ ವಿವೇಚಿಸಲಾಗಿದೆ.

★

ಗೆಳೆಯರೆ,

ಈದಿನ 'ನಮ್ಮ ಆದರ್ಶಸಾಹಿತ್ಯ—Our classics' ಎಂಬ ವಿಷಯವನ್ನು ಪ್ರಾರಂಭಿಸಬೇಕಾಗಿದೆ. '**ವೇದ**ಗಳು ಮತ್ತು **ಉಪನಿಷತ್ತು**ಗಳು ನಮ್ಮ ತೀರ ಪ್ರಾಚೀನವಾದ ಆದರ್ಶಗ್ರಂಥಗಳು' ಎಂದು ಹೇಳಿದರೆ, ಕನ್ನಡಿಗರಾದ ನಿಮಗೆ ಆಶ್ಚರ್ಯವೆನಿಸಬಹುದು. ಆ ಗ್ರಂಥಗಳ ಭಾಷೆ, ಸಂಸ್ಕೃತ; ಸಂಸ್ಕೃತಭಾಷೆಯನ್ನು ಕನ್ನಡ ಅಕ್ಷರಗಳಲ್ಲಿ ಬರೆದರೆ ಮೈಲಿಗೆಯೆಂದು ತಿಳಿಯುವ ಮಡಿವಂತ ಕನ್ನಡ ಗುರು-ಹಿರಿಯರು ಇಂದಿಗೂ ಇರುವಾಗ, ಅವು ನಮಗೆ—ಕನ್ನಡಕ್ಕೆ ಮೊದಲ ಆದರ್ಶಗ್ರಂಥ ಎನ್ನುವುದು ಹೇಗೆ? ಸರಿ, ಇದು ಮಡಿ-ಮೈಲಿಗೆಯ ಇಲ್ಲವೆ ಪಾಪ-ಪುಣ್ಯದ ಪ್ರವಚನವಾಗಿದ್ದರೆ, ನಾನು ಹೇಳುವುದು ಯೋಗ್ಯವೆನಿಸುತ್ತಿರಲಿಲ್ಲ; ಆದರೆ ಮನುಷ್ಯನನ್ನು ಮಾಡಿದ ಇತಿಹಾಸಕ್ಕಾಗಲಿ, ಜ್ಞಾನಕ್ಕಾಗಲಿ ಮಡಿ-ಮೈಲಿಗೆಯ ವಿಚಾರವಿಲ್ಲ. ಈಗ ನಾನು ಹೇಳುವುದು ಇತಿಹಾಸದ ದೃಷ್ಟಿಯಿಂದ, ಜ್ಞಾನದದೃಷ್ಟಿಯಿಂದ. **ವೇದ** ಇಲ್ಲವೆ **ಉಪನಿಷತ್ತು** ಈ ಹೆಸರನ್ನು ಕೇಳದ ಹಿಂದುವಿಲ್ಲ; ಈ ಗ್ರಂಥಗಳನ್ನು ಓದಿ ಮುಂದಾದವರಿಲ್ಲ. ಅದಕ್ಕಾಗಿ ಮೊದಲು ನಾನು ನಿಮಗೆ ಈ ಗ್ರಂಥಗಳ ಪರಿಚಯವನ್ನು ಮಾಡಿಕೊಡುವೆ.

'**ವೇದ**' ಎಂಬುದು ಒಂದು ಸಾಹಿತ್ಯಸಂಗ್ರಹ—ಒಂದು ಕಾವ್ಯಸಂಗ್ರಹ ಮುಂಚಿನದು; ಅದಕ್ಕೆ '**ಋಗ್ವೇದ**' ಎಂದು ಹೆಸರು. ಅದಕ್ಕೆ ಸಂಬಂಧಿಸಿದ ಬೇರೆ ಎರಡು ಸಂಗ್ರಹಗಳು, ಒಂದು '**ಸಾಮವೇದ**', ಇನ್ನೊಂದು '**ಯಜುರ್ವೇದ**'. ಕೊನೆಯದಾಗಿ '**ಅಥರ್ವಣವೇದ**' ಎಂಬ ನಾಲ್ಕನೆಯ ಸಂಗ್ರಹ. ಋಗ್ವೇದಕ್ಕೆ ನಾನು '**ಕಾವ್ಯ ಸಂಗ್ರಹ**' ಎಂದಿದ್ದೇನೆ. ಯಾಕೆಂದರೆ, ಜಗತ್ತಿನ ಇತಿಹಾಸದಲ್ಲಿ ಮನುಷ್ಯನು ಸೃಷ್ಟಿಗಾಗಿ ಮತ್ತು ಸೃಷ್ಟಿಯಲ್ಲಿ ಮೊದಲು ಹಾಡಿದುದೆಂದರೆ ಋಗ್ವೇದದಲ್ಲಿಯೆ. ನಮ್ಮ ಋಗ್ವೇದಕ್ಕಿಂತ ಪ್ರಾಚೀನವಾದ ಯಾವ ಕಾವ್ಯವೂ ಜಗತ್ತಿನಲ್ಲಿ ಸಿಕ್ಕುವುದಿಲ್ಲ. ಈ ಋಗ್ವೇದದಲ್ಲಿ ಅನೇಕ ನೂರು ವರ್ಷಗಳಲ್ಲಿ ಅನೇಕ ಕವಿಗಳು ಹಾಡಿದ ಹಾಡುಗಳ ಸಂಗ್ರಹವಿದೆಯೆಂದು ಬಲ್ಲವರು ಹೇಳುತ್ತಾರೆ. ಆಯಾ ಕವಿಗಳ ಮತ್ತು ಅವರ ಕಾಲದ ಜೀವನದ ಚಿತ್ರವೆ ಈ ವೇದದಲ್ಲಿ ಕಂಡು ಬರುವುದು ಸಹಜವಿದೆ.

ನನ್ನ ಮಾತಿಗಾಗಿ ನಿಮಗೆ ಅಪನಂಬುಗೆಯೆನಿಸಬಹುದೇನೊ—ಎಂದು ನನಗೇ ಹೆದರಿಕೆಯಾಗತೊಡಗಿದೆ. ಯಾಕೆಂದರೆ ಸಾಮಾನ್ಯವಾಗಿ ವೇದದ ವಿಷಯಕ್ಕೆ ಇಂತಹ ಮಾತನ್ನು ನಮಗೆ ಯಾರೂ ಹೇಳುವುದಿಲ್ಲ. 'ವೇದವೆಂದರೆ ಸಾಕ್ಷಾತ್ ನಮ್ಮ ಧರ್ಮದ ಆಗರ. ಅದನ್ನು ದೇವ ಬರೆದವ (ಕೆಲವರು ಯಾರೂ ಅದನ್ನು ಬರೆದಿಲ್ಲ, ಅದು ತಾನೇ ಹುಟ್ಟಿತು ಎನ್ನುವರು.) ಮನುಷ್ಯಬುದ್ಧಿಯಿಲ್ಲದೆ ಹುಟ್ಟುವಂತಿಲ್ಲ, ಸ್ನಾನವಿಲ್ಲದೆ ಸೊಲ್ಲುವಂತಿಲ್ಲ, ಗಂಡಾಂತರ ಪ್ರಸಂಗವೇನೋ ಎಂಬಂತೆ ಅದರ ಸಮೀಪದಿಂದ ಹೆಂಗುಸರನ್ನೂ ಹುಡುಗರನ್ನೂ ದೂರವಿರಿಸಬೇಕು, ಶೂದ್ರರ ಕಿವಿಗೆಅದು ಅಸ್ಪೃಶ್ಯ'—ಹೀಗೆಯೇ ಅನೇಕ ಮಾತುಗಳನ್ನು ನೀವು ಕೇಳಿರಬಹುದು. ಅದನ್ನು ನಾನು ಬಲ್ಲೆ, ಆದರೇನು? ಹಿಂದಿನ ಪಂಡಿತರು ಹಾಗೆ ಹೇಳಿದರೆ, ಇಂದಿನ ಪಂಡಿತರು ಮತ್ತೊಂದು ರೀತಿಯಲ್ಲಿ—ನಾನು ಮೇಲೆ ಸೂಚಿಸಿದ ರೀತಿಯಲ್ಲಿ—ಹೇಳುತ್ತಾರೆ. ನನಗೆ ಯಾವ ಪಕ್ಷವನ್ನೂ ಸಾಧಿಸಬೇಕಾಗಿಲ್ಲ. ಆದರೆ ವೇದ ಏನೇ ಇದ್ದರೂ ಅದು ಉತ್ತಮ ಕಾವ್ಯ ಎಂಬುದು ನಿಜ, ಅದಕಾಗಿ ನಾನು ಹೇಳುವುದು ತಪ್ಪಾಗದು. ಈ ವೇದದಲ್ಲಿ

---

* ತಾ. ೨೬-೧೧-೪೬ನೆಯ ದಿನ, ಮುಂಬಯಿ ಆಲ್ ಇಂಡಿಯಾ ರೇಡಿಯೋ ಕಾರ್ಯಾಲಯದಿಂದ, ವಿದ್ಯಾರ್ಥಿಗಳಿಗಾಗಿ ಬ್ರಾಡ್‌ಕಾಸ್ಟ್ ಮಾಡಿದ ಉಪನ್ಯಾಸವಿದು. ರೇಡಿಯೋ ಅಧಿಕಾರಿಗಳ ಸಮ್ಮತಿ ಪಡೆದು ಇದನ್ನು ಪ್ರಕಟಿಸಲಾಗಿದೆ. ಸಂ. ಜ.

ಯಾವ ವಿಷಯವಿದೆ ಎಂಬುದು ನಿಮಗೆ ಗೊತ್ತಾದರೆ, ನನ್ನ ಮಾತನ್ನು ನೀವು ನಂಬುವಿರಿ. ಋಗ್ವೇದದಲ್ಲಿ ಸಾಮಾನ್ಯವಾಗಿ ದೇವತೆಗಳ 'ಋಕ್' ಎಂದರೆ—ಅರಿಕೆಗಳಿವೆ. ಒಂದೊಂದು ಕವಿತೆಗೆ 'ಸೂಕ್ತ' ಎಂದು ಹೆಸರು. ಸೂಕ್ತದಲ್ಲಿ ಯಾವ ದೇವನ ಸಂಬಂಧವೆ ಬರಲಿ— ಕೊನೆಗೆ 'ಈ ದೇವನು ನಮಗೆ ಗಂಡು-ಮಕ್ಕಳನ್ನು ಕೊಡಲಿ, ದುಡ್ಡನ್ನು ಕೊಡಲಿ, ದನ-ಕರುಗಳನ್ನು ಒದಗಿಸಲಿ!' ಎಂಬ ಯಾಚನೆ ತಪ್ಪಿದ್ದಲ್ಲ. ತನಗೆ ಸುಖ ಬೇಕು, ತನಗೆ ಸಂಪತ್ತು ಬೇಕು, ತನಗೆ ಆಯುಷ್ಯಾರೋಗ್ಯ ಬೇಕು— ಎಂಬುದು ಹುಟ್ಟುಗುಣ, ಮಾನವಜಾತಿಗೆ ಸಹಜವಾದ ಧರ್ಮ. ಆ ದೃಷ್ಟಿಯಿಂದ ಋಗ್ವೇದದಲ್ಲಿ ಧರ್ಮ ತುಂಬಿದೆಯೆಂದು ಹೇಳಬಹುದು. ಈ ದೇವತೆಗಳಾದರೂ ಎಂತಹವರು? **ಅಗ್ನಿ, ಸೂರ್ಯ, ಇಂದ್ರ-ಪರ್ಜನ್ಯ-ವರುಣ-ವಾಯು-ರುದ್ರ-ವಿಷ್ಣು** ಮುಂತಾದವರು. ಮಳೆ, ಗಾಳಿ, ಬೆಳಕು, ಸಿಡಿಲು-ನೀರು-ನೆಲ-ಕಸುವು-ಕತ್ತಲೆ— ಕನ್ನಡದಲ್ಲಿ ಹೇಳುವುದಾದರೆ— ಇಂತಹವೇ ಋಗ್ವೇದದ ಋಷಿಗಳ ದೇವತೆಗಳು. "ತನಗೆ ತಿಳಿಯದ, ತನ್ನನ್ನು ಮೀರಿದ ಸೃಷ್ಟಿಯ ಶಕ್ತಿಗಳನ್ನು 'ದೇವತೆ' ಎಂದು ತಿಳಿದು, ಅವುಗಳನ್ನು ಒಲಿಸಿಕೊಳ್ಳಲು ಈ ಸರಲಸ್ವಭಾವದ ಕವಿಗಳು ಹಾಡಿದರು!"— ಎಂದು ಇಂದಿನ ಅನೇಕ ಪಂಡಿತರು ಹೇಳುತ್ತಾರೆ. ಸೂಕ್ತಗಳನ್ನು ನೋಡಿದರೆ ಈ ಮಾತು ತಪ್ಪಲ್ಲ ಎಂದೆನಿಸುವುದು. ದೇವತೆಗಳನ್ನು ಯಾಚಿಸುವ ಸೂಕ್ತಗಳೇ ಹೆಚ್ಚಾಗಿದ್ದರೂ, ಅಲ್ಲಲ್ಲಿ ಬೇರೆ ತರದ ಸೂಕ್ತಗಳೂ ಇವೆ. ಒಬ್ಬ ಕವಿ ತಾನು ಜೂಜುಗಾರ ಎಂದು ಹೇಳಿ, ಜೂಜಿನಿಂದ ಮನೆ-ಮಡದಿ-ಮಕ್ಕಳು ಹಾಳಾದುದನ್ನು ಹೇಳಿದ್ದಾನೆ. ಇನ್ನೊಂದೆಡೆ ತಿಳಿಯದೆ ಪಾಪಮಾಡುವ ವಿದ್ಯಾರ್ಥಿಗಳನ್ನು ಕೂಗಿದ ಕಪ್ಪೆಗಳಿಗೆ ಹೋಲಿಸಿದ ಕಥೆ ಇದೆ. ಮತ್ತೊಬ್ಬ ಕವಿ, ಸೋಮ ಕುಡಿದು ಮದಜೇರಿ ಇಂದ್ರ ತಾನೆಂದು ತಿಳಿದು 'ಜಗತ್ತನ್ನು ಯಾವ ಬೆರಳಿನಿಂದೆತ್ತಲಿ? ಎತ್ತಿ ಎಲ್ಲಿಡಲಿ?' ಎಂಬ ಯೋಚನೆಯಲ್ಲಿ ಸಿಕ್ಕಿದ್ದಾನೆ! ಕೇವಲ ಸೃಷ್ಟಿಯ ಸೌಂದರ್ಯವನ್ನು ಚಿತ್ರಿಸುವ ಉಷಃಕಾಲದ—ಬಿರುಗಾಳಿಯ—ಜಡಿಮಳೆಯ—ವರ್ಣನೆಗಳೂ ಇವೆ. ಕೆಲವು ಅರಸರ ವರ್ಣನೆಗಳಿವೆ, ಯುದ್ಧದ ವರ್ಣನೆಗಳಿವೆ.

'ಋಗ್ವೇದದಲ್ಲಿ ಇಂತಹವೇ ವಿಷಯವೆ ಇದ್ದರೆ ಅದು 'ಧರ್ಮದ ಆಗರ ಎನಿಸುವುದು ಹೇಗೆ?' ಎಂದು ನೀವು ಸಹಜವಾಗಿಯೇ ಪ್ರಶ್ನೆಯನ್ನು ಕೇಳಬಹುದು. ಆದರೆ ದಯವಿಟ್ಟು ನನಗೆ ಆ ಪ್ರಶ್ನೆಯನ್ನು ಕೇಳಬೇಡಿರಿ, ನಿಮ್ಮನ್ನೇ ಕೇಳಿಕೊಳ್ಳಿರಿ! ಬೆಳಗಿನಲ್ಲಿ ಎದ್ದೊಡನೆ ಸೂರ್ಯನನ್ನು ಎಷ್ಟೋ ಜನರು- ನೀವು ನಮಸ್ಕರಿಸುವುದಿಲ್ಲವೇ? 'ತತ್ ಸವಿತುರ್ವರೇಣ್ಯಂ' ಎಂಬ ಋಗ್ವೇದದ ಅರ್ಥವನ್ನೂ ಅಸ್ತಿತ್ವವನ್ನೂ ಅರಿಯದವರು ಕೂಡ ಈ ನಮಸ್ಕಾರಕ್ಕೆ ಕೈಮುಗಿಯುವರು. ಮಳೆಗಾಲದ ಹಬ್ಬವಿದೆ, ಸುಗ್ಗಿಯ ಸಮಾರಂಭವಿದೆ. ನಮ್ಮ ದಿನನಿತ್ಯದ ಜೀವನದಲ್ಲಿ ಕಂಡುಬರುವ ನೂರಾರು ಸಂಗತಿಗಳಿವೆ. ನಾವು ಕನ್ನಡಿಗರು, ನಾವು ದ್ರಾವಿಡರು, ನಾವು ಸಂಸ್ಕೃತವನ್ನು ಅರಿಯದವರು—ಎಂದುಕೊಂಡಾಗಲೂ, ಋಗ್ವೇದದಲ್ಲಿ ಹೇಳಿದ ಅನೇಕ ಮಾತುಗಳನ್ನು ನಾವು ನಡೆಯಿಸುತ್ತೇವೆ. ಆದಕ್ಕಾಗಿಯೆ 'ನಮಗೆ ಕೂಡ ವೇದವು ಮೊದಲ ಆದರ್ಶಗ್ರಂಥ' ಎಂದು ನಾನು ಪ್ರಾರಂಭದಲ್ಲಿ ಹೇಳಿದ್ದು. ಇರಲಿ!

ನಾಲ್ಕು ವೇದಗಳಲ್ಲಿ ಮೊದಲಿನದಾದ ಋಗ್ವೇದದ ವಿಷಯವಾಗಿ ನಾನು ಇದುವರೆಗೆ ಹೇಳಿದೆ. ಈ ಋಗ್ವೇದದ ಕೆಲವು ಸೂಕ್ತಗಳನ್ನು ಆಯ್ದು— ಹೊಸವಲ್ಲ— ಆ ಸಂಗ್ರಹಕ್ಕೆ '**ಸಾಮವೇದ**' ಎಂದು ಹೆಸರನ್ನು ಕೊಡಲಾಗಿದೆ. ಋಗ್ವೇದದ ಋಷಿಗಳು ಭೋಗಿಗಳು ಎಂದು ಮೇಲೆಯೆ ನೂಚಿಸಿದ್ದೇನೆ. ರಥದ ಏರಾಟ, ಕುದುರೆಯ ಜೂಜು, ಲೆತ್ತದಾಟ ಇವು ಅವರಿಗೆ ಪ್ರಿಯವಾಗಿದ್ದುವು. ಅದರಂತೆಯೆ ಸೋಮರಸವನ್ನು ಕಲ್ಲುಗಳಿಂದ ಆರೆದು ತೆಗೆವಾಗ ಕಟ್ಟಿದ ಪಾಡುಗಳೆ ಸಾಮವೇದದಲ್ಲಿವೆ. ಈ ನಮ್ಮ ಹಿರಿಯರ ವ್ಯವಹಾರಕುಶಲತೆ ತುಂಬ ಹಬ್ಬಲವಿದ್ದಿತು. ಭೋಗಿಗಳೆನಿಸಿದರೂ ಭೋಗಕ್ಕಾಗಿ ತ್ಯಾಗವನ್ನು ಮಾಡಲು ಹಿಂದೆ ಸರಿಯುತ್ತಿರಲಿಲ್ಲ. ಉದಾಹರಣಾರ್ಥವಾಗಿ: ಸೋಮರಸವನ್ನು ಕುಡಿಯುವಾಗ ಮುಂಜೆ ದೇವತೆಗಳಿಗೆ ಸ್ವಲ್ಪ ಕೊಡುತ್ತಿದ್ದರು. ಯಾಕೆ? ನಿಜವಾದ ಕಾರಣವನ್ನು ನಾವು ಅರಿಯುವುದು ಹೇಗೆ? ತಮಗಿಂತಲೂ ಬಲಿಷ್ಠರಾದ ದೇವತೆಗಳು ಕಸಿದುಕೊಳ್ಳಬಹುದೆಂಬ ಭೀತಿಯಿಂದ, ಮುಂಜೆಯೆ ತುಸು ಕೊಟ್ಟು ಸಮಾಧಾನಪಡುತ್ತಿರಬಹುದೆ? ಇಲ್ಲವೆ— ತಮಗೆ ರುಚಿಕರವೆಂದು ಕಂಡುಬಂದುದನ್ನು ದೇವತೆಗಳೂ ನಾಲಗೆ ಚಪ್ಪರಿಸಿ ರುಚಿಯಿಂದ ಉಪಭೋಗಿಸಲಿ—ಎಂಬ ವಿಚಾರವಿರಬಹುದೇ?

ತಮಗೆ ಪ್ರಿಯವಾದ ವಸ್ತುವನ್ನು ಮುಂಜಿ ದೇವತೆಗಳಿಗೆ ಕೊಡುವ ಈ ನಡತೆಯಿಂದ '**ಯಜ್ಞ**' ಎಂಬ ಪದ್ಧತಿಗೆ ಆರಂಭವಾಯಿತು. ಕ್ರಮೇಣ, ದೇವತೆಗಳ ಕಲ್ಪನೆ ಬೆಳೆದಂತೆ, ಅವನಿಂದ ಈಡೇರಿಸಲ್ಪಡಬಹುದಾದ ಆಶೆಗಳು ಹೆಚ್ಚಿದಂತೆ, ಯಜ್ಞವು ಒಂದು ದೊಡ್ಡ ವಿಸ್ತಿನ ವಿಷಯವಾಯಿತು. ಅದಕ್ಕಾಗಿದ್ದ ನಿಯಮಗಳ ಸಂಗ್ರಹಕ್ಕೆ '**ಯಜುರ್ವೇದ**' ಎಂಬ ಹೆಸರು. ಕರ್ನಾಟಕದಲ್ಲಿ, ಕನ್ನಡಿಗರಾದ ನಮ್ಮಲ್ಲಿ ಉಚ್ಚ-ಜಾತಿಯವರು ಬೇರೆ ಬೇರೆ ವೇದಗಳಿಗೆ ತಮ್ಮ ಸಂಬಂಧವನ್ನು ತೋರಿಸುವರು. ಅನೇಕ ಜಾತಿಯವರು ವಿಧಿ-ವಿಧಾನಗಳನ್ನು ಪಾಲಿಸುವರು. ಇದೆಲ್ಲದರ ಮೇಲಿಂದ ಸಾವಿರಾರು ವರ್ಷಗಳ ಹಿಂದಿನ ವೇದಗಳು ಇಂದಿಗೂ ನಮ್ಮ ಜೀವನದಲ್ಲಿ ಹೇಗೆ ಬೆರೆತಿವೆ ಎಂಬುದು ಸ್ಪಷ್ಟವಾಗುವುದು.

ಕೇವಲ ಉಚ್ಚಜಾತಿಯವರದಾಗಲಿ, ಕೆಲವೆ ಜಾತಿಯವರದಾಗಲಿ ಮಾತ್ರ ವೇದಗಳಿಗೆ ಸಂಬಂಧವಿದೆಯೆಂದು ತಿಳಿಯಬಾರದು. ಏಕೆಂದರೆ ನಾಲ್ಕನೆಯದಾದ '**ಅಥರ್ವಣವೇದ**'ದಲ್ಲಿ ಸಾಮಾನ್ಯರ ನಡತೆ-ನಂಬುಗೆ— ಹುಚ್ಚು— ಹೆದರಿಕೆಗಳು

ಕಂಡುಬರುವುವು. ಮಾಟಮಾಡುವುದು, ಬೇನೆ-ಬೇಸರಿಕೆಗಾಗಿ ಭೂತ-ಪಿಶಾಚಿಗಳನ್ನು ಒಲಿಸಿಕೊಳ್ಳುವುದು, ಜೋರ-ಚಾರ-ತನಗಳನ್ನು ಸಾಧಿಸಿಕೊಳ್ಳುವುದು, ಮಳೆಯನ್ನು ತರಿಸುವುದು—ಇಂತಹ ಅನೇಕ ಕೆಲಸಗಳಿಗಾಗಿ ಮಂತ್ರಗಳೂ ವಿಧಾನಗಳೂ ಈ ವೇದದಲ್ಲಿ ಕಂಡುಬರುವುವು. ಆದರೆ ಇವುಗಳ ಜೊತೆಗೆ ಯಜ್ಞದೇವತೆಗಳಿಗೆ ಸಂಬಂಧಿಸಿದ ವಿಧಿವರ್ಣನೆಗಳೂ ಇವೆ.

ಈ ವೇದಗಳ ವಿಷಯವಾಗಿ ಪೆಚ್ಚಿಗೆ ಇಲ್ಲಿ ಹೇಳುವುದು ಶಕ್ಯವಿಲ್ಲ. ಏನಿಲ್ಲೆಂದರೂ ನಮ್ಮ ಕಾಲಕ್ಕೆ ೫-೬ ಸಾವಿರ ವರ್ಷ ಮುಂಚೆಯಾದರೂ ಇವು ಬರೆಯಲ್ಪಟ್ಟಿರಬೇಕೆಂದು ಪಂಡಿತರು ತಿಳಿಯುತ್ತಾರೆ. ಇವುಗಳ ಭಾಷೆ ಹಳೆಯ ಕಾಲದ ಸಂಸ್ಕೃತ. ನಾವೂ ನೀವೂ ಕಲಿಯುವ ಕಾವ್ಯ-ನಾಟಕಗಳ ಸಂಸ್ಕೃತ ಭಾಷೆಗಿಂತ ಬೇರೆಯಾಗಿದೆ, ಗಂಡುಶೈಲಿಯದಾಗಿದೆ. ಇವುಗಳನ್ನು ಓದುವಾಗ ಎಷ್ಟೋಸಲ, ದೇವ-ಧರ್ಮಗಳಿಗಿಂತ ಇವುಗಳನ್ನು ಬರೆದವರ ವಿಷಯದಲ್ಲಿಯೆ ಹೆಚ್ಚಿನ ಆದರ ಹುಟ್ಟುವುದು. ಅವರ ಜೀತ್ರ, ಅವರ ಜೀವನ ನಮ್ಮ ಕಣ್ಣುಕಟ್ಟುವುದು. ಮಾನವ-ಶಕ್ತಿಗಳನ್ನೂ ಮೀರಿದ, ಪಶುಪಕ್ಷಿಗಳಿಂದಲೂ ದಟ್ಟ ಕಾನನ ಗಳಿಂದಲೂ ಮುಸುಕಿದ ಸೃಷ್ಟಿಯಲ್ಲಿ, ಎಳಗೂಸಿನ ಸರಲಸ್ವಭಾವ ದಿಂದ ಇವರು ಜೀವಿಸುತ್ತಿದ್ದರು. ಕುರಿಗಳನ್ನು ಕಾಯುವುದು, ಕುದುರೆಗಳನ್ನು ನಡೆಯಿಸುವುದು, ಒಕ್ಕಲುತನವನ್ನು ಸಾಗಿಸು-ವುದು, ಬೆಳಗು-ಸಂಜೆಗಳಲ್ಲಿ ಬೆಂಕಿಯನ್ನು ಹೊತ್ತಿಸಿ ಸುತ್ತಲೂ ಕುಳಿತು ಕತೆ-ಕವಿತೆಗಳಿಂದ ಕಾಲಕಳೆಯುವುದು, ಯಾವಾಗಲೂ ಕೂಸಿನ ಕಪಟದಿಂದಲೇ ಮಳೆ-ಗಾಳಿ-ಕಾಡು-ಜೊಳ್ಳಗಳನ್ನು ಅನುಕೂಲಮಾಡಿಕೊಳ್ಳಲು ಹೊಂಚುಹಾಕುವುದು—ಈ ಚಿತ್ರ, ಇಂತಹ ಜೀವನ ನಮ್ಮ ಕಣ್ಣಕಟ್ಟುವುದು. ಸೃಷ್ಟಿಸೌಂದರ್ಯಕ್ಕಾಗಿ ಸಂತೋಷ, ಉಷಃಕಾಲದ ರಮಣೀಯತೆಗಾಗಿ ಉಲ್ಲಾಸ, ಉದಯಕಾಲದ ಸೂರ್ಯನನ್ನು ನೋಡಿ ಸಂಭ್ರಮ—ಇಂತಹ ಸವಿಗಾರ ಸ್ವಭಾವ ಇವರದು. ಸಂತೋಷ-ಸುಖ-ಸಮಾಧಾನ ಸಿದ್ಧಿಗಳಿಗಾಗಿಯೇ ಬಾಳಬೇಕೆಂಬ ಬಂಟರು ಇವರು. ತಮ-ಗಾಗಿ ಬಲು ಹೆಮ್ಮೆ. ಕನ್ನಡಿಗರಾದ ನಮ್ಮ ಪೂರ್ವಜ ದ್ರಾವಿಡ ರನ್ನು ಈ ಆರ್ಯರು ಆಗಾಗ 'ಕಪ್ಪು ಬಣ್ಣದವರು, ಚಪ್ಪಟಿ ಮೂಗಿನವರು, ಯಜ್ಞಮಾಡದವರು' ಎಂದು ಮೂದಲಿಸು-ತ್ತಿದ್ದರೂ, ಧನಿಕ ಇಲ್ಲವೆ ಬಲಾಢ್ಯ ದ್ರಾವಿಡನೊಡನೆ ಸರಿಸಮಾನ ವಾಗಿ ಗೌರವದಿಂದ ನಡೆದುಕೊಳ್ಳುವ ಚಾಣಾಕ್ಷತೆಯನ್ನು ತೋರಿಸುತ್ತಿದ್ದರು. ಹಿಂದುಸ್ತಾನಕ್ಕೆ ಮೊದಲು ಬಂದ ಆರ್ಯ ರೆಂದರೆ ಈ ವೇದಕಾಲದ ಋಷಿಗಳ ತಂದೆಗಳೆ. ಹಿಂದುಸ್ತಾನ ದಲ್ಲಿ ಇವರು ನೆಲಸಿದಂತೆ—ದೂರ ದೂರ ಪಸರಿಸಿದಂತೆ—ದೇಶದ ಪರಿಸ್ಥಿತಿಗಾಗಿ ಈ ಆರ್ಯರ ಜೀವನವು ಬದಲಾಯಿಸ ತೊಡಗಿತು. ಹೊಸತಾಗಿ ಕಂಡ ಸೃಷ್ಟಿಸೌಂದರ್ಯಕ್ಕಾಗಿ ಮೊದಲಿನವರು ಕುಣಿಯುತ್ತಿದ್ದರೆ, ಮುಂದಿನವರು ಭಯ-ಬೇಸರುಗಳನ್ನು ತಾಳಿದರು. ಯಜ್ಞದಿಂದ ದೇವತೆಗಳನ್ನು ಸಂತೋಷಗೊಳಿಸುವುದರ ಬದಲಾಗಿ, ಯಜ್ಞಗಳಿಂದ ತಮ್ಮನ್ನೇ ಸಂತೋಷಗೊಳಿಸುವ ಸ್ವಾರ್ಥದ, ಸೋಮಾರಿತನದ ಸ್ವಭಾವಕ್ಕೆ ಇಳಿದರು. ಹೀಗಾಗಿ ಇವರ ಇಡಿಯ ಜೀವನವೇ ಯಜ್ಞಶಾಸ್ತ್ರದ ನಿಯಮಗಳನ್ನು ಪಾಲಿಸುವುದರಲ್ಲಿ ಕಳೆಯುತೊಡಗಿತು. ಆದೇ ಪ್ರಮಾಣದಲ್ಲಿ ಸುಖ-ಸಮಾಧಾನ-ಸುರಕ್ಷಿತತೆಗಳು ಮಾತ್ರ ದೊರೆಯಲಿಲ್ಲ. ಹೀಗಾಗಿ ಕೆಲವರಿಗೆ ಬೇಜಾರವಾಯಿತು; ಯಜ್ಞಶಾಸ್ತ್ರದಲ್ಲಿ ನಂಬುಗೆ ಕಡಿಮೆಯಾಯಿತು. 'ಹೊರಗಿನ ಜಗತ್ತು, ವಸ್ತು-ಒಡವೆಗಳ ಸುಖ, ಧನ-ಕರುಗಳ ಸಂಪತ್ತು—ಇದೆಲ್ಲ ಹುರುಳಿಲ್ಲದ್ದು' ಎಂದು ಇವರು ಹೇಳತೊಡಗಿದರು. ಇದಲ್ಲದೆ 'ಸಾವಿರಾರು ದೇವತೆಗಳು, ಸಾವಿರಾರು ತರದ ಯಜ್ಞಗಳು ಇದು ತಪ್ಪುದಾರಿ' ಎಂದೆನಿಸಿತು. 'ಸಾವಿರಾರು ದೇವತೆಗಳಿದ್ದರೂ ಹೀಗಾಗುತ್ತಿದ್ದರೆ, ಅವರಿಗೆ ಅಧಿಕಾರವೇ ಇರ-ಲಿಕ್ಕಿಲ್ಲ; ಅಥವಾ, ಸಾವಿರಾರುಗಳ ಬದಲು ಒಬ್ಬನೇ ದೇವನಿರ-ಬಹುದು. ಇನ್ನೊಂದುಮಾತು. ಈ ಸುಖವೆಂಬುದು ಸುಳ್ಳಿರ-ಬೇಕು! ಬೇನೆ ಬರುವಮುಂಚೆ ಹೆಚ್ಚು ತಿನ್ನುವ ಆಶೆ ಆಗುವು-ದಿಲ್ಲವೇ? ಹಾಗೆ' ಈ ರೀತಿ ಬೇರೆ ಬೇರೆ ಬುದ್ಧಿಯ ಬಂಟರು ಬೇರೆ ಬೇರೆ ತರದ ವಿಚಾರಗಳನ್ನು ಮಾಡಿದರು; ಅವುಗಳನ್ನು ಜಿಕ್ಕವರಿಗೆ ಹೇಳಿದರು. ಈ ವಿಚಾರಸಂಗ್ರಹಕ್ಕೆಯೆ '**ಉಪ-ನಿಷತ್**' ಎಂದು ಹೆಸರು. **ಉಪ** ಎಂದರೆ **ಸಮೀಪ, ನಿಷದ್** ಎಂದರೆ **ಕೂಡುವುದು.** ಆದ್ದರಿಂದ ಸಮೀಪದಲ್ಲಿ ಕುಳಿತ ವಿದ್ಯಾರ್ಥಿಗಳಿಗೆ **ಮಾಡಿದ** ಉಪನ್ಯಾಸಗಳೇ '**ಉಪನಿಷತ್**' ಎಂದು ಸಾಮಾನ್ಯವಾಗಿ ಅರ್ಥ ಹಚ್ಚುತ್ತಾರೆ. ಆದರೆ ಸುತ್ತಲೂ ಕುಳಿತು ಒಬ್ಬರೊಬ್ಬರೊಡನೆ ನಡೆಯಿಸಿದ ಚರ್ಚೆ-'ಉಪನಿಷತ್' ಎಂದು ಹೇಳುವುದೇ ಯೋಗ್ಯವಾಗಿರುವುದು. ಏಕೆಂದರೆ ಚರ್ಚೆಯಲ್ಲಿರುವಂತೆ ಬೇರೆ ಬೇರೆ ತರದ ಉಪನಿಷತ್ತುಗಳಲ್ಲಿ ಇರುವುವು.

ಗೆಳೆಯರೆ, ಶಾಲೆಯಮಕ್ಕಳಿಗೆ ತಿಳಿಯದಂತಹ ತತ್ತ್ವಜ್ಞಾನ ಉಪನಿಷತ್ತುಗಳಲ್ಲಿದೆ—ಎಂದು ಯಾರಾದರೂ ಹೇಳಿದರೆ ನೀವು ಹೆದರುವ ಕಾರಣವಿಲ್ಲ. ಏಕೆಂದರೆ ಶಾಲೆಯಮಕ್ಕಳಿಗೆ ತಿಳಿಯು-ವಂತಹ ಸುಲಭವಾದ ಕತೆಗಳಿಂದ ಕೂಡಿದ ರೀತಿಯಲ್ಲಿಯೇ ಉಪನಿಷತ್ತುಗಳು ಬರೆಯಲ್ಪಟ್ಟಿದೆ. **ಸತ್ಯಕಾಮಜಾಬಾಲ** ಎಂಬವನ ಕತೆಗಳನ್ನು ಕೇಳಿರಿ. ತನ್ನ ತಂದೆ ಯಾರೆಂಬದು ಆತನಿಗೆ ಗೊತ್ತಿರಲಿಲ್ಲ; ತಾಯಿಯೂ ಹೇಳಲಿಲ್ಲ. ಮುಂದೆ ಸತ್ಯಕಾಮನು ಗುರುವಿನ ಕಡೆಗೆ ಅಭ್ಯಾಸಕ್ಕೆ ಹೋದನು. 'ನಿನ್ನ ತಂದೆ ಯಾರು?' ಎಂದು ಗುರುಗಳು ಕೇಳಿದರು. 'ನನಗೆ ಗೊತ್ತಿಲ್ಲ' ಎಂದನು ದಿಟ್ಟಬಾಲಕ; ಅವನಿಗೆ ನಾಚಿಗೆಯಾಗ-ಲಿಲ್ಲ. 'ಕಟುವಾದ ಸತ್ಯವನ್ನು ಹೇಳುವ ನೀನು ಬ್ರಾಹ್ಮಣನು!' ಎಂದರು ಗುರುಗಳು. (ಎಂದರೆ 'ನಿಜವಾದ ಬ್ರಾಹ್ಮಣ್ಯ ಸ್ವಭಾವವನ್ನು ಅವಲಂಬಿಸಿದೆ' ಎಂದು.) **ಯಾಜ್ಞವಲ್ಕ್ಯ**ನೆಂಬ ವನು ಹೆಸರಾದ ತತ್ತ್ವಜ್ಞಾನಿ, ಅವನಿಗೆ ಇಬ್ಬರು ಹೆಂಡಂದಿರು.

ಅವರಲ್ಲಿ ತನ್ನ ಆಸ್ತಿಯನ್ನು ಹಂಚಬೇಕೆಂದನು. **ಗಾರ್ಗಿ** ಎಂಬ ಹೆಂಡತಿ ಎಂದಳು: 'ನನಗೆ ಸಂಪತ್ತು ಬೇಡ; ಯಾವುದಕ್ಕಿಂತ ಹೆಚ್ಚಿನ ಸಂಪತ್ತು ಇಲ್ಲವೊ, ಇಂತಹ ಸಂಪತ್ತಿನ ಆಸೆ ಆಗುವುದಿಲ್ಲವೊ, ಅಂತಹ ಆತ್ಮಜ್ಞಾನವನ್ನು ಹೇಳಿಕೊಡು!' ಎಂದಳು. ಇನ್ನೊಂದು ಕತೆ **ಶ್ವೇತಕೇತು**ವಿಗೆ ಅವನ ತಂದೆ ಹೇಳಿದನು: 'ಶ್ವೇತಕೇತೂ, ಪಣ್ಣಿನಲ್ಲಿ ಏನು ಕಾಣುವುದು?' 'ಸಿಪ್ಪೆ'. 'ಸಿಪ್ಪೆಯನ್ನು ತೆಗೆದರೆ' 'ಹಣ್ಣಿನ ಹೋಳು' ಎಂದನು. 'ಹೋಳನ್ನು ಸೀಳಿದರೆ ಏನು ಕಾಣುವುದು!' 'ಬೀಜ' 'ಬೀಜವನ್ನು ಒಡೆದರೆ?' 'ಏನೂ ಇಲ್ಲ!' ಎಂದನು ಶ್ವೇತಕೇತು. 'ಏನೂ ಕಾಣದಂತೆಯೆ ಸತ್ಯವು ಎಲ್ಲರಲ್ಲಿ ಅಡಗಿದೆ!' ಎಂದನು ಅವನ ತಂದೆ. ಹೀಗೆಯೆ ಅನೇಕ ತರದ ಕತೆಗಳಿವೆ. **ನಚಿಕೇತ**ನ ಕಥೆಯೂ ಉಪನಿಷತ್ತಿನಲ್ಲಿಯೆ ಇದೆ. ಈ ಉಪನಿಷತ್ ಗ್ರಂಥಗಳು ನೂರಕ್ಕೆ ಮಿಕ್ಕಿವೆ.

ಜಗತ್ತಿನ ಅನುಭವ ಕ್ಷಣಿಕ; ಹೊರಗಿನ ಸುಖಸಂಬಂಧ ಶಾಶ್ವತವಲ್ಲ; ಮನುಷ್ಯನಿಗೆ ಮನಸ್ಸು ಮುಖ್ಯ; ಸ್ವಭಾವ ಸತ್ಯ; ಜಗತ್ತಿನಲ್ಲಿ ಒಂದೇ ಸತ್ಯವಿದೆ—ಮೊದಲಾದ ವಿಚಾರಗಳನ್ನು ಹೇಳಿದ ಮೊದಲ ಶ್ರೇಯಸ್ಸು, ಜಗತ್ತಿನಲ್ಲಿ ಉಪನಿಷತ್ತುಗಳಿಗಿದೆ. ಮಿಕ್ಕ ಯಾವ ಜನಾಂಗದಲ್ಲೂ ಇಂತಹ ವಿಚಾರ ಬರುವ ನೂರಾರು ವರ್ಷ ಮುಂಚಿತವೇ ನಮ್ಮವರು ಬುದ್ಧಿಯಿಂದ ಇಷ್ಟು ಮುಂದೆ ಹೋಗಿದ್ದರು. ಈ ಉಪನಿಷತ್ತುಗಳನ್ನು ಬರೆದವರ ಪ್ರಾಮಾಣಿಕ ದಿಟ್ಟತನ, ವಿಚಾರಸರಣಿಯನ್ನು ಹಿಡಿದೇ ಕರ್ನಾಟಕದಲ್ಲಿ **ಬಸವೇಶ್ವರರು** ಜಾತಿ-ಸಂಪ್ರದಾಯಗಳ ವಿರುದ್ಧ ಕ್ರಾಂತಿಯನ್ನು ಹೂಡಿದರು. ಈ ಉಪನಿಷತ್ತುಗಳಲ್ಲಿದ್ದ ಉದಾತ್ತತತ್ತ್ವಗಳನ್ನೂ ಸತ್ಯವನ್ನು ಹುಡುಕುವ ಹಟವನ್ನೂ ಮುಂದೆ ಸಾಗಿಸಿ, ಇಡಿಯ ಹಿಂದುಸ್ತಾನದಲ್ಲಿ ಬುದ್ಧಿಯ ಮತ್ತು ಹೃದಯದ ರಾಜ್ಯವನ್ನು ಸ್ಥಾಪಿಸಿದವರು ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಬಸವೇಶ್ವರರು. ಈ ಆಚಾರ್ಯರು ನಮ್ಮಲ್ಲಿಯೇ ಹುಟ್ಟಿದರೆಂದು ಅಭಿಮಾನದಿಂದ ದಿನಾಲು ನೀವು ಕರ್ನಾಟಕಗೀತೆ ಹಾಡುವುದಿಲ್ಲವೆ? 'ಕಲಿಯೋದು ನಮ್ಮ ಕರ್ಮ, ಬಿಟ್ಟೀತು ಹ್ಯಾಂಗ?' ಎಂದು ನೀವು ಸಿಟ್ಟಿನಿಂದ ನುಡಿದಾಗಲೂ ಉಪನಿಷತ್ತಿನ ಸಂಬಂಧವನ್ನೇ ತೋರಿಸುವಿರಿ. ಕರ್ಮದ ಕಲ್ಪನೆಯೂ ಉಪನಿಷತ್ತಿನಲ್ಲಿಯೆ ಮೊದಲು ಮೂಡಿದ್ದು.

ಹೀಗೆ ವೇದಗಳೂ ಉಪನಿಷತ್ತುಗಳೂ ಸಾವಿರಾರು ವರ್ಷಗಳಿಂದ ನಮ್ಮ ಜೀವನದಲ್ಲಿ ಮೈಗೂಡಿಕೊಂಡಿವೆ. ಹಿಂದಿಲ್ಲ, ಕಂಡಿಲ್ಲ—ಆದರೂ ನಮ್ಮ ರಕ್ತದ ಕಣಗಳಲ್ಲಿ ಸೇರಿವೆ. ಅದಕ್ಕಾಗಿಯೆ ಅವನ್ನು 'ಆದರ್ಶಸಾಹಿತ್ಯ' ಎನ್ನುವುದು.

ಸಾದರ ಸ್ವೀಕಾರ

೬೮. **ಸಮಾಜ ವಿಕಾಸಕ್ರಮ** (ವಿವೇಚನಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ನೆಗಳೂರು ಶ್ರೀನಿವಾಸರಾಯರು, ಎಂ. ಎ. ಬಿ. ಟಿ. ಧಾರವಾಡ ಅವರು. ಧಾರವಾಡದ ಮಿಂಜಿನ ಬಳ್ಳಿಯ ೫ನೆಯ ವರ್ಷದ ೧ನೆಯ ಕುಡಿ. ಕ್ರೌ. ಅ. ೧೭೨ ಪುಟಗಳು, ಬೆಲೆ ೧-೪-೦.

೬೯. **ಮುಲ್ಲಯುದ್ಧ** (ಸಚಿತ್ರ) ಲೇ. ಶ್ರೀಮಾನ್ ಭೀಮರಾಯಪ್ಪಾ ಬಾಳಪ್ಪ ಮಮದಾಪುರ, ಶಿಕ್ಷಕರು ಜಿ. ಎ. ಹೈಸ್ಕೂಲ್ ಬೆಳಗಾಂವಿ. ವಿಷಯ ಪರಿಚಯಾತ್ಮಕ ಗ್ರಂಥವಿದು. ಕ್ರೌ. ಅ. ೧೧೪ ಪುಟಗಳು ಅಲ್ಲಲ್ಲಿ ಚಿತ್ರಪುಟಗಳು ಬೇರೆ; ಬೆಲೆ ೧-೦-೦

೭೦. Bengali Literature—(ಬಂಗಾಲಿ ಸಾಹಿತ್ಯದ ಪರಿಚಯ) ಲೇಖಕರು ಶ್ರೀಮಾನ್ ಅನ್ನಾದಶಂಕರ ಮತ್ತು ಶ್ರೀಮತಿ ಲೀಲಾ ರೇ ಅವರು. 'ದಿ ಪಿ.ಇ.ಎನ್. ಬುಕ್ಸ್-ದಿ ಇಂಡಿಯನ್ ಲಿಟರೇಚರ್ಸ್' ಮಾಲೆಯ ೨ನೆಯ ಗ್ರಂಥ ವಿದು. ಆಲ್ ಇಂಡಿಯಾ ಪಿ. ಇ. ಎನ್. ಸೆಂಟರಿನ ಸಲುವಾಗಿ ಇಂಟರ್‌ನ್ಯಾಶನಲ್ ಬುಕ್‌ಹೌಸ್ ಲಿ. ಆಶ್‌ಲೇನ್, ಫ್ಲೋರ್ಟ್ ಮುಂಬಯಿ ಅವರು ಪ್ರಕಟಿಸಿದ್ದಾರೆ. ಕ್ರೌ. ಅ. ೧೫೦ ಪುಟಗಳು. ಬೆಲೆ ೨-೦-೦.

೭೧. **ಕೆಲವು ಚಿತ್ರಗಳು** (ಕಥಾಸಂಗ್ರಹ). ಲೇಖಕರು ಶ್ರೀ. ವಿ. ಜಿ. ಶಾನಭಾಗ, ಕುಮಟಾ ಅವರು. ಕುಮಟೆಯ ಪ್ರಗತಿ ಪುಸ್ತಕಮಾಲೆಯ ೧ನೆಯ ಪುಷ್ಪ. ಈ ಮಾಲೆಗೆ ಸಂಪಾದಕರು ಶ್ರೇಯುತರುಗಳಾದ ಗೋಪಾಲ ಕೃಷ್ಣ ಪೈ ಮತ್ತು ಮಹಾಬಲೇಶ್ವರ ಸೆಟ್ಟಿ ಅವರು. ಫ್ರೂ. ಕ್ಯಾ. ಅ. ೮೦ ಪುಟಗಳು. ಬೆಲೆ ೦-೬-೦.

೭೨. **ಕುಲದೀಪಕರು.** (ವ್ಯಕ್ತಿ ಪರಿಚಯ ಸಂಗ್ರಹ). ಲೇಖಕರು: ಶ್ರೀಮಾನ್ ಸಿದ್ದವನಹಳ್ಳಿ ಕೃಷ್ಣಶರ್ಮರು. ಧಾರವಾಡದ ಲಲಿತಸಾಹಿತ್ಯ ಮಾಲೆಯ ಮೂರನೆಯ ಕುಡಿ. ಕ್ರೌ. ಅ. ೮೦ ಪುಟ. ಬೆಲೆ ೦-೧೦-೦.

ನಗೆಗೆ ನೇವಿದ್ಯ

ಎದೆಯ ಪರೀಕ್ಷೆ

ಪೆಂಚತಿ:— ಅಲ್ಲಾ, ಡಾಕ್ಟರು ಯಾವಾಗಲೂ ಕವಿಯೊಳಗೆ ಏನೋ ಇಟುಗೊಂಡು ನಿಮ್ಮ ಪರೀಕ್ಷಾ ಮಾಡಿ ನೋಚತಾರಲ್ಲಾ ; ಅದ್ಯಾಕದು ?

ಗಂಡ:—ತಾವು ಕಳುಹಿದ ಬಿಲ್ಲು ನೋಡಿ ತಡೆದುಕೊಳ್ಳೂ ಸಾಮರ್ಥ್ಯ ಅದಕನೋ ಇಲ್ಲೋ ಅಂಬೂದನ್ನ.. ಮೊದಲಽ ನೋಡಿ ತಿಳಕೋತಾರ !

* * *

ಗೋವಿಂದರಾಯರ ಮೃತ್ಯುಪತ್ರ

ಗೋಪಾಕೃಷ್ಣಯ್ಯನ ಹೋಟಲಿಗೆ ಗೋವಿಂದರಾಯರು ಬಂದರು. ಪೀಠದ ಮೇಲೆ ಕುಳಿತು, ಬೇಕಾದುದನ್ನು ತಂದು ಕೊಡಲು ಹೋಟಲು ಮಾಣಿಗೆ ಹೇಳಿದರು. ಬಹಳ ಹೊತ್ತಾದರೂ ಏನೂ ಬಾರದಿದ್ದುದನ್ನು ಕಂಡು ಗೋವಿಂದರಾಯರು ಹೇಳಿದರು :

" ಗೋಪಾಲಕೃಷ್ಣಯ್ಯ, ಸ್ವಲ್ಪ ಕಾಗದ, ಮಸಿ, ಲೆಕ್ಕಣಿಕೆ ತಾರಪ್ಪಾ ಇಲ್ಲಿ ! "

"ಯಾಕ ಸ್ವಾಮಿ, ಇಲ್ಲೇ ಕೂತು ಲೇಖನ ಗೀಖನ ಬರೀತೀರಿ ಏನು ? "

" ಎಲ್ಲೀ ಲೇಖನೋ! ನಿಮ್ಮ ಮಾಣಿಗೆ ತಿಂಡೀ ತಂದುಕೊಡೂ ಅಂತ ಆರ್ಡರ್ ಕೊಟ್ಟೀನಿ; ಕದಾಚಿತ್ ಅವು ಬಂಡರೆ, ನನ್ನ ವಾರಸದಾರರಿಗೆ ಅವು ಮುಟ್ಟಲೀ ಅಂತ ಮೃತ್ಯುಪತ್ರ ಬರೆದು ಇಡಬೇಕಂತ ಮಾಡೀನಿ ! "

* * *

ಶ್ರೀಮಂತಿಕೆಯ ಹೆಮ್ಮೆ

ಲಕ್ಷಾಧೀಶ ಲಕ್ಷ್ಮಣರಾಯರ ಹೆಂಡತಿ ಗೋದಾವರಿಬಾಯಿ, ದೇಸಾಯಿ ಧನಪತಿರಾಯರ ಹೆಂಡತಿ ಕಾವೇರೀಬಾಯಿ, ಮಾತನಾಡುತ್ತ ಕುಳಿತಿದ್ದರು.

ಗೋದಾವರಿ :— ನೋಡ್ರಿ ಕಾವೇರೀ ಬಾಯಿ, ನನ್ನ ವಜ್ರದ ನಗಗಳನ್ನೆಲ್ಲಾ ಮ್ಯಾಲಽವ್ಯಾಲೆ ನಾನೇ ಸ್ವಕಃ ಅಮೋನಿಯಾದಿಂದ ತೊಳೀತೀನಿ. ಹಸಿರಿನ ಒಡವೆಗಳನ್ನ ಬಳ್ಳೀ ಬಿಲೆಯಮಳ್ಳ ಸಾರಾಯದಿಂದ ಸ್ವಚ್ಛ ಮಾಡತೀನಿ. ನೀಲರತ್ನದ ಒಡವೆಗಳನ್ನಂತೂ ಮುಂಬಯಿಗೆ ಕಳಿಸಿ ಸ್ವಚ್ಛ ಮಾಡಿಸಿ ತರಿಸತೀನಿ !

ಕಾವೇರೀಬಾಯಿ :— ನಾನು ನನ್ನ ಒಡವೆಗಳನ್ನ ಸ್ವಚ್ಛಮಾಡಿಸೂ ಉಸಾಬರಿಗೇ ಹೋಗೂದಿಲ್ಲ; ಹೊಲಸಾಗಿ ಸ್ವಲ್ಪ ಕಪ್ಪುಮೋದಿಗೆ ಇಳಿದುವೊ; ಅವನ್ನ ಬಿಟ್ಟುಬಿಟ್ಟು, ಬೇರೇ ಒಡವೆಗಳನ್ನೇ ಮಾಡಿಸಿಕೊಂಡು ಬಿಡತೀನಿ !

* * *

ಜುಟ್ಟು ಯಾಕೆ ?

ಅಂಗಡಿಕಾರ :— ಯುದ್ಧ ನಡದೈತಿ, ಗೊತ್ತಿಲ್ಲೇನು ನಿನಗ ? ಅದಕ್ಕs ಮೇಣಬತ್ತಿ ಭಾಳ ಕುಟ್ಟ ಆಗ್ಯಾವ! ಒಂದೊಂದು ಮೇಣಬತ್ತಿಗೆ ಈಗ ಆರಾಣೆ–ಯೋಳಾಣೆ ಬೀಳತಾವ!

ಹಳ್ಳಿಯ ಮುದುಕಿ:— ಅಂದರ ಏನಪಾ ಮೂತು . . . . ಸೆಟ್ಟ! ಮೇಣಬತ್ತೀ ದೀಪದ ಬೆಳಕಿನೊಳಗ ಯುದ್ಧಾ ಅಡತಾನೋ ಏನು ಮಣ್ಣು !

* * *

ಸೆರೆಗುಡುಕರಿಬ್ಬರು

ಒಬ್ಬ ಸೆರೆಗುಡುಕ ತಲೆಕೆಳಗಾಗಿ ಹೊಳೆ ಹಿಡಿದು ಗೋಡೆಗೆ ಬಡಿಯುತ್ತಿದ್ದ. ಎಷ್ಟು ಹೊಡೆದರೂ ಹೊಳೆ ನಡವೆ ಇದ್ದುದನ್ನು ನೋಡಿ :

" ಏನೋ.....ಈ ಪುಳೀ.....ಸೂಳೀಮಗಂದು.....! ತಾಸಿಂತಾಸಾತು..... ಹಾಂಗs ಕುಟ್ಟೀಕುಟ್ಟಲಾಕ ಹತ್ತೀನಿ..... ಗ್ಯಾಡೀ ಒಳಗ ಹೋಗಽನೊಲ್ಲದಲೋ....! "

ಮತ್ತೊಬ್ಬ ಹುಚ್ಚುನಗೆ ನಗುತ್ತ ಹೇಳತೊಡಗಿದ :

" ಏನಲೇ ಯಬಡಾ !....ಆ ಗ್ಯಾಡ್ಯಾಗ ಬಡಿಯೂ ಮಳೀನs ಅದು ?....ಎದುರಗಡೇ ಗ್ಯಾಡಿಗೆ ಬಡಿಯೂ ಮಳೀನಪಾ !....ಅದರ ತಲೀ ಯಾವ ಕಡೇ ಐತಿ ಕಾಣೂದಿಲ್ಲೇನಲೇ....ಮಳ್ಳ ! ಪೇಳಿಕೇಳಿ....ಕರಿಗುಡುಕ ನೋಡಲೇ ನೀನು ! "

* * *

ನೆನಪಿನ ನಾನಾರಾಯರು

ಪ್ರೊಫೆಸರ್ ನಾನಾರಾಯರು ಪ್ರಸಿದ್ಧ ಪುರುಷರು. ನಾಡಿನಲ್ಲಿ ಅನೇಕ ಜನರು ಅವರನ್ನು ಚೆನ್ನಾಗಿ ಬಲ್ಲರು. ಒಂದು ಸಲ ಅವರು ರೈಲಿನಲ್ಲಿ ಪ್ರವಾಸ ಮಾಡುತ್ತಿರುವಾಗ, ಟಿಕೆಟುಗಳನ್ನು ನೋಡುವುದಕ್ಕಾಗಿ ಅಧಿಕಾರಿ ಅವರ ಬಳಿಗೆ ಬಂದ. ಪ್ರೊಫೆಸರರು ಜೇಬನ್ನು ತಡಹಿ ಕೊಡಹಿ ನೋಡಿದರು. ಟಿಕೇಟು ಸಿಕ್ಕಲೊಲ್ಲದು. ಆಗ ಅಧಿಕಾರಿ ಹೇಳಿದ :

"ಪರವಾ ಇಲ್ಲ; ತಮ್ಮನ್ನು ನಾನು ಚೆನ್ನಾಗಿ ಬಲ್ಲೆ. ಟಿಕೇಟು ತೋರಿಸುವುದಕ್ಕಾಗಿ ತಾವು ತೊಂದರೆಯನ್ನೇನೂ ತೆಗೆದುಕೊಳ್ಳಬೇಕಾಗಿಲ್ಲ ! "

ಪ್ರೊಫೆಸರರು ಕೃತಜ್ಞತೆಯ ಸ್ವರದಲ್ಲಿ ನುಡಿದರು :

" ತಮ್ಮ ಸೌಜನ್ಯಕ್ಕಾಗಿ ನಾನು ಋಣಿಯಾಗಿದ್ದೇನೆ; ಆದರೆ ನಾನೆಲ್ಲಿಗೆ ಹೋಗಬೇಕಾಗಿದೆಯೆಂಬುದನ್ನು ನೋಡಲಿಕ್ಕಾದರೂ ನನಗೆ ಟಿಕೇಟಿನ ಅಗತ್ಯವಿದೆಯಲ್ಲಾ ! ಈಗ ಏನು ಮಾಡಬೇಕು ? "

* * *

ಜಲತರಂಗ ಶಿಕ್ಷಣ

" ನಿನ್ನ ಹೆಂಡತಿಗೆ 'ಹಾರ್ಮೋನಿಯಂ' ಬಾರಿಸಲಿಕ್ಕೆ ಕಲಿಸೂದಕ್ಕಿಂತಾ 'ಜಲತರಂಗ' ಬಾರಿಸಲಿಕ್ಕೆ ಕಲಿಸೂದು ಒಳ್ಳೇದೂ ಅಂತ ಅನಿಸತಕದ ನನಗ ! "

" ಅದ್ಯಾಕ ? ಹಾಂಗ ಅನಿಸಲಿಕ್ಕೇನು ಕಾರಣ ? "

" ಇನ್ನೇನೂ ಕಾರಣ ಇಲ್ಲ; ಹೆಂಗಸರ ಸಂಬಂಧ ಯಾವಾಗಲೂ ನೀರು,....ನೀರಿನ ಪಾಠ್ರೆ ಇವುಗಳ ಕೂಡಾನೇ ಇರೂವರಿಂದ, 'ಜಲತರಂಗ' ಬೇಗನೆ ಬಂದೀತು ಅಂತ ! "



ಅನ್ಯಾಯವಾದ ಆರೋಪ

ಈ 'ನೋಟ'ವು ವಾಚಕರ ಕಣ್ಣಿಗೆ ದುರಿಗೆ ಬರುವಷ್ಟರಲ್ಲಿ, ಇಲ್ಲಿ ಬರೆಯಬೇಕಾದ ವಿಷಯದಲ್ಲಿ ಎಷ್ಟೋ ಹೊಸ ಘಟನೆಗಳು ಸಂಭವಿಸಬಹುದಾಗಿದೆ. ಆ ವಿಷಯವೆಂದರೆ ೧೦ನೆಯ ಫೆಬ್ರುವರಿಯಿಂದ ಮಹಾತ್ಮರು ಕೈಕೊಂಡ ಮೂರು ವಾರಗಳ ಉಪವಾಸವ್ರತ. ಈಗ ನಾವು ಬರೆಯುವುದಕ್ಕೆ ಇನ್ನೂ ಒಂದು ತೊಂದರೆ. ಅದೆಂದರೆ ಯಾವ ಮಾತನ್ನೂ (ಸರಕಾರದಿಂದ ಪ್ರಕಟಿತವಾದುವುಗಳನ್ನು ಬಿಟ್ಟು) ಮುಂಜೆ ಅಧಿಕಾರಿಗಳ ಅವಗಾಹನೆಗೆ ತಾರದೆ ಪ್ರಕಟಿಸಕೂಡದೆಂಬ ಮುಂಬಯಿ ಸರಕಾರದ ಪ್ರತಿಬಂಧಕಾಜ್ಞೆ. ಸರಿ— ಅಂತೂ ಈ 'ಅಸಿಧಾರಾವ್ರತ'ದ ರೂಢಿ ಭಾರತೀಯ ಪತ್ರಿಕಾಕರ್ತರಿಗೆ ಸಾಕಷ್ಟಿದೆ ಎಂಬ ಧೈರ್ಯದಿಂದಲೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ; ಅದೂ—ಮಹಾತ್ಮರ ಮತ್ತು ವೈಸರಾಯರ ನಡುವೆ ಜರುಗಿದ, ಸರಕಾರದಿಂದಲೆ ಪ್ರಕಟಿತವಾದ ಪತ್ರವ್ಯವಹಾರವನ್ನು ಕುರಿತು. ಕಳೆದ ಸಲ ಇನ್ನೊಂದು ಉಪವಾಸದ ಬಗ್ಗೆ ಈ 'ನಾ. ನಿ. ನೋಟ'ಗಳಲ್ಲಿ ಬರೆದ ತಾತ್ತ್ವಿಕ ವಿವೇಚನೆಯನ್ನು ಮತ್ತೊಮ್ಮೆ ವಾಚಕರ ಲಕ್ಷ್ಯಕ್ಕೆ ತರಬಯಸುತ್ತೇವೆ. ಅದೆಂದರೆ— ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಇಲ್ಲವೆ ನ್ಯಾಯವನ್ನು ದೊರೆಕಿಸಿಕೊಳ್ಳಲು ಈ ಅನಶನ ವ್ರತವು ಅನಿವಾರ್ಯವಾಗಿದೆ—ಎಂದು. ಈ ಮಾತನ್ನು ವೈಸರಾಯರು ತಮ್ಮ ಪತ್ರಗಳಲ್ಲಿ ಗಮನಿಸಿಲ್ಲ. ತದ್ವಿರುದ್ಧವಾಗಿ, ಇಂತಹ ಉಪವಾಸವು 'ಹಿಂಸೆ' (political black mail) ಎಂದು ಆರೋಪನ್ನು ಅವರು ಹೊರಿಸಿದ್ದಾರೆ. ಆ ಆರೋಪವು ಸಮರ್ಪಕವಲ್ಲ, ನ್ಯಾಯವಾದುದೂ ಅಲ್ಲ—ಎಂದು ನಮ್ಮ ಅಭಿಪ್ರಾಯ.

ಅಜಾತಶತ್ರುವಿನ ಆಂತರಂಗ

ಉಪವಾಸದ ಅನಿವಾರ್ಯತೆಯನ್ನು ಮಹಾತ್ಮರ ದೃಷ್ಟಿಯಿಂದ ನೋಡುವ ಮುಂಜೆ, ಅವರೇ ಕಾಣಿಸಿದ ಒಂದು ವೈಯಕ್ತಿಕ ವಿಚಾರವನ್ನು ಅರಿತುಕೊಳ್ಳಬೇಕಾಗಿದೆ. ವೈಸರಾಯರಿಗಾಗಿ—ಅಥವಾ ಲಾರ್ಡ್ ಲಿನ್‌ಲಿಥ್‌ಗೋ ಎಂಬ ವ್ಯಕ್ತಿಗಾಗಿ ಎಂದರೆ ಹೆಚ್ಚು ಸರಿಯಾದೀತು—ಮಹಾತ್ಮರಿಗಿದ್ದ ಸ್ನೇಹ, ಪ್ರೇಮ, ಆದರ ಈ ಮಾತಿಗಾಗಿ ಯಾವ ಭಾರತೀಯನಿಗೂ ಆಶ್ಚರ್ಯವಿಲ್ಲ. ಮಹಾತ್ಮಾಗಾಂಧಿಯವರು ಈ ಕಾಲದ ಅಜಾತಶತ್ರು. ಅದಕ್ಕಾಗಿಯೆ ಲಾರ್ಡ್ ಲಿನ್‌ಲಿಥ್‌ಗೋ ಅವರಿಗೂ ಮಹಾತ್ಮರಿಗಾಗಿ ಪ್ರೇಮ, ಆದರ ಇರುವುದೂ ಸಮಜವಿದೆ. ಆದರೆ ಇಷ್ಟಕ್ಕೆಯೆ ಈ ಮಾತು ಮುಗಿದಿಲ್ಲ; ಇಂದಿನ ಭಾರತದಲ್ಲಿ ಬ್ರಿಟಿಶರಿಗಾಗಿ ಆದರ-ವಿಶ್ವಾಸಗಳುಳ್ಳ ಮುಂದಾಳು ಎಂದರೆ ಮಹಾತ್ಮರೊಬ್ಬರೆ. ಭಾರತದಂತೆಯೆ ಬ್ರಿಟಿಶರಿಗಾಗಿಯೂ ಹಿತಚಿಂತನೆಮಾಡುವ ಮಹಾನುಭಾವತೆ ಗಾಂಧಿಯವರೊಬ್ಬರಲ್ಲಿಯೆ ಇದೆ. ಈ ಮಾತು ಮಾತ್ರ ಲಾರ್ಡ್ ಲಿನ್‌ಲಿಥ್‌ಗೋ ಅವರಿಗೂ ಹೊಳೆದಂತೆ ತೋರುವುದಿಲ್ಲ. ಇಲ್ಲವಾದರೆ ಅವರು ಈ ಉಪವಾಸಕ್ಕೆ 'ಹಿಂಸೆ' ಎನ್ನುತ್ತಿರಲಿಲ್ಲ ಎಂದು ನಾವು ಧೈರ್ಯದಿಂದ ಸಾರುತ್ತೇವೆ. ಇಂದಿನ ನಮ್ಮ ರಾಜಕೀಯ ಪರಿಸ್ಥಿತಿ ನಮಗೆ ಎಷ್ಟು ಅನನುಕೂಲವಾಗಿದೆಯೊ, ಅಷ್ಟೆ ಬ್ರಿಟನ್ನಿಗೂ ಅನನುಕೂಲವಾಗಿದೆ. ಈ ಪರಿಸ್ಥಿತಿ ಸುಧಾರಿಸಿದರೆ ಇಬ್ಬರಿಗೂ ಹಿತ; ಅದಕಾಗಿ ಅದನ್ನು ಸುಧಾರಿಸಲೇ ಬೇಕು; ಅದಕ್ಕೆ ಅನಿವಾರ್ಯವೆನಿಸಿತು ಉಪವಾಸ.

ಉಪವಾಸದ ಅನಿವಾರ್ಯತೆ

ನಾವು ಯಾವ ಮಾತನ್ನೂ ಇಲ್ಲಿ ಹೊಸತಾಗಿ ಹೇಳುತ್ತಿರುವುದಿಲ್ಲ. ಅಧಿಕೃತವಾಗಿ ಪ್ರಕಟವಾದ ಪತ್ರವ್ಯವಹಾರದಲ್ಲಿಯೆ ಇದು ಸ್ಪಷ್ಟವಾಗಿದೆ. 'ಆರು ತಿಂಗಳುಗಳ ವರೆಗೆ ದಾರಿ ಕಾಯ್ದೆ' ಎಂಬ ಮಹಾತ್ಮರ ವಾಕ್ಯದಲ್ಲಿ, ಮುಂದಾಳುತನದ ಹೊಣೆಗಾರಿಕೆಯ ಅರಿವಿದೆ. ತಾವು ಬಂಧಿತರಾದಾಕ್ಷಣ ತಮ್ಮ ಹೊಣೆಗಾರಿಕೆ ಮುಗಿಯಿತೆಂದು ಅವರು ತಿಳಿಯಲಿಲ್ಲ. ತಮ್ಮ ಬಂಧನದಿಂದ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು ಎಂಬ ವಿವಂಚನೆಗೆ ಒಳಗಾದರು; ಅದನ್ನು ಸುಧಾರಿಸಲೇ ಬೇಕು ಎಂಬ ನಿರ್ಣಯಕ್ಕೆ ಬಂದರು. ಆಮೇಲೆ ಸಪ್ರುಸಮಿತಿ, ಡಾ. ಶ್ಯಾಮಪ್ರಸಾದ ಮುಕರ್ಜಿ, ಶ್ರೀ. ರಾಜಾಜಿ ಇವರ ಸಂಧಾನದ ಪ್ರಯತ್ನಗಳಾದುವು. ಅವೆಲ್ಲ ನಿಷ್ಫಲವಾದ ಮೇಲೆ ಪರಿಸ್ಥಿತಿಯನ್ನು

ಸುಧಾರಿಸುವುದಕ್ಕೆ ತಮ್ಮ ಹೊಣೆಗಾರಿಕೆಗೆಯೆ ಅನಿವಾರ್ಯವಾಯಿತೆಂಬುದನ್ನು ಕಂಡರು. ಇಷ್ಟರಲ್ಲಿ ಅಮೆರಿ-ಕ್ರಿಪ್ಸ್ ಪ್ರಭೃತಿಗಳು ಮಹಾತ್ಮರ ವಿರುದ್ಧ ದೂರುಗಳ ಪ್ರಚಾರ ನಡೆಸಿದರು. ಇದನ್ನು ಕಂಡು ಸರಕಾರವು ತಾನಾಗಿಯೆ ತಮಗೆ ಅಂತಹ ಅವಕಾಶವನ್ನು ಕಲ್ಪಿಸಿಕೊಡುವ ಪ್ರವೃತ್ತಿಯಲ್ಲಿಲ್ಲ ಎಂದು ಮನವರಿಕೆಯಾಗಿರಬಹುದು ಮಹಾತ್ಮರಿಗೆ. ತಮ್ಮ ಹೊರತು ಇನ್ನು ಯಾರಿಂದಲೂ ಸಾಧ್ಯವಿಲ್ಲ, ತಮಗೆ ಅವಕಾಶವೆ ದೊರೆಯುವಂತಿಲ್ಲ. ಈಗ ಮಾಡಬೇಕೇನು ?

ಹೃದಯದ ಕಳವಳ

ಈ ವಿಚಾರದ ಜೊತೆಗೆಯೆ ಇನ್ನೂ ಕೆಲವು ವಿಚಾರಗಳೂ ಇದ್ದುವೆಂಬುದು ಮಹಾತ್ಮರ ಪತ್ರಗಳಿಂದಲೆ ಸ್ಪಷ್ಟವಾಗುವುದು. ಒಂದು:—ದೇಶದಲ್ಲಿ ಈಗಾಗಲೆ ಹಿಂಸಾಚಾರಗಳೂ ಅತ್ಯಾಚಾರಗಳೂ ನಡೆದು ಜನಜೀವನದಲ್ಲಿ ಅವ್ಯವಸ್ಥೆ ಪರದಿದೆ; ಅದರ ಜೊತೆಗೆ ಆಹಾರದ ತುಟಾಗ್ರತೆಯಿಂದ ಅನವಸ್ಥೆಗೂ ಅವಕಾಶವುಂಟಾಗಿದೆ; ಈ ದುಃಸ್ಥಿತಿಯನ್ನು ಪೂರ್ತಿಗೊಳಿಸುವಂತೆ ವಿಮಾನದಾಳಿಗಳಾಗಲಿ ಯುದ್ಧವಾಗಲಿ ಹಿಂದುಸ್ತಾನದಲ್ಲಿ ಜರುಗಿದರೆ ಜನತೆಯ ಪಾಡೇನು? ಸರಕಾರ ಮತ್ತು ಜನತೆಗಳಲ್ಲಿ ಪರಸ್ಪರ ವಿಶ್ವಾಸವು ಕಡಮೆಯಾಗುತ್ತಿದೆ, ಕೇವಲ ಯುದ್ಧದ ದೃಷ್ಟಿಯೊಂದೇ ಸರಕಾರಕ್ಕಿದೆ—ಎಂಬ ಮಾತುಗಳನ್ನು ಲಕ್ಷ್ಯಕ್ಕೆ ತಂದರೆ, ಜನತೆಯ ಗೋಳಿನ ಚಿತ್ರವು ಕಲ್ಪಿಸಲು ಕೂಡ ಅಸಾಧ್ಯ; ಆದ್ದರಿಂದ ಏನನ್ನಾದರೂ ಮಾಡಲೇಬೇಕು, ಏಲಂಬವಿಲ್ಲದೆ ಮಾಡಬೇಕು (ತಮ್ಮ ಪತ್ರಗಳು ಆದಷ್ಟು ಕಡಮೆ ತಡವಾಗಿ ಪರಸ್ಪರ ಮುಟ್ಟಬೇಕೆಂದು ಮಹಾತ್ಮರು ಕೇಳಿಕೊಂಡುದರ ರಹಸ್ಯ ಇದು)—ಎಂದು ಗಾಂಧೀಜಿಯವರು ನಿರ್ಣಯಿಸಿದ್ದರೆ ಆಶ್ಚರ್ಯವೇನು? 'ಬರಗಾಲದ ಬವಣೆಯಿಂದ ಲಕ್ಷಾವಧಿ ಜನರು ಬಳಲುವುದನ್ನು ಆರಸುನೆಯಲ್ಲಿ ಕೈಕಟ್ಟಿ ಕುಳಿತು ಇನ್ನೆಷ್ಟು ದಿನ ನೋಡಲಿ? ಇನ್ನು ನೋಡುವುದು ನನ್ನಿಂದಾಗದು'—ಎಂಬ ಕರುಳಿನ ಕೂಗು ಮೇಲಿನ ವಿಚಾರಗಳನ್ನೆ ಸೂಚಿಸುತ್ತಿದೆ.

ಪ್ರಾರ್ಥನೆ

ಪ್ರಕಟವಾದ ಪತ್ರವ್ಯವಹಾರವನ್ನು ಬಿಟ್ಟು ಬೇರೆ ಬರೆಯುವ ಇಚ್ಛೆಯೂ ನಮಗಿಲ್ಲ. ರಾಜಕೀಯ ತೊಡಕು—ಕಾಂಗ್ರೆಸ್ಸಿನ ನೀತಿ—ಸರಕಾರದ ಧೋರಣೆ ಇವುಗಳ ಬಗ್ಗೆ ಅನೇಕ ಸಲ ನಮ್ಮ ಅಭಿಪ್ರಾಯವನ್ನು ನಾವು ಸ್ಪಷ್ಟವಾಗಿ ಇಲ್ಲಿ ಹೇಳಿದ್ದೇವೆ. ಆದರೆ ಒಂದು ಮಾತನ್ನು ಮಾತ್ರ ಹೇಳಲೇಬೇಕಾಗಿದೆ. 'ನಿಮ್ಮ ಹೊಣೆಗಾರಿಕೆಯ ಮೇಲೆ ನಿಮ್ಮ ಉಪವಾಸ, ಅದರ ಪರಿಣಾಮ ನಿಮ್ಮ ಮೇಲೆಯೆ, ಜನತೆಯ ನಿರ್ಣಯ ಕೊಡಲಿ!' ಎಂದು ಮುಂತಾಗಿ ಹೇಳುವ ಸರಕಾರವು, ಹಿಂದುಸ್ತಾನದ ಜನತೆಯ ಮುಂದೆಯೆ ಎಲ್ಲ ಆಧಾರಗಳನ್ನು ಇಡದಿರುವುದು ಎಂದಿಗೂ ನ್ಯಾಯವಾಗದು. ಆದರೆ ದಬ್ಬಾಳಿಕೆಗಾಗಲಿ, ನಿಯಂತ್ರಣಕ್ಕಾಗಲಿ, ರಾಜಕೀಯ ತೊಡಕಿನ ಬಗ್ಗೆಯಾಗಲಿ ದೂರನ್ನೆತ್ತಲು ನಮಗೆ ಎಷ್ಟೂ ಮನಸ್ಸಿಲ್ಲ. ಸದ್ಯಕ್ಕೆ ನಮಗೆ ಒಂದೇ ವಿಚಾರ; ಪ್ರತಿಯೊಬ್ಬ ಭಾರತಾಭಿಮಾನಿಯ ಮನಸ್ಸಿನಲ್ಲಿ ತಳಮಳಿಸುತ್ತಿರುವ ವಿಚಾರ. ಈ ವ್ರತದಿಂದ ಮಹಾತ್ಮರು ಸುರಕ್ಷಿತವಾಗಿ ಪಾರಾಗಿ, ಇನ್ನೂ ಅನೇಕ ವರ್ಷಗಳ ವರೆಗೆ ಜಗತ್ತಿನ ಕಲ್ಯಾಣಕ್ಕಾಗಿ ಸುಖರೂಪವಾಗಿ ಬಾಳಲಿ.

स महात्मा सुदुर्लभः ಎಂದು ಶ್ರೀಕೃಷ್ಣನ ಶಬ್ದಗಳಲ್ಲಿ ನಮ್ಮ ಪ್ರಾರ್ಥನೆಯ ಸಾರವನ್ನು ಮತ್ತೊಮ್ಮೆ ಕಾಣಿಸುತ್ತೇವೆ.

(೧೬-೨-೪೨)

ಸರಕಾರದ ಸಿದ್ಧಾಂತ?

ಇತ್ತೀಚಿನ ಘಟನೆಗಳ ಸಂದರ್ಭದಲ್ಲಿ ಹಿಂದುಸ್ತಾನ ಸರಕಾರದವರು ದೇಶದ ಪರಿಸ್ಥಿತಿ ಮತ್ತು ಅದರ ಹೊಣೆಗಾರಿಕೆಯ ಬಗ್ಗೆ ಒಂದು ಅಧಿಕೃತವಾದ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಗಾಂಧಿ-ವೈಸರಾಯ ಪತ್ರವ್ಯವಹಾರದಲ್ಲಿ ವೈಸರಾಯರು ಕಾಣಿಸಿದ ಅಭಿಪ್ರಾಯವೆ ಈ ಹೊತ್ತಗೆಯಲ್ಲಿ ವಿಸ್ತಾರವಾಗಿ ಬಣ್ಣಿಸಲ್ಪಟ್ಟಿದೆ. 'ಗಾಂಧೀಜಿಯವರು ಮತ್ತು ಕಾಂಗ್ರೆಸ್ಸು ದೇಶದಲ್ಲಿ ಇಂದು ನಡೆದ ಅತ್ಯಾಚಾರಗಳಿಗೆ ಪೂರ್ತಿಯಾಗಿ ಹೊಣೆಗಾರರು' ಎಂದು ಸರಕಾರದವರ ಅಭಿಪ್ರಾಯ. 'ಸಾಮಾನ್ಯ ಜನತೆಗೆ ಅಹಿಂಸೆ ಅಶಕ್ಯವೆಂಬುದು ಗಾಂಧಿಯವರಿಗೆ ಗೊತ್ತಿರಲು ಸಾಕು, ಇದಲ್ಲದೆ ವರ್ಕಿಂಗ್ ಕಮಿಟಿಯ ಗೊತ್ತುವಳಿಯ ತರುವಾಯ ಹೀಗಾಗುವುದೆಂಬುದು ಕಾಂಗ್ರೆಸ್ ಹಿರಿಯರಿಗೆ ಗೊತ್ತಿದ್ದಿತಲ್ಲದೆ ಇಷ್ಟವೂ ಆಗಿದ್ದಿತೆಂದು ಸಿದ್ಧ ಮಾಡಬಹುದು'—ಎಂಬ ಮಾತುಗಳನ್ನು 'ಹರಿಜನ'ದಲ್ಲಿಯ ಲೇಖನಗಳಿಂದ, ಮುಂದಾಳುಗಳ ಭಾಷಣಗಳಿಂದ ಅವತರಣಿಕೆಗಳನ್ನಾಯ್ದು ಸಮರ್ಥಿಸುವ ಯತ್ನವಿದೆ. ಇದಲ್ಲದೆ ಆಗ ಯುದ್ಧ ಪರಿಸ್ಥಿತಿಯು ಬ್ರಿಟನ್ನಿಗೆ ಅಷ್ಟೊಂದು ಅನುಕೂಲವಿಲ್ಲದುದರ ದುರ್ಲಾಭವನ್ನು ಪಡೆದುಕೊಳ್ಳುವ ಯೋಜನೆಯೂ ಕಾಂಗ್ರೆಸಿಗಿದ್ದಿತೆಂದು ಸರಕಾರವು ಸಾಧಿಸಲು ಯತ್ನಿಸಿದೆ.

'ಸರಕಾರತನ'ದ ಹೊಣೆಗಾರಿಕೆ

ಈ ವಿಷಯವಾಗಿ ಹೆಚ್ಚಿಗೆ ಬರೆಯುವುದು ಅನವಶ್ಯ ಎಂದು ನಮಗೆ ತೋರುತ್ತಿದೆ. ಪರರಾಷ್ಟ್ರಗಳಲ್ಲಿ ಕಾಂಗ್ರೆಸಿನ ವಿರುದ್ಧ ಪ್ರಚಾರಕ್ಕಾಗಿ ಈ ಪ್ರಕಟನೆಯ ಪರಿಶ್ರಮವನ್ನು ಸರಕಾರವು ಕೈಕೊಂಡಿದ್ದರೆ ಭಾರತೀಯರಿಗೆ ಅದರ ಗೊಡವೆ ಬೇಕೇ ಆಗಿಲ್ಲ. ಯಾಕೆಂದರೆ ಯಾವ ಪರರಾಷ್ಟ್ರದ ಮೇಲೂ ಇಂದು ಹಿಂದುಸ್ತಾನವು ಸ್ವಾತಂತ್ರ್ಯಕ್ಕಾಗಿ ವಿಶ್ವಾಸವನ್ನಿಟ್ಟಿಲ್ಲ. ಇನ್ನು ಭಾರತೀಯರಿಗೆ ಸತ್ಯವನ್ನು ತಿಳುಹಿಸುವ ಯತ್ನವಿದಾಗಿದ್ದರೆ, ಈ ಪರಿಶ್ರಮವು ಅನಾವಶ್ಯಕ ಎಂದೇ ಹೇಳಬೇಕಾಗುವುದು. ಯಾಕೆಂದರೆ ಕಾಂಗ್ರೆಸ್ ಮುಂದಾಳುಗಳನ್ನು ಬಂಧಿಸಿದ್ದು ಅವಸರದ, ಅನವಶ್ಯವಾದ ಧೋರಣೆಯಾಯಿತೆಂದು ಪ್ರತಿಯೊಂದು

ರಾಜಕೀಯ ಪಕ್ಷ, ಪ್ರತಿಯೊಬ್ಬ ಕಾಂಗ್ರೆಸೇತರ ಮುಂದಾಳು, ಪ್ರತಿಯೊಂದು ಪತ್ರಿಕೆ ಅಭಿಪ್ರಾಯಪಟ್ಟಿದೆ. 'ಅಗಸ್ಟ್ ನಿರ್ಣಯದ ನಂತರ ಪರಿಸ್ಥಿತಿ ಹೀಗಾಗುವುದೆಂದು ಗೊತ್ತಿದ್ದೂ ಕಾಂಗ್ರೆಸು ನಿರ್ಣಯವನ್ನು ಸ್ವೀಕರಿಸಿತು' ಎಂದು ಸರಕಾರದ ಆರೋಪ. ಆದರೆ 'ಮುಂದಾಳುಗಳನ್ನು ಬಂಧಿಸಿದಲ್ಲಿ ಅನಾಯಕ-ಅತ್ಯಾಚಾರಗಳಾಗುವುವೆಂದು ಗೊತ್ತಿರಬಹುದಾಗಿರುವಾಗಲೂ ಸರಕಾರವು ಮುಂದಾಳುಗಳನ್ನು ಬಂಧಿಸಿತು, ಅದಕಾಗಿ ಸರಕಾರವೆ ಈ ಪರಿಸ್ಥಿತಿಗೆ ಹೊಣೆ' ಎಂದರೆ? ಹಾಗೆ ಅನೇಕರು ಕಳೆದ ಆಗಸ್ಟ್‌ನಲ್ಲಿಯೆ ಅಭಿಪ್ರಾಯಪಡಲಿಲ್ಲವೆ? ಇದಲ್ಲದೆ ಹೊಣೆಯ ಆರೋಪವನ್ನು ಹೊರಿಸಿ ಕೈಜೆಲ್ಲಿದರೆ ಯಾವ ಸರಕಾರವೂ ತನ್ನ ಕರ್ತವ್ಯವನ್ನು ಪೂರ್ತಿಗೊಳಿಸಿದಂತಾಗಲಿಲ್ಲ ಎಂದು ನಾವು ಹಿಂದೆ ಅನೇಕ ಸಲ ಹೇಳಿದ್ದನ್ನು ಮತ್ತೊಮ್ಮೆ ಹೇಳಬಯಸುವೆವು. ಪರಿಸ್ಥಿತಿಯನ್ನು ಸುಧಾರಿಸುವುದು ಮುಖ್ಯವಾಗಿ ಸರಕಾರದ ಹೊಣೆ. ಕೇವಲ ಒಂದು ಪಕ್ಷದ ಮುಂದಾಳುಗಳನ್ನು ಬಂಧಿಸಿ, ದಬ್ಬಾಳಿಕೆಯನ್ನು ನಡೆಯಿಸಿ, ಸುದ್ದಿ ನಿಯಂತ್ರಣವನ್ನು ನಿಲ್ಲಿಸಿದ ಮಾತ್ರಕ್ಕೆ ಪರಿಸ್ಥಿತಿ ಸುಧಾರಿಸಿದಂತಾಗಲಿಲ್ಲ.

ಏಕಪಕ್ಷೀಯವು ಸಿದ್ಧಾಂತವಲ್ಲ!

ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಪಾಜಕರ ಲಕ್ಷ್ಯಕ್ಕೆ ತರಬಯಸುತ್ತೇವೆ. ಆರೋಪವನ್ನುಹೊರಿಸಿದ ಮಾತ್ರಕ್ಕೆ ನಿರ್ಣಯವಾಗಲಿಲ್ಲ. ಈ ಪಕ್ಷದಲ್ಲಂತೂ ಆರೋಪ ಹೊರಿಸುವವರೂ ಸರಕಾರ, ನಿರ್ಣಯ ಕೊಡುವವರೂ ಸರಕಾರ! ಇದಾವ ನ್ಯಾಯಪದ್ಧತಿಯ ತತ್ತ್ವ? ಆರೋಪಿಗೆ ತನ್ನ ಪಕ್ಷವನ್ನು ಮಂಡಿಸಲು ಕೂಡ ಅವಕಾಶ ಕೊಡಬಾರದೆನ್ನುವುದು ನ್ಯಾಯನೀತಿಗೇ ವಿರುದ್ಧವಾಗಿದೆ. ಸರ್ ತೇಜಬಹಾದ್ದೂರ್ ಸಪ್ರುರವರಂತಹ ನ್ಯಾಯವಟುಗಳು 'ಕಾಂಗ್ರೆಸಿನ ಕೆಲವು ವ್ಯಕ್ತಿಗಳು ಹಿಂಸಾಮಾರ್ಗವನ್ನು ಹಿಡಿದ ಚಿಹ್ನಗಳಿವೆ; ಆದರೆ ಸದ್ಯದ ಅತ್ಯಾಚಾರಗಳಿಗೆ ಕಾಂಗ್ರೆಸ್ ಸಂಸ್ಥೆಯು ಸರ್ವಥಾ ಹೊಣೆಯಲ್ಲ ಎಂದು ನನ್ನ ಖಂಡಿತ ಅಭಿಪ್ರಾಯ' ಎಂದಿದ್ದಾರೆ. ಅದರಂತೆಯೆ ಸರಕಾರದವರು ಮೇಲಿಂದ ಮೇಲೆ ಆರೋಪ ಹೊರಿಸುವುದನ್ನು ಕಂಡು 'ಆರೋಪದ ಪುನರುಕ್ತಿಯು ಆರೋಪದ ಸತ್ಯತೆಯು ಸಾಬ್ಹಿಯಲ್ಲ'ಎಂದು ಬ್ಯಾರಿಸ್ಟರ್ ಜಯಕರರು (ಇವರು ನ್ಯಾಯದಲ್ಲಿ ಮೇಧಾವಿಗಳು) ಸಾರಿದ್ದಾರೆ. ಕೊನೆಯದಾಗಿ 'ಅನನುಕೂಲ ಯುದ್ಧ ಪರಿಸ್ಥಿತಿಯು ದುರ್ಲಾಭವನ್ನು ಪಡೆದುಕೊಳ್ಳುವ ಇಚ್ಛೆ ಕಾಂಗ್ರೆಸಿಗಿದ್ದಿತು' ಎಂಬ ಘೋರತರ ಆರೋಪವನ್ನು ಹೊರಿಸುವಾಗ ಸರಕಾರವು ಜೆಜ್ಜು ವಿಚಾರ ಮಾಡಬೇಕಾಗಿತ್ತು. 'ಯುದ್ಧಪ್ರಯತ್ನದ ನನ್ನ ಅನುಭವದಿಂದ ನಾನು ಹೀಗೆ ಹೇಳುವೆ; ಗಾಂಧಿಯವರ ಬಿಡುಗಡೆಯಿಂದ ಯುದ್ಧಪ್ರಯತ್ನಕ್ಕೆ ಬಲವಾದ ಪುಟವು ದೊರೆಯುವುದು!' ಎಂದು ಸರ್ ಎ. ಎಚ್. ಗಝ್ನವಿಯವರು ಹೇಳಿಲ್ಲವೆ? 'ಯುದ್ಧಪ್ರಯತ್ನಕ್ಕೆ ಪೂರ್ಣ ಬಲ ಬಂದು ಹಿಂದುಸ್ತಾನಕ್ಕೆ ಸುರಕ್ಷಿತತೆ, ಮಿತ್ರರಾಷ್ಟ್ರಗಳಿಗೆ ವಿಜಯ ದೊರೆಯಬೇಕೆಂಬ ಹಂಬಲ ಕಾಂಗ್ರೆಸ್ಸಿಗಿದೆ' ಎಂದು ಗಾಂಧಿಜಿಯವರೂ ಕಾಂಗ್ರೆಸಿನ ಹಿರಿಯರೂ ಮೊದಲಿನಿಂದಲೂ ಹೇಳುತ್ತ ಬಂದಿಲ್ಲವೆ? ಹೀಗಿರುವಾಗ ತಾನು ಹೊರಿಸಿದ ಆರೋಪಗಳಲ್ಲಿ ಭಾರತೀಯರು ವಿಶ್ವಾಸವಿಡಬೇಕೆಂಬ ಇಚ್ಛೆ ಹಿಂದುಸ್ತಾನದ ಸರಕಾರಕ್ಕಿದ್ದರೆ, ಕೂಡಲೆ ಕಾಂಗ್ರೆಸಿಗೆ ತನ್ನ ಪಕ್ಷವನ್ನು ಮಂಡಿಸುವ ಅವಕಾಶವನ್ನುಂಟುಮಾಡುವುದು ಆ ಸರಕಾರದ ಕರ್ತವ್ಯವಾಗಿದೆ. ಸರ್ ತೇಜಬಹಾದ್ದೂರರೂ, ಇಂಗ್ಲಂಡಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯೂ ಹೇಳುವಂತೆ, ಸದ್ಯದ ಪರಿಸ್ಥಿತಿಯ ಹೊಣೆಗಾರಿಕೆಯ ನಿರ್ಣಯವನ್ನು ಕೊಡುವುದು ಹಿಂದುಸ್ತಾನ ಇಲ್ಲವೆ ಬ್ರಿಟಿಶ ಸರಕಾರದ ಕೆಲಸವಲ್ಲ; ಇನ್ನೊಂದು ಪಕ್ಷವನ್ನು ಬಂಧನದಲ್ಲಿಟ್ಟು ತನ್ನದರ ಪುನರುಕ್ತಿ ಇಲ್ಲವೆ ಘಂಟಾಘೋಷ ಮಾಡಿದರೆ, ಸಿದ್ಧಾಂತಕ್ಕಿಂತಲೂ ಸಂದೇಹಕ್ಕೇ ಜಾಸ್ತಿದ ಕೊಟ್ಟಂತಾಗುವುದು.

ಕನ್ನಡನಾಡಿನ ಕಡುತರ ಬರಗಾಲ

ಉತ್ತರಕನ್ನಡದ ವಿಜಾಪುರ ಜಿಲ್ಲೆಯ ಸಂಪೂರ್ಣ ಪ್ರದೇಶ, ಧಾರವಾಡ–ಬೆಳಗಾಂವಿ ಜಿಲ್ಲೆಗಳ ಬಯಲುನಾಡು ಇವುಗಳಲ್ಲಿ ಈ ವರ್ಷ ಭೀಕರ ಬರಗಾಲವು ತಾಂಡವವಾಡುತ್ತಲಿದೆ. ಸರಕಾರದವರು ಬರಗಾಲವೆಂದು ಒಪ್ಪಿದರು ಕೂಡ, ಅಲ್ಲಿಯ ಜನರ ಸಂರಕ್ಷಣೆಗೆ ಆವಶ್ಯಕ ಉಪಾಯಗಳನ್ನು ಸಾಕಷ್ಟು ಪ್ರಮಾಣದಿಂದ ಕೈಕೊಳ್ಳದೆ ಇರುವುದು ತುಂಬ ವಿಷಾದದ ವಿಷಯ. 'ರಾವಣನ ಹೊಟ್ಟೆಗೆ ಕಾಸಿನ ಶುಂಠಿ' ಯಂತೆ ಸರಕಾರ ಬರಗಾಲದ ಪ್ರತೀಕಾರೋಪಾಯಗಳನ್ನು ಕೈಕೊಂಡಿದೆಯೆಂಬುದು ಅಲ್ಲಲ್ಲಿ ಪ್ರಕಟವಾಗಿರುವ ಪತ್ರಿಕೆಗಳ ವರದಿ ಕೂಗುಗಳಿಂದ ಸ್ಪಷ್ಟವಾಗುತ್ತಲಿದೆ. ಯುದ್ಧದ ಮೂಲಕ ಏರಿದ ಧಾರಣೆಗಳ ಮೂಲಕ ಸುಭಿಕ್ಷ ಪ್ರದೇಶದಲ್ಲಿಯೆ ಜನರು ಬಳುಕುವುದು ಕಠಿಣವಾಗಿರುವಾಗ, ದುರ್ಭಿಕ್ಷ ಪ್ರದೇಶದವರ ದುರ್ದಶೆಯನ್ನು ದೇವರೇ ಕೇಳಬೇಕು. ಸದ್ಯ ಜಗತ್ತಿನಲ್ಲಿಯ ಸಂಪತ್ತು ಜನರನ್ನು ಕೊಲ್ಲಲಿಕ್ಕೆ ಬೇಕಾದಷ್ಟು ವೆಚ್ಚವಾಗುತ್ತದೆಯೇ ಹೊರತು, ಕಾಯಲಿಕ್ಕೆ ಅದರ ನೂರರಲ್ಲೊಂದು ಪಾಲೂ ಇಲ್ಲ. ಸರಕಾರ ಜನರ ಸಂರಕ್ಷಣೆಗಾಗಿ ಇರಬೇಕಲ್ಲದೆ ತನ್ನ ಅಧಿಕಾರ ಸಂರಕ್ಷಣೆಗಾಗಿ ಇರಲಾಗದೆಂಬುದು ಅಧಿಕಾರಿಗಳ ಲಕ್ಷ್ಯದಲ್ಲಿ ಬಂದರೆ ಸದ್ಯದ ಬರಗಾಲದ ಭೀಕರತೆ ಎಷ್ಟೋ ಕಡಿಮೆಯಾದೀತು. ಅದರಂತೆಯೆ ದೇಶದ ಹಣಗಾರರು, ತಮ್ಮ ಸಂಪತ್ತನ್ನು ಬರೀ ತಮ್ಮದಷ್ಟೇ ಎಂದು ಭಾವಿಸದೆ, ದೇಶದ ಜನರ ಹಿತಕ್ಕೂ ಅದನ್ನು ಉಪಯೋಗಿಸಲು ಸಿದ್ಧರಾದರೆ, ಈ ಉರಿಯ ಕಾಹು ಎಷ್ಟೋ ಕಡಿಮೆಯಾದೀತು?

'ನಾನು ಈ ಮಧು ತೆಗೆದುಕೊಳ್ಳುವಾಗ ಚಿಕ್ಕವರಲ್ಲಿ ಚಿಕ್ಕವಳಾಗುತ್ತೇನೆ'

★ "ಈ ಮಧು ಹೆಸರಿನಂತೆ ರುಚಿಯಾಗಿದೆ. ಇದನ್ನು ತೆಗೆದುಕೊಳ್ಳುವಾಗ ನಾನು ಚಿಕ್ಕವರಲ್ಲಿ ಚಿಕ್ಕವಳಾಗುತ್ತೇನೆ.

★ ಅದರಿಂದ ಪ್ರಸೂತಿನಂತರದ ನನ್ನ ಅಶಕ್ತತೆ ಪೂರ್ಣವಾಗಿ ಇಲ್ಲದಂತಾಗಿ, ರಕ್ತಕ್ಷಯ ತುಂಬಿಬಂದಿತು. ಮತ್ತು ನಿರೋಗಿತನದ ಉತ್ಸಾಹವು ನನ್ನ ಮೈಯಲ್ಲಿ ಉಕ್ಕ ತೊಡಗಿತು.

★ ಡಾಕ್ಟರ್ ಜನರು ಇದನ್ನು ಉಪಯೋಗಿಸಿದರೆ ಒಳ್ಳೆಯದು!"

ಎಲ್ಲೆಲ್ಲೂ ದೊರೆಯುತ್ತೆ!

ದ್ರಾಕ್ಷಾರ್ಕಮಧು

ರಿಜಿಸ್ಟರ್ಡ್

MANE

ಮ್ಯಾನೇಜರ್ ★ ದ್ರಾಕ್ಷಾರ್ಕಮಧು ಆಫೀಸ ★ ನಿಪ್ಪಾಣಿ

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು: 'ತ್ರಿತಂಗ'

—This is the first book of its kind in Kannada, containing as it does a detailed, *rational* analysis of the main problem of the Gita. The author deserves to be warmly congratulated on the freshness and the originality with which he has viewed the conflict of Arjuna and explained the solution offered by Krishna —

—*P. E. N.* ದಲ್ಲಿ ಪ್ರೊ. ಗೋಕಾಕ ಮತ್ತು ಮುಗಳಿ ಅವರ ವಿಮರ್ಶೆ.

ಬೆಲೆ ಸಾದಾಪ್ರತಿ ೩–೦–೦; ಉತ್ತಮಪ್ರತಿ ೩–೪–೦

ಬೇಕಾದವರು ಗ್ರಂಥಕರ್ತರಿಗಾಗಲಿ, ಜಯಂತಿ ಕಾರ್ಯಾಲಯಕ್ಕೆ ಆಗಲಿ ಬರೆದು ತರಿಸಿಕೊಳ್ಳಬೇಕು.

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು—'ಆನಂದಕಂದ'

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳೆವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟಸ್ಥಾನವನ್ನು ಪಡೆದು ನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ನಿಮ್ಮ ನೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು :— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ '**ಮುಕುಲ**' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು! ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.

ಆಡಳ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಎಣ್ಣೆಯಲ್ಲಿ ತಯಾರಿಸಲಾ 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ : ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Mellegatti at the Jayanti Office, Dharwar.

ಜಯಂತಿ

ಒಂದು ಕುಟುಂಬ-
ಯೂ ಇರಬೇಕಾದ
ಪತ್ರಿಕೆಯೆಂದರೆ
ಜಯಂತಿಯೆ!

ಎಪ್ರಿಲ್ ೧೯೪೩

ಚಿದಾನಂದ'
ಣ ಕಾಯುಕಿಣಿ
ಎಸ್. ಪಾಟೀಲ
ಶಾಜ ಕಟ್ಟಿಮನಿ
ಎಸ್. ಜಿ.

ಆರು ಆಣೆ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ ..... ವ್ಹಿ. ಪಿ. ಯಿಂದ ೪-೫-೦ ..... ಬಿಡಿಸಂಚಿಕೆಗೆ ೬ ಆಣೆ

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

ಹನೆಯ ವರ್ಷ	ಏಪ್ರಿಲ್ ೧೯೪೩	೧೧ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ರಣಭೈರವಿ (ಕವನ)	....	ಶ್ರೀ. ವಿ. ಜಿ. ಭಟ್ಟ, ಪುಣೆ	೪೮೫
ಸಂಪಾದಕೀಯ (ನಮ್ಮ ಸುಖ-ದುಃಖದ ಮಾತು)	....	ಸಂಪಾದಕರು	೪೮೬
ಮಂಗನ ಮಲ್ಲಿನಾಥತನ	....	' ಮಲ್ಲಿನಾಥ '	೪೮೭
ಸಾದರ ಸ್ವೀಕಾರ	....	....	೪೮೮
ಸ್ಫೋಟಜ್ವಾಲೆ (ವಿನೋದಾತ್ಮಕ ಪ್ರಬಂಧ)	....	ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ	೪೮೯
ಒಂದು ಜಾಹೀರಾತು (ವ್ಯಂಗ್ಯಲೇಖನ)	....	ಶ್ರೀ. ಬಿ. ಎ. ಪಾಟೀಲ, ಇಟಗಿ	೪೯೦
ಆಹಾರ ನಿಯಂತ್ರಣ (ಒಂದು ಚಿಕ್ಕ ಹುಚ್ಚಾಟ)	....	ಶ್ರೀ. ಎಲ್. ಜೆ. ಬೇಂದ್ರೆ, ಧಾರವಾಡ	೪೯೩
ಏನು ಹೇಳಲಿ ? (ಸಣ್ಣಕತೆ)	....	ಶ್ರೀ. ' ಚಿದಾನಂದ ' ಬೈಲಹೊಂಗಲ	೪೯೩
ಬುದ್ಧಿಯಸ್ವರೂಪಮತ್ತು ಕಾರ್ಯ (ಚರ್ಚಾತ್ಮಕ ಪ್ರಬಂಧ)....		ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೪೯೯
ಸ್ವರ್ಗಲೋಕದ ಅರಿವು (ಕವನ)	....	ಶ್ರೀ. ವ್ಹಿ. ಎನ್. ಮುದಕವಿ, ಪುಣೆ	೫೦೪
ಸರ್-ಟಿಫ್-ಪಕ್ (ಒಂದು ವಿಚಾರಲಹರಿ)	....	ಶ್ರೀ. ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್	೫೦೫
ಬರದ ದೇವಿ (ಸಾಂದರ್ಭಿಕ ಸಣ್ಣಕತೆ)	....	ಶ್ರೀ. ಬಸವರಾಜ ಕಟ್ಟೀಮನಿ, ಹಂಸಭಾವಿ	೫೦೮
ಧರ್ಮಸೂತ್ರ (ಪರಿಚಯಾತ್ಮಕ ಲೇಖನ)....	....	ಶ್ರೀ. ಎಂ. ವಾಸುದೇವಭಟ್ಟ ಬಿ. ಎ. (ಆನರ್ಸ್) ಪುಣೆ	೫೧೫
ಒಪೆದ ಕನ್ನಡಿ (ಲಘುಪ್ರಬಂಧ)	....	ಶ್ರೀ. ' ಎನೆಸ್ಸಿ ' ಬಿ. ಎ. ಧಾರವಾಡ	೫೧೮
ಪುಸ್ತಕ ವಿಮರ್ಶೆ (ಮಲ್ಲಯುದ್ಧ)	....	ಶ್ರೀ. ಬಿ. ಪಾ. ಸಾ. ರಾವ್	೫೨೦
ನಗೀಗೆ ನೇವಿದ್ಯ	....	' ನಕಲೀ ನಾರಾಯಣಾಚಾರ್ಯ '	೫೨೧
ನಾಲ್ಕೂ ನಿಟ್ಟಿನ ನೋಟ	....	' ನಿರೀಕ್ಷಕರು '	೫೨೨



ಸಂಪುಟ ೫ | ೧೩ನೆಯ ಎಪ್ರಿಲ್ ೧೯೪೩ | ಸಂಚಿಕೆ ೧೧

ರಣಭೈರವಿ

★

ಶ್ರೀ. ವಿ. ಜಿ. ಭಟ್ಟ, ಪುಣೆ

(ಗಂಡುಸಿಗೆ)

ಸರಿ ಹಿಂದೆ, ಸರಿ ಹಿಂದೆ,
ಸರಿ ಹಿಂದೆ ಗಂಡೆ !
ಗಂಡಲ್ಲ ಹೆಣ್ಣು ನೀ-
ನೆಂಬುದನು ಕಂಡೆ !

ನಾಡೆಲ್ಲ ಸೆರೆಯೊಳಿರೆ
ತೋಳ್ಬೆರೆಯು ಬೇಕೆ ?!
ಕ್ಷಮ-ವಿಷ ಕುಡಿಯುತಿರೆ
ದೇಶ,—ಮುದ್ದೇಕೆ ?

ಕಲಿ ತಬ್ಬಿರಲು ಮೈಯ
ಹೆಣ್ಣಲ್ಲ ಹೆಣ್ಣು ;
ನಾನಿಂದು ಭೈರವಿಯು
ಹರನ ಕಿಡಿಗಣ್ಣು !

ಹೆಳಲು ಹಾವಾಗಿಹುದು,
ಅರಿವಾಂಸ ಮುಡಿದೆ !
ನಾಲಗೆಯು ಕೇಸುರಿಯು,
ಕೆನ್ನೀರ ಕುಡಿದೆ !

ಕಪಳೆಯಾಗಿದೆ ಕಂಠ
ಎದೆ ಸೂಲ-ಸಾಲೆ ;
ಮೂರ್ತಿಗೊಂಡಿಹುದೆನ್ನೊ-
ಳಿದೊ ರುದ್ರಲೀಲೆ !

ಕೈಗಳಲಿ ಪಾಂಚಜ-
ನ್ಯವು-ಗಂಡುಗೊಡಲಿ ;
ರಣಕೆಳೆದಿಹೆನು ಹೆಣ್ಣು
ಜಯ ಸಿಗಲಿ, ಬಿಡಲಿ !

ಗಂಡುಸಾದರೆ ಮನುಜ
ನೀನೆಂದು ರುದ್ರ !
ಬೆಂಡೆದೆಯ ಬೂಚಿಯಿರೆ
ಕ್ರಿಮಿ, ಕೀಟ— ಕ್ಷುದ್ರ !

(ಗೆಳತಿಗೆ)

ಗೆಳತಿ ನಡೆ ನಡೆ ಮುಂದೆ,
ನಡೆ ಮುಂದೆ, ಮುಂದೆ !
ಹಿಂದಿರಲಿ ಹೇಂಟೆಯೆದೆ-
ಗಂಡುಸರ ಮುಂದೆ !

ನಿನಾಸೆಹೊತ್ತಿಹ ಗಂಡು
ದೇಶ ಮರೆತಿರಲು,
ದಾಸ್ಯದಲಿ ನಾಡೆಲ್ಲ
ಗಾಸಿ ಗೊಂಡಿರಲು—

' ಅಕ್ಕದೇವಿ 'ಯರಾಗಿ
ಸೊಕ್ಕಿದರಿ ಮೆಟ್ಟಿ,
ಸೌರ್ಥಗೊಳಿಸುವ ಬಾಳ
ಭಾರತದಿ ಹುಟ್ಟಿ !

' ಕೆಚ್ಚೆದೆಯ ಸ್ವಾತಂತ್ರ್ಯ
ಸ್ಫಿರುವ ನೆಲೆಯು;
ಶಿ ಚರಂಕನದ ಬೆಳ-
ಗಕರುವ ಬೆಲೆಯು ! '

'ದಿದನು ನಡೆ ಗೆಳತಿ,
--ಳೀ ನೀನಾಗಿ—
ಕತ್ತಿ ಹಿಡಿ, ಕತ್ತ ಕಡಿ,
ಕೊಲ್ಲರಿಯ ತಾಗಿ !

(ಗಂಡುಸಿಗೆ)

ಗಂಡುಸಾದರೆ ಖಡ್ಗ
ಹಿಡಿ, ರಣಕೆ ನುಗ್ಗು !
ಬೆಂಡೆದೆಯ ಷಂಢನಿಕೆ
ಮೂಲೆಯಲಿ ಮುಗ್ಗು !

(ಗೆಳತಿಗೆ)

ಅಗೊ ಕಣದ ಧೂಳಿ,
ಕರೆಯುತಿದೆ ಕಾಳಿ,
ಕೈಯ ಮುಗಿ
ಹರಗೆ ; ಜಗಿ
ಕಣಕೆ ಜಯಕಾಗಿ !
ಕತ್ತಿ ಹಿರಿ, ಕತ್ತನರಿ
ಕೊಲ್ಲರಿಯ ತಾಗಿ !

(ತೆರಳುವರು.)

ನಮ್ಮ ಸುಖ-ದುಃಖದ ಮಾತು

ಸದ್ಯದ ಪರಿಸ್ಥಿತಿಯು ವ್ಯವಹಾರಜೀವನಕ್ಕೆ ಬಿರುಗಾಳಿಯಂತಾಗಿದೆ. ಈಗ ಕಡಿಮೆ ಬೆಲೆಗೆ ಸಿಕ್ಕುವ ಪದಾರ್ಥವೆಂದರೆ ದುಡ್ಡೊಂದೇ ಎಂದು ಹೇಳಬಹುದು; ಅದಕ್ಕಿಂತಲೂ ಕಡಿಮೆ ಬೆಲೆಯ ವಸ್ತು ಇನ್ನೊಂದು ಇದೆ, ಅದೆಂದರೆ ಜನರ ಜೀವ. ಇಂದು ಜೀವನಕ್ಕೆ ಉಪಯುಕ್ತವೆನ್ನಬಹುದಾದ ಪ್ರತಿಯೊಂದು ಪದಾರ್ಥವೂ ಅವುಗಳ ಬಳಕೆಯ ಅವಶ್ಯಕತೆಯಂತೆ, ಯೋಗ್ಯತೆಯಂತೆ— ಒಂದಕ್ಕೆ ಮೂರರಷ್ಟು— ನಾಲ್ಕರಷ್ಟು— ಐದರಷ್ಟು— ಬೆಲೆ ಏರಿ ಕುಳಿತಿದೆ. ಮುದ್ರಣೋಪಯುಕ್ತ ಪದಾರ್ಥಗಳ ಬೆಲೆಯಂತೂ ಅಳತೆಗೆಟ್ಟು ಬೆಳೆದು ನಿಂತಿದೆ. ಸರಕಾರ ಎಷ್ಟೊಂದು ಬೆಲೆಯ ನಿಯಂತ್ರಣ ಮಾಡಿದರೂ ಲಾಭಗುಳಿತನದ ವ್ಯಾಪಾರಸ್ಥರ ದುರಾಶೆಯ ಮೂಲಕ, ಪೇಟೆಯೆಲ್ಲ ಕಗ್ಗತ್ತಲೆಯ ಪೇಟೆಯಾಗಿಬಿಟ್ಟಿದೆ. ಹೇಳಿದಷ್ಟು ಬೆಲೆ ಕೊಟ್ಟು ಪದಾರ್ಥಗಳನ್ನು ಕೊಳ್ಳಬೇಕು; ಇಲ್ಲವೆ ಪರಿಸ್ಥಿತಿಯ ಬಿಕ್ಕಟ್ಟನ್ನು ಅರಿತು ವ್ಯವಹಾರವನ್ನು ನಿಲ್ಲಿಸಿಬಿಡಬೇಕು— ಇಂತಹ ಸಂದರ್ಭವನ್ನೇ ಕ್ಷಣಕ್ಷಣಕ್ಕೂ ನಾವು ಎದುರಿಸುತ್ತ ಹೊರಟುಬಿಟ್ಟಿದ್ದೇವೆ.

ಸೌಂದಿಗೆ ೨॥ ಆಣೆ ೪ ಆಣೆ ಕಾಗದದ ಬೆಲೆ ಇರುವಾಗ 'ಜಯಂತಿ'ಯನ್ನು, ೩ ರೂಪಾಯಿ ವಾರ್ಷಿಕ ಚಂದಾಹಣಕ್ಕೆ ಸಲ್ಲಿಸುತ್ತ ಬಂದೆವು. ಮುಂದೆ ಸೌಂದಿಗೆ ೬ ಆಣೆಯಂತೆ ಬೆಲೆ ಕೊಡಬೇಕಾಗಿ ಬಂದಾಗಲೂ—ವಾಚಕರ ಅನುಕೂಲತೆಯ ಕಡೆಗೆ ದೃಷ್ಟಿಯನ್ನಿರಿಸಿ—ಚಂದಾಹಣವನ್ನು ಹೆಚ್ಚಿಸದೆ, ನೊದಲಿನ ಬೆಲೆಯಲ್ಲಿಯೆ ಜಯಂತಿಯನ್ನು ಕೊಟ್ಟೆವು. ಆದರೆ ಸೌಂದಿಗೆ ೧೨ ಆಣೆ ೧೪ ಆಣೆ ಕೊಡಬೇಕಾಗಿ ಬಂದಾಗ, ಅನಿವಾರ್ಯವಾಗಿ ೪ ಆಣೆ ವಾರ್ಷಿಕ ಚಂದಾ ಹೆಚ್ಚಿಸಿದೆವು. ಈಗ ಜಯಂತಿಯನ್ನು ಮುಂದುವರಿಸಲೇಬೇಕೆಂಬ ಹಟದಿಂದ ಹೊರಡುವುದಾದರೆ, ಕಾಗದ ವ್ಯಾಪಾರಿಗಳು ಹೇಳಿದಷ್ಟು ಒಳಬೆಲೆಯನ್ನು ಕೊಟ್ಟು ಅದನ್ನು ತೆಗೆದುಕೊಳ್ಳಬೇಕಾಗುವುದು. ನಮ್ಮ ಸಂಗ್ರಹವೆಲ್ಲ ತೀರಿದ ಮೇಲೆ—ಈಗೆರಡು ತಿಂಗಳು—ಒಳಬೆಲೆ ಕೊಟ್ಟು ಕಾಗದವನ್ನೇ ಉಪಯೋಗಿಸಬೇಕಾಗಿ ಬಂದುದರಿಂದ, ಪ್ರತಿಯೊಂದು ಸಂಚಿಕೆಗೂ ಕೇವಲ ಕಾಗದಕ್ಕಾಗಿಯೆ ೩೫೦ ರೂಪಾಯಿಗಳ ಹೆಚ್ಚಿನ ಹೊಣೆಯನ್ನು ವಹಿಸಬೇಕಾಗಿ ಬಂದಿತು. ಮುಂದೆಯೂ ಹಾಗೆಯೆ ಸಾಗಿಸಬೇಕೆಂದರೆ, ಇನ್ನೂ ಹೆಚ್ಚಿನ ನೆಚ್ಚದ ಹೊಣೆಯನ್ನು ಹೊರಬೇಕಾಗುವುದು. ಇಷ್ಟೊಂದು ನೆಚ್ಚ ಮಾಡಬೇಕಾಗಿರುವಾಗ, ಜಯಂತಿಯ ಬೆಲೆಯನ್ನೂ ವಾರ್ಷಿಕ ಚಂದಾಹಣವನ್ನು ಎಷ್ಟೊಂದು ಹೆಚ್ಚಿಸಬೇಕೆಂಬುದು ನಮ್ಮದು ನಮಗೇ ತಿಳಿಯದಂತಾಗಿದೆ. ಎಂತಹ ತೊಂದರೆಗಳು ಬಂದರೂ ಎಷ್ಟೊಂದು ನಷ್ಟ ಸಹಿಸಬೇಕಾಗಿ ಬಂದರೂ— ಈ ಕಷ್ಟಕಾಲದಲ್ಲಿಯೂ— ಜಯಂತಿಯನ್ನು ಬದುಕಿಸಿಕೊಂಡು ಹೋಗಬೇಕೆಂಬುದು ಸಂಚಾಲಕರ ಉತ್ಕಟ ಅಪೇಕ್ಷೆಯಾಗಿದೆ. ಅದಕ್ಕಾಗಿ ಹಲವು ಬಗೆಯ ಪ್ರಯೋಗ ಪ್ರಯತ್ನಗಳು ನಡೆದಿವೆ. ಈಗ ಮತ್ತೆ ಹೆಚ್ಚಿಸಿರುವ ೪ ಆಣೆ (ವಾ. ಚ. ೪ ರೂಪಾಯಿ) ಚಂದಾಹಣದಿಂದ, ಜಯಂತಿಯ ವ್ಯವಹಾರದಲ್ಲಿ ಲಾಭವೇನೂ ಆಗದಾದರೂ, ನಷ್ಟದ ಭಾರ ಕೊಂಚ ಕಡಿಮೆಯಾಗಬಹುದೆಂದು ಸಂಚಾಲಕರ ನಿರೀಕ್ಷೆ. ಜಯಂತಿಯ ಚಂದಾದಾರರು, ಹೆಚ್ಚಿಸಿದ ಚಂದಾಹಣವನ್ನು ಹೊರೆಯೆಂದು ತಿಳಿಯದೆ, ಎಂದಿನಂತೆ ಜಯಂತಿಯನ್ನು ಸ್ವಾಗತಿಸಿ ಪುರಸ್ಕರಿಸುವರೆಂದು ನಮ್ಮ ನಂಬುಗೆ.

ಏಜಂಟರು ಇದುವರೆಗೆ ನಂಬುಗೆಯಿಂದ ವ್ಯವಹರಿಸಿ, ಜಯಂತಿಗೆ ಶುಂಬ ನೆರವನ್ನು ಕೊಟ್ಟಿದ್ದಾರೆ. ಆದುದರಿಂದ ಅವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುವುದು ಅವಶ್ಯಕ ಕರ್ತವ್ಯವಾಗಿದೆ. ಆದರೆ ಸದ್ಯ ಕಾಗದದ ಅಭಾವದ ಮೂಲಕ, ಏಜಂಟರ ಮೂಲಕ ನಡೆಯಿಸುತ್ತಿದ್ದ ಜಯಂತಿಯ ವ್ಯವಹಾರವನ್ನು ನಿಲ್ಲಿಸಬೇಕಾಗಿ ಬಂದಿದೆ. ಕಾರ್ಯಾಲಯಕ್ಕೆ ೪ ರೂಪಾಯಿ ವಾರ್ಷಿಕ ಚಂದಾಹಣ ಕಟ್ಟಿ, ಚಂದಾದಾರರೆಂದು ರಜಿಸ್ಟರಿನಲ್ಲಿ ಹೆಸರು ಹಚ್ಚಿಸಿದವರ ನುಟ್ಟಿಗೆ ನಾಶ್ರ ಪ್ರತಿಗಳನ್ನು ಪ್ರಕಟಿಸಲಾಗುತ್ತದೆ. ಈಗ ನಮಗೆ ಸಿಕ್ಕುತ್ತಿರುವ ಕಾಗದದ ಬೆಲೆಯ ಪ್ರಮಾಣದಿಂದ, ಜಯಂತಿಯ ಬಿಡಿಸಂಚಿಕೆಗಳ ಬೆಲೆಯನ್ನು ೦-೪-೦ ಇಟ್ಟರೂ ಮೂಲಬೆಲೆ ಗಿಟ್ಟುವುದಿಲ್ಲ. ಹೀಗಿರುವಾಗ ಎಷ್ಟೆಂದು ಬೆಲೆ ಹೆಚ್ಚಿಸಬೇಕು? ಏಜಂಟರು ಅವುಗಳನ್ನು ಹೇಗೆ ಮಾರಬೇಕು? ಎಂಥಲೆ ಸರಿಯಾದ ಬೆಲೆಗೆ ನಮಗೆ ಕಾಗದ ದೊರೆಯುವ ವರೆಗೆ, ಎಲ್ಲ ಏಜಂಟರುಗಳೊಂದಿಗಿನ ವ್ಯವಹಾರವನ್ನು ನಿಲ್ಲಿಸಬೇಕಾದ ವಿಷಾದಕರ ಸಂದರ್ಭ ನಮಗೆ ಬಂದೊದಗಿದೆ. ಜಯಂತಿಯ ಅಭಿಮಾನಿಗಳಾದ ಎಲ್ಲ ಏಜಂಟರೂ— ವಸ್ತುಸ್ಥಿತಿಯನ್ನು ಅರಿತು—ವಿಪರೀತ ಭಾವನೆಯನ್ನೇನೂ ಮಾಡಿಕೊಳ್ಳಕೂಡದೆಂದು ಕೈಮುಗಿದು ಕೋರುವೆವು. ಕಾಗದ ದೊರೆತಿಸುವುದಕ್ಕಾಗಿ ಹಲವು ರೀತಿಗಳಿಂದಲೂ ಪ್ರಯತ್ನ ನಡೆಯಿಸಿದ್ದೇವೆ. ಪ್ರಯತ್ನ ಬೇಗನೆ ಫಲಕಾರಿಯಾದಲ್ಲಿ, ಮತ್ತೆ ಏಜನ್ಸಿ ವ್ಯವಹಾರವನ್ನು ಮುಂದುವರಿಸಬಹುದು.

ಇದೇ ಏಪ್ರಿಲ್ ಸಂಚಿಕೆಯಿಂದಲೆ ಜಯಂತಿಯ ವಾರ್ಷಿಕ ಚಂದಾಹಣವನ್ನು ನಾಲ್ಕು ರೂಪಾಯಿ ಎಂದು ಹೆಚ್ಚಿಸಲಾಗಿದೆ. ಒಳ್ಳೆಯ ಕಾಲ ಬರುತ್ತಲೆ ಚಂದಾಹಣವನ್ನು ಮೊದಲಿನಂತೆ ಮೂರು ರೂಪಾಯಿಗಳಿಗೆ ಇಳಿಸಬಹುದು; ಇಲ್ಲವೆ ಇದೇ ಚಂದಾಹಣವನ್ನು ಸ್ಥಿರವಾಗಿರಿಸಿ, ಪತ್ರಿಕೆಯ ಅಂತರಂಗ-ಬಹಿರಂಗ ಸೌಂದರ್ಯಗಳನ್ನೂ ಪುಟಗಳನ್ನೂ ಹೆಚ್ಚಿಸಬಹುದು. ಅಂತಹ ಕಾಲ ಬೇಗನೆ ಬರಲೆಂದು ನಮ್ಮೆಲ್ಲರ ಆಶೆಯೂ ಕಾರ್ಯವೂ ಇರಬೇಕು.

—ಸಂಪಾದಕರು



ಅತಿ ಪಕ್ಷಾತೀತ ಇತಿ

ಇತ್ತೀಚ್ಚಲಾಗಿ 'ಪಕ್ಷಾತೀತರ ಪರಿಷತ್ತು'ಗಳ ಹೆಚ್ಚಾಗಿ ನಡೆದುದನ್ನು ಕಂಡು, ಕೆಲ ವಾಚಕರು ಮಂಗರಾಯನಿಗೆ ಕಾಗದಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಎರಡು ಪ್ರಶ್ನೆಗಳು : (೧) 'ಪಕ್ಷಾತೀತ' ಎಂದರೇನು? (೨) ಬರಿಯ ಈ ಪರಿಷತ್ತುಗಳೇ ಯಾಕೆ ನಡೆದಿವೆ? ಸರಿ. ನೊದಲು 'ಪಕ್ಷಾತೀತ' ಎಂಬುದರ ವಿಷಯವಾಗಿ. ಇಲ್ಲಿ ಎರಡು ಶಬ್ದಗಳಿವೆ. ಪಕ್ಷ+ಅತಿ, ಕೊನೆಗೆ 'ಈತ' ಎಂಬ ಸರ್ವನಾಮವಿದೆ. ಅದಕಾಗಿ ಈ ಶಬ್ದದ ಒಟ್ಟು ಅರ್ಥವೆಂದರೆ— ಅತಿ- ಎಂದರೆ ಬಹಳ ಪಕ್ಷಗಳನ್ನು ಸೇರಿಕೊಂಡವ ಈತ- ಎಂದು. ಬಹಳ ಪಕ್ಷಗಳನ್ನು ಒಂದೇ ಕಾಲಕ್ಕೆ ಸೇರಿಕೊಳ್ಳಲು ಶಕ್ಯವಿದೆಯೆ? ಇಲ್ಲ. ತಸ್ಮಾತ್, ಒಂದರ ತರುವಾಯ ಒಂದರಂತೆ ಪಕ್ಷವನ್ನು ಬದಲಾಯಿಸುವವ ಈತ ಎಂದಂತಾಯಿತಲ್ಲವೆ? ಈ ಶಬ್ದಕ್ಕೆ ಇನ್ನೂ ಬಂದರ್ಥವಿದೆ, ಎಚ್ಚರ! ಅದೆಂತೆನೆ:— ಪಕ್ಷ= ೧೫ ದಿವಸ, ಅತೀತ= ದಾಟಿದವ. ಎಂದರೆ ೧೫ ದಿನಸಗಳಿಗೆ ಹೆಚ್ಚಾಗಿ ಎಂದರೆ ತಿಂಗಳಿಗೊಮ್ಮೆ ಇಲ್ಲವೆ ವರ್ಷಕ್ಕೊಮ್ಮೆ ಎನ್ನಿರಿ (ಸಾರಾಂಶ ಸಭ್ಯಕ್ಕೊಮ್ಮೆ) ರಾಜಕಾರಣದಲ್ಲಿ ಕೈಹಾಕುವವನಿಗೆ ಪಕ್ಷಾತೀತ ಎಂದು ಹೆಸರು. ಇನ್ನು ಈಗಿನ ಕಾಲದಲ್ಲಿ ಬರಿಯ ಈ ಪರಿಷತ್ತುಗಳೇ ಯಾಕೆ ನಡೆದಿವೆ— ಎಂಬುದಕ್ಕೆ ಮಾತ್ರ ಮಂಗರಾಯನಲ್ಲಿ ರಾಮಬಾಣದಂತಹ ಉತ್ತರವಿಲ್ಲ. ಯಾಕೆಂದರೆ ಯಾವ ಕಾರಣವನ್ನು ಸೂಚಿಸೋಣ? ಸರಕಾರವು ಅಲಕ್ಷ್ಯಮಾಡುವ ಪರಿಷತ್ತುಗಳೆಂದರೆ ಇವೇ; ಅದಕಾಗಿ ಇವುಗಳಿಗೆ ಸಂರಕ್ಷಣಾಕಾಯಿದೆಯು ಯಾವ ಕಲಮನ್ನೂ ಅನ್ವಯಿಸುವುದಿಲ್ಲ. ಅದಕಾಗಿ ಇವೇ ಬಹಳವಾಗಿ ನಡೆಯುವುವು ಎನ್ನೋಣವೆ? ಅಥವಾ—ಹೆಚ್ಚಗೇನು? ಯುದ್ಧಕಾಲದಲ್ಲಿ, ಸಂರಕ್ಷಣಾಕಾಯಿದೆಯ ಅಳಿಕೆಯಲ್ಲಿ ಸೈನಿಕರಿಗೆ ಬಂಧನವೆ ಇಲ್ಲವಲ್ಲ ಎಂಬುದು ಯಾರಿಗೆ ಆಶ್ಚರ್ಯವನ್ನುಂಟುಮಾಡುವುದು? ಆರ್ಥಾತ್, ಮನಸಂಜನೆಯ ಕಾರ್ಯಕ್ರಮಗಳು ಹೆಚ್ಚಾಗಿ ಕಂಡುಬಂದರೆ ಸಹಜವೆ ಅಲ್ಲವೆ? ಅಥವಾ ದೇಶದಲ್ಲಿ ರಾಜಕೀಯ ಪಕ್ಷಗಳು ಅತಿಯಾದಂತೆ ಪಕ್ಷಾತೀತ ಪರಿಷತ್ತುಗಳೂ ಹೆಚ್ಚಾಗುವುವು ಎನ್ನೋಣವೆ—? ಅಥವಾ— ಅಯ್ಯೊ! ಮಂಗರಾಯನಿಗೂ ಬೆದರಿಕೆ! ಯಾಕೆನ್ನುವಿರಾ? ಮಂಗಮಹಾತ್ಮರಾದ ರಾಜಾಜಿಯವರು ಇಂದು ಪಕ್ಷಾತೀತರು!

* * *

ಬರಗಾಲ-ನಿಯಂತ್ರಣ

ಇತ್ತೀಚ್ಚಲಾಗಿ ಹಿಂದುಸ್ತಾನದ ಹೊಸ ಫ್ಯಾಶನ್ ನಂತಾಗಿದ್ದ ಬರಗಾಲದ ಬಗ್ಗೆ ಒಂದು ಮೋಜು ನಡೆದುದು ಮಂಗರಾಯನ ದೃಷ್ಟಿಗೆ ಬಿದ್ದಿದೆ. ಆರ್ಥಾತ್, ಸುದ್ದಿನಿಯಂತ್ರಣಕ್ಕಾಗಿ ಇದನ್ನು ಬಯಲಿಗಿಡುವಂತಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಆದುದರಿಂದ, ಕೇಜಕರೆ— ಅಲ್ಲಲ್ಲ, ವಾಚಕರೆ— ನೋಡಿದಿರಾ, ಮಂಗರಾಯನ ಎಸ್ಸು ನುನೋವ್ಯಗ್ರನಾಗಿದ್ದಾನೆ! ಕಾರಣ ದಯವಿಟ್ಟು ಇದನ್ನೋದಿದಮೇಲೆ ಇನ್ನೊಬ್ಬರಿಗೆ ಹೇಳುವ ಪ್ರಚಾರಕಾರ್ಯಕ್ಕೆ ತೊಡಗಬೇಡಿರಿ! ಇನ್ನು ಕೇಳಿದ ವಾಚಕಜನನೇಜಯಾ— "ಒಂದು ಪ್ರದೇಶದಲ್ಲಿ ಬರಗಾಲವು ಅತ್ಯಂತ ಭೀಕರವಾಗಿತ್ತೆಂಬುದನ್ನು ಒಬ್ಬನು ಓದಿದನು, ಪಾಪ! ಯುದ್ಧನಿಮಿತ್ತವಾಗಿ ಅನೇಕರು ಬೇರೆ ಬೇರೆ ಕಾರ್ಯಗಳಲ್ಲಿ ಕೊಡಗಿದ್ದುದರಿಂದ ದುಡ್ಡನ್ನು ಗಳಿಸಿಕೊಳ್ಳುವ ಕಾರ್ಯವು ಅವನ ಮೇಲೆಯೆ ಹೆಚ್ಚಾಗಿ ಬಿದ್ದಿತು. ಅವನಾದರೂ ದೊರಕಿದ ೮-೧೦ ಲಕ್ಷಗಳನ್ನಿ ಒಂದೆರಡು ಸಾವಿರ. ವನ್ನಾದರೂ ಸತ್ಕಾರ್ಯದಲ್ಲಿ ವಿನಿಯೋಗಿಸಬೇಕೆನ್ನುತ್ತಿದ್ದ. ಹೀಗಾಗಿ 'ಬರಗಾಲ'ವು ಅವನ ಲಕ್ಷ್ಮಿಯನ್ನೆಳೆಯಿತು. ಆದರೇನು? ಎಷ್ಟೊಂದು ಓದಿದರೂ ಬರಗಾಲದ ಕಲ್ಪನೆಯೆ ಅವನಿಗೆ ಆಗಲೊಲ್ಲದು! 'ಬಿಸಿಲಿನಿಂದ ಬರಗಾಲಕ್ಕೆ ಇನ್ನಿಷ್ಟು ಭೀಕರತೆ ಬಂದಿದೆ' ಎಂದು ಓದಿದನು, 'ಧನ-ಕರುಗಳೆ ಇಲ್ಲದಂತಾಗುತ್ತಲಿವೆ' ಎಂದೂ ಓದಿದನು. 'ಜನರಿಗೆ ತಮ್ಮ ಕಾಲದೆಲೆ ತಾವು ನಿಲ್ಲುವಂತೆ ನೂಡುವುದೇ ಬರಗಾಲನಿವಾರಣಾ-ಸಮಿತಿಯ ಉದ್ದೇಶ' ಎಂದೂ ಓದಿದನು, ತಲೆತುರಿಸಿದನು. ಕ್ರಮೇಣ ತಿಳಿದಂತೆನಿಸತೊಡಗಿತು. ಮತ್ತೊಮ್ಮೆ ಓದಿಕೊಂಡನು. ನೋಲಿನ ನೂರೂ ಮಾತುಗಳನ್ನು ಒಂದೆಡೆ ಸೇರಿಸಿದನು. ಕೂಡಿ ಓದಿದನು, ಫಕ್ಕನೆ ನಕ್ಕನು, ಚಕ್ಕಾಳೆ ತಟ್ಟಿದನು, ಪುಟಿದೆದ್ದನು. ಆರ್ಥವಾಯಿತು. ಕೂಡಲೆ ೨ ಪಾನಿರ ಬೆಲೆಬಾಳುವ ವಸ್ತುವನ್ನು ಕಳುಹಿಸಿಕೊಟ್ಟನು. ನಿವಾರಣಾಸಮಿತಿಯವರಿಗೆ ಆನಂದ; ವೃತ್ತಪತ್ರಗಳಲ್ಲಿ ಧಾರಾಕ್ಷರ. ಅಂತೂ ಸಾವಾನು ಕೈಸೇರಿದೊಡನೆಯೆ ನಿವಾರಣಾಸಮಿತಿಯವರು ಅವನ್ನು ಒಡೆದು ನೋಡಿದರು— ನೋಡಿದರೆ— ನೂರುಗಟ್ಟಲೆ ಚಿಕ್ಕಲಿಗಳು! ಬೇರೆಬೇರೆ ಆಕಾರದ ಜೋಡುಗಳು! ಒಳಗೊಂದು ಚೀಟಿ. 'ಬರಗಾಲಕ್ಕೆ ನನ್ನ ಕಾಣ್ಕೆ' ಎಂದು! ಹಹ! ಆಂದಿಲೆ ತಿಳಿಯದಿದ್ದರೂ ನಗಬೇಕು ಎಂದು ಪ್ರಾರ್ಥನೆ.

* * *

ಪುತ್ರಸಂಸ್ಕೃತಿ

'ಯುದ್ಧದ ತರುವಾಯದ ಪರಿಸ್ಥಿತಿಯಲ್ಲಿ ದಂಪತಿಗಳು ಕುಟುಂಬವನ್ನು ದೊಡ್ಡದಾಗಿ ಬೆಳೆಯಿಸುವಂತೆ ಸರಕಾರವು ಉತ್ತೇಜನವನ್ನು ಕೊಡಬೇಕು' ಎಂದು ಇಂಗ್ಲಂಡಿನ ಮುಖ್ಯ ಮಂತ್ರಿ ಚರ್ಚಿಲ್‌ರು ಮೊನ್ನೆ ಮೊನ್ನೆ ಹೇಳಿದ್ದನ್ನು ಕೇಳಿ ಮಂಗರಾಯನು ಮತಿಭ್ರಾಂತನಾದನು—ಅಥವಾ ಮಂಗರಾಯನ ಭ್ರಾಂತಿ ಬಯಲಾಯಿತೆನಿಬಹುದೆ? ಹೆಚ್ಚು ಮಕ್ಕಳನ್ನು ಹಡೆಯುವುದರ ಮಹತ್ತ್ವ ಬ್ರಿಟಿಶರಿಗೆ ಇಂದು ತಿಳಿಯಿತೆ? ಎಂದರೆ ಇಂದಿನ ವರೆಗೂ ಬ್ರಿಟಿಶರು ಸಂಸ್ಕೃತಿಯಲ್ಲಿ ಇಷ್ಟು ಹಿಂದುಳಿದಿದ್ದರೆ—ಎಂದು ಭಾರತೀಯ ಸಂಸ್ಕೃತಿಯ ಹೆಮ್ಮೆಯಿಂದ ಮಂಗರಾಯನು

ಕೇಳುತ್ತಲಿದ್ದಾನೆ. 'ಯುದ್ಧದ ತರುವಾಯ' ಎಂತೆ! ಆದರೆ ಯುದ್ಧದ ಕಾಲದಲ್ಲಿ ಕೂಡ ಅಸಂಖ್ಯಪುತ್ರ-ಅನುಕೂಲತೆಗಳು ಎಷ್ಟಿವೆ ಎಂಬುದು ಭಾರತದಲ್ಲಿ ಧನಿಕನೂ ಬಡವನೂ ಏಕಮತದಿಂದ ತೋರಿಸುತ್ತಲಿದ್ದಾನೆ. ಇದೋ ಧನಿಕನ ದೃಷ್ಟಾಂತ: ಒಬ್ಬ ಮಗ ಸೈನ್ಯವನ್ನು ಸೇರಿದ್ದಾನೆ, ಒಬ್ಬ ಮಗ ಶಾಸನಸಭೆಯಲ್ಲಿದ್ದಾನೆ, ಒಬ್ಬ ಕಾಂಗ್ರೆಸಿನವರೊಡನೆ ಕಾರಾಗೃಹದಲ್ಲಿದ್ದಾನೆ, ಇನ್ನೊಬ್ಬ ಚಿಲ್ಲರೆ ಸಂಗ್ರಹಿಸಿ ಸಾಮಾನಿನ ಕಾಂಟ್ರಾಕ್ಟರನಾಗಿದ್ದಾನೆ! ಇಂತಹ ಬುದ್ಧಿವಂತ ನಾಲ್ಕುಮೊಗದ—ಅತವಿವ ನಾಲ್ಕು ತಲೆಗಳ—ಬ್ರಹ್ಮನಿಗಾದರೂ ಇದ್ದೀತೆ? ಇನ್ನು ಬಡವನ ದೃಷ್ಟಾಂತವನ್ನು ನೋಡಬಹುದು; ಒಬ್ಬ ಮಗ ಸಕ್ಕರೆಯ ಅಂಗಡಿಗೆ, ಇನ್ನೊಬ್ಬ ಪೀಧಾನ್ಯದ ಅಂಗಡಿಗೆ, ಮೂರನೆಯವ ಮತೊಂದು ಸಕ್ಕರೆಯ ಅಂಗಡಿಗೆ, ನಾಲ್ಕನೆಯವ ಶುಶ್ರೂಷಾವೃತ್ತಿಗೆ, ಐದನೆಯವ ಬರಗಾಲದ ಶಿಬಿರದಲ್ಲಿ, ಆರನೆಯವ—ಮುಂತಾಗಿ ಮುಂತಾಗಿ-ಇಷ್ಟೇಕೆ! ನಮ್ಮ ಸಂಪ್ರದಾಯದಲ್ಲಿ 'ಪುತ್ರ' ಶಬ್ದದ ವ್ಯುತ್ಪತ್ತಿ ಇದೆ, 'ಪುಕ್ಕಟೆಯಾಗಿ ತ್ರಾಯತೇ ಇತಿ ಪುತ್ರಃ' ಎಂದು!

ಸಾದರ ಸ್ವೀಕಾರ

೬೩. **ಸಚಿತ್ರ ಕ್ಯಾಲೆಂಡರ್** (೧೯೪೩ನೆಯ ವರ್ಷ) ಧಾರವಾಡದ—ವಿವಿಧ ಕಲೆಗಳ ತಿಳಿವಳಿಕೆಯನ್ನು ಪಡೆದಿರುವ ಶ್ರೀಮಾನ್ ಧರ್ಮರಾಜ ರಾಯಚೂರ ಅವರು ಇದನ್ನು ಅನುಗೊಳಿಸಿದ್ದಾರೆ. ಕ್ಯಾಲೆಂಡರಿನ ಮೇಲ್ಗಡೆಗಿದ್ದ ಚಿತ್ರ ಕೈಯಿಂದ ಬರೆದುದಿದ್ದು ಸುಂದರವಾದ ನಸ್ನಿವೇಶವನ್ನು ರೂಪಿಸಿದುದಾಗಿದೆ. ತೀರ ಹೊಸಮಾದರಿಯ ಪ್ರಯತ್ನ.

೬೪. **ಕಿಚ್ಚು** (ಕತೆಗಳ ಸಂಗ್ರಹ). ಬರೆದವರು ಶ್ರೀ. ಬಿ. ಅಶ್ವತ್ಥನಾರಾಯಣ ರಾಯರು. ಪ್ರಕಾಶಕರು ಶ್ರೀ. ರಾ. ಮೇ. ಗಂಗಾವತಿ, ಆದರ್ಶ ಸಾಹಿತ್ಯ ಪ್ರಕಟನ ಮಂದಿರ, ಗೌಳೀಗುಡ, ಹೈದರಾಬಾದ್. ನಾಗಾಟಗಾರರು: ಶಾರದಾ ಮಂದಿರ, ಸುಲ್ತಾನ್ ಬಝಾರ್, ಹೈದರಾಬಾದ್.

೬೫. **ಆಶುನಾಟಕಗಳು** (ಮೂರು ಏಕಾಂಕದೃಶ್ಯಗಳು) ಸಂಪಾದಕರು ಶ್ರೀಮಾನ್ ಜಿ. ಬಿ. ಜೋಶಿ. ಧಾರವಾಡದ ಮನೋಹರ ಗ್ರಂಥಮಾಲೆಯ ಸಾಹಿತ್ಯೋತ್ಸವ ಪ್ರಕಟನೆ. ಕ್ರೌ. ಆ. ೬೦ ಪುಟಗಳು. ಬೆಲೆ ೦-೧೦-೦.

೬೬. **ಮುನಸಿಪಾಲಿಟಿಗಳು** (ವಿವರಣಾತ್ಮಕ ಗ್ರಂಥ) ಬರೆದವರು ಶ್ರೀಮಾನ್ ಎಚ್. ಕೃಷ್ಣರಾವ ಎಂ. ಎ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ಒಳನೆಯ ಗ್ರಂಥ. ಫ್ಲೂ. ಕ್ಯಾ. ಆ. ೬೨ ಪುಟಗಳು. ಬೆಲೆ ೦-೩-೦.

೬೭. **ಶಿರ್ದಿಮಹಾತ್ಮಾ ಶ್ರೀ ಸಾಯಿಬಾಬಾ** (ಜೀವನವೃತ್ತ). ಬರೆದವರು 'ಧನ್ವಂತ' ಬೆಂಗಳೂರು. ಪ್ರಕಾಶಕರು ಮೆ. ಎಚ್. ಎನ್. ರಾವ್ ಅಂಡ್ ಬ್ರದರ್ಸ್ ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ—ಬೆಂಗಳೂರು ನಗರ. ಡೆ. ಅ. ೪ ಪುಟಗಳು.

೬೮. **ಆಯುರ್ವೇದ ರಸಶಾಲೆಯ ಸಚಿತ್ರ ಕ್ಯಾಲೆಂಡರು.** ಬೆಲೆ ೦-೩-೦.

ಪುಣೆಯ ಆಯುರ್ವೇದ ರಸಶಾಲೆಯ ಹುಬ್ಬಳ್ಳಿ ಶಾಖಾ ಕಛೇರಿಯಿಂದ ಬಂದಿರುವ ಈ ಸುಂದರ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ. ಇದರಲ್ಲಿಯ ಮುದ್ದುಮುದ್ದಾದ ಮಗುವಿನ ತ್ರಿವರ್ಣಚಿತ್ರವು ತುಂಬ ಆಕರ್ಷಕವಾಗಿದೆ.

೬೯. **ಸುಬೋಧ** (ಮಾಸಪತ್ರಿಕೆಯ ೧೪ನೆಯ ವರ್ಷಾರಂಭ ಸಂಚಿಕೆ) ಸಂಪಾದಕರು ಶ್ರೀಮಾನ್ ಎಂ. ರಾಮರಾಯರು, ಸುಬೋಧ ಪ್ರಕಟನಾಲಯ, ಬೆಂಗಳೂರು ನಗರ. ಕ್ರೌ. ಡಿ ೬೪ ಪುಟಗಳು.

ಸಂಪಾದಕರ ಸಾಹಿತ್ಯ ತಪಸ್ಸು ದೊಡ್ಡದು. ಅವರ ದೃಢನಿಶ್ಚಯ ಅವರ ಕಾರ್ಯದ ಯಶಸ್ವಿತೆಗೆ ಕಾರಣವಾಗಿದೆ. ತನ್ನ ಹದಿನೇಳು ವರ್ಷಗಳನ್ನು ಕನ್ನಡದ ಸೇವೆ ಮಾಡುತ್ತ ಸುಲಭವಾಗಿ ಕಳೆದಿರುವಂತೆಯೆ ಸುಬೋಧವು ಮುಂದಿನ ಬಹುಕಾಲದ ಜೀವನವನ್ನೂ ಕನ್ನಡನಾಡಿನ ಏಳಿಗೆಯ ಕಾರ್ಯಕ್ಕಾಗಿ ಕಳೆಯುತ್ತಿರಲಿ! ಪ್ರಸ್ತುತ ವಿಶೇಷ ಸಂಚಿಕೆ ಹಲವು ವಿದ್ವಜ್ಜನರ ಲೇಖನ-ಕವನ-ಕಥೆಗಳಿಂದ ಕೂಡಿ ವಾಙ್ಮಯವಾಗಿದೆ. ಇಂದಿನ ಕಾಗದದ ಬರಗಾಲದಲ್ಲಿ, ಮೈಸೂರು ದೇಶದ ಎಲ್ಲ ಪತ್ರಿಕೆಗಳಿಗೂ ಕಾಗದದ ಸೌಲಭ್ಯವಿರುವುದೊಂದು ತುಂಬ ಅನುಕೂಲವಾಗಿದೆ. ಮೈಸೂರಿನ ಆದರ್ಶ ಸರಕಾರ, ಪತ್ರಿಕೆಗಳಿಗೆ ಈ ಅನುಕೂಲತೆಯನ್ನು ಒದಗಿಸಿಕೊಟ್ಟು ಪ್ರಶಂಸನೀಯಕಾರ್ಯ ಮಾಡಿದೆಯೆಂದು ಹೇಳಬಹುದು.

೭೦. **ರಾಣೆಬೆನ್ನೂರು ಕರ್ನಾಟಕ ಸಂಘದ ೬ನೆಯ ವರ್ಷದ ವರದಿ**—ಕಾರ್ಯದರ್ಶಿ ಶ್ರೀಮಾನ್ ಟಿ. ಡಿ. ನಾಯಿಕ, ಬಿ. ಎ. ಬಿ. ಟಿ. ಡಿ. ಪಿ. ಡಿ. ಡೆ. ಅ. ೪ ಪುಟಗಳು.

ಧಾರವಾಡ ಜಿಲ್ಲೆಯಲ್ಲಿರುವ ಬೇರೆ ಬೇರೆ ಕರ್ನಾಟಕಸಂಘಗಳಲ್ಲಿ ಹೆಚ್ಚು ಕಾರ್ಯಕಾರಿಯಾಗಿರುವುದೆಂದರೆ ರಾಣೆಬೆನ್ನೂರಿನದೆಂದು ಹೇಳುವಂತಿದೆ. ಇದಕ್ಕೆ ಕಾರಣವೆಂದರೆ ಸಂಘದ ಕಾರ್ಯಕರ್ತರಲ್ಲಿರುವ ನಿಜವಾದ ಕನ್ನಡದ ಅಭಿಮಾನ; ಅದಕ್ಕಾಗಿ ಇರಬೇಕಾದ ಕರ್ತವ್ಯಜಾಗೃತಿ. ಜಿಲ್ಲೆಯ ಮಿಕ್ಕ ಕಡೆಯವರೂ ರಾಣೆಬೆನ್ನೂರಿನ ಸಂಘವನ್ನು ಕಣ್ಣೆದುರು ಇರಿಸಿಕೊಳ್ಳುವಂತಿದೆ.

ಸ್ವೋಪಜ್ಞತೆ

ಶ್ರೀ. ಬಿದರಕುಂದಿ ವೆಂಕಟರಾಯರು, ನಂಜಗಡ

★

ಪ್ರತಿಯೊಬ್ಬ ಮಾನವಪ್ರಾಣಿಗೆ ತನ್ನ ಯಶೋದುಂದುಭಿಯನ್ನು ಮೊಳಗಿಸುವ ಮಹತ್ತ್ವಾಕಾಂಕ್ಷೆಯು ಹುಟ್ಟುಗುಣವಾಗಿದ್ದರೂ, ಅದರ ಈಡೇರಿಕೆಯು ಅವರವರ ವ್ಯಕ್ತಿವೈಶಿಷ್ಟ್ಯದಲ್ಲಿಯೆ ಇರುವುದು. ಜಗತ್ತಿನಲ್ಲಿಯ ಕೀರ್ತಿಶಾಲಿ ಮಹಾಪುರುಷರ ಚರಿತ್ರೆಗಳು ಅವರಲ್ಲಿದ್ದ ಸ್ವೋಪಜ್ಞತೆಯನ್ನೇ ನಮಗೆ ಹೇಳುವುವು. ಹಣ, ಗುಣ, ವಿದ್ಯೆ ಮತ್ತು ಕಲೆ ಇತ್ಯಾದಿಗಳನ್ನು ಬಿಟ್ಟರೂ, ಸಣ್ಣ ಸಣ್ಣ ಮಾತಿನಲ್ಲಿಯೂ ತಾನು ಗೆಲುವಿನಿಂದ ಬಾಳಬೇಕೆಂಬ ಹವ್ಯಾಸದ ತೊಳಲಾಟ ಎಲ್ಲರಲ್ಲಿಯೂ ಇರುವುದು. ಇದರಲ್ಲಿ ಯಶಸ್ವಿಯಾದವನು ಚತುರ; ಅಯಶಸ್ವಿಯಾದವನು ಮೂರ್ಖ.

ಯಶಸ್ವಿಗಳ ಸಂಖ್ಯೆ ತೀರ ವಿರಳ, ಅಯಶಸ್ವಿಗಳು ನಾಯಿಛತ್ತರಿಗೆಯಂತೆ ಆದೃಶ್ಯವಾಗುವುವು; ಆದರೆ ಯಶಸ್ಸಿನ ಅಪೇಕ್ಷೆಯಿಂದ ಪ್ರಯತ್ನಿಸುವ ಜನರು ಬಹಳ. ಯಶಸ್ವೀಜನರನ್ನು ನಾವು ಆದರದಿಂದ ನೋಡುತ್ತೇವೆ ಮತ್ತು ಅವರಂತೆ ಆಗಲು ಹಾತೊರೆಯುತ್ತೇವೆ. ಶೂರ ಸೇನಾಪತಿ, ಬಲಾಢ್ಯ ವ್ಯಾಪಾರಿ, ಚತುರ ವಕೀಲ, ನಾಮಾಂಕಿತ ವೈದ್ಯ, ಇಂಪಾಗಿ ಹಾಡುವ ಗಾಯಕ, ವಿದಗ್ಧ ಕಲಾಕೋವಿದ, ಪ್ರಧಾನಸಾಪಿತಿ, ಶ್ರೇಷ್ಠಕವಿ ಮತ್ತು ಸಿನೇಮಾ ನಟ— ಇತ್ಯಾದಿ ಹೆಸರುವಾಸಿಗಳು, ತಮ್ಮ ವಕ್ತಿತ್ವದಿಂದಲೇ ಯಶಸ್ವಿಗಳಾಗುವರು. ಅವರ ಪ್ರತಿಯೊಂದು ನಡೆನುಡಿಗಳನ್ನೂ, ಆಚಾರ-ವಿಚಾರಗಳನ್ನೂ ಮತ್ತು ಆಗು-ಹೋಗುಗಳನ್ನೂ ನಾವು ಸೂಕ್ಷ್ಮರೀತಿಯಿಂದ ನೋಡಿ, ಅವರ ಅನುಕರಣ ಮಾಡಲೂ ಪ್ರಯತ್ನಿಸುತ್ತೇವೆ.

ಮನುಷ್ಯನು ಅನುಕರಣ ಪ್ರಿಯನಿರುವನು; ಆದರೆ ಸ್ವಂತದ ವ್ಯಕ್ತಿತ್ವವನ್ನು ಮರೆತು, ಯಶಸ್ವಿ ಮನುಷ್ಯನ ಛಾಟಿಯನ್ನೇ ತೀಡಿದರೆ, ಕೀರ್ತಿಶಾಲಿಯಾಗಲಾರ; ಅವರವರ ಸ್ಥಾನ, ಕಾಲಮಾನ, ಪರಿಸ್ಥಿತಿ ಬೇರೆ ಬೇರೆ ಇರುವುದುಂಟು.

ವ್ಯಕ್ತಿಗಳಿರುವಷ್ಟೆ ಪ್ರಕೃತಿಗಳು ಇದ್ದರೂ, ಅವು ಒಂದಕ್ಕೊಂದು ಹೋಲಲಾರವು. ಅಂತೆಯೆ ಅನುಕರಣ ಮಾಡಬೇಕೆಂಬ ಇಚ್ಛೆಯು ಪ್ರತಿಯೊಬ್ಬನಲ್ಲಿ ಹುಟ್ಟುವುದು. ತಾಯಿಯ ತೊಡೆಯಮೇಲೆ ಇರುವ ಅರ್ಭಕನಿಗೂ, ತಂದೆ-ತಾಯಿ—ಬೇರೆ ಬಳಗದವರಂತೆ ಮಾತನಾಡಬೇಕೆಂದೂ, ನಗಬೇಕೆಂದೂ, ನಡೆಯಬೇಕೆಂದೂ ಅನಲವಿಕೆ ಇರುವುದು. ಮತ್ತು ಅವರ ಅನುಕರಣವನ್ನೂ ಮಾಡುವುದು (ಪ್ರಯತ್ನ). ಆದರೆ ಮಾತು, ನಗು, ನಡೆಯುವುದರಲ್ಲಿ ಅಥವಾ ಆಟ-ಹಾವ-ಭಾವಗಳಲ್ಲಿ ಮೂಲತಃ 'ತನ್ನತನ'ವಿದ್ದರೆ ಅದೆಂತಹ ಮುದ್ದು ಮಗುವೆನಿಸುವುದು!

ಚತುರತನದ ಅನುಕರಣವನ್ನು ಮಾಡುವಾಗ ಅದರಲ್ಲಿ 'ತನ್ನತನ'ವನ್ನು ಉಪಯೋಗಿಸಿದರೆಯೆ ಕೀರ್ತಿಶಾಲಿಯಾಗುವನು. ಒಬ್ಬನು ದೂರದೃಷ್ಟಿಯಿಂದ ಮುಂದಿನ ಕಾರ್ಯಸಾಧನಕ್ಕಾಗಿ ಹಣ ವೆಚ್ಚಮಾಡಿ ಜನರನ್ನು ಒಲಿಸಿಕೊಂಡರೆ, ಅವನಂತೆಯೆ ಮತ್ತೊಬ್ಬನೂ ಮಾಡಹೋದರೆ, ಹಣದ ದುರುಪಯೋಗವಾಗಿ ಅವನು ಅಪಹಾಸ್ಯಕ್ಕೆ ಕಾರಣನಾಗುವನು.

ವ್ಯಕ್ತಿಗಳಷ್ಟೇ ಪ್ರಕೃತಿಗಳಿದ್ದರೂ ಅವು ಅಗಣಿತವಾಗಿರುವುವು. ಆದರೆ ವ್ಯಕ್ತಿಗಳಲ್ಲಿರುವ ಗುಣಗಳ ಸಂಖ್ಯೆಯು ಮಾತ್ರ ಮರ್ಯಾದಿತವಿರುವುದು. ಶೌರ್ಯ, ಧೈರ್ಯ, ಸದಾಚಾರ, ಔದಾರ್ಯ, ಮತ್ತು ಶಾಂತತನ ಇವು ಅನುಕರಣೀಯವಾದ—ಯೋಗ್ಯವಾದ—ಗುಣಗಳಿದ್ದರೂ, ತನ್ನಲ್ಲಿ ಇದರಲ್ಲಿಯ ಯಾವ

★

ವ್ಯಕ್ತಿವೈಶಿಷ್ಟ್ಯವಿಲ್ಲದವನ ಬಾಳು ಗೆಲುವಿಲ್ಲದ ಬಾಳು; ವಕ್ತಿತ್ವದ ಅರಿವು ಇರುವವನು ತನ್ನ ಅಪೇಕ್ಷೆಗನುಸಾರವಾದ ಗೆಲುವನ್ನು ಗಳಿಸಿಯೆ ತೀರುವನು.

★

ಗುಣವಿದೆಯೆಂಬುದನ್ನು ಅರಿತು, ಅದನ್ನಷ್ಟೇ ಮಾರ್ಗದರ್ಶನಕ್ಕಾಗಿ ಮಾತ್ರ ಅನುಕರಿಸಬಹುದು. ಆದರೆ ಎಲ್ಲವನ್ನೂ ಒಸ್ಮೆಲೆ ಅನುಕರಣ ಮಾಡಹೋದರೆ ಯಶಸ್ಸು ಸಿಕ್ಕಲಾರದು. ಅಂತೆಯೆ ಅನುಕರಣದಲ್ಲಿಯೂ 'ತನ್ನತನ'ವನ್ನು ಮರೆಯಬಾರದು.

ಶ್ರೀ. ಟಿ. ರಾಘವಾಚಾರ್ಯರು ರಂಗಭೂಮಿಯ ಮೇಲೆ ನಟಿಸಿದಂತೆ ತಾನೂ ನಟಿಸಲು ಪ್ರಯತ್ನಮಾಡಿ ಸಾಧ್ಯಮಾಡಿಕೊಂಡರೂ, ಜನರು "ಸಾಧಿಸಿರುವನು ಜೆನ್ನಾಗಿ!" ಎನ್ನುವರೇ ಹೊರತು, ತನ್ನತನವಿಲ್ಲದಿರುವುದರಿಂದ ಆತ ಕೀರ್ತಿವಂತನಾಗಲಾರ.

ಆದುದರಿಂದ ತನ್ನನ್ನೇ ಮರೆಯಬೇಡವೆಂಬ ಬೀಜಮಂತ್ರದಿಂದ ಮನುಷ್ಯನು ನಡೆದರೆ, ಅದರಲ್ಲಿಯೇ ತನ್ನ ಕೀರ್ತಿಯು ಅಡಕವಾಗಿರುವುದು. ಪ್ರತಿಯೊಂದು ವಿಷಯದಲ್ಲಿಯೂ, ಚಳವಳಿಯಲ್ಲಿಯೂ, ಕೆಲಸದಲ್ಲಿಯೂ, ಮಾತಿನಲ್ಲಿಯೂ ತನ್ನತನವಿರಬೇಕು. ಆದರಿಂದಲೇ ಜನರಲ್ಲಿ ಮಾನಸಿಕ್ಯವುದು. ರಾಷ್ಟ್ರೀಯ ಚಳವಳಿಯ ಉದಾಹರಣೆಯನ್ನೇ ನೋಡಿರಿ.

ನಿಃಸ್ವಾರ್ಥ ದೇಶಭಕ್ತರಿಗೆ ಸಿಕ್ಕ ಮಾನವು ಅವರ ತರುವಾಯ ಅವರ ಅನುಯಾಯಿಗಳಿಗೇ ಸಲ್ಲತಕ್ಕದ್ದು; ಆದರೆ ನಾಯಕನ ರೀತಿಯನ್ನೇ ಅವರು ತೀಡುವರು, ಅದರಲ್ಲಿ 'ಸ್ವೋಪಜ್ಞತೆ' ಇರುವುದಿಲ್ಲ. ಆದುದರಿಂದಲೇ ದಿವಂಗತ ಲೋಕಮಾನ್ಯ ಟಿಳಕರಂತಹ ವಿಭೂತಿಗಳ ಮುಂದಾಳುತನದ ಗಾದೆಯು ಅವರ ಪಟ್ಟಶಿಷ್ಯರಿಗೆ ಸಿಕ್ಕದೆ, ಮಹಾತ್ಮಾ ಗಾಂಧಿಯವರಿಗೆ ಸಿಕ್ಕಿತು. ಹೀಗಾದುದು ತನ್ನತನವಿರುವುದರಿಂದಲಲ್ಲವೇ!

ಇಂದು ಪ್ರಪಂಚಕ್ಕೆ ಹೊಸ, ವೈಚಿತ್ರ್ಯಪೂರ್ಣ ತತ್ತ್ವ ಬೇಕಾಗಿದೆ; ಹಳೆಯ ಅಂಧಾನುಕರಣ ಬೇಡ.

"ನವೀನತೆಯ ಉಪಾಸಕನಾಗು, ಮತ್ತು ತನ್ನತನವನ್ನು ಬಿಡಬೇಡ!" ಇವು ಒಂದಕ್ಕೊಂದು ವಿರುದ್ಧವಾಗಿದ್ದರೂ "ತನ್ನತನವನ್ನು ಮರೆಯದಿರು?" ಎಂದರೆ ಸುಮ್ಮನಿರು ಎಂದಂತಾಗುವುದಿಲ್ಲವೆ? — ಎಂದರೆ ಸ್ವಂತದ ವ್ಯಕ್ತಿತ್ವಾಂತರ್ಗತ, ಗುಣಗಳಿಂದ ನವೀನತೆಯ ಉಪಾಸಕನಾದರೆಯೇ ಪ್ರತಿಷ್ಠೆಯು ಬೆಳೆಯುವುದಲ್ಲದೆ, ಜನಹಿತದ ಕೆಲಸಗಳೂ ಆಗುವುವು.

ಇಂದು ಎಲ್ಲೆಡೆ ಅನುಕರಣಪ್ರಿಯ ಜನರ ಸಂಖ್ಯೆಯೇ ಬೆಳೆದಿರುವುದು. ಶ್ರೀನಿವಾಸರು ನಚ್ಚಿನ ಕತೆಗಾರರು; ಆಯಿತು ಅವರ ಕತೆಗಳ ಅನುಕರಣದ ಗದ್ದಲ! ಕೆ. ವಿ. ಪುಟ್ಟಪ್ಪನವರ ಕವಿತೆಗಳೆಂದರೆ ಕಲ್ಲು-ಗಿಡಗಳು ಸಹ ಕುಣಿಯುವುವು; ಮಾಡಿದರು ಅವರ ಅನುಕರಣ! ಶ್ರೀಯವರು ಅಲಂಕಾರಿಕ ಶಬ್ದಗಳಿಂದ ತಮ್ಮ ಬರೆಹಗಳನ್ನು ಶುಚೀಭಿಸುವರು; ಬೆನ್ನು ಹತ್ತಿದರು ಅನುಕರಣಶಾಸ್ತ್ರಿಗಳು ಅವರ ಹಿಂದೆ! ಪ್ರೊ. ಗೋಕಾಕ, ಮುಗಳಿ. ಕೃಷ್ಣಶರ್ಮ ಬೆಟಗೇರಿ ಇತ್ಯಾದಿ ನುರಿತ ಸಾಹಿತಿಗಳಿಗೂ ಅನುಕರಣಕಾರರು ತಮ್ಮ ಲೆಕ್ಕಣಿಕೆಯನ್ನು ತೋರಿಸದೆ ಬಿಡುವುದಿಲ್ಲ. ಆದರೆ ಮಳೆ ಹುಳುಗಳಂತೆ ಅನುಕರಣಕಾರರ ಸಾಹಿತ್ಯವು ಕ್ಷಣಿಕವಾಗಿರುವುದು.

ನೀನು ಎರಡನೆಯವರ ಗುಣಗಳನ್ನು ಅಭ್ಯಾಸಿಸು, ಆದರೆ ನಕಲು ಮಾಡಲು ಹೋಗಬೇಡ. ಇದರಲ್ಲಿಯೆ ದೊಡ್ಡಿತೆಯಿದೆ. ತನ್ನ ಗುಣಗಳನ್ನು ಪರಿಪೋಷಣ ಮಾಡಿದರೆಯೇ ಯಶಸ್ಸು ನಿಶ್ಚಯ!

ಶಾರದೆಯ ಉಡಿಯಲ್ಲಿ ಮುತ್ತು-ರತ್ನಗಳನ್ನು ಉಡಿತುಂಬಿದರೂ, ಅಳಿಲುಸೇವೆಯೆಂದು ಅಕ್ಕಿಕಾಳನ್ನು ಉಡಿತುಂಬಿದರೂ ಅಷ್ಟೇ ಪ್ರೀತಿಗೆ ಪಾತ್ರರಾಗುವರು. ಆದರೆ ಅಕೆಗೆ ಅದರಲ್ಲಿ ಭಕ್ತಿ ಬೇಕು. ಮುಮ್ಮಡಿ ಕೃಷ್ಣರಾಜ, ಚಿಕುಪಾಧ್ಯಾಯರು ಅಗಣಿತ ಕವಿತೆಗಳನ್ನು ಮಾಡಿ ಕವಿಕುಲತಿಲಕರಾದರು; ಪಾಲ್ಕುರಿಕೆಯ ಸೋಮನು ನೂರೇ ಕವಿತೆಗಳನ್ನು ಮಾಡಿ ಕವಿಶ್ರೇಷ್ಠನಾಗಲಿಲ್ಲವೆ? ಕವಿಶ್ರೇಷ್ಠ 'ಅಂಬಿಕಾತನಯದತ್ತ'ರು. ತತ್ತ್ವಪೂರ್ಣವಾದ ಅವೆಷ್ಟೋ ಕವಿತೆಗಳನ್ನು ರಚಿಸಿರುವರು; ಸ್ವಲ್ಪೇ ಕವಿತೆಗಳನ್ನು ಬರೆದರೂ ದಿವಂಗತ ಪಂಜೆ ಮಂಗೇಶರಾಯರೂ ಕವಿಸ್ಥಾನದಲ್ಲಿ ಕುಳಿತಿರುವರು. 'ಶ್ರೀರಂಗ'ರು ಎಷ್ಟೋ ನಾಟಕಗಳನ್ನು ಬರೆದು ನಾಟ್ಯಾಚಾರ್ಯರೆನಿಸಿಕೊಳ್ಳುವರು; ಟಿ. ಪಿ. ಕೈಲಾಸಂ ಅವರು ಬೆರಳಿನಿಂದ ಎಣಿಸುವಷ್ಟು ನಾಟಕಗಳನ್ನು ಬರೆದಿದ್ದರೂ ಆದೇ ಮಾಲಿಕೆಯಲ್ಲಿಯೆ ಸೇರಿದರು. ಎಂದರೆ ಇವರಲ್ಲಿ ಕೆಳಗು ಮೇಲು ಎಂದು ಎಣಿಸಲು ಸಾಧ್ಯವಿಲ್ಲ. ಯಾಕೆಂದರೆ ಪ್ರತಿಯೊಬ್ಬರಲ್ಲಿಯೂ ತನ್ನತನವಿದೆ. ಇದರಂತೆ ಭಾಷಣಕಾರರು, ಶಿಲ್ಪಿಗರು, ಚಿತ್ರಕಾರರು ಇತ್ಯಾದಿ ಕಲಾಕೋವಿದರು, ತಂತಮ್ಮ ಗುಣಗಳಿಂದಲೇ ಪ್ರಸಿದ್ಧಿಯನ್ನು ಹೊಂದಿರುವರು.

'ತನ್ನನ್ನು ಮರೆಯದಿರು!' ಇದು ಒಂದು ಪ್ರಕಾರದ ಅಹಂಕಾರ ಅಥವಾ ದುರಾಗ್ರಹವಲ್ಲ. ನಿಮ್ಮ ವ್ಯವಹಾರ ಉದ್ಯೋಗಗಳಲ್ಲಿಯೂ ನಿಮ್ಮ ಪ್ರತಿಯೊಂದು ಮಾತಿನಲ್ಲಿಯೂ ನಿಮ್ಮ ವ್ಯಕ್ತಿತ್ವದ ಉತ್ಕರ್ಷವಾಗುವಂತೆ ಸಾಧಿಸುತ್ತಿದ್ದರೆ ಮಾತ್ರ 'ತನ್ನತನ'ದಿಂದ ನಡೆಯಬೇಕು.

ಜಯಂತಿಯ ಏಜಂಟರಿಗೆ

★

ಸದ್ಯ ಜಯಂತಿಗೆ ಕಾಗದದ ಅಭಾವವಾದುದರಿಂದಲೂ, ಪೇಟೆಯಲ್ಲಿ ಕಾಗದವ್ಯಾಪಾರಿಗಳು ಹೇಳುವ ಬೆಲೆಗೆ ಕಾಗದ ಕೊಂಡು ಮುದ್ರಿಸಿದರೆ ಯೋಗ್ಯಬೆಲೆಗೆ ಸಂಚಿಕೆಗಳನ್ನು ಏಜಂಟರಿಗೆ ಪೂರೈಸುವುದು ಅಸಾಧ್ಯವಾದುದರಿಂದಲೂ, ಇದೇ ಎಪ್ರಿಲ್ ತಿಂಗಳಿಂದ, ಎಲ್ಲ ಏಜಂಟರಿಗೂ 'ಜಯಂತಿ' ಸಂಚಿಕೆ ಕಳುಹುವುದನ್ನು — ಅನಿವಾರ್ಯವಾಗಿ— ನಿಲ್ಲಿಸಿಬಿಡಬೇಕಾಗಿದೆ. ಯೋಗ್ಯಬೆಲೆಗೆ ಕಾಗದ ದೊರೆಯುವಂತೆ ಪ್ರಯತ್ನ ನಡೆಯಿಸಿದ್ದೇವೆ. ನಮ್ಮ ಪ್ರಯತ್ನ ಫಲಕಾರಿಯಾದಲ್ಲಿ, ಕೂಡಲೆ ಎಲ್ಲ ಏಜಂಟರಿಗೂ ಮೊದಲೇ ಬರೆದು ತಿಳಿಸಿ, ಮತ್ತೆ ಮೊದಲಿನಂತೆ ವ್ಯವಹಾರವನ್ನು ನಡೆಯಿಸಲಾಗುವುದು. ಇದ್ದುದಿದ್ದ ಹಾಗೆಯೆ ವ್ಯವಹಾರವನ್ನು ನಿಲ್ಲಿಸಿಬಿಡಬೇಕಾದ ಸಂದರ್ಭ ಬಂದುದಕ್ಕಾಗಿ ನಮಗೆ ತುಂಬ ವಿಷಾದವಾಗಿದೆ. ಆದರೆ ನಿರುಪಾಯರಾಗಿದ್ದೇವೆ. ಹಣ ಬಾಕಿಯಾಗಿರುವ ಏಜಂಟರೆಲ್ಲರೂ ದಯೆಯಿಟ್ಟು, ಎಂದಿನಂತೆ ಕಾರ್ಯಾಲಯಕ್ಕೆ ತಮ್ಮ ಬಾಕಿಯನ್ನು ಸಲ್ಲಿಸಿ ಪಾವತಿ ಪಡೆಯುವ ಉಪಕಾರಮಾಡಬೇಕು.

ವ್ಯವಸ್ಥಾಪಕ 'ಜಯಂತಿ' ಧಾರವಾಡ

ಒಂದು ಜಾಹೀರಾತು

ಶ್ರೀ. ಬಿ. ಪಾಟೀಲ, ಇಟಗಿ

ಇದೊಂದು ಹೊಸ ವಾರಪತ್ರಿಕೆಯ ಜಾಹಿರಾತು. ಪತ್ರಿಕೆ ಹೊರಡಲಿ, ಹೊರಡದಿರಲಿ; ಸಹೋದ್ಯೋಗಿಗಳಿಗೆ ಸಹಕಾರವೀಯುವುದು ನನ್ನ ಕರ್ತವ್ಯ. 'ಕಾಗದದ ಈ ಬರಗಾಲದಲ್ಲಿ ಇದೊಂದು ಪತ್ರಿಕೆಯೆ?' ಎಂದು ಯಾರೂ ಬೆದರಬೇಕಾದ ಕಾರಣವಿಲ್ಲ. ಏಕೆಂದರೆ ಈ ಪತ್ರಿಕೆಗೆ ಕಾಗದವೇ ಬೇಕಾಗಿಲ್ಲ. ಇದರ ರೀತಿಯೆ ಬೇರೆ, ಇದರ ಸಲಕರಣೆಗಳೇ ಬೇರೆ; ಇದರ ಚಂದಾ ಹಣವೇ ಬೇರೆ. ಈಗ ಜನ ಈ ಜಾಹೀರಾತನ್ನು ಓದಲಿ; ಇದನ್ನವರು ಸಹಿಸಿಕೊಳ್ಳಲು ಸಿದ್ಧರಾದರೆ, ಪತ್ರಿಕೆ ಹೊರಡಲು ಅನುಕೂಲವಾದೀತು.

ಸಂ. ಜ.

★

"ಬೆಂದೊಡಲು" ಅಥವಾ "ಬರಗಾಲಿಸ್ತಾನ್"

ಚಿರನೂತನವಾದ ವಾರಪತ್ರಿಕೆಯು

ಇದೀಗ ಹೊರಡಲಿದೆ! ದೀನದರಿದ್ರರ ಸೇವೆಗಾಗಿ!

ಓದಿ ಕಣ್ಣೀರಿಡದಿರಿ!! ನೋಡಿ ಮರುಗದಿರಿ!!

ದರಿದ್ರ ಅಖಿಲ ಕರ್ನಾಟಕದಲ್ಲಿ ಈ ತರದ ಪತ್ರಿಕೆಯೆಂದರೆ ಇದೇ!!!

ಸಂಪಾದಕರು: **ಗತಿಗೇಡಿ ಸಾಯಪ್ಪನವರ**

ಸಹಾಯಸಂಪಾದಿಕೆಯರು: **ಬರಗಾಲಬಾಯಿ ಬರಿಮೈಕರ**

ಜನತೆಯ ಸಂಸಾರದ ತಾಪತ್ರಯಗಳನ್ನು ಜಗತ್ತಿಗೆ ತಿಳಿಸಿ— ಹೊಟ್ಟೆಗೆ ಹಿಟ್ಟಿಲ್ಲದೆ ಮೈಗೆ ಬಟ್ಟೆ-ಬರೆಗಳಿಲ್ಲದೆ ನರಳುತ್ತಿರುವ, ಕಿರಿಚುತ್ತಿರುವ, ಸಾಯುತ್ತಿರುವ ಬೇಕಾರಿ ಜನರ ಬೇಕು-ಬೇಡಿಕೆಗಳೇನು? ಲಕ್ಷ್ಮೀಪುತ್ರರಿಂದ ದರಿದ್ರಪುತ್ರರಿಗೆ ಆಗುವ ಅನ್ಯಾಯಗಳೆಷ್ಟು? ಸಿರಿವಂತರ ಕೂರಲಗಿಗೆ ಸಿಲುಕಿ ನುಚ್ಚುನೂರಿಯಾಗುತ್ತಲಿರುವ ಕಂಗಾಲ ಜನರ ನಿವಾರಣೆಗಾಗಿ ಮಾಡಬೇಕಾದ ಕರ್ತವ್ಯವೇನು, ಹೂಡಬೇಕಾದ ಉಪಾಯ, ಹಿಡಿಯಬೇಕಾದ ಮಾರ್ಗವೆಂತಹವು?— ಎಂಬುದನ್ನು ಉರಿಯುತಿಹ ಉಕ್ಕುತಿಹ ಪ್ರಖರ ವಾಙ್ಮಯದಲ್ಲಿ ಬರೆದು, ಬಿದ್ದು ಬಳಲುತ್ತಿರುವ ಬದುಕಿ ಸಾಯುತ್ತಿರುವ ಬಡಜನರನ್ನು, ಬಡಿದೆಬ್ಬಿಸಿ, ಬದುಕಿಸಿ, ಅವರಿಗೊಂದು ಸ್ವತಂತ್ರಪ್ರಾಂತವನ್ನು ನಿರ್ಮಾಣ ಮಾಡುವುದೇ ಈ ಪತ್ರಿಕೆಯ ಹೆಗ್ಗುರಿ!!

ಇದೀಗ ವಿಶ್ವದಲ್ಲಿ ಹೊರ-ಹೊರಡುತ್ತಿರುವ ಪತ್ರಿಕೆಗಳೆಲ್ಲವೂ "ಹಾಡಿನ ಸಭೆಯಲಿ ನರಳುವರುಂಟೆ?" ಎಂಬಂತೆ, ಹೊಟ್ಟೆ-ಬಟ್ಟೆಗಿದ್ದು ತಸ್ಮು ಏನೋದಕ್ಕಾಗಿಯೂ ಸಂತೋಷದಿಂದಿರುವ ಜನರ ಸಲುವಾಗಿಯೂ ಇರುವುವಲ್ಲದೆ, ಹೊಟ್ಟೆಗೆ ಬಟ್ಟೆಗೆ ಇಲ್ಲದೆ ಬುದ್ಧಿ-ವಿದ್ಯೆ-ವೈದ್ಯವಿಲ್ಲದೆ ನರಳುವವರಿಗಾಗಿ ಬೊಬ್ಬೆಕುಟ್ಟುವ ಪತ್ರಿಕೆಯುಂಟೆ? ನಮ್ಮ ಪತ್ರಿಕೆಯು ಆ ಕೊರತೆಯನ್ನು ಹೋಗಲಾಡಿಸುತ್ತದೆ. "ಹಸಿದವ ಬಲ್ಲಾ ಹಸಿವೆಯ ತೂಲಿ!" ಇದು ನಮ್ಮ ಪತ್ರಿಕೆಯ ಮಹಾಮಂತ್ರ. 'ದಾಹ ದಾಹ' ಎಂದೂ 'ಜಳ ಜಳ' ಎಂದೂ ಶಂಖ ಊದುತ್ತಿರುವ ಅನುಭವಿಕ ತಜ್ಞ ಪ್ರೊಫೆಸರರೂ, ಪಂಡಿತರೂ, ಪದವೀಧರರೂ ಈ ಪತ್ರಿಕೆಗಾಗಿ ಲೇಖನ ಬರೆಯಲು ವಾಗ್ದಾನ ಮಾಡಿದ್ದಾರೆ. ಮಹಾತ್ಮರ ಆಶೀರ್ವಾದವಂತೂ ಇದ್ದೇ ಇದೆ.

'ಕೂಳಿನ ಕಣಜ' 'ಬಟ್ಟೆಯ ಬಣವೆ' ಎಂದು ಪ್ರಸಿದ್ಧವಾದ ನಮ್ಮೀ ಕರ್ನಾಟಕದಲ್ಲಿ, ಇಂತಹ ಮಹಾ ದರಿದ್ರಪತ್ರಿಕೆಯನ್ನು ಹೊರಹೊರಡಿಸುವ ಮಹಾಸಾಹಸವನ್ನು ಮಾಡಿದ್ದಕ್ಕೆ ಅನೇಕರು ಅನೇಕ ತರದಿಂದ ನಮ್ಮನ್ನು ಪ್ರೋತ್ಸಾಹಿಸಿದ್ದಾರೆ. ಇಂದು ಜನಿಸಿ ಕೂಳಿಲ್ಲದೆ ನಾಳೆ ಸಾಯುವ ಪತ್ರಿಕೆಗಳ ಬೀಡಾದ ನಮ್ಮ ಕನ್ನಡ ನಾಡಿನಲ್ಲಿ, ಇದು ಆ ವೈಶಿಷ್ಟ್ಯವನ್ನು ಕಾಯ್ದುಕೊಳ್ಳಲಿಕ್ಕೆಲ್ಲವೆಂಬ ಬಲವಾದ ನಂಬಿಗೆ ನಮಗುಂಟು. ಎಂತಹ ಸಾಹಸ! ಎಂತಹ ಧೈರ್ಯ!! ಎಂತಹ ಸುಯೋಗ!!! ಹೆಚ್ಚೇನು ಹೊಗಳಬೇಕು? ವಿಮರ್ಶೆಯನ್ನು ಸಂಚಿಕೆ ಹೊರಟ ನಂತರ ನಿಮಗೇ ಬಿಡುತ್ತೇವೆ. ಹೆಂಗಳೆಯರಿಗೂ ಹೆಂಗರುಳಿನವರಿಗೂ ಕೆಲವು ಪುಟಗಳನ್ನು ತೆಗೆದಿರಿಸಲಾಗಿದೆ.

ಅನ್ನಾನ್ನಗತಿಕರನ್ನು ಗಾಣದಲ್ಲಿ ಹಾಕಿ ಹಿಂಡಿ ತೆಗೆದ ರಕ್ತದಿಂದ ಅಚ್ಚಾಗುವ ಮುದ್ದುಮುದ್ದಾದ ಸಂಚಿಕೆಗಳು!

ಹರಕು ಹರಕಾದ--ಚಿಂದಿಬಟ್ಟೆಯ ಎಪ್ಪತ್ತಾರು ಪುಟಗಳು !! ಹುಳುಕು ಕೊಳಕಾದ ತೊಗಲಿನ ಮೇಲ್ಮುಖ !!!

. ಅನೇಕ ಕರುಳು ಕತ್ತರಿಸಿದ, ಎಲುಬು ಸವೆದ, ಅಶನವಿಲ್ಲದೆ ಸತ್ತೇ ಸಾಯುತ್ತೇವೆಂದು ಕಿರಿಚುತ್ತಿರುವ ಜನರ ಚಿತ್ರಗಳೂ, ಅಸ್ಥಿಪಂಜರದ ಅಮಾನುಷ ಅಕರಾಳವಿಕರಾಳ ಚಿತ್ರಗಳೂ, ಈ ಪತ್ರಿಕೆಯ ಅಂದವನ್ನು ಮತ್ತಿಷ್ಟು ರೌದ್ರತೆಗೇರಿಸುವುವು. ಭಾಗ್ಯವಂತರು ಬಡವರಿಗೆ ಅನ್ನವನ್ನು ತೋರಿಸಿ, ಹಂಗಿಸಿ ಹಂಗಿಸಿ ತಿನ್ನುವ ಅನೇಕ ಹಾಸ್ಯಮಯ ಚಿತ್ರಗಳು ಜಕಿಜಕಿಸುವುವು.

ಜಾಹೀರಾತುದಾರರಿಗೂ ತಮ್ಮ ಬಡತನದ ವೈಭವವನ್ನು ತೋರಿಸಿ ಲಾಭ ಪಡೆಯಲು ಸುಸಂಧಿ!

ಇಷ್ಟಾದರೂ ಚಂದಾ ಹಣ ತೀರ ಕಡಿಮೆ; ಅಂಚೆಯ ವೆಚ್ಚ ಸಹಿತ ಎಂಟು ಕಣ್ಣೀರ ಹನಿ !

ಈ ಚಿರಂತವಾದ ದುರಂತ ಪತ್ರಿಕೆಯು "ಅನಂತ ಏಕಾದಶಿ" ಎಂಬ ಅನ್ನ ಲಿಮಿಡೆಟ್ ಕಂಪನಿಯಿಂದ ಪ್ರಕಾಶಿತವಾಗುತ್ತದೆ.

ತಿಂಗಳು ತಿಂಗಳೂ ಕೂಳಿಗೆ ಗತಿಯಿಲ್ಲದೆ, ಮೈಗೆ ಗೇಣು ವಸ್ತ್ರವಿಲ್ಲದೆ 'ಲೋಕಾಮಾನ್ಯ' ಎಂದು ಹೆಸರು ಪಡೆದು ಇಡಿ ಭಾರತವರ್ಷದಲ್ಲೆಲ್ಲ ತನ್ನ ತಪಃಪ್ರಭಾವದಿಂದ ಕ್ರಾಂತಿಬೀಜವನ್ನೂರಿದ 'ಮಹಾತ್ಮಾ ದರಿದ್ರ ನಾರಾಯಣ' ರು ಪತ್ರಿಕೆಯ ಪ್ರಾರಂಭೋತ್ಸವವನ್ನು ಮಾಡುತ್ತಾರೆಂದು ತಿಳಿಸಲು ತುಂಬ ಆನಂದವಾಗುತ್ತದೆ.

ಬಡವರಿಗೊಂದು ಸ್ವತಂತ್ರ ಪ್ರಾಂತ ಬೇಕು. "ಬರಗಾಲ ಸ್ತಾನ" ವೇ ಆ ನಮ್ಮ ಭಾವೀಪ್ರಾಂತ. ಬರಗಾಲಸ್ತಾನವೇ ನಮ್ಮ ಸಾವು-ಜೀವಿತ ಪ್ರಶ್ನೆ. ಧನ-ಕನಕ-ವಜ್ರ-ವೈಡೂರ್ಯಾದಿಗಳ ಸಹಾಯದಿಂದ ಮದಾಂಧರಾದ ಧನವಂತರ ದವಡೆಯಿಂದ ಪಾರಾಗಬೇಕಾಗಿದೆ. ಅದಕ್ಕೆಂತಲೇ ಸ್ವತಂತ್ರಪ್ರಾಂತ! ಅಲ್ಲಿ ನಮ್ಮ ಅಡಳಿತ, ನಮ್ಮ ಹಕ್ಕು, ಬಾಧ್ಯತೆಗಳನ್ನು ಕಾಯ್ದುಕೊಳ್ಳಬೇಕು! ಅನ್ನಾಸಾಹೇಬರ ಅಡಿದಾವರೆಗಳಲ್ಲಿ ಆ ಪ್ರಾಂತವನ್ನು ಏರ್ಪಡಿಸಬೇಕಾಗಿದೆ. ಆ ಪಂಗಡದ ಮುಖಪತ್ರವೇ ಈ ನಮ್ಮ ಪತ್ರಿಕೆಯು!

ಅಖಿಲ ಕನ್ನಡದ ಒಂದುವರೆ ಕೋಟಿ ಬಡವರು ಈ ಪತ್ರಿಕೆಯ ಚಂದಾದಾರರಾಗಲು 'ಹಾಯ್ ಹಾಯ್' ಎನ್ನುತ್ತಿರುವಾಗ, ಈ ಪತ್ರಿಕೆಯ ಹೆಚ್ಚಳವನ್ನು ಎಷ್ಟೆಂದು ಹೆಚ್ಚಿಸಿ ಹೇಳಿಲಿ!!!

ಆಹಾರನಿಯಂತ್ರಣ

(ಒಂದು ಚಿಕ್ಕ ಹುಟ್ಟಾಟ)

ಶ್ರೀ. 'ಎಲ್. ಜಿ. ಬಿ.'

"ದ್ಯಾವರೂ, ಮೊನ್ನೆ ಕನಕಾಪುರದಲ್ಲಾದ ಕೊಲೆಯನ್ನು ನಾನೇ ಮಾಡಿದ್ದು!" ಹೇಳಿದ ಲಜುಮ.

"ಮೂರ್ಖಾ, ಪ್ರತ್ಯಕ್ಷ ಕೊಲೆಮಾಡಿದವನೇ ಬಂದು ಒಪ್ಪಿಕೊಂಡು ಹೋದ. ನಿನಲ್ಲ ಕೊಲೆಗಾರ, ಹೋಗು!" ಗದ್ದರಿಸಿದರು, ನ್ಯಾಯಾಧೀಶರು.

"ಓ, ಹೀಂಗೋ!"

ಒಂದುವಾರ ಬಿಟ್ಟು ಲಜುಮ ಪೋಲೀಸಠಾಣೆಗೆ ಬಂದು ಹೇಳಿದ:

"ದ್ಯಾವರೂ, ನಿನ್ನೆ ರಾತ್ರಿ ರತನಸೆಟ್ಟಿಯ ಮಖಾರಕ್ಕೆ ಬೆಂಕಿ ಹಚ್ಚಿದವನು ನಾನು!"

"ಮಗನೆ, ವಿಮೆಯ ಹಣ ಎತ್ತಿಹಾಕುವುದಕ್ಕಾಗಿ ಸ್ವಂತ ಸೆಟ್ಟಿಯೇ ಹಾಗೆ ಮಾಡಿದ; ನೀನೆಲ್ಲಿಯವನು, ನಡೆ ಹೊರಗೆ!" ಆರ್ಭಟಿಸಿದರು ಇನ್‌ಸ್ಪೆಕ್ಟರರು.

"ಓ, ಹೀಂಗೋ"

ಇನ್ನೊಂದು ವಾರ ಬಿಟ್ಟು ಲಜುಮ ಇನ್‌ಸ್ಪೆಕ್ಟರರೆದುರಿಗೆ ನಿಂತು ಹೇಳತೊಡಗಿದ:—"ದ್ಯಾವರೂ, ನನ್ನ ಮಾತೊಂದು...." ಆದರೆ ಅವನ ಮಾತಿಗೆ ತಣಿಹಾಕಿ—"ಸೂಳೆಯಮಗನೆ, ನಿನಗೇನು ತಲೆ ಗಿಲೆ ಕೆಟ್ಟಿದೆಯೇನು? ಇನ್ನೊಂದು ಸಲ ಬಂದೆಯಾದರೆ ಹುಚ್ಚರ ಆಸ್ಪತ್ರೆಗೆ ಹಾಕಿಸುತ್ತೇನೆ.!" ಗುಡುಗಿದರು ಸಾಹೇಬರು.

"ಓ, ಹೀಂಗೋ"

ಆ ದಿನ ರಾತ್ರಿ ಲಜುಮ ಒಬ್ಬ ಡೊಳ್ಳುಹೊಟ್ಟೆಯ ಮಾರವಾಡಿಯನ್ನು ಒಳಿತಾಗಿ ಥಳಿಸಿ, ಮರುದಿನ ಪೋಲೀಸಠಾಣೆಗೆ ಹೋಗಿ "ದ್ಯಾನರು, ಈ ಸಲ ನಾನು....."

ಇನ್‌ಸ್ಪೆಕ್ಟರ ಸಾಹೇಬರು ಇಬ್ಬರು ಪೋಲೀಸರನ್ನು ಕರೆದು, ಕೂಗಿಕೊಂಡರು: "ಪೊದಲು ಇವನನ್ನೆತ್ತಿಕೊಂಡೊಯ್ದು ಹುಚ್ಚರ ಆಸ್ಪತ್ರೆಯಲ್ಲಿ ಹಾಕಿರಿ! ಹೊರಗಿದ್ದು ಇವನ ಹುಚ್ಚು ಬಿಡುವ ಲಕ್ಷಣವಿಲ್ಲ!"

"ದ್ಯಾವರು, ಬದುಕಿದೆ! ನನಗಿನ್ನು ಹೊಟ್ಟೆಯ ಚಿಂತೆಯಿಲ್ಲ!" ಅಂದ ಲಜುಮ.

ಏನು ಹೇಳಲಿ?

(ಸಣ್ಣಕತೆ)*

ಶ್ರೀ. 'ಚಿದಾನಂದ' ಬೈಲಹೊಂಗಲ

★

೧

ಶಾಮನು ಈ ಸಲದ ಬೇಸಗೆಯಲ್ಲಿ ನಮ್ಮೂರಿಗೆ ಬಂದುದು ನನಗೊಂದು ಹೆಮ್ಮೆಯ ವಿಷಯವಾಗಿತ್ತು. ಅವನು ಪರದೇಶಕ್ಕೆ ಹೋಗಿಬಂದವನು; ಪುಣೆಯಂತಹ ಪಟ್ಟಣದಲ್ಲಿ ನೆಲೆಯಾಗಿದ್ದವನು; ಎಂದಮೇಲೆ ಅವನಿಗೆ ಹಳ್ಳಿಯ ಜೀವನವು ಹೇಗೆ ಒಗ್ಗಬೇಕು? ಆದುದರಿಂದ ನಾನು ಎಷ್ಟೋ ಸಲ ಅವನಿಗೆ ಒತ್ತಾಯಮಾಡಿದ್ದರೂ "ಈ ಸಲ ಬರುತ್ತೇನೆ!" "ಈ ವರುಷ ಬಂದೇ ಬರುತ್ತೇನೆ" ಎಂದು ಬರಿ ಆಶೀರ್ವಾದವನ್ನೇ ಮಾಡುತ್ತ ಬಂದಿದ್ದ ಶಾಮೂ. ಈಗ ಮಾತ್ರ— ಯಾವ ದೇಶದ ಅರಸನು ಸತ್ತಿದ್ದನೋ ಏನೋ— ಶಾಮೂ ನಮ್ಮೂರಿಗೆ ಬಂದನು. ಆದುದರಿಂದ ಅವನ ಬರುವಿಕೆಯು ನನಗೊಂದು ಸಂಭ್ರಮವಾಗಿತ್ತು.

ಶಾಮನ ವಿಷಯವಾಗಿ ನನಗೊಂದು ಬಗೆಯ ಆದರ, ಪೂಜ್ಯಬುದ್ಧಿ ಇತ್ತು. ಅವನು ಕೇವಲ ನನ್ನ ಜೀವದ ಗೆಳೆಯ, ನೆಂದಲ್ಲ; ಅವನ ನಡತೆಯೆ ಅದಕ್ಕೆ ಕಾರಣ. ಶಾಮನ ನಡತೆಯು ಆದರ್ಶವಾದದ್ದು. ಅವನು ಕೆಲವು ತತ್ತ್ವಗಳನ್ನು ಅವಲಂಬಿಸಿ ನಡೆಯುತ್ತಿದ್ದನು. ಅವನ ವಿಷಯವಾಗಿ ಆದರ ಹುಟ್ಟಲಿಕ್ಕೆ ಅವನ ಪವಿತ್ರಪ್ರೇಮವೂ ಒಂದು ಕಾರಣವಾಗಿತ್ತು. ಮೊದಲನೆಯ ಮಡದಿ ತೀರಿಕೊಂಡಮೇಲೆ ಅವನು ಮತ್ತೆ ಮದುವೆಯಾಗಿದ್ದಿಲ್ಲ. ಅವನಿಗೆ ಹೆಣ್ಣುಕೊಡಲು ಎಷ್ಟೋ ಕನ್ಯಾಪಿತೃಗಳು ಎಡೆಯಾಡಿದರು. ಕೈತುಂಬ ಸಂಬಳ, ಇನ್ನೂ ಹರಯದ ವಯಸ್ಸು, ಮಲಮಕ್ಕಳಾದರೂ ಇರಲಿಲ್ಲ; ಎಂದ ಮೇಲೆ ಇಂಥವನಿಗೆ ಹೆಣ್ಣುಕೊಡಲು ಹಿಂಜರಿಯುವ ಕನ್ಯಾಪಿತೃಗಳು ಉಂಟೇ? ಆದರೆ ಶಾಮನು ಮಾತ್ರ ಮತ್ತೆ ತಾನು ಮದುವೆಯಾಗಲಿಲ್ಲ. "ನೀನೇಕೆ ಮದುವೆಯಾಗಕೂಡದು?" ಎಂದು ನಾನು ಶಾಮನನ್ನು ಪೀಡಿಸಿದಾಗಲೆಲ್ಲ, "ನನ್ನ ಹೆಂಡತಿಯಂಥವಳು ಸಿಕ್ಕುವುದು ಇನ್ನು ಸಾಧ್ಯವೇ ಇಲ್ಲ; ಅವಳೊಬ್ಬ ದೇವತೆ!" ಎಂದು ಹೇಳುತ್ತಿದ್ದನು. ಅಲ್ಲದೆ "ಅವಳನ್ನು ನಾನು ಪ್ರೀತಿಸಿದಂತೆ ಇನ್ನೊಬ್ಬಳನ್ನು ಪ್ರೀತಿಸುವುದು ನನಗೆ ಸಾಧ್ಯವಿಲ್ಲ. ಆದುದರಿಂದ ಮದುವೆಯಾಗುವುದೇ ಬೇಡ!" ಎಂದು ಅವನು ಹೇಳಿದಾಗ, ನನಗೆ ಉತ್ತರವನ್ನು ಕೊಡುವುದಕ್ಕೆ

ರಾಮುವಲ್ಲದೆ ಇನ್ನಾರು ಇದ್ದರೂ 'ಏನು ಹೇಳಲಿ?' ಎಂದು ತನ್ನನ್ನು ತಾನೇ ಆತುರದಿಂದ ಕೇಳಿಕೊಳುವಂತಹ ಸಂದರ್ಭವದು! ಇಲ್ಲಿ ಯಾರು ಯಾರನ್ನು ಕ್ಷಮಿಸಬೇಕು?

★

ಮನಸ್ಸಾಗುತ್ತಿದ್ದಿಲ್ಲ. ಅವನ ಆದರ್ಶಪ್ರೇಮವನ್ನು ನೋಡಿ ಅವನ ವಿಷಯವಾಗಿ ಒಂದು ವಿಧದ ಆದರ ಮಾತ್ರ ಹುಟ್ಟುತ್ತಿತ್ತು.

೨

ಒಂದು ಸಾಯಂಕಾಲದ ಉಪಾಹಾರದ ನಂತರ, "ಇಂದು ಆಶ್ರಮಕ್ಕೆ ಹೋಗೋಣ" ನಾನೆಂದೆನು.

"ಯಾವ ಆಶ್ರಮವಪ್ಪಾ?" ಶಾಮೂ ಕೇಳಿದ.

"ಇಲ್ಲಿಯೆ ಊರಜೊರಗೆ ಒಂದು ಆಶ್ರಮವಿದೆ. ಅಲ್ಲಿಯೊಬ್ಬ ತರುಣ ತಪಸ್ವಿಯ ಹಾಗೆ ಇದ್ದಾನೆ. ಇಲ್ಲಿಗೆ ಬಂದು ನಾಲ್ಕು ತಿಂಗಳಾಯಿತು. ಇಷ್ಟರಲ್ಲಿಯೆ ನಮ್ಮೂರಿನವರಿಗೆ ದೇವತೆಯಾಗಿದ್ದಾನೆ. ಈಗ ನಮ್ಮ ಹಳ್ಳಿಯಲ್ಲಿ ನೀನು ನೋಡುವ ಸುಧಾರಣೆಗಳೆಲ್ಲವೂ ಅತನ ಶ್ರಮದ ಫಲಗಳು. ಅತನ ಚಾರಿತ್ರ್ಯ ಶುದ್ಧವಾದದ್ದು; ಸ್ವಭಾವವು ಕೋಮಲವಾದದ್ದು!" ಎಂದು ಸ್ವಲ್ಪದರಲ್ಲಿಯೆ ಅವನ ವೃತ್ತಾಂತವನ್ನು ಹೇಳಿದೆನು.

"ಇಷ್ಟು ತಾರುಣ್ಯದಲ್ಲಿಯೆ ಅವನೇಕೆ ತಪಸ್ವಿಯಾದನು? ಹೆಂಡಿರು-ಮಕ್ಕಳು ಯಾರೂ ಇಲ್ಲವೇ?" ಶಾಮೂ ಕೇಳಿದ.

"ಅದೆಲ್ಲ ನನಗೆ ಗೊತ್ತಿಲ್ಲ; ಇಲ್ಲಿ ಮಾತ್ರ ಅವನು ಬ್ರಹ್ಮಚಾರಿಯಾಗಿ ಒಬ್ಬನೆ ಇದ್ದಾನೆ!"

"ನೀನು ಅವನನ್ನು ಕೇಳಲಿಲ್ಲವೇ?"

"ಕೇಳಿದೆ, ಆದರೆ ಕೇಳಿದ ಸಾರಿಗೊಮ್ಮೆ 'ಈಗ ಬೇಡ, ಮತ್ತೊಮ್ಮೆ ಹೇಳುತ್ತೇನೆ' ಎಂದು ಅವನೆ ಮುಖವಿರುಗಿಸುತ್ತಿರುವನು. ಹಾಗೆ ಮುಖವನ್ನು ಹೊರಳಿಸಿದಾಗೆಲ್ಲ, ಅವನ ಕಣ್ಣಿನಿಂದ ಮುತ್ತಿನಂತಹ ಕಂಬನಿಗಳು ಉದುರುವುದನ್ನು ನೋಡಿದೆನು. ಇತ್ತೀಚೆಗೆ ಅವನ ವೃತ್ತಾಂತದ ವಿಷಯಕ್ಕೆ ನಾನು ಮಾತನ್ನೆತ್ತುವುದಿಲ್ಲ. ಈಗ ಅವನಿಗೂ ನನಗೂ ಎಷ್ಟೋ ಸಲುಗೆಯಾಗಿದ್ದರೂ, ನಾನು ಆ ಮಾತನ್ನು ಮಾತ್ರ ಕೇಳುವುದಿಲ್ಲ!"

"ಅವನ ಹೆಸರನ್ನಾದರೂ ಕೇಳಿದ್ದೀಯಾ?"

"ಇಲ್ಲ; ಎಲ್ಲರೂ 'ಸ್ವಾಮಿಜೀ' ಎನ್ನುತ್ತಾರೆ; ನಾನೂ ಹಾಗೆಯೆ ಕರೆಯುತ್ತೇನೆ."

"ಹಾಗಾದರೆ ಆದೊಂದು ನೋಡುವಂತಹ ವ್ಯಕ್ತಿಯೆ ಸರಿ!" ಇಬ್ಬರೂ ಆಶ್ರಮದ ಕಡೆಗೆ ಹೊರಟೆವು.

* ಸಣ್ಣಕತೆಗಳ ಸ್ಪರ್ಧೆಗೆ ಬಂದ ಕತೆಗಳಲ್ಲಿ ಒಳ್ಳೆಯ ಕತೆಯೊಂದಿದು.
—ಸಂ. ಜ.

ನಾವು ಹೋದಾಗ ಸ್ವಾಮಿಜಿ ಹೂಗಿಡುಗಳಿಗೆ ನೀರೆರೆಯುತ್ತಿದ್ದರು. ನಾವು ಹೋದ ಕೂಡಲೆ ಆದರದಿಂದ ಬರಮಾಡಿಕೊಳ್ಳುತ್ತ, ಸಹಜವಾದ ಸಲುಗೆಯಲ್ಲಿ, "ಏನು ರಾಮೂ, ಈಗ ಮೂರು ನಾಲ್ಕು ದಿನಗಳಿಂದಲೂ ಬಂದೇ ಇಲ್ಲ!" ಎಂದು ಕೇಳಿದರು.

"ನನ್ನ ಗೆಳೆಯ ಬಂದಿದ್ದಾನೆ, ಬಡವರ ಮನೆಗೆ ಭಾಗೀರಥಿಯು ಬಂದಂತಾಗಿದೆ; ಆದುದರಿಂದ ಈಗೆರಡು ದಿವಸ ಬರುವುದಾಗಲಿಲ್ಲ!" ನಾನು ಹೇಳಿದೆನು.

"ಹಾಗಾದರೆ ಇಂದು ನೀವು ನಮ್ಮ ಗುಡಿಸಿಲಿಗೆ ಬಂದದ್ದು, ಶಬರಿಯ ಪತ್ತಿರ ರಾಮನು ಬಂದಂತೆಯೆ ಸೈ!" ಎಂದು ಹಾಸ್ಯಮಾಡುತ್ತ, ಅಲ್ಲಿಯೆ ಇದ್ದ ಬೆತ್ತದ ಕುರ್ಚಿಗಳ ಮೇಲೆ ಕುಳ್ಳಿರಲು ಹೇಳಿ, ತಾವೂ ನಮಗೆ ಎದುರಾಗಿ ಕುಳಿತರು.

ನನ್ನ ಗೆಳೆಯನಿಗೂ ಅವರಿಗೂ ಪರಸ್ಪರ ಪರಿಚಯವಾದ ಮೇಲೆ, ನಾವು ಒಣಹರಟೆಯನ್ನು ಕೊಚ್ಚುತ್ತ ಕುಳಿತೆವು. ಮಾತಿಗೆಮಾತು ಬಂದು ಶಾಮೂ ಕೇಳಿದ:

"ಸ್ವಾಮಿಜಿ, ನಾನೊಂದು ಮಾತನ್ನು ಕೇಳಲೇ?"

ಇಪ್ಪರಲ್ಲಿಯೆ ಅವರಿಬ್ಬರಲ್ಲಿಯೂ ಆತ್ಮೀಯತೆ ಬೆಳೆದಿತ್ತು.

"ಅವಶ್ಯವಾಗಿ ಕೇಳಬಹುದು!"

"ತಾವು ಇಷ್ಟು ಚಿಕ್ಕವಯಸ್ಸಿನಲ್ಲಿಯೇಕೆ ಆಶ್ರಮವಾಸಿಗಳಾದಿರಿ?"

ಸ್ವಾಮಿಜಿ ನಗುತ್ತ ಹೇಳಿದರು: "ದೈವಯೋಗದಿಂದ!"

"ಅದೇನೋ ಉಪಚಾರದ ಮಾತು! ಇದನ್ನು ಕೇಳುವುದರಿಂದ ತಮ್ಮ ಮನಸ್ಸು ನೋಯುತ್ತಿದ್ದರೆ ನಾನು ಕೇಳುವುದಿಲ್ಲ!" ಎಂದ ಶಾಮೂ.

"ಛೇ, ಛೇ, ಹಾಗೇನೂ ಇಲ್ಲ! ನನ್ನ ಜೀವನದ ವಿಷಮ ಸಂಗತಿಗಳನ್ನು ಹೇಳಿ, ಕೇಳುವವರ ಮನಸ್ಸನ್ನೇಕೆ ನೋಯಿಸುವುದು— ಎಂದು ನನ್ನ ಮತ. ತಮಗೆ ಅಷ್ಟು ಆಸುರವೆ ಇದ್ದರೆ, ಹೇಳಲಿಕ್ಕೆ ನನ್ನದೇನೂ ಅಡ್ಡಿಯಿಲ್ಲ!"

"ನಮ್ಮ ಮನಸ್ಸೇನೂ ನೋಯುವುದಿಲ್ಲ; ಏನೋ ಒಂದು ಕುತೂಹಲದಿಂದ ಕೇಳಿದೆನು; ಹೇಳುವುದೂ ಬಿಡುವುದೂ ತಮ್ಮಿಷ್ಟ!"

ಸ್ವಾಮಿಜಿ ಕೆಲಹೊತ್ತು ವಿಚಾರಿಸಿ ನುಡಿದರು: "ಆಗಲಿ. ನೀವಿಷ್ಟು ಕೇಳುತ್ತೀರೆಂದಮೇಲೆ ಹೇಳುತ್ತೇನೆ...."

ಆ ಮೇಲೆ ತುಸುಹೊತ್ತು ನೆನಪುಮಾಡಿಕೊಳ್ಳುತ್ತ ಸ್ವಾಮಿಜಿ, ಹೇಳತೊಡಗಿದರು:

"ನಾನು ಹುಟ್ಟಿ ಬಳೆದುದು ಮಧ್ಯಮವರ್ಗದ ಕುಟುಂಬವೊಂದರಲ್ಲಿ. ನಮ್ಮ ತಂದೆಯವರು ಸಲವತ್ತು ರೂಪಾಯಿ ಸಂಬಳದ ಕಾರಕೂನರಾಗಿದ್ದರು. ನನಗೆ ಇಬ್ಬರು ಅಕ್ಕಂದಿರು. ಅವರ ಮದುವೆಯಾಗಬೇಕಾದರೆ ನಮ್ಮ ತಂದೆಯವರಿಗೆ ಪುನರ್ಜನ್ಮವಾದಂತಾಯಿತು. ನಮ್ಮ ತಂದೆಯವರು ತೀರಿಕೊಂಡಾಗ ನಾನು ಮ್ಯಾಟ್ರಿಕ್ ತರಗತಿಯಲ್ಲಿದ್ದೆ. ತಂದೆ ತೀರಿಕೊಂಡದ್ದರಿಂದ ನಮ್ಮ ಕುಟುಂಬವೆ ನಿರಾಧಾರವಾಯಿತು. ಆ ಸಲ ನಾನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಒಳ್ಳೆಯ ರೀತಿಯಿಂದ ಉತ್ತೀರ್ಣನಾದುದರಿಂದ, ನನ್ನ ಹಿತಚಿಂತಕರಲ್ಲಿ ಕೆಲವರು, ನನ್ನನ್ನು ಕಾಲೇಜಿಗೆ ಕಳುಹುವಂತೆ ನಮ್ಮ ತಾಯಿಗೆ ಸೂಚಿಸಿದರು. ಆದರೆ ಆದು ಹೇಗೆ ಸಾಧ್ಯವೆಂದು ನಮ್ಮ ತಾಯಿ ಸುಮ್ಮಗಾದಳು. ಸುದೈವದಿಂದಲೋ ದುರ್ದೈವದಿಂದಲೋ ನಮ್ಮ ಋಣಾನುಬಂಧಿಗಳೊಬ್ಬರು, ತಮ್ಮ ಆಪ್ತರೊಬ್ಬರು ಪುಣೆಯಲ್ಲಿರುವರೆಂದೂ ಅವರು ಒಳ್ಳೆಯ ಸಂಬಳದವರಾದುದರಿಂದ ಅವರಲ್ಲಿ ನನ್ನನ್ನು ಇಟ್ಟುಕೊಳ್ಳುವ ವ್ಯವಸ್ಥೆಯನ್ನು ಮಾಡಿಸುತ್ತೇವೆಂದೂ ಉಳಿದ ಖರ್ಚನ್ನು ನೀನೇ ಪಾಠ ಮುಂತಾದುದನ್ನು ಹೇಳಿ ನೋಡಿಕೊಳ್ಳಬೇಕೆಂದೂ ಹೇಳಿದರು. ಅಂತೂ ನಾನು ಕಾಲೇಜಿನ ಕಟ್ಟೆಯನ್ನು ಏರಿದೆನು....

"ನಾನು ಹೋಗಿ ಇದ್ದ ಸದ್ಗೃಹಸ್ಥರು ತುಂಬ ಸಿರಿವಂತರು. ಸ್ವಭಾವದಿಂದಲೂ ಒಳ್ಳೆಯವರಿದ್ದರು. ಅವರಿಗೆ ಒಬ್ಬಳೇ ಒಬ್ಬಳಾದ ಮಗಳು. ಆಕೆಯೂ ಅದೇ ವರುಷ ಕಾಲೇಜಿನ ಕಟ್ಟೆಯನ್ನೇರಿದ್ದಳು....

"ಅವಳು ಸುಂದರಿಯೆನ್ನಲು ಯಾವ ಅಡ್ಡಿಯೂ ಇಲ್ಲ. ತೆಳುವಾದ ಮೈಕಟ್ಟು, ಹವಣಾದ ನಿಲುವಿಕೆ, ಬಂಗಾರದ ಬಣ್ಣ, ಕನುಲದಂತಹ ಮೊಗ, ಎಸಳಾದ ಮೂಗು, ಗುಲಾಬಿಯಂತಹ ಗಲ್ಲಗಳು, ಬೇವಿನೆಲೆಯಂತಹ ಹುಬ್ಬುಗಳು, ತುಂಬಿಯೆರಗಿದ ಬೆಳ್ದಾವರೆಯಂತಹ ಕಣ್ಣುಗಳು, ನೀಳವಾದ ಕೇಶಪಾಶ—ಇವೆಲ್ಲ ಯಾರನ್ನಾದರೂ ಅವಳ ಕಡೆಗೊಮ್ಮೆ ಕಣ್ಣೆತ್ತಿ ನೋಡುವಂತೆ ಮಾಡುತ್ತಿದ್ದುವು. ನಾನು ಅವಳನ್ನು ಮೊದಲ ಸಲ ನೋಡಿದಾಗ, ಮತ್ತೊಮ್ಮೆ ನೋಡಬೇಕೆಂಬ ಹಂಬಲುಂಟಾಯಿತು; ಆದರೆ ಆದರಲ್ಲಿ ಕುತೂಹಲದ ಹೊರತು ಇನ್ನಾವ ವಿಕಾರದ ಭಾವನೆಯೂ ಇದ್ದಿಲ್ಲ....

"ನಾವಿಬ್ಬರೂ ಒಂದೇ ವರ್ಗದಲ್ಲಿ—ಒಂದೇ ಮನೆಯಲ್ಲಿ ಇದ್ದರೂ, ನಾವು ಕಾಲೇಜಿಗೆ ಕೂಡಿ ಹೋಗುತ್ತಿದ್ದಿಲ್ಲ; ಕೂಡಿ ಬರುತ್ತಿದ್ದಿಲ್ಲ. ಅವಳು ಸಿರಿವಂತರ ಮಗಳಾದುದರಿಂದ ನನ್ನನ್ನು ಅಲಕ್ಷ್ಯದಿಂದಲೇ ನೋಡುತ್ತಿದ್ದಳು. ನನ್ನ ಕೂಡ ಅವಳು ಹೆಚ್ಚಾಗಿ ಮಾತನ್ನು ಕೂಡ ಆಡುತ್ತಿದ್ದಿಲ್ಲ....

"ಒಂದು ಸಲ ನಾನು ಕಾಲೇಜಿನ ಚರ್ಚಾಸಭೆಯಲ್ಲಿ ಮಾತನಾಡಿದಾಗ, ಅವಳು ನನಗೆ ಪ್ರತಿಪಕ್ಷವಾಗಿ ಮಾತನಾಡಿದಳು, ಅಂದು ಮನೆಯಲ್ಲಿ ಅವಳೇ ನನ್ನ ಬಳಿಬಂದು 'ಇಂದು ಬಹಳ ಚೆನ್ನಾಗಿ ಮಾತನಾಡಿದಿರಿ' ಎಂದು ಹೇಳಿದಳು. 'ಏನು ಚೆನ್ನಾಗಿಯೋ ಏನೋ, ನೀವು ಮಾತ್ರ ನನಗಿಂತಲೂ ಒಳ್ಳೆಯ ರೀತಿ ಮಾತನಾಡಿದಿರಿ' ಎಂದೆ ನಾನು. ಮುಂದೆ ಅವಳೂ ಮಾತನಾಡಲಿಲ್ಲ, ನಾನೂ ಮಾತನಾಡಲಿಲ್ಲ....

"ಟರ್ಮಿನಲ್ ಪರೀಕ್ಷೆ ಸಮಾಪ್ತಿಸಿತು. ತುಂಬ ರಭಸದಿಂದ ಅಭ್ಯಾಸ ಮಾಡಿದೆನು. ಪರೀಕ್ಷೆ ಮುಗಿದ ಮೇಲೆ ಊರಿಗೆ ಬಂದೆನು...

"ಎರಡನೆಯ ಟರ್ಮಿನ ಆರಂಭಕ್ಕೆ ಪುಣೆಗೆ ಹೋಗಲು, ನಾನು ಒಂದನೆಯ ವರ್ಗದಲ್ಲಿ ಮೊದಲಿಗನಾಗಿ ಉತ್ತೀರ್ಣನಾದುದು ತಿಳಿಯಿತು. ಅದರಿಂದ ಆ ಟರ್ಮಿನ ಶಿಷ್ಯವೃತ್ತಿಗಳು ನನಗೆ ದೊರೆತುವು. ಆಗ ನನ್ನದೊಂದು ಭಾರವಿಳಿದಂತಾಗಿ, ಮತ್ತೆ ಅಭ್ಯಾಸ ಮಾಡಲು ಒಂದು ಬಗೆಯ ಹುರುಪು ಬಂದಿತು...

"ಅವಳು ಎಲ್ಲರಂತೆ ಪಾಸ್ ವರ್ಗದಲ್ಲಿ ಉತ್ತೀರ್ಣಳಾಗಿದ್ದಳು. ಆದುದರಿಂದ ಈ ಸಲ, ತನಗೆ ಏನಾದರೂ ಕಠಿನವೆನಿಸಿದ ವಿಷಯಗಳನ್ನು ನನ್ನ ಕಡೆಯಿಂದ ಹೇಳಿಸಿಕೊಂಡು ಹೋಗತೊಡಗಿದಳು...

"ಒಂದು ದಿನ ಸಂಸ್ಕೃತವನ್ನು ಹೇಳಿಸಿಕೊಳ್ಳಲು ಬಂದಾಗ, ಏನೋ ಮಾತು ಹೊರಟು ಕೇಳಿದಳು: 'ನೀವು ಟೆನಿಸ್ ಆಡುವುದಿಲ್ಲವೇ?'

'ಇಲ್ಲ, ನನಗೆ ಆಡಲಿಕ್ಕೆ ಬರುವುದಿಲ್ಲ' ನಾನು ಹೇಳಿದೆನು.

'ಅದೇನೂ ಅಷ್ಟು ಕಠಿನವಾದ ಆಟವಲ್ಲ!'

'ಆದರೂ ನಾನು ಅತ್ತ ಲಕ್ಷ್ಯವನ್ನೇ ಹಾಕಿಲ್ಲ, ಅಲ್ಲದೆ ಆಟದ ಕಡೆಗೆ ಅಷ್ಟು ಅಭಿರುಚಿಯೂ ಇಲ್ಲ!'

'ನಾನು ಅದನ್ನು ಆಡಲಿಕ್ಕೆ ಕಲಿಸಲೇ?'

'ಬೇಡ, ನನ್ನ ಸಲುವಾಗಿ ಅಷ್ಟು ಶ್ರಮವಹಿಸುವ ಅಗತ್ಯವಿಲ್ಲ! ಅದನ್ನು ಕಲಿತು ನಾನೇನು ಆಟಗಾರನೆಂದು ಪೆಸರಾಗಬೇಕಾಗಿದೆ?'

'ಅದಕ್ಕಲ್ಲ ನಾನು ಕಲಿಸುವುದು! ಈ ಸಲದ ಕಾಲೇಜುಗಳ ಆಟದ ಮೇಲಾಟಗಳಲ್ಲಿ ನಾನು ಭಾಗವಹಿಸುವವಳಿದ್ದೇನೆ; ನನಗೆ ಪ್ರ್ಯಾಕ್ಟೀಸ್ ಮಾಡಲು ಒಬ್ಬ ಜೊತೆಗಾರರು ಬೇಕಾಗಿದ್ದಾರೆ. ಹೇಗಾದರೂ ನೀವು ಇಲ್ಲಿಯೆ ಇರುತ್ತೀರಿ; ನಮಗೆ ಬೇಕಾದಾಗ ನಾವು ಆಡಬಹುದು!'

ನಾನು ಒಲ್ಲೆನೆಂದು ಎಷ್ಟು ಹೇಳಿದರೂ ಕೇಳದೆ ಕಡೆಗೆ ನನ್ನನ್ನು ಆಕೆ ಒಪ್ಪಿಸಿದಳು...

"ಈಗ ನಾವು ದಿನದ ಬಹುಭಾಗವನ್ನು ಕೂಡಿಯೆ ಕಳೆಯುವಂತಾಯಿತು. ಹೇಗೆಂದರೆ ಒಂದೇ ವರ್ಗದಲ್ಲಿದ್ದುದರಿಂದ ಕಾಲೇಜಿನಲ್ಲಿ ಕೂಡಿಯೆ ಇರುತ್ತಿದ್ದೆವು; ಅಭ್ಯಾಸವನ್ನು ಕೂಡಿಯೆ ಮಾಡುತ್ತಿದ್ದೆವು; ಅಲ್ಲದೆ ಈಗ ಆಟವನ್ನೂ ಕೂಡಿಯೆ ಆಡತೊಡಗಿದೆವು...

"ದಿನಗಳು ಒಂದೊಂದಾಗಿ ಚಾರಿದುವು. ಒಂದು ದಿನ ಊರಿಂದ ಕಾಗದ ಬಂದಿತು. ತಾಯಿಗೆ ಜಡ್ಡಾಗಿರುವುದೆಂದೂ ಅವಳು ನಿನ್ನನ್ನು ನೋಡಲಿಚ್ಛಿಸುತ್ತಾಳೆಯೆಂದೂ ಅದರಲ್ಲಿ ಬರೆದಿತ್ತು. ನಾನು ಕೂಡಲೆ ಊರಿಗೆ ಬಂದೆನು...

"ಅವ್ವನಿಗೆ ಪೂರ್ಣ ಗುಣವಾದ ಬಳಿಕ ನನ್ನ ಮನಸ್ಸು ಪುಣೆಯ ಕಡೆಗೆ ಹರಿಯಹತ್ತಿತು. ಯಾವಾಗಲೂ ಅವಳ ಚಿತ್ರವೇ ನನ್ನ ಕಣ್ಣಮುಂದೆ ಕಟ್ಟತೊಡಗಿತು. ನಾನು ಎಷ್ಟೆಷ್ಟು ಅವಳನ್ನು ಮರೆಯಬೇಕೆಂದು ಹವಣಿಸುತ್ತಿದ್ದೆನೊ ಅಷ್ಟಷ್ಟು ಅವಳ ಚಿತ್ರವು ನಿಚ್ಚಳವಾಗಿ ಕಾಣುತ್ತಿತ್ತು. ಅಲ್ಲದೆ ಅವಳನ್ನು ಮರೆಯಲು ಯತ್ನಿಸಿದಾಗಲೆಲ್ಲ, ಮನಸ್ಸಿನಲ್ಲಿ ಏನೋ ಒಂದು ವೇದನೆಯಾಗುತ್ತಿತ್ತು. ಅವಳನ್ನು ನೆನಸಿಕೊಂಡರೆ ಮನವು ಸೆಮ್ಮನಿದಿಯಾಗಿರುತ್ತಿತ್ತು. ಹೀಗೇಕಾಗುತ್ತಿತೆಂಬುದೇ ನನಗೆ ತಿಳಿಯದಂತಾಯಿತು. ಹೀಗಾಗಿ, ನಾನು ಪುಣೆಗೆ ಹೋಗಲು ತಾಯಿಯ ಆಶೀರ್ವಾದವನ್ನು ಬೇಗನೆ ಪಡೆದುಕೊಳ್ಳಲು ನಿಶ್ಚಯಿಸಿದೆನು. ಇಪ್ಪರಲ್ಲಿಯೆ ಪುಣೆಯಿಂದ ಪತ್ರವೂ ಬಂದಿತು. ಅನಳದೆ ಪತ್ರ. ನನಗೆ ಊರಲ್ಲಿ ನಿಲ್ಲುವುದಾಗಲಿಲ್ಲ, ಯಾಕೆಂದರೆ ಬೇಗನೆ ಹೊರಟುಬರಬೇಕೆಂದು ಅನಳು ಬರೆದಿದ್ದಳು...

"ನಾನು ಅವಳನ್ನು ಕಂಡಾಗ ಆಕೆ ಸೊರಗಿದಂತೆ ಕಂಡಳು. 'ಹೀಗೇಕಾಗಿದ್ದೀಯೆ?' ಎಂದು ಕೇಳಿದೆನು. 'ಏನೋ ಮೈಯಲ್ಲಿ ಸ್ವಲ್ಪ ಅಲಸ್ಯ, ನೀವು ಹೋದಾಗಿನಿಂದಲೂ ಮನಸ್ಸಿಗೆ ಸೊಗಸೇ ಇಲ್ಲ. ಯಾವಾಗಲೂ ನಿಮ್ಮ ನೆನಪೇ ಆಗುತ್ತಿತ್ತು. ನೀವು ಬೇಗನೇ ಬಾರದುದರಿಂದ ಪತ್ರ ಬರೆದೆ!' ಎಂದಳು. 'ನನಗಾದರೂ ನಿನ್ನ ನೆನಪಾಗುತ್ತಿತ್ತು!' ಎಂದು ನಾನೂ ಹೇಳಿದೆನು...

"ಈಗ ನಾವು ಒಬ್ಬರನ್ನೊಬ್ಬರು ಬಹಳ ಹೊತ್ತು ಅಗಲುತ್ತಿದ್ದಿಲ್ಲ. ಈಗೀಗ ನಮ್ಮಿಬ್ಬರಲ್ಲಿಯೂ ಏನೇನೋ ಹೊಸ ಭಾವನೆಗಳು ಉಂಟಾಗತೊಡಗಿದುವು. ಈಗ ಅವಳ ನೋಟದಲ್ಲಿ ಒಂದು ಬಗೆಯ ಕಾತರಭಾವನೆಯು ತುಂಬಿ ಸೂಸುತ್ತಿತ್ತು. ಈಗ ಅವಳ ಕಣ್ಣುಗಳು ಭಾವಪೂರ್ಣವಾಗಿದ್ದುವಲ್ಲದೆ ಮಾತುಗಳು ಅರ್ಥಗರ್ಭಿತಗಳಾಗಿರುವಂತೆ ನನಗೆ ಭಾಸವಾಗತೊಡಗಿತು. ಒಬ್ಬರ ಮುಖವನ್ನೊಬ್ಬರು ಬಹಳ ಹೊತ್ತು ಕಾಣದಿದ್ದರೆ ಮನಸ್ಸಿಗೆ ಸೊಗಸುಂಟಾಗುತ್ತಿದ್ದಿಲ್ಲ...

"ಒಂದು ದಿನ ನಮ್ಮಿಬ್ಬರ ಟೆನಿಸ್ ಆಟವು ಬಹಳ ಹುರುಪಿನದಾಯಿತು. ಅಂದು ಇಬ್ಬರೂ ಬಹಳ ಉಲ್ಲಾಸದಿಂದಿದ್ದೆವು. ಆಗ ಅವಳು ಕೇಳಿದಳು: 'ಇಂದು ಸಿನೇಮಾಕ್ಕೆ ಹೋಗೋಣವೇ?' 'ಕಾಕಾ (ಅವಳ ತಂದೆ) ಅಪ್ಪಣೆ ಕೊಡುವರೆ?' ಎಂದು ನಾನು ಕೇಳಿದೆ. 'ಅವರ ಅಪ್ಪಣೆಯನ್ನು ದೊರೆಕಿಸುವ ಭಾರ ನನ್ನದು!' ಎಂದಳು. ನಾನು ಒಪ್ಪಿದೆ..

"ಅಂದು ನಾವು ನೋಡಿದ ಚಿತ್ರಪಟವು ಎಷ್ಟೊಂದು ಆದರ್ಶವಾಗಿತ್ತೋ ಅಷ್ಟೆ ಪ್ರಣಯಪೂರಿತವೂ ಆಗಿತ್ತು. 'ಚಿತ್ರವು ಚೆನ್ನಾಗಿರುವುದಲ್ಲವೇ?' ಎಂದು ಅವಳು ಕೇಳಿದಳು— ಮನೆಗೆ ಬರುವಾಗ. 'ಆಹುದು' ನಾನೆಂದೆ. ಮುಂದೆ ಇಬ್ಬರೂ ಮೌನವಾಗಿಯೆ ಮನೆಗೆ ಹೋದೆವು...

"ಅಂದು ಹಾಸಿಗೆಯ ಮೇಲೆ ಎಷ್ಟು ಹೊರಳಾಡಿದರೂ ನಿದ್ರೆಯೇ ಬರಲಿಲ್ಲ. ಕಣ್ಣಮುಂದೆ ಆ ಚಿತ್ರಪಟದಲ್ಲಿಯ ದೃಶ್ಯ-

ಗಳೇ ಕಾಣತೊಡಗಿದುವು. ಬೀಸತ್ತು ಮುಹಡಿಯ ಮೇಲಿನ ಗಚ್ಚಿನ ನೆಲಗಟ್ಟನ್ನೇರಿ ನಿಂತೆನು.....

" ಆಗ ನಡುರಾತ್ರಿ ಮೀರಿಹೋಗಿತ್ತು. ಯಾವಾಗಲೂ ಜನರ ಗದ್ದಲದಿಂದ ಕೂಡಿದ ಪಟ್ಟಣವು ಈಗ ಶಾಂತವಾಗಿ ನಿದ್ರಿಸುತ್ತಿತ್ತು. ವಿದ್ಯುದ್ದೀಪಗಳು ರಜನೀರಮಣಿಯ ಮಣಿಹಾರದಲ್ಲಿಯ ವಜ್ರಗಳಂತೆ ಕಿರಣಗಳನ್ನು ಸುತ್ತಲೂ ಬೀರುತ್ತ ಝಗಝಗಿಸುತ್ತಿದ್ದುವು. ಹುಣ್ಣಿಮೆಯ ಚಂದಿರನು ಬಾಂದಳದಲ್ಲಿ ತೊಳಗುತ್ತಿದ್ದನು. ಮನೆಯ ಮುಂದಿನ ಕೈದೋಟದಲ್ಲಿಯ ಪೂಗಂಪನ್ನು ತಂಗಾಳಿಯು ಎಲ್ಲೆಡೆಗೂ ಹರಡುತ್ತಿತ್ತು.....

" ನಾನು ಬೆಳುದಿಂಗಳನ್ನೂ, ತೆರವಾದ ಬೀದಿಗಳನ್ನೂ, ವಿದ್ಯುದ್ದೀಪಗಳನ್ನೂ ನೋಡುತ್ತ ನಿಂತೆನು. ಇದರಿಂದ ನನಗೆ ನಿದ್ರೆ ಬರುವುದರ ಬದಲು ಅದು ಹಾರಿಹೋಯಿತು. ಚಂದ್ರನನ್ನು ನೋಡಿದಂತೆಲ್ಲ, ಒಂದು ತೆರದ ವಾಹವ್ಯ ಹುಟ್ಟತೊಡಗಿತು. ತಲೆಯಲ್ಲಿ ಏನೇನೋ ವಿಚಾರಗಳು ತುಂಬಿದ್ದುವು. ಹಾಗೆಯೆ ಆ ದೃಶ್ಯವನ್ನು ನೋಡುತ್ತ ಮೈಮರೆದು ನಿಂತಿದ್ದೆನು.....

" ನನ್ನ ಗಲ್ಲಕ್ಕೆ ತಂಪು ತಗುಲಿದಂತಾಯಿತು; ಹೊರಳಿ ನೋಡಿದೆನು. ಅವಳು ಬಂದು ನಿಂತು, ನನ್ನ ಹೆಗಲ ಮೇಲೆ ಕೈಹಾಕಿದ್ದಳು. ' ನೀನೇಕೆ ಇಲ್ಲಿಗೆ ಬಂದೆ? ' ಅವಳನ್ನು ಕೇಳಿದೆ.

' ನೀವೇಕೆ ಬಂದಿರುವಿರಿ? ' ಅವಳ ಕೇಳಿದಳು.

' ನನಗೆ ನಿದ್ರೆ ಹತ್ತಲಿಲ್ಲ, ' ನಾನು ಹೇಳಿದೆ.

' ನನಗೂ ನಿದ್ರೆ ಹತ್ತಲಿಲ್ಲ! ' ಅವಳು ಹೇಳಿದಳು.

ಮುಂದೆಯೇನು ಮಾತನಾಡಬೇಕೆಂಬುದೇ ನನಗೆ ತಿಳಿಯಲಿಲ್ಲ. ಅವಳು ' ಏಕೆ ಸುಮ್ಮನಾದಿರಿ? ' ಎಂದು ನನ್ನ ಹೆಗಲ ಮೇಲೆ ತಲೆಯನ್ನಿಟ್ಟು ಹಾಸ್ಯದಿಂದ ಕೇಳಿದಳು. ನಾನು ಅವಳ ಮುಂಗುರುಳುಗಳನ್ನು ಸರಿಸುತ್ತ ಕೇಳಿದೆನು: ' ನಾನೊಂದು ಮಾತನ್ನು ಕೇಳಲೇ? '

' ಅದಕ್ಕೇಕಿಷ್ಟು ಸಂಕೋಚ? '

' ನೀನು....ನೀನು....ನನ್ನನ್ನು ಪ್ರೀತಿಸುತ್ತೀಯಾ? '

ಅವಳ ಮುಖವು ಕೆಂಪೇರಿತು. ಮೊಗವನ್ನು ಕೆಳಗೆ ಮಾಡಿದಳು.

' ಏಕೆ ಸುಮ್ಮಗಿರುವೆ? ಮಾತನಾಡುದಿವ್ವುಲ್ಲವೇ? ನಾನು ಕೇಳಿದುದರಿಂದ ಸಿಟ್ಟುಬಂದಿತೇ? ' ಅವಳು ಮೇಲೆ ಮುಖಮಾಡಿ ನನ್ನನ್ನೊಮ್ಮೆ ನೋಡಿದಳು. ತುಟಿಗಳಲ್ಲಿ ಮುಗುಳುನಗೆ ತೋರುತ್ತಿತ್ತು. ಕಣ್ಣಿನಲ್ಲಿಯ ಭಾವ ಹೃದಯವನ್ನು ಬಿಚ್ಚಿ ತೋರಿಸುತ್ತಿತ್ತು. ಆಗ ನನಗೆ ಅವಳು ಎಷ್ಟು ಚೆಲುವೆಯಾಗಿ ಕಂಡಳೆಂಬುದನ್ನು ನಾನು ಬಣ್ಣಿಸಲಾರೆನು; ಅದನ್ನು ನೀವೇ ಊಹಿಸಬೇಕು. ಮುಂದಿನ ಕ್ಷಣದಲ್ಲಿಯೆ ಅವಳು— ಬಳ್ಳಿಯು ಗಿಡವನ್ನಾಶ್ರಯಿಸಿದಂತೆ— ನನ್ನನ್ನು ಆಶ್ರಯಿಸಿದ್ದಳು. ನಾಲ್ಕೂ ತುಟಿಗಳು ಒಂದಾಗಿದ್ದುವು.....

" ಈಗ ನಾವು ಒಬ್ಬರನ್ನೊಬ್ಬರು ಪ್ರೀತಿಸುವುದನ್ನು ಕಂಡುಕೊಂಡೆವು..... '

" ಇಷ್ಟರಲ್ಲಿ ನಮ್ಮ ವಾರ್ಷಿಕ ಪರೀಕ್ಷೆಯು ಸಮೀಪಿಸಿತು....

" ಪರೀಕ್ಷೆಯಾದ ಮೇಲೆ, ಊರಿಗೆ ಹೋಗುವುದೇ ನನಗೆ ಜೀವದ ಸುತ್ತು ಬಂದಂತಾಯಿತು. ಅವಳೂ ಹೋಗಕೂಡದೆಂದು ಆಗ್ರಹಮಾಡಿದಳು; ಆದರೆ ತಾಯಿಯ ಮಾತನ್ನು ಎಂತಾರುವಂತಿದ್ದಿಲ್ಲ.....

" ಹೇಗೋ ಊರಿಗೆ ಬಂದು ಹತ್ತಿದೆನು. ದೇಹವೊಂದು ಮಾತ್ರ ಊರಲ್ಲಿತ್ತು. ಜೀವವೆಲ್ಲವೂ ಪುಣೆಯಲ್ಲಿಯೆ! ...."

" ಎರಡು ದಿನಗಳಿಗೊಮ್ಮೆ ತಪ್ಪದೆ ಅವಳ ಕಾಗದ ಬರುತ್ತಿದ್ದಿತು. ನಾನೂ ತಪ್ಪದೆ ಅದಕ್ಕೆ ಉತ್ತರ ಬರೆಯುತ್ತಿದ್ದೆ.....

" ಒಂದು ಪತ್ರದಲ್ಲಿ ' ಇದನ್ನು ಕಂಡಕೂಡಲೇ ಹೊರಟು ಬರಬೇಕು, ಬಂದಮೇಲೆ ಎಲ್ಲವೂ ತಿಳಿಯುವುದು, ' ಎಂದಿಷ್ಟೇ ಇತ್ತು.....

" ಮರುದಿವಸ ಪುಣೆಗೆ ಹೊರಟಾಗ ಒಂದು ಬುಕ್‌ಪೋಸ್ಟ್ ಪತ್ರ ಬಂದಿತು. ಅದನ್ನು ಓದಿದ ಕೂಡಲೆ ನನಗೆ ಸಿಡಿಲು ಬಡಿದಂತಾಯಿತು. ಅದು ಅವಳ ಮದುವೆಯ ಓಲೆಯಾಗಿತ್ತು. ಪರದೇಶದಿಂದ ಮರಳಿ ಬಂದವರೊಬ್ಬರಿಗೆ ಅವಳನ್ನು ಕೊಟ್ಟಿದ್ದರು.....

" ನಾನು ಪುಣೆಯನ್ನು ಮುಟ್ಟಿ ಮನೆಯಲ್ಲಿ ಕಾಲಿಟ್ಟಾಗ, ಗಂಭೀರವಾತಾವರಣವು ಮನೆಯಲ್ಲಿ ಪರಡಿದಂತೆ ಭಾಸವಾಯಿತು. ಅವಳ ದರ್ಶನವಂತೂ ಆಗಲೆ ಇಲ್ಲ. ....

" ನನಗೆ ಅವಳ ದರ್ಶನವಾದಾಗ ರಾತ್ರಿಯಾಗಿತ್ತು. ಆಕೆ ನನ್ನನ್ನು ನೋಡಿ ತಕ್ಕೈಬಿದ್ದು ಮೂಕಳಾಗಿ ಕಣ್ಣೀರನ್ನು ಸುರಿಸಹತ್ತಿದಳು. ನಾನು ಅವಳನ್ನು ಸಮಾಧಾನಪಡಿಸುವಷ್ಟರಲ್ಲಿ, ಕಾಕಾ ನಿಮ್ಮನ್ನು ಕರೆಯುತ್ತಾರೆಂದು ಆಳುಮಗನೊಬ್ಬನು ಬಂದು ಹೇಳಿದನು.

" ನಾವು ಹೋಗಲು ' ಕೂಡ್ರು ' ಎಂದರು ಕಾಕಾ. ನಾವಿಬ್ಬರೂ ಕುಳಿತೆವು. ' ನೀನು ನಮ್ಮ ಉಪಕಾರವನ್ನು ಜೆನ್ನಾಗಿ ತೀರಿಸಿದೆ! ' ನನ್ನನ್ನುದ್ದೇಶಿಸಿ ನುಡಿದರು. ' ನನಗೆ ಅರ್ಥವಾಗಲಿಲ್ಲ! ' ನಾನೆಂದೆ.

' ಹೇಗೆ ಅರ್ಥವಾದೀತು? ಏನೋ ಬಡಹುಡುಗನೆಂದು ಮನೆಯಲ್ಲಿಟ್ಟುಕೊಂಡರೆ, ಮನೆಯನ್ನೇ ಹಾಳುಮಾಡಿದೆಯಲ್ಲ! ನೋಡು, ಈಗ ಇವಳು ನಿನ್ನ ಹೊರತು ಎರಡನೆಯವರನ್ನು ಮದುವೆಯಾಗುವುದಿಲ್ಲವೆಂದು ಹಟ ಹಿಡಿದಿದ್ದಾಳೆ! '

ನಾನು ಸುಮ್ಮನೇ ಇದ್ದೆನು.

' ಇವಳು ಈಗ ನಿನ್ನನ್ನು ಮದುವೆಮಾಡಿಕೊಂಡರೆ ನಾನು ನನ್ನ ಬಾಲ್ಯದ ಸ್ನೇಹಿತನಿಗೆ ದ್ರೋಹಬಗೆದಂತೆ ಆಗುತ್ತದೆ. ನಿಮ್ಮ ಹುಡುಗನಿಗೆ ನನ್ನ ಹುಡುಗಿಯನ್ನು ಕೊಡುತ್ತೇನೆಂದು, ಇವಳು ಇನ್ನೂ ಹುಟ್ಟುವ ಮೊದಲೇ ಮಾತುಕೊಟ್ಟಿದ್ದೆನು. ನನ್ನ

ಗೆಳೆಯನ ಮಗನು ಪರದೇಶಕ್ಕೆ ಹೋಗುವ ಮೊದಲೇ ಇವಳ ಮದುವೆಯನ್ನು ಮಾಡಬೇಕೆಂದಿದ್ದೆ; ಆದರೆ ಅವನು ತಿರುಗಿ ಬಂದ ಮೇಲೆಯೆ ಮಾಡಿಕೊಳ್ಳುತ್ತೇನೆಂದ; ಅವನು ಬಂದ ಮೇಲೆ ಇವಳು ಅಶಿಕ್ಷಿತಳೆಂದು ನಿರಾಕರಿಸಬಾರದೆಂಬ ಕಾರಣದಿಂದ, ಇವಳನ್ನು ಕಾಲೇಜಿಗೆ ಕಳಿಸಿದೆನು. ಆದರೆ....'

" ಅವರಿಗೆ ಮುಂದೆ ಮಾತನಾಡುವುದಾಗಲಿಲ್ಲ ಸಿಟ್ಟಿನಿಂದ ತುಟಿಗಳು ನಡುಗುತ್ತಿದ್ದುವು. ತುಸು ತಡೆದು ಮತ್ತೆ ನುಡಿಯತೊಡಗಿದರು: ' ಆಯಿತು. ನಿನ್ನದಾದರೂ ಏನುತಪ್ಪು? ನನ್ನದೇ ತಪ್ಪು! ನಿನ್ನನ್ನು ಮನೆಯಲ್ಲಿಟ್ಟುಕೊಂಡು ಕೂಳು ಹಾಕಿದ್ದೇ ನನ್ನ ತಪ್ಪು! ಉಂಡ ಮನೆ ಗಳ ಎಣಿಸುವುದೇ ಈಗಿನ ಸುಶಿಕ್ಷಿತರ ಸಂಸ್ಕೃತಿ.....'

'ಬಾಬಾ ಸ್ವಲ್ಪ ವಿಚಾರದಿಂದ ಮಾತನಾಡಿರಿ.' ಅವಳು ನಡುವೆ ಬಾಯಿಹಾಕಿದಳು. ಆದರೆ ನಾನು ಅವಳನ್ನು ಅಷ್ಟಕ್ಕೇ ತಡೆದೆನು. ಅವರ ಕೊನೆಯ ಮಾತುಗಳು ನನಗೆ ಬಹಳವಾಗಿ ನೆಟ್ಟುವು. ನಾನು ವಿಚಾರವುಗ್ನನಾದುದರಿಂದ ಅವರು ಮತ್ತೇನೆಂದರೆಂಬುದೇ ಗೊತ್ತಾಗಲಿಲ್ಲ. ನಾನಾಗ ಒಂದು ನಿರ್ಧಾರಕ್ಕೆ ಕೂಡಲೆ ಬಂದೆನು. ಆದರಿಂದ ನಾನು ಮೈತಿಳಿಯುವಷ್ಟರಲ್ಲಿ ' ಏಕೆ ಸುಮ್ಮನೆ ಕಲ್ಲುದೇವರಂತೆ ಕುಳಿತಿರುವೆ?' ಎಂಬ ಕರ್ಕಶ ಶಬ್ದಗಳು ನನ್ನ ಕಿವಿಯನ್ನು ಸೇರಿದುವು.

' ನಾನು ಇವಳನ್ನು ಮದುವೆಗೆ ಒಪ್ಪಿಸುತ್ತೇನೆ! ' ಎಂದು ಹೇಳಿ ಅಲ್ಲಿಂದ ಹೊರಟಾಗ ' ಫಣ್ ಫಣ್ ' ಎಂದು ಎರಡು ಗಂಟೆಗಳು ಗಡಿಯಾರದಲ್ಲಿ ಬಡಿದುವು....

"ನಾನು ನನ್ನ ಕೋಣೆಯಲ್ಲಿ ಹೋಗಿ ವಿಚಾರಿಸುತ್ತ ಕುಳಿತೆನು. ಅವಳು ಯಾವಾಗ ಬಂದಳೋ ನನಗೆ ಗೊತ್ತೇ ಇದ್ದಿಲ್ಲ.

' ನನ್ನದೊಂದು ವಿಚಾರವಿದೆ ಹೇಳಲೇ?' ಎಂದಳು.

' ಹುಂ, ಯಾರು? .... ಯಾವ ವಿಚಾರ? ....' ಎಂದೆ.

' ನಾವಿಬ್ಬರೂ ಇಲ್ಲಿಂದ ಎಲ್ಲಿಯಾದರೂ ಹೋಗಿಬಿಡೋಣ!'

' ಅದೇನೋ ಸರಿಯಾದ ಮಾತು; ಆದರೆ ನಾನು ನಿಮ್ಮ ಮನೆಯ ಉಪ್ಪನ್ನು ಉಣ್ಣದೆ ಇದ್ದಿದ್ದರೆ ಹಾಗೆ ಮಾಡಬಹುದಾಗಿತ್ತು!'

' ಹಾಗಾದರೆ ಈಗೇನು ಮಾಡಬೇಕು?'

' ಅದನ್ನೇ ಈಗ ಹೇಳಬೇಕೆಂದಿದ್ದೆನು!'

' ಏನದು??

'ನೀನು ನಿಮ್ಮ ತಂದೆಯ ಅಪ್ಪಣೆಯ ಪ್ರಕಾರ ಮದುವೆಯಾಗಬೇಕು!'

' ಆ ಮಾತನ್ನು ಬಿಟ್ಟು ಉಳಿದದ್ದನ್ನು ಮಾಡುತ್ತೇನೆ! '

' ಹಾಗೆನ್ನಬಾರದು. ನಾಯಿ ಕೂಡ ಉಂಡವರಿಗೆರಡು ಬಗೆಯುವುದಿಲ್ಲ; ಎಂದ ಮೇಲೆ ಸುಶಿಕ್ಷಿತನಾದ ಮನುಷ್ಯನು ಹೀಗೆ ಮಾಡುವುದು ಅಯೋಗ್ಯವಲ್ಲವೆ?' ಬಿಕ್ಕಿ ಬಿಕ್ಕಿ ಅಳತೊಡಗಿದಳಾಕೆ. ನನ್ನ ಪ್ರಶ್ನೆಗೆ ಉತ್ತರವನ್ನೇ ಕೊಡಲಿಲ್ಲ. ನಾನೇ ಕೇಳಿದೆನು: ' ಪವಿತ್ರಪ್ರೇಮವೆಂದರೇನೆಂಬುದನ್ನಾದರೂ ವಿಚಾರಿಸಿದ್ದಿಯಾ?'

ಅವಳು ಹೇಳಿದಳು, ' ನನಗೆ ಅದೆಲ್ಲ ಗೊತ್ತಿಲ್ಲ!'

ನಾನು ಕೇಳಿದೆನು ' ನಾನು ಹೇಳುವುದನ್ನಾದರೂ ಕೇಳುತ್ತೀಯಾ?'

' ಹೂಂ'

' ಸ್ನೇಹ, ತ್ಯಾಗ, ಕ್ಷಮೆಗಳನ್ನು ಒಳಗೊಂಡಿರುವ ಪ್ರೇಮವೇ ಪವಿತ್ರಪ್ರೇಮವು. ನೀನು ನನ್ನನ್ನು ನಿಜವಾಗಿಯೂ ಪ್ರೀತಿಸುತ್ತಿದ್ದರೆ, ನನ್ನಿಂದ ನಿನಗೆ ದೊರೆಯಬೇಕಾಗಿದ್ದ ಸುಖವನ್ನು ತ್ಯಾಗಮಾಡಿ ನಿಮ್ಮ ತಂದೆಯ ಮನಸ್ಸಿನ ಪ್ರಕಾರ ಮದುವೆಯಾಗು! ನಾನು ನಿನ್ನನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಿರುವುದರಿಂದ ನಿನ್ನ ಸಲುವಾಗಿ ನಾನು, ನಿನ್ನಿಂದ ನನಗೆ ದೊರೆಯಬೇಕಾಗಿದ್ದ ಸುಖವನ್ನು ತ್ಯಾಗಮಾಡಿ, ಆಜನ್ಮ ಬ್ರಹ್ಮಚಾರಿಯಾಗಿದ್ದು, ಆತನ ಸೇವೆಯಲ್ಲಿ ಕಾಲ ಕಳೆಯುತ್ತೇನೆ! '

ಈ ಮಾತಿಗೂ ಅವಳು ಉತ್ತರ ಕೊಡಲಿಲ್ಲ. ಅವಳ ಬಿಕ್ಕುಗಳು ಹೆಚ್ಚಾದುವು. ಕಣ್ಣೀರು ಕೋಡಿಯಾಗಿ ಹರಿಯತೊಡಗಿದುವು. ಅವಳು ಬಂದು ನನ್ನನ್ನು ತಕ್ಕೈಬಿದ್ದಳು. ನಾನು ನಿಶ್ಚಲನಾಗಿಯೇ ಇದ್ದೆನು. ಅವಳ ತಂದೆಯ ಮಾತುಗಳು ಅಷ್ಟು ಆಳವಾಗಿ ನನ್ನಲ್ಲಿ ನೆಟ್ಟಿದ್ದುವು....

" ಅಂತೂ ಅವಳನ್ನು ನನ್ನ ಮತದಂತೆ ಒಪ್ಪಿಸಬೇಕಾದರೆ ನನಗೆ ಪುನರ್ಜನ್ಮವಾಯಿತು. ಕಡೆಗೊಮ್ಮೆ ಒಪ್ಪಿಕೊಂಡಳು. ಹೋಗುವಾಗ ನನ್ನನ್ನು ಕೇಳಿದಳು! ' ಒಂದು ಕೊನೆಯ ವಿನ್ನಹವನ್ನು ಮಾಡಿಕೊಳ್ಳಲೇ ' ' ಏನು? '

' ಒಂದೇ ಒಂದು ಪ್ರೇಮಾಲಿಂಗನ!

* * *

" ಅವಳು ನನ್ನ ಬಾಹುಪಾಶವನ್ನು ಬಿಡಿಸಿಕೊಂಡು ಹೋದಾಗ ಮಂಗಲಪ್ರಭಾತವಾಗುತ್ತಲಿತ್ತು.

ನಾನು ಅಂದೆಯೆ, ಅಲ್ಲಿಂದ ಹೇಳದೆ ಕೇಳದೆ ಹೊರಟು ನಡೆದೆನು. ಹೋಗುವಾಗ ಅವಳದೊಂದು ಭಾವಚಿತ್ರವನ್ನು ಗುರುತಾಗಿ ತೆಗೆದುಕೊಂಡು ಹೋದೆನು. ಆಗ ನನಗೆ ಜಗತ್ತೇ ಶೂನ್ಯವಾದಂತಾಗಿತ್ತು. ನನ್ನ ಕದಡಿದ ಮನಕ್ಕೆ, ಆಗ ಭರದಿಂದ ಸಾಗಿದ್ದ ಭಾರತದ ಸ್ವಾತಂತ್ರ್ಯಸಂಗ್ರಾಮವೇ ಶಾಂತಿಯನ್ನು ಕೊಟ್ಟಿತು. ಸ್ವಾತಂತ್ರ್ಯಸಂಗ್ರಾಮದಲ್ಲಿ ಸರಕಾರದ ಶಿಕ್ಷೆಗೆ ಗುರಿಯಾಗಿ, ಕೆಲಕಾಲ ಸೆರೆಮನೆ ಸೇರಿದೆ.....

" ನಾನು ನನ್ನ ಶಿಕ್ಷೆಯ ಅವಧಿಯನ್ನು ತೀರಿಸಿ ಬಂದಮೇಲೆ, ಅವಳ ವಿಷಯವಾಗಿ ವಿಚಾರಿಸಿದೆನು. ಏನೂ ತಿಳಿಯಲಿಲ್ಲ. ನಾನು ಇಷ್ಟು ದಿನಗಳನರೆಗೂ ಗಾಂಧೀ ಆಶ್ರಮದಲ್ಲಿದ್ದೆನು. ಈಗ ಇಲ್ಲಿ ಬಂದು ನೆಲಸಿದ್ದೇನೆ. ಇದೇ ನನ್ನ ಕತೆ.."

ಇಷ್ಟು ಹೇಳಿ ಸ್ವಾಮಿಜಿ ಕಣ್ಣೊರಸಿಕೊಳ್ಳುತ್ತ, ಒಂದು ನಿಟ್ಟುಸಿರನ್ನು ಬಿಟ್ಟು ಸುಮ್ಮನಾದರೂ, ಅವರ ಭಾವನೆಯು ಮಾತ್ರ ಇನ್ನೂ ಅವರ ಕಥಾಪ್ರಪಂಚದಲ್ಲಿಯೆ ತಿರುಗುತ್ತಿದ್ದಿತು. ನಾನು ಶಾಮುನ ಕಡೆಗೆ ನೋಡಿದೆನು. ಅವನು ಕೆಳಗೆ ಮುಖ ಮಾಡಿಕೊಂಡು ಕುಳಿತಿದ್ದನು. ಕತೆಯು ಮುಗಿದದ್ದೇ ಅವನ ಲಕ್ಷ್ಯಕ್ಕೆ ಬಂದಂತೆ ತೋರಲಿಲ್ಲ. ನಾನೇ 'ಏನು ಗಹನ ವಿಚಾರ?' ಎಂದು ಅವನನ್ನು ಅಲುಗಿಸಲು, ಅವನು ನನ್ನೆಡೆಗೆ ಮೊಗಮಾಡಿದನು. ಆಗ ಅವನ ಗಲ್ಲದ ಮೇಲೆ ಎರಡು ಮುತ್ತಿನಂತಹ ಹನಿಗಳು ಹೊಳೆಯುತ್ತಿದ್ದುವು. ತುಸು ಹೊತ್ತು ಎಲ್ಲರೂ ಮೌನವಾಗಿದ್ದೆವು.

'ಅವಳ ಹೆಸರೇನು?' ಶಾಮೂ ಒಮ್ಮೆಲೆ ಕೇಳಿದ. ಅವನ ಮನಿಯಲ್ಲಿ ಕುತೂಹಲವು ತೋರುತ್ತಿತ್ತು.

'ಹೆಸರೇ?....ರತ್ನಾ ಎಂದು!' ಸ್ವಾಮಿಜೀ ಹೇಳಿದರು.

ಶಾಮೂ ಅವರನ್ನು ಮಿಕಿ ಮಿಕಿ ನೋಡತೊಡಗಿದನು. ಅವನು ಹೀಗೇಕೆ ಮಾಡುತ್ತಾನೆಂಬುದು ನನಗೆ ತಿಳಿಯಲಿಲ್ಲ.

'ಅವಳ ಛಾಯಾಚಿತ್ರವಿದ್ದರೆ ತೋರಿಸುತ್ತೀರಾ?' ಶಾಮೂ ಕೇಳಿದ.

ಸ್ವಾಮಿಜೀ ಒಳಗಿನಿಂದ ಒಂದು ಚಿತ್ರವನ್ನು ತಂದು ತೋರಿಸಿದರು. ಇಬ್ಬರೂ ನೋಡಿದೆವು. ಅದರಲ್ಲಿದ್ದವರನ್ನು ಈ ಮೊದಲು ನೋಡಿದಂತೆ ನನಗೆ ಭಾಸವಾಯಿತು; ಕೂಡಲೆ ಗುರುತೂ ಸಿಕ್ಕಿತು. ಆಷ್ಟರಲ್ಲಿಯೆ ಶಾಮೂ ನುಡಿದ "ನನ್ನ ರತ್ನ!" ಕೂಡಲೆ ಆ ಛಾಯಾಚಿತ್ರವನ್ನು ಎದೆಗೆ ಅವಚಿಕೊಂಡು ಸ್ವಾಮಿಜಿಯನ್ನು ಶಾಮೂ ಕೇಳಿದ: "ರಾಜ, ನನ್ನನ್ನು ಕ್ಷಮಿಸುತ್ತೀಯಾ?" ಸ್ವಾಮಿಜೀ ಗಾಬರಿಯಾಗಿ ಕೇಳಿದರು, "ನಿಮಗಾರು ಹೇಳಿದರು ನನ್ನ ಹೆಸರು 'ರಾಜ' ಎಂದು?" ಶಾಮೂ ಶೂನ್ಯದಲ್ಲಿ ನೋಡುತ್ತ ಹೇಳಿದ: "ಅವಳೇ; ರತ್ನಾ ಹೇಳಿದಳು. ಅವಳು ಅಂದು ವಿಷಮಜ್ವರದಿಂದ ಪಾ ಸಿ ಗೆ ಒಡಿದಾಗ ಒಂದು ದಿನ, ನನ್ನನ್ನು ಹತ್ತಿರ ಕುಳ್ಳಿರಿಸಿಕೊಂಡು ಕೇಳಿದಳು: 'ನನ್ನನ್ನು ಕ್ಷಮಿಸುತ್ತೀರಾ? ನಾನಿನ್ನು ಬದುಕುವ ಆಶೆಯಿಲ್ಲ. ನೀವು ನನ್ನನ್ನು ಹೃತ್ಪೂರ್ವಕವಾಗಿ ಕ್ಷಮಿಸಿದರೆ ತೀರಿತು; ನಾನು ನಿಶ್ಚಿಂತೆಯಿಂದ ಪ್ರಾಣ ಬಿಡುತ್ತೇನೆ.' ನಾನು ಕೇಳಿದೆ: 'ಏತಕ್ಕಾಗಿ ನಿನ್ನನ್ನು ಕ್ಷಮಿಸಬೇಕು? ಅಂತಹ ಯಾವ ಅಪರಾಧವನ್ನೂ ನೀನು ನನಗೆ ಮಾಡಿಲ್ಲ! ನಾನೇ ಏನಾದರೂ ತಿಳಿಯದೆ ಮಾಡಿದ್ದರೆ, ನೀನೇ ನನ್ನನ್ನು ಕ್ಷಮಿಸು!'

'ಇಲ್ಲ, ನೀವು ಯಾವ ಅಪರಾಧವನ್ನೂ ಮಾಡಿಲ್ಲ. ನಾನು ಮಾತ್ರ ಒಂದು ಅಪರಾಧವನ್ನು ಮಾಡಿದ್ದೇನೆ. ನಾನು ನಿಮ್ಮನ್ನು ಮದುವೆಯಾಗುವ ಮೊದಲು ಮತ್ತೊಬ್ಬರನ್ನು ಹೃತ್ಪೂರ್ವಕವಾಗಿ ಪ್ರೀತಿಸಿದ್ದೆನು. ಈಗ ಅದನ್ನು ಹೇಳುತ್ತೇನೆ. ಅದನ್ನು ಮಾತ್ರ ಯಾರಿಗೂ ಹೇಳಕೂಡದು!' ಎಂದು, ಈಗ ನೀವು ಹೇಳಿದ ಕತೆಯನ್ನೇ ಹೇಳಿದಳು. ಮತ್ತು 'ನನ್ನನ್ನು ಕ್ಷಮಿಸುತ್ತೀರಾ?' ಎಂದು ಕಾತರಭಾವದಿಂದ ಕೇಳಿದಳು. ಆ ಕತೆಯನ್ನು ಕೇಳಿ ನಾನು ಮೂಕನಾಗಿ ಹೋದೆನು. ಅವಳನ್ನು ಮದುವೆಯಾದದ್ದು ಎಂತಹ ಅಪರಾಧವಾಯಿತೆಂದು ನಾನು ವಿಚಾರಿಸತೊಡಗಿದೆನು. ಅವಳು ಮತ್ತೆ ಕೇಳಿದಳು: 'ಏಕೆ ನನ್ನನ್ನು ಕ್ಷಮಿಸುವುದಿಲ್ಲವೇ?' ನಾನು ಹೇಳಿದೆ: 'ಕ್ಷಮಿಸಿದ್ದೇನೆ!' 'ನಿಜವಾಗಿಯೂ?' - 'ನನ್ನಾಣೆಯಾಗಿಯೂ!' 'ಒಳಿತಿನ್ನಿರಿ. ನೀವು ನನ್ನ ಪಾಲಿನ ದೇವರು!' ಎಂದು ಹೇಳಿ ಅಕೆ ಪ್ರಾಣ ಬಿಟ್ಟಳು."

ಎಲ್ಲರೂ ಮೌನವಾಗಿಯೇ ಇದ್ದೆವು. ಮತ್ತೆ ಶಾಮೂ ಕೇಳಿದ;

"ರಾಜ, ನನ್ನನ್ನು ಕ್ಷಮಿಸುತ್ತೀಯಾ?"

"ಏಕೆ?" ಸ್ವಾಮಿಜಿ ಕೇಳಿದರು.

"ಏಕೆಂದರೆ ನಿಮ್ಮಿಬ್ಬರ ಹಾಲಿನಂತಿರುವ ಪ್ರೇಮದಲ್ಲಿ ನಾನೇ ಉಪ್ಪನ್ನು ಬೆರಸಿದೆನಲ್ಲವೇ?"

"ದೈವಸಂಕಲ್ಪವೇ ಹಾಗಿತ್ತು; ನಿಮ್ಮದೇನು ತಪ್ಪು?"

"ಇಲ್ಲ, ನನ್ನದೇ ತಪ್ಪು! ನೀವು ಎಲ್ಲಿಯಾದರೂ, ಎಂದಾದರೂ ಭೆಟ್ಟಿಯಾದರೆ, ನಿಮ್ಮ ಕ್ಷಮೆಕೇಳಿಕೊಳ್ಳಬೇಕೆಂದು— ಅವಳು ಆ ಕತೆಯನ್ನು ಹೇಳಿದಂದಿನಿಂದಲೇ— ನಿಶ್ಚಯಿಸಿದ್ದೆನು. ನಿಜವಾಗಿಯೂ ನಿಮ್ಮ ತ್ಯಾಗವೂ ಪ್ರೇಮವೂ ಆದರ್ಶವಾದುವುಗಳು. ನಿಮ್ಮ ಮಾನವಜನ್ಮವು ಸಾರ್ಥಕವು!"

ಸ್ವಾಮಿಜಿ ಕೇಳಿದರು: "ಶಾಮೂ ನನ್ನನ್ನು ಕ್ಷಮಿಸುವುದಿಲ್ಲವೇ?"

ಶಾಮೂ ಕೇಳಿದ "ನಿಮ್ಮನ್ನೇ?"

ಸ್ವಾಮಿಜೀ ಹೇಳಿದರು "ಹೌದು ನನ್ನನ್ನೇ! ನಾನು ಹೋಗಿ ಅವರ ಮನೆಯಲ್ಲಿರದಿದ್ದರೆ ನೀವಿಬ್ಬರೂ ಲಗ್ನವಾಗಿ ಸುಖವಾಗಿ ಬಾಳಬಹುದಾಗಿತ್ತು! ನಿಮ್ಮ ಸುಖಕ್ಕೆ ನಾನೇ ಕಲ್ಲು ಹಾಕಿದೆನು!"

"ಹಾಗಲ್ಲ, ನನ್ನಿಂದಲೇ ನೀವು ಅಗಲುವಂತಾಯಿತು. ನಿಮ್ಮ ಸುಖದೂಟದಲ್ಲಿ ನಾನೇ ಮಣ್ಣಿರಚಿದವನು. ಎಂದಮೇಲೆ ನನ್ನನ್ನು ಕ್ಷಮಿಸಬೇಕಲ್ಲವೇ? ಅಲ್ಲವೇ ರಾಮೂ?" ಶಾಮುನು ನನ್ನನ್ನು ಕೇಳಿದ. "ನನ್ನನ್ನು ಕ್ಷಮಿಸಬೇಕಲ್ಲವೇ ರಾಮೂ?" ಸ್ವಾಮಿಜಿ ನನ್ನನ್ನೇ ಕೇಳಿದರು. "ಏನು ಹೇಳಲಿ?" ನಾನೂ ನನ್ನನ್ನೇ ಕೇಳಿಕೊಂಡೆನು.

ಬುದ್ಧಿಯ ಸ್ವರೂಪ ಮತ್ತು ಕಾರ್ಯ

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಬುದ್ಧಿಯ ಮೇಲೂ ಬುದ್ಧಿಪ್ರಧಾನ ಜೀವನದ ಮೇಲೂ ಇತ್ತೀಚೆಗೆ ದಾಳಿಗಳು ಹೆಚ್ಚಾಗುತ್ತ ನಡೆದಿವೆ. ' ಎಲ್ಲ ದಾಳಿಗಳಲ್ಲಿ ಅತ್ಯಂತ ಮೋಹಕವಾದುದೂ ತೀರ ಘಾತುಕವಾದುದೂ ಎಂದರೆ ಗೂಢವಾದದ—ಅನುಭಾವ ಸಂಪ್ರದಾಯದ—ದಾಳಿ. ಈ ದಾಳಿಯಿಂದ ಬುದ್ಧಿಯನ್ನು ಬದುಕಿಸಲಿಕ್ಕೆ ಏನು ಮಾಡಬೇಕು?

★

ಇದೇ ತಲೆಬರೆಹದಡಿಗೆ ಎರಡು ಮೂರು ತಿಂಗಳುಗಳ ಹಿಂದೆ, '**ಜಯಕರ್ನಾಟಕ**' ದ ಒಂದು ಸಂಚಿಕೆಯಲ್ಲಿ, ಕನ್ನಡಕುಲದ ಹೆಸರಾದ ಹಿರಿಯರಲ್ಲಿ ಒರ್ವರಾದ ಶ್ರೀಮಾನ್ **ಶಂ. ಬಾ. ಜೋಶಿ** ಯವರು ವಿಚಾರವೇಧಕವಾದ ಲೇಖನವೊಂದನ್ನು ಪ್ರಕಟಿಸಿದ್ದರು. ತಿಳಿವಳಿಕೆಯ ತಿರುಳೇನು? ಅದನ್ನು ತಿಳಿಯಾಗಿಸುವ ಬಗೆಯೇನು? ಇವೇ ಮೊದಲಾದ ಪ್ರಶ್ನೆಗಳನ್ನು ಕುರಿತು, ತಮ್ಮ ಪ್ರಸನ್ನ ಕನ್ನಡ ಶೈಲಿಯಲ್ಲಿ ಒಳ್ಳೇ ವಿವೇಚನೆ ಮಾಡಿದ್ದರು. ಅದನ್ನು ಓದುತ್ತಿರುವಾಗಲೇ, ಇದೇ ವಿಷಯವನ್ನು ಸಾಂಗೋಪಾಂಗವಾಗಿ ಊಹಾಪೋಹ ಮಾಡುವ ಇನ್ನೊಂದು ಪ್ರಬಂಧಾಂಶವೂ ನನ್ನ ಗಮನಕ್ಕೆ ಬಂದಿತು. ಅವೆರಡರ—ಒಮ್ಮೆಲೇ ಆದ—ಪ್ರಭಾವದಿಂದಲೋ ಏನೋ, ಶ್ರೀ. ಜೋಶಿಯವರ ವಿವೇಚನೆಯಲ್ಲಿ ಏನೋ ನ್ಯೂನವು ಉಳಿದಂತೆ ಮನಸ್ಸಿಗೆನಿಸಿತು. ವಿಷಯವನ್ನು ವಾಚಕರಿಗಾಗಿ ತಿಳಿಗೊಳಿಸುವ ಭರದಲ್ಲಿ, ವಿಷಯದ ಯಥಾರ್ಥ ಪ್ರತಿಪಾದನೆಗೆ ಅವಶ್ಯವಿರುವ ನಿಶ್ಚಿತ ತಾತ್ತ್ವಿಕತೆಯಕಟ್ಟು-ಗುಟ್ಟುಗಳ ವಿಶದೀಕರಣವನ್ನು ಕುರಿತು ಆ ಲೇಖನದಲ್ಲಿ ಅಲಕ್ಷ್ಯವಾದಂತೆ ತೋರಿತು. ಜೋಶಿಯವರ ಬುದ್ಧಿಮತ್ತೆಯ ಸಂಶೋಧಕತೆಗೆ ವಿಶಿಷ್ಟವಾದ ನೂಲಗ್ರಾಹಿಯಾದ ಸ್ವರೂಪಕ್ಕಿಂತ, ಅವರ ಸರಲ ಸಹಜವಾದ ಬರೆಹಗಾರಿಕೆಯ ಸಾಹಿತ್ಯಿಕ ಕಾರ್ಯವೇ ಆ ಲೇಖನದಲ್ಲಿ ಪ್ರಾಮುಖ್ಯತೆಯನ್ನು ಪಡೆದಂತಿತ್ತು. ಆದುದರಿಂದ ಅದೇ ವಿಷಯವನ್ನು ಇಟ್ಟುಕೊಂಡು, ಅವರ ಪ್ರತಿಪಾದನೆಗೆ ಪೂರಕವಾಗಿ—ಸಂಗ್ರಾಹಕವಾಗಿ—ಈ ಲೇಖನವನ್ನು ಬರೆಯುವ ಸಾಹಸ ಮಾಡಿದ್ದೇನೆ.

ಈ ಸಾಹಸಕ್ಕೆ ಉತ್ತೇಜನ ಕೊಟ್ಟದ್ದು ಮೇಲೆ ಉಲ್ಲೇಖಿಸಿದ ಪ್ರಬಂಧಾಂಶವೆ. ಅಮೇರಿಕೆಯ ಜಗತ್ಪ್ರಸಿದ್ಧ ತತ್ತ್ವವೇತ್ತರೂ ಲೇಖಕರೂ ಆದ **ವಿಲ್ ಡ್ಯೂರಂಟ್** ಅವರ Mansions of Philosophy (ತತ್ತ್ವಜ್ಞಾನದ ಮಂದಿರಗಳು) ಎಂಬ ಬೃಹದ್ಗ್ರಂಥದೊಳಗಿನ " ಸತ್ಯವೆಂದರೇನು? " ಎಂಬ ಪ್ರಬಂಧದಲ್ಲಿ, ವಿಷಯದ ಅನುಷಂಗದಿಂದ ಬಂದ—ಬುದ್ಧಿಯ ಸ್ವರೂಪಕ್ಕೆ ಸಂಬಂಧಪಟ್ಟ—ಪರಿಚ್ಛೇದಗಳನ್ನೇ ಈ ಲೇಖನದಲ್ಲಿ ಆಳವಡಿಸಿಕೊಳ್ಳಲಾಗಿದೆ. ನದಿಯ ಮೂಲದಂತೆ ಜ್ಞಾನದ ಮೂಲವನ್ನೂ ವಿಚಾರಿಸುವುದು ಅಪ್ರಸ್ತುತವಿರುತ್ತದೆ. ಆದುದರಿಂದ, ಇಲ್ಲಿ ಅಡಕವಾದ ನಿಚಾರ-ವಿಧಾನಗಳು ನನ್ನವಲ್ಲವೆಂಬುದಕ್ಕಾಗಿ ವಾಚಕರ ಕ್ಷಮೆಯನ್ನು ಯಾಚಿಸುವುದಿಲ್ಲ; ಅವರ ಅಭಿಪ್ರಾಯದಲ್ಲಿಯೇ ಅವುಗಳ ಬೆಲೆಯಿದೆಯೆಂಬುದನ್ನು ಮಾತ್ರ ಸೂಚಿಸುತ್ತೇನೆ.

* * *

ಬುದ್ಧಿಯ ಮೇಲೆ ದಾಳಿಯೇಕೆ?

ಇತ್ತೀಚೆಗೆ ಬುದ್ಧಿಯ ಮೇಲೂ ಬುದ್ಧಿಪ್ರಧಾನವಾದ ಬಾಳಿನ ಮೇಲೂ ಹಲವೆಡೆಗಳಿಂದ ದಾಳಿಯಾಗುತ್ತಲಿದೆ. ಇಂತಹ ದಾಳಿಗಳಲ್ಲಿ ಅತ್ಯಂತ ಮೋಹಕವಾದದ್ದೂ, ಅದರಿಂದಲೇ ಅತ್ಯಂತ ಘಾತುಕವಾದದ್ದೂ, ಗೂಢವಾದದ—ರಹಸ್ಯ-ರಮ್ಯತೆಯ—ಅನುಭಾವ ಸಂಪ್ರದಾಯದ ದಾಳಿ. ಈ ಅನುಭಾವವನ್ನು ತಕ್ಕೆ ಬಿದ್ದು ಪ್ರತಿಭಟಿಸಬೇಕಾಗಿದೆ. ಕತ್ತಿಯ ಕಡಿತಕ್ಕೆ ಕುಗ್ಗದ ಕಲಿತನವು ಉಕ್ಕಿನೆದೆಯು, ಹಗುರಾದ ಹೂವಿನ ಹಾರಗಳ ಹೊರೆಯಡಿಗೆ ಕರಗುವುದುಂಟು. ತನ್ನ ಮಧುರತೆಯಿಂದ ಬುದ್ಧಿಯನ್ನು ಬಧಿರಗೊಳಿಸುವ ರಹಸ್ಯವಾದದ ಆಕ್ರಮಣವು ಅಂತಹದಾಗಿದೆ. **ಬುದ್ಧಿವಾದವು ಮನುಷ್ಯನ ವಿರುದ್ಧನಾಗಿ ನಿಂತರೆ, ಮನುಷ್ಯನೂ ಕೂಡಲೆ ಬುದ್ಧಿವಾದದ ವೈರಿಯಾಗಿ-ವಿರೋಧಿಯಾಗಿ-ನಿಲ್ಲುವನು!** ಮನುಷ್ಯನ ವರ್ತನವು ಸ್ವಾಭಾವಿಕವಾಗಿ, ನಿಸರ್ಗಸಿದ್ಧವಾಗಿ ಕಾಮನಾಪ್ರಧಾನವಾಗಿರುತ್ತದೆ. ಆತನ ವರ್ತನದಲ್ಲಿ ಕಾಮನೆಯ ಕ್ರಮ ಮೊದಲು. ತನ್ನ ಇಚ್ಛೆಯನ್ನು ಅಭಾವಿತವಾಗಿಯೇ ಸಮರ್ಥಿಸಿಕೊಳ್ಳಲಿಕ್ಕೆ ಸಯುಕ್ತತೆಯ ಒಪ್ಪ ಕೊಟ್ಟು, ಸಮಂಜಸತೆಯ ಒಪ್ಪಿಗೆ ಸಿಕ್ಕುವಂತೆ ಮಾಡಲಿಕ್ಕೆ ಮನುಷ್ಯನು ಬುದ್ಧಿಯನ್ನು ಬಳಸಿಕೊಳ್ಳುತ್ತಾನೆ. ಇದು ಮಾನವ ಸ್ವಭಾವದ ಸಾಮಾನ್ಯ ಧರ್ಮ. ಆದರೆ ಹೀಗೆ ವಿಚಾರವು ಕಾಮ-

ನೆಯ ದೂತ-ದಾಸಿಯಾಗಲು ಅಣಿಯಾಗದಿದ್ದರೆ, ತರ್ಕಶುದ್ಧತೆಯ ಯುಕ್ತಿವಾದದ ವೇಷ-ಭೂಷಗಳಲ್ಲಿ ಸಮಾಧಾನಕರವಾಗಿ ಇಚ್ಛೆಯನ್ನು ಸಜ್ಜುಗೊಳಿಸಲು ಶಕ್ಯವಾಗದಿದ್ದರೆ, ಕಟ್ಟಕಡೆಗೆ, ಇನ್ನಾವ ಸಮರ್ಥನೆಯೂ ತೋಚದೆ ಕಾಮನೆಯ (ಎಂದರೆ ಇಚ್ಛೆಯ) ವಿಚಾರಶಕ್ತಿಯ ಅಧಿಕಾರವನ್ನೇ ಅಲ್ಲಗಳೆಯುವ ಹಂಚಿಕೆಯನ್ನು—ಅಧಿಷ್ಠಾನವನ್ನೇ ಅಡ್ಡಕೆಡಹುವ ಹೊಂಚನ್ನು—ಹೂಡಬಹುದು! ವಿವೇಕವನ್ನು ಮೀರಿ ಓಡುವ ಅಪೇಕ್ಷೆಗಳ ಮೇಲೆ ನೆಲೆಗೊಂಡ ಜೀವನದಲ್ಲಿ, ಬುದ್ಧಿವಾದದ ತಕ್ಕೈಗಿಂತ ದೂರ ಜಾಚುವ ಆಶೆ-ಆಕಾಂಕ್ಷೆಗಳ ಮೇಲೆ ನಿಂತ ಬಾಳಿನಲ್ಲಿ, ವ್ಯಕ್ತಿಗಳು ತಮ್ಮದೇ ಆದ ಹೊಸದೊಂದು ಯುಕ್ತಿವಾದವನ್ನು ಉಂಟುಮಾಡಿಕೊಂಡು, ತಮ್ಮ ಕನಸುಗಳನ್ನು ಸಮರ್ಥಿಸಿಕೊಳ್ಳಲು, ಹುಚ್ಚಿಗೊಂದು ಅಚ್ಚುಹಾಕಲು ಹವಣಿಸುವುದೂ ಹೆಣಗುವುದೂ ಅನಪೇಕ್ಷಿತವಲ್ಲ. ಇಂತಹ ಹೊಂಚು ಹವಣಿಕೆಯೇ—ಹಂಚಿಕೆ ಹೆಣಗಾಟವೇ—ರಹಸ್ಯವಾದದ ಅನುಭಾವಪಂಥದ ಹಿನ್ನೆಲೆಯಾಗಿದೆ. ಆದ್ದರಿಂದ ಇಂದು ಎಂದಿಗಿಂತಲೂ ಮಿಗಿಲಾಗಿ, ಬುದ್ಧಿವಾದದ ರೀತಿ-ನೀತಿಗಳನ್ನೂ ಪುನಃ ಪುನಃ ಪ್ರತಿಪಾದಿಸಬೇಕಾಗಿದೆ. ಮೂಲಪ್ರವೃತ್ತಿಗಳ ಬಲಾತ್ಕಾರಗಳ ವಿರುದ್ಧ, ಅಂತಃಪ್ರೇರಣೆಯ ಸಾಕ್ಷಾತ್ಕಾರಗಳ ವಿರುದ್ಧ, ಅನುಭಾವ ರಹಸ್ಯವಾದಗಳ ಅಗಮ್ಯವಾದ ಅಜ್ಞೇಯವಾದ ಶ್ರದ್ಧೆಯ ಪುರಸ್ಕಾರ ಚಮತ್ಕಾರಗಳ ವಿರುದ್ಧ, ಬುದ್ಧಿಯೋಗದ ಪಾಂಚಜನ್ಯವನ್ನು ಮೊಳಗಿಸಬೇಕಾಗಿದೆ. ಇದು ಮೂಲತಃ ಬುದ್ಧಿ-ವಿರುದ್ಧ ಪ್ರವೃತ್ತಿಗಳು ಈ ಬಗೆಯ ಸಂಘರ್ಷವಾಗಿದೆ. ಆದ್ದರಿಂದ ಬುದ್ಧಿಯ ಸ್ವರೂಪಕಾರ್ಯಗಳ ತಿಳಿವಳಿಕೆಗಾಗಿ, ಮೂಲಪ್ರವೃತ್ತಿಯ ಸ್ವಭಾವ-ಚರ್ಯೆಗಳ ಪರಿಚಯವು ಅಗತ್ಯವಿದೆ.

ಮೂಲಪ್ರವೃತ್ತಿಯ ಇತಿಹಾಸ, ಇತ್ಯರ್ಥ

ಮೂಲಪ್ರವೃತ್ತಿಗಳೆಂದರೇನು? ಅವು ಕಲಿಯದೆ ಬರುವ ಚಟುವಟಿಕೆಯ ಅಚ್ಚುಗಳು; ಸಹಜ ಪ್ರತಿಕ್ರಿಯೆಗಳು; ನಾವು ಕೆಲವೊಂದೇ ಕ್ರಿಯೆಯ ಕುರಿತು ಒಲಿಯುವ ಅನುವಂಶಿಕವಾಗಿ ತಂದ ಬಗೆಗಳು. ಆಡುವುದು, ಉಣ್ಣುವುದು, ಓಡುವುದು, ನಡೆಯುವುದು, ಕಾದಿ ಗೆದೆಯುವುದು, ಕಾಲ್ದೆಗೆಯುವುದು, ಒಲಿದು ಒಲಿಸುವುದು, ಮದುವೆಯಾಗುವುದು, ಮುದ್ದು ಮಾಡುವುದು ಇವೆಲ್ಲ ಕೆಲಸದ ಮಾದರಿಗಳ "ಅಶಿಕ್ಷಿತ ಪಟುತ್ವ"ದ ಅಮಾನುಷೀ ವೈಶಿಷ್ಟ್ಯಗಳೇ ಪ್ರವೃತ್ತಿಗಳು.

ವಂಶದ ವಿಸ್ತಾರವಿಕಾಸದ ಇತಿಹಾಸವಲ್ಲಿ, ಮನುಷ್ಯ ಪ್ರಾಣಿಯು ತನ್ನ ಆಯುಷ್ಯದಲ್ಲಿ ಆಗಾಗ ಆಕಸ್ಮಿಕವಾಗಿ ಒದಗುವ ಆವಶ್ಯಕತೆಯ ಪ್ರಸಂಗಗಳನ್ನು ವಿಲಂಬವಿಲ್ಲದೆ, ವಿಶೇಷ ವಿಚಾರಣೆಯಿಲ್ಲದೆ, ಇದುರಾಗಿ ಎದೆಗೊಡಲು ಬೆಳಸಿಕೊಂಡ ಪರ್ತನದ ಮಿತವಾದ ಉಪಯುಕ್ತವಾದ ಬಗೆಗಳವು. ಬಾಳಿನ ತಾತ್ಕಾಲಿಕ ಭದ್ರತೆಯ ಸಾವಧಾನತೆಯ ಸಾಧನಗಳವು. ಆದರೆ ಇವುಗಳಲ್ಲಿ ಬಲವಾದ ವೈಗುಣ್ಯವೂ ಒಂದಿದೆ. ಅದು ಅವುಗಳ ಉಪಯುಕ್ತತೆಯೊಳಗಿಂದಲೆ—ಇತಿಮಿತಿಯೊಂದಿಗೆ—ಅಡಕವಾಗಿ ಬಂದಿದೆ. ಆ ವೈಗುಣ್ಯವೆಂದರೆ, ಈ ಪ್ರವೃತ್ತಿಗಳು ಕೇವಲ ಸ್ಥಿರವಾದರಿಯ ಪುರಾತನ—ಸನಾತನಗಳಾದ ಸನ್ನಿವೇಶಗಳಿಗಾಗಿಯೇ ನಮ್ಮನ್ನು ಸಜ್ಜುಗೊಳಿಸುತ್ತವೆ. ಅನುಭವದ ಪರಂಪರೆಯ ಪ್ರಾಚೀನತೆಯಿಂದ ಮೂಡಿ ಬಂದ ಮೂಲವಾದ ಚಟುವಟಿಕೆಗಳ ಚಟಗಳಾದ ಮೂಲಕ, ಅವುಗಳ ಸಾಮರ್ಥ್ಯವೇ ವೈಯರ್ಥ್ಯವೂ ಆಗಿದೆ! ನಮ್ಮ ಅಮಾನುಷವಾದ ಅತೀತ ಕಾಲದ ಬೇಟೆ-ಬೆಟ್ಟಗಳ ಬಾಳಿನಲ್ಲಿ, ಪಾಶವ ಅವಸ್ಥೆಯ ಅವಶ್ಯಕತೆಗಳ ವಿರುದ್ಧ, ಪಾರ್ಶ್ವಭೂಮಿಯ ವಿರುದ್ಧ, ಈ ಪ್ರವೃತ್ತಿಗಳು ಕಟ್ಟಲ್ಪಟ್ಟುವು. ಆದ್ದರಿಂದ ವಿಚಾರಕ್ಕೆ ಎಡೆಗೊಡದ ಒತ್ತಡದ ಒತ್ತರದ ಪ್ರಸಂಗಗಳಲ್ಲಿ ಅವು ಒಳ್ಳೆ ಉಪಯೋಗವಾಗುವುವು. ಆದರೂ, ಸ್ವಲ್ಪದರಲ್ಲಿ ಹೇಳುವುದೆಂದರೆ, **ಈ ಪ್ರವೃತ್ತಿಗಳು ನಮ್ಮನ್ನು ನಿನ್ನೆಗಾಗಿ ಅಣಿಮಾಡುತ್ತವೆ, ಇಂದಿಗಾಗಿ ಅಲ್ಲ; ಎಂದಮೇಲೆ ನಾಳೆಯ ಬಗ್ಗೆ ಬೇರೆ ಕೇಳಬೇಕೇ?** ಕೆಲವು ಉದಾಹರಣೆಗಳಿಂದ ಈ ಮಾತು ತಿಳಿಯಾಗಬಹುದು.

ಹರಿದು ಬರುವ ಹಾವನ್ನು ಕಂಡು ಶಿಶುವು ದಿಗಿಲುಗೊಂಡು ದೂರ ಓಡಿಹೋಗುವುದು; ಆದರೆ ಮದ್ದು ತುಂಬಿದ ತುಬಾಕಿಯನ್ನು ತೊಡೆಯಮೇಲಿಟ್ಟುಕೊಂಡು ಪರಿವೆಯಿಲ್ಲದೆ ಆಡುವುದು! ಒಬ್ಬ ವ್ಯಕ್ತಿಯು **ಸೊಕ್ರೆಟೀಸ್**ನಂತೆ ಘನವಿದ್ವಾಂಸನೂ ಗಂಭೀರ ತತ್ತ್ವಜ್ಞಾನಿಯೂ ಆಗಿರಬಹುದು. ಅದೇ ವೇಳೆಗೆ **ಝಾಂತಿಪಿ**ಯಂತಹ ಮೂರ್ಖವೃತ್ತಿಯ ಹೊಯ್ಮಾಲಿಯನ್ನು ಕಟ್ಟಿಕೊಂಡು ಅಂಜುತ್ತ ಅಳುಕುತ್ತ ಬಗೆಗಾಣದೆ ಬಾಳಬಹುದು, ಇಲ್ಲವೆ ಹೊರ-ಹೊಳಪಿನ ಬೆಡುಗುಗಾತಿಯ, ಬೆಂಡು-ಬೇಗಡೆಯ ಗೊಂಬೆಯ ಕೈಗೊಂಬೆಯಾಗಿ ಉಳಿಯಬಹುದು! ಮೈಲಿ ಮಲೆಜ್ವರಗಳ ಸ್ಲೇಗು-ಪಿಡುಗುಗಳ ಪ್ರಾಣಹಾರಿ ಪ್ರಲಯಕಾರಿಯಾದ ಜಂತು-ಅಂಟುಗಳನ್ನು ಕುರಿತು ನಾವು ಹೆದರುವುದಿಲ್ಲ. ಆದರೆ ಪ್ರವೃತ್ತಿಯಿಂದ ಗುಡುಗು-ಮಿಂಚುಗಳನ್ನೂ ಕತ್ತಲೆ-ಕಗ್ಗವಿಗಳನ್ನೂ ಕುರಿತು ಅಂಜುವೆವು! ಸಂಧಿ ಸಿಗದೇ ಸಂದಿಗುಂಪಾಗಿ ಸವೆಯುವ ಸದ್ಗುಣಿಗಳಿಗಾಗಿ ನಾವು ಹಲಹಲಿಸುವುದಿಲ್ಲ. ವಿಚಕ್ಷಣರಿದ್ದರೂ ಶಿಕ್ಷಣ-ಸಂಸ್ಕಾರಗಳಿಂದ ವಂಚಿತರಾಗಿ ವಿವಂಚನೆ-ವಿಡಂಬನೆಗೀಡಾದ ಹತಭಾಗಿ ಮಹಾಭಾಗರನ್ನು ಕುರಿತು ನಾವು ತಳಮಳಿಸುವುದಿಲ್ಲ; ಆದರೆ ಮಂಕುಪ್ರವೃತ್ತಿಯಿಂದ ಬಿಕ್ಕೆಬೇಡಿ ಬಾಳುವುದನ್ನೆ ದುಡಿಮೆಯಾಗಿಟ್ಟುಕೊಂಡ—ದಾರಿಯಂಚಿಗೆ ಕಾಲುಚಾಚಿ ಅಂಗಲಾಚಿ ಕೂತು ಕೂಗುವ—ತಿರುಕನ ಎಣ್ಣೆ ಬಣ್ಣಗಳಿಂದ ಮಾಡಿದ ಕೊಳೆತ ಗಾಯದ ಮಾಯವಾಗದ ಕಲೆಯನ್ನು ಕಂಡು ನಾವು ಕಳವಳಗೊಳ್ಳುವೆವು! ದೊಡ್ಡ ಅನ್ಯಾಯದಿಂದ ಆಗದಷ್ಟು ಭಾವೋದ್ರೇಕವು ಚಿಕ್ಕ ರಕ್ತಪಾತವನ್ನು ನೋಡಿ ನಮಗೆ ಆಗುತ್ತದೆ. ನಮ್ಮ ಅಜ್ಞಾನ ನಮ್ಮ ಆಲಸ್ಯ ನಮ್ಮ ಅಸಡ್ಡಾಳತನಗಳಿಂದ ಒಳಗಾಗಬೇಕಾದ ದೆಸೆಗೇಡಿಗಿಂತ, ನಾವು ಇನಾಮು ಕೊಡಲು ಮುರಿತ

ಮೂಲಕ ಮುನಿದು ನಡೆಯುವ ಉಪಹಾರಗೃಹದ ಪರಿಚಾರಕನು ತೋರಿಸುವ ತಿರಸ್ಕಾರದಿಂದ ನಮಗೆ ಹೆಚ್ಚು ವೇದನೆಯೆನಿಸುವುದು. ಒಗಿದೆ ಮೂಲ ಪ್ರವೃತ್ತಿಗಳಿಂದ ಜರುಗುವ ಪ್ರತಿಕ್ರಿಯೆಗಳ ತಾರತಮ್ಯ.

ಬುದ್ಧಿಯುಗದ ಉದಯವೆಂದು, ಏಕೆ?

ಇವರಿಂದ ಹೊರಡುವ ಹುರುಳೇನು? ಪ್ರಾಥಮಿಕ ಅವಸ್ಥೆಯಲ್ಲಿಯ ಜೀವನದ ಆಗು-ಹೋಗುಗಳ ಮಟ್ಟಿಗೆ, ಬೀರಬೇಂಟೆಯ ಕಾಡಾಡಿತನದ ಹಿಂದುಳಿದ ಬಾಳಿನ ಕೊರತೆ ಕೆಲಸಗಳ ಮಟ್ಟಿಗೆ, ಮೂಲ ಪ್ರವೃತ್ತಿಗಳನ್ನು ನಂಬಿ ನಡೆಯುವುದು ಸಾಕಾಗಿತ್ತು. ಆದರೆ ಹಿಂಸ್ರಧರ್ಮದಿಂದ ಕೃಷಿಕರ್ಮದ ಮಟ್ಟಿಗೆ ಏರಿದ ಮೇಲೆ, ಬಾಳಿನ ಕಟ್ಟುನಿಟ್ಟು ಬೇರೆಯಾಗಬೇಕಾಯಿತು. ನಮ್ಮ ನೈಸರ್ಗಿಕ ವೃತ್ತಿಗಳು ಬೇಟೆಯ ಬಾಳಿಗೆ ಸಮರ್ಪಕವಾಗಿ ರೂಪುಗೊಂಡಿದ್ದು, ಬೇಸಾಯದ ಬದುಕಿಗೆ ಅವು ನಮ್ಮನ್ನು ಅಣಿಮಾಡುವುದಿಲ್ಲ. **ನಾಗರಿಕತೆಯು ಮೊದಲಾದಂದಿನಿಂದ ಪ್ರವೃತ್ತಿಗಳು ಸಾಲದಂತಾಗಿವೆ.** ನೈಸರ್ಗಿಕ ಪ್ರತಿಕ್ರಿಯೆಗಳೇ ಕೇವಲ ಅಪರ್ಯಾಪ್ತವಾಗಿವೆ. ಮತ್ತು ಜೀವನವು ಬುದ್ಧಿಗಾಗಿ ಆಹ್ವಾನಕೊಡುತ್ತಿದೆ.

ಮಾನವಜೀವನದಲ್ಲಿಯ ಈ ಬುದ್ಧಿಯ ಆಹ್ವಾನವು, ಮಾನವ-ಚರಿತ್ರದಲ್ಲಿಯ ವಿಚಾರಶಕ್ತಿಯ ಆವಾಹನವು ಎಂದು ಒದಗಿತು? ಮನುಷ್ಯತೆಯ ಇತಿಹಾಸದಲ್ಲಿ ಬುದ್ಧಿಯ ಯುಗವು ಎಂದಿನಿಂದ ಆರಂಭವಾಯಿತು? ಜೀವನ-ಮರಣದ ನಿಕರಕ್ಕೆ ಬಂದ ಯಾವುದೊ ದಾರುಣವಿಪ್ಲವದ ಆಕಸ್ಮಿಕ ಆವಶ್ಯಕತೆಯಲ್ಲಿ ಬುದ್ಧಿಯುಗದ ಉದಯವಾಗಿರಬೇಕು. ಮನುಷ್ಯಶಿಶುವಿನಲ್ಲಿ ಸಹಜಸಿದ್ಧವಾದ ಪ್ರತಿಕ್ರಿಯೆಗಳ ಅಪೂರ್ಣತೆ-ಪರಿವರ್ತನೀಯತೆಗಳನ್ನು ನೋಡಿದರೆ, ಶಿಶುವು ಅದೇ ಹುಟ್ಟಿದ ಪಶುವಿಗಿಂತ ಅಸಹಾಯತೆ ಅಸಮರ್ಥತೆಯಿಂದ ಕನಿಷ್ಟವಾಗಿರುತ್ತದೆ. ಆದರೆ ಈ ಅಸಮರ್ಥತೆಯಲ್ಲಿಯೇ ಸಾಮರ್ಥ್ಯದ ಬೀಜವಿರುತ್ತದೆ. ಸಹಜಪ್ರವೃತ್ತಿಗಳ ಅಪೂರ್ಣತೆಯಲ್ಲಿಯೇ ಪ್ರಗತಿ-ಪ್ರಭುತ್ವದ ಬೇರು ಇರುತ್ತದೆ. ಏಕೆಂದರೆ ಶಾರೀರಿಕ ಅಸಮರ್ಥತೆ, ಸ್ವಾಭಾವಿಕ ಅಪರ್ಯಾಪ್ತತೆ ಇವುಗಳ ಮೂಲಕವೇ ಶಿಶುವಿನಲ್ಲಿ ಶಿಕ್ಷಣದ ಶಕ್ಯತೆಯು, ಸಂಸ್ಕಾರದ ಸಂಭವನೀಯತೆಯು ಉಂಟಾಗಿದೆ. ಈ ಪರಿವರ್ತನ ಕ್ಷಮತೆಯ ಮೂಲಕವೇ, ಮಣಿಬಲ್ಲತನದ ಮೂಲಕವೇ, ಮನುಷ್ಯನೂ ಇತರ ಮೇಲ್ತರಗತಿಯ ಸಸ್ತನ ಪ್ರಾಣಿಗಳೂ, ಆಕಸ್ಮಿಕವಾಗಿ ಒದಗಿದ ಹಿಮಪ್ರಲಯದ ಜಾಗತಿಕ ಉತ್ಪಾತದೊಳಗಿಂದ ಬದುಕಿ ಉಳಿದರು; ಮತ್ತು ಅಂದಿನ ವರೆಗೆ ಸರ್ವಶ್ರೇಷ್ಠವಾಗಿ ಗರುಡಾಯಿಯಲ್ಲಿ ಭೂಮಿಯನ್ನು ಆಕ್ರಮಿಸಿಸಿನಿಂತ ಪ್ರಚಂಡದೇಹಿಗಳಾದ ಪ್ರಾಣಿಗಳು, ತಮ್ಮ ಚಟುವಟಿಕೆಯ ಚಟಗಳ ಅಪರಿವರ್ತನೀಯವಾದ ಪರಿಪೂರ್ಣತೆಯ ಮೂಲಕವೇ ಅಳಿದುಹೋದುವು. ಚಳಿಗೆ ಮುದುಡಿ ಮಡಿದು ಹೋದುವು. ಮನುಷ್ಯನು—ಹೂರು ಮೊಳದ ಮನುಷ್ಯನು— ತಾಳಬಾಳಿದನು.

ಈ ತಾಳಿಕೆ-ಬಾಳಿಕೆಗಳ ಪ್ರಯತ್ನ-ಪ್ರಯಾಸಗಳಲ್ಲಿಯೆ ವಿಚಾರ-ವಿಮರ್ಶೆಗಳೂ, ಸಮಾಲೋಚನೆ-ಸಂಶೋಧನೆಗಳೂ ಆರಂಭವಾದುವು. ಪ್ರವೃತ್ತಿಯನ್ನು ದಿಗ್ಬ್ರಮೆಗೊಳಿಸುವ ಮುಂದುಗಾಣದ ಮುಗ್ಗಟ್ಟಿನ ದಿಗಿಲಿನಿಂದಲೇ, ಮೊದಲನೆಯ ತಾತ್ತ್ವಿಕ ಗೃಹಿಕೆಯು—ಮೊತ್ತದ ಗೃಹೀತಕೃತ್ಯವು—ಹೆದರುತ್ತ ಹುಟ್ಟಬಂತು; ಎರಡಕ್ಕೆರಡು ಕೂಡಿಸಿದರೆ ನಾಲಕ್ಕಾಗುವುದೆಂಬ ನವೋನವವಾದ ನಂಬಿಗೆಯ ನೆಲೆಯು ಪ್ರಾಯೋಗಿಕವಾಗಿ ಹಾಕಲ್ಪಟ್ಟಿತು; ಮೊದಲನೆಯ ಸಾಮಾನ್ಯ ವಿಧಾನವು, ಸಾಧಾರಣ ಸಂಬಂಧಗಳ ತಿಳಿವಳಿಕೆಯೂ ಹೇಳಿಕೆಯೂ ಬಳಕೆಯಲ್ಲಿ ಬಂದಿತು; ಗುಣ-ಲಕ್ಷಣಗಳ ಸಾಮ್ಯಗಳನ್ನೂ, ಅನುಕ್ರಮ ಅನುಬಂಧಗಳ ನಿಯಮಿತತನವನ್ನೂ ಗಮನಿಸುವ-ಮೊದಲನೆಯ ಆಯಾಸದ- ಅಭ್ಯಾಸವು ಆರಂಭವಾಯಿತು; ಪ್ರವೃತ್ತಿಮೂಲಕವಾದ ತಾತ್ಕಾಲಿಕವಾದ ತಕ್ಕ ವ್ಯತಿಕ್ರಿಯೆಗಳ ಕಟ್ಟು ಕುಸಿದುಹೋಗಿ, ಕಂಗೇಡಿಗೀಡುಮಾಡುವಂತಹ ತೀರ ಹೊಸದಾದ ಸನ್ನಿವೇಶಗಳಿಂದ, ವಸ್ತುಸ್ಥಿತಿಗಳನ್ನು ಅನುಕೂಲವಾಗಿ ಅಳವಡಿಸಿಕೊಳ್ಳುವ ಮೊಟ್ಟಮೊದಲಿನ ಹಂಚಿಕೆಯು ತಲೆದೋರಿತು. ಆಗಲೇ, ಕೆಲವೊಂದು ಕಾರ್ಯಪದ್ಧತಿಗಳು, ಚಟುವಟಿಕೆಗಳ ಪಡಿಯಚ್ಚುಗಳು, ವಿಚಾರದ ರೂಪ-ರೀತಿಗಳಾಗಿ ಬೆಳೆದು ಬಂದುವು, ಬುದ್ಧಿಶಕ್ತಿಯ ಉಪಾಧಿ-ಉಪಕರಣಗಳಾಗಿ ವಿಕಾಸಗೊಂಡುವು.

ಬಾಹ್ಯವೈಚಿತ್ರ್ಯದಿಂದ ಉಂಟಾಗುವ ನಿರೀಕ್ಷಣವೇ, ಭಕ್ಷ್ಯಕ್ಕಾಗಿ ಜರುಗುವ ಪ್ರತೀಕ್ಷೆ-ಅನುಸರಣಗಳೇ ಮನಃಪೂರ್ವಕವಾದ ಅವಧಾನವಾಗಿ, ಲಕ್ಷ್ಯದ ಏಕಾಗ್ರತೆಯಾಗಿ ಪರಿಣಮಿಸಿದುವು. ಭೀತಿ-ಪಲಾಯನಗಳ ಪ್ರವೃತ್ತಿಯೇ, ಧೂರ್ತತೆ-ದೂರಾಲೋಚನೆಯಾಗಿ, ಮುಂಜಾಗ್ರತೆ-ಮನಸ್ಸುಗೊಡುವಿಕೆಗಳಾಗಿ ಪರಿಣಮಿಸಿದುವು. ಕಾದುವ ಏರಿಹೋಗುವ ಪ್ರವೃತ್ತಿಯು, ಕುತೂಹಲ-ನಿಜಕಿತ್ಸೆಗಳ ವಿಶ್ಲೇಷಣ ವಿವೇಚನೆಯ ಪ್ರಯತ್ನವಾಗಿ ಮಾರ್ಪಟ್ಟಿತು. ಯಾಂತ್ರಿಕ ಚಲನವಲನವ ಯೋಜನೆಯು ಪ್ರಯೋಗ-ವಿನಿಯೋಗದ ಪದ್ಧತಿಯಾಯಿತು. ಪಶುವು ನೀಟಾಗಿ ನಿಂತು ಮನುಷ್ಯನಾಯಿತು. ವನ್ಯತೆಯ ಸಾಮಾನ್ಯತೆಯೊಳಗಿಂದ ವ್ಯಕ್ತಿತ್ವದ ಸನ್ನಾನ್ಯತೆಯು ಮೈವೆತ್ತಿತು. ಆ ಮನುಷ್ಯಪಶುವು, ನರನಾವ ವಾನರನು, ಇನ್ನೂ, ಸಾನಿರಾರು ಪರಿಸ್ಥಿತಿಗಳ ಒತ್ತಾಯಕ್ಕೆ ತೊತ್ತಾಗಿಯೇ ಇದ್ದರೂ, ಲೆಕ್ಕವಿಲ್ಲದಷ್ಟು ಸಂಕಟಗಳಿಗೆ ತುತ್ತಾಗುತ್ತಲೇ ಇದ್ದರೂ, ತನ್ನ ಎದೆಗಾರಿಕೆಗೆ ತಾನೇ ಬೆದರುತ್ತಿದ್ದರೂ, ಈ ಮುಂದೆ ಬಾಳನ್ನು ಆಳಲಿಕ್ಕೆ—ಭೂಮಿಯ ಸ್ವಾಮಿಯಾಗಲಿಕ್ಕೆ— ತಾನು ಪಡೆದು ಬಂದವನೆಂಬುದನ್ನು, ಅಂದಿನ ಆಡಿಗಡಿಗೆ ಬೀಳು-ಕೇಳಾಗಬಹುದಾದ ಬದುಕಿನ ಬಗೆಯಲ್ಲಿಯೂ ಅತನು ಕಾಣಿಸಹತ್ತಿದನು.

ಬುದ್ಧಿಯ ಸ್ವರೂಪ-ಕಾರ್ಯಗಳ ನಿರ್ಣಯ

ಬೂದಿ-ಹೊಗೆಗಳೊಳಗಿಂದ ಕಿಡಿಕಿಚ್ಚುಗಳು ಉರಿದೇಳುವಂತೆ, ಅಂತಹವನ್ಯಪ್ರವೃತ್ತಿಗಳ ಅಂಧಂತಮಸ್ಸಿನೊಳಗಿಂದ ಆರಂಭವಾಗಿ,

ಸರ್ವಮಾನ್ಯ !

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಪ್ಪವರ್ಗ

ಚ್ಯವನಪ್ರಾಶ

●

ಸುವರ್ಣ

ಮಾಲಿನೀ ವಸಂತ

●

ಮಕರಧ್ವಜಗುಟಿ

●

ಮುಂತಾದ

ಶಕ್ತಿವರ್ಧಕ

ಔಷಧಗಳನ್ನು

ತರಿಸಿರಿ !

ಕರ್ನಾಟಕ ಕೇಂದ್ರ ಮಂದಾರಾಗಲ್ಲಿ, ಹುಬ್ಬಳ್ಳಿ.

ಬಾಳಿನ ಮೇಲು-ನಿಗಿಲುಗಳ ಅವಲಂಬವಾಗಿ, ಬುದ್ಧಿಶಕ್ತಿಯ ತೇಜಸ್ಸು ಮಾನವನ ತಪಸ್ಸಿನಿಂದ ಬೆಳೆದುಬಂತು. ಹೀಗೆ ಬುದ್ಧಿಯೂ ಅಂಶತಃ ಪ್ರವೃತ್ತಿರೂಪವೇ ಆಗಿದೆ. ಬೇರಿನಿಂದ ಹೂ ಹಣ್ಣುಗಳು ಆವೆಷ್ಟೇ ದೂರವಿದ್ದರೂ, ಬೇರೆ ತೋರಿದರೂ, ಅವೆಲ್ಲ ಒಂದೇ ಮರದ ಭಾಗಗಳಲ್ಲವೇ ? ಬೇರಿನ ಸಂಬಂಧ ಕಡಿದುಕೊಳ್ಳುವುದರಲ್ಲಿ ಮರಕ್ಕೆ ಬಿಡುಗಡೆಯಿದೆಯೇ ? ಈಗಲೂ, ತೀರ ಹೊಸದಾದ ಸನ್ನಿವೇಶವು ಮುಂದೆ ಬಂದರೆ, ಮಾನವನ ಬುದ್ಧಿಯು ಪ್ರವೃತ್ತಿಯಿಂದಲೇ ಅನುಮಾನಿಸುತ್ತದೆ, ನಿಧಾನಿಸುತ್ತದೆ. ಈ ಅನುಮಾನ-ನಿಧಾನಗಳ ಅವಕಾಶದಲ್ಲಿ ನಮ್ಮ ಮುಂದಿರುವ ಸಮಸ್ಯೆಯ ವಿವಿಧ ಸ್ಯೆ-ಮಗ್ಗಲುಗಳು ಅಂಗ-ಅಂಶಗಳು ಪ್ರತಿಯೊಂದೂ ತನ್ನ ತನ್ನ ಪ್ರಾಥಮಿಕ ಪ್ರತಿಕ್ರಿಯೆಯನ್ನು ನಮ್ಮಲ್ಲಿ ಪ್ರೇರೇಪಿಸುತ್ತದೆ. ಅವೆಲ್ಲವುಗಳ ಸಂಯುಕ್ತಪರಿಣಾಮವಾಗಿ, ಆ ಸಮಸ್ಯೆಯ ಆದಷ್ಟು ಸಂಪೂರ್ಣ ಗ್ರಹಿಕೆಗೆ ಸಮರ್ಪಕವಾದ ಆದಷ್ಟು ಪರಿಪೂರ್ಣವಾದ ಸಂಕೀರ್ಣ ಪ್ರತಿಕ್ರಿಯೆಯೊಂದು ನಮ್ಮಲ್ಲಿ ರೂಪುಗೊಳ್ಳುತ್ತದೆ.

ಇದರಿಂದ ಬುದ್ಧಿಯ ಸ್ವರೂಪಕಾರ್ಯಗಳನ್ನು ನಿಶ್ಚಯಿಸಬಹುದು. ಪ್ರಾಣದ ಅನ್ನಮಯತೆ, ಪಶುವಿನ ಮನೋಮಯತೆ ಮತ್ತು ಮನುಷ್ಯನ ವಿಜ್ಞಾನಮಯತೆ ಇವೆಲ್ಲವುಗಳಲ್ಲಿ ಜೀವನದ ಅಖಂಡತೆಯು ಅನುಸ್ಯೂತವಾಗಿದೆ. ಈ ತತ್ತ್ವದಿಂದಲೇ ಬುದ್ಧಿಯ ಸ್ವರೂಪದ ಇತ್ಯರ್ಥವಾಗಬೇಕು. ಅದು ಹೇಗೆ? ಪ್ರಾಣಕ್ಕೆ ಪರಾವರ್ತನಕ್ರಿಯೆಯಿದೆ; ಪಶುವಿಗೆ ಪ್ರವೃತ್ತಿಜನ್ಯ ಪ್ರತಿಕ್ರಿಯೆಯಿದೆ; ಮನುಷ್ಯನಿಗೆ ಪ್ರಜ್ಞೆಯ ವಿಚಾರವ್ಯಾಪಾರವಿದೆ. ಈ ಮೂವರ ಲಕ್ಷಣಭೇದದಡಿಗಿರುವ ಭೂಮಿಕೆಯನ್ನು ಲಕ್ಷಿಸೋಣ.

ಪರಾವರ್ತನಕ್ರಿಯೆಯೆಂದರೆ, ಸ್ಥಾನಿಕಪ್ರಚೋದನೆಗೆ ಪ್ರಾಣಿಯಿಂದ ಜರುಗುವ ಸ್ಥಾನಿಕ ಪ್ರತಿಕ್ರಿಯೆ. ಪ್ರವೃತ್ತಿಯೆಂದರೆ, ಒಂದು ಪರಿಸ್ಥಿತಿಯೊಳಗಿನ ಯಾವುದೇ ಅಂಶದ ಕುರಿತು ಪ್ರಾಣಿಯಿಂದ ಜರುಗುವ ಸಾಮಾನ್ಯವಾದ ಶಾಶ್ವತವಾದ ಪ್ರತಿಕ್ರಿಯೆ. ಬುದ್ಧಿಯೆಂದರೆ ಸಮಗ್ರ ಪರಿಸ್ಥಿತಿಯ, ಸಾಕಲ್ಯದ ಪ್ರಚೋದನೆಯ ಕುರಿತು ಸಮಗ್ರವಾದ ಸಂಗ್ರಾಹಕವಾದ ಪ್ರತಿಕ್ರಿಯೆ. ಬುದ್ಧಿಯು ಪ್ರಣಯದಲ್ಲಿ ಪ್ರಲಯವನ್ನು ತರುತ್ತದೆ. ವಂಶವನ್ನೂ ವಿನಾಶಕ್ಕೆ ತರಬಹುದು. ಹೊರಗಿನಿಂದ ಬರುವ ಅನುಕೂಲ-ಪ್ರತಿಕೂಲ ವೇದನೆಗಳು ನಮ್ಮ ಪ್ರಬಲವಾದ ಕಾಮನೆಯ ಘನಾಘಾತದಡಿಗೆ, ಇಚ್ಛೆಯ ಸುತ್ತಿಗೆಯೇಟುಗಳಿಂದ ಕಲ್ಪನೆ-ವಿಚಾರಗಳು ವ್ಯವಸ್ಥಿತ ಕ್ರಮವಾಗಿ ಮೂರ್ಪಡುವುವು. ಹಾಗೆಯೆ, ಪ್ರತಿಕ್ರಿಯೆಯ ವಿಲಂಬವು ಬೆಳೆದಂತೆ, ಪ್ರವೃತ್ತಿಗಳೂ ಪರಂಪರಾಗತ ಚಟುವಟಿಕೆಯ ಜಟಿಗಳೂ, ಸಾವಿರಾರು ತಪ್ಪುತಪ್ಪಡೆ ತಿದ್ದುಪಡಿಗಳ ಒತ್ತಾಯದಿಂದ ಬುದ್ಧಿಯು ಸಾಮಾನ್ಯಸ್ವರೂಪವಾಗಿ, ಎರಕಗೊಳ್ಳುವುವು. ಆದ್ದರಿಂದ **ಪ್ರವೃತ್ತಿ ಮತ್ತು ಬುದ್ಧಿಗಳ ನಡುವೆ,** ಜಾತಿಯ ಭೇದವಿಲ್ಲ: ತರಗತಿಯ ತಾರತಮ್ಯವಿದೆ. ಅವೆರಡರಲ್ಲಿಯ ಅಂತರವು ಗುಣಕ್ಕಿಂತ ಪರಿಮಾಣದ ಪ್ರಮಾಣವನ್ನೇ ಅವಲಂಬಿಸಿದೆ. ಒಂದು ಇನ್ನೊಂದರ ವ್ಯವಹಾರಕ್ಕಾಗಿ ವಿಷಯವನ್ನೂ, ಘಟನೆಗಾಗಿ ಘಟಕಾಂಶಗಳನ್ನೂ ಪೂರೈಸುತ್ತದೆ ವಿರುದ್ಧ ಪ್ರವೃತ್ತಿಗಳ ತಿಕ್ಕಾಟದಲ್ಲಿ ಭಿನ್ನ ಭಿನ್ನ ಕ್ರಿಯಾಪ್ರೇರಣೆಗಳಲ್ಲಿ ಒಂದನ್ನು ಗೊತ್ತುಪಡಿಸಬೇಕಾಗುವ ವೇಚಿನಲ್ಲಿ ಒದಗುವ ತೂಗುಯ್ಯಾಲೆಯ ಚಿತ್ತವೃತ್ತಿಯೇ ಪರ್ಯಾಲೋಚನೆಯಾಗುತ್ತದೆ. ಒಂದು ಸನ್ನಿವೇಶವನ್ನು ಸಮಸ್ಯೆಯನ್ನು ಅದರ ಘಟಕಾಂಶಗಳಲ್ಲಿ ವಿಂಗಡಿಸಿ, ಪರಿಪೂರ್ಣ ಪ್ರತಿಕ್ರಿಯೆಯ ಪೂರ್ವಸಿದ್ಧತೆಯೆಂದು ವಿಭಾಗಿಸುವುದೇ ವಿವೇಕ-ವಿಮರ್ಶೆಯೆನಿಸುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ, **ಪ್ರಚೋದನೆಯು ವಿಶೇಷಣ-ಪೃಥಕ್ಕರಣವೂ, ಪ್ರತಿಕ್ರಿಯೆಯು ಸಮನ್ವಯ-ಸಮಾಕರಣವೆಂದರೆಯೆ ಬುದ್ಧಿಯು.** ಸೃಷ್ಟಿಯಲ್ಲಿ ಶಕ್ತಿ ಮತ್ತೂ ಕ್ರಿಯೆ ಇವುಗಳು ಅವಿಭಾಜ್ಯವಾಗಿ ಅನ್ಯೋನ್ಯ ಐಕ್ಯವಾಗಿರುತ್ತವೆ. ಕ್ರಿಯೆಯ ಶಕ್ಯತೆಯೇ ಶಕ್ತಿ. ಶಕ್ತಿಯು ಅಭಿವ್ಯಕ್ತಿಯೇ ಕ್ರಿಯೆ. ಈ ದೃಷ್ಟಿಯಿಂದ ಬುದ್ಧಿಶಕ್ತಿಯ ಸ್ವರೂಪ ಮತ್ತು ಕಾರ್ಯಗಳನ್ನು ವಿಂಗಡವಾಗಿ ಒಡೆದುಕಾಣಿಸುವುದು ಅಗತ್ಯವಿಲ್ಲ, ಅಶಕ್ಯವೂ ಆಹುದು. ಆದ್ದರಿಂದ ಬುದ್ಧಿಯ ಕಾರ್ಯವಲ್ಲಿಯೇ ಸ್ವರೂಪ, ಸ್ವರೂಪದಲ್ಲಿಯೇ ಕಾರ್ಯವನ್ನು ಕಾಣುವ ಬಗೆಯಲ್ಲಿ ಮೇಲಿನ ವಿವೇಚನೆಯನ್ನು ಮಾಡಲಾಗಿದೆ.

(ಮುಂದುವರಿಯುವುದು.)



"ಈ ಉತ್ಸಾಹವು ಅವನಿಗೆ ಎಲ್ಲಿಂದ ಬರುತ್ತದ್ದೆ"

ನಮ್ಮ ಮಕ್ಕಳನ್ನು ಬೇರೆ ತಾಯಿಯರು ಹೊಗಳಿದರೆ ತಾಯಿಯರು ಎಷ್ಟು ಒಗ್ಗುತ್ತಾರೆ! ಮತ್ತು ತಮ್ಮ ಮಕ್ಕಳಿಗೆ ಆರೋಗ್ಯವನು ಕೊಡುವ ಪೋಷಣ ಶಕ್ತಿಯನ್ನು ಕೊಡಲು ಎಚ್ಚರಿಕೆಯನ್ನು ತೆಗೆದುಕೊಂಡರೆ ಅವರೆಷ್ಟು ಜಾಣೆಯರು! ಏಕೆಂದರೆ, ಸಾಕಾದಷ್ಟು ಪೋಷಣ ಶಕ್ತಿ ಇಲ್ಲದ ಮಗುವು ಬೇಗನೇ ತನ್ನ ಶಕ್ತಿಯನ್ನು ಕಳೆದುಕೊಂಡು ತನ್ನ ಆರೋಗ್ಯವನ್ನು ಕೆಡಿಸಿಕೊಳ್ಳುವುದು. ಯಾವಾಗಲೂ ಕಡಿಮೆಯಾದ ಚೇತನವನ್ನು ಪೂರ್ಣವಾಗಿ ಉಂಟುಮಾಡುವ ವಿಟಮಿನ್‌ನಿಂದ ಕೂಡಿದ ಪೋಷಣೆಯುಳ್ಳ ಆಹಾರವನ್ನು ನಿಮ್ಮ ಮಕ್ಕಳಿಗೆ ಕೊಡುವುದು ಅಗತ್ಯವಾಗಿದೆ— ಇದಕ್ಕಾಗಿಯೇ ವಿಟಮಿನ್‌ನಿಂದ ಕೂಡಿದ ಡಾಲ್ಡವು ಅಷ್ಟು ಸಹಾಯಕಾರಿಯಾಗಿದೆ. ಡಾಲ್ಡ ಆಹಾರಕ್ಕೆ ಹೆಚ್ಚಾಗಿ ಒದಗಿಸುವ ವಿಟಮಿನ್ ಮತ್ತು ಪೋಷಣ ಶಕ್ತಿಯು ಆರೋಗ್ಯಕ್ಕೂ ಚೇತನಕ್ಕೂ ಎಷ್ಟೋ ವ್ಯತ್ಯಾಸವನ್ನುಂಟುಮಾಡುತ್ತದೆ. ನಿಮ್ಮ ಕುಟುಂಬದ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸಿರಿ — ಕುಟುಂಬದಲ್ಲಿ ಪ್ರತಿಯೊಬ್ಬರಿಗೂ ಪೋಷಣ ಶಕ್ತಿಯು ಅಗತ್ಯವಾಗಿದೆ. ಮತ್ತು ಪ್ರತಿಯೊಬ್ಬರಿಗೂ ಡಾಲ್ಡದಿಂದ ತಯಾರಿಸಿದ ಅಡಿಗೆಯು ಇಷ್ಟ — ಅದು ಹೆಚ್ಚು ರುಚಿಯಾಗಿರುತ್ತದೆ.

ಡಾಲ್ಡ ತನ್ನಲ್ಲಿರುವ "ವಿಟಮಿನ್" ಮೂಲಕ ನೇಹ ಪುಷ್ಟಿಯನ್ನೂ, ಕಡಿಮೆಯಾದ ಪೋಷಣ ಶಕ್ತಿಯನ್ನೂ ಪುನಃ ಕೊಡಲು ಸಹಾಯ ಮಾಡುತ್ತದೆ... "ವಿಟಮಿನ್" ದಿಂದ ಕೂಡಿದ ಡಾಲ್ಡವು ಹೆಚ್ಚಾಗಿ ಪೋಷಣ ಶಕ್ತಿಯುಳ್ಳ, ಶುದ್ಧವಾದ ಅಡಿಗೆಯ ಎಣ್ಣೆಯಾಗಿದೆ. ಅಡಿಗೆಯನ್ನು ಅದರಿಂದ ತಯಾರಿಸಿದರೆ, ಆಹಾರಕ್ಕೆ ಹೆಚ್ಚಾದ ಪೋಷಣ ಶಕ್ತಿಯನ್ನು ಡಾಲ್ಡ ಒದಗಿಸುತ್ತದೆ. ಎಷ್ಟೋ ಪದಾರ್ಥಗಳಲ್ಲಿ "ವಿಟಮಿನ್" ಮತ್ತು ಪೋಷಣ ಶಕ್ತಿಯು ಕಡಿಮೆಯಾದ್ದರಿಂದ, ಮಕ್ಕಳಿಗೂ, ಹಿರಿಯರಿಗೂ ಕೊಡುವ ಆಹಾರವನ್ನೆಲ್ಲಾ ಡಾಲ್ಡದಿಂದಲೇ ತಯಾರಿಸುವುದು ಎಷ್ಟೋ ಒಳ್ಳೆಯದಾಗಿದೆ.

ವಿಟಮಿನ್‌ದಿಂದ ಕೂಡಿದ ಡಾಲ್ಡ

ಖಾತ್ರಿ ವನಸ್ಪತಿ ಎಣ್ಣೆಗಳಿಂದಲೇ ನೂಡಲ್ಪಟ್ಟಿದೆ

ಸೀಲು ಮಾಡಿದ ಡಬ್ಬಗಳಲ್ಲಿ ಮಾರಲ್ಪಡುತ್ತದೆ

HVM. 20-193 KN

THE HINDUSTAN VANASPATI MANUFACTURING CO., LTD., BOMBAY.

ಸ್ವರ್ಗಲೋಕದ ಅರಿವು

★

ಶೀ. ವಿ. ಎನ್. ಮುದಕವಿ, ಪುಣೆ

೧

ಹೃದಯ ಪಕ್ಷಿ ಪಕ್ಕ ಬಡಿದು
ಎದೆಯ ಹೊದರಿನಿಂದ ಸರಿದು
ಅರು ಮೂರು ದೂರ ನಿಡಿದು
ಕತ್ತ ನೀಲಕೆತ್ತಿ,
ಹರುಷದಿಂದ ಹಾರುತ್ತಿತ್ತು
ಗಗನ ಸುತ್ತಿ ಸುತ್ತಿ !

೨

ನಾಕಲೋಕ ಅರಿಯಲೆಂದು—
ನಿಜದ ಬೀಜವೃಜವ ತಂದು
ಚಿತ್ತದಲ್ಲಿ ಚಿತ್ತಲೆಂದು—
ಹಕ್ಕಿ ಹಾರಿಸಿದ್ದೆ ;
ಕಣ್ಣನೋಟ ಹರಿವವರೆಗೆ
ಅದನು ನೋಡುತಿದ್ದೆ !

೩

ರಾಜತೇಜದಂದದಿಂದ
ತನ್ನ ಕಾರ್ಯದುಬ್ಬಿನಿಂದ
ರವಿಯ ರಥದ ವೇಗದಿಂದ
ಭರದಿ ಹಾರಿಹೊಯ್ತು,
ಚಿಕ್ಕ ಚಿಕ್ಕೆಯಾಗಿ ಹಕ್ಕಿ
ಮಿಣುಕಿ ಮಾಯವಾಯ್ತು !

೪

ನನ್ನ ಚಿನ್ನ ಚೆನ್ನ ಹಕ್ಕಿ
ಆಡುತಿತ್ತು ಬದ್ದು ತಕ್ಕಿ
ಕಾಡುತಿತ್ತು ಕುಕ್ಕಿ ಕುಕ್ಕಿ
ಅತ್ತ ಇತ್ತ ಹಾರಿ,
ಕಂದ ಸುದ್ದಿ— ನಗೆಯ ಸೂಸಿ—
ಮಾಡುತಿತ್ತು ಸೂರಿ !

೫

ತೀರ ದೂರ ಸ್ವರ್ಗ ದಾರಿ
ಲೆಕ್ಕಗಿಕ್ಕ ಎಲ್ಲ ಮಿಾರಿ
ಏರಬಹುದು ಶಕ್ತಿ ಮಿಾರಿ
ಏರಿ, ಏರಿ, ಏರಿ,
ತೀರುವ ಝರಿಯು ತಿರುಹ ಬಹುದೆ
ತನ್ನ ಶಕ್ತಿ ಮಿಾರಿ!

೬

....ಮುರಳಿ ಬಾರದುದನು ಅರಿತು
ಸಗ್ಗ ಸೌಖ್ಯದಲ್ಲಿ ಕಳೆತು
ತನ್ನ ತಾನೆ ಪೂರ್ಣ ಮರೆತು
ಮರೆಯುತಿರುವುದೆಂಬ
ಭಾವದಂಬು ತಾಕಿ ನಡುಗಿ-
ತನ್ನ ಮನದ ಕಂಬ !

೭

ಮಿಂಚಿತೊಮ್ಮೆ ಬಾನ ಮಧ್ಯ
ನುಡಿದೆನೊಂದು ಉದಯಪದ್ಯ
ಎನ್ನ ಹಕ್ಕಿ ಇರಲು ಸಾಧ್ಯ-
ವೆಂದು ಕೋಪಗೊಂಡೆ ;
ಹೊದರ ತೆರೆದು ತೂಗುಬಿಟ್ಟೆ
ಗೊಂಚಲಲರ ಗೊಂಡೆ !

೮

ನೋಡು ನೋಡು ಎಷ್ಟು ವೇಗ !
ಸ್ವರ್ಗದ ಗುಟ್ಟೆಲ್ಲ ಬೇಗ
ಬಿಡದೆ ನನಗೆ ಅರುಹಲೀಗ
ಇಷ್ಟು ತವಕವೇನು ?
ದಿನದ ದಾರಿ ಚಣಕೆ ಸರಿದ-
ರದಕೆ ಚೋದ್ಯವೇನು !

೯

ಇಂತು ಬಿಂಬಜವದಿ ಸೇರಿ,
ತೇಕಿ ತೇಕಿ ದಣಿವ ಕಾರಿ,
ಬಿಡದೆ ನಡುಗಿ ಭಯದಿ ಬೆದರಿ
ಕೆಂಡ ಕಣ್ಣ ತೋರಿ,
ಮುದ್ದಿಯಾಗಿ ಬದ್ದುಕೊಂಡು
ನುಡಿಯುತಿಂತು ಚೀರಿ :

೧೦

" ಎತ್ತ ಬೇಡ ಸ್ವರ್ಗ ಲೋಕ
ವೆಂದು! ಇಲ್ಲ ಸ್ವರ್ಗಲೋಕ!,
ಇದುವೆ ನಮ್ಮ ಸ್ವರ್ಗಲೋಕ—
ಇಂತು ಜಗಕೆ ಸಾರು !
ಬನ್ನ ಬೆನ್ನೆ ಸಗ್ಗಮಗ್ಗ !"
ಇದುವೆ ಹಕ್ಕಿಯುಸಿರು.

ಸರ್-ಟಪ್-ಪ್ಯಕ್

(ಒಂದು ವಿಚಾರಲಹರಿ)

ಶ್ರೀ. ಎಚ್. ಎಸ್. ಪಾಟೀಲ, ಎಮ್.ಎ., ಬಿ. ಕಾಮ್.

★

ಕೆರುಮೇಜಿನ ಮೇಲಿಂದ ಆ ಪುಟ್ಟ ಬಟ್ಟಲು (ಕಪ್) ಜಾರಿತು; ಮೊದಲೇ ಮುಂಬಯಿಯಲ್ಲಿಯ ಮನೆಯು ಕಲ್ಲು-ನೆಲ; ನೋಡುವ ಆಶೆಯೇ ಬೇಡ. ಅದರಲ್ಲಿ ಮೂರು ವಿಷಮ ತುಂಡುಗಳಾಗಿದ್ದುವು.

ಆತನ ಕೈಗಳು ಮೊದಲಿನಂತೆಯೆ ಕೆಲಸ ಮಾಡುತ್ತಿದ್ದುವು; ಮುಖವು ಮೊದಲಿನ ಆದರಭಾವವನ್ನೇ ತಾಳಿತ್ತು. ಮನಸ್ಸಿನಲ್ಲಿ ಮಾತ್ರ ವಿಚಾರಚಕ್ರ ಆರಂಭವಾಗಿತ್ತು.

ಆ ಬಟ್ಟಲನ್ನು ಕೈತಾಗಿಸಿ ಕೆಡಹಿದ ಹುಡುಗಿ— ಪುಟ್ಟಾ ಆಕೆಯ ಹೆಸರು— ಮೂರು ವರುಷದ ತರಳೆ— ಗಾಬರಿಯ ಭಾವವನ್ನು ತಾಳಿದ್ದಳು.

ಆದರೆ ಅತಿಥಿಯ ಮೋರೆಯಲ್ಲಿ ಮಾತ್ರ ಪ್ರಶ್ನಾರ್ಥಕ ಚಿಪ್ಪವು ಮೂಡಿತ್ತು. ಪ್ರತಿಯೊಬ್ಬನಿಗೂ ನಾಲ್ಕು ಜನರಲ್ಲಿ, ತಾನು ಪಡೆದ ಅನುಭವಗಳನ್ನು ಹೇಳಲು ಇರುವ ಆತುರದಂತೆಯೆ, ಇಂತಹ ಪ್ರಸಂಗಗಳಲ್ಲಿ ಸಹ—ಎಂದರೆ ಒಬ್ಬ, ಆವನ ಅತಿಥಿ-ಅವನ ಮಗು ಜಹವನ್ನು ಕುಡಿಯುತ್ತ ಕುರ್ಚಿಯ ಮೇಲೆ ಕುಳಿತಾಗ—ಆಕಸ್ಮಿಕವಾಗಿ ಬಾಲಿಕೆಯರ ಕಿಡಿಗೇಡಿ ಸ್ವಭಾವಕ್ಕನುಸರಿಸಿ, ಆಕೆಯ ಬಟ್ಟಲು— ಯಾವುದಕ್ಕೆ ಇಂಗ್ಲಿಶ್‌ನಲ್ಲಿ 'ಕಪ್' ಎನ್ನುವರೊ ಅದು—ಕೆಳಗೆ ಬಿದ್ದು ಒಡೆದ ಪ್ರಸಂಗದಲ್ಲಿ, ಆ ಒಬ್ಬನು ಏನು ನಾಡುವನೆಂಬುದನ್ನು ನೋಡಲೂ ಅಷ್ಟೇ ಕುತೂಹಲವು ಇರುತ್ತದೆ.

ಒಂದೆರಡು ಪಿಳುಕು ನೋಡಿದ ಆ ಅತಿಥಿ. ಒಡೆಯನು ನೀರವನಾಗಿ ಕುಳಿತಿದ್ದ. ಪುಟ್ಟಾನ ಮುಖದ ಮೇಲೆ ದುಗುಡ ಒಡೆದು ಕಾಣುತ್ತಿತ್ತು. ಆಕೆಯೆ ಆ ಸಮಾಧಿಭಂಗದ ಸವಾಲನ್ನು ಸ್ವೀಕರಿಸಿದಳು.

"ನಾ ಕೆಡವಲಿಲ್ಲ ಅದನ್ನ! ಅದೇ ನನ್ನ ಕೈಗೆ ತಾಕಿ ಕೆಳಗೆ ಬಿತ್ತು .. ಹ .. ಹ ..! ಒಡೀತು! .. ಹೊಸಾದಿತ್ತು ಅಲ್ಲಽ ಕಾಕಾ!.." ಎಂದು ಹುಸಿನಗೆ ನಕ್ಕಳಾಕೆ. ಅದನ್ನು ಕೇಳಿ ಅತಿಥಿಯೂ ದೊಡ್ಡ ನಗೆ ನಕ್ಕ. ಒಡೆಯನಾದ ಕಕ್ಕನು ಕೂಡ ತನ್ನ ಗಂಭೀರಭಾವದ ನಾಟಕದಲ್ಲಿ ಅದನ್ನೆಷ್ಟು ಮುಚ್ಚಬೇಕೆಂದೆನಿಸಿದರೂ, ಆ ನಗುವು ಕೊನೆಗೆ ಮೆಟ್ಟಿಲು-ಮೆಟ್ಟಿಲುಗಳಲ್ಲಿ ಹೊರಹೊಮ್ಮಿತು. ಆದರೆ ಆತನು ಮಾತುಗಳನ್ನು ಮಾತ್ರ ಏನನೂ ಆಡಲಿಲ್ಲ.

ಆಗ ಬಂದಿತು ಅತಿಥಿಯ ಸರತಿ. 'ಈ ಶಾಂತತೆಯಿಂದ— ತಾನು ಹೊರಗೆ ಹೊರಟೊಡನೆ— ಇಲ್ಲದ ಅನರ್ಥವು ಮನೆಯಲ್ಲಿ ಒದಗಬಹುದು'ಎಂದು ಹೆದರಿಕೆಯೆನಿಸಿತೇನೊ ಆತನಿಗೆ; ಆತನು ಮೊದಲುಮಾಡಿದ:

"ಆಕೆಗೆ ಸಿಟ್ಟುಮಾಡಬೇಡಿರಿ ಎಂದು ಆಕೆಯ ತಾಯಿಗೆ ಹೇಳಿರಿ....ಆಂ?" ಎಂದನಾತ. ಅದಕ್ಕೆ ಕಕ್ಕನ ಮನಸ್ಸಿನಲ್ಲಿ ಏನು ಹೇಳಬೇಕೆಂದಿತ್ತೋ ತಿಳಿಯದು; ಆದರೂ 'ಆತ ಒಂದೆರಡು ಮಾತುಗಳನ್ನಾಡಬೇಕು ಇಂತಹ ಪ್ರಸಂಗಗಳಲ್ಲಿ' ಎಂಬ ಶಿಷ್ಟಾಚಾರಕ್ಕೇನೋ ಎಂಬಂತೆ ಉಸಿರಿದ:

"ಈ ಮನೆಯಲ್ಲಿ ಆಕೆಗೆ ಸಿಟ್ಟು ಮಾಡುವವರು ಯಾರೂ ಇಲ್ಲ— ಎಂದೂ ಇಲ್ಲ!"

ಪುಟ್ಟಿಯು ಆವರಿಬ್ಬರಿಂದ ಪುಟಿದು ಬರುತ್ತಿರುವ ಈ ದೊಡ್ಡಸ್ತನದ ಕಾರಂಜಿಯನ್ನು ತುಂಬ ಚಿತ್ತವಿಟ್ಟು ನೋಡುತ್ತಿದ್ದಳು. ಆದರೂ ಆಕೆಗೆ ಅಲ್ಲಿಂದ ಬೇಗನೆ ಹೊರಬೀಳಬೇಕೆಂದು ಎನಿಸಹತ್ತಿತ್ತು ಆಗ ತನ್ನ ತಿನಿಸನ್ನು ತೀರಿಸಿ, ಜಹವನ್ನು ಕುಡಿ-

★

ಚಿಕ್ಕನುಕ್ಕಳನ್ನು ಪಾರತಂತ್ರ್ಯದಲ್ಲಿರಿಸಿ ಬಳೆಯಿಸುವುದು ತುಂಬ ಘಾತುಕವಾದುದು; ಅದರಂತೆ ಸ್ವೈರವಾಗಿ ವರ್ತಿಸಬಿಡುವುದೂ ಅವರ ಪ್ರಗತಿಗೆ ಘಾತುಕವೆನಿಸುವುದಲ್ಲದೆ ಪಾಲಕರು ಹಲವು ಬಗೆಯ ನಷ್ಟಗಳನ್ನನುಭವಿಸಬೇಕಾಗುವುದು. ಹೀಗಾಗದಿರಬೇಕಾದರೆ ಏನು ಮಾಡಬೇಕು?

★

ಯುವ ತೊಂದರೆಯು ಇಲ್ಲದಂತಾದದ್ದು ಒಂದು ಒಳಿತೇ ಆಯಿತು ಎಂಬ ಆನಂದಭಾವವನ್ನು ಮೊಗದಲ್ಲಿ ತಾಳಿ, ಆಕೆಯು ಮೆಲ್ಲಗೆ ಹೊರಗೆ ನುಸುಳುವ ಸಂಧಿಯ ದಾರಿಯನ್ನೇ ನೋಡುತ್ತಿದ್ದಳು.

"ನಮ್ಮಣ್ಣ ಇಂತಹ ಸಂದರ್ಭದಲ್ಲಿ ಏನು ಮಾಡುವ ಗೊತ್ತಿದೆಯೆ?" ಎಂದು ತುರುಸಿನ ಹುರುಪಿನಿಂದ ಅತಿಥಿ ಒಂದು ಆಟವಾಡಿದ:

"ಬಾಲಕರು ಹೀಗೆ ಕಾಚಿನ ವಸ್ತುಗಳನ್ನು ಒಡೆಯಲು ಕಾರಣರಾದಾಗ— 'ಓಹೋ, ಒಂದಿದ್ದುದನ್ನು ಎರಡು ಮಾಡಿದೆಯಾ ಬಹಳ ಒಳತಾಯಿತು; ಇದಕ್ಕೆ ಬಹುಮಾನವೆಂದು ಯಾವ ತುಣುಕು ಬೇಕು, ಬೇಡಿಕೊ!" ಎಂದು ಅವರನ್ನು ಎತ್ತಿಹಿಡಿದು ಹಾರಾಡಿಸಿ, ಮುದ್ದಿಟ್ಟು, ಆವರಿಗೆ ತಮ್ಮ ತಪ್ಪಿನ ನೆನಪು ಕೂಡ ಉಳಿಯದಂತೆ ಮಾಡುತ್ತಾನೆ!"

ಅತಿಥಿ ಇಷ್ಟು ನುಡಿಯುವಷ್ಟರಲ್ಲಿಯೆ ಪುಟ್ಟಾ ಮೆಲ್ಲಗೆ ಅಲ್ಲಿಂದ ಜಾರಿದ್ದಳು. 'ಈ ಬಗೆಯ ಮೇಲಾಟವನ್ನು ಇನ್ನು

ಮುಂದುವರಿಸಿ ಹುರುಳಿಲ್ಲ,' ಎಂದು ಮನಗಂಡು ಕಕ್ಕನು ಸುಮ್ಮಗಾದ. ಮಿಕ್ಕ ಬಟ್ಟಲು-ಬಸಿಗಳನ್ನು ಒಂದುಗೂಡಿಸಿ ಒಳಗಿಟ್ಟು ಬಂದು, ಅತಿಥಿಯ ಒಳಿಯಲ್ಲಿ ಕುಳಿತ.

ಆ ಮೇಲೆ ಎಲೆ-ಅಡಿಕೆಯಾಯಿತು, ಹೊಗೆಸೊಪ್ಪು ಸುಟ್ಟಾಯಿತು; ಬಂದವನನ್ನು ಆರೆದಾರಿ ಬೀಳ್ಕೊಟ್ಟು ಬಂದಾಯಿತು. ಆದರೆ ಇವೆಲ್ಲ ವಿಧಿಗಳಲ್ಲಿ ಆತನ ಮನಸ್ಸೇ ಇದ್ದಂತೆ ಕಾಣಲಿಲ್ಲ. ಏನೋ ಒಂದು ಯಾಂತ್ರಿಕವಾದ ರೀತಿಯಲ್ಲಿ ಇವೆಲ್ಲ ಕೆಲಸಗಳನ್ನು ಆತ ನೂಡುತ್ತಲಿದ್ದ. ಆದರೆ ಒಳಗೊಳಗೆ ಆತನ ನುನೋಯಂತ್ರವು ತುಂಬ ವೇಗದಿಂದ ತಿರುಗಹತ್ತಿತ್ತು....

'ಏನು ವಿಚಿತ್ರ ಮನುಷ್ಯನ ಸ್ವಭಾವ!' ಎಂದು ಕೊಂಡ ನಾತ ತನ್ನಷ್ಟಕ್ಕೆ. 'ತಮ್ಮ ತಮ್ಮ ಮನೆಯ ಮನಸ್ಸಿನ ಏರಿಪೇಗೈಮೆಗಳನ್ನು ಹೇಳಿಕೊಳ್ಳುತ್ತ ಮನುಷ್ಯನು ಅವ್ಯಗಳನ್ನು ಎಂತಹ ಕೀಳುದರ್ಜೆಗೆ ಒಯ್ಯುತ್ತಾನಲ್ಲ! ಇದೂ ಒಂದು ಮೋಜಿನ ವಿಷಯವೇ ಅಲ್ಲವೇ? ನಿಜವಾಗಿಯೂ ಇದರಲ್ಲಿ ಕಲಿತುಕೊಳ್ಳುವಂತಹದೇನಾದರೂ ಇರುವುದೊ? ಮಕ್ಕಳೂಡನೆ ಹೇಗೆ ನಡೆದುಕೊಳ್ಳಬೇಕು; ಮಕ್ಕಳು ತಪ್ಪು ಮಾಡಿದಾಗ, ಅಂತಹ ತಪ್ಪುಗಳು ನುತ್ತೆ ಆಗಬಾರದು ಎಂಬಂತೆ ಎಂತಹ ಎಚ್ಚರಿಕೆಗಳನ್ನು ತಾಳಬೇಕು?— ಎಂಬುದನ್ನು ಇದೀಗ ಕಲಿತಂತೆಯೆ ಅಲ್ಲದೆ, ಏನೇ ಇರಲಿ. ಶಿಶುಶಿಕ್ಷಣದೊಡನೆ, ಮಾನವಸ್ವಭಾವದ ಅಭ್ಯಾಸದಲ್ಲಿ ಒಂದು ಮಾದರಿಯ ಪಾಠವನ್ನೇ ಕಲಿತಂತಾಯಿತು ಎಂದೆನ್ನಬಹುದು. ಏಕೆಂದರೆ ಮಕ್ಕಳ ವಿಷಯದಲ್ಲಿ ಕಲಿಯುವುದು ಕಲಿಯತಕ್ಕಂತಹದು ಎಂಬುದೇನಿರೇತ್ತದೆ? ಪ್ರತಿಯೊಂದು ಮನೆಯಲ್ಲಿ ಅಲ್ಲಲ್ಲಿಯ ಪರಿಸ್ಥಿತಿಗಳಿಗನುಸರಿಸಿ ಕೆಲವು ಪರಿಪಾಠಗಳು ಏದ್ದೇ ಇರುತ್ತವೆ. ಅವೇ ಮಕ್ಕಳ ಶಿಕ್ಷಣದ ಮೊದಲ ಪಾಠಗಳು; ಮೇಲಾಗಿ ಮಕ್ಕಳ ವಿಷಯದಲ್ಲಿ ಹಿರಿಯರು ಕಲಿಯುವ ಸಂಗತಿಗಳು ಬೇಕಾದಷ್ಟಿದ್ದರೂ ಅವುಗಳನ್ನು ಮಕ್ಕಳಿಗೆ ಕಲಿಸಬಹುದು. ಅವುಗಳನ್ನು ಕಲಿಸಿ ನಡೆಯುವುದೆ? ಆದರ ಬದಲಾಗಿ ಆ ಅಭ್ಯಾಸದಂತೆ ಹಿರಿಯರು ಆಚರಿಸಹತ್ತಿದರೆ, ಮಕ್ಕಳಿಗೆ ಆದರಿಂದ ಎಷ್ಟೋ ಮಾರ್ಗದರ್ಶನವಾದೀತು. ಆದರೆ ಇಂದಿನ ಮನುಷ್ಯನ ಮಾದರಿ! ಹಃ!.. "

ಅಷ್ಟರಲ್ಲಿ ಮನೆಯು ಬಂದಿತು. ಆತನು ಹೆಬ್ಬಾಗಿಲನ್ನು ದಾಟಿ, ಪೆಲ್ಲಗೆ ಒಳಬಾಗಿಲಲ್ಲಿ ಕಾಲಿಕ್ಕುವವ. ಅಷ್ಟಕ್ಕೆ ಆತ ತಡೆದ, ಹೊಸ್ತಿಲನ್ನು ಎಡವಿದನೋ ಏನು ಪುಟ್ಟಿಯ ಪುಟ್ಟ ಕಾಲು ಆತನಿಗೆ ತಾಕಿತೋ ತಿಳಿಯಲಿಲ್ಲ. ಆದರೂ ಪುಟ್ಟಿಯು ಎದುರು ಬಂದುದನ್ನು ಮಾತ್ರ ಆತ ಕಂಡ. ಆಗ:

"ಇವನ್ನ ಇಲ್ಲಿಯೆ ಇಡತೀನಾಂ..ಕಾಕಾ!" ಎನ್ನುತ್ತ ಆಕೆಯು, ಆ ಕಾಜಿನ ಬಟ್ಟಲದ ತುಣುಕುಗಳನ್ನು, ಹಗುರಾಗಿ ಒಂದು ಮೂಲೆಯಲ್ಲಿರಿಸಿದಳು.

" ನನಗೆ ಆಡಲಿಕ್ಕೆ ಬರತಾವ " ಎಂದು ಆಕೆಯು ತನ್ನ ಉದ್ದೇಶ ಸಾಧನೆಯನ್ನು ಹೇಳಿದಳು. ಆತನಿಗೆ ಅದು ಮಾತ್ರ ಕೇಳಿಸಿತು; ಅದೆಲ್ಲ ಆತನನ್ನು ಹುರುವುಗೊಳಿಸಿತು.

ಈ ಎರಡು ವಾಕ್ಯಗಳು ಆವನ ವಿಚಾರಚಕ್ರಕ್ಕೆ ಎಣ್ಣೆಯಂತಾಗಿ ಆವನ್ನು ಹೆಚ್ಚು ಒತ್ತರದಿಂದ ಓಡಿಸಹತ್ತಿದುವು:

' ಎಷ್ಟು ಸರಳ ಈ ಹುಡುಗೆಯ ಸ್ವಭಾವ. ಎಷ್ಟು ಯುಕ್ತಿ-ಪೂರ್ಣ ಈಕೆಯ ಬುದ್ದಿ!' ಆಶ್ಚರ್ಯವೆನಿಸಿತು ಆತನಿಗೆ. 'ಇಷ್ಟು ಸಣ್ಣ ಸಂಗತಿಯ ಮೇಲಿಂದ ಜಾಗೃತನಾಗುವುದನ್ನು ಬಿಟ್ಟು ಆ ಗ್ರಹಸ್ಥರು-ನಮ್ಮ ಅತಿಥಿದೇವರು—ತಮ್ಮ ಹಿರಿಮೆಯನ್ನು ಕೊಚ್ಚ ಬಂದಿವ್ವರು. ಏನು ಅವರ ಉಬ್ಬು! ಎಷ್ಟು ಅವರ ಹೆಮ್ಮೆ! ಇಂತಹರು ಚಿಕ್ಕವರಿಗೆ ಒಳ್ಳೆಯ ಶಿಕ್ಷಣವನ್ನು ಕೊಡುವವರು! ಇವರದೇ ಇರಬಹುದು; ಆ ಹೊಸ ಪಾಠದ ನವೋನವ ವಿಷಯ!

ಆದರೆ ಈ ಸಂದರ್ಭದಲ್ಲಿ ಆ ಹುಡುಗಿಯ ತಪ್ಪು ಇರುವುದಾದರೂ ಎಲ್ಲಿ? ಆಕೆಯು ಬಳಿಯಲ್ಲಿ ಬಂದು, ನಮ್ಮಂತೆಯೆ ಕುರ್ಚಿ-ಕಿರುಮೇಜುಗಳ ಮೇಲೆ ಕುಳಿತು ಜಹವನ್ನು ಕುಡಿಯಬೇಕು ಎಂದು ಬಂದಳು; ಆಕೆಯ ಕೈಗೆ--ಆಕೆಯೆ ಹೇಳಿದಂತೆ--ಆ ಬಟ್ಟಲು ತಾಕಿತು-ಕೆಳಗೆ ಬಿದ್ದಿತು-ಒಡೆದು ಚೂರಾಯಿತು. ಇದರಲ್ಲಿ ಆಕೆಯದೇನು ತಪ್ಪು?....'

'ಹಾಗಾದರೆ ತಪ್ಪಾರದು?' ಎಂದು ತನ್ನಷ್ಟಕ್ಕೆ ಕೇಳಿಕೊಂಡನಾತ. ಆಮೇಲೆ ' ಶಿಕ್ಷೆ ಮಾಡಲಿ ಅಥವಾ ನಮ್ಮ ಇಂದಿನ ' ದೇವರು' ಸಂದೇಶಿಸಿದಂತೆ ಆ ಹುಡುಗರನ್ನು ಕೊಂಡಾಡಿ ಹರಸಲಿ; ಈಗ ಆ ಬಟ್ಟಲು ಒಡೆದು, ನೊನ್ನೆ ತಾನೆ ಅದನ್ನು ತರಲು ಮಾಡಿದ ಎಂಟಾಣೆ ವೆಚ್ಚವು ವ್ಯರ್ಥವಾಯಿತು; ತುಂಬಿ ಬರಲಾರದಂತಹ ಹಾನಿಯಾಯಿತು—ಆ ಬಟ್ಟಲಿನ ಆಕಸ್ಮಿಕ ಮರಣದಿಂದ. ಅದರಲ್ಲಿಯೂ ಚಿಕ್ಕ ವಯಸ್ಸಿನದಿತ್ತು. ಮೇಲಾಗಿ ಅಂತಹದಿನ್ನೊಂದು ಬಟ್ಟಲನ್ನು ಈಗಿನ ಕಾಳಿಗದ ಕಟಾಕ್ಷವು ಸರಿಯುವ ವರೆಗೆ ತರುವುದು ಸಹ ದುಸ್ಸಾಧ್ಯ! ಎಂಥ ಮೇಲೆ—ಎಂಥ ಮೇಲೇನು.. ಒಡೆದುದು ಒಡೆದು ಹೋಯಿತು. ಇನ್ನು ಅದರ ಮರಣೋತ್ತರ ದೇಹವಿಚ್ಛೇದನದಿಂದ ಏನು ತಿಳಿಯಬೇಕಾಗಿದೆ....ಏನು ಬರಬೇಕಾಗಿದೆ?.... '

ಇದರಿಂದ ಆತನಿಗೆ ಮೋಜೆನಿಸಿದಂತಾಯಿತು. ವಿಚಾರವೆಂಬ ರೀತಿಯಲ್ಲಿ ಏನೋ ಸಮಾಧಾನದಂತೆ ತೋರಿತು. ಆದರೆ ಆತನು ಸುಮ್ಮನಾಗಲಿಲ್ಲ. ಎಂದರೆ ಆವನ ಒಳಗಿನ ಚಕ್ರವು ಆತನನ್ನು ಇನ್ನಷ್ಟು ಒಳಗೊಳಗೆ ಎಳೆಯತೊಡಗಿತು. ಆದರ ಲಕ್ಷಣಗಳು ಆತನು ಹೊರಗೆ ತೋರುವ ಮುಖಮುದ್ರೆಗಳಿಂದ ಕಂಡುಬಂದುವು:

'ಎಂತಹ ಹುಚ್ಚು ಈ ಮನಸ್ಸು! ತಾನು ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲು ಅವಕ್ಕೆ ನಿನೋದದ ವೇಷವನ್ನು ಹಾಕಿ ಹಾರಾಡಬೇಕೆನ್ನುತ್ತದೆ. ಎಂತಹ ಮರುಳು! ಮೊದಲು ಸಡಗರದಿಂದ ಆ ಅತಿಥಿಗೆ ಚೆತನವಿತ್ತು, ಆ ಮೇಲೆ ಆತನು ಬರುವಂತೆ ಆತನ ಮನವೊಲಿಸಿ, ಅನಂತರ ಆತನು ಬಂದೊಡನೆ ಆತನೆದುರು

ಈ ಬಗೆಯ 'ಖಾನ್‌ದಾನಿ' ಯ ಪ್ರದರ್ಶನವನ್ನು ಏರ್ಪಡಿಸಲು ಯಾರು ಹೇಳಿದ್ದರು? 'ಅನ್ಯಥಾ ಅನ್ಯರಿದುರಿಗೆ ತಮ್ಮ ಗುಣಗಾನವನ್ನು ಮಾಡುವ ಆ ಅತಿಥಿ,' ಎಂದು ಹೀಗಳೆಯುವ ತಾನಾದರೂ ಮಾಡಿದುದೇನು? ಆತನು ಹಾಡಿದ; ತಾನು ಕುಣಿದ; ಇಷ್ಟೇ ಅಲ್ಲವೆ? ಆ ಬಗೆಯಾಗಿ ಆತನು ಬಂದಾಗ, ಖುರ್ಚಿ-ಮೇಜುಗಳ ಶೃಂಗಾರದಲ್ಲಿ ಚಹಾಪಾನದ ಸಮಾರಂಭವನ್ನು ಸಾಂಗಗೊಳಿಸುವ ಸಂದರ್ಭದಲ್ಲಿ ಇಷ್ಟು ಅನರ್ಥವೊದಗಿತು. ಮನೆಯಲ್ಲಿ ಚಿಕ್ಕನುಕ್ಕಳು ಇದ್ದರೆ ಈ ಬಗೆಯ ವೀರಾಟವನ್ನಾಡಬಾರದು ಹಿರಿಯರು—ಎಂಬುದು ಕೂಡ ತಿಳಿಯಬಾರದೆ? 'ಮಕ್ಕಳಿಗೆ ಹಿತವಾದ ಸ್ವಾತಂತ್ರ್ಯವನ್ನೀಯಬೇಕು,' ಎಂಬಲ್ಲಿ ಅವರು ಮಾಡುವ ಕೆಲಕೆಲವು ಕೆಲಸಗಳಿಗೆ ಸಾಕಷ್ಟು ಅನುವು ಇಂಬುಗಳನ್ನಿಡಲೇ ಬೇಕಾಗುತ್ತದೆ. ಎಷ್ಟೆಂದರೂ ಮಕ್ಕಳ ಮನಸ್ಸು ಅನುಕರಣಪ್ರಿಯವಾದುದು. ಅದರಲ್ಲಿ ಹೊಸದು ಇನ್ನಿವೆ ಕೆಡಿಗೇಡಿತನದ್ದೇನಾದರೂ ಇದ್ದರೆ, ಅದನ್ನು ಕಂಡೊಡನೆ ತಾವೂ ಹಾಗೆಯೇ ಮಾಡಬೇಕು. ಎಂದು ಚಿಕ್ಕವರಿಗೆ ಎನಿಸುವುದು ಸ್ವಾಭಾವಿಕ. ಅವರಿಗೆ ಒಪ್ಪುವ ವಿಕಾಸಕ್ರಮವದು. ಇಷ್ಟು ಬಲ್ಲಂತಹರು ಕೂಡ ಇಲ್ಲದ ಸಲ್ಲದ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಹವಣಿಸಿದರೆ ಆಗುವುದೇ ಇಂತಹ ಹಾನಿ. ಅದೇ ತಾನು ಆತನನ್ನು ಮನೆಗೆ ಕರೆಯುವುದನ್ನೆ ಬಿಟ್ಟದ್ದರೆ.... ? 'ಹಾಗೆ ಹೇಗೆ ಮಾಡಲಿಕ್ಕೆ ಬರುತ್ತದೆ?' ಎಂದು ಮತ್ತೊಂದು ವಿಚಾರವೂ ಸುಳಿಯಿತು ಆತನಿಗೆ. ತನ್ನ ಕೆಲಸಕ್ಕಾಗಿ ಆತನು ತಾನಾಗಿಯೆ ಬರಲು ಒಪ್ಪಿಕೊಂಡಿದ್ದ. ಅಂತಹನನ್ನು ಇನ್ನು ಬರಬೇಡ ಎಂದು ಬಿಡಿಸಲು ಬರುವುದೆ? ಛೆ, ಅದು ಒಳಿತಲ್ಲ! ಹೋಗಲಿ, ಕೊನೆಗೆ, ಆತನು ಬಂದನಂತರ, ಮನೆಯೊಳಗಿನ ಮಣೆ-ತಟ್ಟೆಗಳನ್ನಾದರೂ ಉಪಯೋಗಿಸಬಾರದಾಗಿತ್ತೆ! ಹುಡುಗರು ಇರುವ ಮನೆಯಲ್ಲಿ ಒಡೆಯುವ ಮುರಿಯುವ ಪದಾರ್ಥಗಳು ಇರಬಾರದು ಎಂದು ಡಂಗುರ ಹೊಡೆಯಬೇತ್ತ, ಕಾಜಿನ ಕರ್ಪುರದ ಆಟಗೆಗಳನ್ನೂ ಹೊಸ್ತಿಲೊಳಗೆ ಬರಗೊಡದ ತಾನು, ಇಂದು ತಾನೇ ಇಂತಹ ಕೆಲಸವನ್ನೇಕೆ ಮಾಡಬೇಕಾಗಿತ್ತು! .....

ಅವನಿಗೆ ತುಸು ಕೃತಕವೆನಿಸಿತು ಈ ಬಗೆಯ ನಿಚಾರಪ್ರಣಾಲಿ. ಹುಡುಗರು ಕೆಡಿಗೇಡಿಗಳು ನಿಜ; ಅವರಿಗೆ ತಿಳಿಯದೆ ಅವರು ಇಲ್ಲದ ತೊಂದರೆಗಳನ್ನು ತಂದೊಡ್ಡುವರು ಇದೂ ನಿಜ. ಆದರೆ ಇಂತಹ ಪ್ರಸಂಗಗಳಲ್ಲಿ ಅವರಿಗೆ ಹೊಸ ಬಗೆಯ ಜೀವನ, ಹೊಸ ಹೊಸ ಜೀವನಸುಗಳು ಇವುಗಳನ್ನು ತೋರಿಸುವುದನ್ನು ಬಿಟ್ಟು, ಅವುಗಳನ್ನು ಅವರು ಎಡಹುವರು- ಕೆಡಹುವರು ಎಂದು ಅವುಗಳಿಂದ ಅವರನ್ನು ದೂರವಿರಿಸಬಹುದೆ? ಇದೆಂತಹ ದೃಷ್ಟಿ! ಇಂದಿನ ಯುಗದಲ್ಲಿಯ ತರುಣರಿಗೆ ಒಪ್ಪಬಹುದೇ ಇಂತಹ ಮಾರ್ಗಕ್ರಮಣ? ಎಂದಿಗೂ ಇಲ್ಲ! ಮುಂದೆ ಮುಂದೆ ಹೋಗುವುದೇ ಅಲ್ಲವೇ ಪ್ರಗತಿಯೆಂದರೆ! ಆದರೆ ಇದು ಹಿಂದೆಸರಿಯುವುದು ಸಹ ಅಲ್ಲ- ನಿಂತಲ್ಲಿಯೆ ನಿಲ್ಲುವ ಯೋಜನೆ! ತೀರ ಹಿಂದೆಸರಿಯುತ್ತ ಹೋಗುವುದಕ್ಕಿಂತ ಕೆಟ್ಟ ಸ್ಥಿತಿ! .....

'ಆದೂ ನಿಜವೆ!' ಎಂದುಕೊಂಡನಾತ. 'ಆದರೆ ಹೀಗೆ ಮುಂದೆ ಸರಿಯುವ ಪ್ರಯೋಗಗಳಲ್ಲಿ ಹಣದ ಹಾಳು, ಹೊತ್ತಿನ ಗೀಳು ಎಷ್ಟಾಗುವುದಲ್ಲ! ಈಗ ವ್ಯರ್ಥವಾಗಿ ಆ ಬಟ್ಟಲು-ಬಸಿಗಳು ನಾಶಹೊಂದಿದುವು, ಆದರೊಡನೆ ಇಡಿಯ ಸಂಜೆಯ ವೇಳೆಯೆಲ್ಲ ವ್ಯರ್ಥವಾಗಿ ಹೋಯಿತು! ಆ ಪುಟ್ಟಿಯು ಮಾತ್ರ ಎಂದಿನಂತೆ ತನ್ನ ಆಟದಲ್ಲಿಯೆ ತೊಡಗಿರುತ್ತಾಳೆ ತುಡುಗಿ..'ಎಂದು ಎದುರಿಗಿನ ಮೂಲೆಯಲ್ಲಿ ಆಡುತ್ತ—ಕುಳಿತಲ್ಲಿಯೆ ತನ್ನಷ್ಟಕ್ಕೆ ಮಾತನಾಡಿಕೊಳ್ಳುವ ಆ ತರಳೆಯನ್ನು ಕಂಡನಾತ. ಇತ್ತ ಮತ್ತೆ ಕಣ್ಣುಗಳು ಸರದೆಯನ್ನು ಹಾಕಿಕೊಂಡುವು. ಒಳಗಿನಿಂದಲೆ ಮಧ್ಯಾಹ್ನದ ಇಡಿಯ ಚಿತ್ರವನ್ನು ಮತ್ತೆ ಕಾಣತೊಡಗಿದುವು.... ಅದೇನಿಲ್ಲ, ನಾನು ಮಾಡಿದುದೇ ಸರಿಯಾದುದು! ಒಡೆಯಬಹುದಾದರೂ ಎಷ್ಟು ಪಾತ್ರೆಗಳನ್ನು—ಆ ಹುಡುಗಿ—ಅದೇಕೆ ಯಾವುದೇ ಮಗು! ತಿಳಿಯುವ ವರೆಗೆ ಒಂದೆರಡನ್ನು ಪುಡಿಮಾಡಬಹುದು; ಅಲ್ಲಿಯ ವರೆಗೆ ಹಿರಿಯರೇ ಕೊಂಚ ಜಾಗೃತಿಯಿಂದಿದ್ದರಾಯಿತು. ಮಕ್ಕಳಿಗೆ ಸಂಗತಿ-ವಿಷಯಗಳ ಪರಿಚಯ-ಉಪಯೋಗಗಳು ಅತ್ಯಾವಶ್ಯಕ. ಅವರಿಗೆ ಆ ಬಗೆಯ ರೂಢಿ-ಶಿಕ್ಷಣಗಳು ದೊರೆಯಲೇ ಬೇಕು. ಅಂತಹ ಸಂಯನುವು ಅವರಲ್ಲಿ ಉಂಟಾಗುವ ವರೆಗೆ ಹಿರಿಯರು ಹೆಚ್ಚಿನ ಹೊಣೆಯಿಂದ ಅವರನ್ನು ನೋಡುತ್ತಿರಬೇಕು. ಇದೇ ಸರಿಯಾವ ದಾರಿ! ಯಾವುದೇ ವಸ್ತು ಇಲ್ಲವೆ ವಿದ್ಯೆಯಿಂದ ಹಾನಿಯಾಗಬಹುದು ಎಂಬ ಸಾತು ಸುಳ್ಳು! ಹಾನಿಯಾಗಬಹುದು ಎಂದು ತಿಳಿದುಕೊಂಡು ಸುಮ್ಮನೆ ಅದರಿಂದ ದೂರ ಉಳಿಯುವುದಂತೂ ಇನ್ನೂ ಕೆಡುಕು! ಅದು ಹೇಗೆಯೆ ಇರಲಿ, ಅದರಿಂದ ನಮಗೆ ದುಷ್ಪರಿಣಾಮ— ದುರುಪಯೋಗವಾಗದಂತೆ ಅದನ್ನು ತಿಳಿದುಕೊಳ್ಳುವುದೇ ಉತ್ತಮ! ಯಂತ್ರ-ಶಕ್ತಿ-ಜ್ಞಾನ-ಶಾಸ್ತ್ರ ಎಲ್ಲ ನಮಗೆ ಬೇಕು; ಆದರೆ ಅವುಗಳನ್ನು ಒಳ್ಳೆಯದಕ್ಕೆ ಮಾತ್ರ— ಉತ್ತಮ ಉದ್ದೇಶಸಾಧನೆಗೆ ಮಾತ್ರ ವಿನಿಯೋಗಿಸಿಕೊಳ್ಳುವ ಸಂಯಮ ನಮ್ಮಲ್ಲಿ ಅವಶ್ಯಕ; ಅದರಲ್ಲಿ ಇಲ್ಲದ ತೋರಿಕೆಯನ್ನಾಗಲಿ, ಸಲ್ಲದ ಡಂಭಾಚಾರವನ್ನಾಗಲಿ ತರಬಾರದು, . . .

'ಉಸ್'— ಎಂದನು. ಈ ಬಗೆಯ ನಿಲುವಿಗೆ ಆತನ ವಿಚಾರವು ಬಂದೊಡನೆ 'ಅಂತು ಮೋಜು' ಅವನೆಂದ. 'ಈ ವಿಚಾರ ಬಿಂದುವು ಆ ಬಟ್ಟಲಿನೊಡನೆ ಸರ್ ಎಂದು ಜೊರಟು, ಆ ಅತಿಥಿಯ ಮೇಲೆ ಟಪ್ಪೆಹಾಕಿ, ಕೊನೆಗೆ ಈ ಬಗೆಯಾಗಿ ಟಳ್ಳಿಂದು ಒಡೆಯಿತಲ್ಲವೆ.....?' ಎನ್ನುತ್ತಲೆ ಒಂದು ಕಿರುನಗೆಯು ಅವನ ಮೊಗದಲ್ಲಿ 'ಏ' ಆಕಾರವನ್ನು ತೋರಿತು.

ಮುಂದೆ ತೆನ್ನಾಲಿರಾಮನ 'ಸರ್-ಡಬ್-ಮ್ಯಾ' ದಂತೆ ಆತನ 'ಸರ್-ಟಪ್-ಪಳ್' ವು ಸಹ ಒಂದು ಅಮೋಘತತ್ತ್ವವಾಗಿ ಪರಿಣಮಿಸಿ, ಪೆಸರಾಯಿತು.

ಬರದ ದೇವಿ!

(ಕಣ್ಣಕತೆ)

ಶ್ರೀ. ಬಸವರಾಜ ಕಟ್ಟೀಮನಿ

★

ಹೊಟ್ಟೆಗಿಲ್ಲವೆಂದು ಬಾಗಿಲಿಗೆ ಬೇಡಲು ಬಂದಾಗ ಸ್ವಲ್ಪವೂ ಮನಸ್ಸಿಗೆ ಹಚ್ಚಿಕೊಳ್ಳದ ಕುರುಡ ಸಮಾಜಕ್ಕೆ, ನಿಂಗಮ್ಮ ಒಂದೆರಡು ತುತ್ತು ತಿಂದು ಬದುಕಿರುವುದನ್ನು ನೋಡಿ ಸಹಿಸುವುದಾಗಲಿಲ್ಲ! ಸಮಾಜದ ಕಣ್ಣು ಎಂತಹ ವಿಪರೀತ ನೋಟದುವು ?

★

ನಿಲುವುಗನ್ನಡಿಯ ಎದುರಿಗೆ ನಿಂತುಕೊಂಡು ಶಿವಣ್ಣ, ಸರಸರನೆ ಕೂದಲಿನ ಮೇಲೆ ಬಾಚಣಿಕೆಯನ್ನಾಡಿಸಿದ. ಬೈತಲೆಯನ್ನು ಸರಿಪಡಿಸುವುದರ ಕಡೆಗೆ ಅವನ ಗಮನವಿದ್ದಂತಿರಲಿಲ್ಲ. ಕನ್ನಡಿಯಲ್ಲಿ ಮೂಡಿದ್ದ ಪ್ರತಿಬಿಂಬದ ಕಡೆಗೂ ಅವನ ದೃಷ್ಟಿಯಿದ್ದ ಹಾಗಿರಲಿಲ್ಲ.

ಬಾಚಣಿಗೆಯನ್ನು ಮೇಜಿನ ಮೇಲೆ ಬಿಸುಟಬಿಟ್ಟು ಶಿವಣ್ಣ ವಿರಾಮ ಕುರ್ಚಿಯಲ್ಲೊರಗಿಕೊಂಡ. ಕೊಂಚ ತೀವ್ರಸ್ವರದಲ್ಲಿಯೆ ಕೂಗಿದ :

" ಪಾರೂಽಽ, ಏ ಪಾರೂಽಽಽ ! "

ಅವನ ಕೂಗಿಗೆ ಉತ್ತರವೇನೂ ದೊರೆಯಲಿಲ್ಲ.

ಕೊಂಚ ಕೋಪದ ಸ್ವರದಲ್ಲಿ ಅವನು ಪುನಃ ಕೂಗಿದ :

' ಏ ಪಾರ್ತಿ,....ಮನೇ ಮಾರೀಽಽ–'

ಆಗಲೂ ಅವನ ಕೂಗು ಹುಸಿಹೋಯಿತು. ಪಾರಿಯೂ ' ಓ ' ಕೊಡಲಿಲ್ಲ; ಮಾರಿಯೂ ' ಓ ' ಕೊಡಲಿಲ್ಲ.

' ಎಲ್ಲಿ ಹಾಳಾದಳೋ ತಿಳಿಯದು. ಕಾಫೀ ಹೊತ್ತಿನಲ್ಲೇ ಈಕೆ ಮುಟಮಾಯವಾಗಿ ಬಿಡೋದು ; ಇಲ್ಲಿ ನಮ್ಮ ಗಲಾಟೆಯೋ ಗಲಾಟೆ! ಹೊರಕ್ಕೆ ಹೊರಟು ನಿಂತಾಗಲೇ ಈಕೆ ಎಲ್ಲಿ ಬಾವಿ ಬೀಳಲು ಹೋದಳೋ ಏನೊ !.... ' ಎಂದು ಗೊಣಗಿಕೊಳ್ಳುತ್ತ ಶಿವಣ್ಣ ಎದ್ದುಬಿಟ್ಟ. ರೇಗಿಸಿಂದ ಅಡಿಗಳನ್ನಿಡುತ್ತ ಅಡಿಗೆಮನೆಯನ್ನು ಪ್ರವೇಶಿಸಿದ.

ಅಡಿಗೆಮನೆಯೇನೋ ಇದ್ದುದಿದ್ದ ಹಾಗೆಯೆ ಇತ್ತು ; ಅದರ ರಾಣಿ ಮಾತ್ರ ಅಲ್ಲಿರಲಿಲ್ಲ.

ಒಲೆಯಿಂದ ಹಠಾತ್ತಾಗಿ ' ಚುರ್‌ರ್‌ರ್ ' ಎಂಬ ಸದ್ದು ಕೇಳಬಂದಿತು.

ಶಿವಣ್ಣ ಆ ಕಡೆ ಹೊರಳಿದ.

ಒಲೆಯಲ್ಲಿಯ ಬೆಂಕಿ ಹೋಮಾಗ್ನಿಯಂತೆ ಧಗಧಗಿಸುತ್ತಿತ್ತು. ಪಾತ್ರೆಯಲ್ಲಿರಿಸಿದ್ದ ಹಾಲು ಉಕ್ಕೇರಿ ಬಂದು ಒಲೆಯಲ್ಲಿಯ ಅಗ್ನಿದೇವತೆಯನ್ನು ತೃಪ್ತಿಪಡಿಸುತ್ತಲಿತ್ತು.

ಇದುವರೆಗೆ ಮೂಗಿನ ಮೇಲಿದ್ದ ಅವನ ಕೋಪ ಅದನ್ನು ಕಂಡೊಡನೆ ನೆತ್ತಿಗೇರಿಬಿಟ್ಟಿತು. ಹಾಲಿನ ಪಾತ್ರೆಯನ್ನೆತ್ತಿ ಕೆಳಕ್ಕೆ ಉಕ್ಕರಿಸಿಬಿಟ್ಟು, ಹಿತ್ತಲಿನ ಕಡೆಗೆ ಹೊರಳಿದ.

ಕೋಪದ ರಭಸದಲ್ಲಿ ಆತನು ಪಾರ್ವತಿಗೆ ಎಂತೆಂತಹ ಮಾತನ್ನು ಆಡಿಬಿಡುತ್ತಿದ್ದನೋ ತಿಳಿಯದು ; ಆದರೆ ಹಿತ್ತಲಬಾಗಿಲಲ್ಲಿಯ ದೃಶ್ಯ ಅವನ ಕಣ್ಣುಜೊಂಬೆಗಳಲ್ಲಿ ಮೂಡುತ್ತಲೂ, ಅವನ ನಾಲಗೆಯ ಆವೇಶವೆಲ್ಲ ಎಲ್ಲೋ ಮಾಯವಾಯಿತು. ಕೋಪ ಎಲ್ಲಿ ಅದೃಶ್ಯವಾಯಿತೊ ! ಅವಳನ್ನು ಬೈದುಬಿಡಲು ಪ್ರತ್ಯೇಕವಾಗಿದ್ದ ತುಟಿಗಳೆರಡೂ ಗಂಭೀರವಾಗಿ ಕೂಡಿಕೊಂಡುವು.

ಇನ್ನೂ ಹರಯದವಳಂತಿದ್ದ ಹೆಳ್ಳಿಯ ಹೆಂಗುಸೊಬ್ಬಳು ಬಾಗಿಲಲ್ಲಿ ಕುಳಿತುಕೊಂಡಿದ್ದಳು ; ಪಾರ್ವತಿ ಅವಳ ಹತ್ತಿರವಲ್ಲಿಯೆ ಕುಳಿತು, ಅವಳೊಂದಿಗೆ ಏನೋ ಮಾತನಾಡುತ್ತಿದ್ದಳು.

ಹಠಾತ್ತಾಗಿ ಶಿವಣ್ಣನ ದೃಷ್ಟಿ ಆ ಹೆಳ್ಳಿಯವಳ ಕೆನ್ನೆಗಳ ಕಡೆಗೆ ಹೋಯಿತು.

ಕಂಬನಿಗಳ ಮಳೆಯಲ್ಲಿ ಆ ಎರಡು ಕೆನ್ನೆಗಳೂ ತೊಯ್ದು ಹೋಗುತ್ತಿದ್ದುವು.

ಹೆಣ್ಣಿನ ಕಣ್ಣೀರಿನಲ್ಲಿ ಅಗಾಧವಾದ ಸಾಮರ್ಥ್ಯವಿದೆಯೆಂಬುದೇನೂ ಸುಳ್ಳಲ್ಲ ! ಅವಳು ಯಾರೋ, ಎಲ್ಲಿಯವಳೋ ! ಅವಳಿಗೂ ತನಗೂ ಏನೂ ಸಂಬಂಧವಿಲ್ಲ. ಈ ಮೊದಲು ಒಂದು ಸಲವೂ ಆಕೆ ತನ್ನ ದೃಷ್ಟಿಗೆ ಬಿದ್ದವಳಲ್ಲ. ತನ್ನ ಜೊತೆಗೆ ಒಂದು ಮಾತನ್ನು ಕೂಡ ಆಡಿದವಳಲ್ಲ. ಹೀಗಿದ್ದರೂ ಅವಳ ಕಣ್ಣೀರನ್ನು ಕಂಡೊಡನೆ ತನ್ನ ಕೋಪ ಇಳಿದುಹೋಗಿ ಬಿಟ್ಟಿತಲ್ಲಾ— ಎಂದು ಶಿವಣ್ಣನಿಗೆ ಕೊಂಚ ಅಚ್ಚರಿ ಹುಟ್ಟದಿರಲಿಲ್ಲ.

ಮಾತನೇನೂ ಆಡದೆ ಆತನು ಹೋದಹಾಗೆ ಹಿಂದಿರುಗಿದ. ಅಂತಹ ಸಂದರ್ಭದಲ್ಲಿ ಪಾರ್ವತಿಯನ್ನು ಕೂಗುವುದೂ ಸರಿಯೆನ್ನಿಸಲಿಲ್ಲ ; ತಾನಾಗಿಯೇ ಅವಳು ಎದ್ದುಬರುವ ಲಕ್ಷಣವೂ ತೋರಲಿಲ್ಲ. ಆ ಹೆಳ್ಳಿಯವಳ ಕಣ್ಣೀರ ಹೊಳೆಯಲ್ಲಿ ಅವಳೂ ತೇಲಿಹೋಗುತ್ತಿದ್ದ ಹಾಗಿದ್ದತು.

ಇನ್ನೇನು ತಾನೆ ಮಾಡುವುದು? ಕಾಫಿಯಂತೂ ಬೇಗನೆ ಸಿದ್ಧವಾಗಬೇಕು. ಎಂದರೆ ತನಗೆ ಬೇಗ ಕೆಲಸಕ್ಕೆ ಹೋಗಲು ಸಾಧ್ಯ. ಪಾರ್ವತಿ ಎದ್ದು ಬರುವವರೆಗೆ ಕಾಯುತ್ತ ಕುಳಿತಿರುವುದೆಂದರೆ ಇಂದು ರಜೆ ತೆಗೆದುಕೊಂಡ ಹಾಗೆಯೆ ಸರಿ. ' ಆಗಲಿ, ಇಂದು ಊದುಗೊಳಗೆ ಹಿಡಿಯಬೇಕಾದ ಸಂದರ್ಭ ಹಣೇಲಿ

ಬರೆದಂತಿದೆ!' ಎಂದುಕೊಳ್ಳುತ್ತ ಶಿವಣ್ಣ ಒಲೆಯೆದುರಿಗೆ ಬಂದು ಕುಳಿತುಕೊಂಡ.

ಕಾಫಿಗೆ ಎಸರಿಟ್ಟು ಊದುಗೊಳವೆ ಕೈಗೆತ್ತಿಕೊಂಡ. ಆಗ ತಾನೆ ಹಾಲು ಕುಡಿದಿದ್ದ ಅಗ್ನಿ ಹಾಯಾಗಿ ಮಲಗಿಕೊಂಡಿದ್ದಿತೇನೋ! ಎಷ್ಟು ಊದಿದರೂ ಉರಿಯೇಳಲೇ ಇಲ್ಲ. ನೀರು ಕಾಯುವುದಕ್ಕೆ ಪ್ರತಿಯಾಗಿ ಆತನ ತಲೆ ಮಾತ್ರ ಕಾಯತೊಡಗಿತು. ಕಣ್ಣುಗಳಿಗೆ ಇದ್ದಲಿಯ ಕಿಡಿಗಳ ಪ್ರಸಾದವೂ ದೊರೆಯಿತು.

'ಇದೇನು ಒಲೆಯೋ ಅದರಪ್ಪನ ತಲೆಯೋ' ಎಂದು ಗೊಣಗಿಕೊಳ್ಳುತ್ತ ಶಿವಣ್ಣ ಊದುಗೊಳವೆಯನ್ನು ಬಿಸುಟ ಎದ್ದು ಬಿಟ್ಟ. ಕಣ್ಣುಜ್ಜಿಕೊಳ್ಳುತ್ತ ಕಿಡಿಗಳನ್ನು ಹೊರದೆಗೆಯಲಾರಂಭಿಸಿದ. ಅವನಿಗೆ ತಿಳಿಯದಂತೆಯೆ ಅವನ ನಾಲಗೆ ಗಟ್ಟಿಯಾಗಿ ಕೂಗಿತು.

'ಪಾರೀsssss'

ಈ ಸಲ ಮಾತ್ರ ಗುಂಡು ಹುಸಿಹೋಗಲಿಲ್ಲ; ಪಾರ್ವತಿ ಧಾವಿಸುತ್ತ ಒಳಕ್ಕೆ ಬಂದಳು.

ಕಣ್ಣುಜ್ಜಿಕೊಳ್ಳುತ್ತಿದ್ದ ಹಾಗೆ ಶಿವಣ್ಣ ಅವಳ ಕಡೆ ನೋಡಿದ. ಮುಳೆಯನಂತರದ ಮುಗಿಲಿನ ಹಾಗೆ ಅವಳ ಕಣ್ಣುಗಳು ಆತನಿಗೆ ಕಾಣಿಸಿದುವು. ಆ ಹಳ್ಳಿಯವಳೊಂದಿಗೆ ಈಕೆಯೂ ಕಂಬನಿಗರೆದಿದ್ದಳೇನೋ ತಿಳಿಯದು. ಕೆನ್ನೆಗಳ ಮೇಲೆ ಸೆರಗು ಅಡಿದಂತಿದ್ದರೂ, ಒಂದು ಹನಿ ಮಾತ್ರ ಅದಕ್ಕೆ ಸಿಕ್ಕಿಬೀಳದೆ ಇನ್ನೂ ಹಾಗೆಯೆ ಹೊಳೆಯುತ್ತಿತ್ತು.

ಆಕೆ ಅವನ ಕಡೆ ನೋಡಿದಳು.

ಅವನ ಕಣ್ಣುಗಳೆರಡೂ ಊದಿಕೊಂಡು ಕೆಂಡದಂತಾಗಿದ್ದುವು. ಕಾಫಿಯ ಪಾತ್ರೆಯೆನ್ನು ಒಲೆಯ ಮೇಲಿರಿಸುವಾಗ ಕೈಗೆ ಹತ್ತಿಕೊಂಡಿದ್ದ ಮಸಿ, ಕಣ್ಣುಜ್ಜಿಕೊಳ್ಳುವಾಗ ಮುಖಕ್ಕೆಲ್ಲ ಬಣ್ಣಬಳಿದು ಬಿಟ್ಟಿತ್ತು!

ಬೇರಾವುದಾದರೂ ಸಂದರ್ಭವಾಗಿದ್ದಲ್ಲಿ ಆಕೆ ಕೇಕೆ ಹಾಕಿ ನಕ್ಕು ಬಿಡಬಹುದಾಗಿತ್ತು. ಆದರೆ ಆಗ ಅವಳಿಗೆ ನಗು ಬರಲಿಲ್ಲ. ಅವಳ ಮುಖದಿಂದ ಒಂದು ಮಾತೂ ಹೊರಡಲಿಲ್ಲ.

ಒಲೆಯ ಬಳಿ ಹೋಗಿ ಕುಳಿತುಕೊಂಡಳು. ಅವಳು ಕೈಯಲ್ಲಿ ಊದುಗೊಳವೆಯನ್ನೆತ್ತಿಕೊಳ್ಳುತ್ತಲೂ ಒಲೆ ಉರಿಯತೊಡಗಿತು.

ಮುಖ ತೊಳೆದುಕೊಂಡು ಶಿವಣ್ಣ ತನ್ನ ಕೊಟಡಿಗೆ ಬಂದು ಕುಳಿತುಕೊಂಡ. ಮೂರು ನಿಮಿಷಗಳಲ್ಲಿ ಬಿಸಿಬಿಸಿ ಕಾಫಿಯೂ ಬಂದಿತು. ಶಿವಣ್ಣನ ಹೊಟ್ಟೆಯಲ್ಲಿ ಮಾಯವಾದುದೂ ಆಯಿತು.

ಕೈವಸ್ತ್ರದಿಂದ ತುಟಿಗಳನ್ನೊರಸಿಕೊಳ್ಳುತ್ತ ಶಿವಣ್ಣ ಎದ್ದು ಬಿಟ್ಟ. ಕೋಟಿನ ತೋಳಿಗೆ ಕೈ ಸಿಲುಕಿಸುತ್ತ ಪತ್ನಿಯ ಕಡೆ ಹೊರಳಿ ಹೇಳಿದ:

"ಮಧ್ಯಾಹ್ನ ನನಗೆ ಬಿಡುವು ದೊರೆಯಲಾರದು. ನೀನು ನನಗಾಗಿ ಕಾಯಬೇಡ. ಊಟ ಮುಗಿಸಿಕೊಂಡು ಬಿಡು. ಬಹುಶಃ ಸಾಯಂಕಾಲ ಆರು ಗಂಟೆಗೆ ಬಂದು ಬಿಡ್ತೇನೆ!"

'ಯಾಕೆ? ಊಟಕ್ಕೇನು ಮಾಡ್ತೀರಿ?' ಎಂಬ ಪ್ರಶ್ನೆ ಅವಳ ನಾಲಗೆಯ ತುದಿಯ ಮೇಲೆಯೆ ಬಂದಿದ್ದಿತು.

ಆದರೆ ಹೊರಕ್ಕೆ ಹೊರಡಲಿಲ್ಲ.

ಚಪ್ಪಲಿಗಳಲ್ಲಿ ಕಾಲು ಸೇರಿಸುತ್ತ ಶಿವಣ್ಣ ಅವಸರದಿಂದ ಹೊರಟು ಹೋದ.

ಪಾರ್ವತಿ ನಿಂತ ಹಾಗೆಯೆ ನಿಂತಿದ್ದಳು!

೨

ಆರು ಗಂಟೆಗೆ ಬರುವುದಾಗಿ ಹೇಳಿದ್ದನಾದರೂ ಶಿವಣ್ಣ ಐದು ಗಂಟೆಗೇ ಮನೆಗೆ ಬಂದುಬಿಟ್ಟ.

ಬಂದು ನೋಡಿದರೆ ಅದೇ—ಆ ಬೆಳಗಿನ ದೃಶ್ಯ!

ಆ ಹಳ್ಳಿಯ ತರುಣಿ— ಅವಳ ಕಂಬನಿದುಂಬಿದ ಕಣ್ಣು—ಕಂಪಿಸುವ ಕಂಠದಲ್ಲಿ ಹೊರಡುತ್ತಿರುವ ಮಾತು—ಹತ್ತಿರದಲ್ಲಿಯೆ ಮೌನವಾಗಿ ಕುಳಿತು ಕೇಳುವ ಪಾರ್ವತಿ!— ಹೌದು, ಬೆಳಗಿನ ದೃಶ್ಯದ ಹೊಸ ಆವೃತ್ತಿಯೇ ಅದು! ಸನ್ನಿವೇಶ ಮಾತ್ರ ಬದಲಾಗಿದೆ ಅಷ್ಟೆ. ಬೆಳಗ್ಗೆ ಪಿತ್ತಿಲಜಾಗಿಲಲ್ಲಿ; ಈಗಲಾದರೋ ಮುಂದಿನ ಜಾಗಿಲಿನಲ್ಲೇ ನಡೆದಿದೆ ಆ ದೃಶ್ಯ!

ಅವನು ಪೆಟ್ಟಿಲುಗಳನ್ನೇರಿ ಬರುತ್ತಲೂ ಆ ಹಳ್ಳಿಯವಳು ತಟ್ಟನೆ ಎದ್ದುಬಿಟ್ಟಳು. ಕೆಳಗೆ ಉರುಳಿಹೋಗಿದ್ದ ಸೀರೆಯ ಸೆರಗನ್ನು ತಲೆತುಂಬಾ ಹೊದೆದುಕೊಂಡು, ಬಾಗಿಲಿನಿಂದ ಸರಿದು ಅವನಿಗೆ ದಾರಿ ಮಾಡಿಕೊಟ್ಟಳು. ಅವಳನ್ನು ನೋಡಿಯೂ ನೋಡದವನಂತೆ ಶಿವಣ್ಣ ನೇರವಾಗಿ ತನ್ನ ಕೊಟಡಿಗೆ ನಡೆದ. ಬೆಳಗಿನಿಂದ ಊಟವಿಲ್ಲದೆ ಅವನ ಹೊಟ್ಟೆ ಹೊಡೆದುಕೊಳ್ಳುತ್ತಿತ್ತು. ಮಧ್ಯಾಹ್ನ ಕೊಂಚ ತಿಂಡಿ-ಕಾಫಿ ತೆಗೆದುಕೊಂಡಿದ್ದನಾದರೂ ಹಸಿವಿನ ಪೆಡಂಭೂತ ಅಷ್ಟರಿಂದ ಹೇಗೆ ತೃಪ್ತವಾದೀತು? ಮನೆಗೆ ಬರಬೇಕಾದರೆ ಅತನಿಗೆ ವಿಪರೀತ ಹಸಿವೆಯಾಗಿತ್ತು. ಮನೆಗೆ ಬರುತ್ತಲೂ ಅದು ಇನ್ನೂ ಹೆಚ್ಚಾಯಿತು.

ಕೊಟಡಿಗೆ ಬಂದು ಬಟ್ಟೆ ತೆಗೆದಿರಿಸಿ, ವಿರಾಮಕುರ್ಚಿಯಲ್ಲೊರಗಿಕೊಂಡ. ಒಂದು ಸಿಗರೇಟು ಹೊತ್ತಿಸಿ, ತುಟಿಗಳ ಮಧ್ಯೆ ಅದನ್ನು ಹಿಡಿದಿದ್ದ ಹಾಗೆಯೆ ಕೂಗಿದ:

'ಪಾರ್ವತೀssss'

ಅವನ ಕೂಗಿಗೆ ಮೊದಲೇ ಆಕೆ ಅವನೆದುರಿಗೆ ಪ್ರತ್ಯಕ್ಷವಾಗಿದ್ದಳು.

'ಏನಿದು? ಯಾವಾಗಲೂ ಜಾಗಿಲಸಭೆಯೇ ನಡೆದಿರುತ್ತದಲ್ಲ? ನಿಮ್ಮ ಮಾತು-ಕತೆಯಲ್ಲಿ ನಮ್ಮ ಕತೆಯೇನಾದೀತೆಂಬುದೇ ತಿಳಿಯೋದಿಲ್ಲ ನಿಮಗೆ! ಏನಾದರೂ ಕಾಫೀ-ತಿಂಡಿ?....'

ಗೋಡೆಗೆ ಆತುಕೊಂಡು ಪಾರ್ವತಿ ಮೌನವಾಗಿ ನಿಂತಿದ್ದಳು. ಅವಳ ಎರಡು ಕೈಗಳ ಬೆರಳುಗಳೂ ಸೀರೆಯ ಸೆರಗನ್ನು ಸುಮ್ಮನೆ ತೀಡುತ್ತಿದ್ದುವು. ಅವಳ ತುಟಿಗಳ ಮೂಲೆಗಳು ಮೆಲುಮೆಲನೆ ಚಲನವಲನ ಮಾಡುತ್ತಿದ್ದುವು.

ಅತನ ಪ್ರಶ್ನೆಗೆ ನಿರುತ್ತರ.

" ಕಾಫಿ ಮಾಡಲಿಲ್ಲವೆ?"

ಮತ್ತೆ ಮೌನ!

" ನೀನಲ್ಲಿ ಯಾರೋ ತಿರುಕಿಯನ್ನು ಕಟ್ಟಿಕೊಂಡು ಹಾಳು-ಹರಟೆ ಹೊಡೀತಾ ಇರು; ಅವರ ಕಣ್ಣೀರು ಒರಸುವಲ್ಲಿ ತೊಡಗಿರು. ಇಲ್ಲಿ ನಮಗೆ ತಿಂಡಿ ಸಿಕ್ಕದೆ ಕಣ್ಣೀರು ಹೊರಡುತ್ತಿರಲಿ...." ಶಿವಣ್ಣ ಕೋಪದಿಂದಲೇ ಹೇಳಿದ.

ಆಗ ಮಾತ್ರ ಅವಳ ತುಟಿಗಳು ಬಿಚ್ಚಿದುವು. ಹೇಳಿದಳು:

" ಆರುಗಂಟೆಗೆ ಬರುತೇನಂತ ಹೇಳಿ ಐದಕ್ಕೇ ಬಂದು ಬಿಟ್ಟರೆ ಯಾರೇನು ಮಾಡಬೇಕು ಹೇಳಿ! ನೀವು ಬರಲು ಇನ್ನೂ ಒಂದು ಗಂಟೆ ಅವಕಾಶವಿದೆ ಅಂತ ಮಾತನಾಡುತ್ತ ಕೂತಿದ್ದೆ. ಈಗಲೇ ಮಾಡಿದರೆ ಆರಿಹೋಗುತ್ತದೆ ಅಂತ...."

ಮಾತು ಮುಗಿಸಿ ಆಕೆ ಅಲ್ಲಿ ನಿಲ್ಲಲೇ ಇಲ್ಲ.

ಹದಿನೈದು ನಿಮಿಷಗಳೊಳಗಾಗಿ ಉಪ್ಪಿಟ್ಟು, ಕಾಫಿ ಸಿದ್ಧವಾಗಿ ಶಿವಣ್ಣನೆದುರಿಗೆ ಬಂದಿತು.

ಉಪ್ಪಿಟ್ಟು ಬಾಯಲ್ಲಿಟ್ಟುಕೊಳ್ಳುತ್ತ ಶಿವಣ್ಣ ಪತ್ನಿಯ ಕಡೆಗೆ ಹೊರಳಿದ. ಆಕೆ ಇನ್ನೂ ನಿಂತುಕೊಂಡೇ ಇದ್ದಳು.

' ಕೂತುಕೋ ಪಾರೂ! ' ಎಂದ.

ಅವಳು ಅವನ ಹತ್ತಿರ ಬಂದು ಎದುರಿಗಿದ್ದ ಕುರ್ಚಿಯಲ್ಲಿ ಕುಳಿತುಕೊಂಡಳು.

ತಿಂಡಿ-ಕಾಫಿ ಮುಗಿಸಿ ಮತ್ತೊಂದು ಸಿಗರೇಟು ಹತ್ತಿಸುತ್ತ ಕೇಳಿದ ಶಿವಣ್ಣ :

" ಏನು ಅಷ್ಟೊಂದು ಮಾತು-ಕತೆ ಆ ಹಳ್ಳಿಯವಳ ಜೊತೇಲಿ? ಅವಳು ಯಾರು? ಎಲ್ಲಿಯವಳು? ನಿಮ್ಮೂರಿನವಳೋ ಹೇಗೆ?"

" ಅಲ್ಲ, ವಿಜಾಪುರದ ಕಡೆಯ ಒಂದು ಹಳ್ಳಿಯವಳಂತೆ!"

" ನಿನಗೇನು ಪರಿಚಯ?"

" ಹೆಂಗಸರಿಗೆ ಪರಿಚಯ ಗಿರಿಚಯ ಯಾತಕ್ಕೆ ಬೇಕು? ಅವಳು ಬಂದಳು; ತಾನಾಗಿಯೆ ನನ್ನನ್ನು ಮಾತನಾಡಿಸಿದಳು, ಅಷ್ಟೆ!"

" ಈ ಊರಿಗೆ ಏತಕ್ಕಾಗಿ ಬಂದಿದ್ದಾಳಂತೆ?"

" ಹೊಟ್ಟೆಪೂರೆಯೋದಕ್ಕಾಗಿ."

ಕ್ಷಣಕಾಲ ಮೌನವಾಗಿದ್ದು ಶಿವಣ್ಣ ಪುನಃ ಪ್ರಶ್ನೆಮಾಡಿದ:

" ಒಬ್ಬಳೇ ಬಂದಿದ್ದಾಳೆಯೇ?"

" ಉಹ್ಞಾಂ"

ಮತ್ತೆ ಕೊಂಚಕಾಲ ಮೌನ.

" ಯಾಕೆ? ಗಂಡನಿಲ್ಲವೋ?"

" ಇಲ್ಲವಂತೆ!"

" ವಿಧವೆಯೋ ಏನು ಪಾಪ?"

" ಹೌದು, ಎರಡು ತಿಂಗಳಾಯಿತು, ಅವಳ ಮಂಗಲಸೂತ್ರ ಪರಿದು!"

" ಅಯ್ಯೋ ಪಾಪ! ಏನಾಗಿದ್ದಿತಂತೆ ಅವನಿಗೆ?"

" ಹೊಟ್ಟೆಗೆ ಉಪವಾಸವಾಗಿತ್ತು!"

" ಅಂದರೆ?"

" ಅಂದರೇನು? ಹೊಟ್ಟೆಗೆ ಕೂಳಿರಲಿಲ್ಲ. ಅವರ ಕಡೆಯಲ್ಲೆಲ್ಲಾ ಭಾರಿ ಬರಗಾಲ. ಹೊಲಗಳಲ್ಲಿ ಬೆಳೆಯೇ ಬರುವಂತಿರಲಿಲ್ಲ. ತಿನ್ನಲು ಕಾಳೆಲ್ಲಿ ಬಂದೀತು? ಆತ ಕೆಲಸ ಹುಡುಕುವುದಕ್ಕಾಗಿ ಯಾವುದೋ ಊರಿಗೆ ಹೊರಟುಹೋದ. ಅಲ್ಲೂ ಇದೇ ಸ್ಥಿತಿ. ಸರಿ, ಅಲ್ಲಿಯೇ ಒಂದು ದಿನ ಸತ್ತುಹೋದ. ಯಾರೋ ಇವಳಿಗೆ ಪತ್ರ ಬರೆದು ತಿಳಿಸಿದರು. ಸರಿ, ಇಲ್ಲಿಗೆ ಬಂದಿದ್ದಾಳೆ!"

ಶಿವಣ್ಣ ಕುಳಿತ ಹಾಗೆಯೆ ಕುಳಿತಿದ್ದ. ಸಿಗರೇಟು ತುಟಿಗಳಲ್ಲಿ ಹಾಗೆಯೆ ಉರಿಯುತ್ತಿತ್ತು. ಅವನ ದೃಷ್ಟಿಯೆದುರಿಗೆ ಆ ಹಳ್ಳಿಯವಳ ಬಡಕಲು ಶರೀರ ಅಸ್ಪಷ್ಟವಾಗಿ ಕಟ್ಟಿದಂತಿದ್ದಿತು. ಅನ್ನವಿಲ್ಲದೆ ಕಡ್ಡಿಯಂತಾದ ಶರೀರ, ನೀರು-ನೀರಾದ ಕೈ-ಕಾಲು, ರಕ್ತದ ಅಭಾವದಿಂದ ಬತ್ತಿಹೋದ ಕೆನ್ನೆಗಳು, ಕತ್ತಿಯಂತೆ ಮುಂದೆ ಎದ್ದುಕಾಣುವ ಮೂಗು, ಗುಳಿಬಿದ್ದ ಕಣ್ಣು, ಜೊತೆಗೆ ಒಡೆದುಹೋದ ಸ್ವರ!-ಬರದ ದೇವಿ ಅವಳ ರೂಪದಲ್ಲಿ ಮೂರ್ತಿವೆತ್ತ ಹಾಗೆ ತೋರಿತು ಶಿವಣ್ಣನಿಗೆ.

ಕೆಲಕಾಲ ದಂಪತಿಗಳಿಬ್ಬರೂ ಚಿತ್ರದಲ್ಲಿಯ ಆಕೃತಿಗಳಂತೆ ನಿಶ್ಚಲವಾಗಿ ಕುಳಿತಿದ್ದರು. ಒಬ್ಬರ ಮುಖದಿಂದಲೂ ಮಾತು ಹೊರಡುವಂತಿರಲಿಲ್ಲ.

ಇದ್ದುದಿದ್ದ ಹಾಗೆ ಪಾರ್ವತಿ ತಲೆಯೆತ್ತಿ ಕೇಳಿದಳು:

" ಒಂದು ಮಾತು ಹೇಳಲಾ?"

ಶಿವಣ್ಣ ದೃಷ್ಟಿಯನ್ನೆತ್ತದೆ ಕೇಳಿದ :

" ಏನದು?"

" ನೋಡಿ, ನೀವು ಒಪ್ಪುವಂತಿದ್ದರೆ ಜೆಟ್ಟೀನೆ."

ಅನಂತರ ತಡೆ-ತಡೆಯುತ್ತಲೆ ಹೇಳಿದಳು:

" ಆಕೆಗೆ ಪಾಪ! ಎಲ್ಲೂ ಕೆಲಸ ಸಿಗುತ್ತಿಲ್ಲ. ಈ ಊರಿಗೆ ಬಂದು ಎಂಟುದಿನಗಳಾಯಿತಂತೆ. ಊರಲ್ಲಿಯ ಶ್ರೀಮಂತರ, ಶೆಟ್ಟಿ ಸಾಹುಕಾರರ ಮನೆಗಳನ್ನೆಲ್ಲಾ ಒಂದೂ ಬಿಡದೆ ತಿರುಗಿದಳಂತೆ. ಯಾರೂ ಆಕೆಗೆ ಕೆಲಸವನ್ನು ಕೊಡಲಿಲ್ಲ; ಒಂದು ಕಾಸನ್ನೂ ಸಹಾಯ ಮಾಡಲಿಲ್ಲ. ಅವಳ ಕತೆಯನ್ನೆಲ್ಲ ಕೇಳಿಕೊಂಡು, ಕೆಲವರು ಒಣಮರುಕ ತೋರಿಸಿ ' ಏನು ಮಾಡೋಣಮ್ಮಾ! ನಮಗೂ ಭಾರೀ ತಾಪತ್ರಯ; ಇಲ್ಲವಾದರೆ ನಿನಗೇನಾದರೂ ಸಹಾಯ ಮಾಡುತ್ತಿದ್ದೆವು' ಎಂದರಂತೆ. ಇನ್ನು ಕೆಲವರು ಆವಳ ಕತೆಯನ್ನು ಸಹ ಪೂರ್ತಿಯಾಗಿ ಕೇಳದೆ ಮನೆಯಿಂದ ಓಡಿಸಿಬಿಟ್ಟರಂತೆ!.."

" ಇಷ್ಟು ದಿನ ಹೊಟ್ಟೆಗೇನು ಮಾಡುತ್ತಿದ್ದಳು?"

" ಭಿಕ್ಷೆ ಬೇಡಲಾರದೆ ಒಂದೆರಡು ದಿನ ಉಪವಾಸವಿದ್ದಳು. ಆನಂತರ ಹೊಟ್ಟೆಯ ಸಂಕಟ ತಾಳಲಾರದೆ ಭಿಕ್ಷೆ ಬೇಡಿ ಅದನ್ನು ಹೇಗೋ ಸಮಾಧಾನಗೊಳಿಸಿದಳು. ಈಗ.."

ವಾಕ್ಯವನ್ನು ಪೂರ್ತಿ ಮುಗಿಸದೆ ಪಾರ್ವತಿ ನಿಂತುಬಿಟ್ಟಳು. ಅವಳ ಕೊನೆಯ ಶಬ್ದ— 'ಈಗ?' ಎಂಬುದು ಶಿವಣ್ಣನ ಕಿವಿಗಳಲ್ಲಿ ಮತ್ತೆ ಮತ್ತೆ ಮೊರೆಯತೊಡಗಿತು. ಅವನ ಕಣ್ಣುಗಳೆದುರಿಗೆ ದೊಡ್ಡದೊಂದು ಪ್ರಶ್ನಾರ್ಥಕ ಚಿಹ್ನೆ. ಮೂಡಿದಂತಾಯಿತು.

'ಈಗ?

—ಆ ಬಡವಿ ಏನು ಮಾಡಬೇಕು? ಕೆಲಸಮಾಡಿ ಹೊಟ್ಟೆ ಹೊರೆದುಕೊಳ್ಳುವ ಅಪೇಕ್ಷೆಯೇನೋ ಆಕೆಗಿದೆ. ಆದರೆ ಆಕೆಗೆ ಕೆಲಸಕೊಡಲು ಯಾರೂ ಸಿದ್ಧರಿಲ್ಲ. ಬೀಸುವುದು—ಕುಟ್ಟುವುದು—ಕಸ-ಮುಸುರೆ— ಅಡಿಗೆ-ಕೂಲಿ— ಯಾವುದನ್ನು ಮಾಡಲೂ ಆಕೆ ತಯಾರಾಗಿದ್ದಾಳೆ. ಆದರೆ ಯಾರೂ ಅವಳನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಮನಸ್ಸುಮಾಡುತ್ತಿಲ್ಲ. ನಿರುಪಾಯವಾಗಿ— ಕೇವಲ ಹೊಟ್ಟೆಯ ಹೊರೆನ್ನು ತುಂಬಿಸುವ್ರದಕ್ಕಾಗಿ ಇಂದು ಆಕೆ ಬೀದಿಗೆ ಬರಬೇಕಾಗಿದೆ ಭಿಕಾರಿಯಾಗಿ!....

ಶಿವಣ್ಣನ ಮನಸ್ಸು ಆತನಿಗೆ ಬಿಟ್ಟುಬಿಡದೆ ಪ್ರಶ್ನೆಮಾಡತೊಡಗಿತು: 'ಆಕೆಯನ್ನು ಹೀಗೆಯೆ ಭಿಕಾರಿಯಾಗಲು ಬಿಡುವೆಯಾ? ಊರಿನ ಎಲ್ಲ ಜನರಹಾಗೆ ನೀನೂ ಅವಳನ್ನು ನಿನ್ನ ಮನೆಯಿಂದ ಓಡಿಸುವೆಯಾ? ನಿನ್ನ ನಾಡಿನ ಸ್ತ್ರೀಯೊಬ್ಬಳು ಬರಗಾಲದಿಂದ ಅನಾಥೆಯಾಗಿ ಇಲ್ಲಿಗೆ ಬಂದಿದ್ದಾಳೆ. ನೀನಾದರೂ ಅವಳ ಹೊಟ್ಟೆಗೆ ಹಾಕುವೆಯಾ-? ಇಲ್ಲವೆ ಅವಳನ್ನು ಭಿಕಾರಿಗಳ ತಂಡದಲ್ಲಿ ಸೇರಿಸುವೆಯಾ?' –

ಆ ಪ್ರಶ್ನೆಗೆ ಏನು ಉತ್ತರವೀಯಬೇಕೆಂಬುದು ಆತನಿಗೆ ಹೊಳೆಯಲಿಲ್ಲ.

ಆ ಪ್ರಶ್ನೆಯನ್ನು ಅಲ್ಲಿಯೆ ಬಿಟ್ಟು ಆತನ ಮನಸ್ಸು ಬರಗಾಲದ ಕಾರಣಗಳೇನೆಂಬುದನ್ನು ಶೋಧಿಸಲು ಹೊರಟಿತು. ಸಕಾಲಕ್ಕೆ ಮಳೆಯಾಗಲಿಲ್ಲ. ಬೆಳೆಗೆ ನೀರುಸಿಕ್ಕದೆ ಅದು ಸತ್ತುಹೋಯಿತು. ಅದರೊಂದಿಗೆ ರೈತರೂ ಸತ್ತುಹೋಗಬೇಕಾದ ಸಂದರ್ಭ ಬಂತು. ವೃತ್ತಪತ್ರಿಕೆಗಳಲ್ಲಿ ದಿನವೂ ಪ್ರಕಟವಾಗುತ್ತಿದ್ದ ಬರಗಾಲದ ಭೀಕರತೆಯ ಭಯಂಕರ ವೃತ್ತಾಂತಗಳು ಕ್ಷಣಮಾತ್ರದಲ್ಲಿ ಆತನ ನೆನಪಿನ ದೃಷ್ಟಿಯೆದುರಿಗೆ ಹಾಯ್ದುಹೋದುವು. ತಿನ್ನಲು ಅನ್ನವಿಲ್ಲದೆ, ಕುಡಿಯಲು ನೀರಿಲ್ಲದೆ ಪಟಪಟನೆ ಸತ್ತುಬೀಳುತ್ತಿರುವ ಮಾನವಪ್ರಾಣಿಗಳು; ಮೇವು-ನೀರಿಲ್ಲದೆ ಬಿದ್ದುಕೊಂಡಲ್ಲೇ ಅಸ್ಥಿಪಂಜರವಾಗುತ್ತಿರುವ ದನ-ಕರುಗಳು; ಮನೆಯಲ್ಲಿ ಉಳಿದುವನ್ನೆಲ್ಲ ನಾಲ್ಕು ಕಾಸಿಗೆ ಮಾರಿಕೊಂಡು, ಹೆಂಡಿರು-ಮಕ್ಕಳನ್ನು ಕಟ್ಟಿಕೊಂಡು ಊರಿಂದೂರಿಗೆ ಅಲೆಯುತ್ತಿರುವ ದರಿದ್ರ ಜನ! ಆತನ ಎದೆ ಸಂತಾಪದಿಂದ ಕುದಿಯತೊಡಗಿತು. ಇದನ್ನೆಲ್ಲ ನೋಡಿಯೂ ನೋಡದಂತೆ ನೋಣಜಾಡಿಸುತ್ತ ಕೂತುಕೊಂಡ ಸರಕಾರ! ಮೊದಲೇ ಕೆರೆ-ಕಾಲುವೆಗಳನ್ನು ನಿರ್ಮಿಸಿ ನೀರಾವರಿಯೋಜನೆ ಮಾಡಿದ್ದರೆ, ಇಂತಹ ಭೀಕರ ಪರಿಸ್ಥಿತಿಯುಂಟಾಗುತ್ತಿರಲಿಲ್ಲ! ಆದರೆ ಮಾಡುವವರಾರು?— ಬಡರೈತರ ಗೋಳು ಯಾರಿಗೆ ಬೇಕಿದೆ? ಅವರು ಕೂಳು-ನೀರಿಲ್ಲದೆ ದೇಶಾಂತರ ಹೊರಟರೂ ಶ್ರೀಮಂತರು ಸುಖವಾಗಿ ತಮ್ಮ ವಿಲಾಸದಲ್ಲಿ ಮುಗ್ನರಾಗಿದ್ದಾರೆ; ಹೊಟ್ಟೆಗಿಲ್ಲದೆ ಮನೆಬಾಗಿಲಿಗೆ ಬಂದವರನ್ನು ಬರಿಗೈಲಿ ಸಾಗಹಾಕಿ ತಾವು ಒಳಗೆ ಕುಳಿತು ಮೃಷ್ಟಾನ್ನ ಹೊಡೆಯುತ್ತಾರೆ!—

ಪುನಃ ಅವನ ಅಂತರ್ದೃಷ್ಟಿಯೆದುರಿನಲ್ಲಿ ಆ ಹಳ್ಳಿಯವಳ ಕರುಣಾಜನಕ ಮೂರ್ತಿ ತಲೆದೋರಿತು. 'ಅವಳಂತಹ ಸ್ಥಿತಿ ಅವಳ ವೈರಿಗೂ ಬರಬಾರದು. ಬಂದಿದೆ. ಈಗ?'

ಆ ಪ್ರಶ್ನಾರ್ಥಕ ಚಿಹ್ನೆ ಶಿವಣ್ಣನೆದುರಿಗೆ ಮತ್ತೆ ತಲೆದೋರಿತು.

ಬಾಯಿಯಲ್ಲಿದ್ದ ಸಿಗರೇಟನ್ನು ಬಿಸುಟಿಬಿಟ್ಟು ಶಿವಣ್ಣ ಪತ್ನಿಯ ಕಡೆ ಹೊರಳಿದ; ಅವಳೆದುರಿನಲ್ಲಿಯೂ ಅದೇ ಚಿಹ್ನೆ!

೩

ಮಾರನೆಯ ದಿನ ಸಾಯಂಕಾಲ ಶಿವಣ್ಣ ಮನೆಗೆ ಬಂದಾಗಲೂ ಬಾಗಿಲಿನಲ್ಲಿ ಮುನ್ನಾ ದಿನದ ದೃಶ್ಯವೆ!

ಆತನಿಗೆ ದಾರಿಮಾಡಿಕೊಡಲು ಅವಳು ಎದ್ದುಬಿಟ್ಟಾಗ, ಅವಳ ಕಂಕುಳಲ್ಲಿದ್ದ ಮಗುವಿನ ಕಡೆ ಶಿವಣ್ಣನ ದೃಷ್ಟಿ ಹೋಯಿತು.

'ಮುಳುಗುತ್ತಿರುವವಳಿಗೆ ಭಾರವಾಗಿ ಮಗು ಬೇರೆ ಇದೆಯೆ?' ಎಂದುಕೊಳ್ಳುತ್ತ ಶಿವಣ್ಣ ,ವಿಷಣ್ಣಹೃದಯದಿಂದಲೇ ಒಳಕ್ಕೆ ಹೋದ.

ರಾತ್ರಿಯ ಊಟವಾದ ಬಳಿಕ, ದಂಪತಿಗಳು ಮಲಗಿಕೊಂಡಿದ್ದಾಗಲೂ ಅದೇ ವಿಷಯ ಹೊರಟಿತು:

"ಮಗು ಬೇರೆ ಇದೆಯಲ್ಲ, ಅವಳಿಗೆ? ಅದನ್ನೆಲ್ಲಿ ಇಟ್ಟಿದ್ದಳಂತೆ ಇಷ್ಟು ದಿನ?" ಶಿವಣ್ಣ ಕೇಳಿದ.

"ಅವರ ಊರಿನಿಂದ ಬಂದ ನಾಲ್ಕಾರು ಜನ ಸೇರಿ ಊರ ಹೊರಗಡೆ ಒಂದು ಗುಡಿಸಿಲು ಕಟ್ಟಿಕೊಂಡಿದ್ದಾರಂತೆ. ಅಲ್ಲಿ ಬಿಟ್ಟಿರುತ್ತಿದ್ದಳು."

"ಅಲ್ಲಿ ಆ ಮಗುವನ್ನು ಯಾರು ನೋಡಿಕೊಳ್ಳುತ್ತಿದ್ದರು?"

"ಬಂದು ಹಣ್ಣು— ಹಣ್ಣು ಮುದುಕಿ...."

"ಆ ಪಾಪದ ಮಗುವಿಗೆ ಪಥ್ಯಸ್ಟೆಷ್ಟು?"

"ಇನ್ನೂ ನಾಲ್ಕು ತಿಂಗಳು ತುಂಬಿಲ್ಲ."

ನಾಲ್ಕು ತಿಂಗಳ ಹಸುಮಗುವೊಂದು ಹಾಳು ಗುಡಿಸಿಲಿನಲ್ಲಿ ಬಿದ್ದುಕೊಂಡಿರುವ ವಿಚಾರ ಶಿವಣ್ಣನ ಕರುಳಿನಲ್ಲಿ ಕಳವಳವನ್ನುಂಟುಮಾಡಿತು. ಅದರ ತಾಯಿ ಹೊಟ್ಟೆಗೆ ಸಂಪಾದಿಸಲು ಇಡೀ ದಿನಪೆಲ್ಲಾ ಮನೆಮನೆ ತಿರುಗುತ್ತಿರುವುದು..ಅಲ್ಲಿ ಆ ಮಗು ಹಾಲಿಲ್ಲದೆ ಸಾಯುತ್ತಿರುವುದು— ಮುಂದೆ ಯೋಚಿಸಲು ಕೂಡ ಅವನಿಗೆ ಮನಸ್ಸಾಗಲಿಲ್ಲ.

ಪಾರ್ವತಿ ಮೆಲ್ಲನೆ ಮಾತು ತೆಗೆದಳು:

"ಎಷ್ಟುದಿನ ಅವಳ ಕರ್ಮಕಥೆ ಕೇಳಿಕೊಂಡು ಸುಮ್ಮನಿರೋದು ಅಂದ್ರೆ? ನಮ್ಮ ಕೈಲಾದ ಸಹಾಯ ಅವಳಿಗೆ ಮಾಡಿದರೆ...."

ಶಿವಣ್ಣ ತಲೆದಿಂಬಿನ ಮೇಲೆ ತೋಳುಗಳನ್ನು ಹೊರಳಿಸಿ ಅವಳ ದೃಷ್ಟಿಗೆ ದೃಷ್ಟಿ ಸೇರಿಸಿದ.

"ಪಾಪ! ಎಷ್ಟು ಅಲೆದರೂ ಅವಳಿಗೆ ಎಲ್ಲೂ ಕೆಲಸ ಸಿಕ್ಕುತ್ತಿಲ್ಲ. ಏಕೋ ಏನೋ ತಿಳಿಯದು. ಆ ಬಡವಿಯ ಸಂಕಟ ಯಾರಲ್ಲೂ ಕನಿಕರ ಹುಟ್ಟಿಸಲೊಲ್ಲದು!"

ಅವಳಿಗೆ ಕೆಲಸ ಸಿಕ್ಕದಿರುವುದಕ್ಕೆ ಕಾರಣವೇನೆಂಬುದು ಆತನಿಗೆ ಪಕ್ಕನೆ ಹೊಳೆಯಿತು. ಅವಳಿನ್ನೂ ಹರಯದ ಹೆಂಗುಸು, ಮನೆಯ ಯಜಮಾನರು ಅವಳಿಗೆ ಮನಸೋತರೇನು ಗತಿಯೆಂದು ಯಜಮಾನಿಯರು ಹೆದರುತ್ತಿರಬಹುದು. ತಿಳಿದು ತಿಳಿದೂ ಪಾಪವನ್ನು ಮನೆಯಲ್ಲಿ ಸಾಕುವ ಹುಚ್ಚುತನ ಕೂಡದೆಂದೇ ಅವರ ಭಾವನೆಯಾಗಿರಬೇಕು.

ಅಂತಹ ಭಾವನೆ ಪಾರ್ವತಿಯಲ್ಲಿಲ್ಲವಲ್ಲಾ-ಎಂದು ಯೋಚಿಸಿದಾಗ ಆತನಿಗೆ ಕೊಂಚ ಸಮಾಧಾನವಾಯಿತು. ಅದರೊಂದಿಗೆ ತನ್ನ ಚಾರಿತ್ರ್ಯದಲ್ಲಿ ತನ್ನ ಪತ್ನಿಗಿರುವ ಅಚಲ ವಿಶ್ವಾಸವನ್ನು ಕಂಡು ಕೊಂಚ ಅಭಿಮಾನವೂ ಎನಿಸಿತು.

ಪಾರ್ವತಿ ಹೇಳುತ್ತಿದ್ದಳು:

"ಮನೆಗೆಲಸಗಳನ್ನೆಲ್ಲಾ ನಾನೊಬ್ಬಳೇ ಮಾಡಬಲ್ಲೆ; ಆದರೆ ಕೇವಲ ಆ ಬಡವಿಗೆ ಸಹಾಯ ಮಾಡುವುದಕ್ಕಾಗಿಯೆಂದು ಆಕೆಯನ್ನು ಏಕೆ ಕೆಲಸಕ್ಕೆ ಕರೆದುಕೊಳ್ಳಬಾರದು? ಕಸ-ಮುಸುರೆ, ಬಟ್ಟೆ ತೊಳೆಯುವುದು ಇತ್ಯಾದಿ ಮನೆಗೆಲಸಗಳೆಲ್ಲವನ್ನೂ ನೋಡಿಕೊಳ್ಳುತ್ತಾಳೆ. ಅವಳಿಗೆ ನಾವು ಸಂಬಳವನ್ನೂ ಕೊಡಬೇಕಾಗಿಲ್ಲ. ಎರಡು ಹೊತ್ತು ಊಟಕ್ಕೆ ಹಾಕಿದರೆ ಸಾಕು; ಬೆಳಗಿನಿಂದ ಸಾಯಂಕಾಲದ ವರೆಗೂ ದುಡಿಯುವುದಾಗಿ, ಆಕೆ ಹೇಳುತ್ತಾಳೆ...."

"ಅದೇನೋ ಸರಿ! ಅವಳು ದುಡಿಯಲು ಸಿದ್ಧಳಾಗಿಯೆ ಇದ್ದಾಳೆ. ಆದರೆ—"

ಶಿವಣ್ಣನೆದುರಿಗೆ ತನ್ನ ಸ್ವಂತದ ಆರ್ಥಿಕ ಪರಿಸ್ಥಿತಿ ಭೂತದಂತೆ ಬಂದು ನಿಂತಿತು. ಬೆಳಗಿನಿಂದ ಸಂಜೆಯವರೆಗೆ ಕೆಲಸ ಮಾಡಿದರೆ, ತಿಂಗಳಿಗೆ ದೊರೆಯುವುದು ಬರೀ ಇಪ್ಪತ್ತೈದು ರೂಪಾಯಿ! ಈ ಇಪ್ಪತ್ತೈದು ರೂಪಾಯಿಗಳಲ್ಲೆ ಮನೆಬಾಡಿಗೆ-ಊಟ-ತಿಂಡಿ ಬಟ್ಟೆ-ಬರೆ ಎಲ್ಲವೂ ಆಗಬೇಕು. ಆದರಲ್ಲೂ ಕಾಳು-ಕಡಿ ವಿಪರೀತ ತುಟ್ಟಿಯಾಗಿರುವ ಈ ಕಾಲದಲ್ಲಿ, ಸಂಸಾರವನ್ನು ಸುಲಲಿತವಾಗಿ ಸಾಗಿಸಬೇಕಾದರೆ ಕಣ್ಣೀರು ಕೆನ್ನೆಗಿಳಿಯುವ ಸ್ಥಿತಿ! ಹೇಗೋ ಎರಡು ಹೊಟ್ಟೆಗಳು ತುಂಬುತ್ತಿವೆ. ತಮ್ಮಿಬ್ಬರ ಸಂಸಾರ ಇದ್ದುದರಲ್ಲಿಯೆ ಸುಖಮಯವಾಗಿ ಸಾಗುತ್ತಿದೆ. ಆದರಲ್ಲಿ ಮೂರನೆಯವಳೊಬ್ಬಳು ಬಂದು ಸೇರಿದರೆ....?

ಆಕೆಗೆ ಸಂಬಳವೆಂಬ ಹೆಸರಿನಲ್ಲಿ ಹಣ ಕೊಡಬೇಕಾಗಿಲ್ಲ. ಅದೇನೋ ನಿಜ! ಆದರೆ ಊಟಕ್ಕೆ ಪೆಚ್ಚವಂತೂ ಬಂದೇ ಬರುತ್ತದಲ್ಲ. ತೀರ ಕಡಿಮೆಯೆಂದರೂ ಆರೇಳು ರೂಪಾಯಿಗಳಾದರೂ ಆಗುತ್ತದೆ! ಆದರ ಜೊತೆಗೆ—

ಅಂದು ಸಾಯಂಕಾಲ ಅವಳ ಕಂಕುಳಲ್ಲಿ ಕಂಡ ಆ ಮಗುವಿನ ಮೂರ್ತಿ ಶಿವಣ್ಣನ ದೃಷ್ಟಿಯೆದುರಿಗೆ ತಲೆದೋರಿತು. ಅವಳಿಗೆ ಹೊಟ್ಟೆಗೆ ಹಾಕಿ ಆ ಮಗುವನ್ನು ಹಾಗೆಯೆ ಬಿಡಲಾಗುತ್ತದೆಯೆ? ಅದಕ್ಕೆ ಹಾಲು ಬೇಕು; ಆ ಹಾಲಿಗೆ ಹಣ ಬೇಕು. ಅವಳಿಗೆ ಸಂಬಳ ಕೊಡದಿದ್ದರೆ ಹಣವೆಲ್ಲಿ ಬಂದೀತು? ಹಾಲಿಲ್ಲದೆ ಹೋದರೆ ಮಗು ಹೇಗೆ ಉಳಿದೀತು?

ತನ್ನ ಆರ್ಥಿಕ ದುಃಸ್ಥಿತಿಯ ಚಿತ್ರ ಕಣ್ಣಿನೆದುರು ಕಟ್ಟುತ್ತಲೆ ಆತನಿಗೆ ಸಹಿಸಲಸದಳವಾದ ವೇದನೆಯುಂಟಾಯಿತು. ನೀರಿಲ್ಲದೆ ಬತ್ತಿಹೋಗಿರುವ ನದಿಯೂ, ಜೇಬಿನಲ್ಲಿ ಕಾಸಿಲ್ಲದವನ ಸಹಾನುಭೂತಿಯೂ ಒಂದೇ—ಎಂದು ಅವನಿಗೆನ್ನಿಸಿತು. ಅದರೊಂದಿಗೆ ಈ ಬಗೆಯ ದುಃಸ್ಥಿತಿಯುಂಟಾಗಲು ಕಾರಣವಾದ ಸಮಾಜದ ವಿಷಮ ಆರ್ಥಿಕರಚನೆಯ ಬಗ್ಗೆ ಅವನ ಎದೆಯಲ್ಲಿ ಜ್ವಾಲಾಮುಖಿ ಉರಿದೆದ್ದಿತು. ಆದರೆ ಈಗ ಆ ಉರಿಯ ಉಪಯೋಗವೇನೂ ಇರಲಿಲ್ಲ. ಸದ್ಯ ತನ್ನೆದುರು ಬಂದು ನಿಂತಿರುವ ಸಮಸ್ಯೆಯನ್ನಾತನು ಪರಿಹರಿಸಲೇ ಬೇಕಾಗಿದ್ದಿತು.

ಪಾರ್ವತಿ ಹೇಳುತ್ತಿದ್ದಳು:

"ನಮ್ಮ ಸ್ಥಿತಿ ಹೇಗಿದೆಯೆಂಬುದು ನನಗೂ ಗೊತ್ತು. ಅದನ್ನು ಮರೆತುಬಿಟ್ಟು ನಾನು ಬೇರೆಯವರಿಗೆ ಸಹಾಯ ಮಾಡಲು ಹೋಗುತ್ತೇನೆಂದು ತಿಳಿಯಬೇಡಿ; ಆದರೆ ಮನಸ್ಸು ತಡೆಯುತ್ತಿಲ್ಲ. ನಮ್ಮಲ್ಲಿ ನಾಲ್ಕು ರೊಟ್ಟಿ ಇದ್ದರೆ ಅವಳೂ ಒಂದು ತಿನ್ನಲಿ. ಪಾಪ! ಅವಳ ಸಂಕಟ ನೋಡಿದರೆ ನನಗೆ ಕುತ್ತಿಗೆಯಲ್ಲಿ ಅನ್ನ ಇಳಿಯೋದಿಲ್ಲ. ಅದಕ್ಕಾಗಿ...."

"ನಮ್ಮಲ್ಲಿ ನಾಲ್ಕು ರೊಟ್ಟಿ ಇದ್ದರೆ ಅವಳು ಒಂದು ತಿನ್ನಲಿ!"

ಅವಳ ಈ ನುಡಿ ಅವನ ಎದೆಯಲ್ಲಿ ಮಿಂಚಿನಂತೆ ಪ್ರವೇಶಿಸಿತು. ಹಠಾತ್ತಾಗಿ, ಅವನಿಗೆ ಟಾಲ್‌ಸ್ಟಾಯಿಯರ ಅಮೃತವಾಣಿಯೊಂದರ ಸ್ಮರಣೆಯಾಯಿತು.

"ಬಡವರ ದುಃಖಗಳನ್ನು ಬಡವರೇ ತಿಳಿಯಬಲ್ಲರು. ನಿಮ್ಮಲ್ಲಿ ನಾಲ್ಕು ಕೋಟು ಇದ್ದರೆ ಅವರಿಗೊಂದು ಕೊಡಿ. ನಾಲ್ಕು ರೊಟ್ಟಿ ಇದ್ದರೆ ಅವರಿಗೊಂದು ಕೊಡಿ. ಹೊದೆಯಲು ಕಂಬಳಿಯಿಲ್ಲದೆ ಬಡವರು ಚಳಿಯಲ್ಲಿ ಸಾಯುತ್ತಿದ್ದಾಗ, ನಿಮ್ಮಲ್ಲಿ ನಾಲ್ಕು ಕಂಬಳಿ ಇದ್ದರೆ ಅವರಿಗೊಂದು ಕೊಡಿ!"

ಶಿವಣ್ಣ ಹೆಚ್ಚು ಮಾತನಾಡಲಿಲ್ಲ.

"ಆಗಲಿ ಪಾರೂ, ನಾಳೆಯಿಂದ ಅವಳಿಗೆ ಬರಹೇಳು!" ಎಂದ.

೪

ನಿಂಗಮ್ಮ ಅವರ ಮನೆಗೆ ಕೆಲಸಕ್ಕೆ ಸೇರಿ ಒಂದು ತಿಂಗಳು ಕಳೆದು ಹೋಗಿದ್ದಿತು. ಅಷ್ಟರಲ್ಲಿಯೆ ಆಕೆ ದಂಪತಿಗಳಿಬ್ಬರಿಗೂ ಅಚ್ಚುಮೆಚ್ಚಿನವಳಾಗಿ ಬಿಟ್ಟಿದ್ದಳು. ಅವಳು ಕೆಲಸದವಳೆಂದು ಅವರು ಭಾವಿಸಿಕೊಂಡಿರಲೇ ಇಲ್ಲ. ತಮ್ಮ ಸಂಸಾರದಲ್ಲಿ ಅವಳೂ ಒಬ್ಬ ಪಾಲುಗಾರ್ತಿಯೆಂದೇ ಅವರು ತಿಳಿದಿದ್ದರು.

ಬೆಳಗಿನಲ್ಲಿ ಅವರ ಮನೆಗೆ ಬಂದುಬಿಟ್ಟರೆ ನಿಂಗಮ್ಮ ಎಲ್ಲ ಕೆಲಸಗಳನ್ನೂ ತೀರಿಸಿಕೊಂಡು, ಸಾಯಂಕಾಲ ಊಟಮಾಡಿ ತನ್ನ ಗುಡಿಸಿಲಿಗೆ ಹೋಗುತ್ತಿದ್ದಳು. ಇದುವರೆಗೆ ಮನೆಯಲ್ಲಿ ಒಬ್ಬಳೇ ಆಗಿ ಬೇಜಾರಪಟ್ಟುಕೊಳ್ಳುತ್ತಿದ್ದ ಪಾರ್ವತಿಗೆ ಅವಳ ಜೊತೆ ಸಿಕ್ಕಬಳಿಕ, ಪ್ರೀತಿಯ ತಂಗಿಯೊಬ್ಬಳು ಬಂದಷ್ಟು ಸಂತೋಷವಾಯಿತು. ಮಾತು-ಕತೆ ನಡೆದಿರುವಾಗಲೇ ಮನೆ-ಗೆಲಸವೆಲ್ಲ ಮುಗಿದುಹೋಗುತ್ತಿತ್ತು. ಶಿವಣ್ಣನಿಗೆ ಸಮಯಕ್ಕೆ ಸರಿಯಾಗಿ ಸ್ನಾನಕ್ಕೆ ಬಿಸಿಬಿಸಿ ನೀರು, ಆದಾಡೊಡನೆಯೆ ಕಂಡಿ-ಕಾಫಿ, ಮನೆಗೆ ಬರುತ್ತಲೆ ಬಿಸಿ-ಬಿಸಿಊಟ ಎಲ್ಲವೂ ನಿಯಮಿತ ವೇಳೆಗೆ ದೊರೆಯತೊಡಗಿತು. ಪಾರ್ವತಿಯ ಸೋಮಾರಿತನ-ಕ್ಕಾಗಿ ಶಿವಣ್ಣ ಆಗಾಗ ರೇಗುವುದು ತಪ್ಪಿಹೋಯಿತು. ತರುಣ-ದಂಪತಿಗಳ ಜೀವನದಲ್ಲಿ ಒಂದು ನೆಮ್ಮದಿಯುಂಟಾಯಿತು.

ಆದರೆ ಈ ನೆಮ್ಮದಿ ಬಹುಕಾಲ ಉಳಿಯುವಂತಿರಲಿಲ್ಲ ವೇನೋ! ಮಧ್ಯೆ ಮಧ್ಯೆ ತೊಂದರೆ, ತಾಪತ್ರಯಗಳೂ ಇಣುಕಿ ಹಾಕಲಾರಂಭಿಸಿದುವು.

ಇಪ್ಪತ್ತುವರ್ಷ ವಯಸ್ಸಿನ ತರುಣ ಸ್ತ್ರೀಯೊಬ್ಬಳು ಯಾವಾ-ಗಲೂ ಅವರ ಮನೆಯಲ್ಲಿರುವುದನ್ನು ಆ ಬೀದಿಯ ಸಾಧ್ವಿಯ ರನೇಕರಿಗೆ ನೋಡಲಾಗಲಿಲ್ಲ. ಅವರ ಹರಟೆಗೆ ಬೇರೆ ವಿಷಯಗಳ ಕೊರತೆಯಾದಾಗಲೆಲ್ಲ, ಶಿವಣ್ಣನ ಈ ನೂತನ ಕೆಲಸಗಿತ್ತಿಯ ವಿಷಯವೇ ಚರ್ಚಿಸಲ್ಪಡತೊಡಗಿತು. ವಿವಾಹಿತ ಪುರುಷನೊಬ್ಬ ಈ ರೀತಿ ಪ್ರತ್ಯಕ್ಷವಾಗಿಯೆ 'ಅನಾಚಾರ' ನಡೆಯಿಸುವುದನ್ನು, ನೋಡಿಯೂ ನೋಡದವರಂತೆ ಸುಮ್ಮನಿರಲು ಸಮಾಜದ ಆ ಆಧಾರಸ್ತಂಭಗಳೆಗಾಗಲಿಲ್ಲ. ಸರಿ, ಬೀದಿಯಲ್ಲೆಲ್ಲ ಹುಚ್ಚು ಬೊಬ್ಬೆಗಾರಂಭವಾಯಿತು. ಅವರ ಮನೆಯ ಅಕ್ಕಪಕ್ಕದಲ್ಲಿಯ ಸ್ತ್ರೀಯರಂತೂ ಪಾರ್ವತಿಯ ಎದುರಿನಲ್ಲೇ ಪಿಸುಮಾತುಗಳಿ-ಗಾರಂಭಿಸಿದರು. ನಾಲ್ಕು ಮಕ್ಕಳನ್ನು ಪೆತ್ತು ಅನುಭವಶಾಲಿ-ಗಳಾಗಿದ್ದ ಪತಿವ್ರತೆಯರಲ್ಲಿ ಕೆಲವರು, ಅವಳನ್ನು ಗುಟ್ಟಾಗಿ ಕರೆದು ಹಿತವಾದವನ್ನು ಹೇಳಿದರು.

"ತಂಗೀ, ನಿನಗೆ ತಿಳಿಯದವಮ್ಮಾ! ಎಲ್ಲಾದರೂ ಉಂಟೇ! ಗಂಡಸರನ್ನು ಎಂದಿಗೂ ನಂಬಬಾರದು ಕಣೇ ತಾಯಿ! ಆದರಲ್ಲೂ ಮನೇಲಿ ತರುಣ ಸ್ತ್ರೀಯೊಬ್ಬಳನ್ನು— ಅದೂ ಗಂಡ-ನಿಂಡ ಯಾರೂ ಗತಿಯಿಲ್ಲದವಳನ್ನು ಎಂದಿಗೂ ಇಟ್ಟುಕೊಳ್ಳಬಾರದು! ಹೆಣ್ಣು ಹೆಣ್ಣೇ! ಗಂಡು ಗಂಡೇ! ತಿಳಿದು ತಿಳಿದೂ ನೀನು ನಿನ್ನ ಮನೇಲಿ ಭೂತ ಹೊಗಿಸಿಕೊಳ್ಳಬೇಕೇ ಅಮ್ಮಾ?— ಹೊರಗಿನ ದೆವ್ವ ಬಂದು ಮನೆಯ ದೆವ್ವನ್ನ ಓಡಿಸಿತಂತೆ! ಹಾಗಾದೀತು ನಿನ್ನ ಹಾಡು! ಈಗಲೇ ಎಚ್ಚರಾಗಿರು, ತಿಳೀತೇ?"

'ತಿಳಿಯಿತು,' ಎಂದು ತಲೆ ಅಲುಗಾಡಿಸಿ ಪಾರ್ವತಿ ಮೌನ-ವಾಗಿ ಮನೆಗೆ ಬರುತ್ತಿದ್ದಳು. ಆದರೆ ಅವರು ಈ ರೀತಿ ಏತಕ್ಕಾಗಿ ಕಡುತ್ತಿರುವರೆಂಬುದೇ ಅವಳಿಗೆ ತಿಳಿಯಲಿಲ್ಲ. ಅವರ ಮಾತು ಕೇಳಿದಾಗಲೆಲ್ಲ ಅವಳ ತಲೆ ಕುದಿಯುತ್ತಿತ್ತು. ಪತಿಯ ಚಾರಿತ್ರ್ಯದ ಬಗ್ಗೆ ಅವಳಲ್ಲಿ ಕೊಂಚವೂ ಸಂದೇಹವಿರಲಿಲ್ಲ. ಇಂತಹ ನೂರಾರು ಹೆಂಗುಸರು ಸಾವಿರಾರು ಮಾತು ಊದಿ-ದರೂ ಆಕೆ ಅವನ ಬಗ್ಗೆ ಸಂಶಯಪಟ್ಟುಕೊಳ್ಳುವುದು ಸಾಧ್ಯ-ವಿರಲಿಲ್ಲ. ಆದರೆ ಜನರ ಮುಖ ಕಟ್ಟುವುದು ಹೇಗೆಂಬುದೇ ಅವಳಿಗೆ ಸಮಸ್ಯೆಯಾಗಿತ್ತು. ಇದೇ ರೀತಿ ದಿನವೂ ಬೊಬ್ಬೆ-ಗಾರಂಭವಾದಲ್ಲಿ, ತಾವು ಈ ಮನೆಯಲ್ಲಿ—ಅದೇಕೆ—ಈ ಬೀದಿ-ಯಲ್ಲಿರುವುದೂ ಸಹ ಕಷ್ಟವಾಗುತ್ತದೆ; ಮುಂದೆ?—

ನಿಂಗಮ್ಮನ ಕಿವಿಗೂ ಈ ಸುಳ್ಳು ಆರೋಪ ಬೀಳದಿರಲಿಲ್ಲ. ತಾನು ಅಪರಾಧಿಯಾಗಿರದಿದ್ದರೂ ಈ ನಿರುದ್ಯೋಗಿ ಹೆಂಗುಸರು ತನ್ನನ್ನು ಮಹಾಪರಾಧಿನಿಯಾಗಿ ತಿಳಿದು ಅಪಪ್ರಚಾರ ನಡೆಸಿದು-ದಕ್ಕಾಗಿ, ಒಳೆ ಮನಸ್ಸಿನಲ್ಲೇ ದುಃಖಿಸುತ್ತಿದ್ದಳು. ಹಳ್ಳಿಯಲ್ಲಿ ಈ ಬಗೆಯ ಕುತ್ಸಿತ ಆರೋಪಗಳನ್ನಾಕೆ ಎಂದೂ ಕೇಳಿರಲಿಲ್ಲ. ಪಟ್ಟಣದಲ್ಲಿಯ ಸ್ತ್ರೀಯರಲ್ಲಿ ಇಂತಹ ನೀಚ ಮನೋವೃತ್ತಿ-ಯನ್ನು ನೋಡಿದಾಗ ಅವಳಿಗೆ ಆಶ್ಚರ್ಯವೂ ಆಯಿತು; ಜುಗುಪ್ಸೆಯೂ ಆಯಿತು.

ಅವರ ಕುತ್ಸಿತ ನುಡಿಗಳಿಗೆ ಭಯಪಟ್ಟು ಶಿವಣ್ಣನ ಮನೆಯನ್ನು ಬಿಟ್ಟು ಹೋಗುವಂತಹ ಅಳ್ಕೆದೆಯೂ ಅವಳದಾಗಿರಲಿಲ್ಲ. "ಜನ ಬೇಕಾದ್ದನ್ನು ಆಡಿಕೊಳ್ಳಲಿ, ನಾವು ಡೆನ್ನಾಗಿದ್ದರಾಯಿತು. ಆಡಿ-ಕೊಳ್ಳುವವರಿಗೇನು? ನಮ್ಮ ಸಂಕಟ ಅವರೇನು ಬಲ್ಲರು? ಇಂದು ನಾನೀ ಮನೆಯಿಂದ ಹೊರಟುಬಿಟ್ಟರೆ, ಪತ್ತಿರ ಕರೆದು ಒಂದು ಜೂರು ರೊಟ್ಟಿ ಕೊಡುವವರಾರೂ ಇಲ್ಲ. ಈ ಊರಿನಲ್ಲಿ ಶಿವಣ್ಣನವರು ನನ್ನ ಭಾಗದ ದೇವರಂತಿದ್ದಾರೆ. ಅಂಥವರಿಗೆ ಈ ಜನ ಈ ರೀತಿ ಆಡಿಕೊಳ್ಳುವುದು! ಅನೆಯೊಂದಕ್ಕೆ ನಾಯಿ-ಗಳು ಬಗುಳಿದ ಹಾಗೆಯೇ ಈ ಜನರ ರೀತಿ!.." ಎಂದು ಮನಸ್ಸಿನಲ್ಲಿಯೆ ಹೇಳಿಕೊಂಡು, ಉಕ್ಕಿ ಬರುವ ವ್ಯಥೆಯನ್ನು ಕೊಂಚ ಕಡಿಮೆಮಾಡಿಕೊಳ್ಳುತ್ತಿದ್ದಳು.

ಶಿವಣ್ಣನಿಗೆ ಮಾತ್ರ ಈ ಸಮಾಚಾರವೇನೂ ತಿಳಿಯದು. ಆತ-ನೆದುರಿನಲ್ಲಿ ಈ ರೀತಿ ಮಾತನಾಡುವ ಸಾಹಸ ಯಾವ ಸ್ತ್ರೀಗೂ ಇರಲಿಲ್ಲ. ಪಾರ್ವತಿಯೂ ಅವನೆದುರಿಗೆ ಇದಾವುದನ್ನೂ ಹೇಳ-ಲಪೇಕ್ಷಿಸಲಿಲ್ಲ. ಅವರ ಕುತ್ಸಿತ ನುಡಿಗಳಿಂದ ತಮಗೆ ಗಾಯ-ವಾದುದೇ ಸಾಕು; ಇನ್ನು ಅವನಿಗೂ ಏಕೆ ವ್ಯರ್ಥವಾಗಿ ನೋವ್ತುಂಟುಮಾಡಬೇಕು?' ಎಂದುಕೊಂಡು ಅವಳು ಮೌನ-ವಾಗಿದ್ದಳು.

ಎರಡು ತಿಂಗಳಿಂದ ಚಾರದಿದ್ದ ಮಳೆ ಒಂದು ದಿನ ಅಕಸ್ಮಾ-ತ್ತಾಗಿ ಬಂದುಬಿಟ್ಟಿತು: ಎರಡು ಗಂಟೆಗಳ ಕಾಲ ಒಂದೇಸಮನೆ 'ಧೋ—ಧೋ' ಎಂಬ ಸದ್ದೇ ಸದ್ದು! ಶಿವಣ್ಣ ಇನ್ನೂ ಮನೆಗೆ ಬಂದಿರಲಿಲ್ಲ. ನಿಂಗಮ್ಮ ಇನ್ನೂ ತನ್ನ ಗುಡಿಸಿಲಿಗೆ ಹೋಗಿರಲಿಲ್ಲ. ಮಳೆಯ ಅಬ್ಬರ ಹೆಚ್ಚಿದಂತೆಲ್ಲ ಅವಳ ಎದೆಯ ಹೊಡೆತವೂ ಹೆಚ್ಚತೊಡಗಿತು. ಮುರುಕು ಗುಡಿಸಿಲಿನಲ್ಲಿದ್ದ ತನ್ನ ಪುಟ್ಟ ಮಗುವನ್ನು ನೆನೆದುಕೊಂಡಾಗ, ಅವಳ ಕಣ್ಣೀರು ಧಾರೆಯಾಗಿ

ಹರಿಯತೊಡಗಿತು. ಪಾರ್ವತಿ ಎಷ್ಟು ಬಗೆಯಾಗಿ ಸಮಾಧಾನ ಹೇಳಿದರೂ ಆ ಮಾತೃಹೃದಯದ ದುಃಖ ಕಡಿಮೆಯಾಗಲಿಲ್ಲ :

ಮಳೆಯ ಜೋರು ಹೆಚ್ಚುತ್ತಲೂ ಪಾರ್ವತಿಗೂ ಭಯ ಹುಟ್ಟಿಕೊಂಡಿತು. ಇಂತಹ ಭಾರಿ ಮಳೆಗೆ ಆ ಪುಟ್ಟ ಗುಡಿಸಿಲು ಎಲ್ಲಿ ತಡೆದೀತು? ಈಗಾಗಲೇ ಕಿತ್ತುಹೋಗಿಬಿಟ್ಟಿರಬಹುದು— ಎಂದೂ ಅವಳಿಗೆನ್ನಿಸದಿರಲಿಲ್ಲ.

ಮಳೆ ನಿಲ್ಲುವ ಲಕ್ಷಣಗಳೇನೂ ಕಾಣಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಇನ್ನು ಜೋರಾಯಿತು. ನಿಂಗಮ್ಮ ನಿಜಕ್ಕೂ ಹೆದರಿದಳು; ಪಾರ್ವತಿ ತಡೆದರೂ ಗಮನಿಸಲಿಲ್ಲ. ಒಂದೇಟಿಗೇ ಮನೆಯಿಂದ ಧಾವಿಸಿದಳು. 'ಗುಡಿಸಿಲು ಹಾರಿಹೋಗಿದ್ದರೆ—? ನೀರಿನ ಪ್ರವಾಹಕ್ಕೆ ಸಿಕ್ಕಿ ಕೂಸು ಕೊಚ್ಚಿಹೋಗಿದ್ದರೆ—?' ಮುಂದೆ ಯೋಚನೆ ಮಾಡುವುದಕ್ಕೇ ಅವಳಿಗಾಗಲಿಲ್ಲ. ಮಳೆಯಲ್ಲಿ ತೋಯಿಸಿಕೊಳ್ಳುತ್ತ ಉಗಿಬಂಡಿಯಂತೆ ತನ್ನ ಗುಡಿಸಿಲಿನ ಕಡೆ ಧಾವಿಸಿದಳು.

ಒಂದು ತಾಸಿನ ತರುವಾಯ ಮಳೆ ನಿಂತುಹೋಯಿತು.

ಶಿವಣ್ಣ ಮನೆಗೆ ಬಂದು ನೋಡಿದರೆ, ನಿಂಗಮ್ಮನೂ ಅವಳ ಆ ಪುಟ್ಟ ಮಗುವೂ ಮೊಗಸಾಲೆಯಲ್ಲಿ ಬೀಡಾರ ಹೂಡಿದಾರೆ! ಆತನಿಗೆ ಕೊಂಚ ದಿಗಿಲಾಗದಿರಲಿಲ್ಲ.

'ಏನು ಬಂದೆ ನಿಂಗಮ್ಮಾ, ಈ ಹೊತ್ತಿನಲ್ಲಿ?' ಎಂದ.

ಅವಳು ಉತ್ತರವೀಯುವುದರೊಳಗಾಗಿಯೆ ಪಾರ್ವತಿ ಹೇಳಿದಳು.

"ಮಳೆಗೆ ಸಿಕ್ಕಿ ಅವರ ಗುಡಿಸಿಲೆಲ್ಲ ಬಿದ್ದುಹೋಯ್ತು. ಮಗು ನೀರಿನಲ್ಲಿ ನೆನೆದುಹೋಗಿತ್ತು. ನಿಂಗಮ್ಮ ಬೇಗನೆ ಹೋದಳೆಂದು ಕೂಸು ಉಳಿದುಕೊಂಡಿತು. ಇಲ್ಲವಾದರೆ ಅಲ್ಲಿಯೆ.."

"ಸರಿ ಸರಿ, ಸದ್ಯ ಮಗುವಿಗೇನೂ ಅಪಾಯವಿಲ್ಲ ತಾನೆ?"

"ಕೊಂಚ ಜ್ವರ ಬಂದಿದೆ!"

ಶಿವಣ್ಣ ಮಗುವಿನ ಬಳಿ ಹೋಗಿ ಅದರ ಎದೆಗೆ ಕೈಯಿರಿಸಿ ನೋಡಿದ.

ಜ್ವರ 'ಕೊಂಚ' ಮಾತ್ರವಲ್ಲ: ಜೋರಾಗಿಯೆ ಏರಿ ಬಂದಿತ್ತು. ಐದು ತಿಂಗಳುಗಳ ಎಳಮಗು ಅಂತಹ ಭಾರಿ ಮಳೆಗೆ ಸಿಕ್ಕಿದರೆ ಜ್ವರ ಬಾರದಿದ್ದೀತೇ—?

ಶಿವಣ್ಣನೆದುರಿಗೆ ಹೊಸದೊಂದು ಪ್ರಶ್ನೆ ತಲೆದೋರಿತು. ಈಗಲೇ ಆ ಮಗುವಿಗೆ ಔಷಧಿ ಕೊಡಿಸಬೇಕೆಂದರೆ ಹತ್ತಿರ ಹಣವಿಲ್ಲ. ಡಾಕ್ಟರನ್ನು ಕರೆದುಕೊಂಡು ಬಂದರೆ ಅವನ ಭೆಟ್ಟಿಗಾಗಿಯೆ ಮೂರು ರೂಪಾಯಿ ಎಣಿಸಬೇಕು ಮೊದಲು. ಶಿವಣ್ಣನ ಜೇಬು ತೆರವಾಗಿದ್ದಿತು. ನಾಳೆ ಬ್ಯಾಂಕಿನಿಂದ ಹಣ ತೆಗೆಯಿಸಿ ಡಾಕ್ಟರನ್ನು ಕರೆಯಿಸಬಹುದು. ಔಷಧಿಯನ್ನು ಕೊಡಿಸಬಹುದು— ಎಂದುಕೊಂಡು, ಸಮಾಧಾನಮಾಡಿಕೊಂಡು, ಮಗುವನ್ನು ಬೆಚ್ಚಗೆ ಮಲಗಿಸಹೇಳಿ ತನ್ನ ಕೊಟಡಿಗೆ ನಡೆದ.

ಮಾರನೆಯ ದಿನ ಇನ್ನೂ ಶಿವಣ್ಣ ಹಾಸುಗೆ ಬಿಟ್ಟು ಎದ್ದಿರಲಿಲ್ಲ. ಹೊರಗಡೆ ಏನೋ ವಿಪರೀತ ಸದ್ದಾಗುತ್ತಿತ್ತು. ಅನೇಕ ಜನ ಸ್ತ್ರೀಯರ ಕಂಠಗಳು ಒಂದೇ ಸಲಕ್ಕೆ ಕಿರುಚಿಕೊಳ್ಳುತ್ತಿದ್ದ ಹಾಗೆ ಕೇಳಿಸುತ್ತಿತ್ತು.

'ಇದೇನು ಬಂತು ಪೀಕಲಾಟ' ಎಂದುಕೊಳ್ಳುತ್ತ ಶಿವಣ್ಣ ಎದ್ದುಬಿಟ್ಟ. ಮೊಗಸಾಲೆಗೆ ಬಂದು ನೋಡಿದರೆ ಪಾರ್ವತಿ ಬಾಗಿಲಲ್ಲಿ ನಿಂತುಕೊಂಡಿದ್ದಾಳೆ; ಹೊರಗಡೆ ನಾಲ್ಕಾರು ಜನ ಸ್ತ್ರೀಯರು ನಿಂತುಕೊಂಡು ಆಕರಾಳ ವಿಕರಾಳವಾಗಿ ಮುಖ ತಿರುಹಿಸುತ್ತ, ವಿಚಿತ್ರವಾಗಿ ಕೈಬೀಸುತ್ತ ಅವಳನ್ನು ಬೈಯುತ್ತಿದ್ದಾರೆ.

ಅವರ ಮಾತುಗಳೆಲ್ಲವೂ ಅತನಿಗೆ ಅರ್ಥವಾಗಲಿಲ್ಲ. ಕೆಲವು ಮುಕ್ತಾಫಲಗಳು ಮಾತ್ರ ಕೇಳಿಸಿದುವು.

'ರಾತ್ರಿಯೆಲ್ಲಾ ಆ ಬಸವಿ ಇಲ್ಲೇ ಇದ್ದಳಲ್ಲವೆ? ನೋಡಿದೆಯಾ ರಾಧಾಬಾಯಿ, ನನಗೆ ಮೊದಲೇ ಇದೆಲ್ಲ ಗೊತ್ತಿತ್ತು. ಅಬ್ಬಾ! ನಮ್ಮ ಕಣ್ಣುಗಳೆದುರಿನಲ್ಲಿ! ನಮ್ಮ ಮನೆಯ ಪಕ್ಕದಲ್ಲಿ—ಇಂಥ ಅನಾಚಾರ!—'

ಅವರ ಕಟಾಕ್ಷ ಯಾವ ವಿಷಯದ ಕಡೆಗೆ ಇದೆಯೆಂಬುದು ಹೊಳೆಯುತ್ತಲೂ ಶಿವಣ್ಣನಿಗೆ ನಿಂಗಮ್ಮನ ಸ್ಮರಣೆಯಾಯಿತು. ಮೊಗಸಾಲೆಯಲ್ಲಿ ಮಗುವಿನೊಂದಿಗೆ ಮಲಗಿಕೊಂಡಿದ್ದ ನಿಂಗಮ್ಮ ಅಲ್ಲಿರಲಿಲ್ಲ; ಅವಳ ಮಗುವೂ ಇರಲಿಲ್ಲ. ಅವನ ಎದೆಯ ಹೊಡೆತ ಹಠಾತ್ತಾಗಿ ನಿಂತುಹೋದ ಹಾಗಾಯಿತು. ಅಂತಹ ಜ್ವರದ ಕೂಸನ್ನು ಕಟ್ಟಿಕೊಂಡು ಇಂತಹ ಬೆಳಗಿನಲ್ಲೇ ಆಕೆ ಹೋದುದಾದರೂ ಎಲ್ಲಿಗೆ? ಈ ನೀಚ ಸ್ತ್ರೀಯರ ಕುತ್ಸಿತ ಮಾತುಗಳಿಂದ ನೊಂದುಕೊಂಡು ಹೊರಟುಹೋದಳೋ ಹೇಗೆ? — ಶಿವಣ್ಣನ ಹೃದಯ ಕೋಪ-ತಿರಸ್ಕಾರಗಳಿಂದ ಉರಿಯತೊಡಗಿತು. ಕೂಗಿದ :

'ಪಾರ್ವತೀ!'

ಅವನ ಕೂಗು ಕೇಳಿಸುತ್ತಲೂ ಆ ದುರ್ಗೆಯರೆಲ್ಲ ಅಲ್ಲಿಂದ ಪಲಾಯನ ಹೇಳಿಸಿದರು. ಪಾರ್ವತಿ ಬಾಗಿಲನ್ನು ಬಿಟ್ಟು ಅವನ ಬಳಿ ಬಂದಳು.

"ಆ ನೀಚ ಹೆಂಗುಸರೊಂದಿಗೆ ಜಗಳ ಕಾಯಲು ಬುದ್ಧಿಯಿಲ್ಲವೆ ನಿನಗೆ, ಪಾರೀ?" ಎಂದು ಕೋಪದಿಂದಲೇ ಕೇಳಿದ ಶಿವಣ್ಣ.

ಅವಳ ಕಣ್ಣುಗಳೆರಡೂ ತುಂಬಿಕೊಂಡಿದ್ದುವು. ಗದ್ಗದ ಸ್ವರದಲ್ಲಿ ಹೇಳಿದಳು :

"ನಾನೇನು ಜಗಳಕ್ಕೆ ಹೋಗಲಿಲ್ಲ; ತಾವಾಗಿಯೇ ಬಯ್ದುಕೊಳ್ಳುತ್ತಾ ಗಲಾಟೆ ಮಾಡಿದರು. ಅದಕ್ಕಾಗಿ...."

"ಸರಿ! ಸರಿ! ಯಾರಿಗಾದರೂ ಏನಾದರೂ ಆಡಿಕೊಳ್ಳೋದಕ್ಕೆ ಅವರಪ್ಪನ ಗಂಟೇನು ಹೋಗುತ್ತದೆ! ನಿಂಗಮ್ಮ ಎಲ್ಲಿ ಹೋದಳು? ಅವಳ ಮಗು?"

(೫೧೬ ನೆಯ ಪುಟಕ್ಕೆ ಮುಂದುವರಿದಿದೆ)

ಧರ್ಮಸೂತ್ರ

ಶ್ರೀ. ಎಂ. ವಾಸುದೇವ ಭಟ್ಟ, ಬಿ. ಎ. (ಆನರ್ಸ್) ಪುಣೆ

★

ಯಾವ ಕಾಲದ ಯಾವ ದೇಶದ ಧರ್ಮಸೂತ್ರ-ಗಳನ್ನೂ ನಾವು, ಇಂದಿನ–ನಮ್ಮ ಪರಿಸ್ಥಿತಿಯ ಅಳತೆಗೋಲಿನಿಂದ ಅಳೆದು ನೋಡಲಾಗದು. ಆ ಧರ್ಮಸೂತ್ರಗಳಂತೆ ನಡೆದುಕೊಂಡ ಅಂದಿನ ಜನರು ಸುಖ-ಶಾಂತಿ-ಸಂಸ್ಕೃತಿಗಳಿಂದ ಕೂಡಿ-ದ್ದರೋ ಇಲ್ಲವೋ ?....ಎಂಬುದೇ ಮುಖ್ಯ !

★

"To know how to exist in the great secret of success— ಜೀವಿಸುವುದು ಹೇಗೆಂಬುದನ್ನು ತಿಳಿದಿರುವುದು ಜಯದ ದೊಡ್ಡ ಗುಟ್ಟು" ಎಂದು ಒಬ್ಬ ಮಹಾತ್ಮನು ಹೇಳಿದ್ದಾನೆ. ಇದನ್ನರಿತ ನಮ್ಮ ಪೂರ್ವಿಕರು ಜೀವನವನ್ನು ಸುಲಭವಾಗಿ ಮತ್ತು ವ್ಯವಸ್ಥಿತವಾಗಿ ಸಾಗಿಸಲು, ನಾನಾ-ಮಾರ್ಗಗಳನ್ನು ಪ್ರಯೋಗಮಾಡಿ ನೋಡಿದರು. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕುವರ್ಣವಿಭಾಗವು ಕಾರ್ಯವಿಭಜನ ದೃಷ್ಟಿಯಿಂದ ನಿರ್ಮಿತವಾದುದೆಂಬುದು ಸ್ಪಷ್ಟ. ಪ್ರತಿಯೊಂದು ವರ್ಣದವರೂ ತಂತಮ್ಮ ಕುಲಕಸುಬಿಗೆ ತೊಂದರೆಬಾರದಂತೆ ತಮ್ಮ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಪಡೆದು ಕೃತಾರ್ಥರಾಗಲು, ತತ್ತ್ವವೇತ್ತರಾದ ಋಷಿಗಳು ಅವರ ದೈನಂದಿನ ಆಚಾರಗಳನ್ನು, ಸ್ವಾನುಭವಪ್ರಮಾಣದಿಂದ ಶಾಸ್ತ್ರರೂಪವಾಗಿ ಜನೋಪಕಾರ ದೃಷ್ಟಿಯಿಂದ ಸಾರಿದರು. ಅದರಿಂದಲೇ 'ಆಚಾರಃ ಪರಮೋಧರ್ಮಃ' ಎಂಬ ಪ್ರತೀತಿ-ಯುಂಟಾಗಿದೆ. ಆಯಾ ದೇಶ-ಕಾಲಗಳನ್ನನುಸರಿಸಿ ಉಚಿತ-ವಾದ ನಿಯಮಗಳನ್ನು ಆಯಾ ವರ್ಣದವರಿಗೆ ಬೋಧಿಸಿದರು. ಇಂತಹ ಉಪದೇಶಗಳ ಮಾಲಿಕೆಗಳೇ ಇಂದು ನಮಗೆ ದೊರೆವ ಧರ್ಮಸೂತ್ರಗಳು.

ಹಿಂದೂ ದೇಶದಲ್ಲಿ ಈವರೆಗೂ ವೇದಗಳೇ ಸರ್ವಪ್ರಮಾಣ-ವೆಂದು ಪ್ರಸಿದ್ಧವಾಗಿವೆ. ಈ ವೇದಗಳಲ್ಲಿ ಹೇಳಿದ ವಿಷಯಗಳ ಆಧಾರದ ಮೇಲೆಯೇ ನಮ್ಮ ಪೂರ್ವದ ಶಾಸ್ತ್ರಗಳೆಲ್ಲವೂ ನಿಂತಿವೆ. ಅದೇ ಮಾತನ್ನು ಇಲ್ಲಿ ಮುಂಚೆ ಕೊಟ್ಟಿರುವ ಗೌತಮಧರ್ಮಸೂತ್ರದ ಪ್ರಥಮವಾಕ್ಯವು ತಿಳಿಸುತ್ತದೆ.

"Man is a bundle of habits-- ಮನುಷ್ಯನು (ಅಭ್ಯಾಸ, ಚಟ ಅಥವಾ) ಶೀಲಗಳ ಒಂದು ಗುಂಪು" ಎಂಬಂತೆ ಅವನ ಅಭ್ಯಾಸಬಲದಿಂದಲೇ ಅವನು ಮನುಷ್ಯನೆನಿಸಿಕೊಳ್ಳುವನು. ಅಂತೆಯೇ ಧರ್ಮಶಾಸ್ತ್ರಕಾರರು, ವೇದಾದಿಗಳಿಂದಲೂ ಪರಂಪರೆ-ಯಿಂದಲೂ ನಡೆದುಬಂದ ಪದ್ಧತಿಗಳನ್ನು ಎಲ್ಲರಿಗೂ ತಿಳಿವಂತೆ ಸುಲಭರೀತಿಯಲ್ಲಿ ಪರಿಷ್ಕರಿಸಿ ಜನರ ಮುಂದಿಟ್ಟರು. ಆದರ್ಶ-ಜೀವನವನ್ನು ನಡೆಯಿಸಲು ಬೇಕಾದ ಸದಭ್ಯಾಸಗಳನ್ನು ಈ ಮೂಲಕ ಜನಗಳಿಗೆ ಸಾರಿದರು. ಬದಲಾದ ಈ ಕಾಲದಲ್ಲಿ ಈ ಬೋಧೆಗಳಲ್ಲಿ ಅನೇಕ ವಿಧಿಗಳು ಅನುಪಯುಕ್ತವಾಗಿಯೊ ಇಲ್ಲವೆ ಅಯೋಗ್ಯವಾಗಿಯೊ ಕಂಡುಬರುವುದು ಸಹಜ. ಜಾತಿಪದ್ಧತಿಯನ್ನು ವಿಚಾರಮಾಡುವಾಗ ಮಹಾಕವಿ ರವೀಂದ್ರರು : "Therefore in her caste regulations India recognized differences, but not the mutability which is the law of life— ಜಾತಿಪದ್ಧತಿ-ಯಲ್ಲಿ ಭರತಖಂಡವು ಭೇದವನ್ನು ಗ್ರಹಿಸಿತೇ ಹೊರತು ಜೀವನದ ಸೂತ್ರವಾದ ಪರಿವರ್ತನವನ್ನು ಗಣನೆಗೆ ತರಲಿಲ್ಲ !" ಎಂದು ಹೇಳಿದ್ದಾರೆ. ಜನದ ಆಚಾರ-ವ್ಯವಹಾರಗಳನ್ನು ಬಿಡಿಸಲಾರದ ಕಟ್ಟಿಗೆ ಸಿಕ್ಕಿಸಿ ಹೀಗೆ ಅದರ ಬೆಳವಣಿಗೆಗೆ ಈ ವರ್ಣಾಶ್ರಮಾದಿ ಧರ್ಮಗಳು ಅಡ್ಡಿಬಂದುದು ಈಗ ಎಲ್ಲರಿಗೂ ತಿಳಿದಿದೆ. ಆದರೆ ಪೂರ್ವಜರು ಹೇಳಿದ ನಿಯಮಗಳು ಸಾರ್ವಕಾಲಿಕ ಮತ್ತು ಸಾರ್ವದೇಶಿಕ ಎಂದು ತಿಳಿಯದೆ ಅವರ ಕಾಲದೇಶಗಳನ್ನು ಗಣನೆಗೆ ತಂದುಕೊಂಡರೆ, ಅವು ಎಷ್ಟೋ ವಿಧದಲ್ಲಿ ನಮ್ಮ ಹಿಂದೂಧರ್ಮದ ಮತ್ತು ಜನಾಂಗದ ಉನ್ನತಿಯನ್ನು ಸಾಧಿಸಿ-ರುವುವು ಎನ್ನಲು ಯಾರೂ ಹಿಂಜರಿಯಲಾರರು. ಆ ಕಾಲದ ರಾಜಕೀಯ, ವ್ಯಾವಹಾರಿಕ ಮತ್ತು ಚಾರಿತ್ರ್ಯಕಸನ್ನಿವೇಶಗಳನ್ನು ಗಮನಕ್ಕೆ ತಂದುಕೊಂಡು, ಅವರು ಎಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿತ್ತೆಂಬುದನ್ನು ತಿಳಿದು, ನಾವು ಈ ಧರ್ಮ-ಸೂತ್ರೋಕ್ತವಾದ ಕಟ್ಟಳೆಗಳನ್ನು ಅರ್ಥಮಾಡಬೇಕು. ಹಿಂದೂ ದೇಶದ ಸಾಂಸ್ಕೃತಿಕ ಐಕ್ಯವನ್ನು ಕಾಯ್ದುಕೊಂಡು ಬರಲು ಆ ಕಾಲದಲ್ಲಿ ಜನರಿಗೆ ಎಷ್ಟು ಶ್ರಮವಾಗಿತ್ತೆಂಬುದನ್ನು ಈಗ ಕುಳಿತು ಊಹಿಸುವುದು ಕಷ್ಟಸಾಧ್ಯವೇ ಸರಿ. ಸಂಸ್ಕೃತಿ, ಭಾಷೆ, ಉದ್ಯೋಗ, ಕಲೆ, ಕುಲ ಮೊದಲಾದುವುಗಳನ್ನು, ಈ ವಿಶಾಲ ಭರತಖಂಡದಲ್ಲಿ ಒಂದು ಹತೋಟಿಯಲ್ಲಿಡಲು ಅವರು ಇಂತಹ ವಿಧಾನವನ್ನು ರಚಿಸಬೇಕಾದರೆ ಅವರಿಗೆ ಎಂತಹ ಕೌಶಲ್ಯ-ವಿರಬೇಕು ?

ದ್ವಿಜರೆಂದು ಗಣಿತರಾದ ಮೊದಲ ವರ್ಣತ್ರಯವನ್ನೇ ದೃಷ್ಟಿ-ಯಲ್ಲಿಟ್ಟುಕೊಂಡು ಈ ಸೂತ್ರಗಳು ರಚಿತವಾಗಿವೆ. ವರ್ಣತ್ರಯ-ದವರು ಶುದ್ಧ ಆರ್ಯರೆಂದು ಧರ್ಮಶಾಸ್ತ್ರಕಾರರ ಅಭಿಪ್ರಾಯ. ವಿದ್ವಂತೆ ತೋರುತ್ತದೆ. ಆದರಿಂದಲೇ ವೇದಾಧ್ಯಯನಾಧಿಕಾರ ಅವರಿಗೇ ಮೀಸಲಾಗಿದೆ.

೫೧ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರಗಡ್ಡೆಯ ಗುಳಿಗೆ
ಬಾಟ್ಲಿಗೆ ೧ ರೂ. ೪ ಆಣೆ.
ಎಂತಹ ಜ್ವರಗಡ್ಡೆಯನ್ನೂ ಕಳೆಯಬಹುದು.
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಆರೋಗ್ಯಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಈ ಧರ್ಮಸೂತ್ರದಲ್ಲಿ ಅನೇಕ ಗಮನಾರ್ಹವಾದ ವಿಷಯಗಳು ಕಂಡುಬರುತ್ತವೆ. ಬಾಲ್ಯದಲ್ಲಿ ಬ್ರಹ್ಮಚರ್ಯದ ನಿಯಮಗಳನ್ನು ಯಥೋಕ್ತವಾಗಿ ಪರಿಪಾಲಿಸಿ ದೃಢಾಂಗನೂ ಮೇಧಾವಿಯೂ ವಿದ್ಯಾಧನನೂ ಆಗಿ, ಅನಂತರ ಗೃಹಸ್ಥಾಶ್ರಮವನ್ನು ಕೈಗೊಂಡರೆ ಯಾವನಿಗೆ ತಾನೆ ಜೀವನವು ಸುಖಕರವೆನಿಸಲಾರದು? ಬೆಳಗ್ಗೆ ಬ್ರಾಹ್ಮೀಮುಹೂರ್ತದಲ್ಲಿ ಎದ್ದು ವಿಶಾಲವಾದ ಬಯಲು ಪ್ರದೇಶದಲ್ಲಿ ಪೂರ್ವಮುಖಿಯಾಗಿ ನಿಂತು ನಮಗೆ ಸರ್ವಕರ್ಮ ಸಾಧನಗಳನ್ನೊದಗಿಸಿಕೊಟ್ಟ ಆ ಭಗವಂತನನ್ನು ನೆನೆಯುವುದು ಎಂತಹ ಶಾಂತಿದಾಯಕವಾದುದು! ಭಗವದ್ಧ್ಯಾನ ಅಥವಾ ಪ್ರಾರ್ಥನೆಯ ಬಗ್ಗೆ ಮಹಾತ್ಮಾ ಗಾಂಧಿಯವರು ಕೊಟ್ಟಿರುವ ಪ್ರಾಧಾನ್ಯವು ಜಗದ್ವಿಶದವಾಗಿದೆ. "ಶಾಂತಿರಸವೆ ಪ್ರೀತಿಯಿಂದ ಮೈದೋರಿತಣ್ಣ" ಎಂಬಂತಿರುವ ಆ ಸುಪ್ರಭಾತದಲ್ಲಿ ಮನಸ್ಸಿನ ಮತ್ತು ದೇಹದ ಆರೋಗ್ಯವು ವೃದ್ಧಿಹೊಂದುವ ನಿಮಿತ್ತವಾಗಿ ಸಂಧ್ಯಾವಂದನವಿಧಿಯನ್ನು ಸೂತ್ರಕಾರರು ಹೇಳಿರುವುದು ಎಷ್ಟು ಸತ್ಯ ಮತ್ತು ಸಮಂಜಸವಾಗಿದೆ ನೋಡಿ! 'ಸಂಧ್ಯಾವಂದನೆ' ಎಂಬ ಶಬ್ದದಿಂದಲೇ ಆ ನಿಯಮವನ್ನು ಆಚರಣೆಗೆ ತಂದ ಮಹನೀಯರ ಕಲಾತ್ಮಕದೃಷ್ಟಿಯು ವ್ಯಕ್ತವಾಗುತ್ತದೆ. ಬೆಳಕು-ಕತ್ತಲೆಗಳ ಮಧುರ ಸಂಗಮವು ಜೀವನದ ಒಳಸೂತ್ರವನ್ನೇ ಜಗತ್ತಿಗೆ ಘೋಷಿಸುತ್ತದಲ್ಲವೆ? ಆ ಸೃಷ್ಟಿಯ ಸಮರಸಕಾಲದಲ್ಲಿ ರಸಸಮಾಧಿಯನ್ನನುಭವಿಸದವನ ಬಾಳು ಎಂದಾದರೂ ಬೆಳಕನ್ನು ಕಂಡೀತೆ? ಪ್ರಭಾತಪ್ರದೋಷಗಳು ಸಂಧ್ಯಾಕಾಲಗಳು ಅರ್ಥಾತ್ ಸಂಧಿಕಾಲಗಳು. ಆ ಕಾಲಗಳಲ್ಲಿ ನಮ್ಮ ಮನಸ್ಸು ಬಹುಬೇಗ ನಿರ್ಮಲವಾಗುತ್ತದೆ; ಶಾಂತಿದೊರಕುತ್ತದೆ.

ಎರಡನೆಯದಾಗಿ ಧರ್ಮಶಾಸ್ತ್ರವು ಬ್ರಹ್ಮಚಾರಿಯ ಆಹಾರ ನಿದ್ರಾದಿಗಳ ನಿಯಮನವನ್ನೂ ಹೇಳುತ್ತದೆ. ಶೌಚವಿಷಯವನ್ನಂತೂ ಅತಿ ವಿಶದವಾಗಿ ಒತ್ತಿ ಒತ್ತಿ ಹೇಳುತ್ತದೆ. ನಮ್ಮ ಮೈಗೆ ಬಟ್ಟೆಗೆ ಮರದ ಚರ್ಮದ ಮತ್ತು ಲೋಹಾದಿಗಳಿಂದ ನಿರ್ಮಿತವಾದ ಪದಾರ್ಥಗಳಿಗೆ ಯಾವುದಾದರೊಂದು ಬಗೆಯ ಕೊಳೆ ಅಥವಾ ಎಂಜಲುತಗುಲಿದರೆ, ಆಯಾ ಪದಾರ್ಥಗುಣಕ್ಕೆ ತಕ್ಕಂತೆ ಅದರದರ ಶುದ್ಧಿಕ್ರಮವನ್ನು ವೈಜ್ಞಾನಿಕ ದೃಷ್ಟಿಯಿಂದ ವಿವರಿಸುತ್ತದೆ. ನಮ್ಮ ನಿತ್ಯಜೀವನದಲ್ಲಿ ಬೆಳಗಿನಿಂದ ಸಂಜೆಯವರೆಗೆ ಮಾಡತಕ್ಕ ಕರ್ಮಗಳೆಲ್ಲವನ್ನೂ ವಿಧಿವತ್ತಾಗಿ ಮಾಡುವ ಮಾರ್ಗವನ್ನು ಧರ್ಮಸೂತ್ರವು ವಿಶದಪಡಿಸುತ್ತದೆ. ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ಮೂರು ಆಶ್ರಮಗಳಿಗೂ ಅಡಿಪಾಯದಂತಿರುವ ಮೊದಲನೆಯದಾದ ಬ್ರಹ್ಮಚರ್ಯದ ಬಗ್ಗೆ ವಿಶೇಷ ಗಮನವನ್ನು ಕೊಟ್ಟು, ನಮ್ಮ ಪೂರ್ವಜರು ಆ ವಿಷಯವಾಗಿ ಅಧಿಕಾರವಾಣಿಯಿಂದ ನುಡಿದಿದ್ದಾರೆ. ಬ್ರಹ್ಮಚರ್ಯದ ವಿಚಾರವಾಗಿ ಗಾಂಧೀಜಿಯವರು— ಮದುವೆಯಾಗಿರಲಿ ಇಲ್ಲದಿರಲಿ ಬ್ರಹ್ಮಚರ್ಯಸಾಧನವು ಅವಶ್ಯ. ರಾಷ್ಟ್ರಸೇವಕನಿಗೂ ಧರ್ಮಜೀವಿಗೂ ಇದು ಅನಿವಾರ್ಯ—ಎಂಬುದಲ್ಲದೆ ಆಹಾರಾದಿಗಳ ವಿಷಯವಾಗಿ— ಪರುವೃತ್ತಿಯನ್ನು ದಾಟಿ ಮನುಷ್ಯತ್ವವನ್ನು ಸಾಧಿಸಬೇಕಾದರೆ ಆಹಾರದಲ್ಲಿ ಒಂದು

(೫೧೪ ನೆಯ ಪುಟದಿಂದ ಮುಂದುವರಿದದ್ದು)

ಪಾರ್ವತಿಯ ಮುಖದಿಂದ ಮಾತು ಹೊರಡಲಿಲ್ಲ. ಅದಕ್ಕೆ ಪ್ರತಿಯಾಗಿ ಅವಳ ಕೆನ್ನೆಗಳೆರಡೂ ಕಂಬನಿಗಳೊಂದಿಗೆ ಮಾತನಾಡತೊಡಗಿದುವು.

ಅವಳ ಹತ್ತಿರ ಬಂದು, ಅವಳ ಮುಖವನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಶಿವಣ್ಣ ಕೇಳಿದ.

"ಇದರರ್ಥವೇನು ಪಾರೀ? ಆಕೆ ಎಲ್ಲಿಗೆ ಹೋದಳು?"

ಅವಳು ಬಿಕ್ಕುತ್ತ ಬಿಕ್ಕುತ್ತ ಹೇಳಿದಳು:

"ಈ ಹೆಂಗುಸರ ಸೂತನ್ನು ಕೇಳುತ್ತಿರಿ ಆಕೆ ಇಲ್ಲಿ ನಿಲ್ಲಲಿಲ್ಲ. ತನ್ನಿಂದಾಗಿ ನಮ್ಮ ಮೇಲೆ ವ್ಯರ್ಥವಾಗಿ ಆರೋಪ ಬರಬಾರದೆಂದುಕೊಂಡು ಹೋಗಿಬಿಟ್ಟಳು. ನಾನು ಎಷ್ಟೋ ತಡೆದರೆ ಕೇಳಲಿಲ್ಲ. ಮಗುವನ್ನೆತ್ತಿಕೊಂಡು ಹೋಗಿಯೇ ಬಿಟ್ಟಳು!"

ಅವಳ ಮುಖವನ್ನು ಬಿಟ್ಟು ಶಿವಣ್ಣ ಕೊಂಚ ದೂರ ಸರಿದ. ಅವನ ಮುಷ್ಟಿಗಳೆರಡೂ ಕಲ್ಲಿನಂತೆ ಗಂಟಿಕ್ಕಿದುವು. ಕೇಳಿದ;

"ಮಗುವಿಗೆ ಜ್ವರ ಹೇಗಿತ್ತು?"

"ಬೆಳಿಗ್ಗೆ ಇನ್ನೂ ವಿಪರೀತವಾಗಿತ್ತು. ಮೈ ಮುಟ್ಟಿದರೆ ಕೈ ಉರಿಯುವ ಹಾಗಿತ್ತು!"

ಆದಿನ ಶಿವಣ್ಣ ಕೆಲಸಕ್ಕೆ ಹೋಗಲಿಲ್ಲ. ನಿಂಗಮ್ಮನನ್ನು ಶೋಧಿಸುವುದಕ್ಕಾಗಿ ಊರೆಲ್ಲವನ್ನೂ ಸುತ್ತಿದ. ಸಾಯಂಕಾಲವಾಯಿತು. ಅವಳು ಸಿಕ್ಕಲಿಲ್ಲ.

ಅನಂತರ ಎಂದೂ ನಿಂಗಮ್ಮ ಅವರ ದೃಷ್ಟಿಗೆ ಬೀಳಲಿಲ್ಲ.

ನಿಯಮವನ್ನು ಆಚರಣೆಗೆ ತರಬೇಕು. ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಲು ಸಾಕಷ್ಟು ಆಹಾರವನ್ನು ಮಾತ್ರ ತೆಗೆದುಕೊಂಡರೆ ಸಾಕು. ಖಾರ ಸಿಹಿ ಮೊದಲಾದುವನ್ನು ಬಹಳ ಮಿತವಾಗಿ ತೆಗೆದುಕೊಳ್ಳಬೇಕು— ಎಂದಿದ್ದಾರೆ.

ಮೇಲೆ ಹೇಳಿದ ಆರೋಗ್ಯದಾಯಕ ನಿಯಮಗಳೊಡನೆ ಧರ್ಮಶಾಸ್ತ್ರವು ಶೀಲನಿಯಮಗಳನ್ನೂ ಹೇಳುತ್ತದೆ. ಸಮಾಜ-ಜೀವನದಲ್ಲಿ ನಡತೆಯೇ ಪ್ರಧಾನವಾದುದು. ಪಾಶ್ಚಾತ್ಯರು ಗಮನವೀವ Etiquette ಅಥವಾ ಸಾಮಾಜಿಕ ಮರ್ಯಾದೆಯ ಬಗ್ಗೆ ವಿಶೇಷ ಸೂತ್ರಗಳನ್ನೇ ಹೇಳಿದ್ದಾರೆ. ಐಶ್ವರ್ಯವಂತ, ಬಡವ ಎಂಬ ಭೇದವಿಲ್ಲದೆ ಬ್ರಹ್ಮಚಾರಿಯು ಗುರುಶುಶ್ರೂಷೆಯನ್ನು ಮಾಡಲೆಬೇಕೆಂಬ ನಿಯಮವಿದೆ. ಇದು ಪರಮಾತ್ಮನ ಅವತಾರವೆನಿಸಿದ ರಾಮ-ಕೃಷ್ಣಾದಿಗಳಿಗೂ ತಪ್ಪಿದ್ದಲ್ಲ. ಇದರಿಂದ ಮನುಷ್ಯನಿಗೆ ದೈನ್ಯಗುಣದ ಪರಿಚಯವುಂಟಾಗಿ, ಅವನು ಜಗತ್ತನ್ನು ಜನ್ಮಾಗಿ ತಿಳಿದುಕೊಳ್ಳಲು ಶಕ್ತನಾಗುತ್ತಾನೆ. ಆಪ್ತಮದಗಳಲ್ಲದೆ ಇನ್ನೂ ಎಷ್ಟೋ ಮದಗಳಿಂದ ಬಾಳಿನಲ್ಲಿ ಕುರುಡನಾಗಿ ವರ್ತಿಸುವ ಈ ಮನುಷ್ಯನ ಮನಸ್ಸನ್ನು ಮೊದಲಿನಿಂದ ಪರಿಪಾಕಗೊಳಿಸಲು ಈ ಸೇವಾಧರ್ಮವು ದಿವ್ಯೌಷಧವೇ ಸರಿ. ಇದನ್ನು 'ಭವತಿ ಭಿಕ್ಷಾಂ ದೇಹಿ' ಎಂಬ ಬ್ರಹ್ಮಚಾರಿಯ ಕೂಗೇ ಸಿದ್ಧಪಡಿಸುತ್ತದೆ. ತನ್ನ ದೀನತೆಯಿಂದ ಜನರ ಕಣ್ಣಿನಲ್ಲಿ ಗಣ್ಯನಾಗದೆ ಸಂಚರಿಸುವ ಬ್ರಹ್ಮಚಾರಿಗೆ, ಜೀವನದ ಸುಖ-ದುಃಖಗಳ ಪರಿಚಯವು ಮೊದಲಿನಿಂದ ಸಾಕಷ್ಟು ಒದಗಿ, ಮುಂದಿನ ಅವನು ಬೆಳಸುವ ಜೀವನವನ್ನು ಸುವ್ಯವಸ್ಥಿತವಾಗಿ ಇಡಲು ಕಾರಣವಾಗುತ್ತದೆ. ಇದನ್ನರಿತು ಬಾಳುವವರಿಗಿಂತ ಮರೆತು ಬಾಳುವವರೇ ಈಗ ನಮಗೆ ಹೆಚ್ಚಾಗಿ ಸಿಕ್ಕುತ್ತಾರೆ. ಕೆಲವರಿಗೆ ಈ ನಿಯಮಪಾಲನೆಯಿಂದಲ್ಲದಿದ್ದರೂ ವಿಧಿವಶದಿಂದ ಅನೇಕ ಅನುಭವ ವಿಶೇಷಗಳುಂಟಾಗುವುದುಂಟು; ಆದರೆ ಅವುಗಳನ್ನು ಅರಿತು ಉಪಯೋಗಪಡಿಸಿಕೊಂಬವರಿಗಿಂತ ಮರೆತು ಬಿಡುವವರೇ ಹೆಚ್ಚು. ಜಗತ್ತೇ ಹಾಗೆ; ಮಾಡುವುದೇನು?

ಆಹಾರ, ವಿಹಾರ ಮೊದಲಾದ ಪ್ರತಿಯೊಂದಕ್ಕೂ ಸಂಬಂಧಿಸಿದ ನಿಯಮಗಳು ಧರ್ಮಸೂತ್ರದಲ್ಲಿವೆ. ಈ ನಿಯಮಗಳಾವುವೂ ಏಮರ್ಶೆಗೆ ದೂರವಾದುವೆಂದು ಅಭಿಪ್ರಾಯವಲ್ಲ. ಹದಿನೆಂಟು ಅಧ್ಯಾಯಗಳನ್ನೂ ಹೇಳಿ ಕೊನೆಗೆ ಶ್ರೀಕೃಷ್ಣನು ಅರ್ಜುನನಿಗೆ— 'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾಕುರು'— ಎಂದು ಹೇಳಿದ್ದಾನೆ. ಪ್ರತಿಯೊಬ್ಬನೂ ಉಪದೇಶ ಮತ್ತು ಅನುಭವಗಳನ್ನು ವಿಮರ್ಶಿಸಿ ಕಾರ್ಯೋದ್ಯೋಗಿಯಾಗಬೇಕು. ಅಂಧಾನುಕೃತಿಯು ಎಂದೂ ಗ್ರಾಹ್ಯವಲ್ಲ. ಇದೇ ಮಾತನ್ನು ಕಾಳಿದಾಸನು—'ಸಂತಃ ಪರೀಕ್ಷ್ಯಾನ್ಯತರದ್ಭಜಂತೇ'—ಎಂಬ ಸಾಲಿನಲ್ಲಿ ಹೇಳಿರುತ್ತಾನೆ. ಹೀಗೆಯೆ ಪರೀಕ್ಷಿಸಿ ನೋಡಿದರೆ ನಮ್ಮ ಧರ್ಮಶಾಸ್ತ್ರಗಳಲ್ಲಿ, ಇಂದಿಗೂ ಉಪಯುಕ್ತವಾದ ಅನೇಕ ಸಂಗತಿಗಳು ಹೊರಬೀಳುವುದು ಖಂಡಿತ. ಅತಿ ಶ್ರದ್ಧೆ ಅಥವಾ ಅನಾದರದಿಂದ ಯಾವುದನ್ನೂ ನೋಡುವುದು ಶಿಷ್ಟರ ಲಕ್ಷಣವಲ್ಲ. ಹಿಂದಿನ ಶಾಸ್ತ್ರಗಳ ಬಗ್ಗೆ ಈಗಿನ ಯುವಕರು ನಡೆಯುವ ರೀತಿಗೆ ' We put too much faith in systems and look too little to men— ಶಿಸ್ತಿನಲ್ಲಿ ಅತಿ ವಿಶ್ವಾಸವಿಡುವೆವು, ಮನುಷ್ಯನನ್ನು ಸರಿಯಾಗಿ ಗಮನಿಸುವುದೇ ಇಲ್ಲ ' ಎಂಬ ಡಿಸ್ರೇಲಿಯ ವಾಕ್ಯವನ್ನು ಉದಾಹರಿಸಬಹುದು; ಆದರೆ ಶಿಸ್ತು, ಸಂಘಟನೆ, ವ್ಯವಸ್ಥೆ ಅಥವಾ ಕ್ರಮವಿಲ್ಲದಿದ್ದ ಬಾಳು ಹಾಳೇ-ಸರಿ! ನಾವು ಕಟ್ಟಿಲ್ಲದೆ ನಡೆವುದು ಸುಖಕರವಲ್ಲ, ಕಟ್ಟಿರಬೇಕು, ಆದರದು ಬಿಕ್ಕಟ್ಟಿನಲ್ಲಿ ನಮ್ಮನ್ನು ಸಿಕ್ಕಿಸಬಾರದು. ಕಟ್ಟುಗಳು ನಮ್ಮ ಅಧೀನದಲ್ಲಿರಬೇಕೇ ಹೊರತು ಅವುಗಳಿಗೆ ನಾವು ದಾಸರಾಗಬಾರದು. ಸೃಷ್ಟಿಕರ್ತನು ಲಯಕರ್ತೃತ್ವವನ್ನು ಹೊಂದಿರುವಂತೆ, ನಮ್ಮ ಸಮಾಜ ನಿಯಮಗಳು ದೇಶಕಾಲಾನುಗುಣವಾಗಿ ಪರಿವರ್ತನಗುಣವುಳ್ಳವಾಗಿರಬೇಕು.

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಒಡೆದ ಕನ್ನಡಿ

(ವ್ಯಂಗ್ಯಪ್ರಬಂಧ)

ಶ್ರೀ. 'ಎನೆಸ್ಜಿ' ಬಿ. ಎ. ಧಾರವಾಡ

ಒಂದು ಕಾಲಕ್ಕೆ ತನ್ನ ಮೆರುಗಿನ ಮೂಲಕ ರಾಜ-ರಾಣಿಯರನ್ನೂ ಮರುಳುಗೊಳಿಸಿ ಮೆರೆದ ಕನ್ನಡಿ, ಇಂದು ಬಣ್ಣಗುಂದಿ ಬಿರುಕಹೊಂದಿ ಎಲ್ಲರಿಗೂ ಬೇಸರನಿಸುವಂತೆ ಮೂಲೆಯಲ್ಲಿ ಬಿದ್ದುಕೊಂಡಿದೆ. ಪಾಪ, ಕಾಲಾಯ ತಸ್ಮೈನಮಃ!

★

ಯುದ್ಧಕಾಲ, ಕಂಡದ್ದಕ್ಕೆ ಬೆಲೆ ಬರುವ ಕಾಲ! ಕಲ್ಲು-ಮಣ್ಣು-ಕಸಕ್ಕೆ ಮಾತ್ರ ಬೆಲೆ ಬರುವುದಷ್ಟೇ ಉಳಿದಿದೆ. ಒಡಕು ಕಾಜಿನ ಚೂರಿಗೂ ಬೆಲೆ. ಮದ್ದಿನ ಜೀವಾಳವದು. ಅಂತೆಯೆ ಮೂಲೆಯಲ್ಲಿ ಅಸ್ಥಿಪಂಜರದಂತೆ ಒರಗಿ ಜನರನ್ನು ಹೆದರಿಸುವ ಒಡಕು ಕನ್ನಡಿಯನ್ನು 'ಮೋಡಕಾ ಬಾಜಾರ'ಕ್ಕೆ ಪಾಕ-ಬಾರದೇ—? ಹತ್ತಾಣೆ ಬಂದಾವು....ಎಂದು ನಾನು ಆಳಿನೆದುರು ಅನೇಕ ಸಲ ಹೇಳಿದುದು ನೆನಪಿದೆ. ಮೊನ್ನೆ ಮುನೆಯ ಹಜಾರದಲ್ಲಿ ಆಡುವ ಮಡುಗರಿಂದ ಅದು ಹೆಚ್ಚು ಗಾಸಿಯಾಗಿದೆ. ಹೊಸ ಮೂರು ಕಲೆಗಳು ಎರಡು ಸೀಳುಗಳು ಅದಕ್ಕೆ! ಇಪ್ಪಾ-ದರೂ ಜೀವಪಿಡಿದ ಅದರ ಧೈರ್ಯವೇ ಪೆಚ್ಚಿನದು. ಅಹುದು, ನಾಮರಸ್ಥಾದ ವಸ್ತುಗಳು ಹೀಗೇ ಜೀವಹಾಕುವವಲ್ಲವೇ?

'ಬಿದ್ದರೆ ಬಿದ್ದುಕೊಂಡಿರಲಿ ಗೋಡೆಯ ಬಳಿ!' ಎಂದೆನ್ನ-ಬೇಕೆಂದರೆ— ಹುಚ್ಚು ಸ್ವರೂಪ ಬೇರೆ. ಒಮ್ಮೆ ಕನ್ನಡಿಯೆಡೆಗೆ ಲಕ್ಷ್ಯ ಹೋದರೆ— ಬರೆಯುವ ಕಲೆ, ಉತ್ಸಾಹ, ಸ್ಫೂರ್ತಿ ಕಳಚಿಬೀಳುವುವಲ್ಲ—ಎನಿಸುವುದು. ತಲೆ ಬರಿಯದಾಗುವುದು. ಬೀಜಾರು ತಲೆದೋರುವುದು. ಅರ್ಧಮರ್ಧ ಧೂಳಿನಲ್ಲಿಯೇ ಹುದುಗಿದಂತಾಗಿದೆ— ಅದು. ಹತ್ತಿರ ಸೌಭಾಗ್ಯಕ್ಕೆ ಹಳೆಯ ಹೊತ್ತಗೆಗಳ ಗಂಟು-ಗದಡಿಗಳು! "ಒಡೆದ ಕನ್ನಡಿಗೆ ಪುರಾತನ ಸಾಹಿತ್ಯದ ಸಾಮಾನ್ಯವೇ? ಛೇ, ಎಂತಹ ಅವಮಾನ!" ಎಂದು ಕನ್ನಡಿಯನ್ನು ಬೀಸಾಡಬೇಕೆಂದೆ, 'ಬಿದ್ದರೆ ಬಿದ್ದಿರ-ಲೊಲ್ಲದೇಕೆ!' ಎಂಬ ವಿಚಾರವೂ ಬಂದಿತು. ಸಾಯುವ್ಯ-ದಾದರೆ ತಾನೇ ಸಾಯಲಿ; ಹತ್ಯಾಕಾಂಡದ ದೋಷವೇಕೆ ನನ್ನ ಪಾಲಿಗೆ?

....'ಛಟ್ ಛಟ್!' ಸದ್ದು ಎಲ್ಲಿಯದು? ಆಂ? ಗೂಟಕ್ಕೆ ತಗುಲಿಸಿದ ಕನ್ನಡಿಯ ನುಲಿಕೆ ಹರಿಯಿತೇ? ಎರಡೂ ಹಳೆಯ ಕಾಲದ ಅಳುಬುರುಕ ಅವತಾರಗಳು. ಕನ್ನಡಿ ಬಿದ್ದರೆ ಬೀಳಲಿ, ದಿನದ ಸಾಮಿಗೆ ಕಣ್ಣೀರಿನ ಕಾಲುವೆ ಏಕೆ ಹರಿಸಲಿ? ಆಯಿತು ಮತ್ತೆರಡು ಹೊಸ ಗಾಯಗಳು ಅದರ ಮುಖಕ್ಕೆ. 'ಹಾಸುಗಲ್ಲ ಮೇಲೆ ಬಿದ್ದಿದ್ದರೆ ಕೊನೆಯಾದರೂ ಆಗುತ್ತಿತ್ತು; ಮತ್ತೆ ಹೊತ್ತಗೆ-ಗಳ ಮೇಲೆ ಮೇಲ್ವಾಯ್ದು ನೆಲಗಟ್ಟಿಗೆ ಅಪ್ಪಳಿಸಿದೆಯಾ?'— ಎಂದು ಕೇಳಬೇಕೆನಿಸಿತು.

★

ಇಂದು ಯುಗಾದಿ. ಹಳೆಯ ವಸ್ತುಗಳ ಪುನರುಜ್ಜೀವನ ಮಾಡುವ ಕೆಲಸ. ಸೇವಕರು ಮನೆಯನ್ನು ಸುಸಜ್ಜಿತವನ್ನಾಗಿ ಮಾಡುವುದರಲ್ಲಿ ತೊಡಗಿದ್ದಾರೆ. ಮರೆತು ನನ್ನ ಕೊಠಡಿಯ-ಲ್ಲಿಯ ಹಳೆಯ ಕನ್ನಡಿಯನ್ನೂ ತಿಕ್ಕಿತಿಕ್ಕಿ ಹಸನುಗೊಳಿಸಿದ್ದಾರೆ. ಆದರೂ ಮೊಗದ ಮೇಲಿನ ಹುಚ್ಚುಸ್ವರೂಪ ಮಾಯವಾಗಿಲ್ಲ. ಯುದ್ಧದಿಂದ ಮರಳಿದ ಸೈನಿಕನ ದೇಹದಂತೆ ಅಲ್ಲಲ್ಲಿ ಏರೂಪತೆ ಇನ್ನೂ ಇದೆ. ನಟ್ಟನಡುವೆ ಮೂರು ಸೀಳುಗಳು ಮತ್ತೆ! ಬಹುಶಃ ಭಾರತದ ಬಡತನದ ಗುರುತಿನ ಬೊಟ್ಟೇನೊ ಇವುಗಳು! ಕಪ್ಪುಕಲೆಗೆ ಮಿತಿ ಇಲ್ಲ. 'ಚಂದಿರನ ಸೌಂದರ್ಯಕ್ಕೆ ಕಲೆ-ಗಳೆಲ್ಲನೇ?— ಎಂದು ಕೇಳಿ ನಿನ್ನ ಜೆಲ್ವಿನ ಪ್ರದರ್ಶನ ಮಾಡ-ಬೇಕೆನ್ನುವಿಯಾ?' ಎಂದು ಕೆರಳಿಸಿದೆ. 'ಚಂದಿರನಷ್ಟು ಬೆಳಕಿಲ್ಲದಿದ್ದರೂ ರಾವು ರಾವು ಮೂಡಿಸುವ ಬುದ್ಧಿ ಇದೆಯಲ್ಲಾ ನಿನಗೆ! ಒಟ್ಟು ಚಂದಿರನ ದಿವ್ಯತೆ-ಭವ್ಯತೆಗಳು ನಿನಗಿಲ್ಲದಿದ್ದರೂ ಕಪ್ಪುಕಲೆಗಳ ಸಾಮ್ಯಕ್ಕಾಗಿ ಸಮಾಧಾನ ಹಚ್ಚಿಕೊ' ಎಂದೆ. 'ಬಿದ್ದುಕೊಂಡಿರು, ಬೀದಿಗೆ ಏಕೆ ಬಿಸಾಡುವುದು ನಿನ್ನನ್ನು? ಮತ್ತೆ ಹೊರಗಡೆ ಬಿದ್ದ ತಪ್ಪಿಗಾಗಿ ಜನರ ಕಾಲು ಚುಚ್ಚಿ ಅವರ ಮೇಲೆ ಸೇಡು ತೀರಿಸಿಕೊಳ್ಳುವೆ! ಒಡಕೆಂದು ಹೊರದೂಡದಿದ್ದರೆ ಅದೊಂದು ಸಮಾಜಸೇವೆ ಎನಿಸೀತು!'

ಹೊರ-ಹೊರಡುವಾಗ ಫಕ್ಕನೆ ಏನೋ ವಿಚಾರ ಬಂದು, ಮತ್ತೆ ಗೋಡೆಗೆ ಏರಿದ ಕನ್ನಡಿಯ ಕಡೆಗೆ ದಿಟ್ಟಿ ಹೋಯಿತು. ಅನಿಮಿಷ ಅದರ ಜೋಲುಮೊಗ ನೋಡಿದಾಗ ಜುಗುಪ್ಸೆ ಎನಿ-ಸಿದರೂ, ಕೆಕ್ಕರಿಸಿ ನೋಡಿದೆ ಅದರೆಡೆಗೆ. ಬಿರುಕಿನೊಳಗಿಂದ ಆಕ್ಷೇಪಗಳ ತರಂಗಗಳೇ ಏರಿ ನನ್ನೆಡೆಗೆ ಬರುವಂತಾಯಿತು. ಎದೆ ಝಲ್ಲೆಂದಿತು. ತಬ್ಬಿಬ್ಬಾಗಿ ನೋಡಿದೆ. ಹೊರಡುವುದು ದೂರ ಉಳಿಯಿತು. 'ಏನು, ಎಂತಹ ಹುಚ್ಚು ಬುದ್ಧಿ ನಿನ್ನದು? ಇಷ್ಟು ಮೂಲೆಗುಂಪಾಗಿಸಿದ್ದುದು ಸಾಲದೆ, ಮತ್ತೆ ನನ್ನನ್ನು ಹೊರದೂಡುವ ಇಚ್ಛೆಯೇ?' ಎಂದು ದನಿದೋರಿತು.

'ಅಹುದು ನೀನು ದೇವರೇ, ದಿಂಡರೇ, ತಲೆಯಲ್ಲಿಟ್ಟು ಪೂಜಿ-ಸಲೇ? ಪೌಲಾಗಿ ರತ್ನ-ವಜ್ರ-ವೈಡೂರ್ಯಗಳಿಂದಾದರೂ ಝಗ ಝಗಿಸುವೆಯಾ? ಆಹಾಹಾ, ಏನು ಸ್ವರೂಪ! ಸಲೂನಿಗೆ, ಹೋಟೆಲಿಗೆ, ವಾಸಿಂಗ್ ಕಂಪನಿಗೆ, ಕಿರಾಣಿ ಅಂಗಡಿಗೆ ಕಳುಹ-

ದಿದ್ದುದು—ಅಥವಾ ನಿನ್ನನ್ನು ಬೀದಿಯ ಭಿಕಾರಿಯನ್ನಾಗಿ ಮಾಡದಿದ್ದುದೇ— ನನ್ನ ತಪ್ಪೆಂಬಂತೆ ಆಕ್ಷೇಪ ಹೊರಡಿಸುವೆಯಾ?' ಎಂದು ಕೇಳಬೇಕೆಂದು ತುದಿನಾಲಗೆಯ ವರೆಗೆ ಶಬ್ದ ಬಂದು ಹೋದುವು.

ರಕ್ತರಂಜಿತ ಮೊಗ ಮುದುಡಿಕೊಂಡು, ಕನ್ನಡಿಯು ಇನ್ನೊಂದು ಮಾತನ್ನು ಎತ್ತಿತು: 'ಏಕೆ? ಪಾಳಾದ ವಸ್ತುವೆಂದು ನನ್ನನ್ನು ಕೀಳೆಂದು ಬಗೆಯುವಿರಾ?' ಎಂದು.

'ಅಂತಹ ಅಪೂರ್ವಚರಿತೆ— ಅನುಭವಗಳೇನಿವೆ ನಿನಗೆ? ಜಾತಿ-ಮತ-ರಾಜಕಾರಣ ವೈವಿಧ್ಯದಿಂದ ಸೀಳಾದ ಭಾರತದಂತೆ ನಿನ್ನ ರೂಪ!' ಎಂದು ಕೇಳಿಬಿಟ್ಟೆ ನಿಟ್ಟುಸಿರಿಡುತ್ತ. ಅದು ನುಡಿಯುವಂತೆನಿಸಿತು:—'ಏಸಿರಿಯನ್ನು ಸಮಾಜವು ಅಸ್ಪೃಶ್ಯವೆಂದು ಬಗೆಯುವುದಿಲ್ಲ. ನೆಲದಲ್ಲಿದ್ದರೂ ಪರ್ವತದಲ್ಲಡಗಿದ್ದರೂ ನಾಗಾಲೋಟದಿಂದ ಜನರು ತರುವರು. ಹೀಗೆ ನನಗೆ ಅನೇಕ ಬಗೆಯ ವೇದನೆಯನ್ನುಂಟುಮಾಡಿ, ಕೊನೆಗೆ ಅತಿ ಚೆಲುವಿನ ಆಗರವನ್ನಾಗಿ ನನಗೆ ಒಬ್ಬ ಪರ್ತಕನು ರೂಪಿಟ್ಟನು. ಆಗ ನನ್ನ ಸುತ್ತಲೂ ಹೊಂಬಣ್ಣದ ಕಟ್ಟು, ಅಲ್ಲಲ್ಲಿ ಕೆತ್ತನೆಯ ಕಲಾಮಯ ಚಿತ್ರ, ಮಿರಿಮಿರಿ ಮಿಂಚುವ ನನ್ನ ಆವರಣ ನೋಡಿ ಅವನಿಗೆ ದಿಗಿಲಾಯಿತು; ತನ್ನದೇ ಆ ಕಲಾಕೃತಿಯೇ?—ಎಂದು ಮೈಮರೆಯುವಷ್ಟು!....

ಕನ್ನಡಿಯ ಮಾತುಗಳನ್ನು ಕೇಳುವಷ್ಟು ಕೇಳಿದೆ. ನಿಟ್ಟುಬಂದಿತು. 'ಏನು, ಗತವೈಭವದ ನೆನಹಿನ ಕಂಬದ ಮೇಲೆ ನಿನ್ನ ವಿಚಾರವೈಭವವೇ? ಬರೀ ಹಳೆಯ ಕಟ್ಟಡಗಳ ಮೇಲಿಂದ ನನ್ನ ರಾಷ್ಟ್ರವು ಹಾಗಿತ್ತು, ಸಂಸ್ಕೃತಿ ಇಷ್ಟು ಉಜ್ಜ್ವಲವಿತ್ತು ಎಂದು ಆಕಾಶದಲ್ಲಿ ಗಾಳಿಗೋಪುರ ಕಟ್ಟಿ ಬಡಬಡಿಸುವ ಸಂಶೋಧಕನ ಹೆಡ್ಡತನ ನನ್ನಲ್ಲಿಲ್ಲ—' ಎಂದು ಕನ್ನಡಿಯು ಮುಂದೆ ನಿಂತು ರಭಸದಿಂದೆ ಹೇಳಿದೆ.

'ಎಂತಹ ಬಿರುನುಡಿ!' ಎಂದು ಮರುಗುವಂತೆ ಕನ್ನಡಿ ಅಲ್ಲಾಡಿತು. ಆದರಿಂದುದುರಿದ ಧೂಳಿಯಕಣಗಳೇ ಕಣ್ಣೀರ ರೂಪವಾಯಿತೇನೋ! ಕೊನೆಗೊಮ್ಮೆ 'ನಿನ್ನ ಮಟ್ಟಿಗೆ ಸಪಾನುಭೂತಿ ಇದೆ; ಬೇಕಾದುದನ್ನು ಹೇಳು!' ಎಂದು ಅಲುಗದೆ ನಿಂತುಬಿಟ್ಟೆ.

'ಹೆಚ್ಚಳವಿದ್ದಿತೆಂದರೆ ಸಾಕು, ನನಗೆ ಹೆಮ್ಮೆ ಇದೆ! ಸಂಸ್ಕೃತಿ ಹಿಂದೆ ಇದ್ದುದಾಗಿದ್ದರೆ ಇಂದು ಮತ್ತೆ ಬರಲು ತಡವಿಲ್ಲ. ಇಂದು ಪಾಳಾಗಿದ್ದರೆ, ರಾಷ್ಟ್ರದ ಹಣೆಬರೆಹ ಬದಲಿಸಬಹುದು!' ಎಂದು ಬಿರುಕಿನೊಳಗಿಂದ ಶಬ್ದವಾಹಿನಿ ಹೊರಟಂತೆನಿಸಿತು.

'ಮಾತಿಗೆ ಮನಸೋತೆ' ಎಂದು ಗೋಣುಹಾಕಬೇಕೆನಿಸಿತು.

ಗುಂಗಾಡು, ಇಲಿ, ಇರುವೆಗಳ ಕೊರೆತವನ್ನು ಸಹಿಸದೆ ಅದು ವಿಲಿವಿಲಿ ಒದ್ದಾಡುವಂತೆ ಭಾಸವಾಯಿತೊಮ್ಮೆ. ನೆಟ್ಟಗೆ ಕನ್ನಡಿಯನ್ನೆತ್ತಿ ಪರಾಮರಿಸಹೋದೆ. ಅಷ್ಟರಲ್ಲಿಯೆ ಎಂತಹ ಬಿರುಗಾಳಿಯ ಸಿಡುಕು ಅದಕ್ಕೆ! 'ಛಿದ್ರೋಜ್ವನರ್ಥಾ ಬಹುಲೀ ಭವಂತಿ' ಎನ್ನುವುದು ಸುಳ್ಳಲ್ಲವೆಂದು ಮನದಟ್ಟಾಯಿತು ಆಗ.

ಒಂದು ಚಣ ಗಾಳಿಯ ಹೊಯ್ದಾಟಕ್ಕೆ ಸಿಲುಕಿದ ಕನ್ನಡಿಯು, ನಿಲುವಿನ ಭಂಗಿಯಲ್ಲಿಯೇ ತನ್ನ ಮೊಗದ ಕಲೆಗಳೊಳಗಿಂದ ತನ್ನ ಚರಿತೆ ಉಸಿರತೊಡಗಿತು:

"ಕೃಷ್ಣದೇವರಾಯ ದೊರೆಯ ದರಬಾರದಲ್ಲಿ ನನ್ನ ಆಸನವಿದ್ದಿತು. ಮೊದಲು ಅರಸನ ದರ್ಶನಮಾತ್ರ ಸಿಕ್ಕುತ್ತಿತ್ತು. ಒಮ್ಮೆ ರಾಣಿಯ ಮೋಹಕವಾದ ಕಣ್ಣಿಗೆ ನಾನು ಬಿದ್ದಾಗ, ಆಕೆ ಅರಸನಿಗೆ ದುಂಬಾಲುಬಿದ್ದು ಕಾಡತೊಡಗಿದಳು. ಅಂತೂ ನಾನು ಆಕೆಯ ಅಂತಃಪುರವನ್ನು ಸೇರಿದೆ. ಅನೇಕ ವೈಯಾರಿಯರ ಪಾಯ್ದಾಟ, ಗಲಭೆ, ಸಿಂಗರ ನೋಡುವುದೇ ನನ್ನ ಆಗಿನ ದಿನಚರಿ. ಆಯಿತು, ದಿನಗಳೆದು ನನಗೆ ವಯಸ್ಸಾದಂತೆ, ರಾಣಿಯು ನನ್ನ ಮೇಲಿನ ಮನಸ್ಸು ತೆಗೆದಳು. ಒಮ್ಮೆ ಸಂಗೀತಗಾರನೊಬ್ಬನಿಗೆ ಮೆಜ್ಜು ಎಂದು ನನ್ನನ್ನು ಸಲ್ಲಿಸಿದಳು. ಹೊಟ್ಟೆ ತುಂಬಿದ್ದಕ್ಕೆ— ಗಳಿಕೆ ಕಡಿಮೆಯಾದದ್ದಕ್ಕೆ— ನಿಮ್ಮ ಮನೆತನದ ಒಬ್ಬ ಮುತ್ತಜ್ಜನಿಗೆ ಮಾರಿಬಿಟ್ಟನಂತೆ ಅವನು. ಅಂದಿನಿಂದಲೂ ಇಂದಿನವರೆಗೆ ೬೦-೪೦ ತರುಷ ಮನೆಯ ಮಗನಂತೆ ಉಳಿದ ನನ್ನನ್ನು, ಅಂದಗೇಡಿಯಾಡುದಕ್ಕೆ ಬಿಸಾಡುವಿರಾ?" ಎಂದು ಮೊರೆ ಇಟ್ಟಿತು ಅದು.

'ಜಗತ್ತು ಕೃತಘ್ನವೆಂದು ಮೂಲೆಪಾಲಿದವರಾಗುವುದೇನು? ಇಳಿವಯಸ್ಸಿನಲ್ಲಿ ಎಲ್ಲರಿಗೆ ಬುದ್ಧಿ ಬರುವುದುಂಟು. ನಿನ್ನ ಪ್ರಾರಬ್ಧ!' ಎಂದು ವಿಹಾರಕ್ಕೆ ಹೊರಡಬೇಕೆಂದು ಪಾಕಿಂಗ್ ಸ್ಟಿಕ್ ಹುಡುಕತೊಡಗಿದೆ. ಯಾವಾಗಲಾದರೊಮ್ಮೆ ಉಪಯೋಗ ಬೀಳುವ ಆದಾದರೂ ಕನ್ನಡಿಯು ಹಿಂದೆಯೆ ಹೋಗಿರಬೇಕೆ? ಸಂಶೋಧನೆಮಾಡುವಾಗ ಮೈ ಜೀವರಿತು! ಗದ್ದಲದಲ್ಲಿ ಕನ್ನಡಿಯು ಮೂಲೆಯು ಹಳೆಯ ಗಡಿಯಾರಕ್ಕೆ ತಾಕಿತು. ಆಯಿತು. ಎರಡೂ ಹಳೆಯ ಮುಚ್ಚಿನ ಅವತಾರಗಳು! ಆ ಗಾಯದಲ್ಲಿ ಕನ್ನಡಿ ನುಡಿಯಿತು:

'ಅಯ್ಯೋ, ಉತ್ಸವಗಳಲ್ಲಿ ನಿಮ್ಮ ಮನೆಯನ್ನೇ ನಂಬಿ ಇದ್ದೆ. ಹೆಂಗಳೆಯರು ಮುಕ್ಕಳು ನನ್ನನ್ನು ನೋಡಿ ನಕ್ಕು ನಲಿದುದು ನೆನಪಿದೆ. ಹೆಂಗಳೆಯರ ನೋಟ ಎಂತಹದು ನನ್ನ ಮೇಲೆ!?'

'ಹಾಹಾ, ಹೆಂಗಳೆಯರ ನೋಟ ಸಂವಾದಿಸಿದುದೇ ನಿನ್ನ ದೊಡ್ಡಸ್ತಿಕೆಯೆ? ಆಯಿತು, ಗಂಡುಸಾದ ನಾನೇಕೆ ನಿನ್ನ ಕಡೆಗೆ ಕತ್ತೆತ್ತಿ ನೋಡಲಿ?'

'ಕದ್ದು ಕದ್ದು ಎಷ್ಟು ಸಲ ನೀವೇ ನನ್ನ ಮುಂದೆ ನಿಂತು, ಗದ್ದ, ಮೂಗು, ಕ್ರಾಪ್, ಗಲ್ಲಗಳನ್ನು ತಿದ್ದಿಕೊಂಡಿಲ್ಲ? ಎಂತಹ ಮರೆಗುಳಿತನವು! ನನ್ನ ಮುಂದೆ ಬರದಿದ್ದರೆ ನಿಮಗೆಲ್ಲಿ ಕಾವ್ಯಸ್ಫೂರ್ತಿ?' ಎಂದು ಗದರುಸುದನಿ ಬಂದಿತು.

(ಉಳಿದದ್ದು ಪುಟ ನೋಡಿರಿ).

೬೯. ಮುಲ್ಲಯುದ್ಧ

ಬರೆದವರು: ಶ್ರೀಮಾನ್ ಭೀಮರಾಯಪ್ಪ ಬಾಳಪ್ಪ ಮಮದಾಪೂರ; ಜಿ. ಎ. ಹೈಸ್ಕೂಲ್, ಬೆಳಗಾಂವಿ

ಕನ್ನಡದಲ್ಲಿ ಇದೊಂದು ಅಪೂರ್ವವಾದ ಪುಸ್ತಕ. '**ಮುಲ್ಲಯುದ್ಧ**' ಎಂದರೆ ಕುಸ್ತಿ, ಕನ್ನಡನಾಡಿನ ಜನಸಾಮಾನ್ಯರಿಗೆಲ್ಲ ಅತ್ಯಂತ ಪ್ರಿಯವಾದುದು. ಬಯಲು ನಾಡಿನ ಹಳ್ಳಿಹಳ್ಳಿಗೂ ಗರುಡಿಮನೆಗಳಿರುವುವು; ಕುಸ್ತಿಯಾಡುವ ಜಟ್ಟಿಗಳಿರುವರು. ಜೊನಕಾಲದ ಥಳುಕಿನ ಬಾಳೂ ದೇಶದ ದಾರಿದ್ರ್ಯವೂ ಸೇರಿ, ಜನತೆಯನ್ನು ಈ ಮುಲ್ಲಯುದ್ಧದಿಂದ ವಿಮುಖಗೊಳಿಸುತ್ತ ನಡೆದಿದೆಯಾದರೂ, ಪರಂಪರೆಗೆ ವಿಚ್ಛಿತ್ತಿಯನ್ನು ಇನ್ನೂ ತಂದು ಒದಗಿಸಿಲ್ಲ. ನಾಡಿನಲ್ಲಿ ಬೀರದ ಉತ್ಸಾಹವನ್ನು ಸಂತತವಾಗಿರಿಸಲಿಕ್ಕೆ ಮುಲ್ಲಯುದ್ಧದ ಪರಂಪರೆಯನ್ನು ಸಂರಕ್ಷಿಸುವುದು ತುಂಬ ಅವಶ್ಯಕ. ಈ ಬಗೆಯ ಪರಂಪರಾರಕ್ಷಣೆಗೆ ಸಹಕಾರಿಯಾಗುವಂತೆ, ಪ್ರಸ್ತುತ ಗ್ರಂಥವನ್ನು ಬರೆದು ಸಚಿತ್ರವಾಗಿ ಪ್ರಕಟಿಸಿದ ಶ್ರೀ. **ಮಮದಾಪುರ** ಅವರು ನಾಡಿನ ಅಭಿನಂದನೆಗೆ ಖಂಡಿತ ಪಾತ್ರರಾಗಿದ್ದಾರೆ.

ನಮ್ಮ ಹಳೆಯ ಕೆಲವು ಕಾವ್ಯಗಳಲ್ಲಿ ಮುಲ್ಲಯುದ್ಧದ ಬಣ್ಣನೆ ಅಲ್ಲಲ್ಲಿ ಬರುವುದುಂಟು. **ಕುಮಾರವ್ಯಾಸನ** ಮಹಾಭಾರತದ ವಿರಾಟಪರ್ವದಲ್ಲಿ ಬರುವ **ಜೀಮೂತ-ಭೀಮರ** ಮುಲ್ಲಯುದ್ಧ ಒಂದು '**ವಸ್ತಾದಿ**' ಮನೆತನಕ್ಕೇ ಸೇರಿದವನು. ಆರೇಳು ತಲೆಮಾರಿನಿಂದಲೂ ಈ ಮನೆತನದಲ್ಲಿ ಪ್ರಸಿದ್ಧ ಜಟ್ಟಿಗಳ ಪರಂಪರೆ ನಡೆದುಕೊಂಡು ಬಂದಿದೆ. ಇದರಲ್ಲಿಯ ಮುಲ್ಲಯುದ್ಧದ ರೀತಿ-ನೀತಿಗಳೂ, ನಿಲುವು ಲಾಗುಗಳೂ ಈ ಮನೆತನದ ವೈಶಿಷ್ಟ್ಯದಿಂದ ಕೂಡಿದುವಾಗಿವೆ. ಇವರ ಗರುಡಿಯಲ್ಲಿ ಪ್ರಚಾರದಲ್ಲಿರುವ ಪರಿಭಾಷೆಗಳನ್ನೇ ಈ ಪುಸ್ತಕದಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಕಾಲದ ವರ್ಣನೆಯಂತೂ ತುಂಬ ವಿಶದವಾಗಿದೆ. ಈ ವರ್ಣನೆಗಳಲ್ಲಿ ಮುಲ್ಲಯುದ್ಧಕ್ಕೆ ಸಂಬಂಧಿಸಿದ ಅನೇಕ ನಿಲುವು, ಹಿಡಿತ, ಪೇಚುಗಳ ಪರಿಭಾಷಾಪದಗಳು ಬಂದಿವೆ. ಆದರೆ ಹಿಂದಿನ ಪರಂಪರೆಯ ಶಬ್ದಗಳು ಪ್ರಚಾರದಲ್ಲಿ ಉಳಿಯದೆ ಹೋದುದರಿಂದ, ಅನೇಕ ಪರಿಭಾಷಾಪದಗಳಿಗೆ ಸರಿಯಾದ ಅರ್ಥವನ್ನೇ ಹಚ್ಚಲಿಕ್ಕಾಗುವುದಿಲ್ಲ. ಈ 'ಮುಲ್ಲಯುದ್ಧ' ಪುಸ್ತಕದಲ್ಲಿ, ಆ ಹಳೆಯ ಪರಂಪರೆಗೆ ಸೇರಿದ ಪರಿಭಾಷಾಪದಗಳ ಬಳಕೆಯೇನೂ ಆಗಿಲ್ಲವೆಂದು ತೋರುವುದು.

ಮುಲ್ಲಯುದ್ಧದ ಶಾಸ್ತ್ರೀಯ ವಿವೇಚನೆ ಈ ಗ್ರಂಥದಲ್ಲಿದೆಯಾದರೂ, ಬಳಸಿದ ಪರಿಭಾಷೆ ಕೇವಲ ಜಾನಪದ ಪದಗಳಿಂದ ಕೂಡಿದುದಾಗಿದೆ. ನಮ್ಮ ನಾಡಿನಲ್ಲಿ ಮುಲ್ಲಯುದ್ಧದ '**ವಸ್ತಾದಿ**'ಗಳ ಮನೆತನಗಳು ಅಲ್ಲಲ್ಲಿ ಕೆಲವು ಇವೆ. ಕೆಲವೊಂದು ವಿಶಿಷ್ಟ ಪೇಚುಗಳು ಕೆಲವೊಂದು ವಸ್ತಾದಿಗಳ ಮನೆತನದ ವೈಶಿಷ್ಟ್ಯಗಳಾಗಿವೆ. ಆ ಆ ಗರುಡಿಗೆ ಸೇರಿದ ಶಿಷ್ಯರಿಗಲ್ಲದೆ ಆ ಪೇಚುಗಳು ಇನ್ನೊಂದು ಗರುಡಿಯವರಿಗೆ ಗೊತ್ತಿರುವುದಿಲ್ಲ. ತೀರ ಪ್ರೀತಿಯ ಒಬ್ಬಿಬ್ಬ ಶಿಷ್ಯರಿಗಲ್ಲದೆ ಆ ಮಹತ್ತ್ವದ ಪೇಚುಗಳನ್ನು 'ವಸ್ತಾದಿ'ಗಳು ಮಿಕ್ಕವರಿಗೆ ಹೇಳುತ್ತಿರುವುದೂ ಇಲ್ಲ. ಪ್ರಸ್ತುತ ಪುಸ್ತಕಲೇಖನಕ್ಕೆ ಸ್ವಾನುಭವದಿಂದ ಸಹಕಾರವನ್ನು ಕೊಟ್ಟ **ಶ್ರೀಮಾನ್ ಮಾರುತಿ ಭೀಮಪ್ಪ ಉಪ್ಪಾರಟ್ಟಿ** ಎಂಬ ಹೆಸರಿನ ಪ್ರಸಿದ್ಧ ಜಟ್ಟಿ, ಮೊದಲು ಹೇಳಿದ

ಬೇರೆ ಬೇರೆ ಳಗ ಪೇಚುಗಳ ಸಚಿತ್ರ ವಿವರಣೆಗಳೂ, ಅವುಗಳಿಂದ ಪಾರಾಗುವುದಕ್ಕೆ 'ಉತಾರ (ತೋಡ್)'ಗಳೂ, 'ಪ್ರತಿಡಾವ'ಗಳೂ ಇದರಲ್ಲಿ ಪ್ರತಿಪಾದಿತವಾಗಿವೆ. ಅಲ್ಲದೆ ಒಂದೊಂದು ಪೇಚಿನಲ್ಲಿಯ ಒಳರೀತಿಗಳೂ ಅವುಗಳ 'ಉತಾರ'ಗಳೂ ಇದರಲ್ಲಿ ಬಂದಿವೆ. ಉದಾಹರಣೆಗಾಗಿ 'ಕೈಮುರಡಿ' ಎಂಬ ಪೇಚಿನಲ್ಲಿ ಬೇರೆ ಬೇರೆ ೧೩ ರೀತಿಗಳಿವೆ. 'ಸಕಿ'ಎಂಬುದರಲ್ಲಿ ಳ ಬಗೆಯ 'ಒಳಸಕಿ'ಗಳೂ 'ಹೊರಸಕಿ'ಗಳೂ ಉಂಟು. 'ಕುಸ್ತಿ'ಯನ್ನು ಕೌತುಕದಿಂದ ನೋಡುವವರು ನಮ್ಮಲ್ಲಿ ಹಲವು ಜನರು; ಆದರೆ ಅದಕ್ಕೊಂದು ಶಾಸ್ತ್ರಪರಂಪರೆಯಿದೆಯೆಂಬುದನ್ನು ಅರಿತವರು ತೀರ ಅಪರೂಪ. ಅಂತಪರೆಲ್ಲ ಈ ಪುಸ್ತಕವನ್ನು ಅವಶ್ಯವಾಗಿ ಓದಿಕೊಳಬೇಕು. ಪುಸ್ತಕದ ಕೊನೆಯ ಕೆಲವು ಪುಟಗಳಲ್ಲಿ, ಕುಸ್ತಿಯಾಡುವವರಿಗಾಗಿ ಕೆಲವು 'ಕಿವಿಮಾತು'ಗಳನ್ನೂ, 'ಕುಸ್ತಿಯ ಬಗ್ಗೆ ಕೆಲವು ನಿಯಮು'ಗಳನ್ನೂ, 'ಕುಸ್ತಿಯ ಕೆಲವು ಆಂತರರಾಷ್ಟ್ರೀಯ ನಿಯಮು'ಗಳನ್ನೂ ಕೊಡಲಾಗಿದೆ. ಇಂತಹ ಪರಂಪರಾ ಸಂರಕ್ಷಕ ಗ್ರಂಥಗಳು ಕನ್ನಡದಲ್ಲಿ ಅವಶ್ಯವಾಗಿ ಬೇಕು. ಮೊದಲಿಗರಾಗಿ ಮುಂದೆ ತಂದಿರುವ ಈ ಲೇಖಕರ ಕಾರ್ಯವು ತುಂಬ ಪ್ರಶಂಸನೀಯವಾಗಿದೆ.

—ಬಿ. ಪಾ. ಸಾ. ರಾವ್



ಕಳವಿನ ಪಚನ

ಶಿಕ್ಷಕ:— ಹುಂ....., ಎಲ್ಲರಿಗೂ ತಿಳಿತೇನು? ಕಳವು ಮಾಡಿ ಅದನ್ನು ಪಚನ ಮಾಡಿಕೊಳ್ಳೂದಂದರೆ ಯಾರಿಗೂ ಸಾಧ್ಯವಿಲ್ಲ....!

ಗುಂಡ:— ಸಾಧ್ಯಯಾಕಿಲ್ಲರೀ ಮಾಸ್ತರ್! ನಿಮ್ಮ ಮಗ ಸೋಮ್ಯಾಗ ಏನು ಧಾಡಿ ಆಗೇದ? ಒಳ್ಳೆ ಭೀಮಸೇನನ ಹಾಂಗ ಇದ್ದಾನಲ್ರಿ!

ಶಿಕ್ಷಕ:— ಇದೇನು ತಗದಿ–ನಿಂದೊಂದು ನಡುವೇ ಮತ್ತ? ನೀ ಅನ್ನೂದರ ಅರ್ಥಾ-ದರೂ ಏನು?

ಗುಂಡ:— ನಿನಂದರ ಏನ್ರೀ ಮಾಸ್ತರ್! ಮಂದೀ ಹಿತ್ತಲಕ್ಕ–ತೋಟಕ್ಕ–ನುಗ್ಗೂದು, ಅಲ್ಲಿರುವ ಹಣ್ಣು-ಹಂಪಲಾ ಕಳವುಮಾಡೂದು ಅಂದರ, ನಿಮ್ಮ ಸೋಮ್ಯಾಗ ಸಹಜ ಪಾತಾ-ಗೇದರಿ; ಅಲ್ಲದೆ ಕದ್ದು ತಂದದ್ದರೊಳಗ ಒಬ್ಬರಿಗೆ ಒಂದು ಚೂರನ್ನೂ ಕೊಡದs ಒಬ್ಬನೇ ಎಲ್ಲಾ ನುಂಗಿಬಿಡತಿರತಾನ! ಅಂವಗ ಅಹಚನ ಎಂದಾದರೂ ಆಗೇದೇನು, ನೀವೇ ಹೇಳ್ರಿ ಮಾಸ್ತರ್!

ವಿಮಾನದಾಳಿಯ ಮೌಜು

"ವಿಮಾನದಾಳಿಯ ಸೂಚನೆ ಆದ ಕೂಡಲೆ ಎಲ್ಲರೂ ತಂತಮ್ಮ ಮನೆಗಳಿಗೆ ಹೋಗಿ ಕುಳಿತು ಬಿಡಬೇಕು; ಯಾರೂ ಮನೆಬಿಟ್ಟು ಹೊರಬೀಳಬಾರದು; ತಿಳಿಯಿತೇನು?"

"ಜೀವ ಬ್ಯಾಡಾದವರು ಮನೆ ಬಿಟ್ಟು ಹೊರಗೆ ಹೋದಾರು; ನನಗೇನು ಜೀವ ಬೇಕಾಗಿಲ್ಲವೇ? ಸುಖವಾಗಿ ನಾನು ಮಾಳಿಗೆ-ಯನ್ನೇರಿನಿಂತು, ವಿಮಾನದಾಳಿಯ ಮೌಜನ್ನು ನೋಡತೇನಿ. ಅದೇನು ಮನೀ ಬಿಟ್ಟು ಹೊರ ಬಿದ್ದಂತಾಗಲಿಲ್ಲವಲ್ಲ!"

ಕವಡಿಯಷ್ಟೂ ಹಾನಿಯಿಲ್ಲ!

ನ್ಯಾಯಾಧೀಶ:— ಗೊತ್ತಾಯಿತೇನು? ನೀನು ಹೊಡೆದದ್ದರಿಂದ ಫಿರ್ಯಾದಿಯು ಎರಡು ತಿಂಗಳ ವರೆಗೆ ಕೆಲಸಕ್ಕೆ ಹೋಗದೆ ಮನೆಯಿಂದಿದು ಕೂಡಬೇಕಾಯಿತು. ನೀನೀಗ ಅವನಿಗಾಗಿರುವ ಹಾನಿಯನ್ನು ತುಂಬಿ ಕೊಡಬೇಕಾಗುವುದು!

ಆರೋಪಿ:— ಅದರ ರಾವ್‌ಸಾಬ್, ಅಂವಗ ಒಂದು ಕವಡಿಯಷ್ಟು ಸುದ್ದಾ ಹಾನಿ ಆಗಿಲ್ಲರಿ! ನಾ ಹೊಡೆಯೂದಕ್ಕಿಂತಾ ಮೊದಲು ಅರು ತಿಂಗಳಿಂದsನೂ ಅಂವ ಕೆಲಸ ಇಲ್ಲದೇ ಮನೀ ಹಿಡಿದು ಕೂತಿದ್ದನ್ರಿ ದೇವರೂ! ಬೇಕಾದರ ಓಣ್ಯಾಗೆಲ್ಲಾ ಮಂದಿನ್ನ ಕೇಳಿಕೊಳ್ರಿ ಸಾಹೇಬ್!

* * *

ಅವಳು, ಅವಳ ಫೋಟೊ

"ನೋಡು, ನನಗ ಅವಳಿಗಿಂತಾ ಅವಳ ಫೋಟೋ ಹೆಚ್ಚು ಸೇರತsದ!"

"ಅಂದರ ಏನು? ಫೋಟೋದ ಒಳಗ ಹೆಚ್ಚು ಸುಂದರ ಕಾಣಿಸತಾಳೇನು?"

"ಛೇ, ಛೇ! ಹಾಂಗಲ್ಲ! ಫೋಟೋ ಏನೂ ಮಾತಾಜೂದಿಲ್ಲ!"

* * *

ಎರಡು ಪ್ರತ್ಯಕ್ಷ ಉದಾಹರಣೆಗಳು!

ರಂಗಣ್ಣ:— ಬುದ್ಧಿವಂತಿಕೆ ಮತ್ತು ದೀರ್ಘೋದ್ಯೋಗ ಇವುಗಳ ಬಲದಿಂದ ದೀನನು ಧನಪತಿಯಾಗುತ್ತಾನೆ-ಎಂಬುದಕ್ಕೆ ಪ್ರತ್ಯಕ್ಷ ಉದಾಹರಣೆಯೆಂದರೆ ನಮ್ಮ ಕಂದೆಯವರು!

ಮುಂಗೇಶ:— ಅಹುದು! ಅದರಂತೆಯೆ ಬುದ್ಧಿಹೀನತೆ ಮತ್ತು ನಿರುದ್ಯೋಗಗಳ ಬಲದಿಂದಲೂ ಮನುಷ್ಯನು ಲಕ್ಷಾಧೀಶ-ನಾಗುವನೆಂಬುದಕ್ಕೆ ಪ್ರತ್ಯಕ್ಷ ಉದಾಹರಣೆಯೆಂದರೆ ಆ ಧನಪತಿಯಾದ ತಂದೆಯ ಮಗ; ಅಲ್ಲವೆ?

* * *

ಅಪರಾಧಿಯ ಕೋರಿಕೆ

ನ್ಯಾಯಾಧೀಶ:— ಈಗ ನೀನು ಮಾಡಿದ ಅಪರಾಧಕ್ಕಾಗಿ ನಿನಗೆ ಮೂರು ವರ್ಷದ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ; ಇನ್ನೇನಾದರೂ ಹೇಳಬೇಕಾಗಿದೆಯೇ ನಿನಗೆ?

ಅಪರಾಧಿ:— ಹೌದರೀ ರಾವ್‌ಸಾಬ್, ಒಂದು ತಮಗ ಹೇಳಿಕೊಳ್ಳಬೇಕಾಗೈತಿರಿ! ದಯವಾಡಿ ನನ್ನ ಈ ಸಾರಿಗೆ ಯತೋಡಾ ಜೇಲಿಗೆ ಕಳಿಸದೆ ಬ್ಯಾರೆ ಕಡೆಗೆ ಕಳಿಸೂ ಹಾಂಗ ಮಾಡ್ರಿ ದೆವರು! ಇದಕಿಂತಾ ಮೊದಲ ಆರು ಸಾರೆ ಅಲ್ಲೇ ಇದ್ದು ಇದ್ದು, ಆ ಜೇಲು ನನಗ ಬ್ಯಾಸರಿಕಿ ಬಂದು ಹೋಗೇತ್ರಿ!


ಹಾರ್ಮೋನಿಯಂ ಶಿಕ್ಷಕ
ಈ ಪುಸ್ತಕದ ಸಹಾಯದಿಂದ ಫಿಡಲ್, ಸಿತಾರ್, ಕೊಳಲು, ಬಿರಬಾ, ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ಸಹಾಯವಿಲ್ಲದೆ ಕಲಿಯಲು ಅನುಕೂಲವಾದದ್ದು — ಸುಮಾರು ೨೦೦ — ಹಿಂದುಸ್ತಾನಿ ಟಿಯು, ಗ್ರಾಮೋಫೋನ ರಿಕಾರ್ಡಿನಲ್ಲಿಯ ಪದಗಳ ನೋಡಿ-ಕನಗಳಿರುವವು.

ಸೋಲ್ ಎಜಂಟರು.
ವಾಗ್ವಿಲಾಸ ಬುಕ್‌ಡಿಪೊ, ಹುಬ್ಬಳ್ಳಿ

ನಾಲ್ಕೂ ನಿಟ್ಟಿನ ನೋಟ

ಬುದ್ಧಿಯ ಬರಗಾಲ

ಇಂದು ನಮ್ಮಲ್ಲಿ ಸರ್ವಸಾಮಾನ್ಯವಾದ ಆಹಾರದ ಬರಗಾಲದೊಡನೆ ಬುದ್ಧಿಮತ್ತೆಗೂ ಬರಗಾಲ ಒದಗಿದೆ ಎಂದು ಹೇಳುವ ಪ್ರಸಂಗ ಬಂದಿದೆ. ಸದ್ಯದ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯನ್ನೂ ಅದರ ದುರಂತನಾಟಕದೊಳಗಿನ ಒಂದು ಹಾಸ್ಯದೃಶ್ಯದಂತಿದ್ದ ಕೇಂದ್ರ ಶಾಸನಸಭೆಯ ಚಟುವಟಿಕೆಯನ್ನೂ ನೋಡಿದರೆ ಸಾಕು—ನಮ್ಮ ಅಭಿಪ್ರಾಯವನ್ನು ಹೆಚ್ಚು ಪರಿಶ್ರಮದಿಂದ ಸಾಧಿಸಿಕೊಳ್ಳುವ ಅಗತ್ಯವೆ ಇಲ್ಲ. ಯುದ್ಧದ ಕಲ್ಪನೆ ಕೂಡ ಹುಟ್ಟುವ ಕೆಲವರ್ಷಗಳ ಮುಂಚಿತವಾಗಿ ಜನಾಯಿತವಾಗಿದೆ ಈ ಕೇಂದ್ರ ಶಾಸನಸಭೆ; ಇಂದಿನ ಜನತೆಯ ಮನೋವಿಚಾರಗಳಿಗೂ ಈ ಶಾಸನಸಭೆಯ ಸದಸ್ಯರಿಗೂ ಸಂಬಂಧವೆ ಉಳಿದಿಲ್ಲ; ಅದರಲ್ಲಿ ಬಹುಸಂಖ್ಯಾಕರಾದ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಜರಿರುವಂತಿಲ್ಲ; ಇಂತಹ 'ಅಪ್ರತಿ(ನು)ನಿಧಿ' ಯಾವ ಸಭೆಯ ಒಪ್ಪಿಗೆ ದೇಶದ ಪ್ರಜೆಗಳ ಒಪ್ಪಿಗೆ ಎಂದು ಸರಕಾರವು ಪರದೇಶಗಳಲ್ಲಿ ಸಾಧಿಸಿಕೊಳ್ಳಬಹುದಾಗಿದೆ. ಕಾಲ ಹೊಸತು, ಬುದ್ಧಿ ಹಳೆಯದು, ಅದಕಾಗಿ ಬೆಳೆಇಲ್ಲ. ಬುದ್ಧಿಮತ್ತೆಯ ಬರಗಾಲದ ಇದೊಂದು ಮಾದರಿ! ಇನ್ನೊಂದು ಕಡೆ, ಮಧ್ಯಸ್ಥರ ಪಕ್ಷ. ಪ್ರಜೆಗಳ ಪ್ರತಿನಿಧಿಗಳು ಕಾರಾಗೃಹದಲ್ಲಿ, ಸರಕಾರದ ಪಕ್ಷದವರು ಶಾಸನಸಭೆಗಳಲ್ಲಿ—ಯಾವ ಸ್ಥಳವನ್ನೂ ನಿಶ್ಚಯಿಸಿಕೊಳ್ಳದ ಮಧ್ಯಸ್ಥರು. ಈ ಮಧ್ಯಸ್ಥರಿಗೆ ತಮಗೆ ಬೇಕಾದ ಸ್ಥಳ ಯಾವುದೆಂಬುದರ ನಿರ್ಣಯವಿಲ್ಲದ್ದಕ್ಕೆ ಅವರ ವಿಚಾರಗಳಿಗೆ ಪೋಷಣೆಯೆ ದೊರೆಯದಂತಾಗಿದೆ. ಬುದ್ಧಿಮತ್ತೆಯ ಬರಗಾಲಕ್ಕೆ ಇದು ಎರಡನೆಯ ಮಾದರಿ!

ಸಾವಿನ ಸಂಕಟ

ಈ ಪರಿಸ್ಥಿತಿಯು ಮೋಜು ಇಲ್ಲಿಗೇ ಮುಗಿಯಲಿಲ್ಲ. ರುಂಡ ಕಡಿದು ಬಿದ್ದರೂ ಕೆಲಗಳಿಗೆ ಬರಿಯ ಧಡನೆ ಓಡಾಡುವ ಕೋಳಿಯ ದೃಷ್ಟಾಂತದಲ್ಲಿಯಂತೆ, ಜೀವ ಹೋದರೂ ಒಂದೆರಡು ಗಳಿಗೆ ಮಿಸುಕಾಡುವ ಶಕ್ತಿಯನ್ನು ತೋರಿಸಿತು ಈ ಕೇಂದ್ರಶಾಸನಸಭೆ. ಸಾಮಾನ್ಯವಾಗಿ ಲೋಕನಿಯುಕ್ತವಾದ ಒಬ್ಬ ಸದಸ್ಯನೂ ಸರಕಾರದ ನೀತಿಗೆ ತನ್ನ ಸಮ್ಮತಿಯನ್ನು ತೋರಿಸಿಲ್ಲ. 'ಕಾಂಗ್ರೆಸ್ ಮುಂದಾಳುಗಳನ್ನು ಬಂಧಮುಕ್ತಮಾಡಿದ ಹೊರತು ದೇಶದಲ್ಲಿ ಯುದ್ಧಸನ್ನಾಹವು ಸಮಾಧಾನಕಾರಕವಾಗಿ ಸಾಗುವುದಿಲ್ಲ'. ಎಂದು ಕಾಂಗ್ರೆಸೇತರ ಪಕ್ಷದವರು ಸಾರಿದ್ದಾರೆ. 'ಕಾಂಗ್ರೆಸೂ ಬೇಡ, ಮುಸ್ಲೀಂ ಲೀಗೂ ಬೇಡ; ಆದರೆ ಆ ಪಕ್ಷಗಳ ಹೊರಗಿದ್ದು ಜನತೆಯ ಆದರ-ವಿಶ್ವಾಸಗಳಿಗೆ ಪಾತ್ರರಾದ ಭಾರತೀಯ ಮುಂದಾಳುಗಳಿದ್ದಾರೆ; ಅವರಿಗೆ ಯುದ್ಧ ಮುಗಿಯವರೆಗೆ ಆಡಳಿತದ ಅಧಿಕಾರವನ್ನೂ ಸ್ವಾತಂತ್ರ್ಯವನ್ನೂ ಬ್ರಿಟಿಶರು ಬಿಟ್ಟುಕೊಡಬಾರದೇಕೆ' ಎಂದು ಕೆಲವರು ವಾದಿಸಿದ್ದಾರೆ. 'ಕಾಂಗ್ರೆಸಿನ ಮೇಲೆ ನಿಮ್ಮ ವಿಶ್ವಾಸವಿಲ್ಲದಿದ್ದರೆ ಹೋಗಲಿ; ಮುಸ್ಲೀಂಲೀಗಿನ ಮೇಲೆ ವಿಶ್ವಾಸವಿದೆಯೆ? ಕೊನೆಗೆ ಯಾರಮೇಲೆ ವಿಶ್ವಾಸವಿದೆ ಅಂತಹ ಭಾರತೀಯರಿಗೆ ಆಡಳಿತಯ ಸ್ವಾತಂತ್ರ್ಯವನ್ನು ಕೊಡಿರಿ' ಎಂದು ಮುಸ್ಲೀಂ ಲೀಗ ಸದಸ್ಯಪಕ್ಷದ ಉಪನಾಯಕರು ಹೇಳಿದ್ದಾರೆ. 'ದೇಶದಲ್ಲಿ ಒಂದು ರಾಜಕೀಯ ಪಕ್ಷವೂ ಸರಕಾರಕ್ಕೆ ಬೆಂಬಲವನ್ನು ಕೊಟ್ಟಿಲ್ಲವಲ್ಲ' ಎಂದು ಇನ್ನೊಬ್ಬ ಮುಸ್ಲೀಂ ಲೀಗ ಸದಸ್ಯರು ಕೆಣಕಿದ್ದಾರೆ. ಇಷ್ಟಾದರೂ ಬ್ರಿಟಿಶ್ ಸರಕಾರವು ತನ್ನ ನೀತಿಯನ್ನು ಬದಲಾಯಿಸಲು ಸಿದ್ಧವಿಲ್ಲ. ಬುದ್ಧಿಮತ್ತೆಯ ಬರಗಾಲದ ಮೂರನೆಯ ಮಾದರಿ ಇದು!

ಪ್ರಚಾರದ ಕತ್ತರಿ

ಒಂದು ದೃಷ್ಟಿಯಿಂದ ಹೇಳುವುದಾದರೆ, ಕೇಂದ್ರಶಾಸನಸಭೆಯ ಸದಸ್ಯರು ತಮ್ಮ ವಿಚಾರಶಕ್ತಿಯನ್ನೆ ಕಳೆದುಕೊಂಡಿದ್ದಾರೆನಬಹುದು. 'ಭಾರತದಲ್ಲಿ ಯಾವ ರಾಜಕೀಯ ಪಕ್ಷವೂ ಬ್ರಿಟಿಶ್ ನೀತಿಗೆ ಬೆಂಬಲವನ್ನು ಕೊಟ್ಟಿಲ್ಲ' ಎಂದು ಹೇಳುವುದು ಸತ್ಯವೆನಿಸಬಹುದಾದರೂ ಸಮರ್ಪಕವೆನಿಸುವುದಿಲ್ಲ. ಯಾಕೆಂದರೆ, ಸರ್ವಾಧಿಕಾರಿಗಳನ್ನು ಸೋಲಿಸಬೇಕೆಂಬ ಬ್ರಿಟಿಶರ ಯುದ್ಧನೀತಿಗೆ ಎಲ್ಲ ರಾಜಕೀಯ ಪಕ್ಷಗಳ ಬೆಂಬಲವಿದೆ; ಬೆಂಬಲವಿಲ್ಲದ್ದು ಭಾರತವನ್ನು ಆಳುವ ನೀತಿಗೆ. ಆದರೆ ಸದ್ಯಕ್ಕೆ ಯುದ್ಧವೆ ಮುಖ್ಯವಿಷಯವೆಂದೂ ಭಾರತೀಯರು ಅದನ್ನು ಬದಿಗೆ ಸರಿಸಿ ತಮ್ಮ ಒಳಜಗಳದ ಪ್ರಶ್ನೆಗೆ ಹೆಚ್ಚು ಮಹತ್ತ್ವವನ್ನು ಕೊಡುತ್ತಿರುವರೆಂದೂ ಬ್ರಿಟಿಶರ ಪ್ರಚಾರವು, ಈಗಾಗಲೆ ಅನೇಕ ಅಮೇರಿಕನ್ನರ ಬುದ್ಧಿಯನ್ನು ಕಲುಷಿತಗೊಳಿಸಿದೆ. ಈ ಕಾರಣಕ್ಕಾಗಿಯೂ ಬ್ರಿಟಿಶರು—ಯುದ್ಧ ನೀತಿಗೆ ಬೆಂಬಲ ದೊರೆವವರೆಗೆ — ಈ ರಾಜಕೀಯ ಪ್ರಶ್ನೆಗೆ ಬೆಂಬಲವಿಲ್ಲದ್ದಕ್ಕೆ ಮಹತ್ತ್ವವನ್ನು ಕೊಡುವುದಿಲ್ಲ. ಇನ್ನು ಒಂದು ಮಾತು: ಯಾರ ಬೆಂಬಲವಿಲ್ಲ ನಿಜ; ಆದರೆ ಯಾರ ವಿರೋಧವೂ ಇಲ್ಲವಲ್ಲ! (ಕಾಂಗ್ರೆಸಿನ ವಿರೋಧ ಕೂಡ ಇಲ್ಲ, ಯಾಕೆಂದರೆ ವಿರೋಧವನ್ನು ಹೂಡುವ ಮುಂಚೆಯೆ ಕಾಂಗ್ರೆಸು ಕಾರಾಗೃಹಸಂಸ್ಥಿತವಾಯಿತು.) ಯಾರಾದರೂ

ಸರಕಾರವನ್ನು ಎದುರಿಸಿದರೆ, ಇಂತಹ ಸಮಯದಲ್ಲಿ ಹಾಗೆ ಮಾಡುವುದೆಂದರೆ ಯುದ್ಧನೀತಿಗೆಯೆ ವಿರೋಧ ಮಾಡಿದಂತಾಗುವುದು, ಎಂದರೆ ಪ್ರಜಾಸತ್ತೆಯ ಶತ್ರುವಾದ ಸರ್ವಾಧಿಕಾರಿತ್ವಕ್ಕೆ ಸಹಾಯ ಮಾಡಿದಂತಾಗುವುದು—ಎಂದು ಸರಕಾರವೆ ಪ್ರಚಾರವನ್ನು ಕೈಕೊಳ್ಳುವುದು. 'ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಬೇಕು' ಎಂದರೆ ಅದು ಯುದ್ಧಕಾರ್ಯಕ್ಕೆ ವಿರೋಧ; ಯುದ್ಧಕಾರ್ಯಕ್ಕೆ ಸಹಾಯ ಮಾಡುವವರೆಲ್ಲ ಹಿಂದುಸ್ತಾನದ ಸ್ವಾತಂತ್ರ್ಯಕ್ಕೆ ಹಟಹಿಡಿದವರಲ್ಲವಂತೆ! ಪ್ರಚಾರದಿಂದಲೂ ದಬ್ಬಾಳಿಕೆಯಿಂದಲೂ ಸರಕಾರವು ನಮ್ಮ ದೇಶದ ಪರಿಸ್ಥಿತಿಯನ್ನು ಈ ಮಟ್ಟಕ್ಕೆ ತಂದಿದೆ.

ತ್ರಿಶಂಕುವಿನ ಕೊಳಲಾಟ

ಸರ್ ತೇಜ್ ಬಹಾದ್ದೂರ್ ಸಪ್ರು, ಬ್ಯಾ. ಜಯಕರ, ಶ್ರೀ. ರಾಜಾಜಿಯವರು ಮೊದಲಾದ ಮಧ್ಯಸ್ಥ ಮುಂದಾಳುಗಳು ಸರಕಾರದ ಈ ಚಾತುರ್ಯಕ್ಕೆ ಸಾಕಷ್ಟು ಲಕ್ಷ್ಯವನ್ನು ಕೊಟ್ಟಿಲ್ಲ; ಆದಕ್ಕಾಗಿಯೆ ಇದುವರೆಗೆ ಅವರಾಗಲಿ ಪರಿಸ್ಥಿತಿಯಾಗಲಿ ಹಿಂದೂ ಸರಿದಿಲ್ಲ, ಮುಂದೂ ಸರಿದಿಲ್ಲ; ಮಧ್ಯಸ್ಥವಾಗಿಯೆ ಉಳಿದಿದೆ ಎಂದು ಹೇಳಬಹುದು. ಮಧ್ಯಸ್ಥರು ಒಮ್ಮತದ ಬೇಡಿಕೆಯನ್ನು ಮಾಡುವರೆಂದು ತಿಳಿಯುವ; ಅದಕ್ಕೆ ಸರಕಾರದ ಧೋರಣವೇನು? 'ಇವರು ಯಾವ ಪಕ್ಷಕ್ಕೂ ಸೇರಿದವರಲ್ಲ, ಆದ್ದರಿಂದ ಇವರಿಗೆ ಜನತೆಯ ಬೆಂಬಲವಿಲ್ಲ, ಆದಕ್ಕಾಗಿ ಇವರ ಮಾತನ್ನು ಕೇಳುವಂತಿಲ್ಲ' ಎಂದಲ್ಲವೆ? 'ಕಾಂಗ್ರೆಸಿನ ಮುಂದಾಳುಗಳನ್ನು ಬಂಧಮುಕ್ತ ಮಾಡಿದರೆ ಪರಿಸ್ಥಿತಿ ಸುಧಾರಿಸುವುದು' ಎಂದು ಮಧ್ಯಸ್ಥರು ಹೇಳಿದರೆ 'ಕಾಂಗ್ರೆಸು ಯುದ್ಧಕಾರ್ಯಕ್ಕೆ ವಿರೋಧವನ್ನು ಮಾಡಿ ಸರ್ವಾಧಿಕಾರಿಗಳಿಗೆ ಸಹಾಯಕವಾಗುವುದು, ಸ್ವಾತಂತ್ರ್ಯತತ್ತ್ವಕ್ಕೆ ಶತ್ರುವಾಗುವುದು' ಎನ್ನುವುದು ಸರಕಾರ. 'ನೀವೇ ಮುಂದಾಗಿ ಸ್ವಾತಂತ್ರ್ಯ ಕೊಟ್ಟರೆ ಕಾಂಗ್ರೆಸು ವಿರೋಧಮಾಡುವುದಿಲ್ಲ' ಎಂದು ಮಧ್ಯಸ್ಥರು ಹಟ ತೊಟ್ಟರೆ 'ನಿಮ್ಮ ನಿಮ್ಮಲ್ಲಿಯೆ ಐಕ್ಯವಿಲ್ಲ, ಯಾರಿಗೆಂದು ಅಧಿಕಾರವನ್ನು ಒಪ್ಪಿಸುವುದು?' ಎಂದು ಸರಕಾರವು ಸಾಧಿಸುವುದು. ಒಂದು ವೇಳೆ ಮಿಕ್ಕ ಪಕ್ಷಗಳೊಡನೆ ಕಾಂಗ್ರೆಸಿನ ಒಮ್ಮತವಾಗುವುದೆಂದರೆ 'ಒಟ್ಟು ಈ ಕಾಂಗ್ರೆಸಿನ ನೀತಿಯಲ್ಲಿಯೆ ನಮಗೆ ವಿಶ್ವಾಸವಿಲ್ಲ' ಎಂದು ಸರಕಾರವೂ ಹಟ ತೊಡುವುದು. 'ಹಾಗಾದರೆ ನಿಮ್ಮ ವಿಶ್ವಾಸವಿದ್ದವರಿಗೆ ಅಧಿಕಾರವನ್ನು ಒಪ್ಪಿಸಿರಿ' ಎಂದರೆ 'ಈಗಾಗಲೆ ಅಧಿಕಾರವನ್ನು ಒಪ್ಪಿಸಿದ್ದೇವೆ, ವೈಸರಾಯರ ಕಾರ್ಯಕಾರಿ ಮಂಡಳದಲ್ಲಿ ಹಿಂದೀಯರೇ ಹೆಚ್ಚಾಗಿದ್ದಾರೆ' ಎಂದು ಸುತ್ತಾಡಿ ಮತ್ತೆ ಮೊದಲಿನ ಸ್ಥಿತಿಗೆಯೆ ಬಂದು ನಿಲ್ಲುವುದು ಈ ವಾದ. ಹೀಗಾಗಿ ಮಧ್ಯಸ್ಥರ ಸ್ಥಿತಿ ತ್ರಿಶಂಕುವಿನಂತೆ ಆಗಿದೆ. ಇತ್ತ ಕಾಲನ್ನೂ ಊರುವಂತಿಲ್ಲ, ಇತ್ತ ತಲೆಗೂ ಬಡೆವಂತಿಲ್ಲ!

ನಿರುಪಾಯದ ನಿರ್ಣಯ

ನಿಜವಿದ್ದ ಮಾತೆಂದರೆ ಇಂದು ನಮ್ಮ ರಾಜಕೀಯ ರಂಗದಲ್ಲಿ ಸ್ವತಂತ್ರ ವಿಚಾರಕ್ಕೆ ತಕ್ಕ ವಾತಾವರಣವಿಲ್ಲ. ಇದಕ್ಕೆ ಮುಖ್ಯ ಕಾರಣಗಳು ಎರಡು: (೧) ಕ್ರಿಪ್ಸ್‌ಯೋಜನೆಯ ನಾಟಕ, (೨) ಜಪಾನದ ದಾಳಿಯ ಭೀತಿ. ಕ್ರಿಪ್ಸ್ ನಾಟಕ ನಡೆದಂದಿನಿಂದ ಕೆಲವು ಭಾರತೀಯ ರಾಜಕಾರಣಿಗಳ ಧೋರಣವೆ ಬದಲಾಯಿಸಿದಂತಿದೆ. ಯುದ್ಧ ಮುಗಿದಾಕ್ಷಣ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಡುವೆವೆಂಬ ಬ್ರಿಟಿಶರ ಮಾತಿನಲ್ಲಿ ಅನಿವಾರ್ಯವಾಗಿಯಾದರೂ ವಿಶ್ವಾಸವನ್ನಿಡಲೇ ಬೇಕೆಂದು ಈ ಜನರ ಆಗ್ರಹ. 'ಯುದ್ಧಕಾಲದಲ್ಲಿ ಬ್ರಿಟಿಶರು ಇದಕ್ಕಿಂತ ಮುಂದೆ ಹೋಗಲಾರರೆಂದು ಮನಗಂಡು, ಪೂರ್ತಿಯಾಗಿ ಅಸಹಕಾರ ಮಾಡುವುದಕ್ಕಿಂತ ಇದ್ದುದನ್ನು ಸ್ವೀಕರಿಸಿ ಅದನ್ನೇ ಅನುಕೂಲವಾಗಿ ಮಾರ್ಪಡಿಸಿಕೊಳ್ಳುವುದು ಬುದ್ಧಿಮತ್ತೆಯ ಲಕ್ಷಣ' ಎಂದೂ ಈ ಜನರ ಅಭಿಪ್ರಾಯ. ಶ್ರೀ. ಅಣೆಯವರು ಈ ವಿಚಾರದವರು. ಯುದ್ಧಕ್ಕಾಗಿ, ಯುದ್ಧಕಾರ್ಯಕ್ಕಾಗಿ ಹಿಂದೀಯರ ಮನಸ್ಸನ್ನೊಲಿಸಲು ಬ್ರಿಟಿಶರು ಕ್ರಿಪ್ಸ್‌ಯೋಜನೆಗಿಂತಲೂ ಹೆಚ್ಚಿನ ಔದಾರ್ಯವನ್ನು ತೋರಿಸಬಾರದೇಕೆ?— ಎಂಬುದಕ್ಕೆ ಶ್ರೀ. ಅಣೆಯವರು ಇತ್ತೀಚಿನ ತಮ್ಮ ಭಾಷಣದಲ್ಲಿ ಒಂದು ಉತ್ತರವನ್ನು ಸೂಚಿಸಿದ್ದಾರೆ. ಅದೆಂದರೆ, ಬ್ರಿಟಿಶರಿಗೆ ಭಾರತೀಯರಲ್ಲಿ ಸಾಕಷ್ಟು ವಿಶ್ವಾಸವಿಲ್ಲವಂತೆ! ಎಂತಹ ಚಮತ್ಕಾರ! ಈ ಮಾತಿನಿಂದ ಅಣೆಯವರಂತಹ ದೇಶಹಿತನಿಷ್ಠರಿಗೆ ಸಮಾಧಾನವಾಗುವಂತಿದ್ದರೆ ಎಂತಹ ದುರ್ಭಾಗ್ಯ! ತಮ್ಮ ವಿಶ್ವಾಸವಿಲ್ಲದವರಿಂದ ಯುದ್ಧಕಾರ್ಯವನ್ನು ಬ್ರಿಟಿಶರು ದೊರೆಕಿಸಿಕೊಳ್ಳಬಹುದಾಗಿದೆಯೆ? ನೂರಾರು ವರ್ಷಗಳ ಸಹಕಾರಕ್ಕೆ ಅವಿಶ್ವಾಸವೇ ಫಲವಾಗಿದ್ದರೆ ಈ ಸ್ಥಿತಿ ಯಾರಿಗಾದರೂ ಗೌರವವೆನಿಸೀತೆ? ಜನತೆಯಲ್ಲಿ ವಿಶ್ವಾಸವಿಲ್ಲದ ಸರಕಾರವು ರಾಜ್ಯವನ್ನು ನಡೆಸುವುದೆಂದರೆ ಇದಾವ ಪ್ರಜಾಸ್ವಭುತ್ವದ ಮಾದರಿ? ಇದೂ ಅಲ್ಲದೆ, ಇಷ್ಟು ವರ್ಷಗಳ ತರುವಾಯದಲ್ಲೂ ವಿಶ್ವಾಸವನ್ನಿಡದವರು, ಯುದ್ಧ ಮುಗಿದಾಕ್ಷಣ ವಿಶ್ವಾಸವನ್ನಿಡುವುದು ಶಕ್ಯವೆ? ಸಹಜವೆ? ಹೀಗಾಗಿ ಯುದ್ಧದ ತರುವಾಯದಲ್ಲಿ ಸ್ವಾತಂತ್ರ್ಯವನ್ನು ಕೊಡುವೆವೆಂಬ ಇವರ ಮಾತಿನಲ್ಲಿ ಏನೆಂದು ವಿಶ್ವಾಸವನ್ನಿಡಬೇಕು? ಆದರೆ ಅಣೆಸಾಹೇಬರು— ಈಗ ವಯೋವೃದ್ಧರೆಂದೊ ಏನು—ಇಷ್ಟೊಂದು ಬುದ್ಧಿಯ ಜುರುಕನ್ನು ತೋರಿಸಲೊಲ್ಲರು. ನಿರುಪಾಯತೆಯ ವಿಚಾರಕ್ಕಾಗಿ ಅವರ ಬುದ್ಧಿ ನಿರ್ಣಯವಾಗಿದೆ.

ಜಪಾನದ ಭೂತ-ಬೆದರಿಕೆ

ಇನ್ನು ಎರಡನೆಯ ಕಾರಣ; ಅದೆಂದರೆ ಜಪಾನದ ದಾಳಿಯ ಭೀತಿ. ಮೊದಲು ದಾಳಿಯಿಂದ ದೇಶದಲ್ಲಿ ಅವ್ಯವಸ್ಥೆ ಹರಡಬಹುದು; ಪರಚಕ್ರದ ದಾಳಿಯ ಕೆಸರಿನಲ್ಲಿ ಸ್ವಾರ್ಥಿಕಂಟಕಿಗಳು ತಲೆ ಎತ್ತುವುದೂ ಸಹಜವಿದೆ; ಹೀಗಾದರೆ ದೇಶದಲ್ಲಿ ಇಂದಿನವರೆಗೆ ಬೆಳೆದು ಬಂದ ಏಕರಾಷ್ಟ್ರೀಯತಾಭಾವನೆಗೆ ಧಕ್ಕೆ ತಗಲ

ಬಹುದಾಗಿದೆ; ಇದಲ್ಲದೆ, ಜಪಾನ್‌ದೇಶವು ಕೇವಲ ಜರ್ಮನಿಯ ಮಿತ್ರವೆಂಬುದಕ್ಕೆ ಮಾತ್ರವಲ್ಲ, ಕಳೆದ ೧೦-೧೫ ವರ್ಷಗಳಿಂದ ಚೀನದ ಮೇಲೆ ನಡೆಸಿದ ಅಕಾರಣ ಅತ್ಯಾಚಾರಕ್ಕಾಗಿ ಸ್ವಾತಂತ್ರ್ಯತತ್ತ್ವಕ್ಕೆ ಶತ್ರುವಾಗಿದೆ ಎಂಬುದು ಸ್ಪಷ್ಟವಿದೆ. ಹೀಗಿರಲು ಈ ದಾಳಿಗೆ ಮುಂಚಿತವಾಗಿ ನಾವು ಎಲ್ಲ ವಿಧದಿಂದಲೂ ಜಾಗರೂಕರಾಗಿರಬೇಕು, ಸಿದ್ಧರಾಗಿರಬೇಕು. ಇದೊಂದೇ ಇಂದು ಅತ್ಯಂತ ಮಹತ್ತ್ವದ ವಿಷಯವಾಗಿದೆ. ಇದಕ್ಕಾಗಿ 'ನಾವು ಮುಸಲ್ಮಾನರಿಗೆ ಪಾಕಿಸ್ತಾನವನ್ನು ಕೊಡೋಣ, ಬ್ರಿಟಿಶರಲ್ಲಿ ವಿಶ್ವಾಸವನ್ನು ಬೇಕಾದರೆ ನಟಿಸೋಣ, ಏನು ಬೇಕಾದದ್ದನ್ನು ಮಾಡೋಣ–ಆದರೆ ಜಪಾನದಿಂದ ಹಿಂದುಸ್ತಾನವನ್ನು ರಕ್ಷಿಸೋಣ' ಎಂಬ ವಿಚಾರವು ಕೆಲವು ರಾಜಕಾರಣಿಗಳ ತಲೆಯನ್ನು ಕೆಡಿಸಿದೆ. ಇಂತಹ ರಾಜಕಾರಣಿಗಳಲ್ಲಿ ಪ್ರಮುಖರಾದರು ಶ್ರೀ. ರಾಜಗೋಪಾಲಾಚಾರಿಯವರು. ಮೇಲಿನ ವಿಚಾರಸರಣಿಯನ್ನು ಬಿಟ್ಟರೆ ಮಾತ್ರ ರಾಜಾಜಿಯವರ ಇಂದಿನ ಧೋರಣೆಗೆ ಅರ್ಥವೇ ಆಗುವುದಿಲ್ಲ. ಇದಲ್ಲದೆ 'ಜಪಾನಕ್ಕಿಂತಲೂ ಬ್ರಿಟಿಶರು ನಿಜವಾಗಿ ಸ್ವಾತಂತ್ರ್ಯಪ್ರಿಯರು, ವಿಶ್ವಾಸಕ್ಕೆ ಅರ್ಹರು' ಎಂದು ರಾಜಾಜಿಯವರ ಮತ. ಈ ಮತದಲ್ಲಿ ಅವರು ಮಹಾತ್ಮಾ ಗಾಂಧಿಯವರ ಏಕಮೇವಾದ್ವಿತೀಯ ಶಿಷ್ಯರೆಂದು ಹೇಳಬಹುದು. ಬ್ರಿಟಿಶರ ನ್ಯಾಯನಿಷ್ಪಕ್ಷಪಾತ, ಸ್ವಾತಂತ್ರ್ಯಪ್ರೇಮ ಇವುಗಳಲ್ಲಿ ಮಹಾತ್ಮಾ ಗಾಂಧಿಯವರಿಗೆ ಅಂತರಾತ್ಮಿಕ ಶ್ರದ್ಧೆ ಇದೆ. ಆ ಮಾತಿಗೆ ಇಂದು ರಾಜಾಜಿಯವರು ಮಹತ್ತ್ವವನ್ನು ಕೊಟ್ಟು ಮಹಾತ್ಮರೊಡನೆ ಸರಕಾರದ ಸಂಧಾನವಾಗಬೇಕೆಂದು ಯತ್ನಿಸುತ್ತಿದ್ದಾರೆ. ಅದಕ್ಕಾಗಿಯೆ ಸರಕಾರವು ದಬ್ಬಾಳಿಕೆಯನ್ನು ತಡೆಯಲೇಬೇಕೆಂದೂ ರಾಜಾಜಿಯವರು ಹಟತೊಡುತ್ತಲಿದ್ದಾರೆ. ಯಾಕೆಂದರೆ ದಬ್ಬಾಳಿಕೆಯಿಂದ ಬ್ರಿಟಿಶರ ನ್ಯಾಯ ನಿಷ್ಪಕ್ಷಪಾತವಾಗಲಿ, ಸ್ವಾತಂತ್ರ್ಯಪ್ರೇಮವಾಗಲಿ, ಜನರಿಗೆ ವಿಶ್ವಾಸವೆನಿಸದ ಸಂಗತಿಗಳಾಗಬಹುದಾಗಿದೆ.

ರಾಜಾಜಿಯವರ ರೀತಿ ತಪ್ಪಿದೆ!

ರಾಜಾಜಿಯವರ ಪ್ರಯತ್ನಕ್ಕೆ ಯಾವ ಗತಿ ಎಂಬುದನ್ನು ಮೇಲೆ ಮಧ್ಯಸ್ಥರ ವಿಮಾಮಾಂಸೆಯಲ್ಲಿಯೆ ಸೂಚಿಸಿದ್ದೇವೆ. ರಾಜಾಜಿಯವರಿಗೆ ಸರಕಾರದಿಂದ ಎಷ್ಟು ಅಲಕ್ಷ್ಯವಾಗಿದೆಯೊ ಅಷ್ಟೇ—ದಿನ ಕಳೆದಂತೆ—ಜನತೆಯಿಂದಲೂ ಅಲಕ್ಷ್ಯವಾಗಬಹುದಾಗಿದೆ. ಕೇವಲ ಸಂಭವನೀಯವೆನಿಸಬಹುದಾದ ಒಂದು ದಾಳಿಯ ಭೀತಿಗಾಗಿ ದೂರದೃಷ್ಟಿಯನ್ನು ಬಿಟ್ಟುಬಿಡುವುದು ಜಾಣತನವಲ್ಲ. ಜಪಾನರನ್ನು ಎದುರಿಸುವ ಶಕ್ತಿ ಬ್ರಿಟಿಶರಿಗೆ, ಮಿತ್ರರಾಷ್ಟ್ರಗಳಿಗೆ ಇದೆ ಎಂದ ಮೇಲೆ, ಆ ದಾಳಿಗಾಗಿ ಭಯವೇಕೆ! ಹಿಂದುಸ್ತಾನದ ಏಕಸಂಘಟಿತಶಕ್ತಿಯನ್ನು ಉಳಿಸುವುದಕ್ಕೆ ಕೂಡಲೆ ಹಿಂದುಸ್ತಾನವನ್ನು ಹರಿದುಹಂಚುವ ಪಾಕಿಸ್ತಾನ್ ತತ್ತ್ವವನ್ನೊಪ್ಪುವುದು ಯಾವ ಜಾಣತನ? ಹಿಂದೊಮ್ಮೆ ಕೊಟ್ಟ ವಚನವನ್ನು ಯುದ್ಧದ ತರುವಾಯ ಬ್ರಿಟಿಶರು ಪಾಲಿಸಿಲ್ಲ ಎಂಬುದಕ್ಕೆ ಇಂದು ಅವರ ಸ್ವಾತಂತ್ರ್ಯಪ್ರೇಮದಲ್ಲಿ ಪೂರ್ತಿಯಾಗಿ ಭರವಸೆಯನ್ನಿಡುವುದು ಮುಕ್ತ್ಸದ್ದಿತನವೆನಿಸಬಹುದೆ? ಬ್ರಿಟಿಶರು ಹೇಗೆ ವರ್ತಿಸಿದರೂ ನಾವು ಅವರಲ್ಲಿ ವಿಶ್ವಾಸವನ್ನಿಡಬೇಕು, ಅವರ ಜೇಳಿಕೆಯಂತೆಯೆ ಇಂದು ಹಿಂದುಸ್ತಾನದಿಂದ ಯುದ್ಧಕಾರ್ಯಕ್ಕೆ ಇಷ್ಟೊಂದು ಅಪಾರಸಹಾಯವಿದ್ದರೂ ಅವರು ನಮ್ಮಲ್ಲಿ ವಿಶ್ವಾಸವನ್ನಿಡಬಾರದು— ಇದು ಯಾವ ನ್ಯಾಯ? ಹೇಗೆ ಸಹಿಸುವುದು? ಇದಲ್ಲದೆ—ಬ್ರಿಟಿಶರ ಸ್ವಾತಂತ್ರ್ಯಪ್ರೇಮದಲ್ಲಿ ಸಾಮ್ರಾಜ್ಯಲಾಲಸೆ (imperialism) ಗೆ ಬೇಕಾದಷ್ಟು ಸ್ಥಾನವಿದೆ ಎಂದು ಮುಖ್ಯ ಮಂತ್ರಿ ಚರ್ಚಿಲ್‌ರೂ ವಸಾಹತುಮಂತ್ರಿ ಸ್ಯಾಮ್ಯನ್‌ಲೆಯವರೂ ಅಧಿಕೃತವಾಗಿ, ಅಸಂದಿಗ್ಧವಾಗಿ ಹೇಳುತ್ತಿರುವಾಗ, ಆ ಸಾಮ್ರಾಜ್ಯದ ಉಪಕರಣ ಮಾತ್ರವಾದ ಹಿಂದುಸ್ತಾನವು ಇಂತಹ ಸ್ವಾತಂತ್ರ್ಯಪ್ರೇಮಕ್ಕೆ ಯಾಕೆ ಮೋಹಿಸಬೇಕು? ಈ ಮಾತನ್ನೂ ರಾಜಾಜಿಯವರು ಲಕ್ಷ್ಯದಲ್ಲಿಡಬೇಕಾಗಿದೆ.

(ಜರ್ಮನಿಯ ಪುಟದಿಂದ ಮುಂದುವರಿದುದು.)

'ಇದೇನು ತಲೆಹರಟೆ ನಿನ್ನದು, ತೊಲಗು!' ಎಂದು ಸಿಡುಕಿನಿಂದ ಅನ್ನುವಾಗಲೇ ನಮ್ಮ ಆಳು ಕೇಳಿದ—'ಹಳೆಯ ಕನ್ನಡಿ ರಿಪೇರಿಮಾಡಿ ಮಾರುವಾತ ಇದ್ದಾನಂತ ಒಬ್ಬ—ಮೋಡಕಾ-ಬಾಜಾರದಾಗ! ಅಂವಗ ಕೊಟ್ಟುಬಿಡತೇನ್ರಿ ಇದನ್ನ? ಈ ದೀಪಾವಳಿಗೆ ಛಂದಂದು ತರುವಂತಿರಿ ಇನ್ನೊಂದು!'—ಎಂದ.

ಅಷ್ಟರಲ್ಲಿ ಇದೇ ಸಂಧಿ ಸಾಧಿಸಿ ನಮ್ಮ ಸಣ್ಣ ಮಗು ಪ್ರೇಮಾ ಓಡುತ್ತಾ ಬಂದು— 'ಅಣ್ಣಾ, ಸರಸೂನ ಸಂಗತೀ ಆಟಕ್ಕ ಆ ಕನ್ನಡಿ ಬೇಕು ನನಗ....' ಎಂದು ಹಟಹಿಡಿದಳು.

'ನೀ ಏನು ಮಾಡತಿಯೇ ಅದನ್ನು ತೊಗೊಂಡು?' ಎಂದು ಗುಡುಗುಹಾಕಬೇಕೆಂದು ಹಾತೊರೆಯುವಾಗ, ಅಡಿಗೆಯ ಮನೆಯಿಂದ ಮಹಾರಾಣಿಯ ಆವೇಶ ಹೊರಹೊಮ್ಮಿತು—ಮಗಳ ಪರವಾಗಿ:

ಕಣ್ಣುಕಣ್ಣು ಬಿಡುವಂತಾದ ಕನ್ನಡಿಯ ಕಡೆಗೆ ನೋಡಿ ನಾನೇ ಹೇಳಿದೆ: 'ಏ ರಹಿಮ್, ಇವತ್ತ ಇದನ್ನ ರಿಪೇರಿಮಾಡಿಸಿ ಪ್ರೇಮಾಗ ಆಡಲಿಕ್ಕೆ ಕೊಟ್ಟುಬಿಡೊ' ಎಂದು ಅಧಿಕಾರವಾಣಿಯನ್ನು ಮುಂದುಮಾಡಿದೆ.

ಪಾಪ! ಅರೆನಿಮಿಷ ಪೂರ್ವದ ಸೌಂದರ್ಯದ ನೆನಪು ಮಿಂಚಿ ಕನ್ನಡಿಗೆ ಕಾಂತಿ ಹೆಚ್ಚಿದಂತಾಗಿರಬೇಕು— ನನ್ನ ಸಹಾನುಭೂತಿಯ ಸೆಲೆಗಾಗಿಯೋ ಅಥವಾ ಚಿಕ್ಕಮಕ್ಕಳು ತನಗಾಗಿ ತೋರುವ ಸಹಜ ಮೋಹಕ್ಕಾಗಿಯೋ ಯಾರಿಗೆ ಗೊತ್ತು?



ಶಿಲಾಪ್ರವಂಗ

SHILAPRAVANG

★

ಯಾವುದೇ ವಿಷವಾದ
ಉಷ್ಣತೆಯಿಂದ ಬಳಲಿದುವ
ನಿಮ್ಮ ಹೃದಯ, ಮಿದುಳು,
ರಕ್ತ, ವೀರ್ಯಗಳಿಗೆ,
ಆಯಾಸವನ್ನು ಹೋಗ-
ಲಾಡಿಸಿ ತಂಪು ಕೊಟ್ಟು,
ಶರೀರದಲ್ಲಿ ನವಚೈತನ್ಯವನ್ನು
ಪುಟ್ಟಿಸುವುದಕ್ಕೆ ಶ್ರೇಷ್ಠವಾದ
ಔಷಧವು.

★

ಶ್ರೀಧೂತಪಾಪೇಶ್ವರ
ಪನವೇಲ, ಲಿಮಿಟೆಡ್.

ಪನವೇಲ ಕುಲಾಬಾ

★

SHRI DHOOTAPAPESHWAR
PANVEL Ltd., PANVEL.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ನಿಮ್ಮ ನೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ವೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ದ್ರಾಕ್ಷಾರ್ಕಮಧು

ರಜಿಸ್ಟರ್ಡ

ಯಾವುದೊಂದು ಕಾಹಿಲೆಯು ಬಂದು ಹೋದ ಮೇಲೆ ಬರುವ ಅಶಕ್ತತೆಗಾಗಿ, ಡಾಕ್ಟರರು ಇದು ಒಳ್ಳೆಯ ಶಕ್ತಿವರ್ಧಕ ಔಷಧಿಯೆಂದು ಹೇಳುತ್ತಾರೆ. ಈ ಮಧುವು ಅಶುದ್ಧ ರಕ್ತವನ್ನು ಶುದ್ಧವಾಡುತ್ತದೆ. ಎಲ್ಲೆಡೆಯಲ್ಲಿಯೂ ಸಿಕ್ಕುತ್ತದೆ.

ದ್ರಾಕ್ಷಾರ್ಕಮಧು ಆಫೀಸ್ ನಿಪ್ಪಾಣಿ (ಬೆಳಗಾವ)

Printed by Mr. V. V. Joshi at the Karnatak Printing Works, Dharwar, and Published for the Proprietors by Publication by M. V. Mulgund at the Jayanti Office Dharwar.

ನೃತ್ಯಭಾರತಿ ಶ್ರೀ. ಶ್ರೀನಿವಾಸ ಕುಲಕರ್ಣಿಯವರ ನರ್ತನದ ಒಂದು ಭಂಗಿ

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚ ಸೇರಿ ೪—೦—೦ .... ವ್ಹಿ. ಪಿ. ಯಿಂದ ೪–೫–೦ .... ಬಿಡಿಸಂಚಿಕೆಗೆ ೬ ಆಣೆ

ಸಂಪಾದಕರು

ಬೆಟಗೇರಿ ಕೃಷ್ಣಶರ್ಮರು

೫ನೆಯ ವರ್ಷ	ಮೇ ೧೯೪೩	೧೨ನೆಯ ಸಂಚಿಕೆ

ಮುಖ್ಯ ವಿಷಯಗಳ ಪರಿವಿಡಿ

ಸಾಮಾಜಿಕನ ಸಂವಚನಗಳು (ವಿಚಾರ ತರಂಗ)	....	'ಸಾಮಾಜಿಕ'	೫೨೫
ಸಂಪಾದಕೀಯ (ಬಿದ್ದವರಿಗೆ ಗುದ್ದು ಎಲ್ಲೆಲ್ಲಿಯೂ)	....	ಸಂಪಾದಕರು	೫೨೬
ಮಂಗನ ಮಲ್ಲಿನಾಥತನ	....	'ಮಲ್ಲಿನಾಥ'	೫೨೭
ಅಧಿಕಾರ ಲಾಲಸೆ (ವಿ. ಪ್ರ ಪ್ರಬಂಧ)	....	ಶ್ರೀ. 'ಬಲ್ಲಾಳ' ಧಾರವಾಡ	೫೩೯
ಆವು ರುಪ್ರ, ಬಾಳ್ಯ ನಾಯಿ! (ಕಿರುಗತೆ)	....	ಶ್ರೀ. 'ಬಿ. ಜಿ. ಸ್ಫೂನೊ' ಮುಂಬೈ	೫೩೨
ಪೆಂಡತಿ ಬೇರೆ (ಸಣ್ಣಕತೆ)	....	ಶ್ರೀ. ಬೇಂಪ್ರೆ ಲಕ್ಷ್ಮಣರಾಯರು, ಧಾರವಾಡ	೫೩೩
ಬುದ್ಧಿಯ ಸ್ವರೂಪ ಮತ್ತು ಕಾರ್ಯ (ವಿ ಪ್ರ ಪ್ರಬಂಧ)	....	ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ	೫೩೯
ಸುಳ್ಳಿಸಿಸವ ಸುಳ್ಳಿನ ಸಂತೆ (ಲಘುಪ್ರಬಂಧ)	....	ಶ್ರೀ. 'ಶ್ಯಾಮೂ' ಬಳ್ಳಾರಿ	೫೪೨
ಶಕುಂತಲೆಯು ವಿಲಾಪ (ಕವನ)	....	ಶ್ರೀ. ವಿಟ್ಠಲ ಶೆಣೈ, ಮಂಗಳೂರು	೫೪೭
ಮಮತೆ (ಅನುವಾದಿತ ಕಥೆ)	....	ಶ್ರೀ. ಕು. ವಿ. ಹರಿದಾಸ 'ಕನ್ನಡಜಾಣ' ಉಡುಪಿ	೫೪೮
ಪುಟ್ಟಪೊಂದು ಪಟ್ಟಣ (ಕವನ)	....	ಶ್ರೀ. ಬಿ. ಎಚ್. ಶ್ರೀಧರ, ಎಂ. ಎ. ಪುಣೆ	೫೫೦
ನಮ್ಮ ಊಟ (ಆದರ್ಶ ಆಹಾರ)	....	ಶ್ರೀ. ಬದರಕುಂದಿ ವೆಂಕಟರಾಯರು, ನಂದಗಡ	೫೫೧
ಶ್ರೀಜಿಸವಣ್ಣನವರ ಮಾನವತಾವಾದ	....	ಶ್ರೀ. 'ಚಿಂತಾಮಣಿ' ಧಾರವಾಡ	೫೫೫
ಜೀವ ದೇವನದು! (ಕವನ)	....	ಶ್ರೀ. ಬಿ. ಶ್ರೀಕಂಠಯ್ಯ, ಬಿ. ಎ. ಬೆಂಗಳೂರು	೫೫೭
ಚಾಂತಿ (ಸಣ್ಣಕತೆ)	....	ಶ್ರೀ ವಿ. ಜಿ. ಭಟ್ಟ, ಪುಣೆ	೫೫೮
ಪುಸ್ತಕ ವಿಮರ್ಶೆ	....	ಬೇರೆ ಬೇರೆ ವಿಮರ್ಶಕರು	೫೬೦
ನಗೀನೆ ನೇಪಿದ್ಯ	....	'ನಕಲೀ ನಾರಾಯಣಾಚಾರ್ಯ'	೫೬೧
ನಾಲ್ಕೂ ನಟ್ಟಿನ ನೋಟ	....	'ನಿರೀಕ್ಷಕರು'	೫೬೩
ಸಾದರ ಸ್ವೀಕಾರ	....	.... ಹೊದಿಕೆಯ ೩ನೆಯ ಪುಟ	

ಜಯಂತಿಯ ಮುಂಬೈ ಶಾಖಾ ಕಚೇರಿ

ಇಲ್ಲಿ 'ಜಯಂತಿ' ಸಂಚಿಕೆಗಳು ಸಿಕ್ಕುವುವಲ್ಲದೆ, ಶ್ರೀಮಾನ್ **'ಆನಂದಕಂದ'** ರ ಮತ್ತು ಪ್ರೊ. **ಜಾಗೀರದಾರರ** ಎಲ್ಲ ಪುಸ್ತಕಗಳೂ ಮಾರಾಟಕ್ಕೆ ಸಿಕ್ಕುವುವು. ಮುಂಬಯಿ ಕನ್ನಡಿಗರ ಅನುಕೂಲತೆಗಾಗಿಯೆ ಈ ಏರ್ಪಾಡನ್ನು ಮಾಡಲಾಗಿದೆ.

ಮೊಗವೀರ ಯುವಕ ಸಂಘದ ಕಾರ್ಯಾಲಯ,
೪೬ ಜರ್ನಗೇಟ್ ಸ್ಟ್ರೀಟ್, ೩ನೆಯ ಮಾಳಿಗೆ
ಫೋರ್ಟ್— ಮುಂಬಯಿ.

ಸಂಪುಟ ೫ | ೧೯ನೆಯ ಮೇ ೧೯೪೩ | ಸಂಚಿಕೆ ೧೨

ಸಾಮಾಜಿಕನ ಸಂವಚನಗಳು

ಅಯ್ಯಾ, ಜಾತಿ-ಜಾತಿಯೆಂಬ ಜಗಳ ಜಗವನೇ ತನ್ನ ಜಾಲದಲ್ಲಿ ಹಿಡಿಯಲು ನಿಂತಿದೆ. ಅಯ್ಯಾ, ಕುಲ-ಕುಲವೆಂಬ ಕಲಹ ಕಮಲಭವಾಂಡವನೇ ಕುಕ್ಕಿ ಮುಕ್ಕಲು ಮಸಗುತಿದೆ. ಲೋಕನ ಕಂಗುರುಡುತನದ ಕೈಚಳಕ ಕಾಣಯ್ಯಾ ಈ ಜಗಳ-ಕಲಹಗಳು! ಒಂದೆ ಒಂದಾದ ಮಾನವಕುಲದೊಳಗೆ ಬಂದುವೆಲ್ಲಿಂದ ನೂರೆಂಟು ಕುಲ, ಸಂದುವೆಲ್ಲಿಂದ ಸಾವಿರದೆಂಟು ಜಾತಿ? ಸೃಷ್ಟಿಯ ಸಂಕೇತದಲಿ ಹುಟ್ಟಬಂದು, ಬದುಕಲೆಂದು ದೊರೆತುದನು ತಿಂದು, ಸುಖ-ಶಾಂತಿಗಳನ್ನೊಂದಲು ಹವಣಿಸುತ್ತಲಿ ಹಾರಿಹೋಗುವರಲ್ಲವೇ ಈ ಕುಲ-ಜಾತಿಗಳ ಬಲುಬಂಟರು?

* * *

ಜನ್ಮವಿಲ್ಲದ ಜಾತಿ-ಕುಲಗಳಿಸೆಯೇನಯ್ಯಾ? ಅನ್ನವಿನ್ನದ ನೀರನೀಂಟದ ಜಾತಿ-ಕುಲಗಳಿಹವೇನಯ್ಯಾ? ಅಯ್ಯಾ ಲಿಂಗ-ಲಿಂಗಗಳ ಸೆಳೆತಕ್ಕೆ ಸಿಕ್ಕಿ ಭಂಗಬಡದ ಜಾತಿ-ಕುಲಗಳಾವುವು ಹೇಳಾ! ಚಿತ್ತದ ಶಾಂತಿ-ಸಮಾಧಾನಕಾಗಿ ತತ್ತರಗೊಳ್ಳದ ಜಾತಿ-ಕುಲಗಳೆಲ್ಲಿವೆ ಹೇಳಯ್ಯಾ! ಎಲ್ಲರೂ ಬರುವುದೆಂದೇದಾರಿ, ಬದುಕುವುದು ಒಂದೇ ದಾರಿ; ಬಯಸುವುದು ಒಂದನೆ; ಕೊನೆಗೆ ಸತ್ತುಸಾರುವುದು ಒಂದೆ ದಾರಿ! ಇಂತಿರುವಾಗ ಈ ಒಂದಾದ ಮಾನವಸಮೂಹದೊಳಗೆ ಬಂದುವೆಲ್ಲಿಂದ ನೂರೆಂಟು ಕುಲ, ಸಾವಿರದೆಂಟುಜಾತಿ?

* * *

ಸಮಾಜವೆಂಬುದು ಸಂಪೂರ್ಣ ವಸ್ತು ಕೇಳು ತಂದೆ! ಅದನು ಕಾಣಲು ಹವಣಿಸಿದ ವ್ಯಕ್ತಿಯ ಶಕ್ತಿ ಅಪೂರ್ಣವೆಂಬುದನರಿಯಯ್ಯಾ! ಇಡಿಯ ವಸ್ತುವನು ಒಂದೆ ಸಲಕ್ಕೆ ಇಡಿಯಾಗಿ ಕಾಣಲು ಅಸಮರ್ಥವಾದ ವ್ಯಕ್ತಿಯ ಶಕ್ತಿ, ಒಂದೊಂದು ಸಲ ಒಂದೊಂದನು ಕಂಡು, ಕಂಡುದಕೊಂದೊಂದು ಹೆಸರನಿರಿಸಿತಯ್ಯಾ! ತಾನು ನಿಂದುನೋಡಿದ ರೀತಿಯಲಿ ಎಡಗಡೆ-ಬಲಗಡೆಯೆಂದಿತು; ಹಿಂಬದಿ-ಮುಂಬದಿಯೆಂದಿತು; ಕೆಳಗು-ಮೇಲು ಎಂದಿತು; ಒಳಗು-ಹೊರಗು ಎಂದಿತು. ಈ ಎಡ-ಬಲ, ಈ ಹಿಂಗಡೆ-ಮುಂಗಡೆ, ಈ ಕೆಳಗು-ಮೇಲು, ಈ ಒಳಗು-ಹೊರಗುಗಳೇ ಮುಂಕುಗೊಂಡು ತಂತಮ್ಮೊಳಗೆ ಮುಂಥನಕೆ ತೊಡಗಿದರೆ, ಇಡಿಯ ವಸ್ತುವಿಗೆ ನಿಲುಗಡೆಯೆಲ್ಲಿಯದು, ನಿಶ್ಚಿಂತೆಯೆಲ್ಲಿಯದು ಹೇಳಯ್ಯಾ!

* * *

ನಾಡೊಂದು; ನಾಡೆರೆಯನೊಬ್ಬನೆ ಒಬ್ಬ; ಆಡಳಿತದ ಶಾಸನ ಒಂದೆ ಒಂದು! ಆದರೂ ಆಳಿಕೆಯ ಅನುಕೂಲತೆಗಾಗಿ ಅಲ್ಲಲ್ಲಿ ಎಲ್ಲೆಗಳನು ಕಲ್ಪಿಸುವರಯ್ಯಾ ನಾಡಿನ ಹಬ್ಬುಗೆಯಲ್ಲಿ! ಬೇರೆ ಬೇರೆ ನೆಲಗಳನೊಡೆದು ಬೇರೆ ಬೇರೆ ಹೆಸರಿಟ್ಟು ಕರೆವರಯ್ಯಾ! ಬೇರೆ ಬೇರೆಯ ಎಲ್ಲೆಗಳಲಿ ಬೇರೆ ಬೇರೆಯ ಆಣ್ಮರನಿರಿಸುವನಯ್ಯಾ ಆ ನಾಡೆರೆಯ! ಈ ಬೇರೆ ಬೇರೆಯ ಅರಸಾಳುಗಳು ನಾಡೆರೆಯನ ಆಡಳಿತದ ಇರವನೆ ಮರೆತು, ಅಭಿಮಾನ-ಅಹಂಕಾರಗಳಿಂದ ತಂತಮ್ಮ ಎಲ್ಲೆಗಳನು ವಿಸ್ತರಿಸಿ ಮಲ್ಲಗಾಳಿಗಳೆ ನಿಂತರೆ, ನಾಡಿಗೆ ನಿಲುಗಡೆಯೆಲ್ಲಿ? ಆಡಳಿತಕ್ಕೆ ಅಸ್ತಿತ್ವವೆಲ್ಲಿ—ಹೇಳು ತಂದೆ!

* * *

ಒಂದೆ ಒಂದಾದ ಇಡಿಯೊಡಲನ್ನು ಮಾನವನ ಮುಂಕುಬುದ್ಧಿ ಬಿಡಿಬಿಡಿಯಾಗಿ ಕಂಡಿತು ಕೇಳಯ್ಯಾ! ಒಂದೊಂದು ಕಾಣ್ಕೆಯ ಭಾಗಕೆ ಒಂದೊಂದು ಹೆಸರನಿರಿಸಿತಯ್ಯಾ ಮೂಗು-ಬಾಯಿ-ಕಣ್ಣು-ಕಿವಿ-ಕೈ-ಕಾಲೆಂದು ಮೊದಲಾಗಿ. ಇವೆಲ್ಲ ಮಾಡುವ ಕಾರ್ಯಗಳು ಒಂದೆ ಒಂದಾದ ಜೀವದ ಪ್ರೇರಣೆಯ ಪರಿಣಾಮಗಳಯ್ಯಾ! ಅಂಗಾಂಗಗಳಿವೆಲ್ಲ ಮೇಲು-ಕೀಳೆಂದು ಮುಲೆತು ನಡೆಯತೊಡಗಿದರೆ, ಒಡಲಿಗೆಲ್ಲಿಯ ನಿಲುಗಡೆಯಯ್ಯಾ, ಒಡಲೊಡೆಯ, ಜೀವನಿಗೆಲ್ಲಿಯ ನಿಶ್ಚಿಂತೆಯಯ್ಯಾ? ಇಡಿಯನ್ನು ಇಡಿಯಾಗಿ ಕಾಣದ ವ್ಯಕ್ತಿಯ ಬಡಬುದ್ಧಿ ನಿರ್ಮಾಣಮಾಡಿದ ಬಿಡಿತನದ ಭ್ರಾಂತಿಯಿಂದು, ಮಾನವಸಮಾಜವನೆ ಮುಂಕುವಡಿಸಿದೆ ಕೇಳಯ್ಯಾ? ಅದಕಾಗಿ ಇಡಿಯನ್ನು ಕಾಣುವ ನೋಟವ ಪಡೆದು ಬಿಡಿತನದ ಭ್ರಾಂತಿಯನು ಹೊಡೆದುಬಿಡಯ್ಯಾ!

—"ಸಾಮಾಜಿಕ"

ಬಿದ್ದ ಜನಕ್ಕೆ ಗುದ್ದುಗಳೇ ಎಲ್ಲೆಲ್ಲಿಯೂ !

ವನರಾಜನಾದ ಸಿಂಹ ಬೇನೆ ಬಂದು ಬಿದ್ದಾಗ, ಹೇಡಿ ಮೊಲವೂ ಏಡಿಸಿ ಹೊಡೆದು ಹೋಯಿತಂತೆ; ಕಾಡುಕತ್ತೆಯೂ ಕೆಣಕಿ ಲತ್ತೆ ಕೊಟ್ಟು ಓಡಿತಂತೆ. ಹಾಗೆಯೆ ಆಗಿದೆಯಿಂದು ಭರತಖಂಡದ ಪರಿಸ್ಥಿತಿ. ತನ್ನ ಸ್ವಾತಂತ್ರ್ಯಜೀವನದ ಕಾಲದಲ್ಲಿ, ಭರತಖಂಡವೆಂದರೆ ಲೋಕದ ಆಕರ್ಷಣೆಗೆ ಕಾರಣವಾಗಿತ್ತು; ಭಾರತೀಯರ ಜೀವನ ಜಗತ್ತಿನ ಜನರಿಗೇ ಆದರ್ಶವಾಗಿದ್ದಿತು. ಭಾರತದಿಂದ ಜ್ಞಾನದ ಬೆಳಕು ಪಡೆದು, ಹೊಸನೋಟ ಹೊಂದಿ, ಆದನ್ನು ಕೊಂಡಾಡದ ಜನಾಂಗಗಳು ಅಪರೂಪವಾಗಿದ್ದುವು. ಭಾರತದ ಕೈಗಾರಿಕೆಗಳಿಂದಲೆ ದೇಶ-ದೇಶಗಳ ಸೊಗಸುಗಾರರು ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಂಡು, ಇಲ್ಲಿಯ ಜನರ ಕಲಾನೈಪುಣ್ಯಕ್ಕಾಗಿ ಕುತೂಹಲಿಗಳಾಗಿರುತ್ತಿದ್ದರು. ಆದರೆ ಇಂದು? ಭಾರತರಾಷ್ಟ್ರದ ಪೌರುಷಸಿಂಹ ಪರಾಧೀನತೆಯ ರೋಗದಿಂದ ಬಳಲುತ್ತ ಬಿದ್ದಿದೆ. ಸಾಂಸ್ಕೃತಿಕ ರೀತ್ಯಾ ಪೂರ್ತಿ ಸಾಲಗಾರವಾದ—ಸಿಂಹಲದ್ವೀಪದಂತಹ ಸಾಕಿದ ಮೊಲವೂ ಅದಕ್ಕೆ ಏಟು-ಹಾಕುತ್ತ ಹೊರಟಿದೆ. ಕಾಡನ್ನು ನಂದನವನ್ನಾಗಿಸಿಕೊಂಡು ಜಂಭದಿಂದ ಕುಣಿಯುತ್ತಿರುವ ಆಫ್ರಿಕೆಯ ಕಾಡುಕೋಣವೂ ಭಾರತೀಯರ ಹೃದಯವನ್ನಿರಿಯಲು ಕೋಡುಗಳನ್ನು ಮಸೆಯುತ್ತಲಿದೆ. ಅಮೇರಿಕೆ-ತುರ್ಕಸ್ತಾನ್-ಚೀನಾಗಳ ಗುಳ್ಳೆನರಿಗಳು, ಭಾರತರಾಷ್ಟ್ರಕೇಸರಿಗೆ ಬೈದು ಬುದ್ಧಿಕಲಿಸಲು ದಿನದಿನವೂ ಹಿಂಡುಗೊಂಡು ಇಲ್ಲಿಗೆ ಬಂದು ಹೋಗುತ್ತಲಿವೆ. ಹಳೆಯ ವಿಚಾರದ ಹಲವು ಜನರು ಇದನ್ನು ಕಂಡು 'ದೈವದುರ್ವಿಪಾಕ' ಎಂದು ಹಣೆಗೆ ಹೊಡೆದುಕೊಂಡು ನಿಟ್ಟುಸಿರಿಡುತ್ತ ಕುಳಿತುಬಿಡಬಹುದು. ಹೊಸ ವಿಚಾರದ ತೀರ ಕೆಲವು ಜನರು, ಭಾರತಪೌರುಷ ಸಿಂಹನಿಗೆ ಅಂಟಿಕೊಂಡಿರುವ ರೋಗವನ್ನು ಕಂಡು, ಹೊಟ್ಟೆಯಲ್ಲಿಯ ಸಿಟ್ಟು ರಟ್ಟೆಯಲ್ಲಿಲ್ಲದೆ ಕಳವಳಿಸಿ ಕುದಿಯುತ್ತ ಕುಳಿತುಕೊಳ್ಳಬಹುದು. ಆದರೆ ದೈವವಾದದ ನಿಷ್ಕ್ರಿಯತಾಬುದ್ಧಿಯೂ, ಕಳವಳಿಸುವ ಹೃದಯದ ಕಂಗೇಡಿತನವೂ ಭಾರತದ ರೋಗನಿದಾನಕ್ಕೆ ಸ್ವಲ್ಪವೂ ಸಹಾಯ ಮಾಡಲಾರವು. ಇದಕ್ಕೆ ಬೇಕು ಭಾರತೀಯರ ಕರ್ತವ್ಯಜಾಗೃತಬುದ್ಧಿ-ಕರ್ತೃತ್ವಶಕ್ತಿಗಳು! ಇವಿಲ್ಲದಿದ್ದರೆ ಭಾರತಕ್ಕೆ ಸ್ವಾಧೀನತೆಯಿಲ್ಲ; ಸ್ವಾಧೀನತೆಯಿಲ್ಲದೆ ತೇಜಸ್ವಿಯಾದ ವ್ಯಕ್ತಿತ್ವವಿಲ್ಲ; ಅಂತಹ ವ್ಯಕ್ತಿತ್ವವಿಲ್ಲದೆ ಹೋದರೆ ಜಗತ್ತಿನ ಪೇಟೆಯಲ್ಲಿ ಇದಕ್ಕೆ ಕಾಸಿನ ಬೆಲೆಯಿಲ್ಲ!

ದಕ್ಷಿಣ ಆಫ್ರಿಕೆಯ ನಾತಾಳ ಭಾಗದಲ್ಲಿಂದು ಏನು ನಡೆದಿದೆ? ಭಾರತೀಯರ ಮಾನವತೆಯ ಮೇಲೆ, ಅಧಿಕಾರ ಮತ್ತರ—ಸ್ವಾರ್ಥಸಾಧಕರ—ವರ್ಣದ್ವೇಷಿಗಳ—ಪೈಶಾಚ್ಯತಾಂಡವ! ಹಿಂದುಸ್ತಾನವು ಇಂದಿನ ವಿಶ್ವರಾಷ್ಟ್ರಗಳ ಗುಂಪಿಗೆ ಸೇರಿ—ತನ್ನ ಹಿತವನ್ನು ಸ್ವಲ್ಪವೂ ಗಣಿಸದೆ—ಅವುಗಳ ಹಿತಕ್ಕಾಗಿ ಸ್ವಂತದ ಹೋಮವನ್ನು ನಡೆಯಿಸಿರುವುದು ಯಾರಿಗೆ ಗೊತ್ತಿಲ್ಲ? ದಕ್ಷಿಣಆಫ್ರಿಕೆಯ ಸಂಸ್ಥಾನಗಳೂ ವಿಶ್ವರಾಷ್ಟ್ರಗಳ ಕಡೆಗೆ ಸೇರಿಕೊಂಡು, ಸಹಾಯಮಾಡುವ ನಾಟಕವನ್ನು ಆಡುತ್ತ, ಸ್ವಾರ್ಥವನ್ನು ಸಾಧಿಸುವ ಸಂಧಿಯನ್ನು ಬಯಸುತ್ತಲಿವೆ. ಆದರೂ ವಿಶ್ವರಾಷ್ಟ್ರಗಳಲ್ಲಿ, ಸ್ವಾತಂತ್ರ್ಯವಿಲ್ಲದ ಹಿಂದುಸ್ತಾನದ ತ್ಯಾಗಕ್ಕೆ ಹಾಗದ ಬೆಲೆಯಿಲ್ಲ; ಸ್ವಾತಂತ್ರ್ಯದ ಬಲವಿರುವ ದಕ್ಷಿಣ ಆಫ್ರಿಕೆಯ ಸಂಸ್ಥಾನದ ಲಾಗಗಳಿಗೆಲ್ಲ ಕೈತುಂಬ ಬೆಲೆ; ಬಾಯತುಂಬ ಬಣ್ಣನೆ.

ಟ್ರಾನ್ಸ್‌ವಾಲ್-ನಾತಾಳಗಳಲ್ಲಿರುವ ಭಾರತೀಯರಿಗೆ— ಅವುಗಳನ್ನೇ ತಮ್ಮ ಮಾತೃಭೂಮಿಯನ್ನಾಗಿ ಮಾಡಿಕೊಂಡಿದ್ದರೂ— ಅಲ್ಲಿ ನಿಲುಗಡೆಯಿಲ್ಲವಾಗಿದೆ. ಯುದ್ಧಕಾಲದ ನೆಪದಿಂದ ಅಲ್ಲಿಯ ಭಾರತೀಯರ ವ್ಯಾಪಾರಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗಿದೆ. ಇಂದಿನ ಹಣದ ಬೆಲೆಯ ಅನಿಶ್ಚಿತತೆಯನ್ನರಿತು, ಹಣವಿದ್ದವರು ಇನ್ನಾವುದಾದರೂ ಸ್ಥಾವರ ಆಸ್ತಿಯಲ್ಲಿ ಹಣವನ್ನು ತೊಡಕಿಸಬೇಕೆಂದರೆ, ಅದಕ್ಕೂ ತತ್ವಾರ ಬಂದುನಿಂತಿದೆ. ಮಾನವರ ಜನ್ಮಸಿದ್ಧವಾದ ಹಕ್ಕುಗಳ ಮೇಲೆ ಹಾಕುತ್ತಿರುವ ಅಧಿಕಾರಾಂಧರ ಆಘಾತವಿದು! ನಾತಾಳ ಪ್ರದೇಶದ ಕಾಡನ್ನು ಕಡಿದು ಆದನ್ನೊಂದು ನಾಡನ್ನಾಗಿಸಿದ ಸಂಪೂರ್ಣ ಶ್ರೇಯಸ್ಸು ಅಲ್ಲಿಯ ಭಾರತೀಯ ವಸತಿಗಾರರದು; ನಾತಾಳದ ರಾಜಧಾನಿ 'ದರ್ಬಾನ್' ನಗರದ ಕೋಣಶಿಲೆಯನ್ನು ಸ್ಥಾಪಿಸಿದವರು ಭಾರತೀಯರು! ಆದರೆ ಹೊಲಹಸನಾದ ಮೇಲೆ ಒಡೆಯನ ಕಣ್ಣು ಕೆಂಪಗಾದುವಂತೆ— ಅಲ್ಲಿಯ ಆಡಳಿತದ ಸೂತ್ರಚಾಲಕರಾದ ಬಿಳಿಯರು, ನಾತಾಳದ ಪ್ರದೇಶವೈಶಿಷ್ಟ್ಯವನ್ನರಿತು, ದರ್ಬಾನ್ ನಗರದ ವಸತಿಸೌಕರ್ಯವನ್ನು ಕಂಡು, ಅಧಿಕಾರಬಲದಿಂದ ಅವುಗಳನ್ನು ಆಕ್ರಮಿಸಿಕೊಂಡರು; ಭಾರತೀಯರನ್ನು ನಾಡಿನ ಹೊಲೆಯರಂತೆ ಕಾಣತೊಡಗಿದರು. ಎಲ್ಲ ಕಡೆಗೂ ಅವರಿಗಲ್ಲಿ ತಿರಸ್ಕಾರದ ಏಟುಗಳು ಬೀಳುತ್ತಲಿವೆ.

ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರಿಗೆ ಇಂದು ನಾಡಿನಲ್ಲಿ ಬಹುಮತದ ಬಲವಿಲ್ಲ, ಆಡಳಿತದಲ್ಲಿ ಸ್ಥಾನವಿಲ್ಲ, ದೇಶದ ಜನರ— ಅಧಿಕಾರಿಗಳ—ಸಾಮಾಜಿಕ ಪ್ರೀತಿಯಿಲ್ಲ, ಅವರ ದೂರನ್ನು ಕೇಳುವ ನ್ಯಾಯಬುದ್ಧಿಯ ಸಹೃದಯರ ಮಾತಿಗೆ ಮನ್ನಣೆಯಿಲ್ಲ. ಸ್ವದೇಶದಲ್ಲಿಯೇ ಹೀಗಾದ ಮೇಲೆ—ನಡೆಯುವವರ ಕಾಲಿಗೇ ನಮಸ್ಕಾರ—ಮಾಡುವ ಸಹಜಸ್ವಭಾವದ—ವಿಶ್ವ ರಾಷ್ಟ್ರಗಳಲ್ಲಿ, ಅವರ ಗೋಳನ್ನು ಯಾರು ಕೇಳುವರು? ನಿರುಪಾಯರಾಗಿ ಅವರಿಂದು ಅತ್ಮೀಯಭಾವದಿಂದ ಭಾರತ ಸರಕಾರಕ್ಕೂ ಭಾರತದ ಜನತೆಗೂ ಮೊರೆಯಿಟ್ಟಿದ್ದಾರೆ. ಹೇಗಾದರೂ ತಮ್ಮನ್ನು ಮನುಷ್ಯರಂತೆ ಬದುಕಲು ದಾರಿಮಾಡಿಕೊಡಿರೆಂದು ದೈನ್ಯಧ್ವನಿಯಿಂದ ಕೂಗಿಕೊಳ್ಳುತ್ತಲಿದ್ದಾರೆ. ಆದರೆ ಭಾರತ ಸರಕಾರ, ಅಳುವವರ ಕಣ್ಣನ್ನು ಒರಸಲು ತನ್ನ ಕಳವಳದ ಕೈಯನ್ನು ಚಾಚಿತಾದರೂ—ಅದೇಕೊ—ಚಾಚಿದ್ದಂತೆಯೆ ಹಿಂದಕ್ಕೆ ಸರಿಸಿಕೊಂಡಿತೇನೊ!— ಅದರ ಪರಿಣಾಮವೇನೂ ಕಾಣ-

(೫೭ ನೆಯ ಪುಟ ನೋಡಿರಿ.)

೧. ಯಶ್ಕ-ಪತ್ರ-ವ್ಯವಹಾರ !

['ಗಾಂಧಿಯವರು ನನಗೊಂದು ಕಾಗದವನ್ನು ಬರೆಯಬಾರದೆ ? ಒಂದೇ ಒಂದು ಕಾಗದವನ್ನು ಬರೆದರೆ ಸಾಕು' ಎಂಬ ಜಿನಾಶಾಹೇಬರ ಆರ್ಭಟೆಯಿಂದ ಆವೇಶಿತನಾಗಿ ಮುಂಗರಾಯನು ಮಹಾತ್ಮರಿಗೆ ಈ ಮಾದರಿಯನ್ನು ಸೂಚಿಸುತ್ತಾನೆ].

ಕಾಯ್ದೆ-ಅಜಂ-ಕಂಠೀರವರಿಗೆ—

ಮೋಹನದಾಸನು ಮಣಿದು ಮೊಣಕಾಲೂರಿ ಈ ಪತ್ರದ್ವಾರಾ ತಿಳಿಸುವುದೇನೆಂದರೆ— ತರುವಾಯ ನಾನು ಕ್ಷೇಮದಿಂದಿದ್ದೇನೆ. ಈ ಮಾತನ್ನು ಕೇಳಿ ಮುಸ್ಲಿಂ ಲೀಗಿಗೆ ಅಸಮಾಧಾನವಾಗುತ್ತಿದ್ದರೆ ಕ್ಷಮೆ ಬೇಡುವೆ. ನಾನು ಜೇಲಿನ ಹೊರಗಿದ್ದಾಗ ತನಗೆ ಪತ್ರ ಬರೆಯಬೇಕೆಂದರೆ— ಆಗ ಓದಲು ತನಗೆ ಬಿಡುವಿರಲಿಲ್ಲವಂತೆ ; ಈಗ ತನಗೆ ನನ್ನ ಪತ್ರ ಬೇಕೇ ಬೇಕೆಂದು ತಾವು ಪಟ್ಟು-ತೊಟ್ಟಿದ್ದರಿಂದ ಬರೆಯುತ್ತಲಿದ್ದೇನೆ. ಆದರೆ ಈ ಪತ್ರವೂ ತನ್ನ ಕೈಸೇರಲಿಕ್ಕಿಲ್ಲವೆಂಬ ಹೆದರಿಕೆ ನನಗೆ. ಯಾಕೆಂದರೆ 'ಪಾಕಿಸ್ತಾನ್' ವಿಳಾಸಕ್ಕೆ ಬರೆದಿರುವೆ. ಎರಡು ಸಲ ಆಂಚೆ ಖಾತೆಯವರು ಅದನ್ನು ನನಗೇ ವಾಪಸು ಮಾಡಿದ್ದಾರೆ. ಕಾರಣ, ದಯವಿಟ್ಟು ತನ್ನ ಸರಿಯಾದ ವಿಳಾಸವನ್ನು ತಿಳಿಸಿದರೆ. ತಪ್ಪದೆ ಕಾಗದವನ್ನು ಬರೆಯುವೆನೆಂದು ವಚನವನ್ನು ಕೊಡುವ

ತಮ್ಮ ನನ್ನ ಸೇವಕ
ಮೋಹನದಾಸ.

ತಾ. ಕ :—ದಯವಿಟ್ಟು ನಾನು ಕಾಗದದಲ್ಲಿ ಏನು ಬರೆಯಬೇಕೆಂಬುದನ್ನು ತಿಳುಹಿಸಿದರೆ ಉಪಕಾರವಾದೀತು

ಮೋ.

ಪೀ. ತಾ. ಕ :—ತಮ್ಮಿಂದ ಬೇಗ ಕಾಗದ ಬರದಿದ್ದರೆ, ಬೇಸ ಪೋಸ್ಟಲ್ ಡಿಪೊ ವಿಳಾಸಕ್ಕೆ ಕಳುಹಿಸುವುದನ್ನು ನಿಶ್ಚಯಿಸಿದ್ದೇನೆ.

ಮೋ. ಕ.

ವಿ. ತಾ. ಕ :—ನನ್ನ ವಿಳಾಸ ತಪ್ಪುಗೆ ಗೊತ್ತಿದೆಯಷ್ಟೆ ! ನಾನು ಹಿಂದುಸ್ತಾನದಲ್ಲಿದ್ದೇನೆ.

ಮೋ. ಕ. ಗಾಂ.

* * *

೨. ಎಚ್ಚರ—ಎಂದರೆ—ತಪ್ಪೀತು !

(೧) 'ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರ ಅವಮಾನ ಮಾಡಿದರೆ— ಎಚ್ಚರ! ಸ್ಮಟ್ಸ್ ಸಾಹೇಬನೆ, ಎಚ್ಚರ !

(೨) 'ಹಿಂದು-ಮುಸಲ್ಮಾನರಲ್ಲಿ ಒಡಕನ್ನು ಹುಟ್ಟಿಸುವ ತಂತ್ರವನ್ನು ನಡೆಸಿದರೆ— ಎಚ್ಚರ! ಬ್ರಿಟಿಶನೆ, ಎಚ್ಚರ !

(೩) 'ಮುಸ್ಲಿಂ ಲೀಗಿನ ಹೊರತು ಮತ್ತೆ ಯಾರಾದರೂ ಮಂತ್ರಿಮಂಡಳವನ್ನು ಹೂಡಿದರೆ— ಎಚ್ಚರ! ಪ್ರಜಾಪ್ರತಿನಿಧಿಗಳೆ, ಎಚ್ಚರ !

(೪) 'ಪಾಕಿಸ್ತಾನವನ್ನು ಬದಿಗೊತ್ತಲು ಯತ್ನಿಸುವುದಾದರೆ— ಎಚ್ಚರ! ಕಾಂಗ್ರೆಸಿಗರೆ, ಎಚ್ಚರ!

(೫) 'ಗಾಂಧಿಯು ನನಗೆ ಪತ್ರ ಬರೆಯುವಾಗ ಕಾಗದದ ಅಭಾವವಾದರೆ— ಎಚ್ಚರ! ಮಹಾಯುದ್ಧವೆ, ಎಚ್ಚರ !

(೬) 'ಹಿಂದೀಯರಿಗೆ ರಾಜಕೀಯ ಅಧಿಕಾರವನ್ನು ಕೊಡದಿದ್ದರೆ— ಎಚ್ಚರ! ಕೊಪ್ಪರೊ— ಎ-ಚ್ಚ-ರ !

(೭) 'ಪಾಕಿಸ್ತಾನವೆಂದರೆ ಲಾಹೋರದ ಗೊತ್ತು ಇಲ್ಲ—ಎಂದು ಎಚ್ಚರ! ಲಾಹೋರ ಎಂದರೆ ಪಾಕಿಸ್ತಾನದ ಮೂಲೆಗಲ್ಲು— ಎಂದೂ ಎಚ್ಚರ!

(೮) 'ನನ್ನ ಭಾಷಣದ ಅರ್ಥವನ್ನು ತಿಳಿದುಕೊಂಡರೆ—ಎಚ್ಚರ! ನನಗೇ ಕೇಳೀರಿ— ಎಚ್ಚರ !

(೯) 'ಆಮೇರಿಯನರಿಗೆ, ಬ್ರಿಟಿಷರಿಗೆ, ಫ್ರೆಸರಾಯರಿಗೆ, ನರ್ವರಿಗೆ, ಸಕಲರಿಗೆ—ನನ್ನ ಬಾಂಧವರೆ, ನಿಮಗೆ—ಎಲ್ಲರಿಗೂ ಎಚ್ಚರ! ಯಾಕೆಂದರೆ (೧೦) 'ನನ್ನ ಎಚ್ಚರ ತಪ್ಪಿದೆ!'

[ಮುಸ್ಲಿಂ ಲೀಗದ ಅಧ್ಯಕ್ಷರ ಮೇಲಿನ ಸಾರಾಂಶದ ಭಾಷಣವನ್ನು, ಕೇಳಲಾರದಷ್ಟು ಚಪ್ಪಾಳೆಯ ಕಡ-ಕಡಾಟದಿಂದ ಅಧಿವೇಶನವು ಸ್ವೀಕರಿಸಿತು—ಎಂದು ಮಂಗರಾಯನ ವಿಶೇಷ ಸುದ್ದಿಗಾರನು ಬರೆಯುತ್ತಾನೆ. ಪಾಕಿಸ್ತಾನ ಝಿಂದಾಬಾದ್! ಅಲ್ಲಾಹೋ-ಅಕ್ಬರ್! ಎಲ್ಲಾರಿಗೂ ಎಚ್ಚರ!]

* * *

೩. ಜ್ಞಾನದ ವ್ಯವಹಾರ

ಮುಂಗರಾಯನಿಗೆ ವ್ಯವಹಾರಜ್ಞಾನ ಎಷ್ಟಿದೆ ಎಂಬುದೊಂದು ಮಹತ್ವದ ಪ್ರಶ್ನೆಯಾಗಿದೆ.


ಹಾರ್ಮೋನಿಯಂ ಶಿಕ್ಷಕ
ಈ ಪುಸ್ತಕದ ಸಹಾಯದಿಂದ ಫಿಡಲ್, ಸತಾರ, ಕೊಳಲು, ಬರಬುಟು, ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ಸಶಾಸ್ತ್ರೀಯವಾಗಿ ಶಿಕ್ಷಕರಿಲ್ಲದೆ ಕಲಿಯಲು ಉಪಯುಕ್ತವಾದದ್ದು — ಸುಮಾರು ೨೦೦ — ಹಿಂದುಸ್ತಾನಿ ಟಿಯೂನ್ಸ್, ಗ್ರಾಮೊಫೋನ ರಿಕಾರ್ಡಿನಲ್ಲಿಯ ಹಾಡುಗಳ ಸ್ವರಗಳ ಸೋದೆ. — ಕನಸಗಳಿರುವವು.
18.V.PH

ಪುಸ್ತಕ ದೊರೆಯುವ ಸ್ಥಳ :
ವಾಗ್ವಿಲಾಸ ಬುಕ್-ಡಿಪೊ, ಹುಬ್ಬಳ್ಳಿ.

ಇದಕ್ಕೆ ಉತ್ತರ ಒಂದೇ ಧಾರಣೆ ಏರಿದ ಇಂದಿನ ಕಾಲದಲ್ಲಿ ಮಂಗರಾಯನ ವ್ಯವಹಾರ-ಜ್ಞಾನದ ಬೆಲೆ ಏರಿದೆ; ಇಷ್ಟೇ ಅಲ್ಲ, ಧಾರಣೆ ನಿಯಂತ್ರಣದ ಮೂಲಕವಾಗಿ ಆದು ಅನೇಕರಿಗೆ ದೊರೆಯದಂತಾಗಿದೆ. ಹೀಗೆ ದೊರೆಯದೆ ತಳ ನುಳಿಸುತ್ತಿರುವ ಒಬ್ಬ ಸಂಪಾದಕರಿಗೆ 'ಹಸಿ ಮೆಣಸಿನಕಾಯಿ ಚಟ್ನಿ'ಗಾಗಿ ಬಾಯಿಗೆ ನೀರು ಬಿಟ್ಟು ಮಾತುಗಳೆ ಸರಿಯಾಗಿ ಬಾರದಂತಾಗಿದೆ. ಇದೂ ಅಲ್ಲದೆ ವ್ಯವಹಾರಜ್ಞಾನದ ಪೂರೈಕೆ ಸಾಕಷ್ಟಿಲ್ಲದುದಕ್ಕೆ 'ಆರೆಮರುಳ ಲೇಖಕ'ರಿಗೆ ಚಂದಾದಾರಿಕೆಗಾಗಿ ತಮ್ಮ ಪತ್ರಿಕೆಗಳಲ್ಲಿ ಸ್ಥಾನವನ್ನು ಕೊಡಬಯಸುತ್ತಾರೆ. ಅರ್ಥಾತ್, ಕಳೆದ ಸಲ ಮಂಗರಾಯನು ಕಾಣಿಸಿದ ಪತ್ರಗಳು ಇನ್ನೂ ಮಂಗರಾಯನ ಫೈಲಿನಲ್ಲಿರುವುದರಿಂದ ಹೀಗೆ ಹೇಳಬೇಕಾಗಿದೆ: 'ಚಂದಾದಾರರಾದರೆ ನಮ್ಮ ಲೇಖನ (ಕವಿತೆಯ) ನ್ನು ಪ್ರಕಟಿಸುವೆವು' ಎಂದು ಬರೆದರೆ ತಪ್ಪೇನೊ— ಮಂಗರಾಯನಿಗೆ ತಿಳಿಯದಾಗಿದೆ. ಲೇಖಕನು ಚಂದಾದಾರನಾಗದಿದ್ದರೆ ಸಿಟ್ಟೇಕೊ—ಅದೂ ತಿಳಿಯದಾಗಿದೆ. ಕೆಲವು ಪತ್ರಿಕೆ ಲೇಖ-ಬರೆಯಲು ಯೋಗ್ಯ, ಕೆಲವು ಕೊಂಡು ಓದಲು ಯೋಗ್ಯ, ಕೆಲವು— ಹೀಗೇ ಆಯಾ ಪತ್ರಿಕೆಗೆ ಆದರದರ ಯೋಗ್ಯತೆ ಇರುವಾಗ—ಎಂದರೆ ಕರ್ನಾಟಕವು ಅಷ್ಟೊಂದು ನೈನಿಧ್ಯದ ಸಾಹಿತ್ಯದಿಂದ ಮುಂದರಿವಾಗ ಆನಂದದಿಂದ 'ಜಯಕರ್ನಾಟಕ' ಎಂದು ಕೂಗಬೇಕಲ್ಲದೆ— 'ಪರಾಜಯಂತಿ' (inferiority complex) ಗೆ ಆಯಾತಿಯಾಗಬಾರದು. ಇದಲ್ಲದೆ—ತಾನು ಬರೆದದ್ದನ್ನು ತಾನೇ ಓದಬೇಕಾದ ಇಂದಿನ ದಿವಸಗಳಲ್ಲಿ ಲೇಖಕನು ಚಂದಾದಾರನಾಗುವುದು ನಿಯಮ ಪ್ರಾಪ್ತವಲ್ಲವೆ? ಹಳೆಯ ಕಾಗದದ ಬೆಲೆ ಏರಿದ್ದರಿಂದ, ಇಂತಹ ಸೂಚನೆಯಿಂದ ಆ ಸಂಪಾದಕರು ಲೇಖಕ್ಕೆ ವೇತನವನ್ನು ಕೊಡುತ್ತಲಿದ್ದಾರೆ ಎಂದೂ ತಿಳಿಯಬಹುದು. ತಾತ್ಪರ್ಯವೇನೆಂದರೆ—

ಹಹಹ! ತಿಳಿಯಿತಲ್ಲವೆ?

* * *

(೨೨೬ನೆಯ ಪುಟದಿಂದ ಮುಂದುವರಿದುದು.)

ಲಿಲ್ಲ. ಇನ್ನು ಇಲ್ಲಿಯ ಜನರು! ದ. ಆಫ್ರಿಕದಲ್ಲಿಯ ಭಾರತೀಯರು ಅಲ್ಲಿಯ ಅಡಳಿತದ ಗುಲಾಮರು; ಭಾರತದಲ್ಲಿಯ ಭಾರತೀಯರು ಇಲ್ಲಿಯ ಅಡಳಿತದ ಗುಲಾಮರು! ತಮ್ಮ ದೇಶದಲ್ಲಿ ತಮ್ಮ ಮಾತನ್ನು ನಡೆಯಿಸುವ ಸಾಮರ್ಥ್ಯ ಇವರಿಗಿದ್ದರೆ, ನಾವಾಳ ಸರಕಾರವನ್ನು ಎದುರಿಸುವ ಅಧಿಕಪ್ರಸಂಗತನವನ್ನಿವರು ಮಾಡಬೇಕಲ್ಲವೆ?

'ಸ್ವಾತಂತ್ರ್ಯವೀರ' ಸಾವರಕರರು ಸಾರಿಸಾರಿ ಹೇಳಿದರು; 'ಕಾಯುವೆ ಆಜಂ' ಜಿನ್ನಾ ಅವರು ಜಗಿಜಗಿದು ಗರ್ಜಿಸಿದರು; ನಾಮದಾರ್ ಶಾಸ್ತ್ರಿಗಳು ತಮ್ಮ ಶಾಸ್ತ್ರವನ್ನು ಬಿಚ್ಚಿದರು; ಅಲ್ಲಲ್ಲಿ ಸಭೆ-ಸಮ್ಮೇಲನಗಳಾಗಿ ಸಹಾನುಭೂತಿ-ನಿಷೇಧಗಳ ಗೊತ್ತುವಳಿಗಳಾದುವು. ಆದರೆ ನಾವು ಬಹಳ ಕಾಲದಿಂದಲೂ ಗೊತ್ತುವಳಿಗಳನ್ನು ಮಾಡುತ್ತ ಬಂದಿರುವುದನ್ನೂ ಅದರ ಬೆಲೆಯನ್ನೂ, ನಮ್ಮ ಸರಕಾರ, ದಕ್ಷಿಣ ಆಫ್ರಿಕೆಯ ಸರಕಾರ, ಮಿತ್ರರಾಷ್ಟ್ರಗಳು ಇವೆಲ್ಲವೂ ಚೆನ್ನಾಗಿ ಬಲ್ಲವು. ಆದುದರಿಂದಲೆ ದಕ್ಷಿಣ ಆಫ್ರಿಕೆಯ ಶಾಸನಮಂಡಲದಲ್ಲಿ, ಭಾರತೀಯರ ಹೃದಯಕ್ಕೆ ಬರೆಯನ್ನೆಳೆಯುವ ಶಾಸನದ ಮಸೂದೆಯು ಎರಡನೆಯ ಸಲವೂ ಪ್ರಚಂಡ ಬಹುಮತದಿಂದ ಮನ್ನಣೆಯನ್ನು ಪಡೆಯಿತು. ಮೂರನೆಯ ಸಲವೂ ಮನ್ನಣೆ ಪಡೆಯುವುದರದು. ನಿರ್ಗತಿಕರಾದ ಅಲ್ಲಿಯ ಭಾರತೀಯರು ಮನುಷ್ಯರಂತೆ ಬದುಕುವಬಗೆ ಹೇಗೆ?

ಭಾರತ ಸರಕಾರ, ಭಾರತೀಯರ ಹಿತಸಂಬಂಧವನ್ನೇ ಗಣಿಸದ—ಬಂಡವಾಳಗಾರರನ್ನೇ ಎತ್ತಿಹಿಡಿಯುವ— ಭಾರತೀಯ ಸರಕಾರ, ಈಗ ದಕ್ಷಿಣ ಆಫ್ರಿಕಾ ಸರಕಾರದ ದಾಕ್ಷಿಣ್ಯವನ್ನೇ ನೋಡಬಹುದಲ್ಲದೆ, ಅಲ್ಲಿಯ ಭಾರತೀಯರ ಹಿತಕ್ಕಾಗಿ ಏನನೂ ಮಾಡಲಾರದು. ಇನ್ನು ನಮ್ಮ ಜನರ ವಿಚಾರ: ತಾನೇ ಕಾಣದ ಪಾಪಿ ಹೆರವರಿಗೆ ಇನ್ನೇನು ಕೊಟ್ಟೀತು? ನಮ್ಮಿಂದ ಈಗ ನಾವಾಳದ ಹಿಂದೀಯರ ಹಿತವೂ ಸಾಧಿಸುವಂತಿಲ್ಲ, ನಾವಾಳದ ಹಿಂದೀಯರ ಹಿತವೂ ಸಾಧಿಸುವಂತಿಲ್ಲ! ಭಾರತದ ಸ್ವಾತಂತ್ರ್ಯವನ್ನು ಗಳಿಸಿಕೊಂಡಲ್ಲದೆ ಭಾರತೀಯರ ಬೆಳಕು ಹೊರಗೆ ಎಲ್ಲಿಯೂ ಬೀಳಲಾರದು; ಅವರ ಕೂಗು ಎಲ್ಲಿಯೂ ಕೇಳಲಾರದು! ಮೊದಲು ಸ್ವಾತಂತ್ರ್ಯಸಾಧನೆ ಮಾಡಿಕೊಳ್ಳಬೇಕು; ಆಮೇಲೆ ಭಾರತೀಯರ ವಿರೋಧಿಗಳೊಡನೆ ಮಾತನಾಡಲು ಮುಂದುವರಿಯಬೇಕು! ಅದಿಲ್ಲವಾದರೆ, ಬಿದ್ದವರಾದ ಕಾರಣ ಎದ್ದು ನಡೆದವರ ತುಳಿತಕ್ಕೆ ಒಳಗಾಗಬೇಕಾಗುವುದು ಅನಿವಾರ್ಯ. ಸ್ವಾತಂತ್ರ್ಯ ಸಾಧನೆಗೆ ಪೌರುಷ ಬೇಕು; ವೀರ ಬೇಕು; ಕರ್ತವ್ಯಜಾಗೃತಿ ಬೇಕು; ಕಾರ್ಯಸಾತತ್ಯ ಬೇಕು, ಅಕ್ಷಯವಾದ ಆಶಾವಾದ ಬೇಕು!

ಜಯಂತಿಯ ಏಜಂಟರಿಗೆ:—

ಕಾಗದದ ತೀರ ಕಡಿಮೆ ದೊರೆತುದರಿಂದ ಕಳೆದ ಏಪ್ರಿಲ್ ಸಂಚಿಕೆಗಳನ್ನು ನಮ್ಮ ಏಜಂಟರಿಗೆ ಸಲ್ಲಿಸಲಿಕ್ಕಾಗಲಿಲ್ಲ. ಕೇವಲ ಚಂದಾದಾರರಿಗೆ ಬೇಕಾಗುವಷ್ಟು ಪ್ರತಿಗಳನ್ನು ಮಾತ್ರ ಮುದ್ರಿಸಲಾಗಿದ್ದಿತು. ಅನಿವಾರ್ಯವಾಗಿ ಒದಗಿದ ಈ ಸಾಂದರ್ಭಿಕ ಆಪತ್ತಿಗಾಗಿ ನಮ್ಮ ಏಜಂಟರೆಲ್ಲರೂ ತೊಂದರೆಪಡಬೇಕಾಗಿ ಬಂದಿತು. ಇದಕ್ಕಾಗಿ ನಮಗೆ ತುಂಬ ವಿಷಾದವೆನಿಸುವುದು. ಆದರೆ ಇನ್ನೇನನ್ನೂ ಮಾಡುವಂತಿರಲಿಲ್ಲ. ಈಗ ಕೂಡ ಮೊದಲಿನಷ್ಟು ಕಮಿಶನ್ ಕೊಟ್ಟು ಏಜಂಟರಿಗೆ ಪ್ರತಿಗಳನ್ನು ಪೂರೈಸುವುದು ರಹ್ಯವಿಲ್ಲವಾದರೂ, ಹಲವು ಜನರು ಜಯಂತಿಯ ಮೇಲಿನ ವಿಶ್ವಾಸದಿಂದ 'ಕಮಿಶನಿನ ಆವಶ್ಯಕತೆ ಸಮಗಿಲ್ಲ. 'ಜಯಂತಿ'ಯನ್ನು ಅಪೇಕ್ಷಿಸುವವರನ್ನು ನಿರಾತೆಗೊಳಿಸಲಾರೆವು. ಆದುದರಿಂದ ಮೊದಲಿನಂತೆ ಪ್ರತಿಗಳನ್ನು ಕಳುಹಿಸುತ್ತಿರಲೇಬೇಕು!' ಎಂಬರ್ಥದ ಪತ್ರಗಳನ್ನು ಬರೆದಿದ್ದಾರೆ. ಹೀಗೆ ಪತ್ರ ಬರೆದ ಅಭಿಮಾನಿಗಳೆಲ್ಲರಿಗೂ ಕೃತಜ್ಞತೆಯ ವಂದನೆಗಳು.

ಏಜಂಟರ ಈ ಕೋರಿಕೆಯನ್ನು ಅರಿತು ಕೆಲಕೆಲವು ಪ್ರತಿಗಳ ನ್ನಾದರೂ ಅವರಿಗೆ ಪೂರೈಸುತ್ತಲಿರಬೇಕೆಂದು ನಿರ್ಣಯಿಸಿದ್ದೇವೆ. ಈಗ ಬಿಡಿಸಂಚಿಕೆಯ ಬೆಲೆ ಆರಾಣೆ ಇರಿಸಲಾಗಿದೆ. ಒಟ್ಟು ವ್ಯವಹಾರದಲ್ಲಿ ೧೦೦ಕ್ಕೆ ೧೫ರಂತೆ ಏಜಂಟರಿಗೆ ಕಮಿಶನ್ ಕೊಡಬಹುದಾಗಿದೆ. ಮಾರದೆ ಉಳಿದ ಪ್ರತಿಗಳನ್ನು ಯಾವ ಕಾರಣದಿಂದಲೂ ಮರಳಿ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಎಲ್ಲ ಏಜಂಟರೂ ತಮಗೆ ಬೇಕಾಗುವ ಪ್ರತಿಗಳ ನಿಕೃಷ್ಟ ಸಂಖ್ಯೆಯನ್ನು ಪ್ರತಿತಿಂಗಳ ಹತ್ತನೆಯ ತಾರೀಖಿನೊಳಗಾಗಿ ಕಾರ್ಯಾಲಯಕ್ಕೆ ಬರೆದು ತಿಳಿಸುತ್ತಿರಬೇಕು. ವ್ಯವಹಾರ ಬೇಕಿಲ್ಲದವರೂ ದಯೆಯಿಟ್ಟು ಬರೆದು ತಿಳಿಸಬೇಕು. ಹಣ ಕೊಡಬೇಕಾಗಿರುವ ಏಜಂಟರೆಲ್ಲರೂ ಕೂಡಲೆ ಎಲ್ಲ ಹಣವನ್ನು ತಲ್ಪಿಸಿ, ರಸೀದಿ ಪಡೆದುಕೊಳ್ಳಬೇಕು.

—ಸಂಪಾದಕರು

ಅಧಿಕಾರಲಾಲಸೆ

ಶ್ರೀ 'ಬಲ್ಲಾಳ' ಧಾರವಾಡ

★

ಅಧಿಕಾರಲಾಲಸೆಯು ಮಾನವನಲ್ಲಿಯೆ-ದೊಂದು ಮೂಲಪ್ರವೃತ್ತಿ. ಈ ಮೂಲ ಪ್ರವೃತ್ತಿಯ ಕನಸೇ ಮೊದಲು ದೇವರನ್ನು ನಿರ್ಮಿಸಿತು. ದೇವನಂತಹ ಅಧಿಕಾರ ಪ್ರಾಪ್ತಿಗಾಗಿಯೇ ಮನುಷ್ಯ ಹಗಲಿರುಳು ಹವಣಿಸುತ್ತಿರುತ್ತಾನೆ. ಆ ಹವಣಿಕೆಯ ಪರಿಣಾಮವೇ ಮನುಷ್ಯಜನಾಂಗದ ಜೀವನವೈವಿಧ್ಯ!

★

ಮನುಷ್ಯನಲ್ಲಿ ಮತ್ತು ಮಿಕ್ಕ ಪ್ರಾಣಿಗಳಲ್ಲಿ ಎಷ್ಟೋ ಬಗೆಯ ವೈಷಮ್ಯಗಳಿವೆ. ಅವುಗಳಲ್ಲಿ ಕೆಲವು ಬೌದ್ಧಿಕವಾದುವು, ಇನ್ನು ಹಲವು ಭಾವನಾತ್ಮಕವಾದುವು. ಭಾವನೆಯ ಒಂದು ಮುಖ್ಯವಾದ ವಿಷಮತೆಯೆಂದರೆ ಮಾನವನ ಕೆಲವು ಇಚ್ಛೆಗಳು ಮಿತಿ ಇಲ್ಲದಂತಹವುಗಳಾಗಿರುತ್ತವೆ; ಆ ಇಚ್ಛೆಗಳನ್ನು ತೃಪ್ತಿ-ಪಡಿಸುವ ಸಾಮರ್ಥ್ಯವೇ ಅವನಿಗೆ ಇರುವುದಿಲ್ಲ. 'न जातु कामः कामानाम् उपभोगेन शाम्यति।' ಎಂಬ ಯಯಾತಿಯ ಅನುಭವವೇ ಸತ್ಯ. ಆದರೆ ಪ್ರಾಣಿಗಳಲ್ಲಿ ಹೀಗೆ ಇರುವುದಿಲ್ಲ. ಹೆಚ್ಚಾವು ಒಮ್ಮೆ ಒಂದು ಪ್ರಾಣಿಯನ್ನು ಸುಂಗಿ ಬಿದ್ದಿತೆಂದರೆ, ಮರುದಿನ ಹೊಟ್ಟೆ ಹಸಿವವರೆಗೂ, ಅದು ಏಳುವುದಿಲ್ಲ. ಹಾಗಾದರೆ ಉಳಿದ ಕೆಲವು ಪ್ರಾಣಿಗಳೂ ಇದರಂತೆಯೆ ಏಕೆ ಮಾಡುವುದಿಲ್ಲವೆಂಬ ಪ್ರಶ್ನೆಯು ಬರುವುದು. ಅದಕ್ಕೆ ಕಾರಣವೆಂದರೆ, ಆ ಪ್ರಾಣಿಗಳಿಗೆ ಹೊಟ್ಟೆಗೆ ಸಾಕಷ್ಟು ದೊರೆಯುತ್ತಿರುವುದಿಲ್ಲ; ಅಥವಾ ಅವುಗಳಿಗೆ ಹಗೆಗಳ ಹೆದರಿಕೆ ತಪ್ಪಿರುವುದಿಲ್ಲ. ಕೆಲವು ಅಪವಾದಗಳನ್ನು ಬಿಟ್ಟರೆ, ಸಾಮಾನ್ಯವಾಗಿ ಪ್ರಾಣಿಗಳು ಜೀವಿಸುವುದು ಎರಡು ಬಗೆಯ ಪ್ರಾಥಮಿಕ ಪ್ರೇರಣೆಗಳಿಂದ: (೧) ತಾನು ಬದುಕಿರಬೇಕು, (೨) ತನ್ನ ಪೀಳಿಗೆಯನ್ನು ಹೆಚ್ಚಿಸಬೇಕು. ಇದಕ್ಕಿಂತಲೂ ಹೆಚ್ಚಿನ ಅವಶ್ಯಕತೆಯಾಗಲಿ, ಇಚ್ಛೆಯಾಗಲಿ ಅವುಗಳಿಗಿರುವುದಿಲ್ಲ.

ಆದರೆ ಮನುಷ್ಯನ ಮಾತು ಬೇರೆ. ತನ್ನ ಅವಶ್ಯಕತೆಗಳನ್ನು ಪೂರಯಿಸಿಕೊಳ್ಳುವುದಕ್ಕಾಗಿಯೇ ಮಾನವಜನಾಂಗಕ್ಕೆ ಹಗಲಿರುಳೂ ದುಡಿಯಬೇಕಾಗುವುದು. ಇದರಿಂದ ಬೇರೆ ಕೆಲಸಗಳನ್ನು ಮಾಡುವುದಕ್ಕೆ ತೀರ ಸ್ವಲ್ಪ ಶಕ್ತಿಯು ಉಳಿಯುವುದು. ಹಾಗಾದರೆ ಉಪಜೀವನವು ಜೆನ್ನಾಗಿ ನಡೆದೊಡನೆಯೆ ಮನುಷ್ಯನು ಏನೊಂದು ಕೆಲಸವನ್ನೂ ಮಾಡದೆ ತಣ್ಣಗೆ ಕುಳಿತು ಬಿಡುವನೇ? ಇಲ್ಲ, ಅವನಿಗೆ ಹೊಟ್ಟೆ-ಬಟ್ಟೆಗೆ ಸಾಕಷ್ಟು ದೊರೆತೊಡನೆಯೆ ಮತ್ತೊಂದು ಕೆಲಸಕ್ಕೆ ತೊಡಗುವನು. **ಫ್ಲೋರೆನ್ಸಿನನು** ಅಥೇನ್ ದೇಶದ ಮೇಲೆ ದಾಳಿಮಾಡಿದಾಗ, ಅವನಿಗೆ ಅನ್ನವಿರಲಿಲ್ಲ-ವೆಂತಲ್ಲ. ಪಸ್ತ್ರದ ಕೊರತೆಯೂ ಇರಲಿಲ್ಲ. ಹೆಂಡಂದಿರಿರಲಿಲ್ಲ-ವೆಂತಲೂ ಇಲ್ಲ. 'ಟ್ರಿನಿಟಿ ಕಾಲೇಜಿನ ಪ್ರಾಧ್ಯಾಪಕನಾದ ದಿನದಿಂದ ನನಗೆ ಹೊಟ್ಟೆ-ಬಟ್ಟೆಗಳ ಚಿಂತೆ ತಪ್ಪುವುದು ನಿಶ್ಚಿತ' ಎಂದು **ನ್ಯೂಟನ್**ನಿಗೆ ಗೊತ್ತಿದ್ದಿತು; ಆದರೆ ಪ್ರಾಧ್ಯಾಪಕನಾದ ಮೇಲೆ ಇವನು 'ಪ್ರಿನ್ಸಿಪಿಯಾ' ಗ್ರಂಥವನ್ನು ಬರೆದಿದ್ದಾನೆ. ಇದೆಲ್ಲ ಕೇವಲ ಕರ್ತೃತ್ವಶಾಲಿಗಳಾದ ಜನರ ಕತೆಯಾಯಿತು. ತೀರ ಮಂದಬುದ್ಧಿಯುಳ್ಳ ಕೆಲವು ಜನರನ್ನು ಬಿಟ್ಟರೆ, ಮಿಕ್ಕ ಎಲ್ಲ ಮಾನವರಲ್ಲಿಯೂ ಹೆಚ್ಚು-ಕಡಿಮೆಯ ಪ್ರಮಾಣಗಳಲ್ಲಿ ಮೇಲೆ ಹೇಳಿದ ವೈಶಿಷ್ಟ್ಯವೇ ಕಂಡು ಬರುವುದು. ತನ್ನ ಗಂಡನಿಗೆ ವ್ಯಾಪಾರದಲ್ಲಿ ಯಶಸ್ಸು ದೊರೆವುದೆಂದು ಪೂರ್ಣ ವಿಶ್ವಾಸವಿದ್ದ ಮತ್ತು ಮನೆಗೆಲಸದ ಯಾವ ಹೊಣೆಯೂ ಇಲ್ಲದ ಶ್ರೀಮತಿ 'ಆ' ಇವಳು, ಶ್ರೀಮತಿ 'ಈ' ಇವಳಿಗಿಂತ ಜೆನ್ನಾಗಿ ತನ್ನ ಉಡುಪುಗಳನ್ನು ಮಾಡಲು ಬಯಸುತ್ತಾಳೆ. ಇದಕ್ಕೂ ಕಡಿಮೆಯ ಪೆಚ್ಚಿದ ಉಡುಪುಗಳಿಂದ ಎಂತೆಂತಹ ವಿಷಮ ಶೀತ-ಜ್ವರದ ಬಾಧೆಯನ್ನೂ ಕಳೆದುಕೊಳ್ಳಬಹುದು, ಆದರೂ 'ಆ' ನ ಮೋಹಕ ಬಟ್ಟೆಯ ಹಂಬಲನ್ನು ಬೆಂಬತ್ತಿ ಹೊರಡುವಳು 'ಈ'

ಹಗಲುಗನಸುಗಳಲ್ಲಿ ತನ್ನ ಮನೋರಥಗಳನ್ನು ಪೂರಯಿಸಿ-ಕೊಳ್ಳುವುದಕ್ಕೆ ಆಡ್ಡಿಮಾಡುವ ಸಾಮರ್ಥ್ಯವು ಯಾವನಿಗೂ ಇಲ್ಲ. ಮನೋಭೀಷ್ಟವು ಕೈಗೂಡುವುದೆಂದು ಎನಿಸಿದರಂತೂ ತೀರಿತು; ಅದನ್ನು ದೊರೆಕಿಸುವುದಕ್ಕೆ ಪ್ರಯತ್ನವು ಪ್ರಾರಂಭ-ವಾಗುವುದು.

ಪ್ರಾಥಮಿಕ ಇಚ್ಛೆಗಳು ಸಂತೃಪ್ತವಾದ ಬಳಿಕ ಮಾನವನನ್ನು ಅವಿಶ್ರಾಂತವಾಗಿ ಹೆಣಗಲು ಹಚ್ಚುವುದು ಅತನ ಮನೀಷೆಯೇ (Imagination). ಪೂರ್ಣ ಸುಖಶಾಂತಿಯು ನೊರೆತ ಕೆಲವೇ ಕ್ಷಣಗಳಲ್ಲಿ ನಾವು ಒಫೆಲೋವಿನಂತೆ ಮರಣವನ್ನು ಬಯಸು-ವುದು ಸಹಜ; ಏಕೆಂದರೆ 'ಇದೇ ತರದ ಸಂತೃಪ್ತಿಯು ಕೊನೆಯ-ವರೆಗೆ ಉಳಿಯಬಹುದೋ?' ಎಂಬ ಸಂದೇಹವು ನಮ್ಮನ್ನು ಬಾಧಿಸುತ್ತಿರುವುದು. ಸುಖವು ಶಾಶ್ವತವಾಗಿ ನಿಲ್ಲುವುದಕ್ಕೆ ಬೇಕಾದ ಸಂಗತಿಗಳು ಮಾನವನಿಗೆ ದೊರೆವುದು ಅಸಾಧ್ಯ. ಸಂಪೂರ್ಣ ಸುಖವು ಸಿಕ್ಕುವುದು ಆ ಪರಮಾತ್ಮನೊಬ್ಬನಿಗೇ ಸಾಧ್ಯ. ಏಕೆಂದರೆ " ಅಧಿಕಾರ ಮತ್ತು ಕೀರ್ತಿಗಳೇ ಅವನ ಸಾಮ್ರಾಜ್ಯದಲ್ಲಿ ನೆಲಸಿವೆ". ಸೃಷ್ಟಿಯ ಮೇಲಿನ ಈ ಸಾಮ್ರಾಜ್ಯ-ಗಳು ಸ್ಥಿರವಾದುವುಗಳಲ್ಲ; ಮತ್ತೆ ಬೇರೆ ಸಾಮ್ರಾಜ್ಯಗಳು ಹುಟ್ಟಿ.

ಮುಂದೆ ಬರಬಹುದು. ಈ ಶ್ಲೋಕದಲ್ಲಿ ಪಡೆದಂತಹ ಶಕ್ತಿ-ಸಾಮರ್ಥ್ಯಗಳು ಮೃತ್ಯುವಿನಿಂದ ಕ್ಷಣಾರ್ಧದಲ್ಲಿ ಮಣ್ಣುಗೂಡುವುವು. ಗೊಮ್ಮಟೇಶ್ವರನ ಅದ್ಭುತಮೂರ್ತಿಯನ್ನು ನಿಲ್ಲಿಸಿ, ಇಲ್ಲವೆ ಅಮರಕಾವ್ಯವನ್ನು ಬರೆದು ಈ ಲೋಕದಲ್ಲಿ, ಪಡೆದ ಕೀರ್ತಿಯು ಎಷ್ಟೊಂದು ಹಿರಿದಾದರೂ ಕೂಡ— ಶತಮಾನಗಳು ಕಳೆದಂತೆ ಅದು ಕಳೆಗುಂದುವುದು. ತುಸುವೆ ಅಧಿಕಾರ ಮತ್ತು ಕೀರ್ತಿ-ಗಳಿದ್ದ ಮನುಷ್ಯನಿಗೆ ಇನ್ನಿಷ್ಟು ಅಧಿಕಾರ ಮತ್ತು ಕೀರ್ತಿಯು ಸಿಕ್ಕರೆ 'ನಾನು ತೃಪ್ತನಾಗಿ ಬಿಟ್ಟೆ, ಇದಕ್ಕೂ ಹೆಚ್ಚೇನೂ ಬೇಡ!' ಎಂದು ಎನಿಸಬಹುದು. ಆದರೆ ಅದು ಒಂದು ಭ್ರಮೆಯೆ ಸರಿ! ಮಾನವನ ಆಶೆಗಳು ಸಮಾಧಾನ ಪಡಿಸಲು ಅಶಕ್ಯವಾದುವೂ, ಅನಂತವಾದುವೂ ಇವೆ. ಅವನಿಗೆ ಪರಮಾತ್ಮನ ಅನಂತತೆಯಲ್ಲಿ ವಿಲೀನವಾದಾಗಲೇ ಶಾಂತತೆಯು ಸಿಕ್ಕಬಹುದು.

'ನಾವು ಬದುಕಿದ್ದೇವೆ' ಎಂಬ ಅರಿವಿನಲ್ಲಿಯೇ ಪ್ರಾಣಿಗಳಿಗೆ ಒಂದು ಬಗೆಯ ತೃಪ್ತಿ. 'ತಮ್ಮ ಪೀಳಿಗೆಯನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು!' ಎಂಬುದರಲ್ಲಿಯೆ ಅವುಗಳಿಗೆ ಒಂದು ಸಮಾಧಾನ. ಇದರಂತೆಯೆ 'ತಾನು ಹಿಗ್ಗಬೇಕು, ಹಿರಿಯನಾಗಬೇಕು, ಬೆಳೆಯಬೇಕು' ಎಂಬುದು ಮನುಷ್ಯನ ಬಯಕೆ. ಈ ವಿಷಯ-ದಲ್ಲಿ ಮಾನವನ ಅಪೇಕ್ಷೆಗಳು, ಕಲ್ಪನೆಯು ಯಾವುದು ಶಕ್ಯವೆಂದು ಹೇಳುವುದೋ ಅಷ್ಟರಿಂದಲೆ ಸಮಾಧಾನ ಹೊಂದುವುವು. ಸಾಧ್ಯವಿದ್ದರೆ ಪ್ರತಿಯೊಬ್ಬ ಮನುಷ್ಯನು ತಾನು ಇಂದ್ರನಾಗ-ಬೇಕು—ತಾನು ಚಂದ್ರನಾಗಬೇಕು—ಎಂದು ಅಪೇಕ್ಷಿಸುತ್ತಾನೆ. ಅದು ಅಶಕ್ಯವಾದ ಮಾತಾಗಿದೆಯೆಂದು ಒಪ್ಪಿಕೊಳ್ಳುವುದಕ್ಕೆ ಕೆಲಜನರ ಮನಸ್ಸು ಒಪ್ಪುವುದಿಲ್ಲ. ಔದಾರ್ಯ ಮತ್ತು ಭಕ್ತಿ-ಹೀನತೆಗಳಿಂದ ಕೂಡಿದ **ನಿಲ್ಟನ್‌ನ** ಸೈತಾನ್ ಮೂರ್ತಿಯನ್ನೇ ಆದರ್ಶವಾಗಿ ಇಟ್ಟುಕೊಂಡಂತಹ ಜನರು ಇವರು. 'ಭಕ್ತಿ-ಹೀನತೆಯೆಂದರೆ "ಬ್ರಹ್ಮಜ್ಞಾನದ ವಿದ್ಯೆಯ ಮತಗಳಲ್ಲಿ ವಿಶ್ವಾಸವಿಲ್ಲದುದು" ಎಂದು ನನಗೆ ಹೇಳಬೇಕಾದುದಿಲ್ಲ. 'ನಾನು ಬಹಳೇ ಬಲಾಢ್ಯನು, ಅನಂತಶಕ್ತಿಯು ನನ್ನಲ್ಲಿದೆ, ನಾನು ಮತ್ತೊಬ್ಬರ ಮಾತನ್ನು ಕೇಳುವವನಲ್ಲ!' ಎಂದು ಹೇಳುವಂತಹ ಮತ್ತು ಗೀತೆಯಲ್ಲಿ ಹೇಳಿದ ಆಸುರೀ ಸಂಪತ್ತಿನ ಮೇಲೆ ಶ್ರದ್ಧೆಯಿದ್ದ ಜನರೇ ಇವರು. ಆಸುರೀ ಮತ್ತು ದೈವೀ ಸಂಪತ್ತುಗಳ ಸಮ್ಮಿಶ್ರಣವು ಜಗದ್ವಿಖ್ಯಾತರಾದ ಎಲ್ಲ ಮಹಾ-ವೀರರಲ್ಲಿಯೂ ಕಂಡುಬರುವುದು; ಮತ್ತು ಸಾಮಾನ್ಯವಾಗಿ ಎಲ್ಲ ವ್ಯಕ್ತಿಗಳಲ್ಲಿಯೂ ಇದರ ಸ್ವಲ್ಪಿಲ್ಲ ಸ್ವಲ್ಪಾಂಶವಾದರೂ ಇದ್ದೇ ಇರುವುದು. ಮನುಷ್ಯನು, ದೇವರು ಮತ್ತು ಅವನ ಪೂಜಕರುಗಳ ಲ್ಲಿಯ ಭಕ್ತಿ-ಭಾವಗಳನ್ನು ನೋಡುತ್ತಾನೆ; ಅದರಂತೆಯೆ 'ಸಮಾಜ ದೊಳಗೆ ನಾನು ದೇವರಾಗಬೇಕು, ನನ್ನನ್ನು ಉಳಿದ ಜನರು ಪೂಜಿಸ ಬೇಕು!' ಎಂದು ಬಯಸುತ್ತಾನೆ. ಇದರಿಂದ ಸಮಾಜ-ದಲ್ಲಿ ಸಹಕಾರವೇ ಅಸಾಧ್ಯವಾಗಿ ಬಿಡುವುದು. ಪರಸ್ಪರರಲ್ಲಿ ಸ್ಪರ್ಧೆಗಳು, ಸರಕಾರ, ಒಪ್ಪಂದಗಳು, ಬಂಡಾಯಗಳ ಪ್ರವೃತ್ತಿ ದೇಶದಲ್ಲಿ ಅಶಾಂತಿ, ಮತ್ತು ಮೇಲಿಂದ ಮೇಲೆ ಗೊಂದಲ-ಗಳುಂಟಾಗುವುದು— ಇವೆಲ್ಲಕ್ಕೂ ಅಹಂಕಾರವೇ ಮೂಲ. ತಾನೇ ಹೆಚ್ಚಿನವನೆಂದು ತಿಳಿಯುವ ಅರಾಜಕತ್ವವನ್ನು ಬಿಗಿ-ಹಿಡಿಯುವುದಕ್ಕೆ ನೀತಿಶಾಸ್ತ್ರದ ಆವಶ್ಯಕತೆಯುಂಟಾಗುವುದು.

ಮಾನವನ ಅನಂತ ಆಶೆಗಳಲ್ಲಿ ಅಧಿಕಾರಪ್ರೀತಿ ಮತ್ತು ಕೀರ್ತಿಯ ಹಂಬಲು ಇವೆರಡೇ ಮುಖ್ಯವಾದುವುಗಳು. ಇವೆರಡೂ ಪರಸ್ಪರ ಹೊಂದಿಕೊಂಡಿದ್ದರೂ, ಎರಡರಲ್ಲಿಯೂ ತುಂಟ ವ್ಯತ್ಯಾಸವಿದೆ. ಮುಖ್ಯ ಮಂತ್ರಿಗೆ ವೈಭವ-ಕೀರ್ತಿಗಳಿಗಿಂತಲೂ ಅಧಿಕಾರವೇ ಹೆಚ್ಚು ಇರುವುದು. ಅರಸನಿಗೆ ಅಧಿಕಾರಕ್ಕಿಂತಲೂ ವೈಭವ, ಕೀರ್ತಿ ಹೆಚ್ಚು. ಸಾಮಾನ್ಯವಾಗಿ ಹೇಳಬೇಕೆಂದರೆ ವೈಭವ-ಕೀರ್ತಿಗಳನ್ನು ದೊರೆಕಿಸಲಪೇಕ್ಷಿಸುವವನು ಅಧಿಕಾರ-ವನ್ನು ಗಳಿಸಿದರೆ ಸಾಕು. ಮುಖ್ಯವಾಗಿ ಈ ಮಾತು ಸಾರ್ವ-ಜನಿಕ ಕಾರ್ಯಗಳಲ್ಲಿ ತೊಡಗಿದವರಿಗೆ ಹೆಚ್ಚಾಗಿ ಅನ್ವಯಿಸು-ವುದು. ಆದುದರಿಂದ ಕೀರ್ತಿಯನ್ನು ಆಶಿಸುವವನು—ಮೂಲದಲ್ಲಿ ನೋಡಿದರೆ— ಅಧಿಕಾರವನ್ನು ಬಯಸಿದಂತೆಯೆ ಸರಿ. ಹೀಗೆ ವ್ಯಾವಹಾರಿಕ ಭಾಷೆಯಲ್ಲಿ ಕೀರ್ತಿ ಮತ್ತು ಅಧಿಕಾರ ಇವೆರ-ಡನ್ನೂ ಒಂದೇ ಎಂದು ಹೇಳಬಹುದಾಗಿದೆ.

'ದುಡ್ಡೇ ದೊಡ್ಡಪ್ಪ. ಸಮಾಜದ ಎಲ್ಲ ಪ್ರವೃತ್ತಿಗಳಿಗೂ ಹಣವೆ ಮೂಲವಾಗಿದೆ,' ಎಂಬುದು ಹಲವು ಜನರ ವಿಚಾರ. ಹಳೆಯ ರೀತಿಯ ಅರ್ಥಶಾಸ್ತ್ರಜ್ಞರೂ ಮತ್ತು **ಮಾರ್ಕ್ಸ್‌ನೂ** ಈ ವಿಷಯದಲ್ಲಿ ಒಂದೇ ಅಭಿಪ್ರಾಯದವರಾಗಿರುತ್ತಾರೆ. ಹಣದ ಹೊರತು ಗತಿಯೇ ಇಲ್ಲ 'सर्व गुणाः काञ्चनमाश्रयन्ति' ಎಂದು ಬಗೆವುದರಲ್ಲಿಯೆ ಇವರ ತಪ್ಪಾಗುತ್ತಿದ್ದಿತು. ನಿಜವಾಗಿಯೂ ಇಚ್ಛೆಗಳು ಭೌತಿಕಸುಖದ ಪ್ರೀತಿಯಿಂದಲೆ ಪ್ರೇರಿತವಾಗಿರುವು-ದಿಲ್ಲ. ನ್ಯಾಯವಿಧಾಯಕ ಸಭೆಗಳನ್ನು, ಕಲಾಮಂದಿರಗಳನ್ನು, ಮತ್ತು ಇದೇ ತರದ ಬೇರೆ ಬೇರೆ ಸಂಘಗಳನ್ನು ಕೂಡಿಸುವುದು, ಕಟ್ಟುವುದು ಬರಿ ಐಷ-ಆರಾಮಿನಲ್ಲಿ ಕುಳಿತು ಹರಟುವುದರ ಸಲುವಾಗಿಯೆ ಅಲ್ಲ; ಅವರ ಮೂಲ ಇಚ್ಛೆಯು ಅಧಿಕಾರ-ಕೀರ್ತಿಗಳನ್ನು ದೊರೆಕಿಸುವುದೇ ಆಗಿರುತ್ತದೆ. ಒಬ್ಬನಿಗೆ ಸ್ವಲ್ಪ ಸುಖವು ದೊರೆತರೆ ಸಾಕು; ಅವನು ತನ್ನ ಕೈಯಲ್ಲಿ ಅಧಿಕಾರ-ವನ್ನು ಇಟ್ಟುಕೊಳ್ಳಲು ಪ್ರಾರಂಭಿಸುತ್ತಾನೆ. ದುಡ್ಡು ಅವನಿಗೆ ಅಧಿಕಾರದಷ್ಟು ರುಚಿಸುವುದಿಲ್ಲ. ಅಧಿಕಾರವನ್ನು ನಡೆಯಿಸುವು-ದಕ್ಕೆ ಅವನು ಹಣವನ್ನು ಗಳಿಸಬಹುದು. ಒಬ್ಬನ ಹತ್ತಿರ ಸಾಕಷ್ಟು ಹಣವಿದೆಯೆಂದು ತಿಳಿಯುವಾ! ಅವನು ಇನ್ನೂ ಹೆಚ್ಚು ಹಣವನ್ನು ದೊರೆಕಿಸುತ್ತಿದ್ದರೆ, ಹೆಚ್ಚಿಗೆ ಅಧಿಕಾರವನ್ನು ದೊರೆಕಿಸಬೇಕೆಂಬುದೇ ಅವನ ಉದ್ದೇಶವಾಗಿರುತ್ತದೆ; ಹೊರತು ಸುಮ್ಮನೆ ಹಣವನ್ನು ಒಟ್ಟಿರಿಸುವುದೇ ಅವನ ಗುರಿಯಾಗಿರುವು-ದಿಲ್ಲ.

ಹಳೆಯ ವಿಚಾರದ ಅರ್ಥಶಾಸ್ತ್ರಜ್ಞರೂ ಮತ್ತು ಮಾರ್ಕ್ಸ್‌ನೂ ಹೇಳಿದ ಅರ್ಥಶಾಸ್ತ್ರ ವಿಚಾರದ ತತ್ತ್ವಗಳು ಬಹಳೇ ತಪ್ಪುದಾರಿ-

ಯನ್ನು ತೋರುವಂತಹವಾಗಿವೆ. ಅವನು ತಿಳಿಹೇಳಿದ ತತ್ತ್ವ-ಗಳಂತೆ ವಿಚಾರಿಸಿದರೆ, ಈಗಿನ ಎಷ್ಟೋ ಹೊಸ ವಿಚಾರ ಮತ್ತು ರೀತಿಗಳಿಗೆ ಅರ್ಥವೇ ಆಗುವುದಿಲ್ಲ. ನಾವು ಮಾಡುವ ಎಲ್ಲ ಕೆಲಸಗಳ ಮತ್ತು ಎಲ್ಲ ಚಟುವಟಿಕೆಗಳ ಮೂಲವು 'ಅಧಿಕಾರವನ್ನು ದೊರೆಕಿಸಬೇಕು' ಎಂಬ ಹಂಬಲವೇ ಆಗಿದೆ. ಇದನ್ನೇ ನಾವು ಮೂಲವಾಗಿಟ್ಟುಕೊಂಡು ಮುಂದೆ ನಡೆದರೆ, ಹೊಸ ಮತ್ತು ಹಳೆಯ ಕಾಲದ ಸಾಮಾಜಿಕ ರೀತಿ-ನೀತಿಗಳನ್ನು ಸರಿಯಾಗಿ ತಿಳಿದುಕೊಳ್ಳಬಹುದಾಗಿದೆ.

ಅಧಿಕಾರವು ಒಂದೇ ಬಗೆಯದಾಗಿಲ್ಲ. ಬೇರೆ ಬೇರೆ ಚೇತನ-ಕ್ಕನುಸಾರವಾಗಿ (Energy) ಅದು ಬೇರೆ ಬೇರೆ ಬಗೆಯದಾಗಿರುವುದು. ಅದರಂತೆಯೆ ಮಾನವನಿಗೆ ಅಧಿಕಾರವು ವಿವಿಧ ಬಗೆಗಳಲ್ಲಿ ಸಿಕ್ಕಬಹುದು. ಉದಾಹರಣೆ:— ಸಂಪತ್ತಿನಿಂದ, ಶಸ್ತ್ರಾಸ್ತ್ರಗಳ ಸಹಾಯದಿಂದ, ನಾಗರಿಕರ ಮೇಲಿನ ಅಧಿಕಾರದಿಂದ ಮತ್ತು ಯಾವುದೇ ಒಂದು ತತ್ತ್ವದ ಅನುಸಂಧಾನದಿಂದ. ಇವುಗಳಲ್ಲಿ ಒಂದು ಹೆಚ್ಚು ಮತ್ತೊಂದು ಕಡಿಮೆ ಎಂದು ಹೇಳಲು ಬರುವುದಿಲ್ಲ. ಅಥವಾ 'ಈ ರೀತಿಯಲ್ಲಿಯೇ ಸಿಕ್ಕುವ ಅಧಿಕಾರವನ್ನು ದೊರೆಕಿಸಿದರೆ ಮತ್ತೊಂದು ತಾನಾಗಿಯೆ ಸಿಕ್ಕುವುದು' ಎಂದು ಹೇಳಲೂ ಬರುವಂತಿಲ್ಲ. ಬರಿ ಹಣವನ್ನೇ ದೊರೆಕಿಸಬೇಕು ಎಂಬ ಒಂದೇ ಧ್ಯೇಯವನ್ನಿಟ್ಟುಕೊಂಡರೆ ಸಂಪೂರ್ಣ ಅಧಿಕಾರವು ಸಿಕ್ಕಲಾರದು. ಎಲ್ಲ ರೀತಿಗಳಿಂದಲೂ ಸ್ವಲ್ಪ ಸ್ವಲ್ಪ ಅಧಿಕಾರವು ದೊರೆಯಬೇಕಾಗುವುದು. ಒಲದ ಒಂದೇ ಜಾತಿಯ (form) ಅಭ್ಯಾಸವನ್ನು ನಾವು ಮಾಡಿದರೆ, ನಮ್ಮಲ್ಲಿ ಎಷ್ಟೋ ತಪ್ಪುಗಳು ಉಳಿದೇ ಉಳಿಯುವುವು; ಮತ್ತು ಭೌತಶಾಸ್ತ್ರದ (Physics) ಅಭ್ಯಾಸವು ಪೂರ್ಣವಾದಂತಾಗುವುದಿಲ್ಲ. ಅದರಂತೆಯೆ ಅಧಿಕಾರದಲ್ಲೂ ಮೇಲೆ ಹೇಳಿದ ಬೇರೆ ಬೇರೆ ರೀತಿಗಳು ನಮ್ಮ ಕೈಯಲ್ಲಿ ದೊರೆತಾಗಲೇ ನಿಜವಾಗಿ ಪೂರ್ಣ ಅಧಿಕಾರ ದೊರೆಕಿದಂತೆ. ದಂಡಿನ ಮೇಲಿನ ಅಧಿಕಾರದಿಂದಾಗಲಿ ಅಥವಾ ಒಂದು ಮತ-ಪಂಥದ ಮೇಲಿನ ಪ್ರಭುತ್ವದಿಂದಾಗಲಿ ನಮಗೆ ಸಂಪತ್ತು ದೊರೆಯಬಹುದು; ಅದರಂತೆಯೆ ಹಣವಿದ್ದವನಿಗೆ ದಂಡಿನ ಮೇಲೆ ಅಧಿಕಾರವು ಇಲ್ಲವೆ ಒಂದು ಪಕ್ಷ-ಪಂಥದ ಮೇಲಿನ ಪ್ರಭುತ್ವವು ಸಿಕ್ಕಬಹುದು. ಸಮಾಜ ಶಾಸ್ತ್ರದ ತತ್ತ್ವಗಳನ್ನು ಸಾಮಾಜಿಕ ಶಕ್ತಿಗಳ ಸ್ವರೂಪದಲ್ಲಿಯೇ ವಿವರಿಸಿ ಹೇಳಬಹುದಾಗಿದೆ. ಆದರೆ ಭೌತಶಾಸ್ತ್ರದ ಶಕ್ತಿಗಳಂತೆ ಈ ಶಕ್ತಿಗಳು ಮೂಲದಲ್ಲಿ ಬೇರೆಬೇರೆಯಾಗಿಲ್ಲ. ಹಿಂದಕ್ಕೆ ಸೈನ್ಯಶಕ್ತಿಯು ರೀತಿ ಬಹಳೇ ಬೇರೆಯಾಗಿದ್ದಿತು. ಅಂದಿನ ಸೋಲು-ಗೆಲವುಗಳೆಲ್ಲ ಒಬ್ಬ ಸೇನಾಪತಿಯು ಕೆಲವೊಂದು ಗುಣಗಳ ಮೇಲೆಯೇ ಅವಲಂಬಿಸಿರುತ್ತಿದ್ದುವು.

ಅರ್ಥಶಾಸ್ತ್ರಕ್ಕೇ ಎಲ್ಲಕ್ಕೂ ಹೆಚ್ಚಿನ ಸ್ಥಾನ, ಮಾನ—ಎಂತಲೂ, ಉಳಿದ ಎಲ್ಲ ತರದ ಅಧಿಕಾರಗಳು ಇವಕ್ಕೇ ತಲೆಬಾಗಿವೆಯೆಂತಲೂ ಈಗಿನ ಜನರ ಸಾಮಾನ್ಯ ಮತ. ಇದು ಎಷ್ಟು ದೊಡ್ಡ ತಪ್ಪು-ಗ್ರಹಿಕೆಯಾಗಿದೆಯೆಂಬುದನ್ನು ಸ್ವಲ್ಪ ವಿಚಾರಿಸಿ ತಿಳಿದುಕೊಳ್ಳಬಹುದಾಗಿದೆ. 'ಪ್ರಚಾರಕಾರ್ಯವೇ (Propaganda) ಎಲ್ಲ ಶಕ್ತಿಗಳ ಮೂಲ' ಎಂದು ಹೇಳುವವರು ಇನ್ನು ಹಲವರು. ಇದೇನು ಹೊಸ ಅಭಿಪ್ರಾಯವಲ್ಲ, 'ಬಾಯಿಯಿದ್ದವನೇ ಬದುಕುವನು' ಎಂಬ ನಮ್ಮ ಹಳೆಯ ಗಾದೆಮಾತಿನಲ್ಲಿಯೂ ಇದೇ ಅಡಕವಾಗಿದೆ. 'ಸೈನ್ಯಶಕ್ತಿಯೇ ಎಲ್ಲಕ್ಕೂ ಮೂಲಾಧಾರ, ಅರ್ಥಶಕ್ತಿಯೇ ಎಲ್ಲಕ್ಕೂ ಅಡಿಗಲ್ಲು' ಎಂದು ಹೇಳುವುದು ಎಷ್ಟು ಸಟೆಯೋ ಅಥವಾ ದಿಟವೋ, ಪ್ರಚಾರಕಾರ್ಯದ ಬಲವೇ ಮೂಲವೆಂದು ಹೇಳುವುದೂ ಅಷ್ಟೇ ಸಟೆ ಅಥವಾ ದಿಟ! ಪ್ರಚಾರಕಾರ್ಯವು ಸಂಪೂರ್ಣ ಏಕಮತ್ಯವನ್ನು ಸಾಧಿಸುವುದು ಸಾಧ್ಯವಿದ್ದರೆ, ಯಾರಿಂದಲೂ ತಡೆಯಲು ಶಕ್ಯವಾಗದಂತಹ ಶಕ್ತಿಯು ಉಂಟಾಗುವುದು ನಿಜ. ಯಾರ ಕೈಯಲ್ಲಿ ಸೈನ್ಯಾಧಿಕಾರವಿದೆಯೊ ಅಥವಾ ಯಾರ ಕೈಯಲ್ಲಿ ಸಾಕಷ್ಟು ಹಣವಿದೆಯೊ ಅವರು ಇಷ್ಟ ಪಟ್ಟರೆ, ಈ ಶಕ್ತಿಗಳನ್ನು ಪ್ರಚಾರಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳಬಹುದು. ಈಗ ಮತ್ತೆ ನಾವು ಮೊದಲಿನ ಭೌತಶಾಸ್ತ್ರದ ಉದಾಹರಣೆಗೇ ತಿರುಗುವಾ: ಅಧಿಕಾರವು ಬಲಕ್ಕನುಸಾರವಾಗಿ, ಒಂದು ಪ್ರಕಾರದಿಂದ ಮತ್ತೊಂದು ಪ್ರಕಾರಕ್ಕೆ ಬದಲಾಗುತ್ತಿರುತ್ತದೆ. ಇಂತಹ ಬದಲಾವಣೆಗಳ ಕಾರಣಗಳನ್ನು ಕಂಡು ಹಿಡಿಯುವುದೇ ಸಮಾಜಶಾಸ್ತ್ರದ (Social Science) ಕೆಲಸವಾಗಿರಬೇಕು. ಯಾವುದೊಂದೇ ಬಗೆಯ ಅಧಿಕಾರವು ಹೆಚ್ಚಿನದೆಂದು ಅದನ್ನು ಬೇರ್ಪಡಿಸಿ ಹೇಳುವುದೇ—ಇಂದು ಆ ಅರ್ಥ ಬಲನೇ ಅದು—ವ್ಯವಹಾರದಲ್ಲಿಯ ಎಲ್ಲ ತಪ್ಪು-ತಡೆಗಳ ಉಗಮವಾಗಿದೆ.

ಸಮಾಜಗಳ ಭಿನ್ನರಚನೆಯಂತೆ ಅವುಗಳಲ್ಲಿ ನಿರ್ಮಾಣವಾಗುವ ಶಕ್ತಿಯೂ ಭಿನ್ನವಾಗಿರುತ್ತದೆ. ವ್ಯಕ್ತಿಗಳಿಗೆ ಪ್ರಾಶಸ್ತ್ಯ ಕೊಡುವ ಸಮಾಜವಿರಬಹುದು; ಸಂಸ್ಥೆಗಳಿಗೆ ಪ್ರಾಶಸ್ತ್ಯ ಕೊಡುವ ಸಮಾಜರಚನೆಯಿರಬಹುದು. ಸಂಘ-ಸಂಸ್ಥೆಗಳ ಮೂಲಕವಾಗಿ ರಾಷ್ಟ್ರವು ಇಂದು ಹಿಂದಿನ ಕಾಲಕ್ಕಿಂತಲೂ ಹೆಚ್ಚು ಶಕ್ತಿಯನ್ನು ಪಡೆದಿದೆಯೆಂಬುದು ಸ್ಪಷ್ಟವಾದುದು. ಸಮಾಜದ ಮೇಲೆ ವರ್ಚಸ್ಸನ್ನು ಬೀರುವಂತಹ ಸಂಘಗಳ ರಚನೆಯಲ್ಲಿಯೂ ಹಲವು ಬಗೆಗಳಿವೆ. ದಂಡಧಾರಿಯಾದ ಸೈನ್ಯಾಧಿಪತಿಯ ಆಡಳಿತದ

'ಆನಂದಕಂದ'ರ ಗ್ರಂಥಗಳು

ಸುದರ್ಶನ (ಸಾ. ಕಾದಂಬರಿ) ೦-೧೪-೦

ರಾಜಯೋಗಿ (ಐ. ಕಾದಂಬರಿ) ೧-೦-೦

ಇವಲ್ಲದೆ ಅವರ ಯಾವ ಪುಸ್ತಕ ಬೇಕಾದರೂ

'ಜಯಂತಿ' ಕಾರ್ಯಾಲಯಕ್ಕೆ

ಬರೆದು ತರಿಸಿಕೊಳ್ಳಬೇಕು.

ಪದ್ಧತಿ, ಧಾರ್ಮಿಕರ ಸಾಮ್ರಾಜ್ಯದ ಪದ್ಧತಿ, ಶಿಷ್ಟರ ರಾಜ್ಯ-ಪದ್ಧತಿ ಇವೆಲ್ಲ ಬಹಳೇ ಭಿನ್ನ ಮಾದರಿಯವು. ಮೂರನೆಯದಾಗಿ ಅಧಿಕಾರವನ್ನು ದೊರೆಕಿಸುವ ರೀತಿಯಲ್ಲಿಯೂ ಭಿನ್ನತೆಯಿರುತ್ತದೆ. ಆನುವಂಶಿಕವಾಗಿ ಬಂದ ಅರಸುತನವು ಒಂದು ಬಗೆಯ ಮಹಾ-ಪುರುಷನಿಗೆ ಜನ್ಮ ಕೊಡುವುದು; ಧರ್ಮೋಪದೇಶಕನಿಗೆ ಬೇಕಾಗುವ ಗುಣಗಳು ಇನ್ನೊಂದು ಬಗೆಯ ಪ್ರಸಿದ್ಧ ಪುರುಷರನ್ನು ನಿರ್ಮಿಸುತ್ತವೆ; ಪ್ರಜಾಪ್ರಭುತ್ವವು ಮಗದೊಂದು ಬಗೆಯ ಮುಖಂಡರನ್ನು ಮುಂದೆ ತರುವುದು; ಯುದ್ಧವು ನಾಲ್ಕನೆಯ ಬಗೆಯವರನ್ನು ನಿರ್ಮಾಣಮಾಡುವುದು.

ಪ್ರೇಮಂತರ ಕೈಯಲ್ಲಿ ಅಧಿಕಾರವಿರುವ ಇಲ್ಲವೆ, ವಂಶಪರಂಪರೆಯಿಂದ ಅರಸುತನವಿರುವ ಸಾಮಾಜಿಕ ಸಂಸ್ಥೆಗಳು, ಮಹಾಪುರುಷರ ನಿರ್ಮಾಣದ ಕ್ಷೇತ್ರವನ್ನು ಎಲ್ಲಿ ಕಡಿಮೆ ಮಾಡುವುದಿಲ್ಲವೊ ಅಲ್ಲಿ, ಅಧಿಕಾರವನ್ನು ಬಯಸುವ ಬಲಿಷ್ಠರೆಲ್ಲರೂ ತಂತಮ್ಮ ಕೈಯನ್ನು ಸಾಧಿಸುವರು. ಆದುದರಿಂದ ಯಾವ ಸಮಾಜದಲ್ಲಿ ಅಧಿಕಾರದ ಸ್ಥಾನಗಳು ಎಲ್ಲರಿಗೂ ದೊರೆವುದಕ್ಕೆ ಅವಕಾಶವಿದೆಯೊ ಅಲ್ಲಿ, ಸಾಮಾನ್ಯರಿಗಿಂತ ವಿಶೇಷ ಶಕ್ತಿಯುಳ್ಳಂತಹ ಮಹತ್ವಾಕಾಂಕ್ಷಿಗಳು, ಆ ಶಕ್ತಿಯ ಕೇಂದ್ರಗಳನ್ನು ಕೈವಶಮಾಡಿಕೊಳ್ಳುವರು. ಮಾನವನಲ್ಲಿರುವ ಎಲ್ಲ ಮೂಲ ಪ್ರವೃತ್ತಿಗಳಲ್ಲಿ ಅಧಿಕಾರಲಾಲಸೆಯೇ ಬಹಳ ಬಲಿಷ್ಠವಾದುದು. ಆದರೆ ಇದು ಎಲ್ಲರಲ್ಲಿಯೂ ಸಮಪ್ರಮಾಣದಲ್ಲಿಯೆ ಇರುವುದೆಂದು ಹೇಳುವುದಕ್ಕಾಗುವುದಿಲ್ಲ. ಐಷ ಆರಾಮಿನ ಇಚ್ಛೆ, ಸುಖಲಾಲಸೆ, ಮೈಗಳ್ಳತನ, ಅಥವಾ ಹೆರವರಿಂದ 'ಮಹತ್ತ್ವಾಕಾಂಕ್ಷೆ' ಎಂದು ಕರೆಯಿಸಿಕೊಳ್ಳಬೇಕಾದೀತೆಂಬ ಹೆದರಿಕೆ—ಇವೇ ಮುಂತಾದುವುಗಳು ಅನೇಕರ ಆ ಅಧಿಕಾರಲಾಲಸೆಗೆ ಅಡ್ಡಿಯನ್ನುಂಟುಮಾಡುತ್ತವೆ. ಪುಕ್ಕರಲ್ಲಿ ಇದು, ಹೆಚ್ಚಾಗಿ ಮುಂದಾಳುಗಳಿಗೆ ತಲೆವಾಗುವ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಆದರಿಂದ ಮುಂದಾಳುಗಳ ಅಧಿಕಾರಪ್ರೀತಿಗೆ ಇನ್ನೂ ಪ್ರೋತ್ಸಾಹನೆ ಕೊಟ್ಟಂತೆ ಆಗುತ್ತದೆ. ಯಾರ ಶಕ್ತಿಸಂಪಾದನೆಯ ಆಕಾಂಕ್ಷೆಗಳು ಬಲಿಷ್ಠವಾಗಿಲ್ಲವೋ ಅವರ ಇರುವಿನ ಪರಿಣಾಮವು ಸಮಾಜದ ಆಗು-ಹೋಗುಗಳ ಮೇಲೆ ಆದದ್ದು ಯಾವ ರೀತಿಯಲ್ಲಿಯೂ ಕಂಡುಬರುವುದಿಲ್ಲ. ಶಕ್ತಿಯು ಹೆಂಬಲವು ಕಾರಣಪುರುಷರ ಹೆಗ್ಗುರುತು. ಆದುದರಿಂದ ಮಹಾಪುರುಷರೆಲ್ಲರೂ ಅಂತರ್ಗತವಾಗಿ ಶಾಕ್ತರೇ ಸರಿ! *

* ಮುಖ್ಯವಾಗಿ ಮಿ ಬರ್ಟ್ರಾಂಡ್ ರಸೆಲ್ಲರ 'Power' ಎಂಬ ಗ್ರಂಥ ದೊಳಗಿನ ವಿಷಯವನ್ನು ಆಧಾರವಾಗಿಟ್ಟುಕೊಂಡು ಬರೆದುದು. ಲೇ.

ಆಳುರುದ್ರ, ಬಾಳ್ವಾನಾಯಿ

ಶ್ರೀ. 'ಬಿ. ಜಿ. ಸ್ಪೂನೊ'

೧

ಧನವನ್ನಿಟ್ಟ ಕೋಣೆಯಲ್ಲಿಯೆ ಮಲಗುವರು ಧನಸೆಟ್ಟಿಯವರು.

ಆ ಕೋಣೆಯಲ್ಲಿ ಬೀಸಗೆಯಲ್ಲೊಮ್ಮೆ ತಗಣಿ ಹೆಚ್ಚಾಗಿ, ಅಲ್ಲಿ ಮಲಗುವುದು ಅಶಕ್ಯವಾಯಿತು.

ಕೋಣೆಯನ್ನು ಕಾಯಲಿಕ್ಕೆ ತಮ್ಮ ನಂಬುಗೆಯ ಆಳಿಗೆ—ರುದ್ರನಿಗೆ—ಹೇಳಿ, ಮೇಲುಪ್ಪರಿಗೆಗೆ ಮಲಗಲು ಹೋದರು ಧನಸೆಟ್ಟಿಯವರು.

ಸುಂದರ ಸುಧಾಕರನು, ಅಲ್ಲಾದದಿಂದ ಜಗತ್ತನ್ನು ಮುಚ್ಚುತ್ತ ಮೋಡಗಳನ್ನು ಹುಡುಕಲು ವಿಹರಿಸುತ್ತಿದ್ದ ಆಕಾಶದಲ್ಲಿ. ಮಂದ ಮಾರುತನು ತಂಪನ್ನು ಬೀರಿ, ಬೀಸಗೆಯಿಂದ ಬೆಂದವರಿಗೆ ಕಂಪನ್ನು ಕಲ್ಪಿಸುತ್ತಿದ್ದ.

ಆದರೂ ಧನಸೆಟ್ಟಿಯವರಿಗೆ ನಿದ್ರೆ ಹತ್ತಲಿಲ್ಲ, ಆ ರಾತ್ರಿ.

೨

ಧನವನ್ನಿಟ್ಟ ಕೋಣೆಯಲ್ಲಿಯೇ ಮಲಗುವರು ಧನಸೆಟ್ಟಿಯವರು.

ಆ ಕೋಣೆಯಲ್ಲಿ ಬೀಸಗೆಯಲ್ಲೊಮ್ಮೆ ತಗಣಿ ಹೆಚ್ಚಾಗಿ, ಅಲ್ಲಿ ಮಲಗುವುದು ಅಶಕ್ಯವಾಯಿತು.

ಕೋಣೆಯನ್ನು ಕಾಯಲಿಕ್ಕೆ ತಮ್ಮ ನಂಬಿಗೆಯ ಬಾಳ್ವಾನಾಯಿಯನ್ನಿಟ್ಟು, ಮೇಲುಪ್ಪರಿಗೆಗೆ ಮಲಗಲು ಹೋದರು ಧನಸೆಟ್ಟಿಯವರು.

ಸುಂದರ ಸುಧಾಕರನು ಅಲ್ಲಾದದಿಂದ ಜಗತ್ತನ್ನು ಮುಚ್ಚುತ್ತ ಮೋಡಗಳನ್ನು ಹುಡುಕಲು ವಿಹರಿಸುತ್ತಿದ್ದ ಆಕಾಶದಲ್ಲಿ. ಮಂದ ಮಾರುತನು ತಂಪನ್ನು ಬೀರಿ, ಬೀಸಗೆಯಿಂದ ಬೆಂದವರಿಗೆ ತಂಪನ್ನು ಕಲ್ಪಿಸುತ್ತಿದ್ದ.

ಕೂಡಲೆ ನಿದ್ರಾಪರವಶರಾದರು, ಧನಸೆಟ್ಟಿಯವರು.

ಹೆಂಡತಿ ಬೇರೆ!

(ಸಣ್ಣಕತೆ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

"ಭಲ್ಲು, ನೀನು ಚಂದೂನೆದುರಿಗೆ ನಿಲ್ಲಬೇಡ ಹೋಗು; ನಾನೇ 'ಝೂಜಾ' ಆಗಿ ಅವನನ್ನು ಆಡಿಸತೇನೆ. ನಿನ್ನ ಮೇಲೆ ಯಾಕೋ ಇಂದು ಅವನಿಗೆ ಸಿಟ್ಟು!"

ಭಲ್ಲು ಹೋದ. **ಸಾವೇರಿಬಾಯಿ ಚಂದುವಿನ** ಕೈಹಿಡಿದು, ಅವನನ್ನು ನಡೆಯಿಸುತ್ತ ದಿವಾನ್‌ಖಾನೆಯಲ್ಲಿ ಬಂದರು. ಚಂದು 'ಕೀಇಇಇಇ' ಎಂದು ಕಿರುದನಿಯಲ್ಲಿ ಕೇಕೆಹಾಕುತ್ತಿದ್ದ. **ಪ್ರೊ. ದೇವದತ್ತರು** ತಮ್ಮ ಅಭ್ಯಾಸದ ಕೋಣೆಯಲ್ಲಿ 'Russian Dramatists' ಎಂಬ—ಅದೇ ಹೊಸತಾಗಿ ಪ್ರಸಿದ್ಧವಾದ— ಒಂದು ಇಂಗ್ಲೀಷ್ ಪುಸ್ತಕವನ್ನೋದುತ್ತ ಕುಳಿತಿದ್ದರು. ಚಂದು ಕೇಕೆಹಾಕುವಾಗಲೆಲ್ಲ ದೇವದತ್ತರು ಓದನ್ನು ನಿಲ್ಲಿಸಿ, ಮುಖ ಮೇಲಕ್ಕೆತ್ತಿ, ಕನ್ನಡಕ ಇಳಿಸಿ, ತುಟಿಯಲ್ಲಿಯೆ ನಗುವರು.

"ನಾವು ಕುದುರೆಯಾಟ ಆಡಿದರೆ ನಿಮಗೇನು ತೊಂದರೆ ಆಗುವುದಿಲ್ಲವಲ್ಲ?" ಸಾವೇರಿಬಾಯಿ ಕೂಗಿ ಗಂಡನನ್ನು ಕೇಳಿದರು.

"ಇಲ್ಲ ಇಲ್ಲ; ನಡೆಯಲಿ! ನಾನೂ ಇದೀಗ ಬರತೇನೆ!" ದೇವದತ್ತರು ಕುಳಿತಲ್ಲಿಂದಲೆ ಕತ್ತು ಅಲ್ಲಾಡಿಸಿ ನುಡಿದರು.

ಸಾವೇರಿಬಾಯಿ 'ಝೂಜಾ' ಆದರು; ಚಂದು ಸವಾರನಾದ. ಆಟ ನಡೆಯಿತು. ದೇವದತ್ತರು ಓದುವುದರಲ್ಲಿ ಲಕ್ಷ್ಯವನ್ನು ತೊಡಗಿಸಿದ್ದರು.

ಒಂದು ಟಾಂಗಾ ಬಂದು ಪೋರ್ಚ್‌ನಲ್ಲಿ ನಿಂತಿತು. ಬೂಟಿಗೆ ಮ್ಯಿಂಜುಹಾಕುತ್ತ ಕುಳಿತಿದ್ದ ಭಲ್ಲು ಎದ್ದು, ಬಂದ ಗೃಹಸ್ಥನಿಗೆ 'ಸಲಾಮ್' ಮಾಡಿದ.

"ಪ್ರೊಫೆಸರರನ್ನು ಕಾಣಬೇಕು; ಕಾನಪುರದಿಂದ ಧೀರೇಂದ್ರ ಬಂದಿದ್ದಾರೆಂದು ತಿಳಿಸು!"

"ಹೆಸರಿನ ಕಾರ್ಡು ಇದ್ದರೆ ಕೊಡ್ರಿ!"

"ಇಲ್ಲ, ಬಾಯಿಂದಲೇ ಹೇಳು, ಸಾಕು."

ಭಲ್ಲು ಹೋಗಿ ಪ್ರೊಫೆಸರರಿಗೆ ತಿಳುಹಿದ. ಬಂದ ಗೃಹಸ್ಥ ಟಾಂಗಾದಿಂದ ಇಳಿದು, ಬಂಗಲೆಯ ಪಾವಟಿಗೆಗಳನ್ನೇರಿ ಮೊಗಸಾಲೆಯಲ್ಲಿ ಕಾಲಿಡುವಷ್ಟರಲ್ಲಿ, ದೇವದತ್ತರು ಅವಸರದ ಪಜ್ಜೆಯಿಕ್ಕುತ್ತ ಅಲ್ಲಿಗೆ ಬಂದೇಬಿಟ್ಟರು.

"ಹ್ಯಾಲ್ಲೊ! ಏನಯ್ಯಾ ಇದು! ಕನಸು-ಮನಸಿನಲ್ಲಿಲ್ಲದೆ ಒಮ್ಮೆಲೆ ಅಪರೂಪವಾಗಿ ಬಂದುಬಿಟ್ಟೆ?" ಎನ್ನುತ್ತ ದೇವದತ್ತರು ಅವನ ಬಲಗೈಯನ್ನು ಕುಲುಕಿ, ಅದನ್ನು ತಮ್ಮ ಕೈಯಲ್ಲಿ ಹಾಗೆಯೆ ಹಿಡಿದು, ಎಡಗೈಯನ್ನು ಅವನ ಬೆನ್ನಮೇಲಿರಿಸಿ, ಜೊತೆಯಲ್ಲಿಯೆ ಕರೆದುಕೊಂಡು ತಮ್ಮ ಕೋಣೆಯಲ್ಲಿ ಬಂದರು.

"ಅಲ್ಲಾ, ಎಷ್ಟು ವರ್ಷಗಳ ಮೇಲೆ ಈ ನಿನ್ನ ಭೆಟ್ಟಿ? ಈ ಜನ್ಮದಲ್ಲಿ ನಿನ್ನನ್ನೇನು ನಾನು ಕಾಣುವುದಿಲ್ಲ—ಎಂದುಕೊಂಡಿದ್ದೆ. ಆದಿರಲಿ, ಉಳಿದ ಸಮಾಚಾರ ಆಮೇಲೆ ಕೇಳ್ತೇನೆ. ನೀನು ಇಳಿದದ್ದು ಎಲ್ಲಿ? ಬಂದದ್ದು ಯಾವಾಗ?"

"ನಿನ್ನೆ ರಾತ್ರಿ ಬಂದೆ. ಈ ಊರಲ್ಲಿ ಒಬ್ಬ ಅಕ್ಕ ಇದ್ದಾರೆ; ಅವರ ಮನೆಯಲ್ಲಿಯೆ ಇಳಿದುಕೊಂಡಿದ್ದೇನೆ. ನೀನು ಇಲ್ಲಿಯ ಕಾಲೇಜಿನಲ್ಲಿ ಪ್ರೊಫೆಸರಾಗಿದ್ದೀಯೆಂದು ತಿಳಿಯಿತು. ಈ

★

ಎಂತಹ ಸುಸಂಸ್ಕೃತ ಸಮಾಜದಲ್ಲಿಯೆ ಆಗಲಿ, ಗಂಡ-ಹೆಂಡಿರಲ್ಲಿ ಮನಸ್ತಾಪ ಮೂಡಿಯೆ ಮೂಡುವುದುಂಟು. ಹೀಗೇಕಾಗುವುದೆಂದು ಮೂಲ ಕಾರಣವನ್ನು ಕಂಡು ಹಿಡಿಯದೆ ಮಿಡುಕುವವರೇ ಬಹುಜನರು ಜಗತ್ತಿನಲ್ಲಿ! ಮನಸ್ತಾಪದಿಂದ ಅಗಲಿದ ದೇವದತ್ತ-ಸಾವೇರಿಯರು ಮತ್ತೆ ಒಂದಾದರು. ಅದು ಹೇಗೆ?....

★

ಮಾತು ಕಿವಿಗೆ ಬೀಳುವುದೇ ತಡ; ಓಡಿ ಬಂದೆ....ನಿನ್ನ ಕಾಣೋಣ ಆಂತ!"

"ಈಗ ಹದಿನೈದು ವರ್ಷಗಳಾದರೂ ಆಗಿರಬೇಕು....ನಾವು ಒಬ್ಬರನ್ನೊಬ್ಬರು ಕಾಣದೆ. Tanning Industry ಯಲ್ಲಿ ಏನಾದರೊಂದು ಮಾಡಬೇಕೆಂದು 'ಸ್ಕಾಲರ್‌ಶಿಪ್' ಬೊರೆಕಿಸಿ ನೀನು ಕಾನಪುರಕ್ಕೆ ಹೋದೆ; ಅಲ್ಲೇ ಕೆಲಸಕ್ಕೂ ಸೇರಿಕೊಂಡು ಬಿಟ್ಟೆ. ಕಲಿತು ಬಂದು ಇಲ್ಲಿ ಕಾರಖಾನೆ ತೆಗೆದಿದ್ದರೆ, ದೇಶದಲ್ಲಿ ಹೊಸ ಉದ್ಯೋಗವನ್ನು ಪ್ರಾರಂಭಿಸಿದ ಶ್ರೇಯಸ್ಸಿನ ಜೊತೆಗೆ—ಹಲವು ಜನರಿಗೆ ಅನ್ನಕ್ಕೆ ಮಾರ್ಗ ಮಾಡಿಕೊಟ್ಟ ಪುಣ್ಯವೂ ನಿನಗೆ ಬರಬಹುದಾಗಿತ್ತು. ನಿನ್ನ ಸ್ವಂತದ ಹಿತವನ್ನಷ್ಟೇ ನೀನು ನೋಡಿಕೊಂಡೆ! ಈಗ ನಿನಗೆ ದೊಡ್ಡ ಸಂಬಳವಿರಬೇಕು. ಮದುವೆಗಿದುವೆ ಮಾಡಿಕೊಂಡಿದ್ದೀಯೋ, ಏನು ಬಾಲಬ್ರಹ್ಮಚಾರಿಯಾಗಿ ಹಾಗೆಯೆ ಇದ್ದೀಯೊ? ಯಾಕೆಂದರೆ ಕಲಿಯುವಾಗ ನಿನ್ನ Ideals ನಲ್ಲಿ ಇದೂ ಒಂದಾಗಿತ್ತು; ಅದಕ್ಕೇ ಕೇಳತಾ ಇದ್ದೇನೆ!"

"ಅವೇ Ideals ಇದುವರೆಗೆ ಉಳಿದಿದ್ದರೆ ಜನರಿಗೊಂದು Idol ಆಗಿ ಮೆರೆಯುತ್ತಿದ್ದೆ. ನನ್ನದೋ—ಒಂದು ಸಾಮಾನ್ಯವಾದ ಬಾಳು! ಕಲಿತೆ, ಆಲ್ಲಿಯ ಕಾರಖಾನೆಯಲ್ಲಿ ಕೆಲಸ ದೊರೆಕಿಸಿದೆ, ಕಾಯಸ್ಥ ಕನ್ಯೆಯೊಬ್ಬಳನ್ನು ಮದುವೆಯಾದೆ, ಕೈಕಾಲು ಮುರಕೊಂಡು ಬಿದ್ದಹಾಗೆ ಕಾನಪುರದಲ್ಲಿಯೇ ಕುಳಿತು ಬಿಟ್ಟಿದ್ದೇನೆ. ಇಲ್ಲಿಗೆ ಬರಬೇಕೆಂದರೆ ಅಂತಹ ಕಾರಖಾನೆಗಳಿಲ್ಲ; ಹೊಸತಾಗಿ ತೆಗೆಯವುದೆಂದರೆ ನಮ್ಮಂತಹರಿಂದ ಸಾಧ್ಯವಿಲ್ಲ."

"ಅದು ಹೋಗಲಿ! ಮದುವೆ ಆದದ್ದನ್ನು ಹೇಳಿದೆ, ಅದರ ಫಲಿತಾಂಶ ಹೇಳಲಿಲ್ಲ?"

"ಭೂಮಿ ಹುಲುಸಾದದ್ದು, ಎಂತಲೇ ನಾನೀಗ ನಾಲ್ಕು ಮಕ್ಕಳ ತಂದೆ!"

"ಶಹಾಬಾಶ್!"

ಅಷ್ಟರಲ್ಲಿ ಸಾವೇರಿಬಾಯಿ—ಕೂಗಿ ಗಂಡನಿಗೆ ಹೇಳಿದರು: "ನೋಡಿದಿರಾ ಇವನ ತುಂಟಾಟ! ತಾನೇ ಪತ್ತಿ ಕೂಡಬೇಕಂತೆ; ನಾನು ಕೈ ಹಜ್ಜಾ ಬಾರದಂತೆ! ಜೋಲಿಹೋಗಿ ಬಿದ್ದರೆ ತಲೆ ಒಡೆಯುತ್ತದೆ! ಅಲ್ಲದೆ ನಾನೊಬ್ಬಳೇ ಎಮ್ಮುಸಲ ಕುದುರೆ ಆಗಬೇಕು; ನೀವೂ ಬನ್ರಿ!"

ದೇವದತ್ತರು ಕಿಟಕಿಯಲ್ಲಿ ಮುಖ ಚಾಚಿ ನಗುತ್ತ ಹೇಳಿದರು; "ಒಬ್ಬರ ಜೊತೆಯಲ್ಲಿ ಮಾತನಾಡತಾ ಇದ್ದೇನೆ. ನಡೆಯಲಿ, ನಡೆಯಲಿ; ನಿನಗೆ ಕುದುರೆಯಾಗಲಿಕ್ಕೆ ಬೇಸರವೆನಿಸಿದ್ದರೆ ಮತ್ತೇನಾದರೂ ಆಗು....ನಾನು ಬರುವವರೆಗು!"

ಮತ್ತೆ ಸ್ನೇಹಿತರಿಬ್ಬರ ಮಾತಿಗೆ ಪ್ರಾರಂಭವಾಯಿತು. ಬಂದವನು ನುಡಿದ: "ನನ್ನ ವಿಷಯ ನೀನು ಕೇಳಿಕೊಂಡೆ; ನಿನ್ನ ಸಮಾಚಾರ ಏನೂ ಹೇಳಲಿಲ್ಲ? ಅವರೇನೋ ನಿನ್ನ ಹೆಂಡತಿ ಸರಿ! ಮಕ್ಕಳೆಷ್ಟು ಜನ? ಆಲ್ಲಿ ಈಗ ಆಡುತ್ತಿರುವುದೊಂದು! ಆ ಮೇಲೆ?"

"ಆಮೇಲೆನು? ಮೇಲಿಲ್ಲ, ಕೆಳಗಿಲ್ಲ! ಅದೊಂದೇ!"

"ಅಂದರೆ? ಇವರೇನು ನಿನಗೆ ಎರಡನೆಯ ಸಂಬಂಧವೋ ಏನು? ಬಹಳ ಚಿಕ್ಕವರಾಗಿ ಕಾಣ್ತಾ ಇದ್ದಾರೆ!....ಇದು ನೋಡು, ನನ್ನ ಮಾತು ಸ್ವಲ್ಪ ಸ್ಥೂಲ. ಹೀಗೆ ಕೇಳಿದ್ದಕ್ಕಾಗಿ 'ಇನ್ನೇನೂ ತಿಳಿದುಕೊಳ್ಳಬೇಡ ಮತ್ತೆ!"

"ಛೇಛೇ! ಇದರಲ್ಲಿ ಇನ್ನೇನು ತಿಳಿದುಕೊಳ್ಳುವುದದೆಯೊ! ನೋಡು, ಸಂಬಂಧವೇನೂ ಎರಡನೆಯದಲ್ಲ; ಆದರೆ ಹೆಂಡತಿ ಬೇರೆ!"

"ಇದೇನೋಪ್ಪಾ, ನಿನ್ನ ಈ ಒಗಟಿದ ಮಾತು ನನಗೆ ಅರ್ಥವಾಗುವ್ರದಿಲ್ಲ. ನಾನು ನಿನ್ನಂತೆ ಕವಿಯೂ ಇಲ್ಲ; ಮಾತುಗಾರನೂ ಅಲ್ಲ. ಜರ್ಮನಿಯ ಕಾರಖಾನೆಯೊಳಗಿನ ಕೂಲಿಕಾರ ನಾನು! ನೀನೋ—ಶಬ್ದಬ್ರಹ್ಮ! ನಿನ್ನ ಜಮತ್ಕಾರದ ಮಾತು ಬ್ಯೇಡ. ಸಣ್ಣ ಮಕ್ಕಳಿಗೆ ಕಥೆ ಹೇಳಿದ ಹಾಗೆ ಸರಳವಾಗಿ ಹೇಳು!"

"ನಿಜವಾಗಿ ನೋಡು, ಅದೊಂದು ಕಥೆಯೇ ಆಗುವಹಾಗೆ ಅದೆ....ಬರೆದರೆ!" "ಬರೆಯುವೆಯಂತೆ ಆಮೇಲೆ! ಈಗ ಹಾಗೆಯೆ ಹೇಳು, ಕೇಳೋಣ!"

"ನಿಧಾನವಾಗಿ ಕುಳಿತಾಗ ಹೇಳುವ ಕಥೆಯದು! ನೀನು ಬಿಸಿಲಲ್ಲಿ ಬಂದಿದ್ದಿಯಾ! ಏನಾದರೂ cold drink ತರಿಸ್ತೇನೆ, ಮೊದಲು!" ಎರಡು ಗ್ಲಾಸು cold drink ತರಲು ಭಲ್ಲೂಗೆ ಅಪ್ಪಣೆ ಆಯಿತು.

"ಡ್ರಿಂಕ್ಸ್ ಬರಲಿ; ಆದರೆ ನಿನ್ನ ಕಥೆ ಕೇಳುವುದಕ್ಕೆ ಅದರದೇನು ತಡೆ? ನಿನಗೀಗ ಬೇರೆ engagement ಏನೂ ಇಲ್ಲವಲ್ಲ? ನಮ್ಮ ಹಾಗೇನು ಒಂದೇ ಕೆಲಸವಲ್ಲ ನಿನಗೆ; ಸಾವಿರ ಉಪಾಧಿಗಳು!"

"ಈಗ ಯಾವುದನ್ನೂ ಇಟ್ಟುಕೊಂಡಿಲ್ಲ; ಎಲ್ಲಾ ಕಡಿಮೆ ಮಾಡಿಕೊಂಡು ಬಿಟ್ಟಿದ್ದೇನೆ. ಇವ್ವಾಗಿ ಅವೆಲ್ಲ ನೀನು ಬಂದಾಗಲೇ? ನಿಜವಾಗಿ ನೀನು ಬಂದದ್ದರಿಂದ ನನಗೆ ಪರಮಾನಂದವಾಗಿದೆ; ಅವಳನ್ನು ಕರೆದು ನಿನ್ನ ಪರಿಚಯ ಮಾಡಿ ಕೊಡುತ್ತೇನೆ!"

"ಛೆ, ಈಗಲೇ ಬೇಡ! ಅವರ ವಿಷಯ ಕೇಳಿದ ಮೇಲೆ ಆಗಲಿ ಪಾಪ, ತಾಯಿ-ಮಗು ಎಷ್ಟೊಂದು ಸಂತೋಷದಲ್ಲಿ ಆಡುತ್ತಿದ್ದಾರೆ, ಅವರಿಗೆ ಈಗ disturb ಮಾಡುವುದು ಬೇಡ!"

ಭಲ್ಲು drinks ತಂದು ಇಬ್ಬರಿಗೂ ಕೊಟ್ಟ. ಅದನ್ನು ಸವಿಯುತ್ತಲೆ ಬಂದವನು ನುಡಿದ:—'ಹಂ, ಇನ್ನು ಪ್ರಾರಂಭವಾಗಲಿ ನಿನ್ನ ಕಥೆ! Adventure, Romance, Mystery ಎಲ್ಲ ಇರಬಹುದು ಅದರಲ್ಲಿ!" "ಅದನ್ನು ನೀನೇ ಕಂಡುಕೊ; ಅಂತು ನೀನೇನು ನನ್ನನ್ನು ಬಿಡುವಹಾಗಿಲ್ಲ! ಅವಳದೆಂದರೂ ನನ್ನದೇ ಕಥೆಯದು. ಅದನ್ನು ನಿನ್ನೆದುರಿನಲ್ಲಿ ಹೇಳುವುದು ಎಂದರೆ ನನಗೂ ಆನಂದ! ಆಗಲಿ, ನಾನೇನೋ ಇದ್ದುದಿದ್ದ ಹಾಗೆ ಸರಳವಾಗಿ ಹೇಳಿಬಿಡ್ತೇನೆ!" ಎಂದು ದೇವದತ್ತರು ಹೇಳತೊಡಗಿದರು.

"ಅದು ಹೀಗಾಯಿತು: ನಾನು ಕೇಂಬ್ರಿಜ್‌ನಲ್ಲಿ ಕಲಿಯುತ್ತಿರುವಾಗ, ಈಕೆ ತಂದೆಯ ಜೊತೆಗೆ ಸೀಮೆ ನೋಡುವುದಕ್ಕಾಗಿ ಬಂದಿದ್ದಳು. ನಾನು ನಮ್ಮ ಕಾಲೇಜಿನ ಬಿಡುವಿನ ಅವಧಿಯಲ್ಲಿ ಲಂಡನ್ನಿನ ಒಂದು ಹೋಟೆಲ್ಲಿನಲ್ಲಿ ಇರುತ್ತಿದ್ದೆ. ಇವರೂ ಅಲ್ಲಿ ಬಂದು ಇಳಿದರು. ಹೋಟೆಲ್ಲಿನ ಬಿಲ್ಲನ್ನು ಕೊಡುವಾಗ ಇವಳ ತಂದೆ ಮ್ಯಾನೆಜರೊಡನೆ ತಂಟೆಮಾಡಿದ. ಇವರ ತಂದೆ ವಿದ್ಯಾಖಾತೆಯ ಮುಖ್ಯಾಧಿಕಾರಿಯಾಗಿ ನಿವೃತ್ತನಾಗಿದ್ದ. ಹಾಗೆ ನೋಡಿದರೆ ತುಂಬ ಒಳ್ಳೆಯ ಮನುಷ್ಯ. ಆದರೆ ಸುಲಭವಾಗಿ ರೊಕ್ಕ ಬಿಚ್ಚುವವನಲ್ಲ; ಕೈ ಸ್ವಲ್ಪ ಬಿಗುಹಿನದು! ಲಂಡನ್ನಿನಲ್ಲಿ ಸ್ಥಿತಿಯೊಂದಕ್ಕೂ ಪ್ರವಾಸಿಕರಿಂದ ಅನ್ಯಾಯವಾಗಿ ಹೆಚ್ಚು ರೊಕ್ಕ ಸೆಳೆಯುತ್ತಾರೆ— ಎಂದು ಆತನ ಗ್ರಹಿಕೆಯಾಗಿತ್ತು. ಅವರ ತಂಟೆಯಲ್ಲಿ ಪಂಚಾಯತಿಮಾಡಿ ನಾನು ತೀರ್ಪುಕೊಟ್ಟೆ

ನಮ್ಮ ಪರಿಚಯಕ್ಕೆ ಅದೇ ಕಾರಣ. ಮುಂದೆ ಎರಡು ತಿಂಗಳು ನಾನು ಅವರೊಡನೆ ಸೀಮೆಯನ್ನೆಲ್ಲ ಸುತ್ತುಹಾಕಿದೆ. 'ಗೈಡ್' ಎಂದು ನನ್ನನ್ನು ಕರೆದೊಯ್ದರೆ ಕಡಿಮೆ ವೆಚ್ಚ ಬಂದು ಪ್ರವಾಸ ಸುಸೂತ್ರವಾಗಿ ಜರುಗಬಹುದೆಂದು ಮುದುಕನ ಲೆಕ್ಕ; ಒಳ್ಳೆ ಹುಡುಗಿಯೊಡನೆ, ಒಂದು ಕಾಸೂ ಕೈಯಿಂದ ಬೀಳದೆ, ದೇಶ-ಸುತ್ತಾಡಲಿಕ್ಕೆ ಸಿಕ್ಕರೆ ಯಾಕೆ ಬಿಡಬೇಕು?....ಎಂದು ನನ್ನ ಲೆಕ್ಕ; ನನ್ನಂತಹ ಒಬ್ಬ 'ನವಜವಾನ್' ಯಾವಾಗಲೂ ಜೊತೆಗಿದ್ದರೆ ಸೀಮೆಗೆ ಬಂದದ್ದಕ್ಕೂ ಸಾರ್ಥಕ....ಎಂದು ಮಗಳ ಲೆಕ್ಕ. ನಮ್ಮ ಮೂವರ ಲೆಕ್ಕ ಮೇಳಗೂಡಿ, ನಮ್ಮ ಪ್ರವಾಸದ ಉತ್ಸಾಹ ಮುಪ್ಪುರಿಗೊಂಡು ಸಾಗಿತು. ಈ ಅವಧಿಯಲ್ಲಿಯೇ ನಮ್ಮ ಪರಿಚಯದ ಬೀಜಕ್ಕೆ ಪ್ರೇಮದ ಮೊಳಕೆಯೊಡೆಯಿತು. ನಾವಿಬ್ಬರೂ 'ಥೇಮ್ಸ್' ನದಿಯನ್ನು ಸಾಕ್ಷಿಯಿಟ್ಟು ವಚನಬದ್ಧರಾದೆವು. ಅವಳು ಮರಳಿ ದೇಶಕ್ಕೆ ಬಂದು ಕಾಲೆಜ್ ಸೇರಿದಳು. ನಾನು ಅಮೇಲೆ ಸುಮಾರು ನಾಲ್ಕುವರ್ಷಗಳ ವರೆಗೆ ಸೀಮೆಯಲ್ಲಿದ್ದೆ. ನಾನು ಅಲ್ಲಿ ಎಮ್. ಎ. ಆದ ವರ್ಷವೇ ಅವಳು ಇಲ್ಲಿ ಎಮ್. ಎ. ಆದಳು.

....ಇಂಗ್ಲೀಷ್ ಪ್ರೊಫೆಸರನ ಕೆಲಸ ನನಗಾಗಿ ಕಾದಿತ್ತೇನೊ ಎನ್ನುವಹಾಗೆ, ಸೀಮೆಯಿಂದ ಬಂದ ಕೂಡಲೆ ನನಗೆ ಕೆಲಸ ದೊರೆಯಿತು. ಕೆಲಸ ದೊರೆತ ಒಂದು ವಾರದಲ್ಲಿ ಮದುವೆಯ ಸಂಭ್ರಮವೂ ಮುಗಿದುಹೋಯಿತು....

"ಇಲ್ಲಿಗೆ Romantic Period ಮುಗಿಯಿತೇನೊ !.... ಹೌದಯ್ಯ, ಇದರಲ್ಲಿ Mystery ಏನೂ ಬರಲಿಲ್ಲವಲ್ಲ ?" ಬಂದವನು ಕೇಳಿದ.

"ಅದು ಇನ್ನೂ ಮುಂದೆ, ಕೇಳು !

....ಸಾವೇರಿ— ಇದು ನಿನ್ನತ್ತಿಗೆಯ ಹೆಸರು— ನಾನು ಬರುವ ಮೊದಲೇ ಒಂದು ಹೈಸ್ಕೂಲಲ್ಲಿ ಶಿಕ್ಷಕಿಯಾಗಿ ಸೇರಿದ್ದಳು. ಅಷ್ಟುಹೊತ್ತಿಗೆ ಅವಳ ತಂದೆ ತೀರಿಕೊಂಡಿದ್ದ. ತನ್ನ ಆಸ್ತಿ-ಯನ್ನೆಲ್ಲ ಒಬ್ಬ ದತ್ತುಮಗನಿಗೆ ಮಾಡಿ, ಇವಳ ಹೆಸರಿನಲ್ಲಿ ಸ್ವಲ್ಪ ಹಣವನ್ನು ಮಾತ್ರ ಬ್ಯಾಂಕಿನಲ್ಲಿರಿಸಿದ್ದ. ನನಗೇನು ಅವಳ ಆಸ್ತಿಯ ಮೇಲೆ ಆಶೆಯಿರಲಿಲ್ಲ; ಎಂತಲೇ ಆದು ದತ್ತುಮಗನಿಗೆ ಹೋದದ್ದಕ್ಕಾಗಿ ದುಃಖವೂ ಎನಿಸಲಿಲ್ಲ. ಆದರೆ ದೊಡ್ಡ ಕಾಲೇಜಿನ ಇಂಗ್ಲಿಷ್ ಪ್ರೊಫೆಸರನ ಹೆಂಡತಿಯೆನಿಸಿ-ಕೊಳ್ಳುವವಳು ಶಿಕ್ಷಕಿಯಾಗಿ ದುಡಿಯುವುದು ನನಗೆ ಸರಿಬರ-ಲಿಲ್ಲ. ಗಂಡುಸಿಗೆ 'ಪ್ರಪಂಚದಲ್ಲಿಯ ಪೌರುಷ ಎನ್ನುವುದೆಲ್ಲ ತನಗೇ ಸೇರಿದ್ದು, ಹೆಂಗುಸಿನ ರಾಜ್ಯ ಮನೆಯ ಒಳಜಕ್ಕು ಬಂದಿ-ಯಲ್ಲಿ' ಎನಿಸುವುದು ಪರಂಪರಾಗತ. ನಾನು ಐದುನೂರು ರೂಪಾಯಿ ಸಂಬಳ ತರುವಾಗ ಹೆಂಡತಿ ದುಡಿಯುವ ಅಗತ್ಯ-ವೇನು ? 'ಗೃಹಿಣಿ' ಅವಳು, ಮನೆ ನೋಡಿಕೊಳ್ಳುವುದೇ ಅವಳ ಕೆಲಸ ! ಈ ಮಾತನ್ನು ನಾನು ಹೇಳಿದಾಗ ಸಾವೇರಿಗೆ ಒಪ್ಪಿಗೆ-ಯಾಗಲಿಲ್ಲ ; ಆದರೂ ನನ್ನ ಮಾತಿಗೆ ಎದುರುಬೀಳದೆ, ಕೆಲಸ ಬಿಟ್ಟು ಆಕೆ ಮನೆ ನೋಡಿಕೊಳ್ಳತೊಡಗಿದಳು. ಅಂತೂ ಮನೆ ಎನ್ನುವುದೊಂದು ಏರ್ಪಾಡಾಗಿ, ನಮ್ಮ ಸಂಸಾರದ ಶಕಟವನ್ನು 'ಹಲಾ' ಎಂದು ಹಾದಿಯಮೇಲೊಮ್ಮೆ ನೂಕಿದೆವು. ....

....ನನಗೆ ಮೊದಲಿನಿಂದಲೂ ಸಾಹಿತ್ಯದ ಮೇಲೆ ಪ್ರೀತಿ, ಬರೆಯುವುದರ ಕಡೆಗೆ ಒಲವು; ಇದನ್ನು ನೀನೂ ಬಲ್ಲೆ ! ಕಾಲೇಜಿನ ವಾತಾವರಣವು ಇದಕ್ಕೆ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಟ್ಟಿತು. ನನ್ನ ಬರೆವಣಿಗೆ ಬೆಳೆದಹಾಗೆ ಸ್ನೇಹಿತರೂ ಬೆಳೆದರು, ಪರಿಚಯವು ಹೆಚ್ಚಾಯಿತು. 'ಹಳ್ಳಿಯಲ್ಲಿ ಹನುಮಪ್ಪನೆ ದೊಡ್ಡ ದೇವರು' ಎನ್ನುವಹಾಗೆ, ಒಳ್ಳೆಯವರು ಇಲ್ಲದಿರುವಾಗ ಇದ್ದವರಿಗೇ ಮರ್ಯಾದೆ ಹೆಚ್ಚು. ಅದರಲ್ಲಿ ಮೂರು ನಾಲ್ಕು ಗುಣಗಳು ಒಬ್ಬನಲ್ಲಿದ್ದೆ ಅಡಕವಾಗಿದ್ದರೆ ಮುಗಿದೆಹೋಯಿತು. ಮೊದಲನೆಯದು— ನಾನು ಇಂಗ್ಲೀಷ್ ಪ್ರೊಫೆಸರು ಎಂದು ಗೌರವ; ಎರಡನೆಯದು— ಕವಿ; ಮೂರನೆ-ಯದು— ಕತೆಗಾರ; ನಾಲ್ಕನೆಯದು— ಒಳ್ಳೆ ಮಾತುಗಾರ ! ಜನಗಳ ಮೆಚ್ಚುಗೆಗೆ ಇದಕ್ಕೂ ಹೆಚ್ಚೇನು ಬೇಕು ? ರಾಜಕೀಯ ರಂಗವೊಂದನ್ನು ಬಿಟ್ಟು, ಯುನೂರು ಜಾತ್ರೆ ಮೊದಲು ಮಾಡಿ 'ಯುನಿವರ್ಸಿಟಿ ಯಾಕೆ ಬೇಕು?' ಎಂಬ ಚರ್ಚಾಸಭೆಯ ವರೆಗಿನ ಎಲ್ಲಕಡೆಗಳಲ್ಲಿಯೂ ನನ್ನನ್ನೆತ್ತಿ ಕುಣಿಸಾಡುವವರೆ ! ಕಾಲೇಜಿನ ಕೆಲಸ, ಅಲ್ಲಿಯ ವಿಷಯಗಳ ಸಿದ್ಧತೆ, ನನ್ನ ಸ್ವಂತದ ಅಭ್ಯಾಸ, ಗ್ರಂಥವಿಮರ್ಶೆ, ಕಾವ್ಯರಚನೆ, ಕಥಾನಿರ್ಮಿತಿ, 'ಮುನ್ನುಡಿ'ಬರೆಯುವುದು, ಸಾಹಿತ್ಯಸಲಹೆ, ಸಭೆಗಳಲ್ಲಿಯ ಭಾಷಣ; ಇವುಗಳಲ್ಲದೆ ಅನೇಕ ಸಂಘಗಳ ನಾಯಕತ್ವ, ಸಂಸ್ಥೆ-ಗಳ ಚಾಲಕತ್ವ— ಈ ವಿವಿಧ ವ್ಯಾಪಾರಗಳಲ್ಲಿ ಸಂಪೂರ್ಣವಾಗಿ ನಾನು ಬೆರೆತುಕೊಂಡುಬಿಟ್ಟೆ. 'ಸಂಸಾರಸಾಗಿಸುವಾಕೆ ಸಾವೇರಿ; ಆದರ ಚಿಂತೆ ಅವಳಿಗೆ. ಸಂಬಳ ತಂದು ಅವಳ ಸೆರಗಿನಲ್ಲಿ ಸುರಿದುಬಿಟ್ಟರೆ ನನ್ನ ಸಂಬಂಧ ಮುಗಿಯಿತು. ಕೆಲಸಬೊಗಸೆಗೆ ಆಳಿನೆ. ಕೈಯಲ್ಲಿ ಕಾರೂ ಇದೆ. ನುನೆನೋಡಿಕೊಂಡು ಉಳಿದ ಹೊತ್ತಿನಲ್ಲಿ ಕಸೂತಿಯೊ, ಕ್ಲಬ್ಬೊ, ಸಿನೆಮಾನೋ ಮಾಡಿ-ಕೊಂಡು ಅವಳು ಇದ್ದುಬಿಟ್ಟರೆ, ಸಾವೇರಿಗೆ ಸಾಕಷ್ಟು ಸುಖ ಕೊಟ್ಟಹಾಗಾಯ್ತು ! ನಾನು ಅವಳೊಡನೆ ನಗೆಯಾಡುವುದು-ಕೆಲೆವಾಡುವುದೊ— ಜೊ— ಆದೇನು— ತಿಂಡಿತಿನ್ನುವಾಗ, ಊಟಮಾಡುವಾಗ ಸಾಕು ! ಇದಕ್ಕೂ ಹೆಚ್ಚೇನು ಬೇಕು ?' ಎಂಬ ಮನೋವೃತ್ತಿಯಲ್ಲಿ, ಹೆಂಡತಿಯೊಡನೆ ಸರಸಕ್ಕೆ ನನ್ನ ದಿನಚರಿಯಲ್ಲಿ ಸ್ವತಂತ್ರಸ್ಥಾನವನ್ನು ನಾನು ಕೊಟ್ಟಿರಲಿಲ್ಲ, ಅಥವಾ ಕೊಡಲು ಸಾಧ್ಯವಾಗಿರಲಿಲ್ಲವೇನೊ ! ಎಲಾಸಕ್ಕಾಗಿ ಮಾಡಿದ್ದು ವ್ಯಸನವಾಗಿ ಅಂಟಿಕೊಳ್ಳುವಹಾಗೆ, ನನ್ನ ಜೀವನವೆಲ್ಲ ವಾಙ್ಮಯವಾಯಿತು. ನಾನು ಮಾತನ್ನೇ ಉಸುರಾಡಿಸಹತ್ತಿದೆ ! ನಾನು ಹೀಗೆ 'ಪಬ್ಲಿಕ್ ಮ್ಯಾನ್' ಆದೆ; ಆದರೆ ಮನುಷ್ಯ ಪೂರ್ಣ 'ಪಬ್ಲಿಕ್‌ಮ್ಯಾನ್' ಆಗುವುದು ಎಂದರೆ ಹೆಂಡತಿಗೆ ಪರಪುರುಷನಾದ ಹಾಗೆಯೇ ಎಂಬುದು ನನ್ನ ಅನುಭವ ! ಹೀಗೆ

ನನ್ನ ಮೈ, ನನ್ನ ಮನಸ್ಸು ಹೆರವರ ಪಾಲಾದುವು; ನಾನೂ ಸಾವೇರಿಯೂ ಒಳಗೊಳಗೇ ಪಾಲಾದೆವು....

....ಸಾವೇರಿಯೆಂದರೆ ಸಲುಗೆಯಲ್ಲಿ ಬೆಳೆದವಳು. ನನ್ನಷ್ಟೇ ಕ[illegible] ರೂಪದಲ್ಲಿ ಜೆಲುವೆ, [illegible] ಚತುರೆ: ಆದರೆ ಅವ[illegible]ಂದು ಸ್ವಾಭಿಮಾನದ ಸ್ವಯಂಭುಮೂರ್ತಿ! ನನ್ನಂತೆ ತಾನೂ ಹೆಸರಾಗುವ ಹಾಗೆ, ಮನ್ನಣೆ ದೊರೆಯುವ ಹಾಗೆ ಏನನಾದರೂ ಮಾಡಬೇಕು—ತನ್ನನ್ನು ಜನರು ಹೊಗಳಬೇಕು—ತಾನು ಅವರನ್ನು ತನ್ನ ಸುತ್ತು ಕುಣಿಸಬೇಕು—ಇಂಥವರ ಹೆಂಡತಿ ಎಂದು ತನಗೆ ಮನ್ನಣೆ ದೊರೆಯದೆ, ತನ್ನ ವ್ಯಕ್ತಿತ್ವ-ದಿಂದಲೇ ಅದು ತನಗೆ ದೊರೆಯಬೇಕು—ಇಂತಹ ಹಲ-ಕೆಲವು ಆಶೆ-ಆಕಾಂಕ್ಷೆಗಳು ಅವಳ ಮನಸ್ಸನ್ನು ಬಹಳವಾಗಿ ಕಲಕಿದುವು. ಕೆಲಸ ಬಿಡಿಸಿದೆನೆಂದು ಮನಸ್ಸಿಗೆ ತುಸು ಹಚ್ಚಿ-ಕೊಂಡಿದ್ದಳು; ಆಮೇಲೆ ಅವಳ ವಿಷಯದಲ್ಲಿ ನಾನು ತೋರಿ-ಸಿದ ಉಪೇಕ್ಷೆ ಅವಳನ್ನು ಹೆಚ್ಚಾಗಿ ನೋಯಿಸಿದ್ದಿತು. ನಾನು ಕೆಲಸಕ್ಕೆ ಅಥವಾ ಹೊರಗೆ ಹೋದಾಗಲಂತೂ ಸರಿಯೆ, ಮನೆಯಲ್ಲಿರುವಾಗಲೂ ಅವಳೊಡನೆ ಮಾತು-ಕಥೆಗೆ ನನಗೆ ಅವಕಾಶವೇ ದೊರೆಯುತ್ತಿರಲಿಲ್ಲ. ಅದಿಗೆ ಏನು ಮಾಡಿಸಲಿ? ಫಲಾಹಾರಕ್ಕೆ ಯಾವ ಪದಾರ್ಥಬೇಕು?—ಬ್ಲಾವುಜಿಗೆ ಈ ಅರಿವೆ ಸರಿಹೋಗುವುದೊ?—ಗಡಿಯಾರ ಕಟ್ಟಿದ ಕೈಯಲ್ಲಿ ಬಳೆ ಇಡವಿದ್ದರೆ ಹ್ಯಾಗೆ ಕಾಣುವುದು?—ಈ ಗುಬ್ಬಿಯ ಜುಂಬಿಗೆ ಯಾವ ಬಣ್ಣದ ದಾರ ಸರಿಹೋಗುವುದು?—ಇಂತಹ ಅವಳ ಸಾವಿರದಾ ಒಂದು ಪ್ರಶ್ನೆಗಳಿಗೆಲ್ಲ ಉತ್ತರ ಕೊಡುತ್ತಾ ಕೂಡು-ವುದು ಎಂದರೆ, ಹೊತ್ತಿನ ಅಪವ್ಯಯ ಎನಿಸುವುದು ನನಗೆ. ಸಾಹಿತ್ಯಜರ್ಜಿಯಿದ್ದರೆ ಬೇಕಾದಷ್ಟು ಹೊತ್ತು ಮಾತನಾಡ-ಬಹುದು; ಆದರೆ ಅವಳಿಗೆ ಅದರಲ್ಲಿ ಅಭಿರುಚಿ ಇರಲಿಲ್ಲ. ಪಾಪ, ಅವಳು ಕ್ಲಾಸಿಗೆ ಹಚ್ಚಿದ ಪುಸ್ತಕಗಳ ಹೊರತು ಬೇರೆ ಏನನೂ ಓದಿರಲೇ ಇಲ್ಲ!....''

"ನೀನು ಹೀಗೆಲ್ಲಾ ಹೇಳ್ತಾ ಇದ್ದೀಯೆ; ಅತ್ತಿಗೆಯವರು ಒಮ್ಮೆಲೆ ಬಳಗೆ ಬಂದುಬಿಟ್ಟರೆ?" ಬಂದವನು ನಡುವೇ ಕೇಳಿದ.

"ಆ ಪೆದರಿಕೆ ಬೇಡ; ಯಾರಾದರೂ ನನ್ನ ಜತೆಯಲ್ಲಿ ಕುಳಿತಿದ್ದಾಗ ಅವಳು ಹಾಗೆ ಬರುವುದಿಲ್ಲ. ಆದರಲ್ಲಿಯೂ ಈಗ ಆಟದ ಸಂಭ್ರಮದಲ್ಲಿಯೆ ಇದ್ದಾಳೆ!"

ಇಂದು ಕಿರುದನಿಯಲ್ಲಿ ಮತ್ತೊಂದು ಸಲ ಕೇಕೆಹಾಕಿದ; ಅದಕ್ಕೆ ಸಾವೇರಿಬಾಯಿ ದನಿಗೂಡಿಸಿದರು.

"ಹಂ, ಮುಂದೆಸಾಗಲಿ ಹಾಗಾದರೆ ನಿನ್ನ ಪುರಾಣ!" ಗೆಳೆಯ ಸುಡಿದ.

"ಸರಿ, ನಾನಿಲ್ಲದಿರುವಾಗ, ಅರಿಯದವರೆದುರಿಗೆ ಅಥವಾ ಅನಭಿಜ್ಞರೆದುರಿಗೆ ಬೇಕಾದಷ್ಟು ಜಂಭ ಹೊಡೆಯುವಳು. ಆದರಲ್ಲಿಯೂ, ಬರುಬರುತ್ತ ಅವಳ ಸ್ವಾಭಿಮಾನ ಬಲು ಸೂಕ್ಷ್ಮಕ್ಕೆಳಿದಿತ್ತು. ಹೆಜ್ಜೆಹೆಜ್ಜೆಗೂ ಆ ತೂಕ ಹಿಡಿದು ನಡೆಯುವುದು ನನಗೂ ಆಗುತ್ತಿರಲಿಲ್ಲ. ಕೆಲವು ಸಲ ನಾನೂ ನಿರ್ದಾಕ್ಷಿಣ್ಯದಿಂದಲೇ ನಡೆಯುತ್ತಿದ್ದೆ. ಪ್ರಸಂಗ ಬಂದರೆ ಅವಳೊಡನೆ ವಾದ-ವಿವಾದಕ್ಕೆ ನಿಲ್ಲುತ್ತಿದ್ದೆ. ತಲೆಯಲ್ಲಿ ತರ್ಕ-ಶಾಸ್ತ್ರ; ಈ ಕೈಯಲ್ಲಿ ಮಾನಸಶಾಸ್ತ್ರ, ಇನ್ನೊಂದು ಕೈಯಲ್ಲಿ ಭಾಷಾಶಾಸ್ತ್ರ! ಇವುಗಳೊಂದಿಗೆ ಹೆಂಡತಿ ಆಡುವ ಪ್ರತಿ ಮಾತಿಗೂ ಅರ್ಥ ತೆಗೆಯಹತ್ತಿದರೆ ಅಥವಾ ಅದನ್ನು ಈ ಮೂರರ ಒರೆಗೆ ಹಚ್ಚಲು ಪ್ರಯತ್ನಿಸಿದರೆ ಅವಳ ಗತಿಯೇನು? ಹೆಂಡತಿ ಬೇಡುವುದು ಪ್ರೇಮದ ತುಚ್ಛಾಟವನ್ನು ಹೊರತು ಶಾಸ್ತ್ರದ ಗೊಡ್ಡು ಹರಟೆಯನ್ನಲ್ಲ ಎಂಬುದು ಆಗ ನನಗೆ ತಿಳಿಯಲಿಲ್ಲ! ಕಲ್ಪನೆ, ತರ್ಕ, ವಿಚಾರ ಇವುಗಳಲ್ಲಿಯೆ ಹುಟ್ಟಿ ಬೆಳೆಯುವ-ವರಿಗೆ ಇದು ಬೇಗನೆ ತಿಳಿಯುವುದು ಕಷ್ಟ. ನನ್ನ ಕೊಂಕು-ಮಾತುಗಳು ಅವಳ ಸ್ವಾಭಿಮಾನವನ್ನು ಮೇಲೆ ಮೇಲೆ ಏರಿಸ-ತೊಡಗಿದುವು. ಅವಳೂ ಹಟಕ್ಕೆ ಬಿದ್ದಳು. ಹೀಗೆ ಈ 'ಶಬ್ದ-ಬ್ರಹ್ಮನ ದೇಗುಲದಲ್ಲಿ ಬೇಗೂ ಬೆಳಗೂ ಚಿಳಿಪಿಟಿ ಬೆಂಕಿ'ಯ ಕಿಡಿಗಳು ಹಾರಹತ್ತಿದುವು....

....ನನ್ನಂತೆ ಹೆಸರಾಗಬೇಕೆಂದರೆ ನಾನು ಮಾಡಿದ ಹಾಗೆ ಮಾಡಬೇಕು. ಸಾಹಿತ್ಯದ ಹಾದಿ ಅಷ್ಟು ಸುಲಭವಲ್ಲ—ಎಂದು ತೋರಿತು. ಇಷ್ಟಾಗಿ 'ಗಂಡ ಮಾಡಿದ್ದನ್ನೇ ತಾನೇಕೆ ಮಾಡ ಬೇಕು, ಸಾಹಿತ್ಯದಲ್ಲಿ ಆತನು ಹೆಸರು ಗಳಿಸಿದ್ದರೆ ಬೇರೆ ಯಾವು ದಾದರೊಂದು ಕಲೆಯಲ್ಲಿ ತಾನು ನೈಪುಣ್ಯವನ್ನು ಗಡೆಯ-ಬಹುದು' ಎಂದು ಅವಳಿಗೆನಿಸಿತು. ಈ ವಿಚಾರ ತಲೆಯಲ್ಲಿ ಬರುವುದೊಂದೇ ತಡ; ಒಂದು ತಂಬೂರಿ, ಒಂದು ಸ್ವರದ ಪೆಟ್ಟಿಗೆ ಒಂದು ಜೊತೆ ತಬಲಾ ಮನೆಗೆ ಬಂದೇ ಬಿಟ್ಟುವು. ಮಾರನೆಯ ದಿನ ನಾನು ಕಾಲೇಜಿನಿಂದ ಬರುವುದರೊಳಗಾಗಿ ಸಂಗೀತ-ಶಿಕ್ಷಕ ಸ್ವರ ಹೇಳುತ್ತಿದ್ದ. ಈಕೆ ತನ್ನ ಗಂಟಲೊಳಗಿಂದ ಅದನ್ನೇ ಬಯಲಿಗೆ ಹಾಕುತ್ತಿದ್ದಳು. 'ಏನನೇ ಕಲಿಯಲಿ, ಒಟ್ಟು ಕಲಿತರೆ ಸಾಕು! ಅದರಿಂದ ಅವಳಿಗೆ ಸಂತೋಷವಾಗುತ್ತಿದ್ದರೆ ನನಗೂ ಸಂತೋಷ!' ಎಂದು ಭಾವಿಸಿ ನಾನವಳ ಸಂಗೀತಪಾಠಕ್ಕೆ ಉತ್ತೇಜನವನ್ನೇ ಕೊಟ್ಟೆ. ಗ್ರಾಮೊಫೋನು, ರೇಡಿಯೊ ಈ ನಿರ್ಜೀವ ವಸ್ತುಗಳ ಹಾಡಂತೂ ನಡೆದೇ ಇತ್ತು. ಇದರ ಜೊತೆಗೆ ಸಂಗೀತ ಮಾಸ್ತರನ ಹಾಡು, ಅದನ್ನೇ ಅನುಕರಿಸುವ ಸಾವೇರಿಯ ಹಾಡು! ಮನೆಯು ನಾವು ನಿದ್ದೆಯಲ್ಲಿರುವಾಗಷ್ಟು ಶಾಂತವಿರು-ತ್ತಿತ್ತು. ಉಳಿದ ಹೊತ್ತಿನಲ್ಲೆಲ್ಲ ಬಂದಿಲ್ಲೊಂದರ ಹಾಡೇ ಹಾಡು! 'ಬೇಗು-ಬೆಳಗು ಇದೇ ಹಾಡಾದರೆ ನನ್ನ ಪಾಡೇನು?' ಎಂದು ಒಮ್ಮೊಮ್ಮೆ ಎನಿಸುವುದು; ಆದರೆ ಇದು ಬಹಳ ದಿವಸ ನಡೆಯಲಾರದು ಎಂಬ ಒಂದು ಆಶೆ ನನಗೆ ಆಗಾಗ ಧೈರ್ಯ ಕೊಡುತ್ತಲಿತ್ತು. ಇದು ಆರುತಿಂಗಳು ನಡೆಯಿತು. ಈ ಸುಮಾರಿಗೆ ಉದಯಶಂಕರ ಬಂದು ಹೋದ. ಅವನ ಶಿಷ್ಯ-ನೊಬ್ಬ ಇಲ್ಲಿ ಕ್ಲಾಸು ತೆರೆದ. ಇಲ್ಲಿಯ ಕೆಲವು ಮನೆತನಸ್ಥ ಹೆಣ್ಣುಮಕ್ಕಳು ನೃತ್ಯ ಕಲಿಯತೊಡಗಿದರು. ಸಾವೇರಿಗೂ ಆ

ಸೋಂಕು ತಗುಲಿತು. ಸಂಗೀತಶಿಕ್ಷಕನಿಗೆ ಅಪ್ಪಣೆ ದೊರೆಯಿತು. ಸಂಗೀತದ ಬದಲಾಗಿ 'ಕುಣಿಯೋಣು ಬಾರಾ' ಕಾಲಟ್ಟಿತು!....

....ಒಂದರ್ಥದಲ್ಲಿ ಸಾವೇರಿ ಕುಣಿಸಿದ ಹಾಗೆ ನಾನೇ ಕುಣಿಯುತ್ತಿದ್ದೆ. ಅದಕ್ಕೆ ಕಾರಣ 'ಯಾವುದಾದರೊಂದು ಹವ್ಯಾಸ ಹಚ್ಚಿಕೊಂಡು ಅವಳು ತನ್ನ ಹೊತ್ತನ್ನು ಖುಷಿಯಲ್ಲಿ ಕಳೆಯಲಿ' ಎಂದು. ಸಾವೇರಿ ನೃತ್ಯ ಕಲಿಯುವುದರಲ್ಲಿ ಪರಿಶ್ರಮಪಡುವಂತೆ ಕಾಣುತ್ತಿದ್ದರೂ ಪ್ರಗತಿ ಕಾಣುತ್ತಿರಲಿಲ್ಲ. ಆದರೆ ಇದರಿಂದ ಒಂದು ಮಾತ್ರ ಲಾಭವಾಯ್ತು : ಸಾವೇರಿ ಹೆಚ್ಚಾಗಿ ಉಣ್ಣತೊಡಗಿದಳು. ಅವಳ ಆರೋಗ್ಯ ಸುಧಾರಿಸಿತು. ಆದರೆ ದುರ್ದೈವದಿಂದ 'ಥಕಥೈ' ಕಾಲ ಬಹುದಿನಸ ಬಾಳಲಿಲ್ಲ. ಅದಕ್ಕೂ ಬೇಗನೆ ಉಚ್ಚಾಟನೆ ದೊರೆಯಿತು!....

....ಕಸೂತಿಗೆ ಕೈನೋವು, ಓದುವುದಕ್ಕೆ ಬೇಜಾರು, ಸಂಗೀತಕ್ಕೆ ಧನಿ ಸಲ್ಲದು, ನೃತ್ಯಕ್ಕೆ ಮೈ ಜಡ! ಯಾವುದನ್ನು ಮಾಡಬೇಕೋ ಅವಳಿಗೆ ತಿಳಿಯದು. 'ಹೊತ್ತು ಹೋಗುವುದು ಹ್ಯಾಗೆ?' ಎಂದು ಅವಳಿಗೆ ಸಮಸ್ಯೆಯಾದರೆ 'ಹೊತ್ತು ದೊರೆಯುವುದು ಹ್ಯಾಗೆ?' ಎಂದು ನನಗೆ ಸಮಸ್ಯೆ! ಸಂಗೀತ ನೃತ್ಯ ಕಲಿಯುವಾಗ ಅವಳು ನನ್ನ ಗೊಡವೆಗೆ ಬರುತ್ತಿರಲಿಲ್ಲ. ಅಪ್ರತ್ಯಕ್ಷವಾಗಿ ನನಗೇನು ತೊಂದರೆಯಾಗುತ್ತಿತ್ತೊ ಅಷ್ಟೆ! ಅದನ್ನು ನಾನು ಆನಂದದಿಂದ ಸಹಿಸುತ್ತಿದ್ದೆ. ಇವೆರಡೂ ನಿಂತುಹೋದ ಮೇಲೆ ಅವಳ ದೃಷ್ಟಿ ಮತ್ತೆ ನನ್ನ ಮೇಲೆ ವಕ್ರಿಸಿತು. ಎಲ್ಲ ಸಮಸ್ಯೆಗಿಂತ ಸಾವೇರಿಯನ್ನು ಖುಷಿಯಲ್ಲಿಡುವುದು ಹ್ಯಾಗೆ?— ಎಂಬ ಸಮಸ್ಯೆ ನನ್ನ ತಲೆಮೆಟ್ಟಿ ನಿಂತಿತು....."

....ಇದೇ ಸಮಯದಲ್ಲಿ ಅಮೆಚ್ಯೂರ್‌ನವರಿಗೆ ನಾನೊಂದು ನಾಟಕವನ್ನು ಬರೆದುಕೊಟ್ಟೆ. ಆ ನಾಟಕದೊಳಗಿನ ನಾಯಿಕೆ ಎಂ, ಎ. ಆದವಳಿದ್ದಾಳೆ. ಸಾವೇರಿ ತಾನು ಆ ಪಾತ್ರವಹಿಸುವೆನೆಂದು ಪಟಹಿಡಿದಳು. ನಮ್ಮ ಸಮಾಜದ ಈಗಿನ ಕಲಬೆರಿಕೆಯ ಅಪರಿಪಕ್ವ ಸ್ಥಿತಿಯಲ್ಲಿ, ಮನೆತನಸ್ಥ ಹೆಣ್ಣುಮಕ್ಕಳು ನಾಟಕ-ಸಿನೇಮಾಗಳಲ್ಲಿ ಭಾಗವಹಿಸುವುದು ಹಿತಕರವಲ್ಲವೆಂದು ನಾನು ಹಲವು ಉದಾಹರಣೆಗಳನ್ನು ಕೊಟ್ಟು ಹೇಳಿದರೂ ಅವಳಿಗೆ ಆ ಮಾತು ಒಪ್ಪಿಗೆಯಾಗಲಿಲ್ಲ. ಒಂದೇ ಹಟ ಹಿಡಿದಳು. 'ಒಮ್ಮೆ ಅನುಭವ ಬರಲಿ' ಎಂದು ನಾನೂ ಅನುಮತಿ ಕೊಟ್ಟೆ. ನಾಟಕ ಒಮ್ಮೆ ಆಯಿತು. ಸ್ಟೇಜಿನ ಮೇಲೆ ಏನಾಯಿತೋ ಭಗವಂತನಿಗೇ ಗೊತ್ತು; ಬಹಳ Poor Show ಎಂದು ಕೂಡಿದ ಜನ ಗೇಲಿ ಮಾಡಿದರು. ಅವಳ ಮೇಲೆ ಕಾಗದದ ಸುರುಳಿಯ ವೃಷ್ಟಿಯ ಜತೆಗೆ ಪುಷ್ಪವೃಷ್ಟಿಯೂ ಸಾಕಷ್ಟಾಯಿತು. ನಾಟಕ ಮುಗಿದ ಮೇಲೆ ಕಾರಿನಲ್ಲಿ ಮನೆಗೆ ಬರುವಾಗ, ಅವಳ ಕಣ್ಣುಗಳಿಂದ ನೀರು ಸುರಿಯುತ್ತಾ ಇತ್ತು. ಅವಳನ್ನು ಮೈದಡವಿ ಸಮಾಧಾನ ಪಡಿಸಬೇಕೆಂದು ಬೆನ್ನಮೇಲೆ ಕೈಯಿಟ್ಟೆ. ಕೈಯನ್ನು ಕಿತ್ತೊಗೆದು ನನ್ನ ತೊಡೆಗೆ ಬಾಸಳಿಬರುವಹಾಗೆ ಏಟನ್ನು ಹಾಕಿದಳು. ನಾನು ಬುದ್ಧನಂತೆ ನಿರ್ವಿಕಾರವೃತ್ತಿಯನ್ನು ತಾಳಿ—ಆದರೂ ಮುಖದ ಮೇಲೆ ಹುಸಿನಗೆ ತಂದು—ಸರಿದು ಕುಳಿತೆ. ಮರುಕ್ಷಣದಲ್ಲಿಯೆ ನನ್ನ ಹೆಗಲಮೇಲೆ ಮುಖ ಇಟ್ಟು ಆ ಭಾಗವನ್ನೆಲ್ಲ ಕಂಬನಿಗಳಿಂದ ತೋಯಿಸಿಬಿಟ್ಟಳು ಸಾವೇರಿ!....

....ಮುಂದೆ ಕೆಲವು ದಿನ ಅವಳ ಮೈಯಲ್ಲಿ ನೆಮ್ಮದಿ ಇಲ್ಲದಂತಾಯಿತು. ಊಟ ಕಡಿಮೆಯಾಗಿ ತಿಂದದ್ದು ದಕ್ಕದಂತಾಯಿತು. ಮೋರೆ ಬಿಳುಚಿಟ್ಟಿತು, ಕಣ್ಣು ಒಳನೆಟ್ಟುವು. ಕುಳಿತಲ್ಲೆ ಕುಳಿತುಬಿಡುವುದು, ಇಲ್ಲವೆ ನಿದ್ದೆಹೋಗುವುದು— ಇಂತಹ ಒಂದು ಆಲಸ್ಯವೊ, ಆಚೈತನ್ಯವೊ, ಅವಳಲ್ಲಿ ಕಾಣಿಸಿಕೊಂಡಿತು. ಡಾಕ್ಟರಿಗೆ ಪ್ರಕೃತಿ ತೋರಿಸೆಂದು ಎಷ್ಟು ಹೇಳಿದರೂ ಅವಳೇನು ಅದಕ್ಕೆ ಸಮ್ಮತಿಸಲಿಲ್ಲ. ನನಗೂ ಸಿಟ್ಟು ತಡೆಯಲಿಲ್ಲ. 'ನೀನು ಈ ಸ್ಥಿತಿಯಲ್ಲಿ ಹೀಗೆ ಇರುವುದಕ್ಕಿಂತ ತವರುಮನೆಗೆ ಹೋಗುವುದೇ ಲೇಸು! ಅಥವಾ ನಾನು ನಿನಗೆ ಜೇಸರವಾಗಿದ್ದರೆ, ಕೆಲವು ದಿನ ಇಬ್ಬರೂ ಬೇರೆ ಇದ್ದು ಬಿಡೋಣ' ಎಂದುಬಿಟ್ಟೆ. ನನ್ನದೂ ತಲೆತಿರುಕತನವೇ ಅದು! ಸರಿ. ಅವಳೂ ಪೆಂಗೆಯ ಹಾಗೆ ತನ್ನ ಆರಿವೆ-ಅಂಚಡಿ ಕಟ್ಟಿಕೊಂಡು ತವರುಮನೆಗೆ ಹೊರಟೇ ಬಿಟ್ಟಳು. ಅವಳು ಹೋಗುವಾಗ ನಾನು ಮಾತನಾಡಿಸಲಿಲ್ಲ; ಅವಳೂ ಬಿಗಿದುಕೊಂಡೇ ಇದ್ದಳು....

....ಎರಡು ವಾರ ಹೇಗೋ ಗಟ್ಟಿಮುನಸ್ಸುಮಾಡಿ ವಿರಹದಲ್ಲಿ ಕಳೆದೆವು. ನಾನೂ ಕಾಗದ ಬರೆಯಲಿಲ್ಲ, ಅವಳಿಂದಲೂ ಕಾಗದ ಬರಲಿಲ್ಲ. ಇದರಲ್ಲಿ ಸೋಲುವವರಾರು? ನಾನಿಲ್ಲಿ ಕೊರಗುತ್ತಿದ್ದೆ; ಅವಳಲ್ಲಿ ಮರುಗುತ್ತಿದ್ದಳು. ಆದರೆ ದೇವರಿಗೆ ನಮ್ಮ ಚಿಂತೆ. ನಮ್ಮಿಬ್ಬರಿಗೂ ತಿಳಿಯದಂತೆ ಒಳಗೊಳಗೇ ಒಂದು ಒಳಸಂಚು ನಡೆದಿತ್ತು!...." "ಈಗೇನೊ mystery ಬಂದಹಾಗಾಯ್ತು ಸ್ವಲ್ಪ" ಗೃಹಸ್ಥ ನುಡಿದ.

"ಹುಂ, ಒಂದು ದಿನ ಸಾವೇರಿಯ ಪ್ರೊಫಾಯಿಲ್ (Profile) ನಲ್ಲಿರುವ ಒಂದು ತಸಬೀರನ್ನು ಟೇಬಲ್‌ಮೇಲಿರಿಸಿ, ಅದರಂತೆಯೆ ರೈಟಿಂಗ್ ಪ್ಯಾಡಿನ ಮೇಲೆ ಗೆರೆ ಎಳೆಯುತ್ತಾ ಕುಳಿತಿದ್ದೆ. ಅದು ಸಾವೇರಿಯ ವ್ಯಂಗ್ಯಚಿತ್ರವಾಗುವ ಲಕ್ಷಣ ಕಂಡಿತು. ಅದನ್ನು ತಿದ್ದಿಕೊಳ್ಳುವುದು ಹೇಗೆ ಎಂಬ ವಿಚಾರದಲ್ಲಿದ್ದೆ. ಅಷ್ಟರಲ್ಲಿ ಭಲ್ಲು ಬಂದು ಒಂದು ಕಾಗದ ತಂದುಕೊಟ್ಟ. ಒಡೆದುನೋಡಿದೆ, ನಮ್ಮ ಬೀಗನ ಕಾಗದ. ಆದರೆ ಅಕ್ಷರ ಸಾವೇರಿಯವ್ವ, ಸಹಿ—ಮಾತ್ರ ಅವನದು. ಅದರಲ್ಲಿ ಎರಡೇ ಸಾಲುಗಳು— "ಸಾವೇರಿ ನಿಮ್ಮನ್ನು ಬಹಳ ನೆನೆಯುತ್ತಾಳೆ. ನಾವೆಲ್ಲರೂ ಕುಶಲವಾಗಿದ್ದೇವೆ. ನಿಮ್ಮ ಕುಶಲವಾರ್ತೆ ತಿಳಿಸಬೇಕು." ಕಾಗದದಲ್ಲಿ ಇನ್ನೊಂದು ವಿಶೇಷವಿತ್ತು: Webster Dictionary ಯಂತಹ ಒಂದು ದೊಡ್ಡ ಪುಸ್ತಕದ ಚಿತ್ರವನ್ನು ತೆಗೆದು, ಅದರ ಕೆಳಗೆ 'A book means Prof. Devadatta' ಎಂದು ಬರೆದು, ಕೆಳಗೆ ಸಣ್ಣಕ್ಷರದಲ್ಲಿ ಸಾವೇರಿ ತನ್ನ ಸಹಿಮಾಡಿದ್ದಳು....

—ಅದೇ ದಿನ ಪ್ರಯಾಣ ಬೆಳೆಯಿಸಿ ಪುಣೆಗೆ ಬಂದೆ. ಸಾವೇರಿ ಸ್ಟೇಶನಿಗೆ ಬಂದಿರಲಿಲ್ಲ. Odd Time (ಅಡ್ಡಹೊತ್ತು) ಎಂದುಕೊಂಡೆ. ಬೀಗನ ಜೊತೆಗೆ ಮನೆಗೆ ಬಂದೆ. ಸಾವೇರಿ

೫೧ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ. ೪ ಆಣೆ.
ಎಲ್ಲ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧ!
ವಿಳಾಸ:— ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ.
ಗಿರಗಾಂವ, ಮುಂಬಯಿ.

ಎದುರುಗೊಂಡು ಸ್ವಾಗತಿಸಬಹುದು ಎನಿಸಿತ್ತು. ಅವಳಿಗೆ ಬದಲಾಗಿ ಅವಳಜ್ಜಿ ಎದುರಿಗೆ ಬಂದಳು. ಒಂದು ನಮಸ್ಕಾರ ಹಾಕಿದೆ. ಸೀಮೆಗೆ ಹೋಗಿ ಬಂದವ ಸಾಷ್ಟಾಂಗ ಹಾಕಿದ; ಅಜ್ಜಿಗೆ ಅಷ್ಟೇ ಸಂತೋಷ. "ಗಾಡಿಗಳೀಗ ಸರಿಯಾದ ಹೊತ್ತಿಗೆ ಬರುವುದೇ ಇಲ್ಲ; ಇಷ್ಟು ಹೊತ್ತು ನಿಮ್ಮ ದಾರಿಕಾಯ್ದು, ಒರಗಿದ ಹಾಗೆಯೆ ಸಾವೇರಿಗೆ ಜಂಪು ಹತ್ತಿದೆ; ನಾನು ಬೇಕಾಗಿ ಎಚ್ಚರಿಸಲಿಲ್ಲ!" ಎಂದು ಮುದುಕಿ ಹೇಳಿದಳು. ಅಷ್ಟರಿಂದ ನನಗೆಲ್ಲಿಯ ಸಮಾಧಾನ? ನೇರವಾಗಿ ಅವಳ ಕೋಣೆಗೆ ಹೋದೆ. ಕೋಚಿನ ಮೇಲೆ, ಎರಡು ದಿಂಬು ತಲೆಯ ಕೆಳಗಿಟ್ಟುಕೊಂಡು ಆಕೆ ಮಲಗಿದ್ದಳು. ಭುಜದ ಮೇಲೆ ಕೈಯಿಟ್ಟು ಮೆಲುದನಿಯಲ್ಲಿ 'ಸಾವೇರಿ,' ಎಂದು ಕಿವಿಯಲ್ಲಿ ಉಸುರಿದೆ. ದಿಗ್ಗನೆ ಆಕೆ ಗಾಬರಿಯಿಂದ ಎದ್ದು ಕುಳಿತಳು. ನಾನು ಅವಳ ಮಗ್ಗುಲಲ್ಲಿ ಕುಳಿತೆ. ನನ್ನ ಭುಜದಮೇಲೆ ಕತ್ತಿಟ್ಟು, ಎರಡೂ ತೋಳ್ಗಳಿಂದ ನನ್ನನ್ನಾಕೆ ಬಿಗಿದಪ್ಪಿದಳು. ಅವಳ ಕಪೋಲದ ಮೇಲೆ ಬೆರಳುಗಳನ್ನು ಆಡಿಸುತ್ತ ಕೇಳಿದೆ: "ಸಾವೇರಿ, ಈಗ ಮೈಯಲ್ಲಿ ನೆಟ್ಟಗಿದೆಯಷ್ಟೆ? ನನ್ನ ಮೇಲಿನ ಸಿಟ್ಟು ಹೋಯಿತೆ?" ಈ ಮಾತಿಗೆ ಉತ್ತರಕೊಡದೆ ಅವಳು ನನ್ನನ್ನು ಕೇಳಿದಳು:— "ನಿಮ್ಮ ಓದು-ಬರೆಹ ಈಗ ಸುಸೂತ್ರ ನಡೆದಿರಬಹುದು! ಎಷ್ಟು ಕವನಗಳನ್ನು ಕಟ್ಟಿದಿರಿ? ಎಷ್ಟು ಗ್ರಂಥಗಳನ್ನು ಬರೆದಿರಿ?"

"ಇಲ್ಲ, ಈಗ ಅದನ್ನೆಲ್ಲ ಬಿಟ್ಟಿದ್ದೇನೆ!"

"ಯಾಕೆ?

"ನೀನು ಇಲ್ಲಿಗೆ ಹೊರಟು ಬಂದಂದಿನಿಂದಲೂ ನನ್ನ ತಲೆಯೆಂಬುದು ಗಾಳಿಗೋಪುರವಾಗಿದೆ! ನನ್ನದಿರಲಿ, ನೀನೇನು ಈಗ ಚಿತ್ರಕಲೆಯ ಅಭ್ಯಾಸ ನಡೆಯಿಸಿದ್ದೀಯಾ?"

"ಹುಂ!"

"ಯಾರ ಚಿತ್ರ ಮೂಡಿಸಿರುವೆ?"

"ಬೇರೆ ಯಾರದು? ನಿಮ್ಮದೇ!"

"ನೋಡೋಣ, ಹೇಗಿದೆ?"

"ಈಗದು ಕಾಣುವುದಿಲ್ಲ, ನಿಮ್ಮ ಕಣ್ಣಿಗದು ಬೀಳಬೇಕಾದರೆ ಇನ್ನೂ ಆರು ತಿಂಗಳು ಬೇಕು!"

"ಅಬ್ಬಾ, ಒಂದು ಚಿತ್ರಕ್ಕೆ ಇಷ್ಟು ದಿವಸ? ನಾನು ಒಂದು ನಿಮಿಷದಲ್ಲಿಯೆ ಒಂದು ಚಿತ್ರ ತೆಗೆಯಬಹುದು!"

"ಪುರುಷರದಷ್ಟೆ!" ಎಂದು ಗಟ್ಟಿಯಾಗಿ ನನ್ನ ಭುಜವನ್ನು ಕಚ್ಚಿ "ಇನ್ನೂ ನಿನಗೆ ಅರ್ಥವಾಗಲಿಲ್ಲವೆ?" ಎಂದಳು.

"ಆಯಿತಪ್ಪೋ ಆಯಿತು! ನಿಜವಾಗಿ ಈ ಕಲೆಯಂತಹ ಇನ್ನೊಂದು ಕಲೆಯಿಲ್ಲ, ಹೆಂಗುಸರು ಅವಶ್ಯವಾಗಿ ಸಾಧಿಸತಕ್ಕದ್ದು!" ಎಂದೆ.

....ಮುಂದೆ ಆರು ತಿಂಗಳಲ್ಲಿಯೆ ಜಂದೂನ ಜನನವಾಯಿತು. ಸಾವೇರಿಗೆ ಈಗ ಜಂದೂನೆ ಕಾವ್ಯ, ಜಂದೂನೇ ನಾಟಕ! ಅವನೇ ಸಂಗೀತ, ಅವನೇ ನೃತ್ಯ! ಈ ತನ್ನ ಪಿಂಡದಲ್ಲಿ ಇಡಿ ಬ್ರಹ್ಮಾಂಡವನ್ನೇ ಅವಳು ಕಾಣುತ್ತಿದ್ದಾಳೆ. ಅದಕ್ಕೇ ನಾನು ನಿನಗೆ ಹೇಳಿದ್ದು— 'ಎರಡನೆಯ ಸಂಬಂಧವಲ್ಲ, ಆದರೆ ಹೆಂಡತಿ ಬೇರೆ' ಎಂದು. ಈಗ ಅವಳಲ್ಲಿ ಆಮೂಲಾಗ್ರ ಬದಲಾವಣೆಯಾಗಿದೆ; ಇಷ್ಟೇ ಅಲ್ಲ, ನನ್ನಲ್ಲಿಯೂ ಆಗಿದೆ. ಅದು ನೋಡಿದೆಯಾ— ಹೇಗೆ ಅವಳು ತನ್ನನ್ನೇ ತಾನು ಮರೆತುಬಿಟ್ಟಿದ್ದಾಳೆ. ಕರಿಯುತ್ತೀನೆ, ತಾಳು!" ಎಂದು ದೇವದತ್ತರು ಹೆಂಡತಿಯನ್ನು ಹೆಸರುಗೊಂಡು ಕರೆದರು. ಸಾವೇರಿಬಾಯಿ ಜಂದೂನನ್ನು ಕುರಿಮರಿಮಾಡಿಕೊಂಡು 'ಕುರಿಮರಿ ಬೇಕೇನು, ಕುರಿಮರಿ ಬೇಕೇನು,' ಎಂದು ಕೂಗುತ್ತಾ ಒಳಗೆ ಬಂದರು.

ಇಬ್ಬರೂ ಎದ್ದು ನಿಂತರು.

"ನನ್ನ ಬಾಲ್ಯಸ್ನೇಹಿತರ ಪರಿಚಯ ಮಾಡಿಕೊಡುತ್ತೀನೆ: ಇವರು ದಿರೇಂದ್ರರು; ಕಾನಪುರದಲ್ಲಿ ದೊಡ್ಡ ಕೆಲಸದಲ್ಲಿದ್ದಾರೆ. ಹದಿನೈದು ವರ್ಷಗಳ ಮೇಲೆ ಈಗ ಇವರ ಭೆಟ್ಟಿ!" ಎಂದು ದೇವದತ್ತರು ಜಂದೂನನ್ನು ಎತ್ತಿಕೊಂಡು ಧೀರೇಂದ್ರರ ಕೈಯಲ್ಲಿ ಕೊಟ್ಟರು.

"ಇದೇನಿದು, One Sided introduction?" ಸಾವೇರಿಬಾಯಿ ಎಂದರು.

"ಇಲ್ಲ, ತಮ್ಮ ವಿಷಯವನ್ನೇ ಇದುವರೆಗೆ ಒಂದು "ಕಥೆಯಾಗಿ ಹೇಳಿದರು!" ದೀರೇಂದ್ರ ಹೇಳಿದ.

ಸಾವೇರಿಬಾಯಿ ಕಣ್ಣರಳಿಸಿ, ಸಿಟ್ಟುಬಂದವರಂತೆ ತೋರಿಸಿ, ಆದರೂ ನಗುತ್ತ ನುಡಿದರು— "ಸರಿಹೋಯಿತು. ಈ ಕಥೆಗಾರರಿಗೆ, ಕವಿಗಳಿಗೆ ತಮ್ಮ ಹೆಂಡತಿ ಕೂಡ ಒಂದು ಕಥಾವಸ್ತುವೇ— ಕಾವ್ಯವಸ್ತುವೆ!"

ಅದೇಹೊತ್ತಿಗೆ ಉಪಾಹಾರದ ಗಂಟೆ ಆಯಿತು; ಎಲ್ಲರೂ ನಗುತ್ತ ಚಹದ ಕೋಣೆಯತ್ತ ನಡೆದರು.

ಬುದ್ಧಿಯ ಸ್ವರೂಪ ಮತ್ತು ಕಾರ್ಯ

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

(ಕಳೆದ ಸಂಚಿಕೆಯಿಂದ ಮುಂಬರಿದುದು.)

ನಮಗಿಂತ ಮಿಗಿಲಾದ ಸಮರ್ಪಕತೆ-ಸರಲತೆಗಳುಳ್ಳ ಮೂಲಪ್ರವೃತ್ತಿಗಳ ಬಾಳನ್ನು, ಹಿಂದೆಯೆ ನಾವು ನಮ್ಮ ಬಿಟ್ಟಬೇಟೆಯ ಜೊತೆಗಾರರಾದ ಪಶುಗಳ ಪಾಲಿಗೆ ಬಿಟ್ಟು ಬಂದಿಲ್ಲವೆ? ಹಾಗೆಯೆ ಇಂದು ಅಂತಃಪ್ರೇರಣೆಯನ್ನೂ ಅಂತಃಪುರದೊಳಗಿನ ಸಾಧಕರಿಗಾಗಿ ಇಟ್ಟುಬಿಡೋಣ! ನನಗೆ ತಿಳಿವಳಿಕೆಯ ತ್ರಾಣ ಮಾತ್ರ ಇದ್ದರೆ ಸಾಕು!

★

ಬುದ್ಧಿಯ ವೈಗುಣ್ಯಗಳು

ಬುದ್ಧಿಯ ಗುಣಗಳನ್ನು ಈ ಮೊದಲು ವಿವರಿಸಿ ಆಯಿತು. ಈಗ ಅದರ ದೋಷಗಳ ವಿವೇಚನೆಯ ಕಡೆಗೆ ಹೊರಳೋಣ. ದೋಷವು ಗುಣದ ನೆರಳು. ಈ ಸಂಗತಿ ಮೂಲಪ್ರವೃತ್ತಿಗಳನ್ನು ಕುರಿತು ಬರೆಯುವಾಗಲೆ ಸ್ಪಷ್ಟವಾಗಿದೆ. ಬುದ್ಧಿಯ ವಿಷಯವೂ ಹಾಗೆಯೆ ಸರಿ! ಬುದ್ಧಿಯ ವೈಶಿಷ್ಟ್ಯದ ಕಾರಣವೇ ಅದರ ವೈಗುಣ್ಯಕ್ಕೂ ಮುಳುವಾಗಿದೆ. ಅದರ ಯೋಗ್ಯತೆಯ ನಿಮಿತ್ತವೇ ನ್ಯೂನತೆಗೆ ನೆಪವಾಗಿದೆ. **ಬುದ್ಧಿಯ ವೈಗುಣ್ಯವೂ ಮಾನ್ಯತೆಯೂ ಅದರ ವಿಳಂಬದಲ್ಲಿದೆ.** ಪ್ರತಿಕ್ರಿಯೆಯು ಪರಿಪೂರ್ಣತೆಗೆ ಕಾರಣವಾಗುವ ವಿಳಂಬವು ಅದರ ದುರ್ಬಲತೆಯಾಗಿ ಪರಿಣಮಿಸುತ್ತದೆ. ಎಷ್ಟೋ ವಿಕಾಸಗೊಳ್ಳಲಿರುವ ವಿಚಕ್ಷಣ ತತ್ತ್ವಜ್ಞಾನಗಳು ಎದುರಿಗೆ ಬಂದ ಸನ್ನಿವೇಶವನ್ನು ಸಮಾಧಾನಕರವಾಗಿ ವಿಂಗಡಿಸಿ ವಿವೇಚಿಸಿ ನೋಡುವುದಕ್ಕೆ ಮುಂಚೆಯೆ, ಅದರ ವಿಳಂಬಿತ ಲಯದ ಆವಿವೇಕಕ್ಕೆ ಎಡೆಗೊಡದೆ, ಆ ಸನ್ನಿವೇಶವೇ ಅದರ ವಿನಾಶದ ಸಮಾಧಿಯಾದದ್ದುಂಟು. ಹಲವೊಮ್ಮೆ ಜೀವನ-ಕಲಹದ ಒತ್ತಡ-ಒತ್ತರಗಳಲ್ಲಿ ನಿಧಾನಿಸಲೆಂದು ನಿಲ್ಲುವವನು ನೋಡುವ ಮುನ್ನವೇ ನಷ್ಟವಾಗುವುದುಂಟು. ಅನುಭವದಿಂದ ಜ್ಞಾನ ಬರುವನಕ ಅನುಭವಿಸ ಬಲ್ಲ ಜ್ಞಾನಿಯ ಅವಸಾನವಾಗುವುದುಂಟು. ಇಂದಿನ ವೈಯಕ್ತಿಕ ಜೀವನದ ಅವ್ಯವಸ್ಥೆ, ಸಾಮಾಜಿಕ ಜೀವನದ ಅನವಸ್ಥೆಗಳ ಜಟಿಲ ಕುಟಿಲ ಪರಿಸ್ಥಿತಿಯಲ್ಲ, ಇಂತಹ ಕಟುಸತ್ಯವನ್ನು ಎದುರಿಸುವ ಯೋಗಾಯೋಗಗಳು ಹೆಚ್ಚಾಗಿ, ಹತಾಶವಾದ ಹೃದಯವು ಬುದ್ಧಿಯಲ್ಲಿಯ ನಂಬಿಗೆ ಕಳೆದುಕೊಂಡು, ಅಂತಃಪ್ರೇರಣೆಯ ವಾದವನ್ನು ಪ್ರತಿಪಾದಿಸತೊಡಗುವುದು ಸಹಜವಲ್ಲವೇ? ಮೊದಲು ನಿರ್ಣಯ, ಆ ಮೇಲೆ ಅದರ ಕುರಿತು ನಿವೇದನ; ಮೊದಲು ವರ್ತನ, ಆಮೇಲೆ ಅದರ ವ್ಯಾಖ್ಯೆ-ವಿವರಣೆ—ಈ ಬಗೆಯಾಗಿ ಅಂತಃಪ್ರೇರಣಾವಾದವು ಸಾಗುವುದು.

ಇದಲ್ಲದೆ ಇನ್ನೊಂದು ದೋಷವೂ ಬುದ್ಧಿಯಲ್ಲಿ ಸೇರುವುದು ಸಂಭವವಿದೆ. ಬುದ್ಧಿಯು ಇಂದ್ರಿಯಗಳ ಜ್ಞಾನದ ಶಾರೀರಿಕ ವೇದನೆಗಳ ಸಂಬಂಧವನ್ನು ನಿಷ್ಠೆಯಿಂದ ಕಾಯ್ದುಕೊಳ್ಳಬೇಕು. ಇದು ತಪ್ಪಿದರೆ, ಉದಾಹರಣೆಗಿಂತ ಊಹೆಯನ್ನೂ, ಪ್ರತ್ಯಕ್ಷ ಪ್ರಾಯೋಗಿಕ ಪ್ರಮಾಣಗಳಿಗಿಂತ ಪ್ರತಿಭೆಯ ಸೂಕ್ಷ್ಮ ವಿಲಾಸನನ್ನೂ ಅವಲಂಬಿಸಿ, ತಾತ್ತ್ವಿಕ ತಾರ್ಕಿಕತೆಯ ಜರ್ಜಿತ ಪರ್ವಣಗಳಲ್ಲಿ ಹಾದಿತಪ್ಪಿ ಪದಗೆಟ್ಟರೆ, ಯಾವುದೇ ಬಲಿಷ್ಠವಾದ ಕಾಮನೆಯನ್ನು ಸಮರ್ಥಿಸುವ ಮೋಹಮಯ—ಮನೋಹರವಾದ ವಾದಪಟುತ್ವವಾಗಿ ಮಾರ್ಪಡುವುದು; ಇಚ್ಛೆಯನ್ನು ಸಮಂಜಸಗೊಳಿಸುವ ಸಯುಕ್ತಿಕವೆನಿಸುವ ಒಂದು ತಂತ್ರವಾಗುವುದು. **ಸಾಮಾನ್ಯವಾಗಿ, ಕಾರಣಗಳಿವೆಯೆಂದು ನಾವು ಕೆಲವೊಂದು ಕೃತ್ಯವನ್ನು ಮಾಡುವುದಿಲ್ಲ; ತಿರುಗಿ ಒಂದು ಕೃತ್ಯವನ್ನು ಮಾಡುವ ಬಯಕೆಯಿದ್ದ ಮೂಲಕ ಅದಕ್ಕಾಗಿ ಕೆಲವೊಂದು ಕಾರಣಗಳನ್ನು ಕಾಣಿಸುವೆವು, ಕಂಡುಹಿಡಿಯುವೆವು.** ನಮ್ಮ ಆಪೇಕ್ಷೆ-ಆಸಕ್ತಿಗಳೊಳಗಿಂದ,ಹೇತು-ಹಿತಸಂಬಂಧಗಳೊಳಗಿಂದ ತತ್ತ್ವಜ್ಞಾನವನ್ನು ರಚಿಸಿ ತೋರಿಸುವುದು ಜಗತ್ತಿನಲ್ಲಿಯ ತೀರ ಸರಲ ಸಂಗತಿಗಳಲ್ಲಿ ಒಂದು. ಆದುದರಿಂದ **ನಮಗೆ ಅತ್ಯಂತ ಸೊಗಸೆನಿಸುವ ಯಾವುದೇ ತತ್ತ್ವವಿಚಾರದ ಕುರಿತು ಯಾವಾಗಲೂ ಅತ್ಯಂತ ಸಾಶಂಕರಾಗಿರಬೇಕು.** ಇಂದಿಗೆ ನಮಗೆ ಬೇಕಾದುದು, ನಂಬಿಗೆಯಿಡುವ ನೋಟವಲ್ಲ, ಕಂಡುಹಿಡಿಯುವ ಕಣ್ಣು; ಶ್ರದ್ಧೆಯಿಡುವ ಇಚ್ಛೆಯಲ್ಲ, ಶೋಧಮಾಡುವ ಏಷಣೆ.

ವಿಚಾರವೃತ್ತಿಯು ಎಂದರೆ ಬುದ್ಧಿವಾದವು, ಸಂಶಯಾತ್ಮತೆಗೆ—ನಿರ್ಣಯವನ್ನು ಮುಂದೆ ದೂಡುವ ತಟಸ್ಥತೆಗೆ—ಹೆಚ್ಚೇಕೆ, ವ್ಯರ್ಥ ಕಾಲಹರಣಕ್ಕೆ—ಇಲ್ಲವೆ ಅಪಯಶಸ್ಸಿಗೆ ಕೂಡ ಒಯ್ಯು-

ಬಹುದು. ಏಕೆಂದರೆ ವಿಚಾರದ ಈ ವಿಚಕ್ಷಣತೆಯಲ್ಲಿ ಯಾವುದಾದರೊಂದು ಪ್ರಶ್ನೆಗೆ ಸಾಧಕವಾಗುವಷ್ಟೇ ಮಹತ್ತ್ವದ ಬಾಧಕವಾದ ಪ್ರಮಾಣಗಳೂ ನಮಗೆ ಕಂಡುಬರುತ್ತವೆ. ಪ್ರತಿಯೊಂದು ಯುಕ್ತಿವಾದವೂ ತನಗೆ ತೀರ ವಿರುದ್ಧವಾದ ಪ್ರತಿವಾದವನ್ನು ಉಂಟುಮಾಡುವುದು, ನಿಸರ್ಗದ ಮೂರನೆಯ ನಿಯಮದಷ್ಟೇ ನಿಶ್ಚಿತವಾದ ಘಟನೆಯಾಗಿದೆ. ಈ ವಾದ-ಪ್ರತಿವಾದಗಳ ಸಾಧಕ-ಬಾಧಕತೆಯ ಕೊನೆಯ ನಿರ್ಣಯ ಮಾಡುವುದು, ಎರಡು ಹುಲ್ಲುಹೊರೆಗಳ ನಡುವೆ ನಿಂತು ಯಾವುದನ್ನು ತಿನ್ನುವುದೆಂಬ ಯೋಚನೆಯಲ್ಲಿ ತೊಳಲಾಡುವ ಹೋರಿಯ ಒಗಟಿನಷ್ಟೇ ಬಿಗುಹಾಗಿಬಿಡುತ್ತದೆ!

ಬುದ್ಧಿಯು ಬೇಡವೇ?

ಇದೆಲ್ಲ ನಿಜ. ಬುದ್ಧಿಯು ಒಂದು ಅಪೂರ್ಣವಾದ ಆಯುಧವಾಗಿದೆ. ಆದರೆ ಯಾವುದು ಅಪೂರ್ಣವಲ್ಲ? ಬುದ್ಧಿಯು ಯಾವುದೇ ನಿಶ್ಚಿತ ಶಾಸ್ತ್ರದ ಪದ್ಧತಿಯಷ್ಟೇ ಅಪೂರ್ಣವಾಗಿದೆ. ನಮ್ಮ ಕಣ್ಣು ಅಪೂರ್ಣವಾದ ಉಪಕರಣ. ಆದರೆ ಅದರ ಉಪಯುಕ್ತತೆಯು ಕಡಿಮೆಯೇ? ನಿಸರ್ಗವೂ ನಿಯತಿಯೂ ನಿಶ್ಚಿತಗೊಳಿಸಿದ ಪರಿಮಿತಗಳಲ್ಲಿ, ನಮ್ಮ ಅಪೂರ್ಣ—ಅಸಮರ್ಥ ಇಂದ್ರಿಯಗಳಿಂದ ಆದಷ್ಟು ಚೆನ್ನಾಗಿ ಲಾಭಪಡೆಯುವುದಿಲ್ಲವೇ? ಬುದ್ಧಿಯನ್ನು ಕುರಿತು ನಮ್ಮ ದೃಷ್ಟಿಯೂ ಹಾಗೆಯೇ ಸರಿ! ಕೆಲವೊಂದು ಸಂಗತಿಗಳನ್ನು ಬುದ್ಧಿಗಿಂತ ಪ್ರವೃತ್ತಿಬಲದಿಂದ ಹೆಚ್ಚು ಸುಸೂತ್ರವಾಗಿ— ಸುಪರಿಣಾಮವಾಗಿ— ನೆರವೇರಿಸಲು ಬರುವುದೆಂಬುದನ್ನು ನಾವು ಅಲ್ಲಗಳೆಯುವುದಿಲ್ಲ. ಹಾಗೆ ನೆರವೇರಿಸುವುದು ಜಾಣತನದ್ದಿರಲೂ ಬಹುದು. ಶಕುಂತಲೆಯು ಕಣ್ಣೆದುರು ನಿಂತಾಗ, ದುಷ್ಯಂತನಂತೆ ತತ್ತ್ವಾನ್ವೇಷಿಯಾಗಿ ಪತಿಭಾಗಿಯೆನಿಸಿಕೊಳ್ಳುವದಕ್ಕಿಂತ ಭ್ರಮರನಂತೆ ದುಡುಕಿ ಸುಕೃತಿಯೆನಿಸುವುದೇ ಕೆಲವೊಮ್ಮೆ ಸಮಂಜಸವಾಗಿರಬಹುದು. ಜೀವನಕಲಹದ ಕರ್ಕಶ ಕೋಲಾಹಲವನ್ನು ಇತ್ಯರ್ಥಮಾಡುವ ಕುಶಾಗ್ರತೆಗಿಂತ, ಜೀವನಕಾವ್ಯದ ಕೋಕಿಲ ಕೂಜನದ ಇಂಪು ಸವಿಯುವ ಏಕಾಗ್ರತೆಯು ಒಮ್ಮೊಮ್ಮೆ ಹೆಚ್ಚು ಇಷ್ಟವೆನಿಸಬಹುದು. ಚೆಲುವಿಗೆ ಒಲಿದು ಒಲಿಸಿ ಸುಖಿಯಾಗುವುದೂ ಒಲ್ಲೆ ಕಳಕೊಂಡು ದುಃಖಿಯಾಗುವುದೂ ಕೂಡ, ಚೆನ್ನಾಗಿ ವಿಚಾರಮಾಡಿ ಗಂಭೀರವಾಗಿರುವದಕ್ಕಿಂತ ಶ್ರೇಯಸ್ಕರವೆನಿಸುವುದು. ಆದರೆ ಇದು ಏಕೆ ಶ್ರೇಯಸ್ಕರ? ಏಕೆ ಇಷ್ಟ? ಏಕೆ ಸಮಂಜಸ? ಪ್ರವೃತ್ತಿಗಳೇ ಹೆಚ್ಚು ಪ್ರತಿಷ್ಠಿತವೆಂತಲೋ? ಅಂತಃಪ್ರೇರಣೆಯೇ ಹೆಚ್ಚು ಪ್ರಶಸ್ತವೆಂತಲೋ? ಛೇ, ಅಲ್ಲವೇ ಅಲ್ಲ! ಏಕೆಂದರೆ ಅನುಭವವು—ಅಹುದು ಕೊನೆಯದಾಗಿ ನಮ್ಮ ಪ್ರತ್ಯಕ್ಷ ವೇದನೆಗಳಿಂದ ಕೂಡಿ ಕಟ್ಟಿದ ಅನುಭವವು—ನಮಗೆ ಒಂದು ಪಾಠ ಕಲಿಸಿದೆ. ಅದೇನೆಂದರೆ: **ಆಲೋಚನೆಯ ಇಡೀ ವರ್ಷಕ್ಕಿಂತ ಆನಂದದ ಅರೆನಿಮಿಷದ ಬೆಲೆಯು ಎಂದೆಂದಿಗೂ ಖಂಡಿತವಾಗಿದೆ! ಬಾಳಿನ ತತ್ತ್ವಭಾಷ್ಯದ ಭಾವುಕತೆಯಾಗಿ ಮೈದಳೆಯುವುದಕ್ಕಿಂತ ರಸಾನುಭೂತಿಯು ಭವಭೂತಿಯಾಗಿ ಮೈದಳೆಯುವುದು ಹೆಚ್ಚು ಸಾರ್ಥಕವಾಗಿದೆ!**

ಹಾಗಿದ್ದರೆ ಬುದ್ಧಿಯನ್ನಾದರೂ ಏಕೆ ಬಳಸುವಿರಿ? ವಿಚಾರವನ್ನಾದರೂ ಏಕೆ ಮಾಡುವಿರಿ? ಪ್ರಶ್ನೆಯು ಸರಿ. ಅದಕ್ಕೆ ಉತ್ತರವಿಷ್ಟೇ: ನಾವು ವಿಚಾರಿಗಳಾಗಿ ವರ್ತಿಸುವುದು ವಿಚಾರವನ್ನು ಬಯಸುವೆವೆಂತಲ್ಲ; ವಿಚಾರವನ್ನು ಬಳಸಲೇ ಬೇಕಾಗುವುದೆಂದು; ವಿಚಾರವಿಲ್ಲದೆ ಬದುಕಲು ಬರುವುದಿಲ್ಲವೆಂದು! ನಮ್ಮ ಆಧುನಿಕ ಜಗತ್ತು ಅಷ್ಟು ತರಲವಾಗಿ ಅಷ್ಟು ಪ್ರವಾಹಿಯಾಗಿ ಅಷ್ಟು ಏರು-ಜಾರುಗಳಿಂದ ತುಂಬಿದೆ. ಸ್ಥಿರವಾದರಿಯ ಪ್ರತಿಕ್ರಿಯೆಗಳಿಂದ ಮುಂದಾಗಿ ಎದೆಗೊಡುವಷ್ಟು ಬಾಳು ನೇರವಾಗಿಲ್ಲ, ನಿಡಿದಾಗಿಲ್ಲ, ನುಣ್ಣಗೂ ಇಲ್ಲ. ಬಾಳುವ ಎಲ್ಲ ಬಗೆ-ಬದಿಗಳಲ್ಲಿಯೂ ಪರಿಸ್ಥಿತಿ ಇಷ್ಟು ಕಠೋರ—ಕರ್ಕಶವಾಗಿಯಿದೆಯೆಂತಲ್ಲ. ಈಗಲೂ ಬಾಳಿನಲ್ಲಿ ಕೆಲವು ಪುರಾತನ ಪರಂಪರಾಗತ ದಾರಿಗಳು ಇರಬಹುದು. ಅಂತಹ ದಾರಿಗಳಲ್ಲಿ ಪ್ರವೃತ್ತಿಗಳ ಕೈಬೆಳಕೂ ಅನುವಂಶಿಕ ಪ್ರತಿಕ್ರಿಯೆಗಳ ಕೈಪಿಡಿಯೂ ಸಾಕಾಗಬಹುದು. ತಾಯಿತನ, ಬೇಸಾಯ, ಮನೆತನ— ಈ ಮೂರು ಜೀವನಕ್ಷೇತ್ರಗಳಲ್ಲಿ ಮೂಲಪ್ರವೃತ್ತಿಗಳ ಪ್ರೇರಣೆಯಿಂದ ಸಾಗಬಹುದು; ಆದರೂ ಇಲ್ಲಿಯೂ ಕೂಡ, ಆಧುನಿಕ ಜಗತ್ತಿನ ಕೈಗಳು ಚಾಚಿವೆ, ಮತ್ತು ಬುದ್ಧಿಯ ಹಿಡಿತದಲ್ಲಿ ಬಾಳನ್ನು ಕೊಡಿರೆಂದು ಬೆದರಿಕೆಯ ಬೆರಳಿಟ್ಟು ಸೂಚಿಸುತ್ತಲಿವೆ. ಸಂತತನಿಯಮನದ ಮಂತ್ರ-ತಂತ್ರಗಳ ರೂಪದಲ್ಲಿ ಬುದ್ಧಿಯ ನಿಯಂತ್ರಣವು ಪ್ರವೃತ್ತಿಜನ್ಯ ತಾಯಿತನವನ್ನು ಪರಿಮಿತಗೊಳಿಸುತ್ತದೆ. ಒಮ್ಮೆ, ಸ್ವತಂತ್ರವಾಗಿ ಸ್ವಾಯತ್ತವಾಗಿದ್ದ ಬೇಸಾಯದ ಹೊಲವು, ದಲಾಲ-ಸಾವುಕಾರರ ಸೇಟೆ-ಪೇಢಿಗಳ ಪ್ರಚಂಡ ಆರ್ಥಿಕವ್ಯವಸ್ಥೆಯ ವಿಷಚಕ್ರದಲ್ಲಿ ಸಿಲುಕಿ, ಬೇಸಾಯವು ಸಿಲುಬೆಯ ಮೇಲೆ ಹಾಕಿದಂತಾಗಿ, ವಿಚಾರಪೂರ್ವಕತೆಯ ಅವಶ್ಯಕತೆಯನ್ನು ತರುತ್ತದೆ. ಮನೆತನದ ಗುಡಿಯಲ್ಲಿ ಪ್ರತಿಮೆಯಾಗಿ—ಮನೆಯವರ ಪ್ರಿಯತಮೆಯಾಗಿ— ಬಾಳಿಬೆಳೆವ ಹೆಂಗುಸು, ಕುಟುಂಬದ ನರಲಜೀವನದಿಂದ ಹೊರಹೊರಟು, ಉದ್ಯೋಗ-ವ್ಯವಸಾಯಗಳ ಕ್ಷುಬ್ಧ ಕಾರ್ಯಕ್ಷೇತ್ರದ ಸಂಭ್ರಮದ ಸುಳಿಯಲ್ಲಿ ಹೆಚ್ಚು ಹೆಚ್ಚು ಸೆಳೆಯಲ್ಪಟ್ಟು, ಕೌಟುಂಬಿಕತೆಯ ಸಮಸ್ಯೆಯು ಸಮಾಜಶಾಸ್ತ್ರದ ತಜ್ಞರ ಅಭ್ಯಾಸಕ್ಕೆ ವಿಷಯವಾಗುತ್ತದೆ. ಹೀಗೆ ಬುದ್ಧಿಯೋಗ, ಯುಕ್ತಿವಾದಗಳ ಆವಶ್ಯಕತೆಯು ಉತ್ತರೋತ್ತರ ಸರ್ವವ್ಯಾಪಿಯಾಗಿ ಸಾರ್ವಭೌಮವಾಗಿ ಬೆಳೆಯುತ್ತಲಿದೆ.

ಬುದ್ಧಿಯೋಗದ ಔಚಿತ್ಯ

ಇದು ಬರೇ ಕುರುಡು ಆವಶ್ಯಕತೆಯಷ್ಟೇ ಅಲ್ಲ; ಹುರುಳಿದ್ದ ಔಚಿತ್ಯವೂ ಇದರಲ್ಲಿದೆ. ಪ್ರತಿಯೊಂದು ಮೂಲಪ್ರವೃತ್ತಿಯು ತೀರ ಸ್ಥಿತಿಸ್ಥಾಪಕವಾಗಿರುತ್ತದೆ. ತನ್ನದೇ ಆದ ಅಟ್ಟಹಾಸವು ಸ್ವಾರ್ಥ ಪರವಶತೆಯು ಮೂಲಪ್ರವೃತ್ತಿಯಲ್ಲಿರುತ್ತದೆ. ಕೇವಲ ಅಂಧ ಅಹಂತೆಯಿಂದ ತನ್ನ ಪಾಲಿನ ತೃಪ್ತಿಯನ್ನಷ್ಟೇ ಅದು

ನೋಡಿಕೊಳ್ಳುತ್ತದೆ. ಆದಕ್ಕಾಗಿ ಮಿಕ್ಕ ಪ್ರವೃತ್ತಿಗಳಿಗೂ ಇಡಿ ವ್ಯಕ್ತಿತ್ವಕ್ಕೂ ಅದೆಷ್ಟೇ ಹಾನಿಯಾದರೂ ಲೆಕ್ಕಿಸುವುದಿಲ್ಲ. ನಮ್ಮ ಬಾಳಿನ ಬಿಡಿಯಾದ ಅಂಶಗಳಾಗಿದ್ದರೂ—ಸಿಂಹಾಸನಕ್ಕಾಗಿ ತನ್ನದೇ ಅಧಿಕಾರವನ್ನು ನಾಧಿಸುವ ಅರಸುಮಕ್ಕಳು ನುನೆಯನ್ನೇ ಮಲ್ಲಸಾಲೆಯಾಗಿ ಮಾಡುವಂತೆ—ಪ್ರತಿಯೊಂದು ಪ್ರವೃತ್ತಿಯೂ ವ್ಯಕ್ತಿತ್ವದ ವಿರುದ್ಧವೇ ವರ್ತಿಸಲು ಒತ್ತಾಯಪಡುತ್ತದೆ. ತಾತ್ಕಾಲಿಕ ಉತ್ಕಟತೆಯಿಂದ ಆವಶ್ಯಕತೆಯು ಯಾವ ನಿಯಮ-ನಿರ್ಬಂಧವನ್ನೂ ಗಮನಿಸುವುದಿಲ್ಲ, ಗಣಿಸುವುದಿಲ್ಲ. ಮನಸ್ಸಿನ ಇವೆಲ್ಲ ಅಂಶಗಳನ್ನು ಒಟ್ಟಾಗಿ, ಅಚ್ಚುಕಟ್ಟಾಗಿ ಅಯ್ದು ನೆಯ್ದರೆ ಮಾತ್ರ ನಾವು ಸ್ಪಷ್ಟತೆಯನ್ನೂ ಇಡಿಯ ನೋಟವನ್ನೂ ಮನಃಸ್ವಾಸ್ಥ್ಯವನ್ನೂ ಬುದ್ಧಿವಂತಿಕೆಯನ್ನೂ ಸಾಧಿಸಬಲ್ಲೆವು. ಬಾಳನ್ನು ಜೆಲುವುಗೊಳಿಸುವ ಜೆದುರನ್ನು ಕುದುರಿಸಬಲ್ಲೆವು. ಆದರೆ **ಮೂಲ-ಪ್ರವೃತ್ತಿಯ ನೋಟವು ತನ್ನದೇ ಆದ ಉತ್ಕಟತೆಯಿಂದ ಸಂಕುಚಿತವಾಗಿರುತ್ತದೆ.**

ನಾವು ಪ್ರವೃತ್ತಿಯ ಮೂಲಕ ಅವಸರದಿಂದ ಲಗ್ನವಾಗುತ್ತೇವೆ; ಆದರೆ ಬುದ್ಧಿಪೂರ್ವಕವಾಗಿ, ಸಾವಕಾಶ ಘಟನೋಟದ ಸಿದ್ಧತೆಗೆ ತಾಗುತ್ತೇವೆ. ಕೇವಲ ಪ್ರವೃತ್ತಿಯ ಕೈಯಲ್ಲಿಯೆ ಬಾಳನ್ನು ಒಪ್ಪಿಸಿದರೆ, ಪ್ರತಿಯೊರ್ವ ಗಂಡನೂ ವ್ಯಭಿಚಾರಿಯಾದಾನು, ಪ್ರತಿಯೊರ್ವ ತಾಯಿಯೂ ಬರಿ ತಾಯಿಯೇ ಆಗಿ ಉಳಿದಾಳು; ಬುದ್ಧಿ ಶೋಧಗಳು ಎಷ್ಟು ವೇಗದಿಂದ ವಿಪುಲ ಆಹಾರ-ವಿಹಾರದ ಸರಕುಗಳನ್ನು ಉಂಟುಮಾಡಿ ಪೂರಯಿಸುವುನೋ, ಅಷ್ಟೇ ವೇಗದಿಂದ ಉಣ್ಣುವ-ತಿನ್ನುವ ಬಾಯಿಗಳೂ ಬೇಡುವ ಕೈಗಳೂ ಬಹಳವಾದಾವು. ಹೀಗೆ ಆಯುಷ್ಯದ ಹಗಲಿರುಳುಗಳನ್ನು, ಆಹಾರ ನಿದ್ರೆಯಿಂದ ಉಳಿದ ಕಾಲ ಭಯ-ಮೈಥುನಗಳಲ್ಲಿ ಹಂಚಿಹಾಕಿ ಬಾಳುವ ಮನುಷ್ಯನ ಕೊನೆಯ ಆವಸ್ಥೆಯು ಮೊತ್ತದ ಆವಸ್ಥೆಯಷ್ಟೇ ಕೇಳಾಗಿ ಕೇಡಾಗಿ ಉಳಿಯಬಹುದು. ಮೂಲಪ್ರವೃತ್ತಿಯಿಂದ, ಹಸಿದ ಮನುಷ್ಯನು ಅನ್ನವನ್ನು ನೋಡುತ್ತಾನೆ. ನೋಡಿದೊಡನೆ ಮತ್ತೇನನ್ನೂ ನೋಡುವುದಿಲ್ಲ. ಹೊಟ್ಟೆ ಹಿಡಿಸದಷ್ಟು ತಿಂದು ತೇಗಿ ತೇಲ್ಗಣ್ಣು ಹಾಕುತ್ತ ದಕ್ಕಿಸಲಾರದೆ ಸಾಯುತ್ತಾನೆ. ಪ್ರವೃತ್ತಿಯಿಂದ ನಡೆದಾಡಲು ಕಲಿಯುವ ಶಿಶುವು ಉಪ್ಪರಿಗೆಯ ಮೇಲೆ ನಡಗರದಿದ ನಡೆದುಬಂದು, ನಿಚ್ಚಣಿಕೆಯ ಅಂಚಿನಲ್ಲಿ ನಿಶ್ಚಿಂತವಾಗಿ ಹೆಜ್ಜೆಯಿಟ್ಟು ಮುಂದುವರಿಯುತ್ತದೆ. ವ್ಯಾಣಿಸಂಗ್ರಹಾಲದಯಲ್ಲಿ ಕಾಡುಮಿಗಗಳನ್ನು ನೋಡಲು ಹೋಪಾಗ, ಪಂಜರದಲ್ಲಿ ಕೆರಳಿ ಕೂಗುವ ಹುಲಿಯ ಅಬ್ಬರವನ್ನು ಕೇಳಿ ನಾವು ವ್ಯರ್ಥವಾದ ಬೆದರಿಕೆಯಿಂದ ನಡುಗುತ್ತೇವೆ. ಇದೂ ಪ್ರವೃತ್ತಿಯಿಂದಲೆ. ಹಾಗೆಯೆ ಪ್ರವೃತ್ತಿಯಿಂದಲೆ ದಳ್ಳೆದೆಯ ಹೊಸ ಸಿಪಾಯಿಯು, ರಣಾಂಗಣದಲ್ಲಿ ನಿಕರದ ಹೋರಾಟದ ನಡುವೆ ಕೆಂಗಣ್ಣು-ಕೆಂಗೈಗಳ ಕಾಡುತನವು ಕುದುರಿ, ಹತಾಶಹಗೆತನದ ಕುದಿಯಿಂದ ಉರಿದೆದ್ದು, ಕುರುಡ ಕಬಂಧನಂತೆ ಕುಣಿದು, ಮೇದೋಮಾಂಸಗಳ ಕೆಸರಿನಲ್ಲಿ ಮುಡಿಯುತ್ತಾನೆ. ಆದರೆ ಆಗ ತಿಳಿವಳಿಕೆಯಿಂದ ನಡೆಯುವ ತಜ್ಞ ಸೇನಾಪತಿಯು, ಪೂರ್ವಯೋಜನೆಯಂತೆಯೆ ಶಿಸ್ತಿನಿಂದ ಹಿಂದೆ ಶಿಬಿರದಲ್ಲಿ ಸುರಕ್ಷಿತನಾಗಿ ಉಳಿದು, ತನ್ನ ವಿಜಯಯಾತ್ರೆಯ ವೀರಕಥೆಯನ್ನು ಬರೆದು, ರಾಜಧಾನಿಗೆ ಮರಳಿ ಬಂದು, ಗೌರವದ ಪದವಿ—ಪದಕಗಳನ್ನು ಪಡೆಯುತ್ತಾನೆ!

ಬುದ್ಧಿಯೇ ಶರಣು:

ಆದುದರಿಂದ, ಅಂತಃಪ್ರೇರಣೆಯನ್ನು ನೆಲೆಗೊಂಡು ನಿಲ್ಲುವ ಅನಿರ್ವಜನೀಯವೆಂದೆನಿಸಿಕೊಂಡರೂ ನಿಜವಾಗಿಯೂ ಅನುಮರ್ಥನೀಯವಾದ—ಅಸಿದ್ಧ ಅಸಂಬದ್ಧ ಅತಿಸಂದಿಗ್ಧವಾದ, ನಿಷ್ಠೆಯನ್ನೂ; ನಂತಯಿಸುವ ಪೋಷಮಯತೆಯೊಡನೆ ಎಂದಾದರೂ ದ್ರೋಹಬಗೆಯುವ ಘಾತುಕತೆಯೊಳಗೊಂಡಿರುವ ಶ್ರದ್ಧೆಯನ್ನೂ; ಮತಗಳಲ್ಲಿ ಹಟಸಾಧನ ಮಾಡುವ ತಾಳ್ಮೆಯುಳ್ಳ ಭಾವಿಕಜೀವಿಗಳ ಪಾಲಿಗೆ ಬಿಟ್ಟು ಬಿಡೋಣ. ನಮಗಿಂತ ಮಿಗಿಲಾದ ಸಮರ್ಪಕತೆ—ಸರಲತೆಗಳುಳ್ಳ ಮೂಲಪ್ರವೃತ್ತಿಗಳ ಬಾಳನ್ನು, ಹಿಂದೆ ನಮ್ಮ ಬಿಟ್ಟ—ಜೀವಿಯ ಜೊತೆಗಾರರಾದ ಪಶುಗಳ ಪಾಲಿಗೆ ಬಿಟ್ಟುಬಂದಿಲ್ಲವೇ? ಹಾಗೆಯೇ ಅಂತಃಪ್ರೇರಣೆಯನ್ನೂ ಅಂತಃಪುರದೊಳಗಿನ ಸಾಧಕರಿಗಾಗಿ ಇಟ್ಟು ಬಿಡೋಣ. ನಮ್ಮ ಪಾಲಿಗೆ ತಿಳಿವಳಿಕೆಯ ತ್ರಾಣವಿರಲಿ; ಬುದ್ಧಿಪೂರ್ವಕತೆಯ ಬಾಳಿರಲಿ! **ಮನುಷ್ಯರು ಪಶುಗಳಿಂದ ತೀರ ತುಸುವೇ ಅಂತರದಲ್ಲಿ ಬೇರೆಯಾಗಿರುತ್ತಾರೆ. ಆ ಅಷ್ಟು ತುಸು ಅಂತರವನ್ನೂ ಹಲವು ಮನುಷ್ಯರು ಬಿಸುಟುಬಿಡುತ್ತಾರೆ!** ಇದು ವಿಷಾದವಲ್ಲದಿದ್ದರೆ ವಿಸ್ಮಯವೆನಿಸುತ್ತಿತ್ತು!

ನಮ್ಮ ಕರ್ತವ್ಯವು ಸ್ಪಷ್ಟವೇ ಇದೆ. ನಮ್ಮ ಭವಿತವ್ಯವನ್ನು ವೇದನೆ—ವಿಚಾರಗಳ ಪಣಕ್ಕೆ ನಾವು ಒಡ್ಡಿದ್ದೇವೆ. ನಮ್ಮ ವಿಚಾರಗಳ ಒರೆಗಲ್ಲಾಗಿ ಬಾಳನ್ನೇ ಇಟ್ಟುಕೊಂಡು ಸಮಾಧಾನ ಪಡುತ್ತೇವೆ. ಶಕ್ಯವಿದ್ದರೆ ಅವೇ ವಿಚಾರಗಳ ಒಪ್ಪಹಾಕಿ, ಬಾಳಿನ ಒರೆಗಲ್ಲನ್ನೇ ಪೂನವರನ್ನೆಲ್ಲ ತನ್ನೆಡೆಗೆ ಸೆಳೆದು ಸಂಘಟಿಸುವ ಸೂಜಿಗಲ್ಲಾಗಿ ಮಾಡುವ— ಅಷ್ಟೇಏಕೆ?—ಸುತ್ತಲೆಲ್ಲ ಸುಖದ ಹೊನ್ನು ಸುರಿವ ಪರಸುಗಲ್ಲಾಗಿ ಮಾರ್ಪಡಿಸುವ ನಿರ್ಧಾರವನ್ನು ಬುದ್ಧಿಯ ಬಲದಿಂದ ಕಟ್ಟಿದ್ದೇವೆ.

ನಾವು ಹಲವು ತಪ್ಪುಗಳಲ್ಲಿ ಬೀಳಬಹುದು. ನಾವು ಹುಡುಕಿಕೊಂಡು ಹೊರಟ ಸುಖವು ಕೊನೆಗೆ ಕೈಗೆ ಎಟಕಲೇ ಬಹುದೆಂಬ ನಿಶ್ಚಿತ ವಿಶ್ವಾಸವೂ ನಮಗಿಲ್ಲ. ಆದರೂ ಉಪಾಯವಿಲ್ಲ. **ತಿಳಿವಳಿಕೆಯು ಹಿಗ್ಗು ಅಡಿಗಡಿಗೂ ನೋವಿನ ಹುಳಿಯಿಂದ ಸವಿಗೊಂಡ ಹಣ್ಣು.** ಜ್ಞಾನದ ಆನಂದದ ಹೂಗಂಪು, ದುಃಖದ ಜೀವಿನ ಕಪಿಯೊಂದಿಗೆ ಸೇರಿ ಬಂದ ಬುದ್ಧಿಯುಗದ ಹೊಸಯುಗಾದಿಯ ವರಪ್ರಸಾದವಾಗಿದೆ. ನಮ್ಮ ವಿಚಾರವು ವಿಕಾಸಗೊಂಡಂತೆ, ಪ್ರಜ್ಞೆಯು ಪ್ರಗತಿಗೊಂಡಂತೆ ನಾವು ಹಲವು ಹಟ-

(ಸುಳಿ ನೆಯ ಪುಟ ನೋಡಿರಿ)

ಸುಳ್ಳಿನಿಸದ ಸುಳ್ಳಿನ ಸಂತೆ

(ಲಘುಪ್ರಬಂಧ)

ಶ್ರೀ. " ಶ್ಯಾಮೂ " ಬಳ್ಳಾರಿ

ವ್ಯವಹಾರ ಜೀವನದಲ್ಲಿ ಸತ್ಯವು ಸತ್ಯವೆನಿಸದು. ಚಾತುರ್ಯದಿಂದ ಕೂಡಿದ ಸುಳ್ಳೇ ಸಂಪೂರ್ಣ ಸತ್ಯವಾಗಿ ನಿಲ್ಲುವುದು. ಅದು ಸುಳ್ಳೆಂಬುದು ಒಳಗೆ ತೋರಿದರೂ, ಒಡೆದು ಆಡುವ ಧೈರ್ಯ ಯಾರಿಗೂ ಇರದು!

★

" ಸಾವಿರ ಸುಳ್ಳು ಹೇಳಿದವನೇ ಸಂಸಾರ ಮಾಡ್ಯಾನು "

—ಅನುಭವವಚನ

ಸತ್ಯವನ್ನು ಹೇಳುವುದು ಪ್ರಪಂಚದಲ್ಲಿ ಉತ್ತಮವಾದ ದ್ದೆಂಬುದು ಸಕಲಸಮ್ಮತವಾದದ್ದು. ನೋಡಿದುದನ್ನೂ ಕೇಳಿದುದನ್ನೂ, ಇದ್ದುದನ್ನು ಇದ್ದಹಾಗೆ ಹೇಳುವುದು ಸತ್ಯವೆಂದು ನೀವು ನಂಬಿದ್ದರೆ, ಕೆಲವು ಸಮಯಗಳಲ್ಲಿ ಇಂತಹ ಸತ್ಯಕ್ಕೆ ತಲೆಹಾಕಲು ಅವಕಾಶವಿಲ್ಲ.

ಸುಳ್ಳು ೧: ಈಗ ಯಾವನಾದರೂ ಬಡವನು ಸಾಲಕ್ಕಾಗಿ ಒಂದಾಗ, ನೀವು ನಿಜ ಹೇಳುವುದಾದರೆ " ನೀನು ಅತಿ ಬಡವನು, ನಿನಗೆ ಸಾಲ ಕೊಟ್ಟರೆ ತೀರಿಸಲಾರೆ! ನನಗೆ ನಂಬಿಕೆಯಿಲ್ಲ ಹೋಗು! " ಎಂದು ಹೇಳಬೇಕು. ಆದರೆ ಹಾಗೆಂದಿಗೂ ಹೇಳದೆ " ಅಯ್ಯೋ! ನಿನ್ನೆ ಬಂದಿದ್ದರೆ ಎಷ್ಟು ಸಂತೋಷದಿಂದ ಕೊಡುತ್ತಿದ್ದೆ—ನಿನ್ನೆ, ನೂರುಸೇರು ಬಂಗಾರ ತೆಗೆದುಕೊಂಡೆ—ನೀನೇ ಬಂದಿದ್ದರೆ ಒಸ್ಟು ಹಣ ಬೇಕಾದರೂ ತೆಗೆದುಕೊಂಡು ಹೋಗಬಹುದಾಗಿತ್ತು. ಕೈಯಲ್ಲಿ ಇದ್ದದ್ದೆಲ್ಲಾ ಖರ್ಚಾಯಿತು—ಸಂತೆಗೆ ಒಂದು ಕಾಸುಕೂಡ ಇಲ್ಲ! "— ಎಂದು ಹೇಗಾದರೂ ಹೇಳಿ ಕಳಿಸಿಕೊಡುವಿರಿ. (ಹೇಗಿದೆ ನೋಡಿರಿ, ಅವನು ಬಂದದ್ದು ನಾಲ್ಕೈದು ರೂಪಾಯಿಗಳಿಗೆ; ಈತನು ಹೇಳಿದುದು ನಾಲ್ಕೈದು ನೂರು ರೂಪಾಯಿಗಳಿಗೆ ಲೆಕ್ಕ. ಕೊನೆಗೆ ಕೊಟ್ಟದ್ದೇನೋ ಚಿಂತಾಮಣಿಯ ಪಾತ್ರೆ!)

ಸುಳ್ಳು ೨: ಯಾರಾದರೂ ನಿಮಗೆ ತಿಳಿದವರು ಸಾಲಕೇಳಲು ಬಂದರೆ, ಅವರು ಒರುವ ಜೋರಿನಿಂದಲೇ ಇವರು ಸಾಲಕೇಳಲು ಬರುವರೆಂದು ತಿಳಿಯಬಹುದು. ಅವರು ಒಳಕ್ಕೆ ಬಂದಕೂಡಲೆ "ಓಹೋ ಹೋ, ಎಂತಹ ಸುದಿನ! ಈ ದಿನ ನಾನು ನಿಮ್ಮಲ್ಲಿಗೇ ಬರಬೇಕೆಂದು ಈಗಲೇ ಹೊರಡುತ್ತಿದ್ದೆ. ದೇವರು ನಿಮ್ಮನ್ನೇ ಇಲ್ಲಿಗೆ ಕರೆಯಿಸಿದ—ಇಂದೆಯೆ ದೇವರಿಗೆ ಒಂದು ಕಾಯಿಯನ್ನು ಒಡೆಯಿಸುವೆನು! ಇನ್ನೇನೂ ಇಲ್ಲ; ಇಂದು ಬಹಳ ತೊಂದರೆಯಾಗಿ ಹೋಗಿಬಿಟ್ಟಿದೆ; ಕೈಯಲ್ಲಿ ಒಂದು ಕಾಸು ಕೂಡ ಇಲ್ಲ; ಚಿಲ್ಲರೆ ಸಾಲ ಹೆಚ್ಚಾಗಿಬಿಟ್ಟಿದೆ; ಪಾಲು-ಪೊಸರಿನವರು ಈಸಲ ನನ್ನನ್ನು ಬಿಡುವಂತೆಯೆ ಇಲ್ಲ. ಹೇಗಾದರೂ ಮಾಡಿ ಒಂದು ಹತ್ತುರೂಪಾಯಿಗಳಿದ್ದರೆ ಕೊಡಬಾರದೆ?" ಎಂದರಾಯಿತು. ಆಗ ಸಾಲಕ್ಕೆ ಬಂದವರು " ಏನಯ್ಯಾ! ಒಳ್ಳೆ ಚೆನ್ನಾಯಿತು, ನಾನು ನಿನ್ನನ್ನು ಕೇಳಲು ಬಂದಿದ್ದರೆ ನೀನೇ ನನ್ನನ್ನು ಕೇಳಿಬಿಟ್ಟಿಯೆ! " ಎಂದು ಜಗಲು ಪ್ರಾರಂಭಮಾಡುವರು. ನೀವೂ ನಗಲು ಪ್ರಾರಂಭಿಸಿರಿ! (ಇಬ್ಬರೂ ನಗುವುದು ಒಂದೇ ಆದರೂ ಕಾರಣಗಳು ಬೇರೆ!) ಆ ಮೇಲೆ ಆ ಮಾತು ಈ ಮಾತು ಆಡುತ್ತಿದ್ದರೆ, ಬಂದವರು, ನಿರುಪಾಯರಾಗಿ ಹೊರಟು ಹೋಗುವರು.

ಸುಳ್ಳು ೩: ಇನ್ನೊಂದು ವಿಧದಿಂದ ಸಾಲ ಕೇಳುವರು ನಿಮ್ಮ ಸ್ನೇಹಿತರು. ಅವರು ಬಂದ ಕೂಡಲೆ " ಚೆನ್ನಾಗಿದ್ದೀರೋ? ನಿಮ್ಮ ಲೆಕ್ಕಾಚಾರ ಹೇಗಿದೆ? ಈ ವರ್ಷ ಪೂಲ-ಮನೆಗಳಿಂದ ಚೆನ್ನಾಗಿ ಹುಟ್ಟುವಳಿ ಬಂದಿರಬಹುದು! ನೀನು ಹಣ ಕೂಡಿಡಬೇಕು ನೋಡು, ಇಲ್ಲದಿದ್ದರೆ ಯಾರು ಕೇಳುವರು? ' **ಹಣವೇ ನಿನ್ನ ಗುಣ ಎನಿತು ಬಣ್ಣಿಪೆ ನಾ, ಹಣವಿಲ್ಲದವನೊಬ್ಬ ಪೆಣನೇ ಕಂಡ್ಯಾ?**'ಎಂದು ಪುರಂದರ ದಾಸರು ಹೇಳಲಿಲ್ಲವೇ! ಯಾಕೆ ಸುಮ್ಮನೇ ಕುಳಿತೆ?— ಎಷ್ಟು ಹಣ ಕೂಡಿಸಿಟ್ಟಿರುತ್ತೀಯೇ. ಹೇಳಬಾರದೇ?—ನಾನೇನು ಕಸಿದುಕೊಳ್ಳುವುದಿಲ್ಲ, ನಿನ್ನ ಹಣವು ಫೋಪಾಸ್ತ್ರೀಯರಂತೆ ಗುಪ್ತವಾಗಿದೆಯೆಂದು

ಕಾಣುತ್ತದೆ....” ಅವರು ಇಷ್ಟೆನ್ನುವುದರಲ್ಲಿಯೆ ನೀವು ಮುಂದೆ ಅವನಿಗೆ ಮಾತನಾಡಲು ಅವಕಾಶಕೊಡದೆ, ಅಭಿಪ್ರಾಯವನ್ನು ತಿಳಿದು, ಸುಳ್ಳುಗಳಿಗೆ ಮೊದಲಿಡಿರಿ: “ಏನು ಹೇಳಬೇಕೂ—ಅಂತ ಸುಮ್ಮನೆ ಕುಳಿತುಕೊಂಡೆ! ಏನು ಹೇಳಲಿ? ಚಿಲ್ಲರೆ ಸಾಲಗಳ ಕಾಟ ಹೆಚ್ಚಾಗಿ ಹೋಗಿದೆ. ಅಗಸರವನಿಗೆ ಐದಾರು ತಿಂಗಳಿಂದ ಕೊಡಲಿಲ್ಲ. ಹೋಟಲಿನವನ ಬಾಕೀ ಇನ್ನೂ ನಿಂತಿದೆ. ಅರಿವೆಗಳನ್ನುಹೊಲಿಸಬೇಕೆಂದು ಎರಡು-ಮೂರು ತಿಂಗಳುಗಳಿಂದ ಅನ್ನುತ್ತಾ ಇದ್ದೇನೆ....” ಇನ್ನೂ ಹಾಗೆ ಹೀಗೆ ಎಂದು ಹೇಳುತ್ತಾ, ಕೊನೆಗೆ “ನೀನು, ನಿಜ ಹೇಳಿದರೂ ನಂಬುತ್ತೀಯೆ, ಸುಳ್ಳುಹೇಳಿದರೂ ನಂಬುತ್ತೀಯೆ! ಈಗ ಎರಡಾಣೆ ಬೇಕೆಂದರೆ ಹತ್ತಿರ ಇಲ್ಲ—ಕ್ವಾರದವನಿಗೆ ಉದ್ದರಿ ಹೇಳಿಕಳುಹಿಸಿದೆ, ಬೇಕಾದರೆ ಕೇಳು!” ಎಂದು ಹೇಳಿದರೆ, ಬಂದವನು ಸುಮ್ಮಗೆ ಹೊರಟು ಹೋಗುವನು.

(ಮನುಷ್ಯನ ಸ್ವಭಾವವು, ತನ್ನಲ್ಲಿಲ್ಲದ ಹಣದ ಆಡಳಿತವು ಮತ್ತೊಬ್ಬರಿಗೆ ತಿಳಿಯಬಾರದೆಂಬುದು ಹೀಗಿರುವಲ್ಲಿ ಸಾಲಗಾರರು (ಅಂದರೆ ಸಾಲ ಕೇಳುವವರು) ಬಂದರೆ, ಇದ್ದದ್ದು ಇಲ್ಲದ್ದು ಸುಳ್ಳು ಹೇಳಿ, ಸಾಧ್ಯವಿಲ್ಲವೆಂದು ಕಳಿಸಕೂಡದೆ?)

ಸುಳ್ಳು ೪: ಈಗ ಎಷ್ಟೋ ವರುಷಗಳಿಂದಲೂ ಕಾಣದ ಒಬ್ಬ ಸ್ನೇಹಿತನು ನಿಮ್ಮ ಮನೆಗೆ ಬರುವನು—ನೀವು ಅತಿ ಆದರದಿಂದ ಕರೆದು—ಕುಳ್ಳಿರಿಸಿ— ಯಕೆಯಕಾಲದ ಸುದ್ದಿಗಳನ್ನು ಅಡುತ್ತಲಿದ್ದು ‘ನನ್ನ ಸ್ನೇಹಿತನಿಗೆ ಈ ದಿನ ಪಕ್ವಾನ್ನ ಮಾಡಿಸಬೇಕು’ ಎಂದು ಹೇಳುವಿರಿ; ಆಗ ಮನೆಯಲ್ಲಿ ಹೆಂಡತಿ ಸಿಟ್ಟಾಗುವಳು.

ಹೆಂದಿರಾದವರಲ್ಲಿ ಬಹುಜನರು ತಮ್ಮ ಹಟವೇ ಹಟವಾಗಿ, ತಮ್ಮ ಮಾತನ್ನೇ ನಡೆಯಿಸಿಕೊಳ್ಳುವರು. ಕೆಲವರಿಗೆ ಗಂಡನ ಮಾತಿಗೆ ಎದುರಾಡುವುದೇ ಆವರ ದೇವರಿಗೆ ಪ್ರೀತಿ. ಹಿತದವರು ಬಂದರೂ ಅವರಿಗೆ ರುಚಿಸದು; ಕೋಪಾಕಾರವಾಗಿ ನಿಂತು ಬಿಡುವರು.

ಈ ಗುಣಗಳಲ್ಲಿ ನಿಮ್ಮ ಹೆಂಡತಿ ಒಂದನ್ನು ವರಸಿದ್ದರೆ—ಮನಸಿನಲ್ಲಿದ್ದುದನೆಲ್ಲ ಹೊಡೆದುಹಾಕಿ, ಸ್ನೇಹಿತನನ್ನು ಹೇಗಾದರೂ ಮಾಡಿ ಹೊರಡಿಸಬೇಕೆಂದು ನಿಶ್ಚಯಿಸಬೇಕಾಗುತ್ತದೆ. ಆಗ ನೀವು ಮನೆಯಲ್ಲಿ ವಿಚಾರಿಸಿದೆ “ಏನಯ್ಯಾ, ಇಲ್ಲಿಯೆ ಕೊಂಚ ಕಾಫೀ ಕುಡಿದು ಬರುವ, ಬಾ!” ಎಂದು, ನೋಟಾರು ನಿಲ್ಲುವ ಸ್ಥಳದ ಹತ್ತಿರಹೋಟಲಿಗೆ ಕರೆದುಕೊಂಡು ಹೋಗಿ, ಅಲ್ಲಿಯೆ ಕಾಫೀ ಕುಡಿಯುತ್ತಾ “ನನ್ನ ಹೆಂಡತಿಗೆ ಈಗ ಐದಾರು ದಿನಗಳಿಂದ ಮೈಯಲ್ಲಿ ಚೆನ್ನಾಗಿಲ್ಲ, ನಿನ್ನೆ ಸ್ವಲ್ಪ ಜ್ವರ ಜಾಸ್ತಿ ಬಂದಿದ್ದಿತು. ಏನಾದರೂ ಆಳಲೇಭಕ್ತಿಯಿಂದ ಮನೆಯಲ್ಲಿಯೆ ಸತ್ಕಾರ ಮಾಡೋಣವೆಂದರೆ ಇಲ್ಲ!” (ಪ್ರಾರಂಭವಾಯಿತು ಸುಳ್ಳು ಹೇಳುವುದಕ್ಕೆ!) ಬಂದ ಸ್ನೇಹಿತನು ಇದನ್ನು ತಿಳಿದು “ಏನಾಯಿತು ಪ್ರಮಾದ! ಮತ್ತೊಂದಾವೃತ್ತಿ ಯಾವಾಗಲಾದರೂ ಬಂದೇ ಬರುತ್ತೇನೆ; ಅವಕ್ಕೇಕೆ ಯೋಜನೆ?”(ಹೊರಗೆ ಮೋಟಾರಿನ ಶಬ್ದವಾಯಿತು). “ಹೊರಟೇ ಬಿಟ್ಟೆಯೇನಯ್ಯಾ? ಎಪ್ಪಾದರೂ ತೊಂದರೆಯಾಗಲಿ, ಇಂದೊಂದು ದಿನವಾದರೂ ಇದ್ದುಹೋಗಬಾರದೆ? ಎಷ್ಟೊ ದಿನಗಳಾದುವು ನಾವು ಕಲೆಯದೆ!” ಎಂದರೆ ಆಯಿತು. ಬಂದವನ ಮನಸ್ಸಿನಲ್ಲಿ ಅಂದೊಂದು ದಿನ ಇದ್ದು ಹೋಗಬೇಕೆಂದು ಇರುತ್ತದೆ. ನಿಮ್ಮ ಸಿಗ್ನಲ್ ಬಿದ್ದ ಮೇಲೆ “ಮತ್ತೆ ಯಾವಾಗಲಾದರೂ ಬರುತ್ತೇನೆ; ಆಗಿಂದಾಗ ಪತ್ರಾ ಮಾತ್ರ ಹಾಕುತ್ತಾ ಇರಬೇಕು—ಮರೆಯಬಾರದು!” ಎಂದು ಹೇಳುತ್ತಾ ಹೊರಟೇ ಹೋಗುವನು.

ಏನೋ ಬುದ್ಧಿ ಹುಟ್ಟಿ “ನಮ್ಮವರ ಸ್ನೇಹಿತ ಬಂದಿದ್ದಾನೆ; ಅವನು ನಮ್ಮ ತಂದೆಯ ಕಡೆಯ ದೂರದ ಬಳಗದವನು!” ಎಂದು ಮನೆಯಲ್ಲಿ ಸಕ್ಕಾನ್ನಗಳನ್ನು ಮಾಡಿದ್ದರೆ—“ಮಾದಿದ ಪದಾರ್ಥವನ್ನೆಲ್ಲಾ ಹಾಳು ಮಾಡಿದಿರಿ! ನಿಮ್ಮ ಹಣೆಬರೆಹವೇ ಇಷ್ಟು! ಬಂದವರನ್ನು ನಮ್ಮನೆ ಕಳಿಸಒಹುದೆ?” ಎಂಬ ವಷಟ್ಕಾರಗಳು ಅಲ್ಲದೆ-ತಂಗುಳನ್ನು ನಾಲ್ಕೈದು ದಿನಗಳ ವರೆಗೂ ತಿನ್ನಬೇಕಾಗುತ್ತದೆ. ಆಗ ಮತ್ತೂ ಸುಳ್ಳಿಗೆ ಸುಳ್ಳು ಹುಟ್ಟಿಸಿ ಹೇಳುವುದೆ.

ಇದೇರೀತಿ ಒಂದು ದಿನದಲ್ಲಿ ಎಷ್ಟೋ ಸುಳ್ಳುಗಳನ್ನು ಹೇಳಬೇಕಾಗುತ್ತದೆ. ಸಮಾಜದಲ್ಲಂತೂ ಸುಳ್ಳನ್ನು ಹೇಳಲೇಬೇಕಾಗುವುದು. ಈಗ ಧೈರ್ಯದಿಂದ, ನಿಮ್ಮ ಮನೆಯ

ಸರ್ವಮಾನ್ಯ!

ಚಳಿಗಾಲದಲ್ಲಿ ಶಕ್ತಿಯ ಬಗ್ಗೆ

ಸರ್ವೋತ್ಕೃಷ್ಟವೆಂದು

ರಕ್ತವರ್ಧಕವನ್ನೇ

ಎಲ್ಲ ಜನರು ಉಪಯೋಗಿಸುತ್ತಿರುವರು.



ಅಷ್ಟವರ್ಗ
ಚ್ಯವನಪ್ರಾಶ
ಸುವರ್ಣ
ಮಾಲಿನೀ ವಸಂತ
ಮಕರಧ್ವಜಗುಟಿ
ಮುಂತಾದ
ಶಕ್ತಿವರ್ಧಕ
ಔಷಧಗಳನ್ನು
ತರಿಸಿರಿ!

ಕರ್ನಾಟಕ ಕೇಂದ್ರ ಮುರಾಠಾಗಲ್ಲಿ. ಹುಬ್ಬಳ್ಳಿ.

ಪಕ್ಕದಲ್ಲಿರುವವರು ಹೀಗಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಜೀವದ ಆಶೆಯನ್ನೂ, ಮಾನದ ಆಶೆಯನ್ನೂ ಬಿಟ್ಟು ಬಾಯಿ ಬಿಡಬೇಕಾಗುತ್ತದೆ. ಶಾಸ್ತ್ರಗಳಲ್ಲಿ—

"ಸತ್ಯಂಬ್ರೂಯಾತ್, ಪ್ರಿಯಂಬ್ರೂಯತ್ |
ನಬ್ರೂಯಾತ್ ಸತ್ಯಮಪ್ರಿಯಂ!" ಎಂದು ಹೇಳಿದೆ.

'ಸತ್ಯವನ್ನೇ ಹೇಳು! ಪ್ರಿಯವಾದ ವಾಕ್ಯವನ್ನೇ ಹೇಳು! ಆದರೆ ನಿನ್ನ ಮಾತುಗಳು ಸತ್ಯವಾಗಿದ್ದರೂ ದುಃಖದಾಯಕವಾಗುತ್ತಿದ್ದರೆ ನಿಜವನ್ನೆಂದಿಗೂ ಹೇಳಬೇಡ!' ಎಂದು ಮೇಲಿನ ನೀತಿಯ ಅರ್ಥ. ಇದೇ ಧರ್ಮ! **ಸಂಘಗಳಲ್ಲಿ ಇಂತಹ ಅಸತ್ಯಗಳಿಗೆ ಉತ್ತೇಜನ ಕೊಟ್ಟು, ಅವುಗಳಿಗೆ ಬೇರೆ ವಿಧವಾದ ನಾಮಕರಣವನ್ನೂ ಮಾಡಿರುವರು.**

ಈಗ ರಾಜ್ಯಾಧಿಕಾರಿಗಳು ಎಷ್ಟು ಸುಳ್ಳು ಹೇಳಿದರೂ 'ದೇಶಹಿತಚಿಂತನೆ' ಎನ್ನುವರು. ಯಾವಳಾದರೂ ಪ್ರಸಿದ್ಧಿಪಡೆದ ಸ್ತ್ರೀಯು ತನಗೆ ಇಷ್ಟವಾದೊಂದು ಬೆಲೆಯುಳ್ಳ ವಸ್ತುವನ್ನು ಕದ್ದು ಪೆಟ್ಟಿಗೆಯಲ್ಲಿ ಹಾಕಿಕೊಂಡರೆ, ಅದಕ್ಕೆ ಕಳ್ಳತನವೆನ್ನದೆ ಇಂಗ್ಲಿಷಿನಲ್ಲಿ 'Kleptomania' ಎನ್ನುವರು. ಸಾವಿರಾರು ಜನರು ಹೊಡೆಪಾಡಿ ಸತ್ತರೆ ಅದಕ್ಕೆ 'ಖೂನು' ಎನ್ನದೆ, 'ಯುದ್ಧ' ಎನ್ನುವರು. ಯುದ್ಧಸಮಯದಲ್ಲಿ ಭಟರು, ಸಾಮಾನುಕಾಳು-ಕಡಿಗಳನ್ನು ಪ್ರಜೆಯಿಂದ ಕಸಿದುಕೊಂಡು ಹೋದರೆ, ಅದಕ್ಕೆ 'ದರೋಡೆ' ಎನ್ನುವುದಿಲ್ಲ. ಅವರಿಗೆ 'ಪಕ್ಕಾ ಹಗಲು ಗಳ್ಳರು' ಎನ್ನುವುದಿಲ್ಲ. ಯಾವುದಾದರೂ ಆಟದಲ್ಲಿ ಸೋತವನು, ಮೋಸೆ ಹುಳ್ಳಗಾಗಿದ್ದರೂ ಗೆದ್ದವನ ಹತ್ತಿರ ಹೋಗಿ ಕರೀಡನಮಾಡಿದರೆ, ಇಂಗ್ಲಿಷಿನಲ್ಲಿ "Sports-man spirit" ಎನ್ನುವರು. ಒಬ್ಬ ಕುರೂಪಿಗಳಲ್ಲಿ ಕುರೂಪಿಯಾದ ಹುಡುಗನು ಜ್ವರದಿಂದ ನರಳುತ್ತಿದ್ದು, ತಾಯಿಯು ದುಃಖಿಸುತ್ತಾ ಕುಳಿತಿದ್ದರೆ "ಅಯ್ಯೋ! ಎಂತಹ ಒಳ್ಳೆ ಹುಡುಗ, ಏನು ವರ್ಜಸ್ಸು, ಸಾಪ! ಎಂದು ಕಡಿಪೆಯಾಗಿ ಸುರಕ್ಷಿತವಾಗಿ ಇದ್ದಾನು!" ಎಂದರೆ "ಕಳ್ಳಾ! ಜೇಕಾಗಿ ಅವರನ್ನು ಹಾಸ್ಯಮಾಡುವುದಕ್ಕೋ-ಸ್ಕರ ಕುರೂಪಿಯನ್ನು, ಸುರೂಪಿಯೆಂದು ಎನ್ನುವೆಯಾ?" ಎಂದು ದಂಡಿಸದೆ "ಈಗ ಬಂದವರು ಎಷ್ಟು ಒಳ್ಳೆಯವರು, ಎಷ್ಟು ಗುಣಶಾಲಿಗಳು, ಕಷ್ಟಕಾಲದಲ್ಲಿ ಶಾಂತಗೊಳಿಸಿದರು!" ಎನ್ನುವರು.

ಇದೇ ರೀತಿಯಾಗಿ ಸಮಾಜದಲ್ಲಿ, ಮೂರು ರೂಪದಿಂದ, ಬೇರೇ ಬೇರೆ ಹೆಸರುಗಳಿಂದ ಸುಳ್ಳಿನ ಗುಂಪುಗಳು ಪ್ರಬಲಿಸುತ್ತಿರುವುವೆಂದು ನನ್ನ ಅಭಿಪ್ರಾಯ.

ಏನೋ ಬರೆಯಬೇಕೆಂದು ಈ ಚಿಲ್ಲರು ಸುಳ್ಳುಗಳಲ್ಲಿ ನಿಂತು ಬಿಟ್ಟೆನಲ್ಲಾ! ಇಂತಹ ಸುಳ್ಳುಗಳು ಗಣನೆಗೆ ಬಾರದಷ್ಟು ಹಿಂಡು ಹಿಂಡಾಗಿ ಇರುವುವು. 'ಇನ್‌ಕಂಟ್ಯಾಕ್ಸ್'ನವರು ಬಂದಾಗ ಸುಳ್ಳುಹೇಳುವುದು— ಕಸ್ಟಂ ಡ್ಯೂಟಿಗೆ ತಪ್ಪಿಸಿಕೊಳ್ಳುವುದು— ರೈಲಿನಲ್ಲಿ ಜಾಸ್ತಿ ಲಗ್ಗೇಜನ್ನು ಚಾರ್ಜ್ ಇಲ್ಲದೆ ತೆಗೆದುಕೊಂಡು ಹೋಗುವುದು— ಟಿಕೀಟ್ ಕಲೆಕ್ಟರು ಬಂದರೆ ತನ್ನಲ್ಲಿದ್ದ ಸಾಮಾನುಗಳಲ್ಲಿ ಕೆಲವನ್ನು ಪತ್ತಿರ ಕುಳಿತವರಿಗೆ 'ಈ ಸಾಮಾನು ನಿನ್ನಲ್ಲಿ ಇರಲಯ್ಯಾ, ಟಿಕೀಟಿನವರು ಹೋಗುವವರೆಗೂ! ಅವರು ಕೇಳಿದರೆ ನಿಮ್ಮದೇ ಸಾಮಾನೆಂದು ಹೇಳಬೇಕು ನೋಡು; ಪುಣ್ಯಾ ಬರುತ್ತದೆ!' ಎಂದು ಒಪ್ಪಿಸುವುದು.... ಇತ್ಯಾದಿ.

ಈ ಸುದ್ದಿ ಕೇಳಿದ ಸ್ನೇಹಿತರು 'ಸುಳ್ಳು ಆಡಬಾರದು' ಎಂದು ಬುದ್ಧಿ ಹೇಳುವುದರ ಬದಲು, ಅಪಾಯವಿಲ್ಲದೆ ತಪ್ಪಿಸಿಕೊಂಡು ಬರುವ ಉಪಾಯಗಳನ್ನು ಒಬ್ಬರಮೇಲೊಬ್ಬರು, ವಿಧವಿಧವಾಗಿ ಹೇಳುತ್ತಾ ಬರುವರು. ಇವೆಲ್ಲವೂ ಚಿಲ್ಲರು ಸುಳ್ಳುಗಳು.

ಇನ್ನು ಕೆಲವು ಕೆಲಸಕ್ಕೆ ಬಾರದ ಸುಳ್ಳುಗಳಿವೆ. ಇಂತಹ ಸುಳ್ಳುಗಳು ಸಾಧಾರಣವಾಗಿ ಹತ್ತು ಮಂದಿ ಕಲೆತು ಹರಟೆ ಹೊಡೆಯುವ ಸ್ಥಳದಲ್ಲಿ ಬರುತ್ತವೆ. ಯಾವುದೋ ಒಂದು ಮಾತನಾಡುತ್ತ—ಆಡುತ್ತ, ಒಬ್ಬನು ದೆವ್ವಗಳನ್ನು ಕುರಿತೋ, ಭೂತಗಳನ್ನು ಕುರಿತೋ, ಹಾವು-ಹುಲಿ-ಸಿಂಹಗಳ ಸುದ್ದಿಯನ್ನು ಕುರಿತೋ ಮಾತನ್ನು ಪ್ರಾರಂಭಿಸಿದರಾಯಿತು. ಎಲ್ಲರೂ ತಮ್ಮ ತಮ್ಮ ಕಥೆಗಳನ್ನು ಪ್ರಾರಂಭಿಸಿ, ಇದನ್ನು ನಂಬುವರೋ ಇಲ್ಲವೋ ಎಂಬ ಲಕ್ಷ್ಯವು ಕೂಡ ಇಲ್ಲದೆ "ನಾನು ಸಹಾರಾಕ್ಕೆ ಹೋಗಿದ್ದೆ; ಏನು ಸಿಂಹಗಳೋ, ಎಷ್ಟು ಆರ್ಭಾಟ!" ಎಂದು ಪ್ರಾರಂಭಿಸುವರು. "ಮೊನ್ನೆ ಒಬ್ಬ ಹುಡುಗಿ ಸಂಗೀತ ಹೇಳಿದಳು, ವರ್ಣಿಸಲಸಾಧ್ಯ!" ಎಂದು ಒಬ್ಬರು ಹೇಳಿದರೆ, ಮತ್ತೊಬ್ಬರು "ಆಹಾ! ಅದೆಲ್ಲ ಏನು ಹೇಳುತ್ತೀರಿ; ಈಗ ಎಂಟು ಹತ್ತು ದಿನಗಳ ಹಿಂದೆ ಒಬ್ಬಳು ಹರಿಕಥೆ ಮಾಡಿದಳು; ಕುಳಿತವರೆಲ್ಲರೂ ಗೊಂಬೆಗಳಂತೆ, ಎಲ್ಲಿ ಕುಳಿತಿರುವೆವೆಂಬ ಎಚ್ಚರಿಕೆಯು ಇಲ್ಲದೆ ಕುಳಿತಿದ್ದರು!" ಎಂದು ಹೇಳುವರು. "ಅಷ್ಟೇಕೆ; ನಮ್ಮ ನಾದಿನಿಯು ಇರುವಳು. ಆಕೆಯು ಗುಡ್ಡ-ಗುಡ್ಡಕ್ಕೆ ತಳಿಕೆ ಹಾಕುವಳು. ಈಗ ಕಾತಿಯಲ್ಲಿ, ಕ್ಷಣದಲ್ಲಿ ಕಲಕತ್ತೆಯಲ್ಲಿ

(ಹಳೆ ನೆಯ ಪುಟದಿಂದ ಮುಂದುವರಿದದ್ದು)

ವಾದಗಳನ್ನು ಬಿಡಬೇಕಾದೀತು. ಹಲವು ನಿಶ್ಚಯವೆಂದೆನಿಸಿದ ಸಂಗತಿಗಳನ್ನು ಬಿಸುಟಬೇಕಾದೀತು. ನಮಗೆ ಧೈರ್ಯ ಕೊಟ್ಟ-ಹುರಿದುಂಬಿಸಿದ ಹಲವು ಭ್ರಮೆಗಳ ಪರೆಗಳು ನಮ್ಮ ಕಣ್ಣುಗಳಿಂದ ಬಿದ್ದು ಹೋಗಬಹುದು. ಆದರೂ ಉಪಾಯವಿಲ್ಲ. ಏಕೆಂದರೆ **ವಿಚಾರಕ್ಕೆ ಎರವಾದ ಬಾಳು ಮಾನವನ ಬಾಳಲ್ಲ!** **ಮಾನವ ಬಾಳಲ್ಲ!** ಬುದ್ಧಿಯುಕ್ತವಲ್ಲದ ಜೀವನವು ಮನುಷ್ಯನ ಯೋಗ್ಯತೆಯದಲ್ಲ. ಬುದ್ಧಿಯೊಂದೇ ಬುದ್ಧಿಯಿಂದೇ ಮನುಷ್ಯತ್ವದ ಸಮರ್ಥನೆ ಮತ್ತು ಸಾಮರ್ಥ್ಯ, ಉಳಿದುದೆಲ್ಲ ವ್ಯರ್ಥ! ಅರಮನೆಯಲ್ಲಿ ಅಮೃತಾನ್ನವನ್ನುಂಡು ಬರ್ಬರನಾಗಿ ಬದುಕುವುದಕ್ಕಿಂತ, ಸೆರೆಮನೆಯಲ್ಲಿ ಜ್ಞಾನಿಯಾಗಿ ವಿಷಕುಡಿದು ಸಾಯುವುದು ಲೇಸು!

ಇರುವಳು!' 'ತನ್ನ ಸ್ನೇಹಿತರ ಜೊತೆಗೆ, ಒಂದೇ ಪುಟ್ಟಿಯಲ್ಲಿ, ತನ್ನ ಬಟ್ಟೆಗಳೂ ಇದ್ದುವು. ಅದರಲ್ಲಿ ತನ್ನ ಬಟ್ಟೆಗಳು ಮಾತ್ರ ಸುಟ್ಟುಹೋದುವು....' ಇಂತಹ ಸುದ್ದಿಗಳು ಎಡೆಬಿಡದೆ ನಡೆಯುತ್ತಿರುವುವು. ಇಂತಹ ಸುಳ್ಳಾಡುವುದರಲ್ಲಿ ಅಂತಹ ವಿಶೇಷ ಉದ್ದೇಶವೇನೂ ಇರುವುದಿಲ್ಲ. ಒಬ್ಬರು ಹೇಳಿದುದಕ್ಕಿಂತಲೂ ತಾನು ಹೇಳುವುದು ಹೆಚ್ಚೆನಿಸಿಕೊಳ್ಳಬೇಕೆಂಬುದೊಂದೇ ಇದರ ಉದ್ದೇಶ. "ಓಹೋ! ನನ್ನ ಮುಂದೆ ನಿನ್ನ ಸುದ್ದಿಯೆಲ್ಲಾ ಏನು? ಅದಕ್ಕಿಂತಲೂ ಹೆಚ್ಚು ನಾನು ಹೇಳಲಾರೆನೆ?" ಎಂಬುದೇ ಅವರ ತಾತ್ಕಾಲಿಕ ಸಂತೋಷ.

ಒಂದು ದಿನ ನಾವು ಐದಾರು ಮಂದಿ ಆಫೀಸು ರೂಮಿನಲ್ಲಿ ಕುಳಿತು ಮಾತನಾಡುತ್ತಿದ್ದೆವು. ಒಂದು ಹಾವು ಬಂತು. ಎಲ್ಲರೂ ದಿಕ್ಕುಗೆಟ್ಟು ಓಡಲು ಪ್ರಾರಂಭಿಸಿದೆವು. ಅದರಲ್ಲಿ ಡಾಕ್ಟರು ಕುರ್ಚಿ ಎಡವಿ ಬಿದ್ದೇಬಿಟ್ಟನು. ಫಾರೆಸ್ಟು ರೇಂಜರು ಸ್ಥೂಲಕಾಯನಾದ್ದರಿಂದ ಬಿದ್ದು ಮೇಲಕ್ಕೇಳಲಾರದೆ ಇದ್ದುದರಿಂದ, ನಾವೆಲ್ಲರೂ ಸೇರಿ ಅವನನ್ನು ಹೊರಗೆಳೆಯಬೇಕಾಯಿತು. ಈ ಗೊಂದಲದಲ್ಲಿ ಹಾವನ್ನು ಕೊಲ್ಲುವವರು ಯಾರು? ಹೊರಗಿನಿಂದ ಯಾರನ್ನೋ ಕರೆದು ಕೊಲ್ಲಿಸಿದ್ದಾಯಿತು. ಎಲ್ಲರೂ ಗಂಭೀರಭಾವದಿಂದ ಮತ್ತೆ ಒಳಗೆ ಸೇರಿ ಕುಳಿತೆವು. ನೋಡಿದರೆ ಅದು ಕೆರೆಯ ಹಾವು. ಕೆರೆಯ ಹಾವೆಂದರೆ ನಮಗೆ ಅಮರ್ಯಾದೆಯಲ್ಲವೇ? ಕೆರೆಯ ಹಾವಿಗೆ ನಾವು ಹೆದರಬಹುದೇ? ಆದುದರಿಂದ "ಅದು ದೊಡ್ಡ ನಾಗರ ಹಾವು, ಮೈಯೆಲ್ಲವೂ ಕೂದಲು ಇತ್ತು!" ಎಂದು ಹೇಳಬೇಕೆಂದು ಗೊತ್ತುಮಾಡಿದೆವು.

ನಾನು ಸುಮ್ಮನಿರದೆ, ರೇಂಜರವರನ್ನು ಕಂಡು "ಸ್ವಾಮಿ! ರೇಂಜರ್ ಸಾಹೇಬರೇ! ನಿಮಗೆ ಹಾವಿನ ಲಕ್ಷ್ಯವೇ ಇರಲಿಕ್ಕಿಲ್ಲ, ನೀವು ಯಾವಾಗಲೂ ಆಡವಿಯಲ್ಲಿ ತಿರುಗತಕ್ಕವರು, ನಿಮಗೆ ಹುಲಿ-ಕರಡಿಗಳ ಅಂಜಿಕೆಯೂ ಇರಲಿಕ್ಕಿಲ್ಲ!" ಎಂದೆ.

"ಓಹೋ! ನನಗೇನು ಭಯ? ಬೇಕಾದ್ದು ಬರಲಿ, ಎಡಗೈಯಿಂದ ಶೂಟ್‌ಮಾಡಿಬಿಡುತ್ತೇನೆ!" (ನೋಡಿರಿ. ಕೆರೆಯ ಹಾವಿಗೆ ಮೂರ್ಛೆಬಿದ್ದ ಗಂಡು ಎಡಗೈಯಿಂದ ಶೂಟ್ ಮಾಡುತ್ತಾನಂತೆ!) ಮೊನ್ನೆಯ ರಾತ್ರಿ ಕಳ್ಳರನ್ನು ಪತ್ತೆಮಾಡಬೇಕೆಂದು, ರಾತ್ರಿಯಲ್ಲಿ, ಕೈಯಲ್ಲಿ ಒಂದು ಬೆತ್ತವನ್ನು ಹಿಡಿದುಕೊಂಡು ಹೊರಟೆ. ದಾರಿಯಲ್ಲಿ ನರಿಗಳ ಗುಂಪು ಅಡ್ಡಗಟ್ಟಿತು. ನರಿಗಳ ಹೆದರಿಕೆಯೆ? ಬೆತ್ತದಿಂದ ಹೊಡೆಯಲು ಪ್ರಾರಂಭಿಸಿದೆ. ನರಿಗಳೆಲ್ಲವೂ ಘಾಯವಹಿಡಿದು ಸತ್ತು ಕೆಳಗೆ ಬಿದ್ದುವು. ರಕ್ತದ ಮಡುವಿನಲ್ಲಿಯೆ ನಾನು ನಿಲ್ಲಬೇಕಾಯಿತೆನ್ನಿ. ಆಮೇಲೆ ನನ್ನ ಕಾರ್ಯವನ್ನು ಮುಗಿಸಿಕೊಂಡು ಬಂದೆ ನೋಡಿ!" ರೇಂಜರ್ ಹೇಳಿದರು. "ಎಲ್ಲಾ ಹೇಳಿದಿರಿ. ಸರಿ! ಇಪ್ಪಾದರೂ ನಿಮಗೆ ಸ್ವಲ್ಪವಾದರೂ ಘಾಯವಾಗಲಿಲ್ಲವೇ?" ನಾನು ಕೇಳಿದೆ.

"ಆಗದೆ ಇರುತ್ತದೆಯೇ! ನೋಡಿ-ಹಾ, ಅಲ್ಲೇ! ಸ್ವಲ್ಪ ಕೆಳಗೆ ಸ್ವಾಮಿ, ಬೆನ್ನಿನ ಹತ್ತಿರ-ಕುತ್ತಿಗೆಗೆ ಅಂದಾಜು ಮೂರು ಅಂಗುಲದ ಕೆಳಗೆ-ಛೇ ಛೇ ಎಡಕ್ಕೆ ಸ್ವಾಮೀ!-ಎಷ್ಟು ದೊಡ್ಡ ಗುರುತಿದೆ, ಕಾಣಿಸುವುದಿಲ್ಲವೇ?"

ಇಷ್ಟೇಸ್ಮುವಲ್ಲಿಗೆ ನನಗೆ ಅಂದಾಜು ಆಯಿತು. ಈಗ ಎಂಟುದಿನಗಳ ಕೆಳಗೆ, ತಾನು ಹುಲಿಯ ಸಂಗಡ ಮಾಡದ ಮಲ್ಲಯುದ್ಧ ಮಾಡಿದೆನೆಂದು ಹೇಳಿದಾಗ ತೋರಿಸಿದ್ದ ಘಾಯದ ಗುರುತೂ ಇದೇ! "ಅಯ್ಯೋ! ಎಷ್ಟು ತೊಂದರೆ ಪಟ್ಟಿರಲ್ಲಾ! ಇಲ್ಲೇ ಇವೆ, ಎಷ್ಟುಗಾತ್ರ ಗಾಯವಿದೆ! ನರಿಗಳು ಬೆನ್ನು ಕಚ್ಚಿದುವೇ?" ನಾನು ಕೇಳಿದೆ.

ಇತ್ತೀಚೆಗೆ ಈ ನುಳ್ಳಿನ ಮಾಹಾತ್ಮ್ಯವು ನೌಕರಿಯಲ್ಲಿರತಕ್ಕವರಿಗೆ ಹೆಚ್ಚಾಗಿ ತಿಳಿದುಬಂದಂತಿದೆ. ಇದು ಎಲ್ಲರಿಗೂ ತಿಳಿದ ಚಿದಂಬರರಹಸ್ಯ. ಆದರೆ ಮೂಲಮಂತ್ರ 'ಲೀವ್ ಆಪ್ಲಿಕೇಷನ್!' ಎಂದರೆ ರಜೆಗೆ ಅರ್ಜಿ! ರಜೆ ಬೇಕಾಗುವ ಸಂದರ್ಭಗಳು ಬಹಳ ಬರುತ್ತವೆ. ಮನೆಯಲ್ಲಿ ಯಾವುದಾದರೂ ಕೆಲಸವಿದ್ದಕಾಲಕ್ಕೆ—ತನಗೆ ಕಜೀರಿಗೆ ಹೋಗಿ ಕೆಲಸ ಮಾಡಲು ಬೇಸರ (ಸೋಮಾರಿತನ) ವಾದಕಾಲಕ್ಕೆ—ಚಿಲ್ಲರೆ ರಜೆಯು ಬೇಕಾಗುತ್ತದೆ. ಆದರೆ ಕಾಲಾಂತಕರಾದ ಅಧಿಕಾರಸ್ಥರು ಬೇಡಿದಾಗ ಸುಮ್ಮಗೆ ರಜೆ ಕೊಡುವುದಿಲ್ಲ. 'ನನಗೆ ಉಪ್ಪೊತ್ತು ಬೇಜಾರು ಬಂದಿದೆ: ರಾತ್ರಿ ಸಿನೀಮಾಕ್ಕೆ ಹೋಗಿದ್ದೆ, ನಿದ್ದೆಯು ಬರುತ್ತದೆ!' ಎಂದರೆ ಯಾರಾದರೂ ರಜೆ ಕೊಡುತ್ತಾರೆಯೇ? ಆದಕ್ಕಾಗಿ ತನಗಾಗಲಿ, ಮನೆಯಲ್ಲಿದ್ದ ತನ್ನವರಿಗಾಗಲಿ, ಯಾವುದೋ ಒಂದು ರೋಗವನ್ನು ಕಲ್ಪನೆ ಮಾಡಿ ಬರೆಯಬೇಕಾಗುತ್ತದೆ. ಏನೋ ಜ್ವರವು ಬಂದಿದೆ ಎಂದು—ತನಗೆ ಬೇಕಾದುದು ಒಂದು ದಿನವೇ ಆದರೂ ಜ್ವರವೆಂದ ಮೇಲೆ ವಾಸಿಯಾಗಲು ಮೂರು-ದಿನವಾದರೂ ಬೇಕಾದ ಕಾರಣ—ಮೂರು ದಿನದ ರಜೆ ಹೊಡೆದೇ ಬಿಡುತ್ತಾರೆ.

ನಮಗೊಬ್ಬ ಸ್ನೇಹಿತನಿದ್ದ. ಸ್ವಲ್ಪ ಅರುಳು ಮರುಳು ಮನುಷ್ಯ. ಕರ್ಮವಶಾತ್ ಆತನಿಗೆ ಒಂದುದಿನ ಶ್ರಾದ್ಧದ ಔತಣ ಬಂದಿತು. ಊಟ ಹೊತ್ತಾಗುತ್ತದೆ. ಬಂದ ಅಧಿಕಾರಿ ಹೊಸಬ, ಹಸಿಯ ಪೆಣಸಿನಕಾಯಿಯ ರೀತಿ. ಅವನಿಗೆ ಏನೂ ತೋರದೆ ಒಂದು ಅರ್ಜಿಯನ್ನು ಬರೆದೇಬಿಟ್ಟ. "ಈ ಕೆಳಗೆ ಕಾಣಿಸಿದ ರೋಗಗಳಿಂದ ನಾನು ಪೀಡಿತನಾಗಿದ್ದೇನಾದಕಾರಣ, ನನಗೆ ದಯೆಯಿಟ್ಟು ಒಂದು ದಿನದ ರಜೆ ಕೊಡಬೇಕು" ಎಂದು ಮೇಲೆ ಬರೆದು, ಕೆಳಗೆ ಪೆಜ್ಯೂಲಿನಲ್ಲಿ ಏನು ರೋಗ ಬರೆಯಬೇಕೆಂಬುದು ಮನಸ್ಸಿಗೆ ತೋಚದೆ, ಒಂದು ವೈದ್ಯಶಾಸ್ತ್ರ ವುಸ್ತಕ ತೆಗೆದುಕೊಂಡು ಅಲ್ಲಿದ್ದ ರೋಗಗಳ ಪಟ್ಟಿಯಲ್ಲಿ ಕೆಲವನ್ನು ಆರಿಸಿ ಹೀಗೆ ಬರೆದಿಟ್ಟನಂತೆ: "ತಾಜಾಕಲಂ—ರೋಗಗಳ ನಿವರ: ಕಾಲರಾ, ಪ್ಲೇಗು, ಕ್ಷಯ, ವಾತ, ಪಿತ್ತ, ಪ್ಲೀಹ, ತಲೆಶೂಲೆ ಇತ್ಯಾದಿ" ಆ ಹೊಸ ಅಮಲ್‌ದಾರನು ಇದನ್ನು ಓದಿ ಬೆರಗಾಗಿ "ಕಾಲರಾ, ಪ್ಲೇಗು, ಕ್ಷಯ ಇಂತಿಷ್ಟು ರೋಗಗಳೂ ಒಂದೇ ಸಲ ಬಂದ ಮೇಲೆ, ರೋಗಿಯು ಜೀವಿಸುವುದು ಅಸಾಧ್ಯ.

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಮೇಲೆ ಒಂದೊಂದು ರೋಗಕ್ಕೂ ಆರಾರುತಿಂಗಳು ವಾಸಿಯಾಗಲು ಬೇಕು. ಎಂದ ಮೇಲೆ ಒಂದುದಿನ ರಜೆ ಸಾಲದು; ಗಿ ರೋಗಕ್ಕೂ ಆರುವರ್ಷ ರಜೆ ಸಂಬಳಿಲ್ಲದೆ ಮುಂಜೂರು, ಒಂದೇ ದಿನದೇಕೆ?" ಎಂದು ಬರೆದು ಕಳುಹಿಸಿದನಂತೆ. ಇದನ್ನು ನೋಡಿದ ನಮ್ಮ ಸ್ನೇಹಿತನಿಗೆ ಕೂಡಲೆ ಎಲ್ಲ ರೋಗಗಳೂ ವಾಸಿಯಾಗಿ, ಹನ್ನೊಂದು ಘಂಟೆಗೇ ಕಚೇರಿಗೆ ಓಡಿಹೋದನಂತೆ.

ಇನ್ನು ಚಿಲ್ಲರು ರಜೆಗಳಲ್ಲದೆ, ದೀರ್ಘಕಾಲ ರಜೆಯು ಬೇಕಾಗುತ್ತದೆ. ಮನೆಯಲ್ಲಿ ಮದುವೆ, ಮುಂಜಿ, ಇತ್ಯಾದಿ ಶುಭಕಾರ್ಯಗಳಾಗಲಿ, ರೋಗಗಳು ಬಂದರಾಗಲಿ ಇಂತಹ ರಜೆಯ ಆವಶ್ಯಕತೆ. ಇವು ಸಾಮಾನ್ಯವಾದ ನ್ಯಾಯವಾದ ಕಾರಣಗಳು. ಇಂತಹ ಅವಸರಗಳಿಗೆಂದೇ ಸರಕಾರದವರು ಒಂದು ವರ್ಷಕ್ಕೆ ಎರಡು ತಿಂಗಳಂತೆ ರಜೆಯನ್ನು ಸೇರಿಸಿ ಕೊಡುತ್ತಾರೆ. ಆದರೆ ಇತರ ಸುಳ್ಳು ಕಾರಣಗಳೂ ಬರುತ್ತವೆ (ಇವೇ ಹೆಚ್ಚು). ಇವು ಹೇಳಿಕೊಳ್ಳಲಿಕ್ಕೆ ಆಗದಂತಹವು. ಮೇಲಿದ್ದ ಅಧಿಕಾರಿಯು ಮಲಅತ್ತಿಯಂತೆ ಸ್ವಾರಿಮಾಡಲು ಪ್ರಾರಂಭ ಮಾಡಿದ ಕಾಲಕ್ಕೆ,—ಸುಮ್ಮನೆ ತನ್ನ ಮೇಲೆ ತಪ್ಪುಗಳನ್ನು ತೆಗೆದು ತನ್ನನ್ನು ಕಾಡುವ ಕಾಲಕ್ಕೆ—ತನಗೆ ಬೇಡವಾದ ಕೆಲಸಕ್ಕೆ ಬದಲಾವಣೆ ಮಾಡಿದರೆ—ಕೆಲಸವು ತೀರ ಕಷ್ಟವಾದರೆ—ಮೇಲಿನ ಅಧಿಕಾರಿಗೂ ತನಗೂ ಮನಸ್ತಾಪಬಂದರೆ—ತನಗೆ ಇಷ್ಟವಿಲ್ಲದೆ ಬೇರೆ ಊರಿಗೆ ವರ್ಗ ಮಾಡಿದರೆ—ಇತ್ಯಾದಿ ಸಂದರ್ಭಗಳಲ್ಲಿ, ಅದನ್ನು ತಪ್ಪಿಸಿಕೊಳ್ಳುವುದರ ಸಲುವಾಗಿ ರಜೆಯನ್ನು ಬೇಡುತ್ತಾರೆ. ಆದರೆ ಈ ಕಾರಣಗಳನ್ನು ಹೇಳಿದರೆ ರಜೆಯು ಸಿಕ್ಕಲಾರದು. ಆಮೇಲೆ ತನಗೆ ಮುಪ್ಪು. ಆದುದರಿಂದ ಸುಳ್ಳಿಗೆ ಪ್ರಾರಂಭ! ಐದಾರು ದಿನ ಊಟ ಬಿಟ್ಟು, ಭೇದಿಯ ಔಷಧ ತೆಗೆದುಕೊಂಡು, ಗಡ್ಡ ಬೆಳೆಯಿಸಿ, ಜೋಲುಮೊಗ ಹಾಕಿ, ತನಗೆ ಏನೋ ಜಾಡ್ಯವೆಂದು ರಜೆಗೆ ಅರ್ಜಿ ತಯಾರು ಮಾಡುತ್ತಾರೆ. ಇವು ಸುಳ್ಳೆಂದು ಸಾಮಾನ್ಯವಾಗಿ ಅಧಿಕಾರಿಗಳಿಗೂ ಗೊತ್ತಾದ ಕಾರಣ ಅವರು ನಂಬುವುದಿಲ್ಲ. ಇತ್ತೀಚೆಗೆ ಇವು ತೀರ ಚಾಸ್ತಿಯಾದಂತೆ, ನಂಬಿಗೆಯು ತೀರ ಕಡಿಮೆಯಾಗಿ, ನಿಜವಾಗಿ ರೋಗ ಬಂದರೂ ನಟನೆಯೆಂದೆ ತಿಳಿಯುವುವಾಗುತ್ತದೆ. ಈ ಸುಳ್ಳು ಕಷ್ಟದಿಂದ ಪಾರಾಗುವುದಕ್ಕೆ ಒಂದು ಡಾಕ್ಟರು ಸರ್ಟಿಫಿಕೇಟ್ ಬೇಕಾಗುತ್ತದೆ. ಈಗ ಡಾಕ್ಟರುಗಳು ಹೆಚ್ಚಾದಂತೆ ಮಾರ್ಕೆಟ್ಟಿನಲ್ಲಿ ಈ ಸರ್ಟಿಫಿಕೇಟ್‌ಗಳಿಗೆ ರೇಟು ಕಡಿಮೆಯಾಗಿದೆ. ತಿಂಗಳು ರಜೆಗೆ ಒಂದು ರೂಪಾಯಿ ಪ್ರಕಾರ ದರವು ನಿಶ್ಚಯವಾಗಿದೆ. ಡಾಕ್ಟರು ವಿಚಾರಿಸಿದರೆ ಇವರು ಹೇಳುವ ರೋಗಗಳು: ಹೊಟ್ಟೆಶೂಲೆ, ಕಣ್ಣುರಿ, ಕೈ ಮೈ ಶೂಲೆ, ಅತೀ ನಿತ್ರಾಣ, ಕಾಲುಹರಿತ, ಓಡಾಡಿದಲ್ಲಿ ಕಣ್ಣು ಕತ್ತಲುಗುಡಿಸುವುದು ಇತ್ಯಾದಿ. ಇವುಗಳಲ್ಲಿ ಒಂದಾದರೂ ವೈದ್ಯನು ಪರೀಕ್ಷೆಮಾಡಿ ರುಜುಮಾಡುವಂತೆ ಇಲ್ಲ. ಮೇಲೆ ಎಂಟು ದಿನದ ಗಡ್ಡ, ಎರಡು ದಿನದ ಉಪವಾಸ, ಮೇಲೆ ನಾಲ್ಕು ಭೇದಿ ಮಾತ್ರೆ, ಜೋಲುಮುಖ, ಎಲ್ಲವೂ ರಜೆಗೆ ಸಾಧನೆ! ಡಾಕ್ಟರೂ ಫೀಜು ಬೇಬಿಗೆ ಸೇರಿಸಿ, ಮೇಲಿನಿಂದ ಕೆಳಗೆ ನೋಡಿ "ಅನೇಮಿಯಾ!" "ನಿತ್ರಾಣ ರೋಗ" ಎಂದು 'ಎರಡು ತಿಂಗಳಿಗೆ ಸಿಫಾರಸು' ಎಂದು ಬರೆದು ಬಿಡುತ್ತಾನೆ. ಇದು ಸುಳ್ಳೆಂದು ಡಾಕ್ಟರಿಗೂ ಗೊತ್ತು, ರೋಗಿಗೂ ಗೊತ್ತು, ಆ ಅಧಿಕಾರಿಗೂ ಗೊತ್ತು; ಆದರೆ ರಜೆ ಶಾಂಕ್ಷನ್, ಮುಂಜೂರು! ಎಲ್ಲಾ ಸುಳ್ಳೇ!

ಒಂದು ಸಲ ಗುಮಾಸ್ತೆಯೊಬ್ಬನು ತನ್ನ ಅಜ್ಜಿಯ ಶ್ರಾದ್ಧವೆಂದು ರಜೆ ಕೇಳಿ ಮನೆಯಲ್ಲಿ ಪುಲಗಿ ನಿದ್ದೆ ಮಾಡಿದ. ಮತ್ತೆ ಎರಡನೆಯ ತಿಂಗಳಲ್ಲಿ ಅಜ್ಜಿಯ ಶ್ರಾದ್ಧವೆಂದು ರಜೆಗೆ ಬರೆದು ಹಳ್ಳಿಗೆ ಹೋಗಿ ಬಂದ. ತಿರುಗಿ ಮೂರನೆಯ ಸಲ ಅಜ್ಜಿಯ ಶ್ರಾದ್ಧವೆಂದು ರಜೆಗೆ ಅರ್ಜಿ ಕೊಟ್ಟ. ಮುಜೂರಿನವರು ಆಶ್ಚರ್ಯದಿಂದ ಕರೆಯಿಸಿ "ಏನಯ್ಯಾ, ಈಗ ಎರಡು ತಿಂಗಳಲ್ಲಿ ಇಬ್ಬರು ಅಜ್ಜಿಯರ ಶ್ರಾದ್ಧ ಮಾಡಿದೆ; ಈಗ ಮತ್ತೆ ಯಾವ ಅಜ್ಜಿಯ ಶ್ರಾದ್ಧ?" ಎಂದು ಕೇಳಿದರು. ಗುಮಾಸ್ತನಿಗೆ ಸಿಟ್ಟು ಬಂದು "ಏನು ಕಣ್ರೀ! ಇರೋ ಅಜ್ಜಿ ಒಬ್ಬಳೇ, ಗುಂಡುಕಲ್ಲಿನಂತೆ ಇದ್ದಾಳೆ! ತಿಂಗಳು ತಿಂಗಳಿಗೂ ಶ್ರಾದ್ಧ ಮಾಡುತ್ತೇನೆ; ಆದರೆ ಸಾಯೋಲ್ಲ!" ಎಂದನಂತೆ. ಅವರು ನಕ್ಕು ರಜೆ ಕೊಟ್ಟರಂತೆ.

ಎಲ್ಲಾ ಸುಳ್ಳೇನು?
ಸರ್ವಾಬದ್ಧ! ಸರ್ವಾಪದ್ಧ!

ಶಕುಂತಲೆಯ ವಿಲಾಪ

ಶ್ರೀ. ಎಚ್. ವಿಟ್ಠಲ ಶೆಣೈ, ಮಂಗಳೂರು

★

ಶಕುಂತಲೆಯು ಪತಿಗೃಹಕ್ಕಭಿಮುಖಳಾಗಿದ್ದಾಳೆ; ಈ ಸುವರ್ಣಸಂದರ್ಭವನ್ನು ಗಮನಿಸಿ, ಕಾಲಿದಾಸನು ಶಕುಂತಲೆಯ ವಿಲಾಪವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಈ ಸ್ವರ್ಣಮಯಾಧ್ಯಾಯಕ್ಕೆ ಕೆಲವಂಶಗಳನ್ನು ಸೇರಿಸಿ ಕೆಳಕ್ಕೆ ಕೊಡಲಾಗಿದೆ:—

೧

ಪತಿಪಾದ ಯುಗ್ಮಗಳ ತೊಳೆವ ಭಾಗ್ಯವ ಪಡೆದು
ಸತಿಯಾಗಿ ಮೆರೆಯಬೇಕೆಂಬ ನಿಜಕಾಮ
ಆತಿಯಾಗಿ ಉಕ್ಕಿ ಮನ ಮುನವಾಂತರೂ ಎನುವೆ:
' ಮತ್ತೆ ಕಾಣುವೆನೆಂದೊ ಈ ಪುಣ್ಯಧಾಮ? '

೨

ಬನತರುಗಳೇ ನಿಮ್ಮನನವರತ ಬಿಟ್ಟಿರದೆ
ತನು-ಮನದಿ ಜಲಸೇಚನವ ಮಾಡಿ ಪೊರೆದೆ;
ವನಲತೆಗಳೇ ನಿಮ್ಮ ಕಾಂತರನ್ನಗಲಿರದೆ
ದಿನದಿನವು ಹೂಬೆಳೆಯ ಬೆಳಸಿ ನಲಿ-ನಲಿದೆ;

೩

ಸಖಿಯೇ ಪ್ರಿಯಂವದೆಯೆ, ನಿಮ್ಮಿಂದ ಸ್ವರ್ಗಸಮ-
ಸುಖಜೀವನವನುಂಡೆ— ಉಲಿದು ನಲಿದಾಡಿ;
ಸಖಿ ಜೀವದೊಡನಾಡಿ ಅನಸೂಯೆ ನಿತ್ಯ ಮನ-
ಸುಖವನ್ನೆ ಬಯಸಿರ್ದೆ ಗೆಳೆತನವ ನೀಡಿ!

೪

ನಾ ಪ್ರಿಯಂವದೆಗಾಗಿ ಪ್ರಿಯವನ್ನೆ ನುಡಿಯುವೆನು
ಈ ಪ್ರಾಣಸಖಿಯ ಪ್ರೇಮದ ನೆನಪಿಗಾಗಿ;
ನಾ ಪ್ರಿಯಂವದೆಯಾಗಿ ಮತ್ಸರವ ನೀಗುವೆಂ
ಈ ಪ್ರೇಮಮಯ ಗೆಳತಿ ಅನಸೂಯೆಗಾಗಿ!

೫

ನಾ ಪ್ರಿಯಂವದೆಯಾಗಿ ಅನಸೂಯೆಯಾಗುವೆನು?
ಆ ಪ್ರಿಯಕರನ ಹೃದಯದೊಲವಿನಾರ್ಜನೆಗೆ;
ನಾ ಪ್ರಭಾಶೋಭಿತ ಕಿರೀಟದಿಂದೆಸೆಯುವೆನು.
ಆ ಪ್ರಜಾಗಣದುನ್ನತಿಗೆ, ಶಾಂತಿ-ಸುಖಕೆ!

೬

ಜನುಮಭೂಮಿಯ ಜನರು ಎಳೆಯುತಿಹರೊಂದು ಕಡೆ,
ಮನಪನಪಹರಿಸಿಪವ ತಾನೆಳೆವನತ್ತ!
ತನು-ಮನಗಳಿಂದು ಹೊಯ್ದಾಡುತಿಹವೊಂದುಕಡೆ
ಎನ್ನ ಚರಣಗಳೆಂತು ಮುಂಬರಿವುವತ್ತ?

೭

ಮಲಯಾಚಲದ ತಟಪ್ರಾಂತದಿಂದೆಸೆದೊಗೆದ
ಲಲಿತೆ ಚಂದನಲತೆಯು ಪಡೆದ ಗತಿಯನ್ನೆ.
ಎಲೆ ತಾತ, ಸುಪ್ರೀತ— ನಿನ್ನಂಕವನು ತೊರೆದ
ಲಲನೆ ನಾನನ್ಯದೇಶದಿ ಪಡೆಯದಿಹೆನೆ?

೮

ಅರಗಿಣಿಯ ತೆರ ನಾನು ಆರ್ತಿಯಲಿ ಪೋಷಿಸಿದ
ಹರಿಣಿಯಗಲಿಕೆಯಿಂದ ಕಂಬನಿಯ ಮಳೆಯ
ಸುರಿಸುವೆಂ; ಪ್ರಿಯ ತಾತ, ಈ ಹರಿಣಿ ಪ್ರಸವಿಸಿದ
ವರ ಮುಹೂರ್ತದಿ ಕಳಿಸು ಕುಶಲಪತ್ರಿಕೆಯ!

೯

ಎಂದಾಲಿಸುವೆನೊ ನಾಂ ಶ್ವೇತಪಕ್ಷಿಯ ಕುಕಿಲ-
ನೆಂದಾಲಿಸುವೆನೊ ಖಗದ ಸಂಗೀತ ಸೋನೆ?
ಇಂದೀ ಬನವ ಬಿಡಲು ಮನವಳುಕುತಿದೆ, ಸಕಲ
ಬಾಂಧವರ ಬಳಗವನು ಬಿಡಲರಿವೆನೆ?

೧೦

ಮಾತೆ ಗೌತಮಿಯಿಂದ ತಾತ ಕಾಶ್ಯಪನಿಂದ
ಪ್ರೀತೆ ಸಹಜಾತೆ ವನಜ್ಯೋತ್ಸ್ನೆಯಿಂದ
ಗೀತಗಳಪುಲಿಯುತಿಹ ಖಗರಾಜಿಯಿಂದ ಮುದ-
ವಾಂತು, ಬಿಟ್ಟಿಹೆನೆಂತು ತಾಯ್ನೆಲವಿದ?

ಮಮತೆ

(ಒಂದು ಸಣ್ಣಕತೆ)

ಶ್ರೀ. ಜಯಶಂಕರ ಪ್ರಸಾದ *

★

ಸಜ್ಜನಿಕೆ ಜಾತಿ-ದೇಶ-ಕಾಲಗಳನ್ನು ಅವಲಂಬಿಸಿರದು. ನಡೆದ ಒಂದು ದುರ್ಘಟನೆ, ಯಾವುದಾದರೊಂದು ಸಮುದಾಯದ ಮೇಲೆಯೆ ತಿರಸ್ಕಾರಪಡಲು ಹಚ್ಚುವುದು; ಆದರೆ ಆ ಸಮುದಾಯದ ಘಟಕವಾದ ವ್ಯಕ್ತಿ ಮನುಷ್ಯನಲ್ಲವೆ? ಅವನಿಗೆ ಬುದ್ಧಿ-ಭಾವನೆಗಳು ಇರುವುವಲ್ಲವೆ?

★

ರೋಹತಾಸ ದುರ್ಗದ ಕೋಣೆಯೊಂದರಲ್ಲಿ ಕುಳಿತ ಮಮತೆಯು, ಶೋಣಾನದಿಯ ತೀಕ್ಷ್ಣ—ಗಂಭೀರ ಪ್ರವಾಹದ ಕಡೆಗೆ ಎವೆಯಿಕ್ಕದೆ ನೋಡುತ್ತಿರುವಳು. ಆಕೆ ವಿಧವೆ. ಯೌವನವು ಅವಳಲ್ಲಿ ಶೋಣದಂತೆಯೇ ಉಕ್ಕುತ್ತಿತ್ತು. ಮನದ ವೇದನೆಯೂ, ಕಣ್ಣಿನಲ್ಲಿ ತುಂಬಿದ ಬಾಷ್ಪವರ್ಷಗಳೂ ಅವಳನ್ನು ದುಃಖದೇವತೆಯನ್ನಾಗಿ ಮಾಡಿಬಿಟ್ಟಿರುವುವು. ರೋಹತಾಸ ದುರ್ಗದ ಅಧಿಪತಿಯಾದ ಜೂಡಾಮಣಿರಾಯನ ಮಗಳು ಅವಳು. ಯಾವ ವಿಷಯದಲ್ಲೇ ಆಗಲಿ, ಅವಳಿಗೆ ಕೊರತೆ ಅಸಂಭವ. ಆದರೂ ಅವಳು ವಿಧವೆ— ಹಿಂದೂ ವಿಧವೆಗಿಂತ ನಿರಾಶ್ರಿತವಾದ ಪ್ರಾಣಿ ಬೇರೆ ಇರುವುದೆ?

ಜೂಡಾಮಣಿರಾಯ ಸದ್ದಿಲ್ಲದೆ ಅವಳ ಕೋಣೆಯನ್ನು ಹೊಕ್ಕನು. ಶೋಣದ ಪ್ರವಾಹದಲ್ಲಿಯೂ, ಅದರ ಕಲಕಲಸ್ವರದಲ್ಲಿಯೂ ಮಗ್ನಳಾಗಿದ್ದ ಮಮತೆಗೆ ತಂದೆ ಬಂದುದರ ಅರಿವಾಗಲಿಲ್ಲ. ಸ್ನೇಹದಿಂದ ಪಾಲಿಸಿದ ಪುತ್ರಿಗಾಗಿ ಏನು ಮಾಡಬೇಕೆಂಬುದೇ ಅವನಿಗೆ ದೊಡ್ಡ ಸಮಸ್ಯೆಯಾಗಿ ಹೋಗಿತ್ತು. ಅದೇ ಆಲೋಚನೆಯಲ್ಲಿ ಬಿದ್ದು ಅವನು ಬಹಳ ಕೊರಗಿದ್ದನು. ಹೋದಹಾಗೆಯೆ ಕೋಣೆಯಿಂದ ಹಿಂದಿರುಗಿದನು. ಹೀಗೆ ಆಗಾಗ ಆಗುತ್ತಲೆ ಇತ್ತು. ಆದರೆ ಈ ದಿನ ಮಂತ್ರಿಯು ಮನಸ್ಸಿನಲ್ಲಿ ಹಲವು ದುಶ್ಚಿಂತೆಗಳು ಮನೆಮಾಡಿದ್ದುವಾದುದರಿಂದ, ಅವನ ಹೆಜ್ಜೆ ಸರಿಯಾಗಿ ಬೀಳಲಿಲ್ಲ.

ಒಂದು ಗಳಿಗೆ ಕಳೆಯಿತು. ತಡೆಯಲಿಲ್ಲ. ಇನ್ನೊಮ್ಮೆ ಮಮತೆಯ ಬಳಿಗೆ ನಡೆದನು. ಈಗ ಅವನ ಹಿಂದೆ, ಬೆಳ್ಳಿಯ ತಟ್ಟೆಗಳನ್ನು ಹಿಡಿದುಕೊಂಡು ಸಾಲಾಗಿ ಹತ್ತು ಜನ ಸೇವಕರು ಬರುತ್ತಿದ್ದರು. ಹೆಚ್ಚು ಜನರ ಹೆಜ್ಜೆಯ ಸದ್ದನ್ನು ಕೇಳಿ ಮಮತೆಯು ಕತ್ತನ್ನು ತಿರುಗಿಸಿದಳು. ಮಂತ್ರಿಯು ಅಪ್ಪಣೆಯಾಯಿತು. ಸೇವಕರು ತಟ್ಟೆಯನ್ನಿಟ್ಟು ಹೊರಗೆ ನಡೆದರು.

ಮಮತೆ ಕೇಳಿದಳು:— "ಅಪ್ಪಾ ಇದೇನು?"

"ನಿನಗಾಗಿ ತಂದ ಉಪಹಾರ, ಮಗಳೆ!"— ಎಂದುಹೇಳಿದವನೇ ಜೂಡಾಮಣಿರಾಯ ತಟ್ಟೆಗಳ ಮೇಲುಹೊದಿಕೆಯನ್ನೆತ್ತಿದನು. ಭಂಗಾರದ ಹಳದಿ ಬಣ್ಣವು, ಸಂಧ್ಯಾಕಾಲದ ಸುವರ್ಣಪ್ರಕಾಶದಲ್ಲಿ ಲೀನವಾಯಿತು. ಮಮತೆ ಬೆಚ್ಚಿದಳು.

"ಇಷ್ಟು ಸುವರ್ಣ! ಎಲ್ಲಿಂದ ಬಂತು?"

"ಸುಮ್ಮನಿರು, ಮಮತಾ! ನಿನಗಾಗಿ...."

"ಯವನರಿಂದ ಲಂಚವನ್ನು ತಿಂದಿರೆಂದು ತೋರುವುದು. ಅಪ್ಪಾ, ಇದು ಅನರ್ಥವಲ್ಲದೆ ಅರ್ಥವೆಂದಿಗೂ ಅಲ್ಲ. ಹಿಂದಕ್ಕೆ ಕೊಟ್ಟುಬಿಡಿ! ನಾವು ಬ್ರಾಹ್ಮಣರು, ಈ ಸುವರ್ಣವನ್ನು ಹಿಡಿದುಕೊಂಡು ಮಾಡುವುದಾದರೂ ಏನು?"

"ಈ ಪತನೋನ್ಮುಖ ಸಾಮಂತವಂಶದ ಅಂತ್ಯಕಾಲ ಸಮೀಪಿಸುತ್ತಲಿದೆ. ಮಗಳೇ! ಷೇರಶಹನು ರೋಹತಾಸವನ್ನು ವಶಮಾಡಿಕೊಳ್ಳಬಲ್ಲನು. ಆ ಸಂದರ್ಭಕ್ಕಾಗಿ!"

"ದೇವಾ! ಆ ಸಮಯಕ್ಕೊಸ್ಕರ! ವಿಪತ್ಕಾಲಕ್ಕಾಗಿ! ಇಂತಹ ಆಯೋಜನೆ! ನಿಯತಿಗೆ ವಿರುದ್ಧವಾಗಿ ಇಷ್ಟು ಸಾಹಸ! ಅಪ್ಪಾ, ಆಗ ಭಿಕ್ಷೆ ಸಿಕ್ಕದೇನು? ಏಕೆ, ಭೂಮಿಯ ಮೇಲೆ ಬ್ರಾಹ್ಮಣರಿಗೆ ಎರಡು ಹಿಡಿ ಅನ್ನಹಾಕಲು ಒಬ್ಬ ಹಿಂದುವಾದರೂ ಉಳಿಯನೆ? ಎಂತಹ ಮಾತು? ಇದನ್ನು ಮರಳಿಸಿರಿ! ನನ್ನ ಅಂಗಾಂಗಗಳು ನಡುಗುತ್ತಿವೆ— ಈ ಸುವರ್ಣದ ಹೊಳಪಿನಿಂದ ನನ್ನ ಕಣ್ಣು ಕುರುಡಾಗುತ್ತಿವೆ! ನನ್ನ ದೃಷ್ಟಿಗೆ ಇದು ಕಾಣಿಸದಿರಲಿ!"

"ಮೂಢೆ!"— ಜೂಡಾಮಣಿರಾಯ ಹೊರಟುನಡೆದನು.

* * *

ಮರುದಿನ ಸಾಲು-ಸಾಲಾಗಿ ದೋಲಿಗಳು ಬರತೊಡಗಿದುವು. ಜೂಡಾಮಣಿರಾಯನ ಎದೆಯೊಳಗೆ ಡವಡವ ಎನ್ನುತಿತ್ತು. ದುರ್ಗದ ಹೆಬ್ಬಾಗಿಲಲ್ಲಿ ಅವುಗಳ ಮೇಲುಹೊದಿಕೆಯನ್ನು ತೆಗೆಯಿಸಬೇಕೆಂದು ಮಂತ್ರಿ ಕೇಳಿಕೊಂಡ. ಪಠಾಣರೆಂದರು: "ಇದು ಸ್ತ್ರೀಯರ ಅವಮಾನ!" ಮಾತು ಮುಂದುವರಿಯಿತು. ಕೈಗೆ ಕೈಯಾಯಿತು. ಬ್ರಾಹ್ಮಣ ಮಂತ್ರಿ ಜೂಡಾಮಣಿ ಸತ್ತುಬಿದ್ದನು. ದುರ್ಗದೊಳಗಿದ್ದ ರಾಜ, ರಾಣಿ, ಬೊಕ್ಕಸ, ಭಂಡಾರ ಎಲ್ಲಾ ಷೇರಶಹನ ವಶವಾಯಿತು. ಆದರೆ ಮಮತೆ ಮಾತ್ರ ಸಿಕ್ಕಲಿಲ್ಲ.

---

* ಇವರು ಹಿಂದೀ ಕಥಾಸಾಹಿತ್ಯ ಪ್ರಪಂಚದಲ್ಲಿ ಹೆಸರುಮಾಡಿದವರು. ಅವರ ಈ ಕಥೆಯನ್ನು ಶ್ರೀ. ಕು. ಶಿ. ಹರಿದಾಸ 'ಕನ್ನಡಜಾಣ' ಉಡುಪಿ ಅವರು ಅನುವಾದಿಸಿರುವರು.

ದೋಲಿಯೊಳಗಿಂದ ಹೊರಬಿದ್ದ ಪಠಾಣರು ಬಹಳ ಹುಡುಕಿದರೂ ಏನೂ ಪ್ರಯೋಜನವಿಲ್ಲದೆ ಹೋಯಿತು.

* * *

ಕಾಶಿಯ ಉತ್ತರಕ್ಕೆ ಧರ್ಮಚಕ್ರ ವಿಹಾರವು, ಮೌರ್ಯ ಮತ್ತು ಗುಪ್ತ ಸಮ್ರಾಟರ ಕೀರ್ತಿಯ ಅವಶೇಷವಾಗಿತ್ತು. ಭಗ್ನಕಲಶಗಳೂ, ಹುಲ್ಲು-ಹಾವಸೆಗಳಿಂದ ಮುಚ್ಚಿದ ಗೋಡೆಗಳೂ, ಕಲ್ಲು-ಮಣ್ಣು ರಾಶಿಯ ನಡುವೆ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದ ಭಾರತೀಯ ಶಿಲ್ಪಕಲೆಯ ! ಮೂರ್ತಿಗಳೂ, ಬೇಸಗೆಯ ರಾತ್ರಿಯಲ್ಲಿ ಶೀತಾಂಶುವಿನ ಕಿರಣಗಳಿಂದ ತಮ್ಮನ್ನು ನೆನೆಯಿಸಿಕೊಳ್ಳುತ್ತಿದ್ದುವು.

ಮಹಾತ್ಮಾ ಗೌತಮಬುದ್ಧನ ಉಪದೇಶಶ್ರವಣಕ್ಕಾಗಿ ಎಲ್ಲಿ ಭಿಕ್ಷುಗಳು ತಂಡೋಪತಂಡವಾಗಿ ಸೇರುತ್ತಿದ್ದರೋ, ಅದೇ ಸ್ತೂಪದ ಭಗ್ನಾವಶೇಷದ ಪಡಿನೆರಳ ಸಮೀಪದಲ್ಲೇ ಒಂದು ಗುಡಿಸಿಲಲ್ಲಿ, ಒಬ್ಬಳು ಹೆಂಗುಸು ಪಾರಾಯಣ ಮಾಡುತ್ತಿದ್ದಳು: **" ಅನನ್ಯಾಶ್ಚಿಂತಯಂತೋಮಾಂ ಯೇಜನಾಃ ಪರ್ಯುಪಾಸತೇ...."**

ಒಮ್ಮಿಂದೊಮ್ಮೆ ಪಾಠ ನಿಂತಿತು. ಮುಂದವಾದ ಒಂದು ಭೀಷಣ ಆಕೃತಿಯು ದೀಪದ ಪ್ರಕಾಶದಲ್ಲಿ ಗೋಚರವಾಯಿತು. ಹೆಂಗುಸು ಕದಮುಚ್ಚುವುದೆಂದು ಎದ್ದಳು. ಆ ವ್ಯಕ್ತಿ ಎಂದಿತು:— " ತಾಯಿಾ, ನನಗೆ ನೆರವು ಬೇಕಾಗಿದೆ ! "

" ನೀನು ಯಾರು ? "— ಹೆಂಗುಸು ಕೇಳಿದಳು.

" ನಾನೊಬ್ಬ ಮೊಗಲನು. ಚೌಸಾಯುದ್ಧದಲ್ಲಿ ಷೇರಶಹನಿಂದ ಸೋಲಿಸಲ್ಪಟ್ಟಿರುವೆ. ಈಗ ಆಶ್ರಯಾಪೇಕ್ಷಿಯಾಗಿರುವೆ. ಅಮ್ಮಾ, ಈ ರಾತ್ರಿ ಮುಂದೆ ಹೋಗಲು ಕಾಲೇಬಾರದು ! "

" ಷೇರಶಹನಿಂದ ! "— ಸ್ತ್ರೀ ಅವಡುಗಚ್ಚಿದಳು.

" ಹೌದಮ್ಮಾ ! "

" ಆದರೆ ನೀನೂ ಅವನಂತೆಯೆ ಅಲ್ಲವೆ ? ಅದೇ ರಕ್ತದ ಬಯಕೆ, ಅದೇ ನಿಷ್ಠುರ ಪ್ರತಿಬಿಂಬ ನಿನ್ನ ಮುಖದಲ್ಲೂ ಇದೆ ! ಮುಂದೆ ನಡೆ, ಬೇರೆ ಎಲ್ಲಾದರೂ ಎಡೆ ದೊರೆತೀತು ! "

" ನನ್ನ ಕೊರಳಾಣೆ ತಾಯಿಾ ! ಸಹಚರರು ಹಿಂದುಳಿದರು, ಕುದುರೆಯೂ ಬಿದ್ದುಬಿಟ್ಟಿತು .... ಈಗ ಹೇಗೆ ಮುಂದೆ ನಡೆಯಲಿ ? "— ಹೇಳುತ್ತಾ ಹೇಳುತ್ತಾ ವ್ಯಕ್ತಿಯು ಆಯಾಸದಿಂದ ಕುಳಿತೇ ಬಿಟ್ಟನು. ಅವನಿಗೆ ತನ್ನ ಮುಂದೆ ಇಡಿ ಬ್ರಹ್ಮಾಂಡವೇ ಸುತ್ತುತ್ತಿರುವಂತೆ ಭಾಸವಾಗುತ್ತಿತ್ತು. ಹೆಂಗುಸು ಆಲೋಚಿಸುತ್ತಿದ್ದಳು: " ಇದೊಂದು ಹೊಸ ವಿಪತ್ತು ! " ನೀರನ್ನು ಕೊಟ್ಟಳು. ಮೊಗಲನ ಪ್ರಾಣ ಉಳಿಯಿತು. ಆಪಳು ಪುನಃ ಚಿಂತಿಸತೊಡಗಿದಳು: " ನನ್ನ ತಂದೆಯನ್ನು ಕೊಂದ ಶತ್ರು ! " ತಿರಸ್ಕಾರಯುಕ್ತವಾದ ಅವಳ ಮುಖದಲ್ಲಿ ಚಿಂತೆಯ ಒಂದು ರೇಖೆ ಹರಿಯಿತು.

ಸ್ವಲ್ಪ ಹಾಯೆನಿಸಿದ ಬಳಿಕ ಮೊಗಲನು ಕೇಳಿದನು: " ಹಾಗಾದರೆ ನಾನು ಹೊರಡಲೇನಮ್ಮಾ ? "

ಹೆಂಗುಸು ಆಲೋಚನಪರಳಾಗಿದ್ದಳು—" ನಾನು ಬ್ರಾಹ್ಮಣಿ. ನನಗಾದರೋ ಸ್ವಧರ್ಮರಕ್ಷಣೆ— ಅತಿಥಿದೇವನ ಸೇವೆ—ಇವೇ ಕರ್ತವ್ಯ. ಆದರೆ, ಇಲ್ಲ .... ಇಲ್ಲ ಇಲ್ಲ ! ವಿಧರ್ಮಿಗಳು ದಯಾಪಾತ್ರರೆಂದಿಗೂ ಆಗಲಾರರು ! ಆದರೆ ಇದು ದಯೆಯಲ್ಲ ವಲ್ಲಾ .... ಕರ್ತವ್ಯ ! ಹಾಗಾದರೆ ? .... "

ಮೊಗಲನು ಎದ್ದು ನಿಂತನು. ಮಮತೆ ಎಂದಳು:— " ನಿನ್ನದೂ ಹಟವೆ ! ಇರು, ಇರು ! "

" ಹಟವೇ ? ಇಲ್ಲವಮ್ಮಾ ಇಲ್ಲ ! ಧೀರ ತೈಮೂರನ ವಂಶೀಯನು ಒಬ್ಬ ಸ್ತ್ರಿಯೊಂದಿಗೆ ಛಲಮಾಡ್ಯಾನೆ ? ಎಲ್ಲಾ ದೈವದಾಟ ! "

ಮಮತೆ ಮನಸಿನಲ್ಲಿ ಯೋಚಿಸಿದಳು ! " ಇಲ್ಲಿ ದುರ್ಗ ಯಾವುದೂ ಇಲ್ಲವಷ್ಟೆ ? ಇರುವುದು ಗುಡಿಸಿಲು ಒಂದೇ...." ಮೊಗಲನ ಕೂಡೆ ಹೇಳಿದಳು: " ಒಳಗೆ ಹೋಗು ! ನೀನು ಯಾರೇ ಆಗು, ನಾನು ನಿನಗೆ ಆಶ್ರಯ ಕೊಡುವೆನು ! ಬೇರೆಯವರು ಧರ್ಮವನ್ನು ಬಿಟ್ಟರೆಂದು ನಾನೂ ಬಿಡಲೇಕೆ ? " ಮುಂದವಾದ ತಿಂಗಳ ಬೆಳಕಿನಲ್ಲಿ ಮೊಗಲನು ಆ ಮಹಿಮಾಮಯ ಮುಖಮಂಡಲವನ್ನು ನೋಡಿ ಮನಸ್ಸಿನಲ್ಲೇ ನಮಸ್ಕರಿಸಿದನು. ಮಮತೆಯು ಗೋಡೆಯ ಸಂದಿನಿಂದ ಹೊರಗೆ ಹೋದಳು. ಪಥಿಕನು ಒಳಗೆ ವಿಶ್ರಮಿಸಿದನು.

* * *

ಮುಂಜಾನೆ ಮಮತೆಯು, ಆ ಹಾಳು ಸ್ತೂಪದ ಸಂದಿನಿಂದ ನೂರಾರು ಅಶ್ವಾರೋಹಿಗಳು ಸುತ್ತುತ್ತಿದ್ದುದನ್ನು ಕಂಡಳು. ತನ್ನ ಮೂರ್ಖತೆಗೆ ತಾನೇ ಬೈದುಕೊಂಡಳು.

ಗುಡಿಸಿಲಿನಿಂದ ಹೊರಬಂದು ಪಥಿಕನು ಹೇಳಿದನು:— " ಮಿರ್ಜಾ, ನಾನಿಲ್ಲಿರುವೆನು ! " ಶಬ್ದವನ್ನು ಕೇಳಿದೊಡನೆ ಶತಸಹಸ್ರ ಕಂಠಗಳಿಂದ ಜೀತ್ಕಾರಧ್ವನಿಯು ಹೊರಟಿತು. ಮಮತೆ ಇನ್ನಷ್ಟು ಬೆದರಿದಳು. ಪಥಿಕನು ಕೇಳುತ್ತಿದ್ದನು. " ಆ ಹೆಂಗುಸಿನಲ್ಲಿ ? ಅವಳನ್ನು ಹುಡುಕಿರಿ ! " ಮಮತೆ ಅಂಧಕಾರಮಯವಾದ ಒಂದು ಗುಹೆಯನ್ನು ಹೊಕ್ಕು ಅಡಗಿ ಕುಳಿತಳು. ಆ ದಿನವಿಡೀ ಅದರಿಂದ ಹೊರಬೀಳಲಿಲ್ಲ. ಸಂಜೆಗೆ ಅವರು ಹೊರಡಲುಪಕ್ರಮಿಸಿದರು. ಸಂದಿನಿಂದಲೇ ಮಮತೆಗೆ ಅಶ್ವಾರೋಹಿ ಪಥಿಕನ ಈ ಶಬ್ದಗಳು ಕೇಳಿಸಿದುವು:— " ಮಿರ್ಜಾ, ಆ ಹೆಂಗುಸಿಗೆ ನಾನೇನನ್ನೂ ಕೊಡಲಾರದೆ ಹೋದೆನು. ಆವಳಿಗೆ ಇಲ್ಲೊಂದು ಮನೆಯಾಗಬೇಕು. ಸ್ಥಳ ಯಾವುದೆಂದು ಮರೆತುಹೋಗದಷ್ಟೆ ? " ಆಮೇಲೆ ಅವರು ಹೊರಟು ಹೋದರು.

* * *

ಈ ಘಟನೆಯು ನಡೆದು ಆದೆಷ್ಟೋ ದಿನಗಳು ಉರುಳಿ ಹೋದುವು. ಅವಳು ತನ್ನ ಗುಡಿಸಿಲಲ್ಲಿ ರುಗ್ಣಶಯ್ಯೆಯಲ್ಲಿ ಮಲಗಿದ್ದಳು. ಚಳಿಗಾಲದ ಪ್ರಭಾತ ಸಮಯವಾಗಿತ್ತು. ಅವಳ ಸವೆದು ಹೋದ ಎಲುಬಿನ ಗೂಡು ಕೆಮ್ಮು-ಗೂರಲು ಗಳಿಂದ ಪ್ರತಿಧ್ವನಿಸುತ್ತಿದ್ದಿತು. ಮಮತಾಮಾತೆಯ ಸೇವೆಗಾಗಿ ಆ ಗ್ರಾಮದ ಮೂವರು ಸ್ತ್ರೀಯರು ಆಕೆಯ ಸುತ್ತು ಮುತ್ತಲೂ ಕುಳಿತಿದ್ದರು; ಏಕೆಂದರೆ ಅವಳು ಆಜೀವನ ಗ್ರಾಮದ ಜನರ ಸುಖ-ದುಃಖಗಳಲ್ಲಿ ಭಾಗಿಯಾಗಿರುತ್ತಿದ್ದಳು.

ಮಮತೆಗೆ ನೀರಡಿಕೆಯಾಯಿತು. ಒಬ್ಬಳು ನೀರು ಕುಡಿಸಿದಳು. ಅಷ್ಟರಲ್ಲೇ ಒಬ್ಬ ಸವಾರನು ಮನೆಯ ಬಾಗಿಲ ಮುಂದೆ ಏನೋ ಹೇಳಿಕೊಳ್ಳುತ್ತಿದ್ದುದು ಕಂಡು ಬಂತು:—"ಮಿರ್ಜಾನ ನಕ್ಷೆಯನ್ನು ಪರೀಕ್ಷಿಸಿದರೆ ಆ ಸ್ಥಳ ಇದೇ ಇರಬೇಕು, ಸಂಶಯವಿಲ್ಲ! ಆ ಮುದುಕಿ ಸತ್ತಿರಬಹುದು. ಬಾದಶಹ ಹುಮಾಯೂನನು ಆದೊಂದು ದಿನ ವಿಶ್ರಾಂತಿ ಪಡೆದ ಮನೆಯಾವುದೆಂದು ಕೇಳುವುದಾದರೂ ಯಾರನ್ನು? ಇದು ನಡೆದುದಾದರೋ—ನಾಲ್ವತ್ತೇಳು ವರುಷಗಳ ಹಿಂದೆ!"

ಮಮತೆಯ ಕಿವಿಗೆ ಅಸ್ಪಷ್ಟವಾಗಿ ಈ ಮಾತುಗಳು ಕೇಳಿಸಿದುವು. ಅವಳು ಒಬ್ಬ ಹೆಂಗುಸಿನ ಹತ್ತಿರ ಆ ಅಶ್ವಾರೋಹಿಯನ್ನು ಕರೆತರುವಂತೆ ಹೇಳಿದಳು.

ಸವಾರನು ಹತ್ತಿರಬಂದನು. ಮಮತೆ ಗದ್ಗದ ಸ್ವರದಿಂದ ಹೇಳಿದಳು:—"ಅವನು ಬಾದಶಹನೋ, ಸಾಧಾರಣ ಮೊಗಲನೋ ಎಂಬುದನ್ನು ನಾನರಿಯೆ; ಅಂತೂ ಅವನೊಂದು ದಿನ ಇದೇ ಗುಡಿಸಿಲಿನ ಕೆಳಗೆ ಮಲಗಿದ್ದುದೇನೋ ಸಹಜ. ಅವನು ನನ್ನ ಮನೆಯ ಜೀರ್ಣೋದ್ಧಾರಮಾಡಬೇಕೆಂದು ಹೇಳಿದುದು ಕೇಳಿತು. ಎಲ್ಲಿ ನನ್ನ ಪ್ರೀತಿಯ ಗುಡಿಸಿಲು ಮಣ್ಣುಪಾಲಾಗುವುದೋ ಎಂದು ನಾನು ಜೀವನ ಪರ್ಯಂತ ಮನೆಯಿಂದ ಹೊರಗೆ ಕಾಲಿಡಲಿಲ್ಲ. ಭಗವಂತನು ನನ್ನ ಮಾತನ್ನು ಮನ್ನಿಸಿದ. ಇಂದು ನಾನು ಇದನ್ನು ತೊರೆಯುವವಳಿದ್ದೇನೆ. ಇನ್ನು ನೀನಿಲ್ಲಿ ಮನೆ ಕಟ್ಟಿಸು ಇಲ್ಲವೆ ರಾಜಮಹಲನ್ನು ನಿರ್ಮಿಸು; ನಾನಂತೂ ನನ್ನ ಚಿರ ವಿಶ್ರಾಮಗೃಹಕ್ಕೆ ಹೋಗುವೆನು!"

ಸವಾರನು ಆವಾಕ್ಕಾದನು! ಮುದುಕಿಯ ಪ್ರಾಣಪಕ್ಷಿಯು ಆನಂತದಲ್ಲಿ ಲೀನವಾಯಿತು.

ಅಲ್ಲೇ ಒಂದು ಅಷ್ಟಕೋಣಾಕೃತಿಯ ಮಂದಿರದ ನಿರ್ಮಾಣವಾಯಿತು. ಅದರಲ್ಲಿದ್ದ ಒಂದು ಶಿಲಾಲೇಖದಲ್ಲಿ ಹೀಗೆ ಬರೆದಿತ್ತು:

"ಏಳೇಳು ದೇಶಗಳ ನರೇಶನಾದ ಹುಮಾಯೂನನು, ಒಂದು ದಿನದ ಮಟ್ಟಿಗೆ ಇಲ್ಲಿ ವಿಶ್ರಾಂತಿಯನ್ನು ಪಡೆದಿದ್ದುದರ ಪುಣ್ಯಸ್ಮರಣೆಗಾಗಿ ಅವರ ಪುತ್ರ ಅಕ್ಬರನು ಈ ಗಗನ ಚುಂಬಿತ ಮಂದಿರವನ್ನು ಕಟ್ಟಿಸಿರುವನು!"

ಆದರೆ .... ಮುಮತೆಯ ಹೆಸರು ಅಲ್ಲೆಲ್ಲಿಯೂ ಕಾಣಿಸಲಿಲ್ಲ!

ಪುಟ್ಟದೊಂದು ಪಟ್ಟಣ

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ. ಪುಣೆ

ಪುಟ್ಟದೊಂದು ಪಟ್ಟಣ—
ನನ್ನ ಪುಟ್ಟ ಚಿತ್ತದಲ್ಲಿ....

೧

ನನ್ನ ಪುಟ್ಟ ಚಿತ್ತದಲ್ಲಿ ಪುಟ್ಟದೊಂದು ಪಟ್ಟಣ;
ಆ ಪುಟ್ಟ ಪಟ್ಟಣದಲಿ ಪುಟ್ಟದೊಂದು ತೋಟ!
ತೋಟದಲ್ಲಿ ಬಯಕೆಬಳ್ಳಿ | ಹೂವ ಬಿಟ್ಟು ಪಸರನುಟ್ಟು
ಬಾಗಿ ಬಳುಕಿ ನಿಂದಿರೆ | ತೂಗು-ಬಿಳಲ ಹೊಂದಿರೆ—
ತೂಗಿಕೊಂಡು ತಿಳ್ಳಿಯಾಡಿ | ಸುಳ್ಳುಸುಳ್ಳೆ ಸುಳಿದು ಹಾಡಿ
ಆ ತೋಟದಲ್ಲಿ ನಲಿಯುವೆ || ಪುಟ್ಟದೊಂದು....

೨

ಪುಟ್ಟದೊಂದು ಪಟ್ಟಣ—
ನನ್ನ ಪುಟ್ಟ ಚಿತ್ತದಲ್ಲಿ....

೪

ಪುಟ್ಟ ಪಟ್ಟಣದಲಿ ಎಲ್ಲ ಪುಟ್ಟ ಪುಟ್ಟ ಮಾತು,
ಪುಟ್ಟ ಕಾಲು, ಪುಟ್ಟ ಕಣ್ಣು, ಪುಟ್ಟ ನಡಿಗೆ, ನೋಟ,
ಪುಟ್ಟ ಉಡಿಗೆ, ಪುಟ್ಟ ತೊಡಿಗೆ | ಪುಟ್ಟ ಹಗಲು, ಪುಟ್ಟ ಇರುಳು,
ಪುಟ್ಟತನವು ನೆರೆದಿರೆ | ಇಷ್ಟಸುಖವು ತೆರೆದಿರೆ—
ಪುಟ್ಟ ನಲ್ಲೆ-ನಲ್ಲರೆಲ್ಲ | ಒಟ್ಟುಕೂಡಿ ನಲಿವರಲ್ಲಿ
ದಿಟ್ಟತನದಿ ಸರಸವಾಡುತ! || ಪುಟ್ಟದೊಂದು....

೩

ಶ್ರಾವಣನು ನಗುನಗುತ | ಬರಲು ಮುಗಿಲ ನಲುನೆಗೆತ
ಕಂಡು ಕೋಗಿಲೆತ್ತಲು | ಹಿಗ್ಗಿ ದನಿಯನೆತ್ತಲು—
ಅದರ ದನಿಗೆ ದನಿಯ ಕೂಡಿಸುತ್ತ ಮೆಲ್ಲಮೆಲ್ಲನಲ್ಲಿ
ಮುದನ ಹೀರಿ ಮುದವ ಬೀರುವೆ! ||

೫

ನನ್ನ ಪುಟ್ಟ ಪಟ್ಟಣದಲಿ ನನ್ನ ಪುಟ್ಟ ಬಾಳಬೆಳಗಿ
ನನ್ನ ನಾನು ಮರೆತಿರೆ | ನನ್ನೊಳಾನು ಬೆರೆತಿರೆ—
ನನ್ನ ಬಯಕೆ ಮಲರಿ ಕಂಪ ಸೂಸುತಿರಲು **ದೊಡ್ಡ ಜಗದ**
ಕಳ್ಳಬಂದು ಕೊಯ್ದು ಬಿಟ್ಟನೇ— ಹಾ ಹಾ! ||

ನಮ್ಮ ಊಟ

(೩)

ಆದರ್ಶ ಆಹಾರ

ಶ್ರೀ. ಬಿದರಕುಂದಿ ವೆಂಕಟರಾಯರು, ನಂದಗಡ

★

"ನವೆಂಬರ ೧೯೪೨ ಮತ್ತು ಜನವರಿ ೧೯೪೩ ನೆಯ ಸಂಚಿಕೆಗಳಲ್ಲಿ, ಮೇಲಿನ ತಲೆಬರೆಹವನ್ನಿಟ್ಟು ಆಹಾರಶಾಸ್ತ್ರದ ವಿಷಯವಾಗಿ ಸಾಕಷ್ಟು ತಿಳಿವಳಿಕೆಯನ್ನು ಮಾಡಿಕೊಟ್ಟಿರುವಿರಿ; ಆದರ್ಶ ಆಹಾರವೆಂದರೆ ಬಹಳ ಬೆಲೆಯುಳ್ಳ ಶಕ್ತಿವರ್ಧಕ ಔಷಧಗಳನ್ನು ಮಿಶ್ರಮಾಡಿದ— (ಚಿನ್ನದವರ್ಖ್, ಮೌಕ್ತಿಕಭಸ್ಮ ಇತ್ಯಾದಿ) ಆಹಾರವಿರಬಹುದು; ಅದು ಸಾಮಾನ್ಯ ಜನರಿಗೆ ಹೇಗೆ ಪೂರಯಿಸಬೇಕು? ಅಲ್ಲದೆ ಈಗಿನ ತುಟಾಗ್ರತೆಯ ದಿನಗಳಲ್ಲಿ ಇದೇನು ಬರೆಯುವಿರಿ?—ಅನ್ನ ದೊರೆಕಿಸುವ ಬಗೆಯನ್ನು ತಿಳುಹಿದರೆ ಬಡಬಗ್ಗರಿಗೆ ಕಲ್ಯಾಣವಾದೀತು!" ಎಂಬ ಅರ್ಥದ ಎರಡು ಪತ್ರಗಳು ನನ್ನ ಗೆಳೆಯರಿಂದ ಬಂದಿವೆ. ಅಲ್ಲದೆ ಕೆಲವರು ಇದೇ ಅರ್ಥದ ಪ್ರಶ್ನೆಗಳನ್ನು ಪ್ರತ್ಯಕ್ಷವಾಗಿಯೂ ಕೇಳಿದರು. ಆಹಾರ ಪದಾರ್ಥಗಳನ್ನು ದೊರೆಕಿಸಿಕೊಡುವುದು ಅಥವಾ ಪೂರಯಿಸಿಕೊಡುವುದು, ಮತ್ತು ನಾಗರಿಕರ ಯೋಗ್ಯತೆಗೆ ಸರಿಯಾದ ಧಾರಣೆಯಿಂದ ಮಾರುವುದು, ಇತ್ಯಾದಿ ಜನರ ಸೌಕರ್ಯಗಳನ್ನೂ ಬಡವರಿಗೆ ಕೂಲಿಕುಂಬಳಯನ್ನೂ ಪೂರಯಿಸಿಕೊಡುವುದು ಇದೆಲ್ಲ ಸರಕಾರದವರ ಕೆಲಸ. ಇದರ ಊಹಾಪೋಹ ವಿಚಾರಗಳನ್ನೂ ನೀವೇ ಮಾಡಿರಿ! ಇನ್ನೂ ಈ ಹೊಣೆಯನ್ನು ಸಹಕಾರಸಂಘದವರು ವ್ಯಾಪಾರಸ್ಥರು ಮತ್ತು ಶ್ರೀಮಂತರು ಎತ್ತಿಹಿಡಿದರೆ ಭಾರ ಕಡಿಮೆಯಾಗಬಹುದು. ನಮ್ಮಿಂದಲೆ ಧನಿಕರಾದ ಲಕ್ಷ್ಮೀಪುತ್ರರು ತಮ್ಮ ಲಾಭಬಡಕತನದ ಕೆಲವಂಶವನ್ನು ಕಡಿಮೆಮಾಡಿದರೂ ಎಷ್ಟೋ ಉಪಕಾರ ಮಾಡಿದಂತಾಗುವುದು. ಇದರ ವಿಷಯವಾಗಿ ಬರೆಯುತ್ತ ಹೋದರೆ ಪ್ರಸ್ತುತ ಲೇಖನದವಿಚಾರವನ್ನೇ ಬಿಡಬೇಕಾಗುವುದು. ಆದರೂ ಆಹಾರದ ದುಂದುಗಾರಿಕೆ, ಕೆಡಿಸಿ ಒಗೆಯುವುದು ಮೊದಲಾದ ಕೆಟ್ಟ ಪದ್ಧತಿಗಳ ವಿಷಯವಾಗಿ ಮತ್ತು ಆಹಾರ ಪದಾರ್ಥಗಳಲ್ಲಿ ಮಿತವ್ಯಯ, ಹಿತ್ತಲಲ್ಲಿ ಬಳಸಿದ ನೀರಿನಿಂದ ಸೊಪ್ಪು–ಕಾಯಿಪಲ್ಲೆಗಳನ್ನು ಬೆಳೆಯಿಸುವ ವಿಧಾನಗಳ ವಿಷಯವಾಗಿ ಒಂದು ಸ್ವತಂತ್ರವಾದ ಬರೆಹದಲ್ಲಿ ಬರೆಯಬೇಕೆಂದಿರುವೆನು.

ಇನ್ನು 'ಆದರ್ಶಆಹಾರ' ಎಂದರೆ ಬಹಳ ಬೆಲೆಯುಳ್ಳದ್ದೆಂದು ತಿಳಿದುಕೊಳ್ಳುವುದು ಶುದ್ಧ ತಪ್ಪು. ಈಗಿನ ಆಹಾರ ಪದಾರ್ಥಗಳ ಅಭಾವದ ದಿನಗಳಲ್ಲಿ ಕೂಡ—ಹೇಗಾದರೂ ಮಾಡಿ—ಆಹಾರ ಪದಾರ್ಥಗಳನ್ನು ಪ್ರತಿಯೊಬ್ಬರೂ ದೊರೆಕಿಸುವರು. ಅವುಗಳಲ್ಲಿಯೇ ಶರೀರದ ಪೋಷಣೆಗೆ ಮತ್ತು ಬೆಳವಣಿಗೆಯ ಸಲುವಾಗಿ, ಜಡ ಪದಾರ್ಥಗಳಲ್ಲಿಯೇ ಕಣ್ಣಿಗೆ ಕಾಣದಾದ ಕ್ಯಾಲ್ಶಿಯಮ್, ಫಾಸ್‌ಫರಸ್, ಪೋಟ್ಯಾಶಿಯಮ್ ಮತ್ತು ಲೋಹ ಮೊದಲಾದ ಖನಿಜ ಪದಾರ್ಥಗಳೂ, ಕ್ವಾರಗಳೂ, ಅ. ಬ. ಕ. ಡ. ಈ ಜೀವಸತ್ತ್ವಗಳೂ ಇರುವುವು. ಅವನ್ನು ನಾಶಮಾಡದೆ ಅಡಿಗೆಯನ್ನು ಮಾಡಿ ಉಣ್ಣುವುದೆಂದರೆಯೆ ಆದರ್ಶಾಹಾರವನ್ನುಂಡಂತೆ.

ಈ ಎಲ್ಲ ಖನಿಜಪದಾರ್ಥಗಳೂ ಜೀವಸತ್ತ್ವಗಳೂ ಕ್ವಾರದ್ರವ್ಯವೂ ಫಲಶರ್ಕರೆಯೂ ಒತ್ತಟ್ಟಿಗೆ ಸಿಕ್ಕುವ ಆಹಾರವೆಂದರೆ ಫಲಾಹಾರ. ಶ್ರೀಮಂತರಿಗೂ ರೋಗಿಗಳಿಗೂ ಕಾದಿಟ್ಟ ನಾರಂಗಿ,

★

ನಮ್ಮ ಜೀವನಕ್ಕೆ ಪೋಷಕವಾಗಿರುವ ಖನಿಜ ಪದಾರ್ಥಗಳೂ ಕ್ವಾರ ಮತ್ತು ಎಲ್ಲ ಜೀವಸತ್ತ್ವಗಳೂ ಇರುವ ಆಹಾರಪದಾರ್ಥಗಳೆಂದರೆ ಹಣ್ಣು, ಹಸಿರುಸೊಪ್ಪು, ಕಾಯಿಪಲ್ಲೆ. ಇವುಗಳನ್ನು ಒಳಗೊಂಡಿರುವ ಆಹಾರವೇ ಆದರ್ಶವಾದುದು.

★

ಮುಸುಂಬಿ, ಡಾಳಿಂಬ ಇತ್ಯಾದಿ ಹಣ್ಣುಗಳನ್ನು ಬಳಸುವುದು ನಮ್ಮಂತಹರಿಗೆ ಶಕ್ಯವಿರದಿದ್ದರೂ, ಋತುಮಾನಕ್ಕನುಸಾರವಾಗಿ ಆಗುವ ಸೀತಾಫಲ, ಹಲಸು, ಮಾವು, ಪಪಯಿ, ನೀರಲ, ಬೋರೆ, ಕವಳಿ, ಇ. ಹಣ್ಣುಗಳಲ್ಲಿಯೂ, ದಿನಾಲು ಸಿಕ್ಕುವ ಬಾಳೆ, ಟಾಮೇಟೊ, ಲಿಂಬೆ ಮೊದಲಾದ ಹಣ್ಣುಗಳಲ್ಲಿಯೂ ಈ ಪದಾರ್ಥಗಳು ಸಾಕಷ್ಟು ಸಿಕ್ಕುತ್ತವೆ. ಜೀವಸತ್ತ್ವಗಳನ್ನೂ ಕ್ವಾರವನ್ನೂ, ಇದ್ದುದಿದ್ದ ಹಾಗೆ ಆಹಾರದಲ್ಲಿ ಇರಿಸುವ ಬಗೆಗೆ ಹಿಂದಿನ ಲೇಖನದಲ್ಲಿ ಬರೆದಿರುವೆನು. ('ನಮ್ಮ ಊಟ' ಈ ಲೇಖನವನ್ನೂ ಓದುವಾಗ "ಜೀವಸತ್ತ್ವ" ಎಂಬ ಲೇಖನವನ್ನೂ ಓದಬೇಕು. ಅದು ಜಯಂತಿಯ ೧೯೪೧ ನೆಯ ಎಪ್ರಿಲ್‌ನಲ್ಲಿ ಪ್ರಸಿದ್ಧವಾಗಿದೆ.)

ನಮ್ಮ ದಿನದ ಊಟದಲ್ಲಿ ಧಾನ್ಯ, ಬೇಳೆ, ಸಕ್ಕರೆ, ಜಹಾ, ಕಾಫಿಗಳ ಸಮಾವೇಶವಾಗುತ್ತದೆ. ಇವೆಲ್ಲ ಆಮ್ಲಯುಕ್ತ ಪದಾರ್ಥಗಳಿರುವುವು. ಆಮ್ಲಯುಕ್ತ ಅನ್ನವನ್ನೇ ಹೆಚ್ಚಾಗಿ

ತಿನ್ನುವುದರಿಂದಲೇ ಹಿಂದುಸ್ತಾನದ ವಯೋಮಾನದ ಪ್ರಮಾಣವು ಬಹಳ ಕಡಿಮೆಯಾಗಿರುವುದೆಂದು ತಜ್ಞ ಡಾಕ್ಟರರ ಮತವಿದೆ. ಆದರ್ಶ ಆಹಾರದಲ್ಲಿ ೧೦೦ ಕ್ಕೆ ೬೦ ಕ್ಷಾರ, ಆಮ್ಲ ಎರಬೇಕು. ನಿರೋಗಿಯಾಗಿರುವ ಮನುಷ್ಯನ ಶರೀರದಲ್ಲಿ ಕ್ಷಾರ, ದ್ರವ್ಯದ ಪ್ರಮಾಣವು ವಿಪುಲವಾಗಿರುತ್ತದೆ, ರೋಗಿಯ ಶರೀರವು ಆಮ್ಲಮಯವಾಗಿರುವುದು. ಅದಕ್ಕಾಗಿ ಪ್ರತಿಯೊಬ್ಬರೂ ತನ್ನ ಶರೀರವನ್ನು ಕ್ಷಾರಯುಕ್ತವನ್ನಾಗಿ ಮಾಡಬೇಕು. ಎಂದರೆ ಸೊಪ್ಪು, ಕಾಯಿ-ಪಲ್ಲೆ, ಹಣ್ಣು-ಹಂಪಲಗಳನ್ನು ಊಟದಲ್ಲಿ ಹೆಚ್ಚಾಗಿ ಬಳಸಬೇಕು.

ಪಿಷ್ಟಮಯವಾದ ದಿನದ ಊಟದಲ್ಲಿಯ ಬಹು ದೊಡ್ಡ ಭಾಗವು ತ್ಯಾಜ್ಯವಾಗಿ ಹೊರಬಿದ್ದು, ಅತಿ ಸ್ವಲ್ಪ ಭಾಗವೇ ಶರೀರದಲ್ಲಿ ಕರಗುತ್ತದೆ. ಆದರೆ ಹಣ್ಣು-ಹಂಪಲಿನ ಎಲ್ಲ ಭಾಗವೂ ಶರೀರದಲ್ಲಿ ಏಕಜೀವವಾಗುತ್ತದೆ. ಹಣ್ಣುಗಳಲ್ಲಿ ಸಿಕ್ಕುವಷ್ಟು ಖನಿಜ, ಕ್ಷಾರ ಮತ್ತು ಜೀವಸತ್ತ್ವಗಳು ಬೇರೆ ಯಾವ ಪದಾರ್ಥಗಳಲ್ಲಿಯೂ ಸಿಕ್ಕಲಾರವು. ಕೆಲವು ಹಣ್ಣುಗಳಲ್ಲಿ ಆಮ್ಲದ್ರವ್ಯವಿದ್ದರೂ ಶರೀರದಲ್ಲಿ ಹೋದನಂತರ ಕ್ಷಾರದ್ರವ್ಯದಲ್ಲಿ ರೂಪಾಂತರವಾಗುತ್ತದೆ. ಅಂತೆಯೆ ಫಲಾಹಾರದಿಂದ ಜೀವಿಸುವ ಜನರು ದೀರ್ಘಾಯುಷಿಗಳಾಗುವರು. ಅಮೇರಿಕೆಯ ಜನರು ಅನ್ನಕ್ಕಾಗಿ ವೆಚ್ಚ ಮಾಡುವ ಹಣದಲ್ಲಿ, ೧೦೦ಕ್ಕೆ ೫೫ ರಂತೆ ಕೇವಲ ಹಣ್ಣಿಗಾಗಿ ಕಾದಿಡುವರು. ಅದರಿಂದಲೇ ಅವರ ಪಯೋಮಾನದ ಸರಾಸರಿ, ೫೫. ನಮ್ಮದು? ೨೩ ಮಾತ್ರ. ಹಣ್ಣುಗಳಲ್ಲಿ ಸಕ್ಕರೆಯ ಅಂಶವೂ ವಿಶೇಷವಾಗಿರುತ್ತದೆ. ಈ ಫಲಶರ್ಕರೆಯು ರಕ್ತದಲ್ಲಿ ತೀವ್ರವಾಗಿ ಶೋಷಿಸಲ್ಪಟ್ಟು ರಕ್ತವಾಹಿನಿಗಳಿಗೆ ನವಚೈತನ್ಯವನ್ನುಂಟುಮಾಡುತ್ತವೆ.

ಇನ್ನು ಅನ್ನದಲ್ಲಿಯ ಉಷ್ಣತೆಯ ಮಾನವನ್ನು ಕ್ಯಾಲೊರಿ ಎಂಬ ಮಾನದಿಂದ ಅಳೆದು ಪ್ರತಿಯೊಬ್ಬ ಮನುಷ್ಯನಿಗೆ ಸರಾಸರಿ ೩೫೦೦ ಕ್ಯಾಲೊರಿ ಉಷ್ಣತೆಯುಳ್ಳ ಅನ್ನ ಬೇಕಾಗುವುದೆಂಬುದಾಗಿ ಶಾಸ್ತ್ರಜ್ಞರು ಕಂಡು ಹಿಡಿದಿರುವರು.

ಈ ಕ್ಯಾಲೊರಿಯಲ್ಲಿ ಸಣ್ಣ ಕ್ಯಾಲೊರಿ ದೊಡ್ಡ ಕ್ಯಾಲೊರಿ ಎಂದು ಎರಡು ಜಗೆಯವಿರುವವು. ವಿಜ್ಞಾನ ಶಾಸ್ತ್ರಜ್ಞರು ಸಣ್ಣ ಕ್ಯಾಲೊರಿಯಿಂದ ಅಳತೆ ಮಾಡುವರು. ಎರಡುವರೆ ಪೌಂಡು ತೂಕಕ್ಕೆ ಉಷ್ಣತಾ ಮಾನದ ಹತ್ತು ಸೆಂಟಿಗ್ರೇಡ್ ಬೆಳೆಯಿಸುವುದಕ್ಕೆ ಎಷ್ಟು ಉಷ್ಣತೆ ಹತ್ತುವುದೋ ಅಷ್ಟು ಉಷ್ಣತೆಗೆ ಒಂದು ದೊಡ್ಡ ಕ್ಯಾಲೊರಿ ಎನ್ನುವರು. ಇದೇ ಕ್ಯಾಲೊರಿಯಿಂದಲೇ ನಮ್ಮ ಆಹಾರ ಪದಾರ್ಥಗಳ ಉಷ್ಣತೆಯನ್ನೂ ಅಳೆಯುವರು. ೩೫೦೦ ಕ್ಯಾಲೊರಿ ಉಷ್ಣತೆಯು ಆಹಾರದಲ್ಲಿಯ ಹತ್ತು ಮಿಲಿಗ್ರ್ಯಾಮ್ ಲೋಹ, ಆರೋಗ್ಯದನಲುವಾಗಿ ವೆಚ್ಚವಾಗುತ್ತದೆ; ಎಂದರೆ ಪ್ರತಿಯೊಬ್ಬರ ಊಟದಲ್ಲಿ ೧೫ ಮಿಲಿಗ್ರ್ಯಾಮ್ ಲೋಹದ ಅವಶ್ಯಕತೆಯಿದೆ (೧೦೦೦ ಮಿಲಿಗ್ರ್ಯಾಮ್ ಎಂದರೆ ಒಂದು ಗ್ರ್ಯಾಮ್). ಮನುಷ್ಯನ ಶರೀರಪೋಷಣೆಗೆ ಲೋಹದಷ್ಟೇ ಉಪಯುಕ್ತ ದ್ರವ್ಯವೆಂದರೆ '**ಆಯೊಡಿನ್**.' ಇದು ಇತ್ತೀಚಿನ ಶೋಧವಾದರೂ ಅತಿ ಮಹತ್ತ್ವದ ಪದಾರ್ಥವಿರುವುದು. ಇದು ಮನುಷ್ಯನ ಶರೀರದಲ್ಲಿ ಅತಿ ಸೂಕ್ಷ್ಮವಾಗಿರುವುದು. ಶಾಸ್ತ್ರಜ್ಞರಿಗೂ ಇದನ್ನು ಅಳತೆ ಮಾಡಲು ಸಾಧ್ಯವಾಗಿರುವುದಿಲ್ಲ. ಲೋಹವು ಮನುಷ್ಯ ಶರೀರದಲ್ಲಿ ಮೂರು 'ಗ್ರ್ಯಾಮ್' ಇದ್ದರೆ (ಸ್ಥೂಲವಾಗಿ), ಆಯೊಡಿನ್‌ವು ೧೫ ಮಿಲಿಗ್ರ್ಯಾಮ್‌ನಷ್ಟು ಇರುತ್ತದೆ (೫ಗ್ರ್ಯಾಮ್). ಇಷ್ಟು ಸೂಕ್ಷ್ಮವಾಗಿರುವ ಆಯೊಡಿನ್ ದ್ರವ್ಯವು ಶರೀರದ ಎಲ್ಲ ಭಾಗಗಳಲ್ಲಿಯೂ ಇರದೆ ಗಂಟಲಿನ ಹತ್ತಿರ ಇರುವ 'ಥಾಯ್‌ರಾಯಿಡ್' ಎಂಬ ಗ್ರಂಥಿಯಲ್ಲಿ ಮಾತ್ರ ಇದರ ಅಸ್ತಿತ್ವವಿರುತ್ತದೆ. ಈ ಗ್ರಂಥಿಯಿಂದಲೇ ರಕ್ತವು ಆಯೊಡಿನನ್ನು ಶೋಷಿಸಿಕೊಂಡು, ರಕ್ತಪ್ರವಾಹಕ್ಕೆ ಸರಳತನವನ್ನುಂಟುಮಾಡುತ್ತದೆ. ಈ ಗ್ರಂಥಿಯ ಕೆಲಸ ಸುಯಂತ್ರಿತವಾಗಿ ಸಾಗಬೇಕಾದರೆ, ಅದಕ್ಕೆ ಸಾಕಷ್ಟು ಆಯೊಡಿನ್ ದ್ರವ್ಯವನ್ನು ಪೂರಯಿಸಬೇಕು. ಈ ಖನಿಜದ್ರವ್ಯವು ಮುಖ್ಯವಾಗಿ ಸಮುದ್ರದೊಳಗಿನ ಉಪ್ಪು, ಸಮುದ್ರದಲ್ಲಿರುವ ವನಸ್ಪತಿ ಇವುಗಳಲ್ಲಿ ಸಿಕ್ಕುತ್ತದೆ; ಅಲ್ಲದೆ, ಸಮುದ್ರದ ಸಮೀಪ ಬೆಳೆಯಿಸಿದ ಆಹಾರ ಪದಾರ್ಥಗಳಲ್ಲಿಯೂ ಸಿಕ್ಕುವುದು.

ನಮ್ಮ ಎಲುಬಿನ ಸಂರಕ್ಷಣೆಗಾಗಿ **ಕ್ಯಾಲ್ಶಿಯಮ್, ಫಾಸ್‌ಫರಸ್**ಗಳ ಆವಶ್ಯಕತೆ ತುಂಬ ಇದೆ. ಈ ಎರಡೂ ಖನಿಜದ್ರವ್ಯಗಳ ಉಪಯೋಗವು ಶರೀರಕ್ಕೆ ಅತಿ ಮಹತ್ತ್ವದ್ದಾಗಿರುವುದು. ಕ್ಯಾಲ್ಶಿಯಮ್, ಫಾಸ್‌ಫರಸ್ ವಿರಹಿತ ಅಥವಾ ಅವು ಕಡಿಮೆ ಪ್ರಮಾಣವಿರುವ ಆಹಾರವನ್ನು ಉಪಯೋಗಿಸಿದರೆ ಎಲುವುಗಳು ಬಹಳ ಬಲಹೀನವಾಗುತ್ತವೆ. ಸಣ್ಣ ಮಕ್ಕಳಿಗೆ ಈ ಖನಿಜದ್ರವ್ಯಗಳ ಅಭಾವದಿಂದಲೇ ರಿಕೆಟ್ಸ್, (ಮುಟ್ಟುದೋಷ) ನಂತಹ ವಿಕಾರವಾಗುತ್ತದೆ. ದೊಡ್ಡವರಿಗೆ ನಡು-ಬೆನ್ನುಗಳ ನೋವಿನ ಬಾಧೆಯಾಗುತ್ತದೆ. ಆಹಾರದಲ್ಲಿ ಕ್ಯಾಲ್ಶಿಯಮ್ ದ್ರವ್ಯಕ್ಕಿಂತ ಫಾಸ್‌ಫರಸ್ ಹೆಚ್ಚಾಗಿರುತ್ತದೆ. ಅಕ್ಕಡಿಕಾಳು ಮತ್ತು ಬೇಳೆ ಗಳಲ್ಲಿ ಫಾಸ್‌ಫರಸ್ ನಂತಹ ಖನಿಜಕ್ಷಾರವು ಹೆಚ್ಚು ಪ್ರಮಾಣದಲ್ಲಿ ಇವೆರಡೂ ಸಿಕ್ಕುವುದು. ಹಾಲಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇವೆರಡೂ ದ್ರವ್ಯಗಳು ಸಮನಾಗಿ ಇರುವವು. ಧಾನ್ಯದ ತವುಡಿಗೆ ಫಾಸ್‌ಫರಸ್ ಅಂಟಿಕೊಂಡಿರುತ್ತದೆ. ಅಮೇರಿಕೆಯ ಪ್ರೊಫೆಸರ್ **ಶೇರಮನ್** ಅವರು ಅಮೇರಿಕೆಯ ಜನರ ಆಹಾರದ ಪ್ರಥಕ್ಕರಣ ಮಾಡಿದನಂತರ, ಕ್ಯಾಲ್ಶಿಯಮ್ ಮತ್ತು ಫಾಸ್‌ಫರಸ್‌ಗಳ ಪ್ರಮಾಣವು ಬಹಳವಾಗಿ ಕಡಿಮೆ ಇರುವುದೆಂದು ಕಂಡುಹಿಡಿದರು; ಯಾಕೆಂದರೆ ಅವರ ಆಹಾರದಲ್ಲಿ ಸಕ್ಕರೆ, ಮೆರುಗುಕೊಟ್ಟ ಅಕ್ಕಿ, ಗಿರಣಿಯಲ್ಲಿ ಬೀಸಿದ ಹಿಟ್ಟು ಮೊದಲಾದ ಪಿಷ್ಟಮಯ ದ್ರವ್ಯಗಳ ಸಮಾವೇಶವೇ ಹೆಚ್ಚಾಗಿದ್ದಿತು. ಆದರ್ಶ ಆಹಾರದಲ್ಲಿ ಕ್ಯಾಲ್ಶಿಯಮ್ ೬೭, ಫಾಸ್‌ಫರಸ್ ೧೫೨ ಇರುವುದು.

ಇನ್ನು ಕ್ಷಾರೋತ್ಪಾದಕ ದ್ರವ್ಯಗಳ ಪ್ರಮಾಣವು ಕೆಳಗಿನ ಅಂಕಿಗಳಿಂದ ತಿಳಿಯುವುದು.

			ಅನನಸ	೧೬
ಸವತಿಕಾಯಿ	೪೫	....	ಲಿಂಬೀಹಣ್ಣು	೧೨
ಅಂಜೀರ	೩೨	....	ಸಂತರಿ	೧೧
ಟೊಮಾಟೊ	೨೫	....	ಮೂಲಂಗಿ	೧೦
ಗಜ್ಜರಿ	೨೪	....	ಕಲ್ಲಂಗಡಿ	೯
ಬೀಟ್	೨೩	....	ಬಟಾಟಿ	೯
ಕ್ಯಾಬೀಜ	೧೪	....	ಮಜ್ಜಿಗೆ	೬
ಕಾಲಿಫ್ಲಾವರ್	೧೭	....	ಗೆಣಸು	೫

೨೫೦೦ ಕ್ಯಾಲೊರಿ ಉಷ್ಣತೆಯ ಅನ್ನದಲ್ಲಿ ಕ್ಯಾಲ್ಸಿಯಮ್, ಫಾಸ್-ಫರಸ್ ಎಷ್ಟು ಸೆಂಟಿಗ್ರ್ಯಾಮ್ ಇರುವವು? ಲೋಹದ ಪ್ರಮಾಣವು ಎಷ್ಟು ಮಿಲಿಗ್ರ್ಯಾಮ್ ಇರುವುದು? ಮತ್ತು ಪ್ರತಿಯೊಂದು ಪೌಂಡು ಅನ್ನದಲ್ಲಿ ಎಷ್ಟು ಕ್ಯಾಲೊರಿ ಉಷ್ಣತೆ ಇರುವುದು- ಎಂಬುದನ್ನು ಕೆಳಗೆ ಕೊಟ್ಟ ವಿವರಣೆಯಲ್ಲಿ ನೋಡುವುದು.

ಆಹಾರ ಪದಾರ್ಥಗಳ ಹೆಸರು	ಕ್ಯಾಲ್ಶಿಯಮ್ ಸೆಂಟಿ-ಗ್ರ್ಯಾಮ್	ಫಾಸ್ಫರಸ್ ಸೆಂಟಿ-ಗ್ರ್ಯಾಮ್	ಲೋಹ ಮಿಲಿ-ಗ್ರ್ಯಾಮ್	ಕ್ಯಾಲೊರಿ ಪ್ರತಿ ಪೌಂಡಿಗೆ
ಮಜ್ಜಿಗೆ	೬೩೫	೬೮೦	೧೮	೧೫೪೪
ಟೊಮಾಟೊ	೬೨೫	೨೮೩	೪೪	೧೦೦
ತೊಗಟಿ	೫೬೦	೫೬೦	೯೨	೮೫
ಕೆತ್ತಳೆ	೩೭೦	೧೦೦	೯	೨೬೦
ಬಾದಾಮಿ	೯೨	೧೮೦	೧೫	೨೬೮೫
ಅವರೆಕಾಯಿ	೬೫	೩೧೨	೧೨	೧೪೧೫
ಖಜ್ಜೂರ	೪೮	೪೦	೧೦	೧೫೬೫
ಗೆಣಸು	೪೦	೯೨	೧೦	೪೪೬
ಬಾಳೆ	೨೨	೬೮	೧೫	೪೦೦
ಹಾಲು	೪೩೫	೩೩೫	೯	೩೧೦
ಮೂಲಂಗಿ	೧೮೫	೨೯೦	೫೧	೪೧೦
ಕ್ಯಾಬೀಜ	೨೫೮	೨೩೦	೮೭	೧೪೦
ಕುಟ್ಟಿದ ಅಕ್ಕಿ	೮	೧೫೦	೧೪	೧೫೯೦
ಗೋದಿಯ ತವುಡು	೧೩೫	೧೩೬೫	೮೮	೧೦೦೦
ಬೆಣ್ಣೆ	೫	೫	೧	೩೪೧೦
ಗಜ್ಜರಿ	೩೧೦	೨೫೦	೩೩	೨೦೦
ಕಾಲಿಫ್ಲಾವರ್	೧೦೦೮	೫೦೦	೪೯	೧೩೫
ತೆಂಗು	೧೫	೪೫	೭	೨೩೭೦
ಸವತೆಕಾಯಿ	೨೨೩	೪೪೦	೨೪	೬೮
ಲಿಂಬೆಹಣ್ಣು	೩೦೨	೧೨೩	೩೬	೧೪೦
ಬೆಲ್ಲ	೩೪	೬೩	೫೬	೧೩೦೨

ಈರುಳ್ಳಿ	೧೬೨	೨೩೨	೨೫	೨೧೫
ನೆಲಗಡಲೆ	೩೨	೧೪೩	೯	೨೭೫೫
ಸಕ್ಕರೆ	..	..	..	೧೪೧೪

ನಾವು ಸಾಕಷ್ಟು ಬಳಸುವ ಆಹಾರಪದಾರ್ಥಗಳನ್ನು ಇಲ್ಲಿ ಕೊಡಲಾಗಿದೆ. ಇನ್ನು ಆಹಾರ ಪದಾರ್ಥಗಳಲ್ಲಿ ಪ್ರಾಣಿಜನ್ಯ, ಧಾನ್ಯ, ಕಾಯಿಪಲ್ಲೆ, ಹಣ್ಣುಹಂಪಲ, ಕೃತ್ರಿಮ ಪದಾರ್ಥ ಎಂದು ಬೇರೆ ಬೇರೆ ಭಾಗಮಾಡಬಹುದು. ಇವುಗಳಲ್ಲಿ ನೀರು, ಪ್ರೊಟೀನ್, ನೆಣ, ಕಾರ್ಬೋಹೈಡ್ರೇಟ್ ಉಷ್ಣತಾಮಾನ ಮತ್ತು ಕ್ಷಾರ ಯಾವ ಪ್ರಮಾಣದಲ್ಲಿ ಇರುವುವೆಂಬುದನ್ನು ಇಲ್ಲಿ ನೋಡಬಹುದು.

ಪ್ರಾಣಿಜನ್ಯ (೧೦೦ರ ಪ್ರಮಾಣ)

ಪ್ರತಿ ಪೌಂಡಿಗೆ

ಹೆಸರು	ನೀರು	ಪ್ರೊಟೀನ್	ನೆಣ	ಕಾರ್ಬೋಹಾಯ್ಡ್ರೇಟ್	ಕ್ಯಾಲೊರಿ	ಕ್ಷಾರ
ತತ್ತಿ	೪೯.೫	೧೫.೭	೩೩.೦೫	೦	೬೯೫	೧.೩
ಹಾಲು	೮೭.೨	೩.೩	೪.೦	೪.೮	೩೧೦	೦.೭
ಮೊಸರು	೩೬.೨	೨೬.೯	೩೩.೭	೨.೫	೧೭೮	೦.೭
ಮಜ್ಜಿಗೆ	೯೦.೪	೩.೬	.೫	೪.೮	೧೫೪	೦.೭
ಬೆಣ್ಣೆ	೧೩.೫	೧.೦	೮೫.೧	೦	೩೪೧೦	೦.೪
ತುಪ್ಪ	೦	೦	೧೦೦	೦	೪೦೮೨	೦

ಧಾನ್ಯ

ಉದ್ದು	೧೨.೬	೨೨.೫	೧.೮	೫೯.೬	೧೬೫	೩.೫
ಗೋದಿ	೧೧.೪	೩೩.೮	೧.೯	೭೧.೯	೧೬೩೦	೧.೦
ಅಲಸಂದಿ	೧೨.೭	೨೩.೧	೧.೧	೫೯.೫	೧೫೪೩	೩.೬
ಜೋಳ	೧೨.೫	೯.೩	೨.೦	೭೪.೫	೧೬೫೪	೧.೭
ಅಕ್ಕಿ	೧೨.೩	೮.೦	೦.೩	೭೯.೦	೧೫೯೦	.೪
ತೊಗರೆ	೧೦.೫	೨೨.೩	೨.೧	೬೨.೧	೧೬೧೭	೩.೦
ರಾಗಿ	೧೩.೨	೭.೩	೧.೫	೭೫.೭	೧೫೭೭	೨.೩
ಸೆಜ್ಜೆ	೧೧.೩.	೧೦.೪	೩.೩	೭೩.೦	೧೬೪೭	೨.೦
ಗೋವಿನ ಜೋಳ	೧೨.೫	೯.೫	೩.೬	೭೨.೭	೧೬೩೮	೧.೭
ಚೆನ್ನಂಗಿ	೧೧.೪	೨೫.೧	೧.೩	೫೯.೬	೧೫೯೦	೨.೨
ಹೆಸರು	೧೦.೪	೨೨.೭	೨.೭	೫೯.೯	೧೫೯೯	೪.೩
ನವಣೆ	೧೦.೨	೧೦.೪	೨.೯	೭೪.೯	೧೬೭೩	೧.೨
ಬಟ್ಟಗಡಲೆ	೧೨.೫	೨೩.೬	೧.೩	೬೦.೨	೧೫೫೪	೨.೪
ಅವರೆ	೧೨.೧	೨೨.೪	೧.೪	೬೦.೭	೧೫೬೪	೩.೪
ಸೋಯಾ-ಬೀನ್	೧೦.೪	೩೪.೦	೧೬.೯	೩೩.೬	೧೯೧೬	೪.೭
ಕಡಲೆ	೧೧.೫	೨೧.೭	೪.೨	೬೦.೦	೧೬೫೪	೨.೬
ನೆಲಗಡಲೆ	೯.೨	೨೫.೪	೩೪.೬	೨೪.೪	೨೭೫೫	೨.೦

ಕಾಯಿ-ಪಲ್ಲೆ

ಸವತೆಕಾಯಿ	೯೬.೧	.೬	೦.೨	೨.೬	೬೮	೦.೪
ಕಾಲಿಫ್ಲಾವರ	೯೨.೩	೧.೪	೦.೫	೪.೬	೧೩೫	೦.೭
ನೀರುಳ್ಳಿ	೮೮.೮	೧.೪	೦.೩	೮.೦	೨೧೫	೧.೫
ಕ್ಯಾಬೇಜ್	೯೨.೭	೧.೪	೦.೨	೪.೮	೧೪೦	೦.೯
ಗಜ್ಜರಿ	೯೦.೬	೦.೯	೦.೨	೭.೪	೨೦೦	೨.೯
ಟೊಮಾಟೊ	೯೪.೩	೦.೯	೦.೪	೩.೯	೧೦೦	೦.೫
ನವಲಕೋಲ	೯೧.೧	೨.೦	೦.೧	೫.೫	೧೪೦	೧.೦
ಬಟಾಟಿ	೮೨.೬	೧.೮	೦.೧	೧೪.೭	೩೦೨	೦.೮
ಬೀಟ್	೯೦.೦	೧.೩	೦.೧	೭.೭	೧೬೭	೦.೯
ಬೆಂಡೆಕಾಯಿ	೯೨.೪	೧.೪	೦.೨	೬.೫	೧೫೨	೦.೫
ಕುಂಬಳ	೯೬.೫	೦.೫	೦.೧	೨.೬	೫೯	೦೩
ಮೂಲಂಗಿ	೯೪.೩	೦.೯	೦.೧	೪.೦	೯೧	೦.೭
ಗೆಣಸು	೭೫.೨	೧.೪	೦.೬	೨೧.೯	೪೪೭	೦ ೯
ಬದನೆಕಾಯಿ	೯೭.೯	೧.೨	೦.೩	೫.೧	೧೨೭	೦.೫

ಹಣ್ಣು ಹಂಪಲ

ಆಕ್ರೋಡ	೨.೫	೨೮.೪	೫೪.೩	೧೩.೦	೩೨೦೦	೧.೪
ಅಂಜೀರ ಹಣ್ಣು	೭೯.೧	೧.೫	೦	೨೮.೪	೩೬೪	೦.೬
ಅಂಜೀರ ಒಣಗಿದುವು	೧೪.೪	೪.೩	೦.೩	೭೪.೨	೧೪೩೭	೨.೪
ಆನಾನಸ	೪೯.೩	೦.೪	೦.೩	೯.೭	೧೯೬	೦.೩
ಕಲ್ಲಂಗಡಿ	೯೬.೯	೦.೨	೦ ೧	೨.೭	೫೭	೦ ೧
ಬಾಳೆಹಣ್ಣು	೭೫.೩	೧.೩	೦.೫	೧೯.೯	೪೦೦	೩.೦
ಖರ್ಜೂರ	೨೫.೪	೨.೧	೨.೪	೬೪.೪	೧೫೭೫	೧.೩
ಉತ್ತತ್ತಿ	೨೦.೪	೬.೬	೦.೨	೭೦.೪	೧೪೧೩	೧.೬
ಕೊಬ್ಬರಿ	೩.೫	೬.೩	೫೭.೪	೩೧.೫	೩೦೨೪	೧.೩
ನೀರಲಹಣ್ಣು	೮೬.೩	೧.೩	೧.೦	೧.೦೯	೨೬೫೯	೦.೫
ದ್ರಾಕ್ಷಿ	೭೭.೪	೧.೩	೧.೬	೧೯.೨	೪೩೭	೦.೫
ನಾರಂಗಿ	೯೦.೪	೦.೬	೦.೧	೪.೫	೧೬೯	೦.೪
ಪಿನ್ಯೆ	೪.೨	೨೨.೩	೫೪.೦	೧೬.೩	೨೯೦೫	೩.೨
ಬಾದಾಮಿ	೧೪.೬	೨.೬	೩.೩	೭೬.೦	೨೬೪೫	೩.೫
ಮುನಕ್ಕ (ದ್ರಾಕ್ಷ)	೨೨.೫	೨.೬	೩.೩	೭೪.೩	೧೩೬೪	೭.೩
ಲಿಂಬೆಹಣ್ಣು	೯೨.೪	೦.೭	೦.೨	೫.೯	೧೪೦	೦ ೪
ಕಿತ್ತಳೆ	೪೪.೬	೦.೪	೦.೫	೧೪.೨	೨೪೫	೦.೩

ಕೃತ್ರಿಮ ಆಹ್ಲ

ಚಾಕೊಲೇಟು	೫.೯	೧೨.೯	೪೮.೭	೩೦.೩	೨೭೭೨	೨.೨
ಎಣ್ಣೆ	೦	೦	೧.೦	೦	೪೦೪೨	೦
ಸಕ್ಕರೆ	೦	೦	೦	೧೦೦	೧೪೧೪	೦
ಸಾಬುದಾಣಿ	೧೨.೨	೯.೦	೦.೪	೭೪.೧	೧೬೫೫	೮.೩

ಮೇಲಿನ ಎಲ್ಲ ಕೋಷ್ಟಕಗಳನ್ನು ನೋಡಿಕೊಂಡು, ಪ್ರಕೃತಿ-ಮಾನದಂತೆ ಆಯಾ ದ್ರವ್ಯಗಳ ಆವಶ್ಯಕತೆಯನ್ನು ಕಂಡು ಹಿಡಿದು, ಅಥವಾ ವೈದ್ಯರಿಂದ ಕೇಳಿಕೊಂಡು, ಆಹಾರದ ಪದಾರ್ಥಗಳನ್ನು ಆರಿಸಿ ಊಟಮಾಡುವುದೇ ಆದರ್ಶವಾದ ಆಹಾರವೆನಿಸುವುದು.

ಜೀವ ದೇವನದು

ಶ್ರೀ. ಬ. ಶ್ರೀಕಂಠಯ್ಯ, ಬೆಂಗಳೂರು

೧. ಸಾವಾನು ನಿಲಿಸೇವೆ?
ಜೀವಾಣು ಸಲಿಸೇವೆ?
ಜೀವ ದೇವನದು।
ಜೀವಿಗಳ ಕಾಡುವುದೆ?
ದೇವ ಸಹಿಸಾನೆ? ಸರ್ವೇಶ! ||

೨. ಬಲಿಯಾಯೆ **ಕರುಣಾಳು**
ಒಲಿದಾನೆ? **ಸಲಹುವಗೆ**
ಕೊಲೆಹಿತವೆ? ಕೊಲುವ
ಹೊಲಸು ಪೂಜೆಯಿಂ
ಫಲಿಸುವುದೆ ಮೋಕ್ಷ? ಸರ್ವೇಶ! ||

೩. ಜೀವಮಯವೀಜಗವು
ಜೀವಾಣು ಗಾಳಿಯಲು
ಆವಾವುದರಲು
ತೀವಿಹುದು; ಚಿರವಿಹುದು
ನಾವರಿಯದಂತೆ ಸರ್ವೇಶ! ||

೪. ಕಿಕ್ಕಿರಿವ ಧಾರುಣಿಯ
ಲೆಕ್ಕಿರದ ಭೇದಗಳ
ಮಿಕ್ಕು, ಸಕಲವನು
ತೆಕ್ಕೆಪುದು೧ ಜಂಗುಳಿಯಿ
ಲುಕ್ಕುತಿಪ ಜೀವ ಸರ್ವೇಶ! ||

---

೧. ಒಟ್ಟಿಗೆ ಕೂಡಿಸುವುದು, ನಂಟುಂಟು ಮಾಡುವುದು; ೨. ಸಂಪಣಿಯಲ್ಲಿ.

ಮಹಾತ್ಮಾ ಬಸವಣ್ಣನವರ ★ ★ ಮಾನವತಾವಾದ

(ಒಂದು ಬಗೆಯ ನೋಟ)*

"ಚಿಂತಾಮಣಿ"

ಭಾರತದಲ್ಲಿ ಒಂದು ಬಗೆಯ ಹೊಸ ಸಮಾಜಪದ್ಧತಿಯನ್ನು ನಿರ್ಮಿಸಲು ಶ್ರೀಬಸವಣ್ಣನವರು ಹುಟ್ಟಿಬಂದರಲ್ಲದೆ, ಕೇವಲ ಒಂದು ಮತದ ಸಂಸ್ಥಾಪನೆಗೆಂದು ಅಲ್ಲ. ಅವರ ಸಾಮಾಜಿಕ ಕಾರ್ಯದ ಮಹತ್ತ್ವದ ಮೂಲಕವೇ ಅವರು— ಯಾವಾಗಲೂ— ದೊಡ್ಡವರಾಗಿ ನಿಲ್ಲುವರು!

★

ಜೀವನದ ಕಲ್ಪನೆಯಿಲ್ಲದೆ, ಸಾಯುವುದಕ್ಕಾಗಿಯೇ ಹುಟ್ಟಿದವರೆಂಬ ಅಂಧಕಲ್ಪನೆಯ ಕತ್ತಲೆಯಲ್ಲಿ ದಾರಿಗಾಣದೆ ತೊಳಲುತ್ತಿರುವ ಬಹುಜನ ಸಮಾಜವನ್ನು ದಾರಿಗೆ ತರುವುದಕ್ಕಾಗಿ, ಮಹಾತ್ಮರಾಗಿಯೇ ಹುಟ್ಟಿ ಮಹಾತ್ಮರಾಗಿಯೇ ಬಳೆದು ಮಹಾತ್ಮರಾಗಿಯೇ ಉಳಿದ ಮಹದ್ವಿಭೂತಿಗಳಲ್ಲಿ ಬಸವಣ್ಣನವರು ಅಗ್ರಗಣ್ಯರು. ಅವರ ಬಗ್ಗೆ ಅಭಿಮಾನಪಡುವವರು ಧರ್ಮಸಂಸ್ಥಾಪಕರೆಂದು ಪೂಜಿಸಲಿ, ಆದರಾ ತೋರಿಸುವವರು ಕನ್ನಡದ ಇತಿಹಾಸದ ಕಾರಣಪುರುಷರೆಂದು ಹೆಮ್ಮೆ ಪಡಲಿ; ನಿಜವಾದ ಬಸವಣ್ಣನವರನ್ನು ಗುರುತಿಸಿದವರನ್ನು ಮಾತ್ರ ಅವರನ್ನು ಕನ್ನಡದ ಕುಲದ ಕ್ರಾಂತಿಪುರುಷರೆಂದೇ ಹೇಳಬೇಕು. ಸತ್ಯದ ಸಂಸ್ಕಾರವಿಲ್ಲದ ಇತಿಹಾಸವು, ಅವರನ್ನು ಬಚ್ಚಿಡುವುದಕ್ಕಾಗಿ ಬೇಕಾದಂತೆ ಪ್ರಯತ್ನಿಸಿರಲಿ; ಕೋಳಿಯನ್ನು ಬಚ್ಚಿಟ್ಟರೆ, ಬೆಳಗಾಗದಿರುವುದೆ? ಇತಿಹಾಸವು ಬಸವಣ್ಣನವರನ್ನು ಮತಾಚಾರ್ಯರ ಬಣ್ಣ ಬಳಿದು ಎಷ್ಟೇ ಮುಚ್ಚಿಟ್ಟರಲಿ; ಅವರ ಕರ್ಮದ ರೀತಿ, ಅವರ ನಿಜವಾದ ರೂಪವನ್ನು ಖಂಡಿತ ಹೊರಕ್ಕೆ ಹಾಕುತ್ತದೆ. ಮಾನವ ಪ್ರಪಂಚಕ್ಕೆ ನಿತ್ಯ ನೂತನತೆಯನ್ನೂ ಹೊಸ ಚೈತನ್ಯವನ್ನೂ, ಚಿರಯೌವ್ವನವನ್ನೂ ತುಂಬುತ್ತಲಿರುವ ಬಸವಣ್ಣನವರ ವಿಚಾರಾವತಾರ ಆಗಾಗ ಲೋಕದಲ್ಲಿ ಆಗುತ್ತದೆ. ಆಗ ನಿನ್ನಿನವನೇ ಸೂರ್ಯ, ನಿನ್ನಿನದೇ ಜಗತ್ತು ಎಂದು ನಿರಾಶೆಯ ಉಸಿರನ್ನೆಳೆಯದೆ ಹೊಸ ಹುರುಪಿನಿಂದ ಚಿಲಿಪಿಲಿಗೊಡುವ ಸಜೀವ ಪಕ್ಷಿಗಳಂತೆ, ಜೀವಂತತನದ ಲಕ್ಷಣಗಳುಳ್ಳ ಮಾನವ ಪ್ರಾಣಿಗಳೆಲ್ಲರೂ ಮರಳಿ ಮರಳಿ ಬರುತ್ತಲಿದ್ದ ಆ ವಿಚಾರಾವತಾರದ ದರ್ಶನದಿಂದ ಮತ್ತೆ ನುತ್ತೆ ಕರ್ತವ್ಯಜಾಗೃತರಾಗುತ್ತಾರೆ.

ನಿಜವಾದ ಬಸವಣ್ಣನವರು

ಹೆದವರಿತು ತತಿನೋಡಿ ಬಿತ್ತುವ ತಜ್ಞ ರೈತನಂತೆ, ಸಮಾಜದಲ್ಲಿ ಕ್ರಾಂತಿಯ ಬೀಜಬಿತ್ತಿದ ಬಸವಣ್ಣನವರು, ತಮ್ಮ ಕಾಲದ ಭಾರತದ ಜೀವನಾಡಿಯನ್ನು ಎಷ್ಟು ಜೆನ್ನಾಗಿ ಅರಿತಿದ್ದರೆಂಬುದು ಅವರ ಕಾರ್ಯನಿವರಣೆಯಿಂದ ತೋರುವುದು. ೧೨ನೆಯ ಶತಮಾನದ ಕರ್ನಾಟಕವನ್ನು ನೆನೆದರೆ, ಇಡೀ ಭಾರತದ ಚಿತ್ರವನ್ನು ಕಲ್ಪಿಸಲು ಯಾವ ತೊಂದರೆಯೂ ಇಲ್ಲ. ರಾಜ್ಯ-ರಾಜ್ಯಗಳಲ್ಲಿಯ ವೈಮನಸ್ಸುಗಳು, ವೈದಿಕಧರ್ಮದ ಸಾಮ್ರಾಜ್ಯವಾದಕ್ಕೆ ಬೇಸತ್ತ ಜನಜಂಗುಳಿ, ಸ್ವಕೀಯರಿಂದಲೆ–ಬೌದ್ಧ ಜೈನಧರ್ಮಗಳ ರೂಪದಲ್ಲಿ— ಬಂದ ಪ್ರತ್ಯಘಾತಗಳು ಇವೆಲ್ಲ ಸೇರಿ ಭಾರತದ ಜನ, ಮನವನ್ನು ದಿಗ್ಭ್ರಮೆಗೊಳಿಸಿಬಿಟ್ಟಿದ್ದುವು. ಇವುಗಳಲ್ಲಿ ಒಂದೊಂದೇ ಕಾರಣಗಳು ಸಮಾಜದ ಕಟ್ಟನ್ನು ಸಡಿಲಿಸಿಬಿಡಲು ಸಾಕಾಗಿರುವಾಗ, ಎಲ್ಲವುಗಳನ್ನೂ ಎದುರಿಸುವ ಶಕ್ತಿ ವೈದಿಕಧರ್ಮಕ್ಕೆ ಹೇಗೆ ಬರಬೇಕು? ಆದರೂ ಧೈರ್ಯದಿಂದ, ಸಿಸ್ತಿನಿಂದ, ಮೊದಲೇ ನಿರ್ಣಯಿಸಿದವರಂತೆ ಹಿಂದೆಹಿಂದೆ ಸರಿಯುತ್ತಲಿತ್ತು. ಆದೇ ಕಾಲವನ್ನೇ ಬಸವಣ್ಣನವರು ಆರಿಸಿಕೊಂಡರು. ನಿರಾಶೆಯ ಮುಸುಕಿನಿಂದ ಮುಚ್ಚಿದ ಸಮಾಜಜೀವನವನ್ನು ಕ್ರಾಂತಿಯ ಕೂಗಿನ ಝಂಜಾವಾತದಿಂದ ಬಡಿದೆಬ್ಬಿಸಿದರು. ಅಂಧತಮಸ್ಸಿನಲ್ಲಿ ಮುಳುಗಿದ್ದ

---

* ಈ ನೋಟ ಲೇಖಕರ ವೈಯಕ್ತಿಕವಾದ ನೋಟವಲ್ಲದೆ ನಾವೂ ಇದನ್ನೆಲ್ಲ ಒಪ್ಪುತ್ತೇವೆಯೆಂದಲ್ಲ. ಈ ನೋಟಕ್ಕಿಂತ ಬೇರೆಯ ವಿಧದ ನೋಟದಿಂದ ಶ್ರೀಬಸವಣ್ಣನವರನ್ನು ಕಾಣುವವರೂ ಹಲವು ಜನರಿರಬಹುದು. ಮಹಾತ್ಮರು ಸತ್ಯಸ್ವರೂಪಿಗಳು. ಆ ಆ ವ್ಯಕ್ತಿಯ ಗುಣ–ದೇಶ-ಕಾಲ-ಪರಿಸ್ಥಿತಿಗಳ ಗಾಜುಗಳ ಮೂಲಕ, ಸತ್ಯ ಬೇರೆ ಬೇರೆ ಬಗೆಗಳಲ್ಲಿ ಕಾಣುವುದುಂಟು. ಅನೇಕ ಸಲ ಇಂತಹ ಸತ್ಯಸ್ವರೂಪದ ವಿವರಣೆಗಳಲ್ಲಿ ಸತ್ಯಾಭಾಸವೇ ಬಹಳವಾಗಿರುವುದು. ಅದಕ್ಕೆ ಕಾರಣವೆಂದರೆ ತಮ್ಮ ಮೂಗಿನ ನೇರಕ್ಕೇ ವಿಕ್ಷವರನ್ನೂ ಎಳೆಯುತ್ತಿರುವ ಮಾನವಸ್ವಭಾವ. ಇದರಲ್ಲಿಯ ನೋಟವನ್ನು ಅಲ್ಲಗಳೆದು ಬರೆವ ಒಳ್ಳೆಯ ಲೇಖನಗಳಿಗೂ ಜಯಂತಿಯಲ್ಲಿ ಎಡೆಕೊಡಲಾಗುವುದು.

ಸಂ. ಜ.

ಸಮಾನತೆಗೆ ಬೆಳಕನ್ನು ತೋರಿಸಿದರು; ಭಾರತ ಸಂಸ್ಕೃತಿಯನ್ನು ಮತ್ತೆ ಬೆಳಗಿಸಲು ಯತ್ನಿಸಿದರು. ಎಲ್ಲ ವಾದ (ಇಝಂ)ಗಳನ್ನೂ ಮೀರಿನಿಲ್ಲುವ ಮಾನವತಾವಾದವನ್ನು ಸ್ಥಾಪಿಸಲು ಮನಸ್ಸು ಮಾಡಿದರು. ಎಂದಿನಿಂದಲೂ ನಡೆದುಬಂದ ವಿಗ್ರಹದ ವರ್ಗಗಳನ್ನೇ ಸ್ವಗ್ರಹದ ವರ್ಗಗಳನ್ನಾಗಿ ಮಾರ್ಪಡಿಸಿದರು. ಸಾಮ್ರಾಜ್ಯವಾದದ ಸಂಗಡ ಹೋರಾಡಿ ದೊರೆಕಿಸಿದ ಸ್ವರಾಜ್ಯವನ್ನೇ ಸುರಾಜ್ಯವನ್ನಾಗಿ ಮಾಡಲು ಯತ್ನಿಸಿದರು. ಕಾಲದ ಹಿಂದಿನ ಕಾಣದ ಕೈಯ ಪ್ರಭಾವದಿಂದ ಆ ಸುರಾಜ್ಯದ ಸ್ಪಷ್ಟ ದರುಶನ ನಮಗೆ ಇಲ್ಲದಿದ್ದರೂ, ಇಂದಿನ ಜೀವನದ ಮೇಲಿನ ಅದರ ಪ್ರಭಾವವು ಸಣ್ಣದಲ್ಲ. ಹೇಡಿ ಸಾಮ್ರಾಜ್ಯವಾದದ ಯಶಸ್ವಿ ಹಿನ್ನಡೆಗಿಂತ ಶೂರ ಮಾನವತಾವಾದದ ಅಯಶಸ್ವಿ ಪ್ರತಿದಾಳಿಯು ಹೆಚ್ಚು ಪ್ರಭಾವಯುಕ್ತವಾದದ್ದಲ್ಲವೆ?

ಬಸವಣ್ಣನವರ ಸಮಾಜಧರ್ಮ

ಆತಿ ಪ್ರಾಚೀನ ಕಾಲದಿಂದ ಆತ್ಯಾಧುನಿಕ ಕಾಲದ ವರೆಗೆ ಮಾನವ ಜನಾಂಗದ ಇತಿಹಾಸವು ಅರ್ಥಾತ್ ಗತಿಯುಕ್ತ ಸಮಾಜದ ಪ್ರಗತಿಯು, ವರ್ಗವಿಗ್ರಹದ ಮೇಲೆ ನಿಂತಿದೆಯಾಗಿ ಅನೇಕರು ಅಭಿಪ್ರಾಯಪಡುತ್ತಿದ್ದಾರೆ; ಆರ್ಯ-ಅನಾರ್ಯರ ವರ್ಗ-ಕಲಹದಿಂದ ಹಿಡಿದು ಇಂದಿನ ಕರಿ-ಬಿಳಿ ಜನಾಂಗಗಳ ಕಲಹದ ವರೆಗೂ ಅದೇ ಸೂತ್ರವನ್ನು ಎತ್ತಿ ತೋರಿಸುತ್ತ ಸಾಧಾರವಾಗಿ ನಿರ್ವಹಿಸುತ್ತಲಿದ್ದಾರೆ. ಇದೇ ಆಧಾರದ ಮೇಲೆಯೆ ಬಸವಣ್ಣನವರು ಸಮತಾವಾದವನ್ನು ಸ್ಥಾಪಿಸಲು ಯತ್ನಿಸಿದಂತೆ ಭಾರತದ ಸಮತಾವಾದಿಗಳೆಲ್ಲ ಅಭಿಪ್ರಾಯವಾಗುತ್ತಿರುವಂತಿದೆ. ಕಂಸ, ರಾವಣರಂತಹ ಸರ್ವತಂತ್ರ ಸರ್ವಾಧಿಕಾರಿಗಳನ್ನು ನಿರ್ಮೂಲಗೊಳಿಸಿ ಸಾಮ್ರಾಜ್ಯವಾದವನ್ನು ಸ್ಥಾಪಿಸಿದ ಕೃಷ್ಣ–ರಾಮರ ಕಾಲದಿಂದಲೂ, ಭಾರತದಲ್ಲಿ ಸಾಮ್ರಾಜ್ಯವಾದದ ಹಿಡಿತ ಕಡಿಮೆಯಾಗಿಲ್ಲವೆಂದು ನಾದಿಸುವವರಿಗೆ ಕೊರತೆಯಿಲ್ಲ. ಪರಿಸ್ಥಿತಿಯ ಪ್ರಭಾವದಿಂದಾಗಲಿ, ಅನಿವಾರ್ಯವಾದ ಆವಶ್ಯಕತೆಯಿಂದಾಗಲಿ, ಜಾಗತಿಕ ಇತಿಹಾಸದಲ್ಲಿಯ ಸಾಮಾಜಿಕ ಸ್ಥಿತ್ಯಂತರ ಕ್ರಮಕ್ಕನುಸರಿಸಿ—ಭಾರತವು ಸಾಮ್ರಾಜ್ಯವಾದದ ಮುಂದಿನ ಮೆಟ್ಟಿಲಾದ ಸಮತಾವಾದಕ್ಕೆ ಬರಲೇಬೇಕೆಂಬವರು ಅನೇಕರಿದ್ದಾರೆ. ಅವರು ಕೂಡ ತಮ್ಮ ಬೆಂಬಲಕ್ಕೆ, ಮಹಾತ್ಮಾ ಬಸವಣ್ಣನವರು ಹಿಂದೆಯೆ ಮಾಡಿದ ಕ್ರಾಂತಿಯನ್ನು ಎತ್ತಿ ತೋರಿಸುವರು. ಇತಿಹಾಸದ ಪುನರಾವೃತ್ತಿಯೆನೋ ಎನ್ನುವಂತೆ ಇಂದಿನ ಬ್ರಾಹ್ಮಣ–ಲಿಂಗಾಯತ ಕಲಹದಲ್ಲಿಯ ಜಾತೀಯತೆಯ ದುರ್ಗಂಧವನ್ನು ತೆಗೆದೊಗೆದರೆ, ಶುದ್ಧ ಸಮತಾವಾದವೇ ದೃಷ್ಟಿಗೋಚರವಾಗುವುದಾಗಿ ಅವರು ತೋರಿಸುವರು. ಆದರೆ ಈ ಬಗೆಯ ಸಮತಾವಾದಿಗಳ ಹಾಗೂ ಬಸವಣ್ಣನವರ ಧ್ಯೇಯವೇನೋ ಒಂದೇ ಇದ್ದಂತಿದ್ದರೂ, ಧೋರಣದಲ್ಲಿ ಹೆಚ್ಚು ಅಂತರವಿದೆ. ಅಂತೆಯೇ ಭಾರತದ ಜೀವನಾಡಿಯ, ಸಂಸ್ಕೃತಿಯ ಸ್ಪಷ್ಟ ದರ್ಶನವಿಲ್ಲದವರು, ರಷಿಯದಂತಹ ಸಮತಾವಾದವೇ ಭಾರತಕ್ಕೂ ಅವಶ್ಯವೆಂದು ಹೇಳುತ್ತಿದ್ದಾರೆ. ಅವರಲ್ಲಿಯೇ ಕೆಲವು ಜನ ಬುದ್ಧಿವಂತರು, ಅಷ್ಟು ಸ್ಪಷ್ಟವಿಲ್ಲದೆ ಹೋದರೂ ಭಾರತದಲ್ಲಿ ಬರುವ ಸಮತಾವಾದವು ರಷಿಯದ್ದಿರದೆ ರಾಷ್ಟ್ರೀಯ ಸಮತಾವಾದವಾಗಿರುತ್ತದಾಗಿ ಹೇಳುತ್ತಿರುವುದನ್ನು ಕಾಣಬಹುದು.

ಇಂದಿನ ಸಮತಾವಾದಿಗಳ ಧ್ಯೇಯದ ಸಾಧನೆಯೆಂದರೆ "ವರ್ಗ ಕಲಹ." ಅದರ ಪರಿಣಾಮವನ್ನು ಕೂಡ ಅವರು ಬಸವಣ್ಣನವರಿಗಿಂತ ಬೇರೆಯಾಗಿಯೆ ಅಪೇಕ್ಷಿಸುತ್ತಾರೆ. ಧನವಂತರು ಹಾಗು ದರಿದ್ರರ ಕಲಹದಲ್ಲಿ ಧನವಂತರನ್ನು ನಿರ್ನಾಮಮಾಡಿ, ಕೇವಲ ದರಿದ್ರನಾರಾಯಣರ ರಾಜ್ಯವನ್ನೇ ಪಡೆಯಬೇಕೆನ್ನುತ್ತಾರೆ. ಅದಕ್ಕಾಗಿ ಅನೇಕ ತರ್ಕಶುದ್ಧ ತತ್ತ್ವಗಳನ್ನು ಪ್ರತಿಪಾದಿಸುತ್ತಾರೆ. ತರ್ಕಶುದ್ಧವಿದ್ದದ್ದೆಲ್ಲವೂ, ಕೃತಿಸಿದ್ಧವಾಗಿಯೇ ತೀರುವುದೆಂಬ ನಿಯಮವಿಲ್ಲದ್ದರಿಂದ, ಭಾರತದಲ್ಲಿ ಅವರ ವಾದವು ಮುಗ್ಗರಿಸುತ್ತಿದೆ. ಧ್ಯೇಯಸಾಧನೆಯ ಆತುರದಲ್ಲಿ ಧನವಂತರನ್ನು ನಿರ್ಮೂಲಗೊಳಿಸಿ, ಅವರ ಬರಿಯದಾದ ಸ್ಥಾನವನ್ನು ತುಂಬದೆ ಬಿಟ್ಟರೆ, ಆ ಭಯಾನಕ ಡೊಗರಿನಲ್ಲಿ ಇನ್ನೊಂದು ಅದಕ್ಕೂ ಭಯಂಕರವಾದ ಶಕ್ತಿಯು ಸೇರಲಾರದೆಂದು ಹೇಗೆ ಹೇಳಬೇಕು? ರಷಿಯವನ್ನೇ ತೆಗೆದುಕೊಂಡರೆ, ಅಲ್ಲಿಯ ಧನವಂತರನ್ನು ನಿರ್ಮೂಲಗೊಳಿಸಿದೆನೆಂದು ಹೇಳುವ ಸರಕಾರವು, ತಾನೇ ದೊಡ್ಡ ಧನವಂತವಾಗಿ, ತನ್ನನ್ನೆದುರಿಸುವ ಪ್ರತಿಯೊಂದು ಶಕ್ತಿಯನ್ನೂ ನಿರ್ನಾಮಗೊಳಿಸುವುದಕ್ಕಾಗಿ ಕೊಲೆಯಂತಹ ಕ್ರೂರತೆಯನ್ನು ಕೈಕೊಂಡಿಪೆಯಲ್ಲ!—ಎಂಬ ಆಕ್ಷೇಪಕ್ಕೆ ಸರಿಯಾದ ಸಮಾಧಾನ ಸಿಕ್ಕಿಲ್ಲ. ಅಂತೆಯೇ ವಿರೋಧಶಕ್ತಿಯ ವಿಷಯವಾಗಿ ಅವರ ಧೋರಣಕ್ಕೂ, ಬಸವಣ್ಣನವರ ಧೋರಣಕ್ಕೂ ಅಂತರವಿದೆಯೆಂದು ಹೇಳಿದುದು. ರಾವಣನನ್ನು ಕೊಂದು ವಿಭೀಷಣನನ್ನು ಪಟ್ಟಗಟ್ಟುವುದಕ್ಕಿಂತ, ರಾವಣನನ್ನೇ ವಿಭೀಷಣನನ್ನಾಗಿ ಮಾರ್ಪಡಿಸುವ ಧೋರಣ ಬಸವಣ್ಣನವರದು. ಸಮಾನ ಶಕ್ತಿಯ ಸಹೃದಯಗಳು ಒಂದನ್ನೊಂದು ಅನುಸರಿಸುತ್ತಿರುವುವೇನೋ ಎನ್ನುವಷ್ಟು ಸಾಮ್ಯವನ್ನು ತೋರಿಸುತ್ತಿರುವಂತೆ ಇಂದಿನ ಮಹಾತ್ಮಾ ಗಾಂಧಿಯವರೂ ಅಂದಿನ ಮಹಾತ್ಮಾ ಬಸವಣ್ಣನವರೂ ಒಂದೆಯಾಗಿ ಕಾಣುವುದಕ್ಕೆ, ಈ ಧೋರಣಸಾಮ್ಯವೇ ಹೆಚ್ಚು ಕಾರಣವಾಗಿದೆ. ಅಂದಿನ ನಿಜವಾದ ಬಸವಣ್ಣನವರನ್ನು ಕಾಣಬೇಕಾದರೆ ಇಂದಿನಿಂದ ೮–೯ ನೂರು ವರುಷಗಳಿಗೆ ಹಿಂದೆ ಹೋಗಬೇಕಾಗುತ್ತದೆಂಬುದನ್ನು ನೋಡಿದರೆ, ಬರಬಹುದಾದ ತೊಂದರೆಗಳ ಕಲ್ಪನೆ ಬರುವುದು. ಆದಕ್ಕಾಗಿ ಬಸವಣ್ಣನವರ ಪರಿಚಯರೂಪದಲ್ಲಿ ಲಿಪಿಬದ್ಧವಾಗಿ ಉಸಲಬ್ಧವಿರುವ ಅಸಮರ್ಥ ಶಬ್ದಚಿತ್ರಕ್ಕಿಂತ, ನೂರಾರುವರ್ಷಗಳಿಂದ ಪವಾಡಪುರುಷರೆಂದು ಅವರನ್ನು ಪೂಜಿಸುತ್ತ ಕನ್ನಡ ಕುಲಕ್ಕಾಗಿ ಉಳಿಸಿಕೊಂಡು ಬಂದ—ಸಾವಿರಾರು ಜನರ ಜೀವನದ ಕಡೆಗೆ ನೋಡಬೇಕು.

ಬಸವಣ್ಣನವರ ರಾಜಕಾರಣ

ನಮ್ಮ ತೀರ ಪ್ರಾಚೀನ ಕಾಲದ ಸಮಾಜಜೀವನವನ್ನು

ನೋಡುತ್ತ ಬಂದರೆ, ಧರ್ಮ-ರಾಜಕಾರಣಗಳನ್ನು ಬೇರೆ ಬೇರೆ ನೋಡುವವರು ಸಿಕ್ಕುವುದು ಅಪರೂಪ. ಅಂದಿನವರ ಆಡಳಿತ ಕಟ್ಟಳೆ (ರಾಜ್ಯತಂತ್ರ), ಪರಂಪರೆ, ಅಧಿಕಾರ, ಸ್ವದೇಶಭಾವನೆ ಗಳೆಲ್ಲವೂ ಧರ್ಮದಲ್ಲಿಯೆ ಆಡಕವಾಗಿದ್ದುವು. ಅಂತೆಯೇ ಅಂದಿನ ಧರ್ಮವೆಂದರೆ ಸಂಕುಚಿತಾರ್ಥದ ರೂಢಧರ್ಮವಾಗಿರಲಿಲ್ಲ. ವಿಶಾಲ ಸಮಾಜದ ವಿಕಾಸಜೀವನದ ಸಾಮಾಜಿಕ ಸುವ್ಯವಸ್ಥೆಯ ತಂತ್ರಕ್ಕೆಯೇ ಧರ್ಮವೆಂದು ಕರೆಯಲಾಗುತ್ತಿತ್ತು. ಇಡಿ ಸಮಾಜದ ಬಿಡಿವ್ಯಕ್ತಿಯ ಎಲ್ಲ ಕರ್ತವ್ಯಗಳಿಗೆಯೆ 'ಸ್ವಧರ್ಮ ಪಾಲನ' ಎಂದು ಹೇಳಲಾಗುತ್ತಿತ್ತು. ಇವರಿಂದಲೇ ಸರ್ವಸುಖ, ಸಮಭಾವ, ವ್ಯಕ್ತಿವಿಕಾಸಗಳು ಸರಿಯಾಗಿ ಸಾಧಿಸುತ್ತಿದ್ದುವು. 'ಹೀಗಿದ್ದರೂ ಬಹುಜನ ಸಮಾಜವು ವೈದಿಕಸ್ವಾರ್ಥ ಧರ್ಮದ ಸಾಮ್ರಾಜ್ಯವಾವಕ್ಕೆ ಬೇಸತ್ತದ್ದೇಕೆ?'— ಎಂಬ ಪ್ರಶ್ನೆ ಸಹಜ ವಾಗಿಯೇ ಏಳಬಹುದು. ಉತ್ತರವನ್ನು ಹುಡುಕುವುದಕ್ಕಾಗಿ ಬಸವಣ್ಣನವರ ಕಾಲಕ್ಕಿಂತಲೂ ಹಿಂದೆ ಹೋಗಿ, ಹಿಂದೀ ಸಂಸ್ಕೃತಿ ಯನ್ನು ನೋಡಬೇಕು. ಅಂದಿನ ಸಂಸ್ಕೃತಿ ಇಂದಿನಂತೆ ನಗರ-ದ್ವಾಗಿರದೆ ಹಳ್ಳಿಯದಾಗಿತ್ತು. ಅರಸು ನಗರಗಳಲ್ಲಿ ರಾಜ್ಯವಾಳು ತ್ತಿದ್ದರೂ, ಸಂಸ್ಕೃತಿಯ ಸೂತ್ರ ಮುನಿಪುಂಗವರ ಕೈಗಳಲ್ಲಿತ್ತು. ಅರಸುಗಳ ಪಟ್ಟಾಭಿಷೇಕದ ಕಾಲಕ್ಕೆ "ಇದೋ ಪ್ರಜೆಗಳೇ, ಇವನು ನಿಮ್ಮ ಅರಸು! ನಮ್ಮ ಅರಸು ಸೋಮ!" ಎಂದು ಮುನಿವರ್ಯರು ಹೇಳುತ್ತಿದ್ದರು. ರಾಜ್ಯಸೂತ್ರಕ್ಕಿಂತಲೂ ಸಂಸ್ಕೃತಿ ಸೂತ್ರಕ್ಕೆ ಬೆಲೆ ಹೆಚ್ಚಿತ್ತು. ಅವರ ದುರುಪಯೋಗವಾಗುತ್ತ ಬಂದಂತೆ ಆ ಶಕ್ತಿ ಕ್ಷೀಣಿಸುತ್ತಾ, ಬಸವಣ್ಣನವರ ಕಾಲದವರೆಗೆ ಎಂದರೆ ರಾಜ್ಯಸೂತ್ರದ ಅಧೀನವಾಗಿ, ಅರಸರ ಆಡಳಿತದ ಕೈ-ಗೊಂಬೆಯಾಯಿತು. ಅಂದಿನಿಂದಲೂ ಜನಸಾಮಾನ್ಯರ ಶ್ರದ್ಧೆ, ಅದರ ಮೇಲಿಂದ ಹಾರುತ್ತ ನಡೆಯಿತು. ಅಂದೆಯೆ ಸಮಾಜ-ಧರ್ಮದ ಉದಯವಾಯಿತು. ಅಂದಿನ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಸಾಮ್ಯವನ್ನು ಬಹುಮಟ್ಟಿಗೆ ಕಾಣಬಹುದು. ಇಂದಿ ನಂತೆಯೆ ಅಂದಿನ ಮಹಾತ್ಮ, ಬಸವಣ್ಣನವರು, ಬುದ್ಧ-ಜೈನ ಧರ್ಮಗಳಂತಹ ಪರಪಾಳಿಗಳನ್ನು ಎದುರಿಸುತ್ತ, ವೈದಿಕಧರ್ಮದ ಮುಸುಕಿನಲ್ಲಿ ಸಾಮ್ರಾಜ್ಯಶಾಹಿಯ ಬೆಂಬಲವಾಗಿ ನಿಂತ ರೂಢ-ಧರ್ಮವನ್ನು ಎದುರಿಸುವ ಉಭಯ ಸಂಕಟ ಬಂದಿತ್ತು. ಅಂತೆಯೆ ಬಸವಣ್ಣನವರ ಆಂದೋಲನವು, ವೈದಿಕಧರ್ಮದ ವೈರಿಯ ರೂಪ ದಲ್ಲಿ ಪ್ರಚಾರ ಪಡೆಯಿತು. ರಷಿಯದಲ್ಲಿಯ ಸಮಾಜ ಕ್ರಾಂತಿಯು ಕೂಡ ಧರ್ಮದ ವೈರಿಯೆಂದೇ ಅನೇಕರೀತಿಯಲ್ಲಿ ಪ್ರಚಾರ ಪೊಂದಿದೆ. ಝಾರ್ ಶಾಹಿಯ ಬೆಂಬಲವಾಗಿ ಬೆಳೆದು ನಿಂತ ಅಧರ್ಮವು ಧರ್ಮದ ಹೆಸರಿನಿಂದ ನಡೆಯಿಸಿರುವ ಅತ್ಯಾಚಾರವೇ ಆದಕ್ಕೆ ಮುಳುವಾಯಿತಲ್ಲದೆ, ಕೇವಲ ಅದರ ಮೇಲಿನ ವೈರದಿಂದಲ್ಲ ವೆಂದು ಅನೇಕ ಸಮತಾವಾದಿಗಳು ಹೇಳುವ ಮಾತನ್ನೇ ತಮ್ಮ ಕ್ರಾಂತಿಯನಂತರ—ತುಸುದಿನಗಳವರೆಗಾದರೂ ಬಸವಣ್ಣನವರು ಬಾಳಿದ್ದರೆ— ಹೇಳಬಹುದಾಗಿತ್ತಲ್ಲವೇ? ಬಸವಣ್ಣನವರು ದುಷ್ಟ ನಲ್ಲಿಯ ದುಷ್ಟತನವನ್ನು ದ್ವೇಷಿಸುವವರಲ್ಲದೆ ವ್ಯಕ್ತಿಯನ್ನಲ್ಲ ವೆಂಬುದನ್ನು ಮರೆಯಲಾಗದು.

ಇಂದಿನ ಮಹಾತ್ಮಾಗಾಂಧಿಯವರು ಕೇಳುವ ಸಮತೆಯ ಬೇಡಿ ಕೆಗೆ ಸಾಮ್ರಾಜ್ಯಶಾಹಿಯು ಇತ್ತ ಸಮಾಧಾನದಂತೆ, ಬಸವಣ್ಣ ನವರ ಕಾಲಕ್ಕೂ "ಸರ್ವೇಜನಾಃ ಸುಖಿನೋಭವಂತು" ಎಂಬ ವೈದಿಕಧರ್ಮದ 'ಆಟ್ಲಾಂಟಿಕ್ ಘೋಷಣೆ' ಯು ಸದಾಸಿದ್ಧ ನಿತ್ತು. ಜಗತ್ತಿನ ಶಾಂತಿಯ ಮಾತಿದ್ದರೂ ಅದು ಅಸ್ಪಯಿಸುವ ಕ್ರಮವನ್ನು ತಾವೇ ಹೇಳಬೇಕಾಗಿರುವಂತೆ 'ಸರ್ವೇಜನಾಃ ಸುಖಿನೋಭವಂತು' ಘೋಷಣೆಯಲ್ಲಿಯ ಸರ್ವಜನರೆಂದರೆ ಯಾರೆಂಬುದೂ ನಿರ್ಣಯವನ್ನು ಕಾಣದೆ ಇದ್ದಿತು. ನಿಷ್ಠುರ ಸತ್ಯದ ಇಂದಿನ 'ಆಟ್ಲಾಂಟಿಕ್ ಘೋಷಣೆ' ಗೂ ಅಸ್ಪಷ್ಟ ಅಸತ್ಯದ ಆ ಘೋಷಣೆಗೂ ಅಂತರವಿದ್ದರೆ ಅದು ಕೇವಲ ಶಾಬ್ದಿಕ. ಒಂದು ವೇಳೆ ಆ ಘೋಷಣೆಯೇ ನೂರಕ್ಕೆ ನೂರರಷ್ಟು ನಿಜವಿದ್ದರೆ, ಜನ ಸಾಮಾನ್ಯರ ಚಿಕಿತ್ಸಕ ದೃಷ್ಟಿಯಲ್ಲಿ ಅಸಾಮಾನ್ಯ ಬಸವಣ್ಣ ನವರ ಪಯದ ಧರ್ಮದ ಪ್ರಚಾರವೇಕೆ ಪ್ರಭಾವಿಯಾಗಬೇಕು.?

'ಪಯವೇ ಧರ್ಮದ ಮೂಲಪಯ್ಯಾ' ಎಂಬುವಾಗಿ ಮಾನವ-ಧರ್ಮದ ಮೂಲವನ್ನೇ ಕಂಡುಹಿಡಿದ ಬಸವಣ್ಣನವರ ತಪಸ್ಸಿದ್ದಿ ಎಷ್ಟು ಶುದ್ಧವಾಗಿರಬೇಕು? ಪಯವು ಹೃದಯದಿಂದ ಬರಬಹು-ದಲ್ಲದೆ ನ್ಯಾಯದಿಂದಲ್ಲ. ಮಾನವನ ಸುಖ-ದುಃಖಗಳ ನಿರ್ಣಯವು ತರ್ಕದ ನ್ಯಾಯಮಂದಿರದಲ್ಲಲ್ಲ; ಭಾವನೆಯ ಹೃದಯಮಂದಿರ-ದಲ್ಲಿ. ಬಸವಣ್ಣನವರು ಹೃದಯಧರ್ಮದ ತಳಹದಿಯ ಮೇಲೆ ಸ್ವಯಂಪೋಷಿತ ಸ್ವಾವಲಂಬಿ ಸಮಾಜವನ್ನು ಕಟ್ಟಿದ್ದನ್ನು ಕಂಡು, ಅವರ ಅನುಕರಣ ಮಾಡುತ್ತ ತಮ್ಮಲ್ಲಿಯೂ ಅನೇಕ ಸಮಾಜಗಳು ಪರಿವರ್ತನಮಾಡಿಕೊಂಡದ್ದನ್ನು ಕಾಣಬಹುದು. ಮೂರವೇಕೆ? ಬಸವಣ್ಣನವರ ವಿರೋಧಿಗಂಳತೆಯೆ ಇದ್ದ ವೈದಿಕ ಧರ್ಮಾಭಿಮಾನಿಗಳು ತಮ್ಮಲ್ಲಿಯೆ ವೈದಿಕರು, ಗೃಹಸ್ಥರು ಎಂಬ ಭೇದ ಮಾಡಿಕೊಂಡು, ಸ್ವಯಂಪೋಷಿತ ಸಮಾಜವನ್ನಾಗಿ ಮಾಡಿ-ಕೊಳ್ಳಲು ಯತ್ನಿಸಿಲ್ಲವೆ? ಜಗತ್ತನ್ನೇ ಮೆಚ್ಚಿಸಬಹುದಾದ ಒಂದು ಅಮೃತಶಕ್ತಿ ಕರ್ನಾಟಕದಲ್ಲಿ ಬೆಳಗಿ ಬಾಳಿದೆಯೆಂದ ಮೇಲೆ, ಕನ್ನಡಕುಲವು ಧನ್ಯವೆಂದೇ ಹೇಳಬೇಕು. ಅನೇಕರು ಹೇಳು-ವಂತೆ ಇನ್ನುಮುಂದೆ ಜಾಗತಿಕ ಸ್ಥಿತ್ಯಂತರಗಳಿಗೆ ಭಾರತವು ನಾಟ್ಯರಂಗವಾಗುವುದಿದ್ದರೆ, ಕನ್ನಡದ ಕುಲಗುರುವಾದ ಬಸವಣ್ಣ-ನವರ ಸ್ಫೂರ್ತಿಯಿಂದ ಶಕ್ತಿ ಪಡೆದ ಕರ್ನಾಟಕವು ಮುಖ್ಯ-ವಾತ್ರ ವಹಿಸಬೇಕಾಗಿದೆಯೆಂಬುದು ಸ್ವಯಂಸಿದ್ಧವಲ್ಲವೇ? ಆ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸುವುದಕ್ಕಾಗಿ ಕನ್ನಡ-ಕುಲವು ಇಂದಿನಿಂದಲೇ ಸಿದ್ಧತೆಯನ್ನು ನಡೆಯಿಸುತ್ತಾ, ಮಹಾತ್ಮ ಬಸವಣ್ಣನವರ ನಿಜವಾದ ಜೀವನದ ಜಯಂತಿಯನ್ನು ಅರಿತು, ಆಚರಿಸಲಿ!

ಚೌಡಿ (ಸಣ್ಣ ಕತೆ) ★ ಶೀ. ವಿ. ಜಿ. ಭಟ್ಟ, ಸಾಂಗಲಿ

★

ಚೌಡಿ ಮರೆಮಾಡಿದ ಗಂಗಿ, ಬುಡುಬುಡಿಕನ ನೆರವಿನಿಂದ ತಂದೆಗೆ ದೊರೆತಳು; ಆದರೆ ಮಾತುಕೊಟ್ಟಂತೆ ಆತ ಮಗಳನ್ನು ಹೊನ್ನನಿಗೆ ಕೊಡಬೇಕಾಯಿತು!

★

[Comedy is the falsification of life ಎಂದು ಎಲ್ಲಿಯೋ ಕೇಳಿದ ಮಾತು ನೆನಪಾದಾಗಲೆಲ್ಲಾ
Happy living is an Art of falsifying Life ! ಎಂದು ಹುಚ್ಚುಚ್ಚೇ ಹೇಳಿಕೊಂಡು ಸುಮ್ಮನಾಗುತ್ತೇನೆ —ಲೇ.]

ಸುಮಾರು ಎಂಟು ತಾಸು ರಾತ್ರಿಯಾಗಿರಬಹುದು. 'ಬಂಗಾರಮಕ್ಕಿ' ಯೆಂಬ ಹಳ್ಳಿಯ ಹೊಲವೊಂದರಲ್ಲಿ ಕೈದೀಪ ಮಿನುಗುತ್ತಿತ್ತು. ಪಡುವಣ ಬಾನಿನಲ್ಲಿ ಚಂದ್ರಮನು ಬಿಣ್ಣೆಯ ಗುಂಡಿನಂತೆ—ತಿಳಿ ಬಿಳಿ ಮೋಡಗಳು ತುಸು ಕಡಿದ ಮೊಸರಿನಂತೆ—ಶೋಭಿಸುತ್ತಿರಲು, ತಿರೆಯು 'ನೋಡುಗಬ್ಬ'ವಾಗಿತ್ತು. ಭತ್ತವು ಪೈರಿಗೆ ಬಂದಿತ್ತು. ನಡುಹಾಳಿಯ ಬಳಿ ಜುಳು-ಜುಳೆಂದು ಹರಿಯುತ್ತಿದ್ದ ನೀರಿನಲ್ಲಿ ಬಾನ್ದೇವಿಯು ಮೋರೆ ನೋಡಿಕೊಳ್ಳುತ್ತಿದ್ದಳು. ಆ ಕಾವ್ಯಪೆರಕವನ್ನು ಕಂಡು, ತಾರೆಗಳನ್ನು ದಿಟ್ಟಿಸಿ "ಜುಕ್ಕೆ! ಬಾನ್ಯೊಗದ ಮಡಿಬೊಕ್ಕೆ!!" ಎಂದು ಯಾರಾದರೂ ಸ್ಫೂರ್ತಿಗೆ ನಾಲಗೆ ಕೊಟ್ಟರೆ—ನಾನೊಮ್ಮೆ ಹೇಳಿದ್ದೆ—ಅದಕ್ಕೆ ಚಿಕ್ಕಪರೂ ಮುದುಕರೂ (ಸೇರದ) ಇನ್ನಿತರರೂ ಕಿವಿಗೊಡದೆ ಇರುವುದೇ ಲೇಸು! ಅವರಿಗೂ ಹಾಗೆಯೆ ಎನಿಸಿದರೆ, ವಿಶ್ವವೆಲ್ಲಾ ಪ್ರಾಯಗೊಂಡಂತೆ; ರಸಿಕವಾದಂತೆ! ಹೊಲಕ್ಕೆ ಹೊಂದಿ ಕಬ್ಬಿನ ಗದ್ದೆಗಳು. ಕಬ್ಬು-ಭತ್ತಗಳನ್ನು ತಿನ್ನಬರುವ ಪಂದಿಗಳನ್ನು ಹೆದರಿಸಲು ನಿರ್ಮಿಸಿಟ್ಟ ಮಾನವರೂಪಿ 'ಬೆಜ್ಜು'ಗಳು, ಕಾವ್ಯಸಮಾಧಿಯಲ್ಲಿದ್ದ ಕವಿಗಳಂತೆ ಭೂ-ಗಗನವ್ಯಾಪಿತಚಿತ್ತವಾಗಿ ನಿಂತಿದ್ದುವು. ಗಾಳಿಯಿಂದ ಅಲ್ಲಾಡಿ ಸದ್ದೆಬ್ಬಿಸಿ, ಹೊಲಕ್ಕೆ ಹಾವಳಿಮಾಡುವ ಪ್ರಾಣಿಗಳಿಗೆ ಎಚ್ಚರಿಕೆ ಕೊಡಲೆಂದು ತೂಗುಬಿಟ್ಟ ಬರಿಯ ಚಿಮಣಿ ಡಬ್ಬಿಗಳು, ತಂಗಾಳಿಗೆ ತೂಕಡಿಸುವ ಕಬ್ಬು-ಕನ್ನಿಕೆಯರ ಪೈಸೋಂಕಿನಿಂದ ರೋಮಾಂಚನಗೊಂಡು, ಡಬಜ್ ಡಬ್ಬೆಂದು ಕಿರುದನಿಸ್ಫೈಯುತ್ತಿದ್ದುವು. ಭೂಮಿಯನ್ನು ಸುತ್ತಿಬರುವ ಮಾರುತನಿಗೆ ಚಾಮರ ಢಾಳಿಸಲೆಂದು ಕಬ್ಬಿನ ಸೋಗೆಗಳು ಜೀತನಗೊಂಡಿದ್ದುವು. ಕಬ್ಬಿನ ಗದ್ದೆಯಲ್ಲಿ "ತನ್ಮಿಂದಲೇ ಜಗಕ್ಕೆ ಜೀವಳು" ಎಂದು ತೇಲಾಡುವ ಹೊನ್ನೆಹುಳು-ಮಣಿಮಾಲೆಗಳು ಸೊಬಗಿಗೆ ಕಳೆಕೊಟ್ಟಿದ್ದುವು. ಕಬ್ಬಿನ ಗದ್ದೆಗಳ ಮೇಲೆ ಕಿರುಚಾಡಿಯ ಗುಡ್ಡಗಳು. ಅವುಗಳೋರೆಯಿಂದ ಜಿರ್‌ಜಿರ್ರೆಂಬ ರಜನೀರಾಗವು ಕೇಳಬರುತ್ತಿತ್ತು. ಮೈಲಾಡಿಯ ಮಾಳದಲ್ಲಿ ಹೊಲಗಾಯಿಯ ಹುಯ್ಯೆಂಬ ಕೂಗು, ಸುಪ್ತ-ನಿಶೆಯನ್ನು ಭೇದಿಸಿ ಬರುತ್ತಿತ್ತು. ಏನನ್ನೋ ನಿಟ್ಟಿಸುತ್ತ ಬೊಗಳುವ ನಾಯಿಗಳ ಬವ್ವಾರವವೂ ಮೇಲಿಂದ ಮೇಲೆ ನೀರವತೆಯಲ್ಲಿ ಕಲ್ಲೋಲವಾಡುತ್ತಿದ್ದುವು. ಭದ್ರಪೀಠರಾಗಿ ತಪಸ್ಸಿಗೆ ಕುಳಿತ ಋಷಿಗಳಂತೆ ಕಾಣುವ ಸಹ್ಯಾದ್ರಿಗೆ ಮಂಜು-ಭಸ್ಮ ಬಳಿದಿತ್ತು. ಎತ್ತರವನೇರಿದಂತೆ (ಚಿತ್ತದ) ಕ್ಷಿತಿಜ-ಪರಿಧಿಯು ಹೆಚ್ಚುತ್ತದೆ. ಗುಡ್ಡ ಹತ್ತಿದರೆ, ಬಾನಿನೊಟ್ಟಿಗೆ ಮಲಗಿದ ಶರಧಿಯೂ 'ಬಸವರಾಜ' ದುರ್ಗಾದಿ ನಡುಗಡ್ಡೆಗಳೂ ಕಂಗೊಳಿಸುತ್ತಿದ್ದುವು. ಈ ರೀತಿ ನಗ್ನ-ನಿಸರ್ಗದ ನಿಲುವು.

ನಡುಹಾಳಿಯ ಮೇಲೆ ಹೋದರೆ, ಕೆಳಗೆ ಪಿಸುಮಾತು ಕೇಳಿಬರುತ್ತಿತ್ತು.

"ಆ ಮುದ್ಕೆಗ ನನ್ನಪ್ಪಾ-ಅವಿ ನನ್ಕೊಟ್ಬೇಕೂಂಕತ ಮಾಡ್ಯಾರ ನಿನ್ನೆ ಜಂಜೀ ಕೂಡೆ ಮುದ್ಕ ಕರ್ಯಣ್ಣ ಬಂದಿದ್ದ. 'ಗಂಗಿನ್ಕೊಟ್ರೆ ಎರ್ಡುವಾರ್ಲು (ಜೋಡು) ಎತ್ತು, ಐವತ್ರುಪಾಯಿ ಕೊಡ್ತೀನೀಂತ ಹೇಳ್ತಿದ್ದ. ಆಗೂದೂಂಕತ ಹೇಳ್ಯಾನ ನಮ್ಮಪ್ಪ. ಆದ್ರ ಈ ವಿಷ್ಯಾ ನನ್ಮುಂದೆತ್ತಿಲ್ಲ. ಮೇಲ್ನ ಸೋಮ್ವಾರ್ವೇ ಮುದ್ವೀ ಮಾಡ್ಬಿಬ್ಬೇಕೂಂಕತ ನಿಚ್ಚ್ಯಾ ಮಾಡ್ದಾಂಗ ಕಾಣ್ತೀದು. ನಾನದ್ಕೇ...." "ಏನೂ ಇಚಾರಾ ಮಾಡ್ಬ್ಯಾಡ; ನಾನವ್ನ ಹೊನ್ನಪ್ಪ! ಧೈರ್ಯಾಬಿಟ್ರಾಗೋದಿಲ್ಲ!" ಮುಂದಿನ ಮಾತು ತೀರ ಕಿವಿ-ತುಟಿಗಳಾಗಿದ್ದುವು.

ಐದು ನಿಮಿಷದ ಮೇಲೆ ಕೆದರಿದ ಕೂದಲಿನ ಕಾರ್‌ಕನ್ಯೆಯೊರ್ವಳು, ಪಾಳಿಯ ಮೇಲಿಂದ ಊರ ಕಡೆಗೆ ಸಾಗಿದಳು. "ಬಿಟ್ಕೊಡ್ಲಾಕ ಬರ್ಬೇಕಾ?" ಅಂತ ಮಾಳದಿಂದ ಬಂದ ಪ್ರಶ್ನೆಗೆ "ಬೇಡ್ಬೇಡಾ" ಅನ್ನುತ್ತಾ ಅವಳು ಕೊಪ್ಪ ಸೇರಿದಳು.

ಹೊನ್ನಪ್ಪನಿಗೆ ಬಂಗಾರಮಕ್ಕಿಯಲ್ಲಿ ಒಂದು ತುಂಡು ಹೊಲ; ಅದಕ್ಕೆ ಹೊಂದಿಯೇ ಸಣ್ಣ ಗುಡಿಸಿಲು. ಮುದಿತಾಯಿಯೊಬ್ಬಳೇ ಅವನ ಬಾಳಿನಾಧಾರ. ಮರುದಿನ ಅವ್ವನಿಗೆ 'ಗಂಗಿ' ಹೇಳಿದ ಕತೆಯನ್ನೆಲ್ಲಾ ಹೇಳಿದನು; ಅವಳ ಗತಿಗೆ ಮುದುಕಿಯು ಬಹಳ ಬೆಂದಳು.

" ಹೆಸರ ಬ್ಯಾಳೀ ಒಯ್ದು
ಕೆಸರ ಕಲಸೀದ್ಹಾಂಗ |
ಹಸುಮಗಳನೊಯ್ದು ಮುದುಕಾಗ | ಕೊಟ್ಟರು–
ದುಸ್ಮಾನದವರು ತವರವರು || "

ಎಂದು ಕೇಳಿ ಕೇಳಿ ಬಾಯಿಪಾಠ ಮಾಡಿದ ಗರತಿಯ ಹಾಡಿನ ಸೊಲ್ಲೊಂದನ್ನು ಎಳೆದೆಳೆದು ಹೇಳಿದಳು. ಗಂಗಿಯ ಪ್ರೇಮ ತನ್ನ ಮೇಲಿದೆಯೆಂದೂ ತಂದೆ-ತಾಯಿಗಳ ಹೀನಕಾರ್ಯಕ್ಕೆ ಪ್ರತಿಭಟಿಸಿ ನಿಲ್ಲಲು ಅವಳು ಸಿದ್ಧಳಿದ್ದರೂ ತನ್ನ ಸಹಾಯವನ್ನು ಕೋರುತ್ತಾಳೆಂದೂ ತಾಯಿಗೆ ತಿಳಿಸಲು, ಅವಳು ಆನಂದದಿಂದ " ಭಾಳ ಜಲೋದಾಯ್ತು, ನಿಮ್ಮಿಬ್ರ ಜೋಡಿ ನೋಡಿ ಸಾಯೋ ಭಾಗ್ಯ ಬಂದದೆ. ದೇವ್ರು ಒಳ್ಳೇದ್ಮಾಡ್ಲಿ!" ಎಂದು ಹರಿಸಿದಳು.

ಮರುದಿನ ಯಾರಿಗೂ ತಿಳಿಯದಂತೆ ಮಲೂಕುರ್ವೆಗೆ ಹೋಗಿ, ಅಲ್ಲೊಂದ. ಬಿಡಾರಕಟ್ಟಿ ತಾಯನ್ನಿರಿಸಿ ಬಂದನು ಹೊನ್ನಪ್ಪ.

* * *

ಮದುಮಗಳನ್ನು ಜೆಪ್ಪರಕ್ಕೆ ತರುವ ಹೊತ್ತಾಯಿತು. ಎಲ್ಲಿ ಹುಡುಕಿದರೂ ಗಂಗಿಯಿಲ್ಲ. ಚೌಡಿ ಅಡಗಿಸಿದಳೆಂದು ತಿಳಿದು ಬೀರಪ್ಪ-ಬೆಳ್ಳವ್ವರು ಕಾಯಿ ಒಡೆದರು. ಪೂಜೆ ಹೇಳಿಕೊಂಡರು. ಎಷ್ಟೇ ಹರಕೆ ಹೇಳಿಕೊಂಡರೂ ಗಂಗಿಯಿಲ್ಲ. ಮದುವೆಯ ಜೆಪ್ಪರದಲ್ಲಿ ಗದ್ದಲವೆದ್ದಿತು. ವಧುವು ಮಾಯವಾದ ಸುದ್ದಿಕೇಳಿ ವರನು ಕಾತರಗೊಂಡನು. ಬಾಸಿಂಗ ಕಟ್ಟಿಕೊಂಡು ಬಂದು ಬರೀ ಕೈಯಲ್ಲಿ ಹೋದರೆ—ಅದರಲ್ಲೂ ಮೂರನೆಯ ಮದುವೆ!–ಜನರೇನೆಂದಾರು ? ನಾನು ಹಾಸ್ಯದ ಹುತ್ತವೇ ಆಗುವ ಹೊತ್ತು ಬರುವುದೆಂದು ಕರ್ಯಣ್ಣನು ನಿಶ್ಚಯಿಸಿ, ಬೆವರುದ್ದಿಕೊಳ್ಳುತ್ತ ಕುಳಿತನು! ಅಷ್ಟರಲ್ಲಿ ಬೀರಪ್ಪ ಬಂದು ಎಲ್ಲಾ ವಿಸ್ತಾರವಾಗಿ ಹೇಳಿ, ತನ್ನ ಎರಡನೆಯ ಮಗಳನ್ನು—ಗಂಗಿಯ ತಂಗಿಯನ್ನು–ಕೊಡಲೊಪ್ಪಿದನು. ವರನ ಮುಖ ತುಸು ಅರಳಿತು. ಅಂತೂ ಒಂದು ಮಜಾ—ಮದುವೆಯಾಯಿತು.

ನಾಲ್ಕಾರು ದಿನಗಳಾದರೂ ಗಂಗಿಯ ಪತ್ತೆಯಿಲ್ಲ. ಅಂದು ಗಂಡ-ಹೆಂಡಿರಿಬ್ಬರೂ ಅಳಿಯನೊಡನೆ ವಿಚಾರಿಸುತ್ತ ಕುಳಿತಿರಲು, ಬುಡುಬುಡಿಕೆಯವನೊಬ್ಬನು ಗದಿಬಿಡಿಮಾಡುತ್ತ ಬಂದನು. ಯಂತ್ರ ಸುರುವಾದಂತೆ " ದುಕ್ಕಾ ಬಿಡು, ಚಿಂತೀ ಬಿಡು, ಕಳೆದ ವಸ್ತು ಸಿಕ್ತಾದ....ಸುಭ ಆಗ್ತಾದ....ಹೆಬ್ಬಾಶಿ ಮಾಡ್ಬಾರ್ದು.... ಮಕ್ಕಳ ಮ್ಯಾಗ ಸತ್ತೀಮಾಡ್ಬಾರ್ದು...." ಎಂದು ಕೂಗುತ್ತಿರಲು, ಬೀರಪ್ಪನು ತೆಪ್ಪಗಾದನು. ಕುತೂಹಲ ಹೆಚ್ಚಿ ತಾಸರ್ಧ ಅವನೊಡನೆ ಏಕಾಂತದಲ್ಲಿ ಮಾತು ಸಣೆಯಿತು. ತನ್ನೊಟ್ಟಿಗೆ ಬಂದರೆ ಚೌಡಿ ಕದ್ದೊಯ್ದ ಮಗಳನ್ನು ತೋರಿಸುತ್ತೇನೆಂದೂ' ಅವಳ ಇಚ್ಛೆಯ ಪ್ರಕಾರ ' ಮದ್ವೀ ' ಮಾಡಿಕೊಳ್ಳಲು ಬಿಡುತ್ತೇನೆಂತ ಆಣೆ ಮಾಡಬೇಕೆಂದೂ ಹೇಳಿ, ಬುಡುಬುಡಿಕೆಯವನು ನಡೆದನು. " ನಿನ್ನಗಳ ಮದ್ವಿ ಮುದ್ಯಾನೊಟ್ಟಿಗೆ ಮಾಡಿದ್ರ ಅವ್ರು ಹಳ್ದಾಗ ಬಿದ್ದು ಸ್ಯಾತಿದ್ರು!" ಎಂದು ಬುಡಿಬುಡಿಕೆಯು ಹೇಳಿದ ಮಾತು ಅವರೆಲ್ಲರನ್ನೂ ಶಾಂತಗೊಳಿಸಿತು.

* * *

ಹೊನ್ನಪ್ಪನ ಬಿಡಾರದೆದುರು ಬುಡುಬುಡಿಕೆಯವನೂ ಬೀರಪ್ಪನೂ ನಿಂತಿದ್ದರು. ' ಟಮಕಿ'ಯ ಸದ್ದು ಸಾಗಿತ್ತು. " ಬಾ ಹೊರ್ಗ ಕನ್ನೆ, ಚೌಡೀ ಬಿಡು ಹೊರ್ಗ ಹೆಣ್ಣು...." ಮುಂತಾದ ಪ್ರಾರ್ಥನೆ ಮುಗಿಯಲು, ಗಂಗೆಯು ಬಂದು ತಂದೆಗೆರಗಿದಳು. ಬುಡುಬುಡಿಕೆಯು ಕಪ್ಪಡವನ್ನೆಲ್ಲಾ ತೆರೆದು ಹೊನ್ನಪ್ಪನಾದನು; ಮುದಿತಾಯಿಯೂ ಹೊರಗೆ ಬಂದಳು. ಅವರು ಮೂವರೂ ಬೊಳ್ಳೆಂದು ನಕ್ಕರು. ಬೀರಪ್ಪನು ಮಾತ್ರ ಬಿರಿಬಿರಿ ನೋಡುತ್ತ ನಿಂತ. ಆದರೆ ಮಗಳ ಮನಸ್ಸಿನ ಪ್ರಕಾರ ನಡೆಯಗೊಡುವೆನೆಂದು ಆಣೆ ಮಾಡಿದ್ದ. ಗಂಗಿಯು ತೆಂಗಿನ ಮರಕ್ಕೆ ಆತು ನಿಂತಿದ್ದಳು. ಮಾತಾಡಲು ಧೈರ್ಯವಿದ್ದಿಲ್ಲ. ಹೊನ್ನಪ್ಪನೇ ವಿಷಯವನ್ನೆಲ್ಲಾ ವಿಶದೀಕರಿಸಿದನು. ಮಗಳ ಗಟ್ಟಿಗತನಕ್ಕೂ ಹೊನ್ನಪ್ಪನ ಬುದ್ಧಿವಂತಿಕೆಗೂ ಬೀರಪ್ಪನು ತಲೆದೂಗಿದನು. ಕಳೆದ ಮಗಳು ಸಿಕ್ಕಳು, ಯೋಗ್ಯ ಅಳಿಯನಾದ. ಗಂಗೆಯ ತಂಗಿಗೆ ಮಾತ್ರ ಮುದುಕ ಗಂಡ ಗಂಟುಬಿದ್ದ—ಮುಂತಾಗಿ ವಿಚಾರಮಾಡುತ್ತ ಬೀರಪ್ಪನು ಅಚಲವಾಗಿ ನಿಂತನು. ಹೊನ್ನಪ್ಪನು ಹಾಸ್ಯಕ್ಕೆ ಟಮಕಿಯನ್ನೆತ್ತಿ " ನಿನ್ನ ಎರಡನೆಯ ಮಗಳೀಗೂ ಬೇರೆ ಗಂಡನ್ನ ಹುಡುಕು! ಮಾಡಿದಿ, ನೀನೊಂದು ಧುಡುಕು! ಆಸೇಗೆ ಬಲಿಯಾಗೋದು ಭಾಳ ಕೆಡಕು! ಮುದ್ಯಾಗೆ ಮಗಳ ಕೊಟ್ಟೆ! ಹೆಂಗಸಿನ ಹೃದಯ ಹೊಕ್ಕಡೇ ನೀನು ಕೆಟ್ಟೆ! ನನ್ನ ಗೆಳ್ಯಾನ್ನ ಹೆಸ್ರು ಜಟ್ಟಿ! ಆಪ್ಗ ಕಿರಿಮಗ್ಳ ನೀನು ಕೊಟ್ಟು ಬಿಟ್ಟೆ! ಅಂದ್ರ ನಿನಮುಷ್ಟಿ—ಹಿಡಿತಾದ ಹೊನ್ನ ಮಾವಾ! ಮನೀಗೆ ಹೋಗೋಣ ಬೆಳಗುಜಾವಾ !! "

ಮುಂತಾವಾಗಿ ಬೈಲುಸೀಮೆಯ ಗತ್ತಿದಲ್ಲಿ ಹೇಳಲು, ಬೀರನಿಗೂ ನಗು ತಡೆಯಲಾಗಲಿಲ್ಲ.

ಮರುದಿನ ನಾಲ್ವರೂ ದೋಣಿಯೇರಿ ಬಂಗಾರಮಕ್ಕಿಗೆ ಬಂದರು. ಕರ್ಯಣ್ಣನು ಮರುತಿಂಗಳೇ ಸತ್ತನು. ಜಟ್ಟಿಗೆ ಗಂಗಿಯು ತಂಗಿ!

ಮಾಳದಲ್ಲಿ ಕೈದೀಪವ್ರರಿಯುತ್ತಿದೆ. ಗಂಗಿ ಹೊನ್ನಪ್ಪರ ನಲ್ವಾತು ಕೇಳಿ ಬರುತ್ತಿದೆ. ಹೊನ್ನಪ್ಪನ ಲಾವಣೀ (ಇಷ್ಟು ದಿನ ಮರೆತಿತ್ತು) ಗತ್ತು. ಸುತ್ತಲಿನ ಗುಡ್ಡಗಳಲ್ಲಿ ಮಾರ್ದನಿಗೊಂಡು ಬರುತ್ತಿದೆ.





೩೦ ಪುರೋಗಾಮಿ ಶಿಕ್ಷಕನು

ಬರೆದವರು : ಶ್ರೀ. ಗಜೇಂದ್ರಗಡ ಶ್ಯಾಮರಾಯರು. ಪ್ರಕಾಶಕರು: ದಿ ಸ್ಟೂಡಂಟ್ಸ್ ಓನ್ ಬುಕ್ ಡಿಪೊ, ಧಾರವಾಡ. ಪುಟಗಳು : ಕ್ರಾ. ಅ. ೮+೩೭. ಬೆಲೆ ೨-೪-೦.

ಶ್ರೀ. ಮೀಮಾಂಸಿ ಅವರು ಈ ಗ್ರಂಥದ ಮುನ್ನುಡಿಯಲ್ಲಿ ಹೇಳಿದಂತೆ "ಶಿಕ್ಷಣವು ತಾತ್ತ್ವಿಕವಾಗಿ ಒಂದುಶಾಸ್ತ್ರ, ವ್ಯಾವಹಾರಿಕವಾಗಿ ಒಂದು ಕಲೆ." ಶಾಸ್ತ್ರವನ್ನು ಅಭ್ಯಸಿಸಬೇಕಾಗುವುದು; ಕಲೆಯನ್ನು ಸಾಧಿಸಬೇಕಾಗುವುದು. ಶಾಸ್ತ್ರದ ಅಭ್ಯಾಸ, ಕಲೆಯ ಸಾಧನೆ ಈ ಎರಡೂ ದೃಷ್ಟಿಯಿಂದ ಈ ಪುಸ್ತಕವು ಬರೆದಂತಿದೆ ಎಂಬುದು ಅದರ ಪರಿವಿಡಿಯನ್ನು ನೋಡಿದರೆ ತಿಳಿಯದಿರಲಾರದು.

'ಶಿಕ್ಷಣವೆಂದರೇನು ?' ಎಂಬ ವ್ಯಾಪಕ ಪ್ರಶ್ನೆಯಿಂದ ಮೊದಲು ಮಾಡಿ ಶಿಕ್ಷಣದ ವಿವಿಧ ಅಂಗಗಳ ಜರ್ಜೆ ನಡೆವುದು. ಶಿಕ್ಷಣಕ್ಕೂ ಮಾನಸಶಾಸ್ತ್ರಕ್ಕೂ ಇದ್ದ ನಿಕಟಸಂಬಂಧವನ್ನು ತೋರಿಸಲಾಗಿದೆ. ಮಗುವು ಕಲಿವ ಬಗೆ ಹೇಗೆ ಎಂಬುದನ್ನು ವಿವರಿಸಲಾಗಿದೆ. ಶಿಕ್ಷಣದಲ್ಲಿ ಉಪಕರಣಗಳ ಅವಶ್ಯಕತೆ, ಅವುಗಳ ಸ್ಥಾನಮಾನ ಮೊದಲಾದುವುಗಳ ವಿವೇಚನೆಯೂ ಬಂದಿದೆ. ಶಿಸ್ತು, ಸಂಘಟನೆ, ವಿದ್ಯಾರ್ಥಿಗಳ ಶಾಲೆಯ ಒಳ-ಹೊರಗಣ ಚಟುವಟಿಕೆಗಳ ವಿಚಾರ ಇದರಲ್ಲಿ ಸೇರಿವೆ. ಆಧುನಿಕ ಶಿಕ್ಷಣದಲ್ಲಿ ಬಂದ ಪ್ರಯೋಗಗಳೂ ಅಡಕವಾಗಿವೆ. ಅನುಬಂಧದಲ್ಲಿ 'ಶಿಕ್ಷಣದಲ್ಲಿ ತಂದೆತಾಯಿಗಳ ಸಹಕಾರವು' ಇರುವುದರಿಂದ, ಶಿಕ್ಷಣದ ಎಲ್ಲ ವಿಭಾಗಗಳು—ಮಗು-ಶಿಕ್ಷಕ-ಶಾಲೆ—ಉಪಕರಣ—ತಂದೆತಾಯಿ—ಅವುಗಳ ಕಾರ್ಯರೇಖೆಯೊಂದಿಗೆ ಕೊಡಲ್ಪಟ್ಟಿವೆಯಾದುದರಿಂದ ಒಂದೆ ಹೊತ್ತಿಗೆಯಲ್ಲಿ 'ಶಿಕ್ಷಣದ ಎಲ್ಲ' ವೂ ಅಡಕವಾಗಿದೆ. ಇದರ ಹೆಸರು ಹೇಳುವಂತೆ ಇದರ ನೋಟವು ಪುರೋಗಾಮಿಯಾಗಿದೆ.

ಆದರೆ, ವ್ಯಾಪಕವಾದ ಶಿಕ್ಷಣಶಾಸ್ತ್ರವನ್ನು, ಕಲೆಯನ್ನು ಒಂದೆ ಹಿಡಿತದಲ್ಲಿ ತರಬೇಕೆಂದಾಗ ಎಲ್ಲ ವಿಭಾಗಗಳಿಗೆ ಸಾಕಷ್ಟು ಲಕ್ಷ್ಯ ಪೂರಯಿಸುವುದಾಗುವುದಿಲ್ಲವೆಂಬುದನ್ನು ನೆನೆಯಬೇಕಾಗುವುದು. ಒಂದೊಂದು ವಿಭಾಗಗಳೇ ಇವಿ ಹೊತ್ತಿಗೆಯ ರೂಪವನ್ನು ತಳೆಯಬಹುದಾದ ಈ ದಿನಗಳಲ್ಲಿ ಎಲ್ಲದರ ಸಂಕ್ಷಿಪ್ತ ವಿವರಣೆಯಿಂದ ಸಮಾಧಾನವಾಗಬಹುದೆ?—ಎಂಬ ಸಂಶಯವೂ ಬರುವುದುಂಟು. ಮರುಕ್ಷಣವೆ ದೇಶದ ಬಡತನದ ವಿಚಾರ ಬಂದು ಒಂದೆ ಕೈಪಿಡಿಯ ಉಪಯುಕ್ತತೆ ಹೆಚ್ಚುವುದು. ಆ ದೃಷ್ಟಿಯಿಂದ ಶ್ರೀ. ಶ್ಯಾಮರಾಯರ ಈ ಕೃತಿಯು ಹಿಡಿತದಲ್ಲಿಯೆ ಹಿಡಿಹೊನ್ನು ಕೊಟ್ಟಿದೆ. ಒಂದು ಹಿಡಿ ಹೊನ್ನಿನಿಂದ 'ಹಿಡಿ ಹಿಡಿ' ಹೊನ್ನು ಹೊರಬೀಳಬಹುದೆಂಬಾಸೆ. ಇನ್ನು ಒಂದು ಮಾತು: ಅದಕ್ಕೆ ಅನಿವಾರ್ಯ ದೋಷವೆನ್ನಬೇಕಾಗುವುದು. ಭಾಷೆಯಲ್ಲಿ ಸಂಸ್ಕೃತ ಪದಪ್ರಯೋಗ ಹೆಚ್ಚು. ಕನ್ನಡದಲ್ಲಿ ಇನ್ನೂ ಪಾರಿಭಾಷಿಕ ಪದಗಳು ಸಿದ್ಧವಾಗಿಲ್ಲವಾದ್ದರಿಂದ ಸಂಸ್ಕೃತದ ನೆರವು ಬೇಕಾಗುವುದು. ಹಾಗೆ ಸಿದ್ಧ ಮಾಡಿಕೊಂಡರೆ ತಪ್ಪಲ್ಲ. ಆದರೆ ಸಾಮಾನ್ಯ ಜನತೆಗೆ ಅವುಗಳನ್ನು ಮೈಗೂಡಿಸಿಕೊಳ್ಳಲುಗಡುಚಾಗಬಹುದೇನೋ ಎಂಬ ಹೆದರಿಕೆ.

ಕನ್ನಡದ ಶಬ್ದಗಳೆ ಪಾರಿಭಾಷಿಕ ಪದಗಳಾಗಬೇಕಾದರೆ, ಕೇವಲ ಕನ್ನಡ ಕಲಿತವರು (ಪರಭಾಷೆಯ ಪ್ರಭಾವವಿಲ್ಲದವರು) ಶಾಸ್ತ್ರೀಯವಾಗಿ ವಿಚಾರಿಸಿದರೆ ಆ ಸಂದರ್ಭದಲ್ಲಿ ಬರುವ ಶಬ್ದಗಳು ಅಚ್ಚ ಕನ್ನಡ—ತಿರುಳ್ಗನ್ನಡದ ಶಬ್ದಗಳು ಆಗುವುವು. ಅಂತಹ ದಿನದ ಬರವಿಗಾಗಿ ಈ ಬಗೆಯ ಪುಸ್ತಕಗಳು ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

—ನೀರಂಗ.

೩೫ ಆಶುನಾಟಕಗಳು

ಸಂಪಾದಕರು- ಶ್ರೀವಾನ್ ಜಿ. ಬಿ. ಜೋಶಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

ಇದರಲ್ಲಿ 'ಕವಿಯ ಸೋಲು' 'ಸೌಭಾಗ್ಯ' 'ಸಾಲದಕ್ಕೆ' ಎಂಬ ಮೂರು ಏಕಾಂಕ ನಾಟಕಗಳಿವೆ. ಮನೋಹರ ಗ್ರಂಥಮಾಲೆಯ ಸಂಚಾಲಕರು ಕಳೆದ ವರುಷ ಗದುಗಿನಲ್ಲಿ ನಡೆಯಿಸಿದ ವಸಂತ ಸಾಹಿತ್ಯೋತ್ಸವ ಸಮಯದಲ್ಲಿ, ಇದ್ದುದಿದ್ದ ಸಾಗೆ ಮೈವೆತ್ತ ನಾಟಕಗಳಿವು. ಆಗ ಆಶುನಾಟಕ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದ್ದಿತು. ಸಂಜೆಯ ಐದುಗಂಟೆಗೆ ಒಂದು ಘಟನೆಯನ್ನು ನಾಟಕದ ವಸ್ತುವಾಗಿ ಕೊಡುವುದು; ಆ ಘಟನೆಯನ್ನೇ ಬೆಳೆಯಿಸಿಕೊಂಡು ಏಕಾಂಕ ನಾಟಕವನ್ನಾಗಿ ರಾತ್ರಿ ಒಂಬತ್ತು ಗಂಟೆಗೆ ಅದಿ ತೋರಿಸುವುದು. ಈ ಪೈಲಾಟದಲ್ಲಿ ಬಾಗಿಲು ಕೋಟೆ, ಬೆಂಗಳೂರು, ಗದುಗುಗಳ ನಾಟ್ಯವಿಲಾಸಿಗಳು ಭಾಗವಹಿಸಿ, ಎಲ್ಲರೂ ಪ್ರೇಕ್ಷಕರನ್ನು ಮೆಚ್ಚಿಸಿ ಮೇಲಾಟದಲ್ಲಿ ಯಶಸ್ವಿಗಳಾದರು. ಬಾಗಿಲುಕೋಟೆಯವರು ಕೊಡಿಸಿಕೊಂಡ ನಾಟಕ 'ಕವಿಯ ಸೋಲು'; ಬೆಂಗಳೂರವರು ಕಲ್ಪಿಸಿಕೊಂಡುದು 'ಸೌಭಾಗ್ಯ'; ಗದುಗಿನವರು ಆಡಿತೋರಿಸಿದುದು 'ಸಾಲದಕ್ಕೆ!'

(೫೬೧ನೆಯ ಪುಟ ನೋಡಿರಿ.)

ನಗೀಗೆ ನೇವಿದ್ಯ

ಭೂಮಿ ದುಂಡಗಿದೆ.

ಶಿಕ್ಷಕ :— ಎಲ್ಲಾರೂ ಕಿವಿಗೊಟ್ಟು ಚೆನ್ನಾಗಿ ಕೇಳ್ರಿ : ನಾವು ಎಲ್ಲಿಂದ ಹೊರಡುವೆವೋ ಅಲ್ಲಿಗೇ ತಿರುಗಿ ಬರುತ್ತೇವೆ. ಆದ್ದರಿಂದ ಈ ಭೂಮಿ ದುಂಡಗಾಗಿ ಇರುವುದೆಂದು ಗೊತ್ತಾಗುತ್ತದೆ !

ಗುಂಡ :— ಹಾಂಗಾದರ ಸರ್, ನಮ್ಮ ಮನೀನೂ ದುಂಡಗಾಗಿ ಅದಽ ಏನು ? ನಾವು ಎಲ್ಲಿಗೆ ಹೊರಡಬೇಕಾದರೂ ಮನಿಂದಽನೇ ಹೊರಡತೀವಿ ; ಮತ್ತೆ ಮನಿಗೆ ತಿರುಗಿ ಬರತೀವಿ !

* * *

ನೆರೆಮನೆಗೆ ಬೆಂಕಿ !

ಬೆಂಕಿಯನ್ನಾರಿಸುವ ಬಂಬಿನ ಮನೆಯ ಟೆಲಿಫೋನಿನಲ್ಲಿ ಯಾರೋ ಕೂಗಿದರು. ಅಧಿಕಾರಿ ಹೋಗಿ ಕಿವಿಗೊಟ್ಟು ನಿಂತ :

" ಹ್ಯಾಲ್ಲೊ, ಹ್ಯಾಲ್ಲೊ ! ನೀರಿನ ಬಂಬಿನ ಸ್ಟೇಶನ್ನು ಅಹುದೇನು ? "

" ಅಹುದು, ಇಷ್ಟೇಕೆ ಗಾಬರಿಯಾಗಿದ್ದೀರಿ ? ಏನು ವಿಷಯ ? "

" ಇಲ್ಲಿ ನೋಡ್ರಿ, ನಾನು ನಮ್ಮ ಹಿತ್ತಲಿನೊಳಗೆ ಒನ್ನೆ ಒನ್ನೆಯೆ ತೋಟಮಾಡಿಸಿದ್ದೇನೆ. ತೀರ ಚಿಕ್ಕ ಚಿಕ್ಕ ಸಸಿಗಳನ್ನು ಇದೀಗ ಹಚ್ಚಿಸಿದ್ದೇನೆ !.... "

" ಅಲ್ರೀ, ನೀವು ಬೆಂಕೀ ಆರಿಸೂ ಬಂಬಿನ ವಿಷಯಕ್ಕೆ ಮಾತನಾಡತಿದ್ದೀರಿ ; ತೋಟದ ಸಲುವಾಗಿ ಏನು ಹೇಳತಾ ಇದ್ದೀರಿ ? ಎಲ್ಲಿಯಾದರೂ ಬೆಂಕಿ.... "

"ಅದೇ ಅದೇ, ನಾನು ಹೇಳತಿರೂದು ! ನಮ್ಮ ನೆರೆಮನೆಗೆ ಬೆಂಕಿ ಹತ್ತಿ ಉರೀತಾ ಅದೆ. . ಈಗ ನಿಮ್ಮನ್ನ ಅವರು ಕರೆಯಿಸಬಹುದು. ಬಂದಾಗ ದಯವಮಾಡಿ ನನ್ನ ಹಿತ್ತಲ ಕಡೆಗೆ ಬರಬ್ಯಾಡ್ರೀ ಅಂತ ನನ್ನ ವಿನಂತಿ ಅದೆ ನಿಮಗ ! "

* * *

ಉಪಕಾರ ತೀರಿಸಲು ಮಾರ್ಗ

"ಡಾಕ್ಟರ್ ಸಾಹೇಬ್, ನಿಮ್ಮ ಉಪಕಾರವನ್ನ ನಾನು ಹೇಗೆ ತೀರಿಸಲಿ ? "

" ಅದಕ್ಕಾಗಿ ಅಷ್ಟೊಂದು ಯೋಚಿಸಬೇಕಾದ ಕಾರಣವೇನೂ ಇಲ್ಲ. ನಗದು ಹಣದಿಂದ, ಚೆಕ್ಕಿನಿಂದ, ಮನಿಯಾರ್ಡರಿನಿಂದ, ಪೋಸ್ಟಲ್ ಆರ್ಡರಿನಿಂದ—ಯಾವ ಮಾರ್ಗವನ್ನಾ ತಾವು ಅನುಸರಿಸಬಹುದು ! "

* * *

ಮೊದಲನೆಯ ನಂಬರು

ಗುಂಡ :— ಯಾವುದರಲ್ಲಿಯೂ ಮೊದಲನೇ ನಂಬರು ಹೊಡೀತಿರಬೇಕು ಅಂತ ಹೇಳತಿರತೀಯಲ್ಲಾ—ಅಹುವಾ ?

ತಂದೆ :—ಹೌದಪ್ಪಾ, ಪರೀಕ್ಷೆ ಪಾಸಾಗಿ ಮೊದಲನೇ ನಂಬರು ಪಡೆದೆ ಏನು ?

ಗುಂಡ :— ಛೇ ! ಛೇ ! ಹಾಂಗಲ್ಲ, ನಾಪಾಸಾದ ವಿದ್ಯಾರ್ಥಿಗಳೊಳಗೆ ಮೊದಲನೆಯ ನಂಬರಿಗೆ ನನ್ನ ಪೆಸರೇ ಅವೆ !

* * *

ನಾ ಅಷ್ಟೇ ಯಾಕೆ !

ಮನೆಗೆ ಬಂದ ರಾಮರಾಯರು ಗುಂಡನನ್ನು ಕುರಿತು ಹೇಳಿದರು :

" ನೋಡು ಗುಂಡಾ, ನೀನು ತುಂಬಾ ಬುದ್ಧಿವಂತ ಇದ್ದೀಯಾ ! ನಿನ್ನ ತಾಯಿ ಯಾವುದನ್ನೇ ಹೇಳಲಿ, ಕೂಡಲೆ ಪಿಟ್ಟೆನ್ನದೆ ಮಾಡಿಬಿಡುತ್ತೀಯಪ್ಪಾ ! "

ಗುಂಡ ಕೂಡಲೇ ಹೇಳಿದ :

" ನಾನಷ್ಟೇ ಯಾಕೆ ರಾಯರೆ, ನಮ್ಮಪ್ಪ ಸುದ್ದಾ ಕೂಡಲೆ— ಪಿಟ್ಟೆನ್ನದೆ— ಮಾಡಿಬಿಡುತ್ತಾನೆ ! "

* * *

ಅಪರಾಧಿಯು ಜನಾಬು

" ನೀನು ತಪ್ಪುಗಾರ ಅಹುದೋ ಅಲ್ಲವೋ ? "

" ಅಲ್ಲ ಸ್ವಾಮಿ, ಎಂದೂ ಅಲ್ಲ ! "

" ಇದಕ್ಕಿಂತಾ ಮೊದಲು ಎಂದಾದರೂ ನಿನಗೆ ಶಿಕ್ಷೆ ಆಗಿತ್ತೇನು ? "

" ಎಲ್ಲೀದರೀ ರಾವ್‌ಸಾಬ್, ಇದಕಿಂತಾ ಮೊದಲು ನಾ ಪೋಲೀಸರಿಗೆ ಎಂದೂ ಸಿಕ್ಕೇಇಲ್ಲರಿ ! "

* * *

(೫೬ನೆಯ ಪುಟದಿಂದ ಮುಂದುವರಿದುದು.)

ಮೂರೂ ಒಂದೊಂದು ಸಾಮಾಜಿಕ ಚಿತ್ರವನ್ನು ರೇಖಿಸುವಂತಮವಾಗಿವೆ ; ಸಹಜ ರಮಣೀಯತೆಯಿಂದ ಕೂಡಿದ್ದು ಕಲಾಪೂರ್ಣವಾಗಿವೆ. ಆ ದು ಅವಿತೋರಿಸಿದಾಗ ನೋಡಿ ಆನಂದಪೊಂದಿದ ಪ್ರೇಕ್ಷಕರು ಹಲವು ಜನರು, ಇಂದು ಇವುಗಳನ್ನು ಓದಿದ ವಾಚಕರೂ ಅಷ್ಟೇ ಆನಂದವನ್ನು ಅನುಭವಿಸಬಹುದಾಗಿವೆ. ಬೇಕಾಗಿ ಬರೆಯಬೇಕೆಂದು ಕುಳಿತರೂ ಅನೇಕ ಸಲ, ಈ ಬಗೆಯ ನಾಟಕಗಳನ್ನು ಇಷ್ಟೊಂದು ಸ್ವಭಾವರಮಣೀಯವಾಗಿ ರೂಪಿಸುವುದು ಸಾಧ್ಯವಿಲ್ಲವೆಂದೂ ಯಾರೂ ಹೇಳುವಂತಿದೆ. ಮ. ಗ್ರಂ. ಮಾಲೆಯ ಸಂಚಾಲಕರಂತೆ ಅಲ್ಲಲ್ಲಿಯ ಸಾಹಿತ್ಯೋತ್ಸವದ ಸಂಚಾಲಕರೂ ಈ ಬಗೆಯ ಅಪನಾಟಕ ಸ್ಪರ್ಧೆಗಳನ್ನೇರ್ಪಡಿಸುತ್ತಿದ್ದರೆ, ಹಲವು ಒಳ್ಳೆಯ ಕೃತಿಗಳ ನಿರ್ಮಾಣದ ಶ್ರೇಯಸ್ಸಿಗೆ ಅವರು ಭಾಗಿಗಳಾಗಬಹುದು.

— 'ಕುಂಜವಿಹಾರಿ'



ವಿಜಯವಲ್ಲ, ವಿಷಾದಕರ

ಕಳೆದ ತಿಂಗಳ ನಾ. ನಿ. ನೋಟದಲ್ಲಿ ಲೆಕ್ಕಹಾಕಿದಂತೆ ಮುಖ್ಯಸ್ಥರ ಪ್ರಯತ್ನಗಳು ಕೊನೆಗೂ ವಿಫಲವಾದುವು. ಫೈನಾಯರು ಹಾಕಿದ ಕರಾರುಗಳಿಂದ ಆಳರಸರಿಗೆ ಸಂಧಾನಕ್ಕಿಂತ ಸ್ವಾಭಿಮಾನ ಪ್ರತಿಷ್ಠಾಪನೆಯೆ ಹೆಚ್ಚು ಇಷ್ಟವಾಗಿದೆ–ಎಂಬುದು ಸ್ಪಷ್ಟವಾಗಿದೆ. ಸರಕಾರದ ಈ ಧೋರಣೆಯನ್ನು ಮುಂಚೆ ಅನೇಕ ಸಂದರ್ಭಗಳಲ್ಲಿ ಟೀಕಿಸಿದ್ದೇವೆ. ಈಗ ಒಂದೇ ಮಾತನ್ನು ಮತ್ತೆ ಮತ್ತೆ ಹೇಳುವದು ಅಗತ್ಯವಾಗಿದೆ. ಅದೆಂದರೆ, ಕಾಂಗ್ರೆಸಿನೊಡನೆ ಸಂಧಾನವನ್ನು ಮಾಡಿ ದೇಶದ ಯುದ್ಧ ಕಾರ್ಯಕ್ಕೆ ನೈತಿಕಬಲವನ್ನು ಒದಗಿಸಿಕೊಡುವದು ಮುಖ್ಯವಾಗಿ ಸರಕಾರದ್ದೇ ಹೊಣೆ. ಹೀಗಿರುವಾಗ, ತಾನು ಆ ಕಾರ್ಯವನ್ನು ಮಾಡದೆ, ಇನ್ನೊಬ್ಬರು ಮಾಡಬೇಕೆಂದರೆ ಅಡ್ಡಿಯನ್ನುಂಟುಮಾಡುವ ಸರಕಾರದ ಧೋರಣವು ವಿಷಾದಕರವಾಗಿದೆ ಎಂದು ಹೇಳದೆ ಗತ್ಯಂತರವಿಲ್ಲ. ಇಂದಿನ ಪರಿಸ್ಥಿತಿ ಇನ್ನಿಷ್ಟು ವಿಷಾದಕರವಾಗಿದೆ ಎಂಬುದು ಕಳೆದ ತಿಂಗಳು ಬ್ರಿಟಿಶ್ ಪಾರ್ಲಮೆಂಟಿನಲ್ಲಿ ಭಾರತದ ಬಗ್ಗೆ ನಡೆದ ಚರ್ಚೆಯಿಂದ ಸ್ಪಷ್ಟವಾಗುವದು. ಭಾರತಮಂತ್ರಿಗಳೂ ಬ್ರಿಟಿಶ್ ಮಂತ್ರಿಮಂಡಳದ ಬೇರೆ ಮಂತ್ರಿಗಳೂ ಈ ಚರ್ಚೆಯಲ್ಲಿ ಮುಖ್ಯಭಾಗವನ್ನು ವಹಿಸುವವರಾದ್ದರಿಂದ, ಇದೊಂದು ಮಹತ್ವದ ಸಂದರ್ಭ ಎಂದು ಅನೇಕರು ಸಹಜವಾಗಿಯೆ ಆಶಿಸಿಕೊಂಡಿದವರಾಗಿದ್ದರು. ಆದರೆ ಇಂತಹ ಅನೇಕ ಚರ್ಚೆಗಳಂತೆ ಈ ಚರ್ಚೆಯೂ ಒಣ ಆಡಂಬರವೆ ಎನಿಸಿತು. ಚರ್ಚೆಯಲ್ಲಿ ವಿಜಯವೆಂದರೆ, ವಸ್ತುಸ್ಥಿತಿಯಲ್ಲಿ ವಿಷಾದಕರ.

ಅಹಂಕಾರ ಮತ್ತು ಅಜ್ಞಾನ

ಭಾರತ ಮಂತ್ರಿಗಳಾಗಲಿ, ಕೆಲಸಗಾರ ಪಕ್ಷದ ಧುರೀಣರಾದ ಮೇಜರ್ ಆಟ್ಲಿಯವರಾಗಲಿ ನುಡಿದ ಭಾಷಣಗಳನ್ನು ಓದಿದರೆ, ಇಂದಿನ ರಾಜಕೀಯ ಜಿಕ್ಕಟ್ಟಿಗೆ ಬ್ರಿಟಿಶರ ಅಹಂಕಾರದಷ್ಟೆ ಅವರ ಅಜ್ಞಾನವೂ ಕಾರಣವಾಗಿದೆ-ಎಂದು ಹೇಳಬಹುದು. ಅಧಿಕಾರದ ಹೊಣೆಗಾರಿಕೆಯನ್ನು ಹೊತ್ತವನಿಗೆ ಇಂದಿನ ಹಿಂದುಸ್ತಾನದ ಜ್ಞಾನವೇ ಇಲ್ಲ ಎಂದರೆ ಆಶ್ಚರ್ಯವಾಗಬಹುದಾಗಿದೆ; ಆದರೆ ಅಸತ್ಯವೂ ಎನಿಸದಾಗಿದೆ. ಕಳೆದ ಕೆಲವೆ ವರ್ಷಗಳಲ್ಲಿ ಹಿಂದುಸ್ತಾನದ ಜನತೆಯು ರಾಜಕೀಯ ಶಿಕ್ಷಣದಲ್ಲಿ ಎಷ್ಟು ಮುಂದುವರಿದಿದೆ ಎಂಬುದರ ಕಲ್ಪನೆಯೆ ಇಂಗ್ಲಂಡಿನಲ್ಲಿದ್ದ ಅಧಿಕಾರಿಗಳಿಗೆ ಇಲ್ಲದಂತಾಗಿದೆ. (ಅಥವಾ ಈ ಜನತೆಯನ್ನು ಅಜ್ಞಾನದಲ್ಲಿಡುವದೆ ಇದುವರೆಗಿನ ತಮ್ಮ ಮುಖ್ಯ ಧ್ಯೇಯವಾಗಿದ್ದುದರಿಂದ, ಬೇರೊಂದು ಪರಿಸ್ಥಿತಿಯನ್ನು ಒಪ್ಪಲೇ ಕೂಡದೆಂಬ ವಿಚಾರವಿದೆಯೆ?) ಜನತೆಯು ಮುಂದುವರಿದುದಕ್ಕೆ ಕಾಂಗ್ರೆಸ್ಸು ಮತ್ತು ಅದರ ಮುಂದಾಳುಗಳು ಹೆಚ್ಚಾಗಿ ಕಾರಣವಾಗಿದ್ದಾರೆ ಎಂಬುದೂ ಸ್ಪಷ್ಟವಿದೆ. (ಈ ಕಾರಣಕ್ಕಾಗಿಯೂ ಅಮೆರಿಸಾಹೇಬರು ಅದನ್ನು ಒಪ್ಪಬಾರದೆಂದು ನಿರ್ಧರಿಸಿರುವರೆ?) ಸ್ವಾತಂತ್ರ್ಯದ ತತ್ತ್ವ, ರಾಜಕೀಯ ಘಟನೆ, ಆರ್ಥಿಕ ಅಧಿಕಾರ—ಮುಂತಾದ ವಿಷಯಗಳಿಗಾಗಿ ಇಂದು ಕೇವಲ ನಮ್ಮ ಮುಂದಾಳುಗಳೇ ಉಪನ್ಯಾಸವನ್ನು ಕೊಡುವದಿಲ್ಲ; ಅಂತಹ ಉಪನ್ಯಾಸಗಳೂ ಅಗತ್ಯವಿಲ್ಲದಷ್ಟು ಸಾಮಾನ್ಯಜನತೆ ಮುಂದುವರಿದಿದೆ. ಹಿಂದೆ ಒಂದಾನೊಂದು ಕಾಲದಲ್ಲಿ 'ಪಾಪ! ಅಜ್ಞಾನಿ ಜನವಿದು! ಅಶಕ್ತ ದೇಶವಿದು! ಇಲ್ಲಿ ಶಿಕ್ಷಣ-ಸಂರಕ್ಷಣೆಗಳು ನಮ್ಮಿಂ ಕರ್ತವ್ಯವಾಗಿದೆ, ಆ ಹೊಣೆ ನಮ್ಮದೆ!' ಎಂದು ಬ್ರಿಟಿಶರು ಹೇಳುತ್ತಿದ್ದರು; ಆಗ ಆ ಮಾತು ಅಸಮಂಜಸವೆನಿಸುತ್ತಿರಲಿಲ್ಲ. ಆದರೆ ಮಗು ಪ್ರಬುದ್ಧವಾದ ಮೇಲೂ ಅಂತಹ ಹಿರಿತನದ ಮಾತುಗಳನ್ನೇ ಕೊಚ್ಚಿದರೆ ಅಸಮಂಜಸವಷ್ಟೆ ಅಲ್ಲ, ಅವಮಾನಕಾರಕವೂ ಎನಿಸದಿರದು. ಇಂದು ಈ 'ಫೊರೆಸಾಹೇಬ'ರ ಧೋರಣವು, ಹಿಂದುಸ್ತಾನದ ಜನತೆಯ ಮೇಲೆ ಹೀಗೆಯೆ ಬರೆಯನ್ನು ಕೊಡುತ್ತಲಿದೆ. "ನಮ್ಮ ಪ್ರಯತ್ನಕ್ಕೆ ಪುರಸ್ಕಾರ ದೊರೆಯದ್ದರಿಂದ ಸಾಮಾನ್ಯ ಜನತೆಯಲ್ಲಿ ಸಿಟ್ಟು ಮೂಡಬಹುದಾಗಿದೆ, ಯಾವುದನ್ನು ಆಗಗೊಡಬಾರದೆಂದು ಯತ್ನಿಸುತ್ತಿದ್ದೆನೊ ಕೊನೆಗೂ ಅದೇ ಆಯಿತು!' ಎಂದು ರಾಜಾಜಿಯವರು ವಿಷಾದಪಟ್ಟುದು ಪರಿಸ್ಥಿತಿಯ ನಿಜವಾದ ದ್ಯೋತಕವಾಗಿದೆ.

ಮುಂದಾಳುತನ ಮಾಯವಾಯಿತು!

ಇದಲ್ಲದೆ, ಸೀಳೆಯೆ ನೂಚಿಸಿದಂತೆ ತಾವು ಅವಶ್ಯವಿದ್ದುದನ್ನು ಮಾಡದೆ ಅನ್ಯರು ಮಾಡಬೇಕೆಂದಾಗಲೂ ಆಡ್ಡಬರುವ ಸರಕಾರದ ಧೋರಣದಿಂದ, ಜನತೆಯಲ್ಲಿ ಅಸಮಾಧಾನವಲ್ಲದೆ ಅಸಹಾಯತೆಯೂ ಮೂಡಿದೆ. ಈ ಪರಿಸ್ಥಿತಿ ಇನ್ನಿಷ್ಟು ಕ್ಷೋಭನೀಯ. ಇದುವರೆಗೆ ಇಂದಿಲ್ಲ ನಾಳೆ ಮಧ್ಯಸ್ಥರ ಪ್ರಯತ್ನಕ್ಕೆ ಯಶಸ್ಸು ದೊರೆಯಬಹುದು ಎಂಬ ಆಶೆಗೆ ಅವಕಾಶವಿದ್ದಿತು. ಆದರೆ ಸರಕಾರವು ಹೆಜ್ಜೆ-ಹೆಜ್ಜೆಗೂ ಹೆಚ್ಚಾದ ಹಟದಿಂದ ಪ್ರತಿಕೂಲ-ವೃತ್ತಿಯನ್ನು ತೋರಿಸಲು, ಆ ಆಶೆಗೆ ಈಗ ಅವಕಾಶವೆ ಇಲ್ಲದಂತಾಗಿದೆ. ಮಧ್ಯಸ್ಥರಲ್ಲಿ ಅನೇಕರು ಜನತೆಯ ಪ್ರೀತಿ-ವಿಶ್ವಾಸಗಳಿಗೆ ಪಾತ್ರರಾದ ಮುಂದಾಳುಗಳಾಗಿದ್ದಾರೆ. ಆ ಮುಂದಾಳುಗಳು ಈಗ ಕೈ ಜಿಲ್ಲಿದರು. ಇದರ ಪರಿಣಾಮವೇನಾಗಬಹುದಾಗಿದೆ? ದೇಶದಲ್ಲಿ, ರಾಜಕೀಯ ರಂಗದಲ್ಲಿ ಮುಂದಾಳುತನವೇ ಇಲ್ಲದಂತಹ ಪರಿಸ್ಥಿತಿ ಬರಬಹುದಲ್ಲವೆ? ಈ ಪರಿಸ್ಥಿತಿ ದೇಶಕ್ಕೆ ಹಿತವಲ್ಲ, ಸರಕಾರಕ್ಕೆ ಇಷ್ಟವಲ್ಲ. ಆದರೂ ಸರಕಾರದ ವಿನಾಕಾರಣ-ವೃತ್ತಿಯು ಮೂಲಕವಾಗಿಯೆ ಈ ಪರಿಸ್ಥಿತಿ ಕ್ರಮೇಣ ಜನತೆಯನ್ನು ಬಡಿದುಕೊಳ್ಳಬಹುದಾಗಿದೆ. ಬಡತನ, ಬರಗಾಲ, ಆಹಾರಪೂರ್ಯೆಕೆಗಳ ತೊಂದರೆ, ನಿರಾಶೆ, ನಿಸ್ಸಹಾಯತೆ—ಇವುಗಳಿಗೆ ಕಳಸ ಕಟ್ಟುವಂತೆ ಮುಂದಾಳುತನದ ಅಭಾವ! ಮುಂದಾಳುತನ ಇಲ್ಲವೆಂದರೆ ಸೂರ್ಯನಿಲ್ಲದಂತೆ; ಕತ್ತಲೆಗೆ, ಕಳ್ಳಕಾಕರಿಗೆ ಅವಕಾಶ; ಜೀವನದ ಸುರಕ್ಷಿತತೆಗೆ ಧಕ್ಕೆ! ಈ ಮಾತನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳೋಣ, ಧೈರ್ಯದಿಂದ ಒಪ್ಪೋಣ. ಇಲ್ಲವಾದರೆ, ಯಾವುದು ಅನಿವಾರ್ಯವಾದೀತು ಎಂಬುದರ ಅರಿವು ನಮಗೆ ಉಳಿಯಲಿಕ್ಕಿಲ್ಲ.

ಅಸಂಬದ್ಧ ಆಶೆ

ಈ ಚರ್ಚೆ ಕೇವಲ ನಮ್ಮ ನಿರಾಶಾವಾದದಿಂದ 'ಕಲ್ಪನೆ ಕಣ್ಣು ಕಟ್ಟಿದ ಕತ್ತಲೆ' ಎಂದು ಕೆಲವರಿಗಾದರೂ ಸಂಶಯ ಬರಬಹುದಾಗಿದೆ; ಯಾಕೆಂದರೆ, ಹಿಂದುಸ್ತಾನದ ಪರಿಸ್ಥಿತಿ ಸುಧಾರಿಸಲು ಇನ್ನೂ ಆಶೆಗೆ ಅವಕಾಶವಿದೆ ಎಂದು ಈ ಕೆಲವರಿಗೆ ಎನಿಸಬಹುದಾಗಿದೆ. ಆ ಅವಕಾಶವೆಂದರೆ, ಮಿತ್ರರಾಷ್ಟ್ರಗಳ ಯುದ್ಧ-ಧ್ಯೇಯ ಮತ್ತು ಆಮೇರಿಕೆಯ ಒತ್ತಾಯ. ಕಳೆದ ತಿಂಗಳು ಶ್ರೀಮತಿ ರಿಯಾಂಗ-ಕೈ-ಶೇಕರ್ ನ್ಯೂಯಾರ್ಕ್‌ನಲ್ಲಿ ಮಾಡಿದ ಭಾಷಣದಲ್ಲಿ 'ಸಂಚಿತ ಜವಾಹರರನ್ನು ಬಂಧಮುಕ್ತ ಮಾಡುವುದಗತ್ಯವಾಗಿದೆ' ಎಂದು ಹೇಳಿಲ್ಲವೆ? ನಿಜ. ಕಳೆದ ಎರಡು ವರ್ಷಗಳಿಂದ 'ಚೀನಕ್ಕೆ ಹೆಚ್ಚಿನ ಸಹಾಯ ಅಗತ್ಯ. ಬರ್ಮಾ ದಾರಿಯ ಸ್ವಾಧೀನತೆ ಅಗತ್ಯ' ಎಂದೂ ಅವರು ಹೇಳುತ್ತಿರುವುದಿಲ್ಲವೆ?—ಎಂದು ನಮ್ಮ ಪ್ರಶ್ನೆ. ಆ ಮಾತುಗಳಿಗೆ ನ್ಯೂಟರ ಉತ್ತರವೇನು? 'ಗಾಳಿಯಿಂದ, ಕ್ರಮೇಣ ಜಪಾನಿನ ಕಡೆಗೆ ನಮ್ಮ ಯುದ್ಧಮುಖವನ್ನು ತಿರುಗಿಸುವೆವು. ಚೀನಕ್ಕೆ ಕ್ರಮೇಣ, ಶಕ್ಯವಿದ್ದಷ್ಟು, ಹೆಚ್ಚು ಹೆಚ್ಚು ಸಾಮಗ್ರಿಗಳನ್ನೂ ಒದಗಿಸಿಕೊಡುತ್ತೇವೆ' ಎಂದು. ಹಾಗೆಯೆ ಈ ಸಂದರ್ಭದಲ್ಲೂ ಹೇಳಬಹುದಾಗಿದೆ. 'ಕ್ರಮೇಣ ಪಂಡಿತ ಜವಾಹರರನ್ನು ಬಂಧಮುಕ್ತ ಮಾಡಲು, ಯುದ್ಧ ಮುಗಿದಮೇಲೆ, ಭಾರತೀಯರೆಲ್ಲರೂ ಒಂದಾದಮೇಲೆ, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನೂ ಕೊಡುವವರುವೆವೆ' ಎಂದು ಉತ್ತರವನ್ನು ಕೊಡಬಹುದಾಗಿದೆ; ಇದೇ ಉತ್ತರವನ್ನೆ ಕೊಡುವರು ಎಂದು ಬಲವಾದ ಊಹೆಯೂ ನಮ್ಮದಿದೆ. ಇದಲ್ಲದೆ ಇನ್ನೂ ಒಂದು ಮಾತು: 'ಹಿಂದುಸ್ತಾನದ ಸ್ವಾತಂತ್ರ್ಯದ ಪ್ರಶ್ನೆಯು ಪೂರ್ವಖಂಡದಲ್ಲಿ ಮಿತ್ರರಾಷ್ಟ್ರಗಳ ಯುದ್ಧಧ್ಯೇಯದ ಒಕ್ಕಣಗಲ್ಲಿ ನಂತಿದೆ' ಎಂದು ಶ್ರೀಮತಿ ರಿಯಾಂಗರು ಹೇಳಿರುವರಷ್ಟೆ? ಆ ಮಾತನ್ನು ಬ್ರಿಟಿಶರು ಮನಃಪೂರ್ವಕವಾಗಿ ಒಪ್ಪುವರು. ಅದಕ್ಕಾಗಿ 'ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲ ಎಂದು ಎಂದಾದರೂ ಎಲ್ಲಿಯಾದರೂ ಹೇಳಿದ್ದನ್ನು ತೋರಿಸುವಿರಾ?' ಎಂದು ಶ್ರೀಮತಿಯವರನ್ನೆ ಇಂಗ್ಲೆಂಡವು ಆಹ್ವಾನಿಸಬಹುದಾಗಿದೆ.

ಧ್ಯೇಯವೆಂದರೂ ಸಿದ್ಧಿ ಮುಖ್ಯವಲ್ಲವೆ?

ತನ್ನ ಪ್ರಾಮಾಣಿಕತೆಗಾಗಿ ಮಿತ್ರರನ್ನು ಆಹ್ವಾನಿಸಲು ಇಂಗ್ಲೆಂಡವು ಇದಕ್ಕಿಂತಲೂ ಹೆಚ್ಚು ಯುಕ್ತವಾದವನ್ನು ಸಾಧಿಸಬಹುದಾಗಿದೆ. ಧ್ಯೇಯವೆಂದರೇನು? ಅದನ್ನಿಟ್ಟುಕೊಳ್ಳುವುದಾದರೂ ಯಾಕೆ? ಬರಿಯ ಅಭಿನಿವೇಶಗಳಿಂದಾಗಲಿ, ಪುನರುಕ್ತಿಯಿಂದಾಗಲಿ ಧ್ಯೇಯದ ಮಹತಿ ಮುಗಿಯಲಿಲ್ಲ. ಧ್ಯೇಯವನ್ನಿಟ್ಟುಕೊಳ್ಳುವುದು ಮುಖ್ಯವಾಗಿ— ಅದೇಕೆ? ಕೇವಲವಾಗಿ—ಅದನ್ನೆ ಸಾಧಿಸಿಕೊಳ್ಳುವುದಕ್ಕೆ. ಸ್ವಾತಂತ್ರ್ಯ, ಎಲ್ಲರಿಗೂ—ಎಲ್ಲ ದೇಶಗಳಿಗೂ—ಸ್ವಾತಂತ್ರ್ಯ ಇಂದಿನ ಯುದ್ಧದ ಗುರಿ, ಎಂದರೆ ಅದನ್ನು ಸಾಧಿಸುವುದೆ ಮುಖ್ಯ. ಸಾಧಿಸುವುದು ಹೇಗೆ? ಶತ್ರುಗಳನ್ನು ಸದೆಬಡಿಯುವುದರಿಂದ; ಆರ್ಥಾತ್, ಶತ್ರುಗಳನ್ನು ಸದೆಬಡಿಯುವುದು ಮುಖ್ಯ! ಶತ್ರುಗಳನ್ನು ಸದೆಬಡಿಯುವುದು ಹೇಗೆ? ಸರ್ವತೋಮುಖವಾದ ಸಮರಸನ್ನಾಹದಿಂದ; ಆರ್ಥಾತ್, ಸರ್ವತೋಮುಖವಾದ ಸಮರಸನ್ನಾಹ ಮುಖ್ಯ, ಎಂದರೆ ಮಿಕ್ಕುದೆಲ್ಲ ಗೌಣ! ಹಿಂದುಸ್ತಾನದಿಂದ ಮುಖ್ಯವಾದ ಸಮರಸನ್ನಾಹ (War efforts) ಬೇಕೆ, ಇಲ್ಲವೆ ಗೌಣವಾದ ಘಟನಾತ್ಮಕ ಚರ್ಚೆ ಬೇಕೆ? ಈ ಪ್ರಶ್ನೆಯನ್ನು ಇಂಗ್ಲೆಂಡವು ಚೀನವು ಮಿತ್ರನನ್ನು ಕೇಳುವುದು. ಇಂದು ಚೀನಕ್ಕೆ ಹಿಂದುಸ್ತಾನವು ಜಯಕಟ್ಟಿನ ಕೇಂದ್ರವಲ್ಲದೆ ಆಯುಧಗಳ ಕೇಂದ್ರವೂ ಆಗಿದೆ. ಕಾಂಗ್ರೆಸಿನವರನ್ನು ಬಂಧಮುಕ್ತ ಮಾಡಿ, ದೇಶದಲ್ಲಿ ಆಶಾಂತತೆಗಾಗಲಿ ಒಂದು ಘಟನಾತ್ಮಕ ಚರ್ಚೆಗಾಗಲಿ ಅವಕಾಶವನ್ನು ಒದಗಿಸಿಕೊಟ್ಟರೆ, ಸಮರಸನ್ನಾಹ ಕಾರ್ಯಕ್ಕೆ ತಡೆಯಾಗಬಹುದಲ್ಲವೆ? ಹಾಗಾದರೆ —ಚೀನದ ಗತಿ? ಸಾವ! ಇಲ್ಲಿಯ ವರೆಗೆ ಬಾದವನ್ನು ಜೆಳೆಯಿಸಲು ಕೂಡ

ಚೀನಕ್ಕೆ ಅವಕಾಶವಿಲ್ಲ. ಆದುದರಿಂದ ನಮ್ಮ ಪರಿಸ್ಥಿತಿ ಸುಧಾರಿಸೀತೆಂಬ ಆಶೆಗೂ ಅವಕಾಶವಿಲ್ಲ.

ಅಮೆರಿಕೆಯೆಂದೂ ಅದೇ ಹಾಡು!

ಚೀನದ ವಿಷಯವಾಗಿ ಹೇಳಿದ ಮಾತು ಅಮೇರಿಕೆಗೂ ಅನ್ವಯಿಸುವುದು. ಒಂದು ದೃಷ್ಟಿಯಿಂದ ಅಮೆರಿಕೆಗೆ ಹೆಚ್ಚು ಅನಿವಾರ್ಯವಾಗಿ ಅನ್ವಯಿಸುವುದು ಎಂದು ಹೇಳಬೇಕಾಗಿದೆ. ಹಿಂದುಸ್ತಾನದ ವಾತಾವರಣವು ಶಾಂತವಿರುವುದು ಅಮೆರಿಕೆಯ ದೃಷ್ಟಿಯಿಂದ ಮುಖ್ಯ ವಿಷಯವಾಗಿದೆ, ಮೊದಲ ಮಾತಾಗಿದೆ. ಪೂರ್ವದಲ್ಲಿ, ಶಾಂತಿಸಾಗರದಲ್ಲಿ ನೆಲಸಿದ್ದ ಅಮೆರಿಕೆಯ ಸಾಮ್ರಾಜ್ಯಭಾಗವನ್ನು ಜಪಾನರಿಂದ ಉಳಿಸಿಕೊಳ್ಳುವುದಕ್ಕೆ ಹಿಂದುಸ್ತಾನವು ಒಂದೇ ಒಂದಾದ ನೆಲಗಟ್ಟಾಗಿದೆ. ಈ ಕೇಂದ್ರದಿಂದಲೇ ಈ ಕಡೆ ಯುದ್ಧವನ್ನು ನಡೆಯಿಸಲು ಅಮೆರಿಕೆಗೆ ಶಕ್ಯವಿದೆ. ಅಮೆರಿಕೆಯ ಧನ, ಯಂತ್ರಸಾಮಗ್ರಿ, ಸೈನ್ಯಶಕ್ತಿ ಇಂದು ಹಿಂದುಸ್ತಾನದಲ್ಲಿ ತಳವೂರಿದೆ. ಹೀಗಿರುವಾಗ ಹಿಂದುಸ್ತಾನದಲ್ಲಿ ಅಶಾಂತತೆ ಹರಡಿದರೆ, ಅಮೆರಿಕೆಯ ಸಿದ್ಧತೆಗೆ ಹಾನಿ ಇಲ್ಲವೆ ವ್ಯತ್ಯಯ ಬರುವುದು ಖಂಡಿತ—ಎಂಬ ಹೆದರಿಕೆ ಇರುವುದು ಸಹಜವಾಗಿದೆ. ಹಿಂದುಸ್ತಾನದ ವಾತಾವರಣವನ್ನು ಶಾಂತವಾಗಿಡುವುದು ಇಂಗ್ಲಂಡಿನ ಕಾರ್ಯ, ಬ್ರಿಟಿಶ ಸತ್ತೆಯ ಹೊಣೆ. ಶಾಂತತೆಯನ್ನು ಇಡುವುದು ಹೇಗೆ ಎಂಬುದೂ ನೂರಾರು ವರ್ಷಗಳ ಅಳಿಕೆಯ ಅನುಭವವಿದ್ದ ಬ್ರಿಟಿಶರಿಗೆಯೆ ಹೆಚ್ಚಾಗಿ ಗೊತ್ತಿರಬೇಕಲ್ಲವೆ? ಆದ್ದರಿಂದ ಹಿಂದುಸ್ತಾನದ ಪ್ರಶ್ನೆ ಬ್ರಿಟಿಶ್ ಸಾಮ್ರಾಜ್ಯಕ್ಕೆ ಒಂದು ಒಳಕುಟುಂಬದ ಪ್ರಶ್ನೆಯಾಗಿದೆ. ಆಸ್ಯದೇಶದ ಆಂತರಿಕ ಪ್ರಶ್ನೆಯಲ್ಲಿ ಕೈಹಾಕುವುದು ಸ್ವಾತಂತ್ರ್ಯಪ್ರಿಯವಾದ ಅಮೆರಿಕೆಗೆ ರುಚಿಸುವುದು ಹೇಗೆ? ಆದಕಾಗಿ ಅಧಿಕಾರದ ಹೊರಗಿದ್ದ **ವೆಂಡೆಲ್ ವಿಲ್ಕಿ, ಲೂಯಿ ಫಿಶರ್, ಪರ್ಲ್‌ಬಕ್** ಮೊದಲಾದವರು ಎಷ್ಟೊಂದು ಕುಣಿದಾಡಿ ಕಂತಶೋಷಮಾಡಿದರೂ, ಅಮೆರಿಕೆಯ ಅಧ್ಯಕ್ಷರಾಗಲಿ ಅವರ ಕೈಕೆಳಗಿನ ಅಧಿಕಾರಿಗಳಾಗಲಿ ಒಂದು ತುಟಿಯನ್ನು ಎರಡು ಮಾಡಿಲ್ಲ. ಎಲ್ಲರಿಗೂ ಎಲ್ಲ ತರದ ಸ್ವಾತಂತ್ರ್ಯ ಬೇಕೆಂಬ ಉದಾತ್ತ ತತ್ತ್ವದಲ್ಲಿ ಅಮೆರಿಕೆಯ ನಂಬುಗೆ ಇದೆ. ತನ್ನ ಪ್ರಶ್ನೆಯನ್ನು ಬಿಡಿಸಿಕೊಳ್ಳುವ ಸಂಪೂರ್ಣ-ಸ್ವಾತಂತ್ರ್ಯ ಹಿಂದುಸ್ತಾನಕ್ಕೆಯೆ ಇದೆ, ಇರತಕ್ಕದ್ದು—ಎಂಬ ಉದಾರ ಉದ್ಘೋಷಣವನ್ನು ಮಾಡಿ ಅಮೆರಿಕೆಯು ಕೃತಕೃತ್ಯವೆಂದುಕೊಂಡಂತಿದೆ.

ಪಿಟ್ಟಿನ್ನದ ಫಿಲಿಪ್ಸ್‌ರು

ಕಳೆದ ಕೆಲವು ತಿಂಗಳುಗಳಿಂದ ಅಮೆರಿಕೆಯ ಅಧ್ಯಕ್ಷರ ಪ್ರತಿನಿಧಿಯಾಗಿ ಮಿ. ವಿಲಿಯಂ ಫಿಲಿಪ್ಸ್ ಎಂಬವರು ಬಂದಿದ್ದರಷ್ಟೆ? ಅವರು ಇದೀಗ ಅಮೆರಿಕೆಗೆ ಮರಳುವವರಿದ್ದಾರೆ. ಈ ಸಂದರ್ಭದಲ್ಲಿ ಅನೇಕರು ಇನ್ನೂ ಅಮೆರಿಕೆಗಾಗಿ ಆಶೆಯನ್ನಿಡಬಹುದಾಗಿದೆ. ಮಿ. ಫಿಲಿಪ್ಸ್‌ರ ಒಂದೆರಡು ಮಾತುಗಳಿಂದ, ಅವರು ಕೆಲವು ಮುಂದಾಳುಗಳನ್ನು ಸಂದರ್ಶಿಸಿದ್ದರಿಂದ, ಇಲ್ಲಿಯ ಪರಿಸ್ಥಿತಿಯನ್ನೂ ಮುಂದಾಳುಗಳ ಅಭಿಪ್ರಾಯವನ್ನೂ ಸರಕಾರದ ದಬ್ಬಾಳಿಕೆಯನ್ನೂ ಜನತೆಯ ಅಸಮಾಧಾನವನ್ನೂ ಅಧ್ಯಕ್ಷರಿಗೆ ಅವರು ತಿಳುಹಿಸುವರು ಎಂಬುದೇ ಈ ಆಶೆಗೆ ಕಾರಣವಾಗಿದೆ. ಆದರೆ ಈ ಕಾರಣ ಮತ್ತು ಈ ಆಶೆ ಎರಡೂ ವ್ಯರ್ಥವಾದುವು ಎಂದು ನಮ್ಮ ಅಭಿಪ್ರಾಯ. ಮಿ. ಫಿಲಿಪ್ಸ್‌ರು—ಬಹಿರಂಗವಾಗಿ ಏನೇ ಹೇಳಲಿ, ಇಲ್ಲಿ ಬಂದುದರ ಅಭಿಪ್ರಾಯವೆ ಬೇರೆಯಾಗಿದೆ. ರಾಜಕೀಯ ಸಮಸ್ಯೆಯ ದೃಷ್ಟಿಯಿಂದ ಹಿಂದುಸ್ತಾನವನ್ನು ಪರಿಶೀಲಿಸಲು ಅವರು ಬಂದವರಲ್ಲ; ಸಮರಸನ್ನಾಹದ—ವಿಶೇಷವಾಗಿ ಅಮೆರಿಕೆಯು ಇಲ್ಲಿ ಹೂಡಿದ ಕೇಂದ್ರಸನ್ನಾಹದ—ದೃಷ್ಟಿಯಿಂದ ಪರಿಸ್ಥಿತಿಯನ್ನು ಕಣ್ಣಾರೆ ಕಂಡುಕೊಳ್ಳಲು ಮಾತ್ರ ಅವರು ಬಂದಿರಲು ಸಾಕು. (೧) ಅಮೆರಿಕೆಯ ಸನ್ನಾಹಕ್ಕೆ ಸರಿಯಾದ ಸ್ಥಾನ-ಸುರಕ್ಷಿತತೆಗಳಿವೆಯೆ, (೨) ಯುದ್ಧಕಾರ್ಯಕ್ಕೆ ವಿರೋಧವಿದೆಯೆ— ಇದ್ದರೆ-ಎಷ್ಟರ ಮಟ್ಟಿಗೆ?— ಇವೆರಡೇ ಫಿಲಿಪ್ಸ್ ಸಾಹೇಬರ ದೃಷ್ಟಿಯಿಂದ ಮಹತ್ತ್ವದ ಪ್ರಶ್ನೆಗಳು. ಇವೆರಡರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಅವರು ಅಧ್ಯಕ್ಷ ರೂಜ್‌ವೆಲ್ಟ್‌ರಿಗೆ ತಿಳುಹಿಸಲಿರುವರು. ಇವುಗಳಲ್ಲಿ ಮೊದಲನೆಯದರ ಬಗ್ಗೆ ಅವರು ಸಂಪೂರ್ಣ ಸ್ವತಂತ್ರರಾಗಿ ದೇಶವನ್ನು ಸಂಚರಿಸಿದ್ದರು; ಎರಡನೆಯದರ ಬಗ್ಗೆ ಎಲ್ಲ ಸವಲತ್ತುಗಳನ್ನು ವೈಸರಾಯರು ಒದಗಿಸಿಕೊಟ್ಟಿರು. ಅಮೆರಿಕೆಯ ಸನ್ನಾಹದ ಬಗ್ಗೆ ತಮಗೆ ಪೂರ್ಣ ಸಮಾಧಾನವಿದ್ದುದನ್ನು ಮಿ. ಫಿಲಿಪ್ಸ್‌ರು ಸ್ಪಷ್ಟವಾಗಿ ಆಡಿತೋರಿಸಿದ್ದಾರೆ. ಎರಡನೆಯದರ ಬಗ್ಗೆ ಅವರು ಪಿಟ್ಟಿನ್ನದಿದ್ದರೂ— ಅಥವಾ ೪ ಕಾರಣಕ್ಕಾಗಿಯೆ ಎನಬಹುದೆ?— ಅವರ ಅಭಿಪ್ರಾಯ ನಮಗೆ ಸ್ಪಷ್ಟವಿದೆ. ಅವರನ್ನು ಕಂಡ ಮುಂದಾಳುಗಳೆಲ್ಲ ಜಪಾನರನ್ನು ಸೋಲಿಸಬೇಕೆಂಬ ಅಭಿಪ್ರಾಯದವರು (ಬೇರೆ ಅಭಿಪ್ರಾಯದವರು ಕಾಂಗ್ರೆಸಿನ ಮುಂದಾಳುತನದ ಹಿಂದುಸ್ತಾನದಲ್ಲಿ ಯಾರೂ ಇಲ್ಲವೇ ಇಲ್ಲ,) ಸೈನ್ಯಭರತಿಯು ಅಂಕಿ ಸಮಾಧಾನಕಾರಕವಿದೆ, ದೇಶದ ಧನವಂತರು ಶಸ್ತ್ರೋತ್ಪಾದನೆಗಾಗಿ ಎಲ್ಲ ಕಾಲ ದುಡಿಯುತ್ತಲಿದ್ದಾರೆ, ಸಂಸ್ಥಾನಿಕರ ಸರ್ವಸ್ವವೆಲ್ಲ ಮಿತ್ರರಾಷ್ಟ್ರಗಳ ಕಡೆಗಿದೆ; ಅಂತೂ ಯುದ್ಧಕಾರ್ಯಕ್ಕೆ ತಡೆ ಇಲ್ಲ ಎಂಬುದು ಸ್ಪಷ್ಟವಿದೆ. ಸಾಕಲ್ಲವೆ— ಎಂದು ಸಾಹೇಬರು ಸ್ವದೇಶಕ್ಕೆ ಮರಳಿದರು. ತಮ್ಮ ಅನುಭವಕ್ಕೆ ವೈವಿಧ್ಯಬೇಕೆಂದು ಮುಸ್ಲಿಂಲೀಗ, ಹಿಂದುಮಹಾಸಭೆ, ಹಿಂದುಳಿದ ಜಾತಿ, ಮುಂದಾಗಬೇಕೆಂಬ ಜಾತಿ— ಮೊದಲಾದ ತಮಾಷೆಗಳನ್ನೂ ನೋಡಿಕೊಂಡಿದ್ದಾರೆ.

ಸಾದರ ಸ್ವೀಕಾರ

೬೧. **ಆಧುನಿಕ ರಷ್ಯ** (ಯು. ಎಸ್. ಎಸ್. ಆರ್.) ವಿವರಣಾತ್ಮಕ ಗ್ರಂಥ. ಬರೆದವರು ಶ್ರೀಮಾನ್ ಪಿ. ಆರ್. ರಾಮಯ್ಯ. ಬಿ. ಎಸ್‌ಸಿ. ಸಂಪಾದಕರು 'ತಾಯಿನಾಡು' ಮತ್ತು 'ಡೇಲಿನ್ಯೂಜ್'. ಪ್ರಕಾಶಕರು ತಾಯಿನಾಡು ಪ್ರಕಟನಾಲಯ, ಬೆಂಗಳೂರು ನಗರ. ಕ್ರೌ. ಆ. ೩೭೫ ಪುಟ. ಬೆಲೆ ೧-೪-೦.

೬೨. **ಓಬವ್ವ** (ಒಂದು ಐತಿಹಾಸಿಕ ಕಥನ ಕವನ.) ಲೇಖಕರು ಶ್ರೀಮಾನ್ ಜಿ. ವರದರಾಜರಾವ್ ಬಿ.ಎ. (ಆನರ್ಸ್) ಮೈಸೂರು. 'ಪ್ರಬುದ್ಧ ಕರ್ನಾಟಕ'ದ ೨೪ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ ಪ್ರಕಟವಾದುದು. ಡೆ. ಆ. ೧೬ ಪುಟಗಳು.

ಕಳೆದ ೧೯೪೩ನೆಯ ಇಸ್ವಿಯಲ್ಲಿ ರಾಜಸೇವಾಸಕ್ತ ಶ್ರೀ. ಬಿ. ಎಂ. ಶ್ರೀಕಂಠಯ್ಯ ಎಂ.ಎ., ಬಿ. ಎಲ್, ಅವರ 'ರಜತೋತ್ಸವ ಕನ್ನಡ ಸ್ವರ್ಣಪದಕ'ವನ್ನು ಪಡೆದಿದೆ ಇದು. ಚಿತ್ರದುರ್ಗದ ವೀರ ಕನ್ನಡಿತಿ ಒನಕೆಯ ಓಬವ್ವನ ವೀರತನವನ್ನು ಬಣ್ಣಿಸಿ ರೂಪಿಸಿದ ಉತ್ತಮ ಚಾರಣಗೀತ. ಕನ್ನಡ ಐತಿಹಾಸಿಕ ವ್ಯಕ್ತಿಗಳ ವ್ಯಕ್ತಿತ್ವವನ್ನು ಸ್ಪುಟಗೊಳಿಸುವ ಇಂತಹ ಕವನಗಳು ಎಷ್ಟಾದರೂ ಬೇಕು.

೬೩. **ಶೆಂತ್ರಗಾರ ಕರಟಕರಾಯ** (ಎಳೆಯರಿಗಾಗಿ ನರಿಯಣ್ಣನ ಕಥೆ.): ಬರೆದವರು 'ನಾ'. ಸಂಪಾದಕರು ಶ್ರೀಮಾನ್ ಜೋತಿ ಶಂಕರರಾಯರು ಧಾರವಾಡ. ಧಾರವಾಡದ ಕನ್ನಡ ಸರಸ್ವತೀ ಭಾಂಡಾರದ 'ಪುಕ್ಕಳ ಹಿಗ್ಗು' ಮಾಲೆಯ ೧೧ನೆಯ ಪ್ರಕಟನೆ. ಕ್ರೌ. ಆ. ೨೮+೮ ಪುಟಗಳು. ಬೆಲೆ ೦-೧೫-೦.

೬೪. **ವೀರಶೈವರೂ ಅವರ ಕಾಯಕಗಳೂ.** ಬರೆದವರು ಶ್ರೀಮಾನ್ ಎಂ.ಸಿ. ಹಿರೇಮಠ, ಬಿ. ಎ., ಬಿ. ಟಿ. ಬಾಗಿಲುಕೋಟೆ. (ವಿವೇಚನಾತ್ಮಕ ಪ್ರಬಂಧ.) ಕ್ರೌ. ಆ. ೩೦ ಪುಟಗಳು. ಬೆಲೆ ೦-೫-೦. ಪ್ರಕಾಶಕರು: ಶ್ರೀಮಾನ್ ಎಸ್. ಬಿ. ಸಾಸನೂರ ಬಿ. ಎ. ಎಲ್‌ಎಲ್. ಬಿ.; ಉ- ಸಾ. ಸ. ಬಾಗಿಲುಕೋಟೆ.

೬೫. **ಆತ್ಮಾರ್ಪಣ** (ಐತಿಹಾಸಿಕ ನಾಟಕ.) ಬರೆದವರು 'ಕಾವ್ಯಾನಂದ' ಹೈದರಾಬಾದ್. ಪ್ರಕಾಶಕರು ಕಾರ್ಯದರ್ಶಿ ಹೈದರಾಬಾದು ವೀರಶೈವ ತರುಣ ಸಂಘ, ಮಲ್ಲಾಪಲ್ಲಿ ೪೪೬ ಹೈದರಾಬಾದ್. ಡೆ. ಆ. ೩೪+೧೧೨ ಪುಟಗಳು. ಬೆಲೆ?

೬೬. **ಸರ್ವಮಂಗಳಾ** (ಮಾಸಪತ್ರಿಕೆ.) ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಕೆ. ಸಿ. ನರಸಿಂಹ, ದೊಡ್ಡ ಬಳ್ಳಾಪುರ-ಮೈಸೂರು ಸ್ಟೇಟ್. ಕ್ರೌ. ೧೮ ಪುಟಗಳು. ವಿಚಿತ್ರಸಂಚಿಕೆಯ ಬೆಲೆ ೦-೩-೬.

೬೭. **ಮುರಿದ ದುರ್ಗದಲ್ಲಿ** (ಕವನ ಸಂಗ್ರಹ). ಲೇಖಕರು ಶ್ರೀ. 'ವಾಮನ' ಮುಂಗೂರು. ಮಿತ್ರಮಂಡಲಿಯ ಆಕಾಶವಾಣಿ ಗ್ರಂಥಮಾಲೆಯ ೧೩ನೆಯ ಕುಸುಮ. ಕ್ರೌ. ಆ. ೫೪ ಪುಟ. ಬೆಲೆ ೦-೮-೦.

೬೮. **ದಾರಿಯ ಬುತ್ತಿ** (ವಿವರಣಾತ್ಮಕ ನೂಕ್ತಿಸಂಗ್ರಹ. ತಂದವರು ಶ್ರೀಮಾನ್ ಜೋತಿ ಶಂಕರರಾಯರು. ಧಾರವಾಡದ ಕನ್ನಡ ಸರಸ್ವತೀ ಭಾಂಡಾರದ 'ಹಾದಿಯ ಹೊತ್ತಿಗೆ' ಮಾಲೆಯ ೧೦ನೆಯ ಪ್ರಕಟನೆ. ಡೆ. ೬೬ ಪುಟಗಳು. ಬೆಲೆ ೦-೪-೦.

೬೯. **ಶರಪಂಜರ** (ಏಕಾಂಕ ನಾಟಕ) 'ಶ್ರೀರಂಗ' ಬರೆದನು. ತಂದವರು ಶ್ರೀಮಾನ್ ಶಂ. ಬಾ. ಜೋಶಿಯವರು. ಪೋಲೆ ಪೋಳದ ನ. ಗ್ರಂ. ಭಾಂಡಾರದ 'ಹಾದಿಯ ಹೊತ್ತಿಗೆ' ಮಾಲೆಯ ೩೩ನೆಯ ಪ್ರಕಟನೆ. ಕ್ರೌ. ಆ. ೧೮ ಪುಟಗಳು. ಬೆಲೆ ೦-೩ ೦.

೭೦. **ಹೈದರಾಬಾದ ಸಮಾಚಾರ** (ಮಾಸಪತ್ರಿಕೆ). ಹೈದರಾಬಾದ್ ಸರಕಾರದ ಸುದ್ದಿಖಾತೆಯಿಂದ ಪ್ರಕಟವಾಗುವುದು. ಫೂಲ್‌ಸ್ಕ್ಯಾಪ್ ಫೋಲಿಯೊ ೩೩ ಪುಟ.

ಇತ್ತ ಸರಕಾರಗಳಂತೆ ಹೈದರಾಬಾದ ಸರಕಾರದವರೂ ತಮ್ಮ ಆಡಳಿತದ ರೀತಿನೀತಿಗಳನ್ನೂ ನಾಡಿನ ಸಾಂಸ್ಕೃತಿಕ ಆರ್ಥಿಕ ಪ್ರಗತಿಯ ವರದಿಗಳನ್ನೂ ಸಾರ್ವಜನಿಕರಿಗೆ ತಿಳಿಹುವುದಕ್ಕಾಗಿ ಈ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಸಂಸ್ಥಾನದ ರಾಜಭಾಷೆಯಾದ ಉರ್ದುವಿನಲ್ಲಿಯೂ ಪ್ರಾದೇಶಿಕ ಭಾಷೆಗಳಾದ ಕನ್ನಡ, ತೆಲುಗು, ಮರಾಟಿಗಳಲ್ಲಿಯೂ ಇದು ಪ್ರಕಟವಾಗುವುದು. ಸರಕಾರದ ಪ್ರಕಟನೆಯಿದಾದರೂ ಇದರ ಕನ್ನಡಭಾಷೆ ಪರಿಶುದ್ಧವಾಗಿದ್ದು ಗಂಭೀರವಾಗಿ ಇದೆ.

೭೧. **ಕಥಾಕುಂಜ ಕಾರ್ಯಾಲಯ** ಬೆಳಗಾಂವಿ ಅವರ ೧೯೪೩ನೆಯ ಇಸ್ವಿಯ ಕ್ಯಾಲೆಂಡರು. ಸುಂದರವಾದ ತ್ರಿವರ್ಣ ಚಿತ್ರದಿಂದ ಆಕರ್ಷಕವಾಗಿದೆ.

೭೨. **ಭಾರತದ ಸಮಸ್ಯೆ** (ರಾಜಕೀಯ ವಿಚಾರ ಗ್ರಂಥ) ಅನುವಾದಕರು ಶ್ರೀಮಾನ್ ಸಿದ್ದವನಹಳ್ಳಿ ಕೃಷ್ಣಶರ್ಮರು ಬೆಂಗಳೂರು. ಪ್ರಕಾಶಕರು 'ಪ್ರಭಾತ ಸಾಹಿತ್ಯ' ಬೆಂಗಳೂರು ನಗರ. ಕ್ರೌ. ಆ. ೬೦ ಪುಟಗಳು. ಬೆಲೆ?

ಇದರಲ್ಲಿ 'ಕ್ರಿಪ್ಸ್ ಗೊಡುಗೆ'ಯ ಪೈಯುರ್ಧದ ಬಗ್ಗೆ, ಪ್ರಸಿದ್ಧ ರಾಜಕಾರ್ಯಜ್ಞರಾದ ಶ್ರೀ. ರಾಮಮನೋಹನ ಲೋಹಿಯಾ ಅವರು ಬರೆದು ಪ್ರಕಟಿಸಿದ ಗ್ರಂಥದ ಸಾರವು ೧ನೆಯ ಭಾಗವಾಗಿಯೂ; ಅಮೇರಿಕೆಯ ವೃತ್ತಪತ್ರ ಪ್ರತಿನಿಧಿ ಲುಯಿ ಫಿಶರ್ ಅವರು ಭಾರತ ಸಮಸ್ಯೆಯ ವಿಚಾರದಲ್ಲಿ ಬರೆದ ೪ ಲೇಖನಗಳ ಅನುವಾದವು ೨ನೆಯ ಭಾಗವಾಗಿಯೂ ಪ್ರಕಟವಾಗಿವೆ. ಎಲ್ಲರೂ ಓದಿ ತಿಳಿದುಕೊಳ್ಳಬೇಕಾದ ಗ್ರಂಥವಿದು.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊಡಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಸ್. ಗೋವರ್ಧನರಾವ್, ಮ್ಯಾನೇಜರ

The United Karnatak Insurance Co. Ltd., DHARWAR.

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!
ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ '**ಮುಕುಲ**' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು! ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.

ಆಡತ್ಯಾಗಿಯೆ



ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ '**ಮುಕುಲ**' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿಲಿ., ಅಹಮ್ಮದನಗರ

ಕರ್ನಾಟಕ ಶಾಖೆ: ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications by M. V. Mellegatti at the Jayanti Office, Dharwar.